ಕಡಿದಾಳ್ ಮಂಜಪ್ಪ



ಕಡಿದಾಳ್ ಮಂಜಪ್ಪ ಜನ್ಮಶತಮಾನೋತ್ಸವ ಸಂಸ್ಮರಣೆ

ಕ್ರಾಂತಿಕೂಟ

ಕಡಿದಾಳ್ ಮಂಜಪ್ಪ

ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು

KRANTI KOOTA : Written by Kadidal Manjappa,Published by : **Manu Baligar**
Director, Department of Kannada & Culture, Kannada Bhavana, J.C. Road
Bengalooru - 560 002.

ಪುಟಗಳು : x + ೨೮೨

ಪ್ರತಿಗಳು : ೧೦೦೦

ರಕ್ಷಾಪುಟ : ಪ.ಸ. ಕುಮಾರ್

ಬೆಲೆ : **ರೂ. ೮೫/–**

Price : **Rs. 85/-**

ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA
ISO 9001-2000
ಚಾಮರಾಜಪೇಟೆ, ಬೆಂಗಳೂರು-೧೮
ದೂರವಾಣಿ : ೨೬೬೧ ೩೧೨೩, ೨೬೬೧ ೮೭೫೨

ಪ್ರಕಾಶಕರ ನುಡಿ

ದಿವಂಗತ ಕಡಿದಾಳ್ ಮಂಜಪ್ಪನವರು ಸ್ವಾತಂತ್ರ್ಯ ಹೋರಾಟಗಾರರು, ದಕ್ಷ ರಾಜಕಾರಣಿ, ಪರಿಶುದ್ಧ ಜೀವನ ನಡೆಸಿದ ಧೀಮಂತ ಪುರುಷ. ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರ ಪ್ರಥಮ ಸಚಿವ ಸಂಪುಟದಲ್ಲಿ ಶ್ರೀ ಕಡಿದಾಳ್ ಮಂಜಪ್ಪನವರು ಕಂದಾಯ ಮತ್ತು ಕಾಮಗಾರಿ ಸಚಿವರಾಗಿದ್ದರು. ಕಂದಾಯ ಸಚಿವರಾಗಿ ಭೂ ಸುಧಾರಣೆಗೆ ಭದ್ರ ಬುನಾದಿ ಹಾಕಿ 'ಭೂ ಸುಧಾರಣೆಯ ರೂವಾರಿ' ಎಂಬ ಕೀರ್ತಿಗೆ ಪಾತ್ರರಾದವರು ಹಾಗೂ ಇನಾಂ ಜಹಗೀರಿ, ಜೋಡಿ ಗ್ರಾಮ ಪದ್ಧತಿ ಮುಂತಾದ ರೂಢಿಗತ ಪದ್ಧತಿಗಳನ್ನು ರದ್ದುಪಡಿಸಿ ಪರಿವರ್ತನಶೀಲ ಸಮಾಜ ನಿರ್ಮಾಣಕ್ಕೆ ಪ್ರವರ್ತಕರಾದವರು.

ನಂತರ ಶ್ರೀ ಕಡಿದಾಳ್ ಮಂಜಪ್ಪನವರು ರಾಜ್ಯದ ಮುಖ್ಯಮಂತ್ರಿಯಾದರು. ಹೀಗೆ ಶಾಸಕ, ಮಂತ್ರಿ, ಮುಖ್ಯಮಂತ್ರಿ ಆಗಿ ನಾಡು ನುಡಿಗೆ ಅನನ್ಯ ಸೇವೆ ಸಲ್ಲಿಸಿರುವ ಶ್ರೀ ಕಡಿದಾಳರ ಜೀವನ ಪಥ ; ಸುವರ್ಣ ಪಥ. ಶ್ರೀ ಕಡಿದಾಳ್ ಮಂಜಪ್ಪನವರು ಶ್ರೇಷ್ಠ ಸಂಸದೀಯ ಪಟು, ರಾಜಕಾರಣಿಯೇ ಅಲ್ಲದೆ ಸಾಹಿತಿಯಾಗಿಯೂ ಸೇವೆ ಸಲ್ಲಿಸಿದ್ದಾರೆ. ಮೂರು ಕಾದಂಬರಿ ಮತ್ತು ಒಂದು ಆತ್ಮಕಥನವನ್ನು ಬರೆದಿದ್ದಾರೆ. ದಿವಂಗತ ಕಡಿದಾಳ್ ಮಂಜಪ್ಪನವರ ಜನ್ಮಶತಮಾನೋತ್ಸವದ ಅಂಗವಾಗಿ ರಾಜ್ಯ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹಲವಾರು ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದೆ. ಅವುಗಳಲ್ಲಿ ಅವರು ರಚಿಸಿದ ಪುಸ್ತಕಗಳನ್ನು ಪ್ರಕಟಿಸಿ ಜನಸಾಮಾನ್ಯರಿಗೆ ಸುಲಭ ಬೆಲೆಯಲ್ಲಿ ನೀಡಬೇಕೆಂಬುದು ಒಂದಾಗಿರುತ್ತದೆ.

ಅದರಂತೆ ಶ್ರೀ ಕಡಿದಾಳ್ ಮಂಜಪ್ಪನವರ ಪುಸ್ತಕಗಳನ್ನು ಪ್ರಕಟಿಸಲಾಗುತ್ತಿದ್ದು, ಪ್ರಕಟಿಸಲು ಒಪ್ಪಿಗೆ ನೀಡಿದ ಅವರ ಮಗಳು ಶ್ರೀಮತಿ ಶ್ರೀಕಲಾ ಅವರಿಗೆ ನನ್ನ ಕೃತಜ್ಞತೆಗಳು. ಈ ಪುಸ್ತಕಗಳ ಕರಡಚ್ಚು ತಿದ್ದುವ ಜವಾಬ್ದಾರಿಯನ್ನು ಡಾ॥ ಶ್ರೀಕಂಠಕೂಡಿಗೆ ಅವರು ವಹಿಸಿಕೊಂಡು ನೆರವಾಗಿದ್ದಾರೆ. ಈ ಪುಸ್ತಕಗಳನ್ನು ಹೊರತರಲು ನೆರವಾದ 'ಕಡಿದಾಳು' ಸಂಸ್ಮರಣ ಗ್ರಂಥದ ಸಂಪಾದಕರು ಹಾಗೂ ಸಂಪಾದಕ ಮಂಡಳಿಯ ಎಲ್ಲ ಸದಸ್ಯರಿಗೆ ನನ್ನ ಕೃತಜ್ಞತೆಗಳು.

ಶ್ರೀ ಕಡಿದಾಳ್ ಮಂಜಪ್ಪನವರ ಪುಸ್ತಕಗಳ ಪ್ರಕಟಣೆಯನ್ನು ಹೊರತರಲು ಸಹಕರಿಸಿದ ಜಂಟಿ ನಿರ್ದೇಶಕರಾದ ಶ್ರೀ ಕಾ.ತ. ಚಿಕ್ಕಣ್ಣ, ಶ್ರೀಮತಿ ವೈ.ಎಸ್. ವಿಜಯಲಕ್ಷ್ಮಿ, ಸಹಾಯಕ ನಿರ್ದೇಶಕರು, ಪ್ರಕಟಣ ಶಾಖೆ ಹಾಗೂ ಸಿಬ್ಬಂದಿ ವರ್ಗದವರಿಗೆ ಹಾಗೂ ಈ ಸಂಪುಟವನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಲಕ್ಷ್ಮೀ ಮುದ್ರಣಾಲಯದ ಮಾಲೀಕರಾದ ಶ್ರೀ ಅಶೋಕ್‌ಕುಮಾರ್ ಮತ್ತು ಸಿಬ್ಬಂದಿ ವರ್ಗದವರಿಗೆ ಕೃತಜ್ಞತೆಗಳು.

ಶ್ರೀ ಕಡಿದಾಳ್ ಮಂಜಪ್ಪನವರ ಪುಸ್ತಕಗಳನ್ನು ಓದಿ, ಅವರ ಜೀವನಾದರ್ಶಗಳನ್ನು ನಮ್ಮ ಯುವಜನಾಂಗ ರೂಢಿಸಿಕೊಳ್ಳುವ ಮೂಲಕ ಈ ಪುಸ್ತಕಗಳ ಸದುಪಯೋಗ ಮಾಡಿಕೊಳ್ಳುತ್ತಾರೆಂದು ನಾನು ನಂಬಿದ್ದೇನೆ.

ಮನು ಬಳಿಗಾರ್
ನಿರ್ದೇಶಕರು

ಮುನ್ನುಡಿ

ಇಂದಿನ ಕನ್ನಡ ಸಾಹಿತ್ಯದಲ್ಲಿ ಕಾದಂಬರಿಗಳ ಉತ್ಪತ್ತಿ–ಸ್ಥಿತಿ–ಲಯಗಳು ಬಹುದೊಡ್ಡ ಪ್ರಮಾಣದಲ್ಲಿ ನಡೆದಿವೆ. ಹೆಸರು ಗಳಿಸಬೇಕೆಂದೊ (ಅದು ಕೆಟ್ಟದಾಗಲಿ, ಒಳ್ಳೆಯದಾಗಲಿ), ಹಣ ಗಳಿಸಬೇಕೆಂದೊ, ನಿರುದ್ಯೋಗದ ಅವಧಿಯಲ್ಲಿ ಇರಲಿ ಒಂದು ಉದ್ಯೋಗ ಎಂದೊ–ಅಂತೂ ಕಾದಂಬರಿಗಳು ಹುಟ್ಟುತ್ತಲೆ ಇವೆ. ಆದರೆ ಯಾವುದಾದರೊಂದು ಅನುಭವ ಹೃದಯದ ಮೇಲೆ ಅಳಿಸಿಹೋಗದಂತಹ ಪರಿಣಾಮವನ್ನು ಮಾಡಿದೆ, ಅದನ್ನು ಬಯಲಿಗೆಳೆದು ಇನ್ನೊಬ್ಬರೊಡನೆ ಆ ಬಗ್ಗೆ ಮಾತನಾಡದೆ ಗತ್ಯಂತರವೆ ಇಲ್ಲ ಎಂಬುದಕ್ಕಾಗಿ ಸಾಹಿತಿಯಾಗುವವರು ತೀರ ವಿರಳ. ಯಾಕೆಂದರೆ ಅನುಭವದ ಒತ್ತಡವಲ್ಲದೆ ಅಭಿವ್ಯಕ್ತಿಯ ಪಟುತ್ವವೂ ಅಗತ್ಯವಿದೆ. ಹೀಗಿರುವಾಗ ಶ್ರೀ ಕಡಿದಾಳ್ ಮಂಜಪ್ಪನಂತಹವರು ಕಾದಂಬರಿಯೊಂದನ್ನು ಬರೆದಿದ್ದಾರೆ ಎಂಬುದಕ್ಕೆ ಮೊದಲು ಆಶ್ಚರ್ಯವೆನ್ನಿಸುವುದು. ಹಣದ ಅನಾನುಕೂಲತೆ ಇಲ್ಲ (ಹಾಗೆಯೆ ಭಾವಿಸಿದ್ದೇನೆ), ಕೈತುಂಬ ಕೆಲಸವೂ ಇದೆ, ರಾಜ್ಯದಲ್ಲಿ ರಾಜಕಾರಣಿ ಮತ್ತು ಆಡಳಿತಗಾರ ಎಂದು ಹೆಸರನ್ನೂ ಗಳಿಸಿದ್ದಾರೆ. ಆದ್ದರಿಂದ ಇವರಿಗೆ ಯಾವುದೋ ಅನುಭವದ ಒತ್ತಡವಿರಲೇಬೇಕು ಎಂಬ ಸಂಶಯ ದೃಢವಾಗುವುದು. "ಕ್ರಾಂತಿಕೂಟ"ವನ್ನು ಓದಿದ ಮೇಲೆ ಅದಕ್ಕೆ ಪುಷ್ಟಿ ದೊರಕುವುದು.

ಶ್ರೀ ಮಂಜಪ್ಪನವರು ಗಾಂಧೀಜಿಯವರ ಪರಂಪರೆಯಲ್ಲಿ ಬೆಳೆದವರು; ಕಷ್ಟ–ನಷ್ಟ–ಸ್ವಾರ್ಥ–ತ್ಯಾಗ–ಜೇಲುವಾಸ ಎಲ್ಲವನ್ನೂ ಅನುಭವಿಸಿದವರು. ನಿಷ್ಠಾವಂತ ಕಾಂಗ್ರೆಸ್ಸಿಗರು. (ಈಗ ರಾಜಕೀಯ ಸನ್ಯಾಸವನ್ನು ಸ್ವೀಕರಿಸಿದ್ದಾರೆ.) ರಾಜಕಾರಣದಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸಿದ ಇವರು "ರಾಜಕೀಯ ಕಾದಂಬರಿ"ಯನ್ನು ಬರೆದುದು ಅವರಿಗೆ ಯೋಗ್ಯ; ನಮಗೆ ಭಾಗ್ಯ (ಅನುಭವದಿಂದ ಬರೆಯುವವರು ತೀರ ಕಡಿಮೆಯಾದ್ದರಿಂದ). ಆದರೆ ಅನುಭವದ ಸಾಹಿತಿಯೂ ಅನೇಕ ಸಲ ಸಾಧಿಸಲಾರದ್ದನ್ನು ಶ್ರೀ ಮಂಜಪ್ಪನವರು ಈ ಕಾದಂಬರಿಯಲ್ಲಿ ಸಾಧಿಸಿದ್ದಾರೆಂಬುದು ನಮ್ಮ ಸಾಹಿತ್ಯದ ಸುದೈವ. ಅದೆಂದರೆ ತಮ್ಮ ಅನುಭವದ ಪರಿಣಾಮ ಓದುಗರ ಮೇಲೂ ಅಷ್ಟೇ

ಆಳವಾಗಿ ಮೂಡುವಂತೆ ಮಾಡಿದ್ದಾರೆ. ಇದನ್ನು ಓದಿದ ಮೇಲೆ ಯಾವ ಬುದ್ಧಿವಂತನೂ ಆಳ ವಿಚಾರಕ್ಕೆ ಪ್ರೇರಿತನಾಗುವುದರಲ್ಲಿ ಸಂದೇಹವಿಲ್ಲ.

ಕಾಂಗ್ರೆಸ್ ನಿಷ್ಠರಾದ ಶ್ರೀ ಮಂಜಪ್ಪನವರು ಮುಖ್ಯಕತೆಯನ್ನು ಪ್ರಾರಂಭಿಸುವ ಮೂರನೆಯ ಅಧ್ಯಾಯವನ್ನು ಹೀಗೆ ಮೊದಲು ಮಾಡುತ್ತಾರೆ.

"ಕಾಂಗ್ರೆಸ್ ರಾಜಕಾರಣದಲ್ಲಿ ಆದರ್ಶದ ಅಧಃಪತನ ಆರಂಭವಾಗಿದ್ದ ಕಾಲ. ರಾಜ್ಯದ ಕಾಂಗ್ರೆಸ್ ಮುಖಂಡರು ಭ್ರಷ್ಟಾಚಾರದ ಹೊನಲಿನಲ್ಲಿ ಈಜಾಡುತ್ತಾ ಸಮಾಜವಾದದ ಸೋಗಿನಲ್ಲಿ ತಮಗಾಗಿ ಮತ್ತು ತಮ್ಮವರಿಗಾಗಿ ಸಂತರ್ಪಣೆ ನಡೆಸುತ್ತಿದ್ದರು. ರಾಜ್ಯದ ಆಡಳಿತ ಲಂಚಮಯವಾಗಿತ್ತು. ಕಾಂಗ್ರೆಸ್ ಶಾಸಕರೂ ಮಂತ್ರಿಗಳೂ ಅಧಿಕಾರ ಲಾಲಸೆಯಲ್ಲಿ ಹಾಗೂ ಹಣ ಸಂಪಾದನೆಯಲ್ಲಿ ಮಗ್ನರಾಗಿದ್ದರು... ಸರ್ಕಾರಿ ಅಧಿಕಾರಿಗಳಿಂದ ಪ್ರಯೋಜನಕ್ಕಿಂತ ಕಿರುಕುಳ ತೊಂದರೆಗಳೇ ಹೆಚ್ಚಾಗಿದ್ದುವು." (ಪು. ೩೭)

ಇಂತಹ ಪರಿಸ್ಥಿತಿಯ ಒಂದು ಅನಿಷ್ಟ ಪರಿಣಾಮವೆಂದರೆ ಪುರುಷೋತ್ತಮ ಬಾಬುರಂತಹ ಗಾಂಧೀವಾದಿಗಳು ರಾಜಕಾರಣದಿಂದ ಹೊರಬಿದ್ದರು. ಇನ್ನೊಂದು ಅನಿಷ್ಟ ಪರಿಣಾಮವನ್ನು ಅವರೇ ಹೇಳಿದ್ದಾರೆ: "ಶ್ರೀಮಂತರ ದುರಾಸೆ, ಸರ್ಕಾರದ ದುರಾಡಳಿತ ಕ್ರಾಂತಿಗೆ ಮೂಲಕಾರಣ" (ಪು. ೧೧೨). ಹೀಗೆ ಹೇಳಿ, ಶಂಕರ್ ಎಂಬುವನ ಹಿಂಸಾತ್ಮಕ ಕ್ರಾಂತಿಸೇನೆಯವನಾದ ಕೇಸರಿಸಿಂಗನು ತಮ್ಮ ಕೈಯಲ್ಲಿ ಸಿಕ್ಕಾಗ ಅವನನ್ನು ಕ್ಷಮಿಸಲು ಸಿದ್ಧರಾದರು.

ಕಾದಂಬರಿಯಲ್ಲಿ ಮುಖ್ಯವಾಗಿ ಕ್ರಾಂತಿಸೇನೆಯನ್ನು ಕಟ್ಟಿಕೊಂಡು ನಿರರ್ಥಕ ಕೊಲೆ-ಸುಲಿಗೆ-ಲೂಟಿಗಳನ್ನು ಕೇವಲ ಸ್ವಂತದ ವೈಭವ ಸುಖಕ್ಕಾಗಿ ಮಾಡುವ ಶಂಕರನ ಕತೆಯಿದೆ. ಅದಕ್ಕೆ ಹೇಸಿ ಅವನ ಸೇನೆಯನ್ನು ಬಿಟ್ಟು ಅದಕ್ಕೆ ಇದಿರಾಗಿ ಕ್ರಾಂತಿಕೂಟವನ್ನು ಕಟ್ಟಿದ ಚಂದ್ರಹಾಸನ ಕತೆ ಇದೆ. ಆದರೆ "ಸರ್ಕಾರ ಅರ್ಥ ಸತ್ತುಹೋಗಿದೆ. ಸರ್ಕಾರ ಜನರನ್ನ ಕಾಪಾಡೋ ಕಾಲ ಹೋಗಿದೆ" (ಪು. ೮೦); ಹೀಗಿರುವಾಗ "ಕ್ರಾಂತಿ"ಯಾದರೂ..... ಶಂಕರನಂತಹರು ಅಧಿಕಾರಕ್ಕೆ ಬರುತ್ತಾರೆ." (ಪು. ೧೨೭)

ಈ ಇಬ್ಬರು 'ಕ್ರಾಂತಿವೀರರ' ನಡುವೆ ಗೋಪಾಲ್ ಎಂಬ 'ಸದ್ಗುಣಿ' ಇದ್ದಾನೆ. ಕಾಂಗ್ರೆಸ್ ಇಬ್ಭಾಗವಾಗಲು ಆಡಳಿತ ಕಾಂಗ್ರೆಸ್‌ನಲ್ಲಿ ಜಿಲ್ಲಾ ಕಾಂಗ್ರೆಸ್‌ನ ಅಧ್ಯಕ್ಷನಾಗಿರುವನು, ಆದರ್ಶ ಭೂಮಾಲೀಕ. 'ಈ ದೇಶದಲ್ಲಿ ಶ್ರೀಮಂತರಲ್ಲಿ ಕೆಲವರು ದುರಾಸೆಗೆ ಮಿತಿಯೇ ಇಲ್ಲವಾದರೆ, ಬಡವರಲ್ಲಿ ಕೆಲವರಿಗೆ ಮನುಷ್ಯರಾಗಿ ಬದುಕಬೇಕೆಂಬ ಹಂಬಲವೆ ಇಲ್ಲ' ಎಂದು ಮಾತಿನಲ್ಲಿಯೇ (ಪು. ೧೪೫) ತನ್ನ ಜವಾಬ್ದಾರಿಯನ್ನು ಮುಗಿಸುವನು. ಗೋಪಾಲನ ತಾಯ್ತಂದೆಯರು "ಗಾಂಧೀಜಿ ಕಾಲ್ದಾಗೆ" ಸತ್ಯಾಗ್ರಹ ಮಾಡಿ ಜೇಲಿಗೆ ಹೋದವರು. ಆ ತಾಯಿ ಚಂದ್ರಹಾಸನಿಗೆ ಹೀಗೆ ಹೇಳ್ತಾಳೆ; "ಇಂಗ್ಲೀಷಿನವರ ಕಾಲ್ದಾಗೆ ಸಮಾಜ ಚೆನ್ನಾಗಿಯೇ ಇತ್ತು. ನಾವೂ ಸುಖವಾಗೇ ಇದ್ವಿ. ನಿಮ್ಮಂಥವರೆ ಸಮಾಜ ಹದಗೆಡಿಸಿದವರು. ಸ್ವರಾಜ್ಯ ಬಂತಪ್ಪಾ! ಪುಂಡರು, ಪೋಕರಿಗಳು, ಲಂಚಕೋರರು,

ಮೋಸಗಾರರು ಮಂತ್ರಿಗಳಾದರು; ಮೆಂಬರುಗಳಾದರು; ದೇಶ ಈ ಸ್ಥಿತಿಗೆ ತಂದಿಟ್ಟರು." (ಪು. ೧೪೩)

ಕಾದಂಬರಿಯನ್ನು ಓದಿ ಓದಿದಂತೆ ಬುದ್ಧಿವಂತ ಓದುಗನಿಗೆ ದೇಶದ ಭವಿತವ್ಯದ ಬಗ್ಗೆ ಭಯ–ನಿರಾಸೆಗಳುಂಟಾಗಬಹುದಾಗಿವೆ. ರಾಜ್ಯದ ಹೋಂ ಮಿನಿಸ್ಟರ್‌ನು ಶಂಕರನ ಗೆಳೆಯನು ಎನ್ನುವಾಗ ಯಾವ ಭವಿತವ್ಯ ಕಾದಿದೆ ಎನ್ನೋಣ. ಮನಸ್ಸು ಮಾಡಿದರೆ ಭವಿಷ್ಯವಿದೆ ಎಂದು ಸಿದ್ಧಾನಂದ(ಸಿದ್ಧಿ ಮಹಾರಾಜ)ರ ಪಾತ್ರದ ಮೂಲಕ ಕಾದಂಬರಿ ಸೂಚಿಸುತ್ತದೆ. ಕೈಯಲ್ಲಿ ರಿವಾಲ್ವರ್ ಹಿಡಿದು ಎದುರು ನಿಂತ ಶಂಕರನಿಗೆ "ನನ್ನನ್ನು ಹೊಡಿ, ನಾನು ಸಾಯಲು ಸಿದ್ಧನಾಗಿರುವೆ... ಇಲ್ಲವಾದರೆ ಶರಣಾಗತನಾಗಿ ಇಲ್ಲಿಂದ ತೆಪ್ಪಗೆ ಹೊರಟುಹೋಗು" ಎನ್ನುತ್ತಾರೆ (ಪು. ೨೧೮). ಸತ್ಯದ ಬಗ್ಗೆ ಅಂತಹ ಆಗ್ರಹವಿದ್ದವರ ಅಗತ್ಯವಿದೆ.

ಮುನ್ನುಡಿ ಈಗಾಗಲೇ ಸುದೀರ್ಘವಾಯಿತು. ಇನ್ನೂ ಬರೆಯಬಹುದಾದರೂ ತಡೆದು ಒಂದು ಮಾತನ್ನು ಹೇಳಬಯಸುತ್ತೇನೆ. ನಾನು ಮೇಲೆ ಆ ರೀತಿ ಬರೆದರೂ ಕಾದಂಬರಿಯು ಬರೀ ಕಾಂಗ್ರೆಸ್–ಕಮ್ಯುನಿಜಂ ಮುಂತಾದ ರಾಜಕೀಯ ತತ್ತ್ವಗಳ ಒಣ ಚರ್ಚೆಯಾಗಿಲ್ಲ. ಅವುಗಳ ಅನುಭವ ಮತ್ತು ಆಚರಣೆಯ ಚಿತ್ರವಾಗಿದೆ. ಮನಸ್ಸನ್ನು ಹಿಡಿಯುವ ಇನ್ನೂ ಅನೇಕ ಪಾತ್ರಗಳಿವೆ; ನಾಯಕ–ಪ್ರತಿನಾಯಕರ ಪ್ರಣಯದ ಕತೆಯೂ ಇದೆ; ಪ್ರಿಯಕರನನ್ನು ಗುಂಡಿಕ್ಕಿ ಕೊಲ್ಲುವಾಗಲೂ ಅವನಿಗಾಗಿ ಇದ್ದ ಪ್ರೇಮಕ್ಕಾಗಿ ಪ್ರಾಯಶ್ಚಿತ್ತ ಎಂದು ತಾನೂ ಸಾಯುವ ಚಂಚಲೆಯನ್ನು ಮರೆಯುವಂತಿಲ್ಲ. ಸಂಭಾಷಣದಲ್ಲಿ ಅನೇಕ ಕಡೆ ವಕೀಲರ ಚಮತ್ಕೃತಿ ಇದೆ. "ವಾಸದ ಕೊಠಡಿಗಳ ಕಿಟಕಿಗಳಿಗೆ ಸರಳುಗಳಿಲ್ಲದ ಗಾಜಿನ ಬಾಗಿಲುಗಳನ್ನು ಇರಿಸಲಾಗಿತ್ತು. ಬಹುಶಃ ಪುರುಷೋತ್ತಮಬಾಬುಗಳು ಆ ಮನೆಯನ್ನು ಕಟ್ಟಿಸಿದಾಗ ರಾತ್ರಿಯ ವೇಳೆಯಲ್ಲಿ ಕಳ್ಳತನದಿಂದ ಬಾಂಬ್ ಹಾಕುವ ಮಹಾತ್ಮರು ಈ ದೇಶದಲ್ಲಿ ಹುಟ್ಟುತ್ತಾರೆಂಬ ಕಲ್ಪನೆ ಅವರಿಗಿರಲಿಲ್ಲವೆಂದು ತೋರುತ್ತದೆ" (ಪು. ೫೦). ಹೀಗೆ ಒಂದು ಮಾತಿನಲ್ಲಿ ೫೦ ವರ್ಷಗಳ ರಾಜಕಾರಣದಲ್ಲಿಯ ಬದಲಾವಣೆಯನ್ನು ಸೂಚಿಸುವ ಶೈಲಿಯೂ ಇದೆ.

ಈ ಕಾದಂಬರಿಯು ಜನರಿಗೆ ತೃಪ್ತಿಯ ಬದಲು ವಿಚಾರ ಪ್ರೇರಣೆಯನ್ನು ಕೆಣಕಿದರೆ ನನಗೆ ಹೆಚ್ಚು ಸಂತೋಷ. ತೃಪ್ತಿಯ ಪರ್ಯವಸಾನ ನಿದ್ರೆಯಲ್ಲಿ; ಕೆಣಕುವುದರದು ಕ್ರಿಯಾಪ್ರವರ್ತನೆಯಲ್ಲಿ.

– ಶ್ರೀರಂಗ

ಪ್ರಸ್ತಾವನೆ

"ಕ್ರಾಂತಿಕೂಟ" ಎರಡು ಕಾಲ್ಪನಿಕ ಕ್ರಾಂತಿಕಾರಿ ಪಕ್ಷಗಳ ನಡುವೆ ನಡೆದ ಪೈಪೋಟಿಯ ಹೋರಾಟದ ಕತೆ. ದುಷ್ಟರೂ, ಸ್ವಾರ್ಥಸಾಧಕರೂ ಕ್ರಾಂತಿಯ ನಾಯಕರಾದರೆ ಅಮಾನುಷ ಕ್ರೌರ್ಯ ಕ್ರಾಂತಿಯ ರೂಪವನ್ನು ತಾಳುತ್ತದೆಯೆಂಬುದನ್ನು ಕತೆ ನಿರೂಪಿಸುತ್ತದೆ. ಕತೆ ಕಾಲ್ಪನಿಕವಾದರೂ, ಕತೆಯಲ್ಲಿ ಕಂಡುಬರುವ ಕೊಲೆ, ದರೋಡೆ ಮುಂತಾದ ಹಿಂಸಾಕೃತ್ಯಗಳು ಈ ದೇಶದ ವಿವಿಧ ಕಡೆಗಳಲ್ಲಿ ಕೆಲವು ವರ್ಷಗಳ ಹಿಂದೆ ವಾಸ್ತವಿಕವಾಗಿ ಜರುಗಿದ್ದ ಘಟನೆಗಳೆಂದು ವೃತ್ತ ಪತ್ರಿಕೆಗಳಲ್ಲಿ ವರದಿಯಾಗುತ್ತಿದ್ದ ವಿಚಾರ ಓದುಗರ ನೆನಪಿನಲ್ಲಿರಬಹುದು. ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ಘಟನೆಗಳನ್ನೇ ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಕತೆಯಲ್ಲಿ ಜೋಡಿಸಿದ್ದೇನೆ.

ಹಿಂದಿನ ನನ್ನ ಎರಡು ಕಾದಂಬರಿಗಳಲ್ಲಿ* ರಾಜಕೀಯವೇ ಪ್ರಧಾನ ವಸ್ತುವಾಗಿತ್ತು. ಈ ಕಾದಂಬರಿಯಲ್ಲಿ ರಾಜಕೀಯದ ಜೊತೆಗೆ ಸಾಮಾಜಿಕ ಮತ್ತು ಇತರ ವಿಷಯಗಳು ಯಥೇಚ್ಛವಾಗಿವೆ. ಅಲ್ಲಲ್ಲಿ ಶೃಂಗಾರರಸವೂ ಅಲ್ಪ ಸ್ವಲ್ಪ ಹರಿದಿದೆ. ಆದರೆ ಎಲ್ಲೆಮೀರಿ ಹರಿದಿಲ್ಲ. ವರದಕ್ಷಿಣೆಯ ಪಿಶಾಚಿಯನ್ನೂ ಲಂಚದ ಪೆಂಡಭೂತವನ್ನೂ ಕೆಲವು ಕಡೆಗಳಲ್ಲಿ ಕಾಣಬಹುದಾಗಿದೆ. ಕತೆಯಲ್ಲಿ ಮೂರು ಸಂಸಾರಗಳ ಚಿತ್ರಣವನ್ನು ಕೊಡಲಾಗಿದೆ. ಒಂದು ಆದರ್ಶ ದಂಪತಿಗಳಿಂದ ಕೂಡಿದ ಸಂಸಾರ; ಇನ್ನೊಂದು ಸಾಧಾರಣ ಸಂಸಾರ; ಮತ್ತೊಂದು ಇಜ್ಜೋಡಿ ಸಂಸಾರ. ಕತೆ ಅಂತರ್ಜಾತೀಯ ವಿವಾಹವನ್ನು ಸಮರ್ಥಿಸುತ್ತದೆ.

ನನ್ನ ಮೇಲೆ ಬಹಳ ವಿಶ್ವಾಸವಿಟ್ಟು ಕಾದಂಬರಿಯನ್ನು ಅಚ್ಚುಕಟ್ಟಾಗಿ ಮುದ್ರಿಸಿ ಕೊಟ್ಟಿರುವ ಮೈಸೂರು ಪ್ರೆಸ್ ಪ್ರೈವೇಟ್ ಲಿಮಿಟೆಡ್ ಇವರಿಗೆ ನಾನು ಬಹಳ ಋಣಿಯಾಗಿದ್ದೇನೆ. ಅವರು ಮುದ್ರಣದ ವಿಚಾರದಲ್ಲಿ ಬಹಳ ಶ್ರದ್ಧೆವಹಿಸಿದ್ದರೂ ಮುದ್ರಾರಾಕ್ಷಸ ಕೆಲವು ಕಡೆ ಒತ್ತು ಇಳಿಗಳನ್ನೂ ಅಕ್ಷರಗಳನ್ನೂ ಕಬಳಿಸಿಬಿಟ್ಟಿದ್ದಾನೆ. ಅದಕ್ಕಾಗಿ ಓದುಗರ ಕ್ಷಮೆ ಬೇಡುತ್ತೇನೆ. ಈ ಕಾದಂಬರಿಯನ್ನು ಬರೆಯಲು ನನಗೆ ಸಹಾಯ ಮಾಡಿರುವ ಚಿರಂಜೀವಿಗಳಾದ ಕೆ.ಎನ್. ಮಹೇಂದ್ರ, ಕೆ.ಎನ್. ವಿಶ್ವನಾಥ, ಶಂಕರಮೂರ್ತಿ, ರಾಮಕೃಷ್ಣಕಂಠಿ ಇವರುಗಳನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳುವುದು ನನ್ನ ಕರ್ತವ್ಯ.

---

* ಪಂಜರವಳ್ಳಿಯ ಪಂಜು (೧೯೬೩), ನಾಳೆಯ ನೆಳಲು (೧೯೬೬)

ಸುಪ್ರಸಿದ್ಧ ಸಾಹಿತಿಗಳಾದ "ಶ್ರೀರಂಗ"ರವರು ತಮ್ಮ ಮುನ್ನುಡಿಯಲ್ಲಿ ನನ್ನ ಈ ಅಲ್ಪ ಕೃತಿಯನ್ನು ಹೊಗಳಿ ಆಶೀರ್ವದಿಸಿದ್ದಾರೆ. ಅವರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು.

ನಾನೊಬ್ಬ ಸಾಹಿತಿಯೆಂಬ ಬಿರುದನ್ನು ಗಳಿಸುವ ಆಕಾಂಕ್ಷೆ ನನಗಿಲ್ಲ. ಹಣಗಳಿಸುವ ಆಶೆಯೂ ಇಲ್ಲ. ಜನತೆಯಲ್ಲಿ ವೈಚಾರಿಕ ಕ್ರಾಂತಿಯಾಗಬೇಕೆಂಬ ಉದ್ದೇಶದಿಂದ ಈ ಕಾದಂಬರಿಯನ್ನು ರಚಿಸಿದ್ದೇನೆ. ಇದನ್ನು ಓದಿದವರಿಗೆ ವಿಚಾರ ಪ್ರಚೋದನೆಯಾದರೆ ನಾನು ಧನ್ಯ.

ತಾ॥ ೧–೫–೭೫

ಕಡಿದಾಳ್ ಮಂಜಪ್ಪ

೧

'ನಮ್ಮವರೆ ನಮ್ಮ ಶತ್ರುಗಳು'. ಇದು ನಮ್ಮ ಇತಿಹಾಸ ಸಾರಿ ಸಾರಿ ಹೇಳಿರುವ ಮಾತು. ಅನಿಲಗಿರಿಯ ಪುರಾತನ ಕೋಟೆ ರಾಷ್ಟ್ರ ದ್ರೋಹಕ್ಕೆ ಒಂದು ಸ್ಮಾರಕದಂತಿದೆ. ಈ ಕೋಟೆಯನ್ನು ನೂರಾರು ವರ್ಷಗಳ ಹಿಂದೆ, ಶ್ರೀಪುರದ ದೊರೆ ವಿಕ್ರಮದೇವನು ಕಟ್ಟಿಸಿದ್ದನೆಂದು ಪ್ರತೀತಿ ಇದೆ. ಕೋಟೆಯು ಅನಿಲಗಿರಿಯ ತುಟ್ಟತುದಿಯಲ್ಲಿ, ನಾಲ್ಕು ಸಾವಿರ ಅಡಿಗಳ ಎತ್ತರದಲ್ಲಿದೆ. ಗಿರಿಯ ಮೇಲೆ ಗಾಳಿ ಸದಾ ಆರ್ಭಟಿಸುತ್ತಾ ರಭಸದಿಂದ ಬೀಸುತ್ತಿರುವುದರಿಂದ ಗಿರಿಗೆ 'ಅನಿಲಗಿರಿ' ಎಂಬ ಹೆಸರು ಅನ್ವರ್ಥವಾಗಿ ಬಂದಿರುತ್ತದೆ. ಮನಮೋಹಕ ದೃಶ್ಯಗಳ ಮಧ್ಯೆ ಇರುವ ಈ ಗಿರಿಯ ಮೇಲೇರಿ ಹೋಗುವುದೆಂದರೆ ತಂಪು, ಇಂಪು, ಪೆಂಪುಗಳ ತಾಣಕ್ಕೆ ಹೋದಂತೆ. ಗಿರಿಯ ಮುಂದುಗಡೆ ಸಿರಿಮಾವತಿ ನದಿ; ಹಿಂದುಗಡೆ ಭಗವತೀ ಕಾಡು; ಬಲಗಡೆ ಅನಿಲಪುರವೆಂಬ ಒಂದು ಸಣ್ಣ ಹಳ್ಳಿ; ಹಳ್ಳಿಯಿಂದಾಚೆಗೆ ಬಹುದೂರದಲ್ಲಿ ಶ್ರೀದೇವಿ ಬೆಟ್ಟಗಳ ಶ್ರೇಣಿ; ಎಡಗಡೆ ವಿಶಾಲವಾದ ಹೊಲಗದ್ದೆಗಳ ಬಯಲು; ಬಯಲಿನಾಚೆಗೆ ಬಹುದೂರದಲ್ಲಿ ಶ್ರೀಪುರ ನಗರ; ಇವೇ ಮುಂತಾದ ಸುತ್ತಲ ದೃಶ್ಯಗಳು ಗಿರಿಗೆ ಮೆರಗನ್ನು ನೀಡಿವೆ. ಗಿರಿಯ ಮೇಲೆ ಸೊಂಪಾಗಿ ಬೆಳೆದಿರುವ ಮರ, ಗಿಡಗಳು ಗಾಳಿಯ ರಭಸಕ್ಕೆ ಓಲಾಡುತ್ತಿರುವಾಗ, ಕೆಳಗಡೆ ದೂರದಲ್ಲಿ ನಿಂತು ನೋಡುವವರಿಗೆ ಗಿರಿಯ ಆಕಾಶದಲ್ಲಿ ತೇಲಾಡುವ ಉದ್ಯಾನವನದಂತೆ ಕಾಣುತ್ತದೆ.

ಒಂದಾನೊಂದು ಕಾಲದಲ್ಲಿ ಕೋಟೆಯಲ್ಲಿ ಒಂದು ಭವ್ಯವಾದ ಅರಮನೆ ಇತ್ತೆಂದು ಅಲ್ಲಿರುವ ಅವಶೇಷಗಳು ಇಂದೂ ಸಾರುತ್ತಿವೆ. ಅರಮನೆಯಿದ್ದ ಸ್ಥಳದಿಂದ ಸುಮಾರು ಅರ್ಧ ಫರ್ಲಾಂಗು ದೂರದಲ್ಲಿ ವಿಗ್ರಹವಿಲ್ಲದ ಒಂದು ಪಾಳು ದೇವಾಲಯವಿದೆ. ದೇವಾಲಯದ ಕಟ್ಟಡ ನಾಶವಾಗಿ ಹೋಗಿದ್ದರೂ ಕಗ್ಗಲ್ಲಿನ ಗರ್ಭಗುಡಿ ಊನವಿಲ್ಲದೆ ಇಂದೂ ಉಳಿದುಕೊಂಡಿದೆ. ಗರ್ಭಗುಡಿಯಲ್ಲಿದ್ದ ವಿಷ್ಣುದೇವರ ಮೂರ್ತಿಯನ್ನು ಮ್ಲೇಚ್ಛರು ಕೋಟೆಯನ್ನು ವಶಪಡಿಸಿಕೊಂಡಾಗ, ಧ್ವಂಸಪಡಿಸಿದರೆಂದು ಹೇಳುತ್ತಾರೆ. ಕೋಟೆಯ ಇಳಿಜಾರು ಪ್ರದೇಶದಲ್ಲಿ ಒಂದು ವಿಶಾಲವಾದ ಸರೋವರವಿದೆ. ಗಿರಿಯ ಮೇಲಿರುವ ಈ ಸರೋವರದಲ್ಲಿ ಕಡುಬೇಸಿಗೆಯಲ್ಲಿಯೂ ನೀರು ಇಂಗದಿರುವುದು ಒಂದು ಸೋಜಿಗದ ಸಂಗತಿಯಾಗಿದೆ. ಸರೋವರದ ಸುತ್ತಲೂ ಗಿಡಮರಬಳ್ಳಿಗಳೂ ಸರೋವರಕ್ಕೆ ಸೊಬಗನ್ನು ನೀಡಿವೆ. ಕೋಟೆಯ ಉತ್ತರ ಭಾಗದಲ್ಲಿ ಶ್ರೀಪುರದ ದೊರೆಗಳ ಕಾಲದಲ್ಲಿದ್ದ ತುಪ್ಪದ ಬಾವಿ, ಆನೆ ಕುದುರೆಗಳ ಲಾಯ, ಮುಂತಾದುವುಗಳ ಕುರುಹುಗಳನ್ನು ಇಂದೂ ನೋಡಬಹುದಾಗಿದೆ. ಕೋಟೆಯಲ್ಲಿ ಸ್ವಲ್ಪಕಾಲ ತಂಗಿದ್ದರೂ ಕೂಡ ಯಾವುದೋ ಒಂದು ವಿಧವಾದ ಅಪೂರ್ವ ಚೈತನ್ಯ ಸೋಂಕಿದಂತಾಗಿ, ಆಹ್ಲಾದದ

ಬುಗ್ಗೆಯಲ್ಲಿ ಮಿಂದಂತೆ ಭಾಸವಾಗುತ್ತದೆ. ಆದರೆ ಕೋಟೆಯ ಇತಿಹಾಸ ಗೊತ್ತಿದ್ದವರಿಗೆ ಆಹ್ಲಾದದ ಜೊತೆಗೆ ಖೇದವೂ ಉಂಟಾಗುತ್ತದೆ.

ಇಂದಿನ ಶ್ರೀಪುರ ರಾಜ್ಯದ ಸುಮಾರು ಅರೆವಾಸಿ ಪ್ರದೇಶ ಅಂದು ಶ್ರೀಪುರ ದೊರೆಗಳ ಆಳ್ವಿಕೆಗೊಳಗಾಗಿತ್ತು. ಸುಮಾರು ಮೂರು ಶತಮಾನಗಳ ಕಾಲ ಶ್ರೀಪುರದ ದೊರೆಗಳು ಈ ಪ್ರದೇಶವನ್ನು ಅತ್ಯಂತ ವೈಭವ ಪರಾಕ್ರಮಗಳಿಂದ ಆಳುತ್ತಿದ್ದರು. ಶ್ರೀಪುರ ಅವರ ಅಧಿಕೃತ ರಾಜಧಾನಿಯಾಗಿದ್ದರೆ, ಅನಿಲಗಿರಿಯ ಕೋಟೆ ಅವರ ವಿಶ್ರಾಂತಿಯ ಮತ್ತು ರಕ್ಷಣೆಯ ಠಾಣವಾಗಿತ್ತು. ಆ ಕಾಲದಲ್ಲಿ ಶ್ರೀಪುರದ ಅರಮನೆಯಿಂದ ಕೋಟೆಗೆ ಒಂದು ಗುಪ್ತಸುರಂಗ ಮಾರ್ಗವಿತ್ತೆಂದು ಪ್ರತೀತಿ ಇದೆ. ಶ್ರೀಪುರದ ರಾಜ ಪ್ರದೀಪಸಿಂಹನ ಕಾಲದಲ್ಲೇ ಮ್ಲೇಚ್ಛರು ವಾಯವ್ಯ ದಿಕ್ಕಿನಿಂದ ಭಾರತಕ್ಕೆ ಹಿಂಡು ಹಿಂಡಾಗಿ ನುಗ್ಗಲಾರಂಭಿಸಿದ್ದರು. ಆ ಕಾಲದಲ್ಲಿ, ಭಾರತದ ರಾಜಮಹಾರಾಜರುಗಳು ದೇಶಾಭಿಮಾನವನ್ನು ಮರೆತು, ಪರಸ್ಪರ ದ್ವೇಷ ಅಸೂಯೆಗಳಿಂದ ಒಬ್ಬರೊಡನೊಬ್ಬರು ಹೊಡೆದಾಡುತ್ತಿದ್ದುದರಿಂದ ಮ್ಲೇಚ್ಛರು ಆ ಸನ್ನಿವೇಶವನ್ನುಪಯೋಗಿಸಿಕೊಂಡು, ಒಂದೊಂದಾಗಿ ರಾಜ್ಯಗಳನ್ನು ಕಬಳಿಸುತ್ತಿದ್ದರು. ಕ್ರಮೇಣ, ಅವರು ಶ್ರೀಪುರದ ನೆರೆ ರಾಜ್ಯವಾದ ಸಿರಗೂರಿಗೆ ಮುತ್ತಿಗೆ ಹಾಕಿದರು. ಸಿರಗೂರಿನ ದೊರೆ ಜಯವೀರನು ಮ್ಲೇಚ್ಛರ ಧಾಳಿಯನ್ನು ಎದುರಿಸಲಾರದೆ ಶ್ರೀಪುರದ ದೊರೆ ಪ್ರದೀಪಸಿಂಹನ ಮಗ ಪ್ರತಾಪರುದ್ರನ ಮರೆ ಹೊಕ್ಕನು. ಪ್ರತಾಪರುದ್ರನು ಜಯವೀರನಿಗೆ ಆಶ್ರಯ ನೀಡಿ, ಮ್ಲೇಚ್ಛರ ಮೇಲೆ ದಂಡೆತ್ತಿ ಹೋಗಿ, ಅವರನ್ನು ಸದೆ ಬಡಿದು ಸಿರಗೂರಿನಿಂದ ಹೊಡೆದೋಡಿಸಿದನು. ಪ್ರತಾಪರುದ್ರನು ಮ್ಲೇಚ್ಛರಿಗೆ ಸಿಂಹ ಸ್ವಪ್ನವಾಗಿದ್ದನು. ಅವನ ಹೆಸರನ್ನು ಕೇಳಿದರೆ ಅವರಿಗೆ ನಡುಕ ಉಂಟಾಗುತ್ತಿತ್ತು. ಅವನು ಜೀವಂತವಾಗಿರುವವರೆಗೆ ಮ್ಲೇಚ್ಛರು ಆ ಕಡೆಗೆ ಸುಳಿದಿರಲಿಲ್ಲ.

ಪ್ರತಾಪರುದ್ರನ ಮರಣಾನಂತರ ಅವನ ಮಗ ಪ್ರತಾಪಸಿಂಹನು ಪಟ್ಟಕ್ಕೆ ಬಂದನು. ಪ್ರತಾಪಸಿಂಹನು ಹೆಸರಿಗೆ ತಕ್ಕಂತೆ ಪರಾಕ್ರಮಶಾಲಿ; ಅಂತೆಯೇ ಅಪ್ರತಿಮ ರಾಷ್ಟ್ರಪ್ರೇಮಿ. ಮ್ಲೇಚ್ಛರು ಹಿಂದೂಸ್ಥಾನವನ್ನು ಆಕ್ರಮಿಸುತ್ತಿರುವುದನ್ನು ನೋಡಿ ಅವನ ರಕ್ತ ಕುದಿಯುತ್ತಿತ್ತು. ಅವರನ್ನು ಹಿಂದೂಸ್ಥಾನದಿಂದಲೇ ಓಡಿಸಬೇಕೆಂದು ಸಂಕಲ್ಪ ಮಾಡಿ, ಜಗಳವಾಡುತ್ತಿದ್ದ ಅಕ್ಕಪಕ್ಕದ ರಾಜಮಹಾರಾಜರುಗಳನ್ನು ಒಂದುಗೂಡಿಸಲು ಪ್ರಯತ್ನಿಸುತ್ತಿದ್ದನು. ಮ್ಲೇಚ್ಛರಿಗೆ ಇದು ಗೊತ್ತಾಗಿ ಪ್ರತಾಪಸಿಂಹನನ್ನು ಹತಮಾಡಲು ಸೂಕ್ತ ಸಮಯಸಿಕ್ಕಾಗ ಹೊಂಚು ಹಾಕುತ್ತಿದ್ದರು, ಮ್ಲೇಚ್ಛರಿಂದ ಹಿಂದೆ ಗಂಡಾಂತರಕ್ಕೆ ಈಡಾಗಿದ್ದ ಜಯವೀರನು ಸ್ವಾಭಾವಿಕವಾಗಿ ಪ್ರತಾಪಸಿಂಹನೊಡನೆ ಸಹಕರಿಸಬೇಕಾಗಿತ್ತು. ಆದರೆ ಅವನು ಸಹಕರಿಸುವ ಬದಲು ಪ್ರತಾಪಸಿಂಹನ ಪ್ರಭಾವ ಪ್ರಾಬಲ್ಯಗಳನ್ನು ಕಂಡು ಹೊಟ್ಟೆಕಿಚ್ಚಿನಿಂದ ಕರುಬುತ್ತಿದ್ದನು. ಪ್ರತಾಪಸಿಂಹನ ತಂದೆ ಪ್ರತಾಪರುದ್ರನಿಂದ ಹಿಂದೆ ತನಗಾಗಿದ್ದ ಉಪಕಾರವನ್ನೂ ಸಹ ಅವನು ಮರೆತುಬಿಟ್ಟಿದ್ದನು. ಇದನ್ನರಿತ ಮ್ಲೇಚ್ಛರು ಜಯವೀರನೊಡನೆ ಗುಪ್ತಸಂಧಾನ ನಡೆಯಿಸಿ, ಅವನು ಪ್ರತಾಪಸಿಂಹನನ್ನು ಕೊಲ್ಲಲು ತಮಗೆ ಸಹಾಯ ಮಾಡಿದರೆ

ತಾವು ಶ್ರೀಪುರ ರಾಜ್ಯವನ್ನು ಗೆದ್ದು ಅವನಿಗೆ ಕೊಡುವುದಾಗಿ ಸುಳ್ಳು ಭರವಸೆ ನೀಡಿದರು. ಈ ಪೊಳ್ಳು ಭರವಸೆಯನ್ನು ನಂಬಿ ಜಯವೀರನು ಮ್ಲೇಚ್ಛರೊಡನೆ ಷರೀಕಾದನು. ಆನಂತರ ಜಯವೀರನೂ, ಮ್ಲೇಚ್ಛರೂ ಒಟ್ಟಾಗಿ ಸೇರಿ ಶ್ರೀಪುರದ ಮೇಲೆ ದಂಡೆತ್ತಿ ಹೋದರು.

ಮೊದಲಿನಿಂದಲೂ ಹಿತೈಷಿಯಂತೆ ನಟಿಸುತ್ತಿದ್ದ ಜಯವೀರನು ಮ್ಲೇಚ್ಛರ ಜೊತೆಯಲ್ಲಿ ತನ್ನ ರಾಜ್ಯದ ಮೇಲೆ ದಂಡೆತ್ತಿ ಬಂದುದನ್ನು ನೋಡಿ ಪ್ರತಾಪಸಿಂಹನು ಅಪ್ರತಿಭನಾದನು. ಮ್ಲೇಚ್ಛರ ಮತ್ತು ಜಯವೀರನ ಸೇನೆಗಳು ಶ್ರೀಪುರವನ್ನು ಏಕಾಏಕಿ ಮುತ್ತಿಗೆ ಹಾಕಿದವು. ಅನಿರೀಕ್ಷಿತವಾಗಿ ಮುತ್ತಿಗೆ ಹಾಕಿದ್ದ ಉಭಯಸೇನೆಗಳನ್ನು ಎದುರಿಸಲಾರದ ಪ್ರತಾಪಸಿಂಹನು, ತನ್ನ ಸಕಲ ಪರಿವಾರ ಸಮೇತ, ಗುಪ್ತ ಸುರಂಗಮಾರ್ಗದಿಂದ ಅನಿಲಗಿರಿಯ ಕೋಟೆಗೆ ಹೋಗಿ, ಅಲ್ಲಿ ಅಡಗಿದ್ದನು. ಮ್ಲೇಚ್ಛರು ಶ್ರೀಪುರದ ಅರಮನೆಯನ್ನು ವಶಪಡಿಸಿಕೊಂಡ ನಂತರ ಜಯವೀರನ ಸಹಾಯದಿಂದ ಗುಪ್ತ ಸುರಂಗಮಾರ್ಗವನ್ನು ಪತ್ತೆ ಹಚ್ಚಿ, ಅನಿಲಗಿರಿಯ ಕೋಟೆಗೆ ನುಗ್ಗಿದರು. ನಡುರಾತ್ರಿಯಲ್ಲಿ ಪ್ರತಾಪಸಿಂಹನೂ ಅವನ ಪರಿವಾರದವರೂ ನಿದ್ದೆ ಮಾಡುತ್ತಿದ್ದಾಗ ಮ್ಲೇಚ್ಛರು ಅರಮನೆಗೆ ಮುತ್ತಿಗೆ ಹಾಕಿ, ನಿಸ್ಸಹಾಯಕನಾಗಿದ್ದ ಪ್ರತಾಪಸಿಂಹನನ್ನು ಕೊಂದುಹಾಕಿದರು. ಗಂಡ ಹತನಾದುದನ್ನು ಕಂಡ ಅವನ ರಾಣಿಯು ಮ್ಲೇಚ್ಛರ ಸೆರೆಯಾಳಾಗಿ, ಅವಮಾನಿತಳಾಗಿ ಬಾಳುವುದಕ್ಕಿಂತ ಸಾಯುವುದೇ ಲೇಸೆಂದು ಭಾವಿಸಿ ಆತ್ಮಹತ್ಯೆ ಮಾಡಿಕೊಂಡಳು. ಆದರೆ ದುರದೃಷ್ಟವಶಾತ್ ಪ್ರತಾಪಸಿಂಹನ ಮಗಳು ರಾಜಕುಮಾರಿ ಮನಮೋಹಿನಿಯು ಮ್ಲೇಚ್ಛರ ಕೈಗೆ ಸಿಕ್ಕಿಬಿದ್ದಳು. ಮನಮೋಹಿನಿಯ ರೂಪರಾಶಿಗೆ ಮನಸೋತ ಮ್ಲೇಚ್ಛ ಸೇನಾನಿಯು ಅವಳನ್ನು ಸೆರೆ ಹಿಡಿದುಕೊಂಡು ತನ್ನ ಜೊತೆಯಲ್ಲಿ ಕರೆದೊಯ್ಯುತ್ತಿರುವಾಗ, ಅವಳು ತನ್ನ ಸೊಂಟದಲ್ಲಿ ಸಿಕ್ಕಿಸಿಕೊಂಡಿದ್ದ ಕಠಾರಿಯನ್ನು ಹಿರಿದು, ಸಿಂಹಿಣಿಯಂತೆ ಆ ಸೇನಾನಿಯ ಮೇಲೆರಗಿ, ಅವನನ್ನು ಕೊಂದು ತಾನೂ ಆತ್ಮಹತ್ಯೆ ಮಾಡಿಕೊಂಡಳು. ಈಗಲೂ ಮನಮೋಹಿನಿಯ ಪ್ರೇತ ಅಮಾವಾಸ್ಯೆ ಹುಣ್ಣಿಮೆ ದಿನಗಳಲ್ಲಿ ರಾತ್ರಿಯ ವೇಳೆ ದೀಪ ಹಚ್ಚಿಕೊಂಡು ತಂದೆ ತಾಯಿಗಳನ್ನು ಹುಡುಕುತ್ತಾ ಕೋಟೆಯಮೇಲೆ ತಿರುಗುತ್ತದೆಯೆಂದು ಸುತ್ತಮುತ್ತಲ ಹಳ್ಳಿಯವರು ಹೇಳುತ್ತಾರೆ. ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತವೆನ್ನುವಂತೆ ಶ್ರೀಪುರದ ರಾಜ್ಯವನ್ನು ವಶಪಡಿಸಿಕೊಂಡ ಮ್ಲೇಚ್ಛರು ಕೆಲವೇ ದಿನಗಳಲ್ಲಿ ಸಿರಗೂರಿಗೆ ಮುತ್ತಿಗೆ ಹಾಕಿ ಜಯವೀರನನ್ನು ಕೊಂದು ಸಿರಗೂರು ರಾಜ್ಯವನ್ನು ತಮ್ಮ ವಶಪಡಿಸಿಕೊಂಡರು. ಇವು ಇತಿಹಾಸದ ಮಾತುಗಳು.

ಕೋಟೆಯು ಶ್ರೀಪುರ ನಗರಕ್ಕೆ ಕೇವಲ ಹದಿನೈದು ಮೈಲಿಗಳ ದೂರದಲ್ಲಿದೆ. ಕೋಟೆಯ ಮೇಲೆಲ್ಲಾ ಕಾಡು ಬೆಳೆದು ಹೋಗಿದ್ದರಿಂದಲೂ, ಗಿರಿಯನ್ನು ಹತ್ತಲು ಹಿಂದೆ ನಿರ್ಮಿಸಿದ್ದ ಮೆಟ್ಟಿಲುಗಳು ನಾಶವಾಗಿ ಹೋಗಿದ್ದರಿಂದಲೂ ಆಂಗ್ಲರ ಆಳ್ವಿಕೆಯ ಕಾಲದಲ್ಲಿ ಕೋಟೆಗೆ ಯಾರೂ ಹೋಗುತ್ತಿರಲಿಲ್ಲ. ಸ್ವರಾಜ್ಯ ಬಂದಮೇಲೆ, ಸುಮಾರು

ಇಪ್ಪತ್ತು ವರ್ಷಗಳ ಹಿಂದೆ, ಪ್ರವಾಸೋದ್ಯಮ ಇಲಾಖೆಯವರು ಕೋಟೆಯ ನೆತ್ತಿಯವರೆಗೂ ಒಂದು ರಸ್ತೆಯನ್ನು ನಿರ್ಮಿಸಿರುತ್ತಾರೆ. ರಸ್ತೆಯ ನಿರ್ಮಾಣವಾದ ಮೇಲೆ ಐತಿಹಾಸಿಕ ವಿಷಯಗಳಲ್ಲಿ ಆಸಕ್ತಿ ಉಳ್ಳವರೂ ಸೃಷ್ಟಿ ಸೌಂದರ್ಯದ ಸೊಬಗನ್ನು ಸವಿಯಲಿಚ್ಛಿಸುವವರೂ ಕೋಟೆಗೆ ಆಗಾಗ ಹೋಗಿ ಬರುವುದುಂಟು. ಕೋಟೆಯ ಮೇಲೆ ಊಟ, ವಸತಿಗಳ ಸೌಕರ್ಯವಿಲ್ಲದಿರುವುದರಿಂದ ರಾತ್ರಿಯ ಹೊತ್ತು ಯಾರೂ ಅಲ್ಲಿ ತಂಗಿರಲು ಸಾಧ್ಯವಿಲ್ಲ. ಇತ್ತೀಚಿನ ವರ್ಷಗಳಲ್ಲಿ ಶ್ರೀಪುರದ ವಿಲಾಸಪ್ರಿಯ ಜನರಿಗೆ ಈ ಕೋಟೆ ಅಕ್ರಮ ಪ್ರಣಯದ ಅಮೋದ ಸ್ಥಳವಾಗಿದೆ ಎಂದು ಕೆಲವರು ಹೇಳುತ್ತಾರೆ. ಒಮ್ಮೊಮ್ಮೆ ಕ್ರಾಂತಿಸೇನೆಯ ಉಗ್ರಗಾಮಿಗಳು ರಾತ್ರಿಯವೇಳೆ ಕೋಟೆಯಲ್ಲಿ ತಮ್ಮ ಗುಪ್ತಸಭೆಗಳನ್ನು ನಡೆಯಿಸುತ್ತಾರೆಂದು ವದಂತಿ ಇದೆ.

ಸೂರ್ಯಾಸ್ತಮ ಸಮಯ. ಕೋಟೆಯ ಸುತ್ತಲೂ ನಾಲ್ಕೈದು ಮೈಲಿಗಳ ದೂರದವರೆಗೆ ಆಕಾಶ ವರ್ತುಲಾಕಾರವಾಗಿ ಭೂಮಿಗೆ ಬೆಸೆದುಕೊಂಡಿರುವಂತೆ ಕಾಣಿಸುತ್ತಿತ್ತು. ಹಕ್ಕಿಪಕ್ಷಿಗಳು ತಮ್ಮ ಹಕ್ಕೆಗಳ ಕಡೆಗೆ ಧಾವಿಸುತ್ತಿದ್ದುವು. ಇರುಳು ಹಗಲನ್ನು ಅಟ್ಟಿಸಿಕೊಂಡು ಹೋಗುತ್ತಿರುವುದೋ ಎಂಬಂತೆ, ಅಸ್ತಂಗತನಾಗುತ್ತಿದ್ದ ನೇಸರು ನಿಶಾದೇವಿಯೊಡನೆ ಸರಸವಾಡುತ್ತಿರುವನೋ ಎಂಬಂತೆ, ಬಾಳಿನ ಜಂಜಾಟದಿಂದ ಹಗಲೆಲ್ಲವೂ ಬಳಲಿದ್ದ ಜಗದ ಜೀವಿಗಳಿಗೆ ಶಾಂತಿ ವಿಶ್ರಾಂತಿಗಳನ್ನೀಯಲು ಕಾಲಪುರುಷನು ತನ್ನ ಮಾಯಾದಂಡವನ್ನು ಬೀಸುತ್ತಿರುವನೋ ಎಂಬಂತೆ ಭಾಸವಾಗುತ್ತಿತ್ತು. ಆ ಇಳಿಹೊತ್ತಿನಲ್ಲಿ ಶ್ರೀಪುರದ ವಕೀಲ ಕೃಷ್ಣಕಾಂತನ ಮಗಳು ಚಂಚಲೆ ಏಕಾಂಗಿಯಾಗಿ ಸ್ಕೂಟರ ಮೇಲೆ ಕುಳಿತು ಶ್ರೀಪುರದ ಕಡೆಯಿಂದ ಬಂದವಳು, ಅನಿಲಗಿರಿಗೆ ಹೋಗುವ ರಸ್ತೆಯನ್ನು ಹಿಡಿದು ಹೋಗುತ್ತಿದ್ದಳು. ಕೋಟೆಯ ಮೇಲೆ ನರಹುಳುವಿನ ಸುಳಿವೇ ಇಲ್ಲದಿದ್ದ ಆ ವೇಳೆಯಲ್ಲಿ ಗಂಡಸರೂ ಕೂಡ ಏಕಾಂಗಿಯಾಗಿ ಕೋಟೆಗೆ ಹೋಗಲು ಹಿಂಜರಿಯಬಹುದಾದ ಪ್ರಸಂಗದಲ್ಲಿ ಕೋಟೆಯ ಕಡೆಗೆ ಹೋಗುತ್ತಿದ್ದ ಆ ಯುವತಿಯ ಯಮಧೈರ್ಯ ಮೆಚ್ಚುವಂತಹದಾಗಿತ್ತು.

ಯುವತಿಗೆ ಸುಮಾರು ಇಪ್ಪತ್ತೈದು ವರ್ಷಗಳಾಗಿರಬಹುದು. ಈಗಿನ ಕಾಲದ ಕಾಲೇಜು ಹುಡುಗಿಯರಂತೆ ಗಂಡಸರ ರೀತಿಯಲ್ಲಿ ಷರಾಯಿ ಹಾಕಿಕೊಂಡು, ಮೈಗೆ ಕುರ್ತಾವನ್ನು ತೊಟ್ಟಿದ್ದಳು. ಗಾಳಿಯ ಹೊಡೆತವನ್ನು ತಪ್ಪಿಸಿಕೊಳ್ಳಲು ಕೆಂಪು ಮತ್ತು ಹಳದಿ ಮಿಶ್ರಬಣ್ಣದ ಉತ್ತರೀಯವನ್ನು ತಲೆಗೆ ಕಟ್ಟಿದ್ದಳು. ಸಾಮಾನ್ಯವಾದ ಎತ್ತರ, ಎತ್ತರಕ್ಕೆ ಅನುಗುಣವಾದ ಮೈಕಟ್ಟು, ಗೌರವವರ್ಣದ ಆಕರ್ಷಕ ಮುಖ, ನೀಳವಾದ ಮೂಗು, ಚೆಂದುಟಿ, ಕಾಂತಿಯುತವಾದ ಕಣ್ಣುಗಳು ಇವೇ ಮುಂತಾದ ಅಂಗಸೌಷ್ಟವಗಳಿಂದ ಕೂಡಿದ್ದ ಅವಳು ಸರ್ವಾಂಗ ಸುಂದರಿಯಂತೆ ಕಾಣುತ್ತಿದ್ದಳು. ಅವಳ ಮುಖದಲ್ಲಿ ಚೆಲುವು ಚೆಲ್ಲಿ ಸೂಸುವಂತಿದ್ದರೆ, ವಿಲಾಸಪ್ರಿಯ ಕಣ್ಣುಗಳಲ್ಲಿ ಮನ್ಮಥನು ಚೆಲ್ಲಾಟವಾಡುತ್ತಿರುವಂತೆ ತೋರುತ್ತಿತ್ತು. ತುಟಿಗಳು ಚುಂಬನಕ್ಕೆ ತವಕಪಡುತ್ತಿದ್ದರೆ, ಕುಚಗಳು ಆಲಿಂಗನಕ್ಕೆ ಅವಸರಪಡುತ್ತಿರುವಂತೆ ತೋರುತ್ತಿದ್ದವು.

ಕೋಟೆಗೆ ಹೋಗುವ ಹಾದಿಯು ಅಂಕುಕೊಂಡಾಗಿ ಉಬ್ಬೇರಿ, ತಗ್ಗಿಳಿದು, ಮೇಲೇರಿ, ಕೆಳಗಿಳಿದು, ಹಾವು ಹರಿದಂತೆ ಹೋಗಿತ್ತು. ಉಬ್ಬನ್ನು ಹತ್ತಲಾರದೆ ಆಯಾಸದಿಂದ ಬುಸುಗುಟ್ಟುತ್ತಿರುವುದೋ ಎಂಬಂತೆ ಅವಳು ಕುಳಿತಿದ್ದ ಸ್ಕೂಟರು ಶಬ್ದ ಮಾಡುತ್ತಾ ಮುಂದೆ ಸಾಗಿತ್ತು.

ಯುವತಿ ಕೋಟೆಯನ್ನು ಸೇರಿದ ನಂತರ, ದೇವಾಲಯದ ಬಳಿ ಸ್ಕೂಟರನ್ನು ನಿಲ್ಲಿಸಿ ದೇವಾಲಯದ ಮುಂದೆ ನಿಂತು 'ಮಿಸ್ಟರ್ ಶಂಕರ್' ಎಂದು ಕೂಗಿದಳು. ಅವಳ ಕೂಗಿಗೆ ಯಾವ ಪ್ರತ್ಯುತ್ತರವೂ ಬರಲಿಲ್ಲ. ಆಕಡೆಗೊಮ್ಮೆ ಈಕಡೆಗೊಮ್ಮೆ ದೃಷ್ಟಿಯನ್ನು ಬೀರಿ ಮತ್ತೊಮ್ಮೆ ಗಟ್ಟಿಯಾಗಿ 'ಮಿಸ್ಟರ್ ಶಂಕರ್, ಮಿಸ್ಟರ್ ಶಂಕರ್' ಎಂದು ಚೀರಿದಳು. ಆಗಲೂ ಪ್ರತ್ಯುತ್ತರ ಬರಲಿಲ್ಲ. 'ಆರು ಘಂಟೆಗೆ ಸರಿಯಾಗಿ ಇಲ್ಲಿ ಬಂದು ಕಾದಿರುವುದಾಗಿ ಹೇಳಿದ್ದವರು ಇನ್ನೂ ಬಾರದಿರುವುದು ಆಶ್ಚರ್ಯ! ಹಿಂದೆ ಯಾವಾಗಲೂ ಹೀಗಾಗಿರಲಿಲ್ಲ. ಈಗೇನೂ ಮಾಡಲಿ? ಅಂತೂ ಬಂದದ್ದಾಗಿದೆ. ಇನ್ನೂ ಸ್ವಲ್ಪ ಹೊತ್ತು ಕಾದು ನೋಡುತ್ತೇನೆ' ಎಂದು ಮನಸ್ಸಿನಲ್ಲಿಯೇ ಅಂದುಕೊಂಡು ದೇವಾಲಯದ ಮುಂದಿದ್ದ ಕಲ್ಲು ಚಪ್ಪಡಿಯ ಮೇಲೆ ಕುಳಿತಳು. ನಿಮಿಷಗಳುರುಳಿದವು; ಕಾಲು ಘಂಟೆಯಾಯ್ತು; ಅರ್ಧ ಘಂಟೆಯಾಯ್ತು; ಕತ್ತಲು ಕವಿಯುತ್ತಿತ್ತು. ಯಾರಿಗಾಗಿ ಕಾಯುತ್ತಿದ್ದಳೋ ಅವನ ಸುಳಿವೇ ಇರಲಿಲ್ಲ. ದೇವಾಲಯದ ಗರ್ಭಗುಡಿಯಲ್ಲಿ ಬಾವಲಿಗಳು ಆಗಲೇ ಸದ್ದನ್ನಾರಂಭಿಸಿದ್ದವು. ಅಂದು ಅಮಾವಾಸ್ಯೆಯ ದಿನವೆಂದು ಜ್ಞಾಪಕವಾದ ಮೇಲೆ ಅವಳ ಜೀವ ಝಲ್ಲೆಂದು ಹೆದರಿಕೆಯಿಂದ ತಲ್ಲಣಿಸಿತು. ರಾಜಕುಮಾರಿ ಮನಮೋಹಿನಿಯ ಪ್ರೇತ ಅಮಾವಾಸ್ಯೆ ಹುಣ್ಣಿಮೆ ದಿನಗಳಲ್ಲಿ ಕೋಟೆಯಲ್ಲಿ ಓಡಾಡುತ್ತಿರುವುದೆಂದು ಕೇಳಿದ್ದಳು. ಕಾಡು ಮೃಗಗಳು ಸರೋವರದಲ್ಲಿ ನೀರು ಕುಡಿಯಲು ಬರುತ್ತವೆ ಎಂದು ಕೇಳಿದ್ದಳು. ಆದರೂ ತನ್ನ ಪ್ರಿಯತಮನನ್ನು ಕೂಡುವ ಆಸೆ ಪ್ರಬಲವಾಗಿದ್ದುದರಿಂದ, ಅಂಜಿಕೆಯನ್ನು ಬದಿಗೊತ್ತಿ, ಎಷ್ಟು ಹೊತ್ತಾದರೂ ಶಂಕರನು ಬಂದೇ ಬರುತ್ತಾನೆಂಬ ದೃಢ ನಂಬಿಕೆಯಿಂದ ಕುಳಿತಿದ್ದಳು, ಅವಳ ಕೈಯಲ್ಲಿದ್ದ ವಿದ್ಯುತ್‌ದೊಂದಿ ಅವಳ ಏಕಮಾತ್ರ ಆಯುಧವಾಗಿತ್ತು.

ಹಾಗೆಯೇ ಏಕಾಂಗಿಯಾಗಿ ಕುಳಿತಿರುವಾಗ, ಅವಳ ತಲೆಯಲ್ಲಿ ಅವಳ ಜೀವನದ ಹಿಂದಿನ ಸಂಗತಿಗಳು ಒಂದೊಂದಾಗಿ ಮೂಡಿಬರುತ್ತಿದ್ದವು. ತಾನು ಚಿಕ್ಕಮಗುವಾಗಿದ್ದಾಗ ತನ್ನ ತಾಯಿ ತಾರ ತನ್ನನ್ನು ತಬ್ಬಲಿಯನ್ನಾಗಿ ಮಾಡಿ ಪರಲೋಕಯಾತ್ರೆ ಮಾಡಿದ ವಿಚಾರ, ತಾಯಿಯ ಮರಣಾನಂತರ ತನ್ನ ಅಜ್ಜಿಯ ಮನೆಯಲ್ಲಿ ಕೆಲಕಾಲ ಸುಖವಾಗಿ ಬೆಳೆದ ವಿಚಾರ, ಅಜ್ಜಿ ಸತ್ತ ನಂತರ ಮಲತಾಯಿ ಕಮಲೆಯ ಕಿರುಕುಳದಿಂದ ನೊಂದವಿಚಾರ, ಕಾಲೇಜು ಶಿಕ್ಷಣ ಮುಗಿದ ನಂತರ ತಂದೆ ಕೃಷ್ಣಕಾಂತನು ತನಗಾಗಿ ವರಾನ್ವೇಷಣೆ ಮಾಡಿ ವರನ ಕಡೆಯವರು ಕೇಳುತ್ತಿದ್ದ ಅಪಾರ ವರದಕ್ಷಿಣೆಯನ್ನು ಕೊಡಲಾರದೆ ಪರಿತಪಿಸುತ್ತಿದ್ದ ವಿಚಾರ, ತಂದೆಯ ಗೋಳನ್ನು ನೋಡಲಾರದೆ ತನ್ನ ಭಾವಿಪತಿಯನ್ನು ತಾನೇ ಅರಸಬೇಕೆಂದು ಪ್ರಯತ್ನಿಸುತ್ತಿದ್ದಾಗ ಆಕಸ್ಮಿಕವಾಗಿ ಇದೇ

ಕೋಟೆಯಲ್ಲಿ ಆರು ತಿಂಗಳ ಹಿಂದೆ ಕ್ರಾಂತಿಸೇನೆಯ ಅಧ್ಯಕ್ಷ ಜನರಲ್ ಶಂಕರನ ಪರಿಚಯವಾದ ವಿಚಾರ, ಇವೇ ಮುಂತಾದ ತನ್ನ ಬಾಳಿನ ಸಂಗತಿಗಳನ್ನು ಒಂದೊಂದಾಗಿ ಸ್ಮರಿಸುತ್ತಾ ತನ್ನ ಪ್ರಿಯತಮ ಶಂಕರನಿಗಾಗಿ ಕಾದು ಕುಳಿತಿದ್ದಳು.

ಆರು ತಿಂಗಳ ಹಿಂದೆ, ಕೋಟೆಯನ್ನು ನೋಡುವ ಸಲುವಾಗಿ ಚಂಚಲೆಯೂ ಅವಳ ಐವರು ಗೆಳತಿಯರೂ ಸ್ಕೂಟರುಗಳ ಮೇಲೆ ಕೋಟೆಗೆ ಬಂದಿದ್ದರು. ಕೋಟೆಯಲ್ಲೆಲ್ಲಾ ತಿರುಗಾಡಿ, ಸಂಜೆ ಊರಿಗೆ ಹೊರಡಬೇಕೆಂದಿರುವಾಗ, ಚಂಚಲೆಯ ಸ್ಕೂಟರ್ ಚಕ್ರದ ರಬ್ಬರ್ ಟ್ಯೂಬು ತೂತಾಗಿ ಗಾಳಿ ಸೋರಿಹೋಗಿತ್ತು. ಮುಂದೇನು ಮಾಡಬೇಕೆಂಬುದು ತೋಚದೆ ಹುಡುಗಿಯರು ಕಂಗಾಲಾಗಿದ್ದ ಕಾಲಕ್ಕೆ ಸರಿಯಾಗಿ ಕ್ರಾಂತಿಸೇನೆಯ ಅಧಿಪತಿ ಜನರಲ್ ಶಂಕರನು ತನ್ನ ಕಾರಿನಲ್ಲಿ ಬಂದಿಳಿದನು. ಅವನು ಆ ರಾತ್ರಿ ಕೋಟೆಯಲ್ಲಿ ಜರುಗಬೇಕಾಗಿದ್ದ ಕ್ರಾಂತಿಸೇನೆಯ ಗುಪ್ತಸಭೆಯಲ್ಲಿ ಭಾಗವಹಿಸಲು ಬಂದಿದ್ದನು. ಹುಡುಗಿಯರು ಸ್ಕೂಟರ್ ರಿಪೇರಿ ಮಾಡುವ ಸಾಧನಗಳಿಲ್ಲದೆ ನಿಸ್ಸಹಾಯಕರಾಗಿ ನಿಂತಿದ್ದರು. ಶಂಕರನು ಸ್ಕೂಟರ್ ಕೆಟ್ಟು ಹೋಗಿದೆ ಎಂಬುದನ್ನು ಹುಡುಗಿಯರಿಂದ ಕೇಳಿ, ಅದನ್ನು ರಿಪೇರಿ ಮಾಡಬೇಕೆಂದು ತನ್ನ ಕಾರಿನ ಸಾರಥಿಗೆ ಆಜ್ಞಾಪಿಸಿ, ಹುಡುಗಿಯರೊಡನೆ ಸಂಭಾಷಣೆಯಲ್ಲಿ ತೊಡಗಿದ್ದನು.

ಶಂಕರನು ಕ್ರಾಂತಿಸೇನೆಯ ಸಮವಸ್ತ್ರಗಳನ್ನು ತೊಟ್ಟು ಸಮರದಲ್ಲಿ ಪಳಗಿದ್ದ ಸಾಹಸಿ ದಳಪತಿಯಂತೆ ತೋರುತ್ತಿದ್ದನು. ಸ್ಫುರದ್ರೂಪಿಯಲ್ಲದಿದ್ದರೂ ಅವನ ಮುಖದಲ್ಲಿ ಏನೋ ಒಂದು ಅವರ್ಣನೀಯ ವರ್ಚಸ್ಸು ಕಾಣಿಸುತ್ತಿತ್ತು. ಅವನ ತುಂಟನಗೆ, ಕುಡಿಮೀಸೆ, ಹಾವಭಾವಗಳು ಅವನೊಬ್ಬ ರಸಿಕನೆಂಬುದನ್ನು ಸೂಚಿಸುತ್ತಿದ್ದರೆ, ಅವನ ತೀಕ್ಷ್ಣದೃಷ್ಟಿ ಮತ್ತು ತುಟಿಗಳು ದೃಢ ನಿರ್ಧಾರವನ್ನು ಸೂಚಿಸುತ್ತಿದ್ದವು. ನಯವಿನಯಗಳನ್ನು ಪ್ರದರ್ಶಿಸುವುದರಲ್ಲಿ ನಿಸ್ಸೀಮನಂತೆ ತೋರುತ್ತಿದ್ದನು. ಅವನ ಇತಿಹಾಸ ಗೊತ್ತಿಲ್ಲದಿದ್ದವರಿಗೆ ಅವನೊಬ್ಬ ಅತ್ಯಂತ ಸುಸಂಸ್ಕೃತ ವ್ಯಕ್ತಿಯಂತೆ ಕಾಣುತ್ತಿದ್ದರೂ, ಮುಖ ಸಾಮುದ್ರಿಕ ಶಾಸ್ತ್ರ ಗೊತ್ತಿದ್ದವರು ಅವನ ಮುಖಮುದ್ರೆಯನ್ನು ನೋಡಿದ್ದರೆ ಅವನೊಬ್ಬ ಧೂರ್ತನೆಂದು ನಿರ್ಧರಿಸುತ್ತಿದ್ದರು. ಮಹಿಳೆಯರನ್ನು ತನ್ನ ಮೋಹಜಾಲಕ್ಕೆ ಸಿಕ್ಕಿಸಿಕೊಳ್ಳುವ ಕಲೆಯಲ್ಲಿ ಅವನು ಅದ್ವಿತೀಯ ಪಂಡಿತನಾಗಿದ್ದುದರಿಂದ ಅಂದು ಆ ಮುಗ್ಧ, ಬಾಲೆಯರ ಕಣ್ಣಿಗೆ ಅವನು ಅತ್ಯಂತ ಸುಸಂಸ್ಕೃತ ವ್ಯಕ್ತಿಯಿಂದ ಕಂಡಿದ್ದನು.

ತಾನು ಕ್ರಾಂತಿಸೇನೆಯ ಜನರಲ್ ಶಂಕರನೆಂದು ತನ್ನ ಪರಿಚಯವನ್ನು ಹುಡುಗಿಯರಿಗೆ ಹೇಳಿ, ಹುಡುಗಿಯರ ಪರಿಚಯ ಮಾಡಿಕೊಳ್ಳುವ ಉದ್ದೇಶದಿಂದ ಅವರೊಡನೆ ಸಂಭಾಷಣೆಯಲ್ಲಿ ತೊಡಗಿದ್ದನು. ತಾನು ವಿದ್ಯಾವಂತನೆಂದೂ, ಸುಸಂಸ್ಕೃತನೆಂದೂ ತೋರಿಸಿಕೊಳ್ಳುವ ಸಲುವಾಗಿ, ತಾನು ಕಾಲೇಜಿನಲ್ಲಿದ್ದಾಗ ಸಂಭವಿಸಿದ್ದ ಹಲವು ಪ್ರಮುಖ ಘಟನೆಗಳನ್ನು ಸ್ವಾರಸ್ಯಕರವಾದ ರೀತಿಯಲ್ಲಿ ಹುಡುಗಿಯರಿಗೆ ವರ್ಣಿಸುತ್ತಿದ್ದನು. ಬಡ ಬಗ್ಗರ ಉದ್ಧಾರಕ್ಕಾಗಿ ತಾನು ಕ್ರಾಂತಿಸೇನೆಯನ್ನು ಕಟ್ಟಿರುವುದಾಗಿಯೂ ಯುವಕರೂ, ಯುವತಿಯರೂ, ಹೆಚ್ಚು ಸಂಖ್ಯೆಯಲ್ಲಿ ತನ್ನ

ಸೇನೆಗೆ ಸೇರಿದರೆ ದೇಶದ ಕಲ್ಯಾಣವಾಗುವುದೆಂದೂ ಹುಡುಗಿಯರ ಮನಸ್ಸಿಗೆ ಅಂಟುವಂತೆ ವಿವರಿಸುತ್ತಿದ್ದನು. ಅಲ್ಲಿದ್ದ ಹುಡುಗಿಯರಲ್ಲೆಲ್ಲಾ ಚಂಚಲೆಯೇ ಅತ್ಯಂತ ಸುಂದರಿಯಾಗಿದ್ದಳು. ಸ್ವಾಭಾವಿಕವಾಗಿ ಅವನ ದೃಷ್ಟಿ ಪದೇ ಪದೇ ಅವಳ ಕಡೆಗೆ ಹರಿಯುತ್ತಿತ್ತು. ಅವಳೂ ಸಹ ಸ್ವಲ್ಪ ಕುತೂಹಲತೆಯಿಂದ ಅವನನ್ನು ನೋಡುತ್ತಿದ್ದಳು. ತನ್ನ ತಂದೆ ತನಗಾಗಿ ವರಾನ್ವೇಷಣೆ ಮಾಡಿ ವಿಫಲನಾಗಿದ್ದುದರಿಂದ, ತನ್ನ ಭಾವಿಪತಿಯನ್ನು ತಾನೇ ಆರಿಸಿಕೊಳ್ಳಬೇಕೆಂದು ಹುಡುಕುತ್ತಿದ್ದ ಅವಳು ಶಂಕರನನ್ನು ನೋಡಿದ ಮೇಲೆ, ಅವನು ಅವಿವಾಹಿತನಾಗಿದ್ದಲ್ಲಿ ತನಗೆ ಅನುರೂಪನಾದ ಪತಿಯಾಗಬಹುದೆಂದು ಮನಸ್ಸಿನಲ್ಲೇ ಅಂದುಕೊಂಡಳು.

ಶಂಕರನು ಕ್ರಾಂತಿಸೇನೆಯ ಅಧಿಪತಿ ಎಂಬುದನ್ನು ಚಂಚಲೆ ಪತ್ರಿಕೆಗಳಿಂದ ತಿಳಿದುಕೊಂಡಿದ್ದಳು. ಅವಳು ಮೊದಲಿನಿಂದಲೂ ತಾನೊಬ್ಬ ಸಾಹಸ ಪ್ರವೃತ್ತಿಯ ಪುರುಷಸಿಂಹನನ್ನು ವರಿಸಬೇಕೆಂದು ಬಯಸಿದ್ದಳು. ಅಂದು ಅವಳ ಕಣ್ಣಿಗೆ ಶಂಕರನು ಸಾಹಸ ಪ್ರವೃತ್ತಿಯ ಪುರುಷಸಿಂಹನಂತೆ ಕಂಡಿದ್ದನು. ಅವಳು ಅದುವರೆಗೆ ನೋಡಿದ್ದ ಇತರ ಪುರುಷರಲ್ಲಿ ಕಾಣದಿದ್ದ ಅಪೂರ್ವ ವರ್ಚಸ್ಸು ಅವನಲ್ಲಿದ್ದಂತೆ ಅವಳಿಗೆ ಕಂಡಿತ್ತು. ಅವಳು ಸುಂದರ ಪುರುಷರನೇಕರನ್ನು ನೋಡಿದ್ದಳು. ಅವರಲ್ಲಿ ಸೌಂದರ್ಯವಿತ್ತೇ ಹೊರತು, ರಸಿಕತೆಯಾಗಲೀ, ಸಾಹಸ ಪ್ರವೃತ್ತಿಯಾಗಲೀ ಇದ್ದಂತೆ ಕಂಡುಬಂದಿರಲಿಲ್ಲ. ಸದ್ಗುಣವಂತರನೇಕರನ್ನು ಅವಳು ನೋಡಿದ್ದಳು. ಆದರೆ ಅವರಲ್ಲಿ ಸದ್ಗುಣಗಳಿದ್ದವೇ ಹೊರತು, ಪುರುಷರಲ್ಲಿರಬೇಕಾದ ಇತರ ಗುಣಗಳು ಕಂಡಿರಲಿಲ್ಲ. ಶಂಕರನಲ್ಲಿ ಅವಳನ್ನು ಆಕರ್ಷಿಸಿದ್ದ ವರ್ಚಸ್ಸಿನ ಜೊತೆಗೆ ಪೌರುಷವಿತ್ತು. ದಿಟ್ಟತನದ ಜೊತೆಗೆ ರಸಿಕತೆ ಉಕ್ಕಿ ಹರಿಯುತ್ತಿತ್ತು ಅಂದು ಅವನು ಅವಳ ಕಣ್ಣಿಗೆ ಪೌರುಷದ ನಿರ್ಭಯ ಮೂರ್ತಿಯಂತೆ ಕಂಡಿದ್ದನು "ನಾನು ಇದುವರೆಗೆ ಅರಸುತ್ತಿದ್ದ ಪುರುಷಸಿಂಹನ ಸಂದರ್ಶನ ಇಂದು ನನಗಾಯಿತು" ಎಂದು ಮನಸ್ಸಿನಲ್ಲಿಯೇ ಅಂದುಕೊಂಡಳು. ಶಂಕರನೂ ಕೂಡ ಅವಳನ್ನು ಮೆಚ್ಚಿರುವಂತೆ ಆಗಾಗ ಅವಳ ಕಡೆಗೆ ನೋಡುತ್ತಿದ್ದನು. ಇದು ಅವಳ ಅನುರಾಗಕ್ಕೆ ಮತ್ತಷ್ಟು ಪುಷ್ಟಿಯನ್ನು ನೀಡಿತ್ತು.

ಶಂಕರನ ಡ್ರೈವರ್ ದೂರದಲ್ಲಿ ಸ್ಕೂಟರ್ ಟ್ಯೂಬನ್ನು ರಿಪೇರಿ ಮಾಡುತ್ತಿದ್ದನು. ರಿಪೇರಿಯ ಕೆಲಸ ಎಲ್ಲಿಯವರೆಗೆ ಸಾಗಿದೆ ಎಂಬುದನ್ನು ನೋಡುವ ಸಲುವಾಗಿ ಚಂಚಲೆ ಸ್ಕೂಟರ್ ಇದ್ದಲ್ಲಿಗೆ ಹೋದಳು. ಇತರ ಹುಡುಗಿಯರೊಂದಿಗೆ ಚಕ್ಕಂದವಾಡುತ್ತಿದ್ದ ಶಂಕರನು ಸ್ವಲ್ಪ ಹೊತ್ತು ಬಿಟ್ಟು ಸ್ಕೂಟರ್ ರಿಪೇರಿ ಆಗುತ್ತಿದ್ದ ಸ್ಥಳಕ್ಕೆ ಹೋದನು. ತನ್ನ ಡ್ರೈವರಿಗೆ ಜಾಗ್ರತೆ ರಿಪೇರಿ ಮಾಡಬೇಕೆಂದು ಸೂಚನೆ ಕೊಟ್ಟು, ಚಂಚಲೆಗೆ ಕೋಟೆಯ ಸುತ್ತಮುತ್ತಲ ಪ್ರಕೃತಿ ಸೌಂದರ್ಯವನ್ನು ವರ್ಣಿಸುತ್ತಿದ್ದನು. ತಾನೊಬ್ಬ ಸುಸಂಸ್ಕೃತನೆಂಬುದನ್ನು ಅವಳಿಗೆ ತೋರಿಸುವ ಸಲುವಾಗಿ ಅವನು ಆ ರೀತಿಯ ವರ್ಣನೆಯಲ್ಲಿ ತೊಡಗಿದ್ದನು. ಅವನು ವಿವಾಹಿತನೋ ಅಥವಾ ಅವಿವಾಹಿತನೋ ಎಂಬುದನ್ನು ತಿಳಿದುಕೊಳ್ಳಲು ಚಂಚಲೆ ತುಂಬಾ ಕಾತುರಳಾಗಿದ್ದಳು.

ಸಮಯವನ್ನು ಸಾಧಿಸಿ "ನೀವು ಕೋಟೆಗೆ ಬರುವಾಗ ಒಬ್ಬರೇ ಬಂದೀರಲ್ಲ. ಮನೆಯವರನ್ನೇಕೆ ಕರೆದುಕೊಂಡು ಬರಲಿಲ್ಲ" ಎಂದು ಪ್ರಶ್ನಿಸಿದಳು. ಆಗ ಶಂಕರನು "ನಾನಿನ್ನೂ ಅವಿವಾಹಿತ" ಎಂದು ಹೇಳಿ ಅರ್ಥಗರ್ಭಿತವಾಗಿ ಕಣ್ಣು ಮಿಟುಕಿಸಿ ತುಂಟನಗೆ ಬೀರಿದನು.

ಅವನ ಈ ಉತ್ತರದಿಂದ ತನ್ನ ಆಸೆ ಈಡೇರತಕ್ಕ ಕಾಲ ಮತ್ತು ತನ್ನ ತಂದೆಯ ಕಷ್ಟ ಪರಿಹಾರವಾಗತಕ್ಕ ಕಾಲ ಸನ್ನಿಹಿತವಾಗಿದೆ ಎಂದು ಚಂಚಲೆ ಭಾವಿಸಿದಳು. ಆನಂತರ ಶಂಕರನು ಅದು ಇದು ಮಾತನಾಡಿ "ನಿಮ್ಮದು ಅಪೂರ್ವ ಸೌಂದರ್ಯ. ನಿಮಗಿನ್ನೂ ಮದುವೆಯಾಗಿಲ್ಲವೆ?" ಎಂದು ಹೇಳಿ, ಮತ್ತೊಮ್ಮೆ ತುಂಟನಗೆಯನ್ನು ಅವಳ ಕಡೆ ಬೀರಿದನು. ಅವನು ನಗುತ್ತಿರುವಾಗ ಅವನ ಹಾವಭಾವಗಳು ಶೃಂಗಾರರಸವನ್ನು ಉಕ್ಕಿ ಹರಿಸುತ್ತಿದ್ದವು. ಚಂಚಲೆ ತಾನು ಅವಿವಾಹಿತಳೆಂದು ಹೇಳಿ, ಮಂದಹಾಸವನ್ನು ಸೂಸಿದಳು. ಉಳಿದವರು ಅವರಿದ್ದಲ್ಲಿಗೆ ಬರುತ್ತಿದ್ದುದನ್ನು ಕಂಡ ಶಂಕರನು "ಇನ್ನೊಮ್ಮೆ ಎಲ್ಲಾದರೂ ಸೇರೋಣ" ಎಂದು ಪಿಸುಮಾತಿನಲ್ಲಿ ಹೇಳಿ ಹುಬ್ಬು ಹಾರಿಸಿದನು. ಚಂಚಲೆಗೂ ಅದೇ ಬೇಕಾಗಿತ್ತು. "ಯಾವಾಗ ನೀವೇ ಹೇಳಿ" ಎಂದು ಮೆತ್ತಗೆ ಕೇಳಿದಳು. "ಬರುವ ಭಾನುವಾರ ಇದೇ ಸಮಯಕ್ಕೆ ಇಲ್ಲಿಗೆ ಬನ್ನಿ ನಾನು ನಿಮಗೋಸ್ಕರ ಕಾದಿರುತ್ತೇನೆ" ಎಂದು ಶಂಕರ ಹೇಳಿದ. ಚಂಚಲೆ ಸಾಧಕ ಬಾಧಕಗಳನ್ನು ವಿವೇಚಿಸದೆ "ಆಗಲಿ ಬರುತ್ತೇನೆ" ಎಂದು ಹೇಳಿಬಿಟ್ಟಳು. ಅಷ್ಟರಲ್ಲಿ ಸ್ಕೂಟರ್ ರಿಪೇರಿಯ ಕಾರ್ಯವು ಮುಗಿದಿತ್ತು. ಉಳಿದ ಹುಡುಗಿಯರೂ ಅಲ್ಲಿಗೆ ಬಂದರು. ಚಂಚಲೆ ಮತ್ತು ಅವಳ ಸಂಗಾತಿಗಳು ಶಂಕರನಿಗೆ ವಂದನೆಯನ್ನರ್ಪಿಸಿ, ಸ್ಕೂಟರುಗಳನ್ನು ಹತ್ತುತ್ತಿರುವಾಗ ಶಂಕರನು ಚಂಚಲೆಯ ಕಡೆಗೆ ನೋಡುತ್ತಿದ್ದ ದೃಷ್ಟಿಯೂ, ಅವನು ಬೀರಿದ್ದ ಮಂದಹಾಸವೂ ಚಂಚಲೆಗೆ ಒಡ್ಡಿದ್ದ ಮೋಹಜಾಲದಂತಿದ್ದವು.

ಚಂಚಲೆ ಅಂದು ಮನೆಗೆ ಹೋದಾಗ ಅವಳ ವರ್ತನೆಯಲ್ಲಿ ಬಹಳ ಪರಿವರ್ತನೆಯಾಗಿತ್ತು. ಯಾವಾಗಲೂ ಮನೆಗೆ ಹೋದಾಗ ಮಲತಾಯಿಯನ್ನು ಕಂಡು ವಿಷಣ್ಣವದನೆಯಾಗಿರುತ್ತಿದ್ದವಳು, ಅಂದು ಹಸನ್ಮುಖಿಯಾಗಿದ್ದಳು. ಮಲತಾಯಿ ಕಮಲ ಈ ಪರಿವರ್ತನೆಯನ್ನು ಗಮನಿಸಿದಳು. ಆದರೆ ಪರಿವರ್ತನೆಯ ಕಾರಣ ಅವಳಿಗೆ ಗೊತ್ತಾಗಿರಲಿಲ್ಲ. ರಾತ್ರಿ ಊಟವಾದ ಬಳಿಕ ಚಂಚಲೆ ತನ್ನ ಕೊಠಡಿಯಲ್ಲಿ ಏಕಾಂಗಿಯಾಗಿ ಕುಳಿತು "ಶಂಕರನು ತನ್ನ ಪತಿಯಾಗುವಂತೆ ಕರುಣಿಸು" ಎಂದು ಅನನ್ಯ ಭಕ್ತಿಯಿಂದ ಭಗವಂತನನ್ನು ಪ್ರಾರ್ಥಿಸಿದಳು. ಕ್ರಾಂತಿಕಾರನ ಹೆಂಡತಿಯಾಗಿ ಸಾಹಸದ ಜೀವನವನ್ನು ನಡೆಸುವ ಅವಕಾಶ ತನಗೆ ಲಭಿಸುತ್ತದೆ ಎಂಬ ಆಸೆ ಅವಳಲ್ಲಿ ಅಂಕುರಿಸುತ್ತಿತ್ತು. ಮಲತಾಯಿಗೆ ಬೇಡದ ವಸ್ತುವಾಗಿ, ತನ್ನ ತಂದೆಗೆ ಹೊರೆಯಾಗಿ, ಆ ಮನೆಯಲ್ಲಿ ಬಾಳುವುದು ಅವಳಿಗೆ ಬಹಳ ಕಷ್ಟವಾಗಿತ್ತು. ಪದವೀಧರಳಾದ ಮೇಲೆ ಸ್ವತಂತ್ರವಾಗಿ ಸಂಪಾದನೆ ಮಾಡಬೇಕೆಂಬ ಉದ್ದೇಶದಿಂದ ಸರ್ಕಾರಿ ನೌಕರಿಗಾಗಿ ಬಹಳ ಕಡೆ ಅರ್ಜಿಗಳನ್ನು ಸಲ್ಲಿಸಿದ್ದಳು. ಅವಳ ತಂದೆ ಕೃಷ್ಣಕಾಂತನೂ ಸಹ ಇದ್ದಬದ್ದವರ ಕೈಕಾಲು

ಕಟ್ಟಿಕೊಂಡಿದ್ದನು. ಆದರೆ, ಅವಳು ಬಿ.ಎ. ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣಳಾಗಿದ್ದರೂ ಸಹ ಅವಳಿಗೆ ಒಂದು ಉಪಾಧ್ಯಾಯಿನಿಯ ಅಥವಾ ಗುಮಾಸ್ತೆಯ ಕೆಲಸವೂ ಕೂಡ ಲಭಿಸಿರಲಿಲ್ಲ. ಶಂಕರನನ್ನು ಮದುವೆಯಾದರೆ ತನ್ನ ಸಮಸ್ತ ಸಮಸ್ಯೆಗಳೂ ಬಗೆಹರಿಯುತ್ತವೆ ಎಂದು ಯೋಚಿಸುತ್ತಿದ್ದಳು.

ದಿನಗಳನ್ನು ಎಣಿಸುವಷ್ಟರಲ್ಲಿಯೇ ಭಾನುವಾರ ಬಂದೇಬಿಟ್ಟಿತು. ಪೂರ್ವಾಪರ ಯೋಚನೆ ಮಾಡದೆ, ಭಾನುವಾರ ಸಂಜೆ ಕೋಟೆಗೆ ಬರುವದಾಗಿ ಶಂಕರನಿಗೆ ಮಾತು ಕೊಟ್ಟಿದ್ದಳು. ಕೋಟೆ ಶ್ರೀಪುರ ನಗರದಿಂದ ಹದಿನೈದು ಮೈಲಿಗಳ ದೂರವಿತ್ತು. ಸಂಜೆಯ ಹೊತ್ತು ಏಕಾಂಗಿಯಾಗಿ ಕೋಟೆಗೆ ಹೋಗುವುದೆಂದರೆ ನಿಜವಾಗಿಯೂ ಭಯೋತ್ಪಾದಕ ಸಂಗತಿಯಾಗಿತ್ತು. ಅಲ್ಲದೆ ಅಪರಿಚಿತ ವ್ಯಕ್ತಿಯಾದ ಶಂಕರನನ್ನು ಒಬ್ಬಳೇ ಸಂಧಿಸುವುದು ಸರಿಯಲ್ಲವೆಂದು ಅವಳ ಭಾವನೆಯಾಗಿತ್ತು. ಶಂಕರನು ಎಲ್ಲಿಯಾದರೂ ಮಾತಿಗೆ ಸಿಕ್ಕುವ ಹಾಗಿದ್ದರೆ ತಾನು ಕೋಟೆಗೆ ಬರಲಾಗುವುದಿಲ್ಲವೆಂದು ಹೇಳಬಹುದಾಗಿತ್ತೆಂದು ಅವಳು ಒಮ್ಮೊಮ್ಮೆ ಯೋಚಿಸುತ್ತಿದ್ದಳು. ಬಹಳ ಹೊತ್ತು, ಸಾಧಕ ಬಾಧಕಗಳನ್ನು ವಿಮರ್ಶಿಸಿ ತನ್ನ ಹಿತದೃಷ್ಟಿಯಿಂದ ಕೋಟೆಗೆ ಹೋಗುವುದು ಅನಿವಾರ್ಯವೆಂದು ತೀರ್ಮಾನಿಸಿದಳು.

ಸಂಜೆ ಆರು ಘಂಟೆಯ ಹೊತ್ತಿಗೆ ಕೋಟೆಗೆ ಹೊರಡಬೇಕೆನ್ನುತ್ತಿರುವಾಗ ಹೆದರಿಕೆಯಿಂದ ಎದೆ ಡವಡವ ಎಂದು ಹೊಡೆಯಲಾರಂಭಿಸಿತ್ತು. ಧೈರ್ಯವನ್ನು ಕೊಡೆಂದು ಭಗವಂತನನ್ನು ಪ್ರಾರ್ಥಿಸಿದಳು. ಮಲತಾಯಿ ಕಮಲ ಮನೆಯಲ್ಲಿಲ್ಲದಿದ್ದುದು ಅವಳ ಪ್ರಯಾಣಕ್ಕೆ ಅನುಕೂಲವಾಗಿತ್ತು. ಅಡುಗೆಯ ನಾರಾಯಣನನ್ನು ಕರೆದು, ತಾನು ತನ್ನ ಸ್ನೇಹಿತಳ ಮನೆಗೆ ಹೋಗುವುದಾಗಿ ಹೇಳಿ, ಸ್ಕೂಟರನ್ನು ಹತ್ತಿ ಕೋಟೆಯ ಕಡೆ ಹೊರಟಳು. ಹೆದ್ದಾರಿಯಿಂದ ಕೋಟೆಗೆ ತಿರುಗುವ ಹಾದಿಯನ್ನು ಸೇರಿದ್ದಾಗ ಸಂಜೆ ಆರು ಘಂಟೆಯಾಗಿತ್ತು. ಕೋಟೆಯ ನೆತ್ತಿಯನ್ನು ಸೇರಬೇಕಾದರೆ ಇನ್ನೂ ಅರ್ಧಘಂಟೆ ಬೇಕಾಗಿತ್ತು. ಕೋಟೆಯ ಹಾದಿಯನ್ನು ಹಿಡಿದು ಮುಂದೆ ಸಾಗಿದಳು. ಅರ್ಧ ಹಾದಿಯಲ್ಲಿಯೇ ಶಂಕರನು ತನ್ನ ಕಾರನ್ನು ನಿಲ್ಲಿಸಿ ಅವಳಿಗಾಗಿ ಕಾಯುತ್ತಿದ್ದನು. ಅವಳ ಸ್ಕೂಟರಿನ ಶಬ್ದವನ್ನು ಕೇಳಿ ಕಾರಿನಿಂದ ಕೆಳಗಿಳಿದು ಅವಳನ್ನು ಸ್ವಾಗತಿಸಿದನು.

"ನೀವು ಬರುತ್ತೀರೋ ಇಲ್ಲವೋ ಎಂದು ಯೋಚಿಸುತ್ತಾ ಇದ್ದೆ. ಬಂದಿರಲ್ಲ, ತುಂಬಾ ಸಂತೋಷ" ಎಂದು ಶಂಕರನು ಅವಳನ್ನು ಸ್ವಾಗತಿಸಿದನು.

"ಮಾತುಕೊಟ್ಟ ಮೇಲೆ ಬರದೆ ಇರುವುದಕ್ಕೆ ಸಾಧ್ಯವೇ. ಒಬ್ಬಳೇ ಕೋಟೆಗೆ ಬರುವುದು ಹೆದರಿಕೆಯಾಗಿತ್ತು. ಆದರೂ ಧೈರ್ಯಮಾಡಿ ಬಂದೆ. ನಿಮ್ಮ ಕೆಲಸ ಕಾರ್ಯಗಳಲ್ಲಿ ನನ್ನನ್ನು ಎಲ್ಲಿ ಮರೆತು ಬಿಟ್ಟಿದ್ದೀರೋ ಎಂದು ಯೋಚನೆಯಾಗಿತ್ತು" ಎಂದು ಚಂಚಲೆ ನುಡಿದಳು.

"ಅಷ್ಟು ಸುಲಭವಾಗಿ ಮರೆಯುವವನು ನಾನಲ್ಲ. ಬನ್ನಿ ಹೋಗೋಣ" ಎಂದು ಶಂಕರನು ಸ್ಕೂಟರನ್ನು ರಸ್ತೆಯ ಪಕ್ಕ ಒಂದು ಪೊದೆಯ ಹಿಂದೆ ಅವಿತಿಟ್ಟು, ತನ್ನ

ಕಾರಿನಲ್ಲಿ ಚಂಚಲೆಯನ್ನು ಕುಳ್ಳಿರಿಸಿಕೊಂಡನು. ಶಂಕರನು ಕ್ರಾಂತಿಸೇನೆಯ ಸಮವಸ್ತ್ರವನ್ನು ತ್ಯಜಿಸಿ, ಅತ್ಯಾಧುನಿಕ ಅಮೆರಿಕನ್ ಮಾದರಿಯ ಪೋಷಾಕನ್ನು ಧರಿಸಿದ್ದನು. ಚಂಚಲೆಯನ್ನು ತನ್ನ ಪಕ್ಕದಲ್ಲೇ ಮುಂದಿನ ಸೀಟಿನಲ್ಲಿ ಕೂರಿಸಿದ್ದನು. ಸ್ಟಿಯರಿಂಗ್ ಹಿಡಿದು ಕಾರನ್ನು ನಡೆಸುತ್ತಾ, ಅವಳ ಕಡಗೆ ಮುಖವನ್ನು ತಿರುಗಿಸಿ ಸರಸ ಸಲ್ಲಾಪದ ಮಾತುಗಳನ್ನು ಆರಂಭಿಸಿದ್ದನು. ಕೋಟೆಯ ಹತ್ತಿರ ರಸ್ತೆಯು ಘಾಟಿಯ ರಸ್ತೆಯಂತೆ ತಿರುವು ಮುರುವುಗಳಿಂದ ಕೂಡಿತ್ತು. ಶಂಕರನ ದೃಷ್ಟಿ, ರಸ್ತೆಯ ಕಡೆ ಇರದೆ, ಚಂಚಲೆಯ ಮೇಲಿತ್ತು. ಇದನ್ನು ನೋಡಿದ ಚಂಚಲೆ "ಭದ್ರ, ಸ್ಟಿಯರಿಂಗ್ ಹತೋಟಿ ತಪ್ಪಿದರೆ ನಾವಿಬ್ಬರೂ ಕಾರು ಸಮೇತ ಕೆಳಗೆ ಕಮರಿಗೆ ಬಿದ್ದು ಪುಡಿ ಪುಡಿಯಾಗುತ್ತೇವೆ" ಎಂದಳು.

"ಆ ಬಗ್ಗೆ ನಿಮಗೆ ಗಾಬರಿಬೇಡ. ನಿಮ್ಮ ಜೀವದ ಮೇಲೆ ನಿಮಗೆಷ್ಟು ಆಸೆಯಿದೆಯೋ ನನಗೂ ಅಷ್ಟೇ ಆಸೆ ಇದೆ. ಇಂದಿನಿಂದ ನಮ್ಮಿಬ್ಬರ ದೇಹ ಎರಡಾದರೂ ಪ್ರಾಣ ಒಂದೇ ಎಂದು ತಿಳಿಯಿರಿ. ಈ ರಾಜ್ಯದಲ್ಲಿ ಡ್ರೈವಿಂಗ್, ಷೂಟಿಂಗ್ ಈ ಎರಡು ಬಾಬುಗಳಲ್ಲಿ ನನ್ನನ್ನು ಮೀರಿಸಿದವರು ಯಾರು ಇಲ್ಲ" ಎಂದು ಹೇಳುತ್ತಾ, ಶಂಕರನು ಬಲಗೈಯಲ್ಲಿ ಸ್ಟಿಯರಿಂಗ್ ಹಿಡಿದುಕೊಂಡು, ಎಡಗೈಯಲ್ಲಿ ಅವಳನ್ನು ತನ್ನ ಹತ್ತಿರಕ್ಕೆಳೆದುಕೊಂಡು ಅವಳ ಮುಖವನ್ನು ಚುಂಬಿಸಲು ಸನ್ನಾಹ ಮಾಡುತ್ತಿದ್ದಾಗ, ಅವಳು "ಸ್ವಲ್ಪ ತಾಳಿ ನನಗೂ ನಿಮಗೂ ಮೊದಲು ಮದುವೆಯ ಒಪ್ಪಂದವಾಗಬೇಕು. ಆಮೇಲೆ ಉಳಿದ ಕೆಲಸ. ನಾನು ಅಗ್ಗದ ಹೆಣ್ಣಲ್ಲ" ಎಂದು ಮುಖವನ್ನು ಆಕಡೆ ತಿರುಗಿಸಿಕೊಂಡಳು.

"ನಿಮ್ಮನ್ನು ವರಿಸುವುದಿಲ್ಲವೆಂದು ಹೇಳಿದವರಾರು? ನಾನು ಇದುವರೆಗೆ ನೋಡಿರುವ ಎಲ್ಲಾ ಹೆಣ್ಣುಗಳಿಗಿಂತಲೂ ನೀವು ಅತ್ಯಂತ ರೂಪವತಿ, ನಿಮ್ಮನ್ನು ಅತಿಶಯವಾಗಿ ಮೆಚ್ಚಿದ್ದೇನೆ."

"ನಾನೂ ನಿಮ್ಮನ್ನು ಅತಿಶಯವಾಗಿ ಮೆಚ್ಚಿದ್ದೇನೆ."

"ಹಾಗಾದರೆ ನಿಮ್ಮ ಸಮಸ್ಯೆಯೇನು."?

"ನನಗೂ ನಿಮಗೂ ಮೊದಲು ವಿವಾಹದ ಒಪ್ಪಂದವಾಗಬೇಕು."

"ಕಳೆದ ವಾರವೇ ಆ ಒಪ್ಪಂದ ಈ ಕೋಟೆ ಮೇಲೆ ಆದಂತೆ ಆಗಲಿಲ್ಲವೇ? ಇನ್ನಾವ ಒಪ್ಪಂದ?", ಎಂದು ಹೇಳಿ ತನ್ನ ಎಡಗೈಯಿಂದ ಅವಳನ್ನು ಬರಸೆಳೆದು ಅವಳ ತುಟಿಗೆ ಮುತ್ತಿಕ್ಕಿದನು. ಚಂಚಲೆಗೆ ಎಂದೂ ಅನುಭವಿಸದಿದ್ದ ಸ್ವರ್ಗಸುಖದ ಸ್ಪರ್ಶವಾದಂತಾಯಿತು. ಅಷ್ಟು ಹೊತ್ತಿಗೆ ಕಾರು ಗಿರಿಯ ತುದಿಯನ್ನು ತಲುಪಿತ್ತು. ಕಾರನ್ನು ನಿಲ್ಲಿಸಿ, ಇಬ್ಬರೂ ಕೋಟೆಯೊಳಗೆ ಕಾಲ್ನಡೆಯಲ್ಲಿ ಹೋದರು. ಪಾಳುದೇವಾಲಯದ ಹತ್ತಿ ಹೋದೊಡನೆ, ಚಂಚಲೆ ದೇವಾಲಯಕ್ಕೆ ಹೋಗಬೇಕೆಂದು ಆಸೆಪಟ್ಟಳು. ಶಂಕರನು "ನನಗೆ ದೇವರಲ್ಲಿ ನಂಬಿಕೆ ಇಲ್ಲ, ನೀವು ಬೇಕಾದರೆ ಹೋಗಿ" ಎಂದನು. ಚಂಚಲೆ ಮೂರ್ತಿ ಇಲ್ಲದ ಗರ್ಭಗುಡಿಯ ಮುಂದೆ ನಿಂತು, ಎರಡು

ಕೈಗಳನ್ನು ಜೋಡಿಸಿ, "ಪರಮಾತ್ಮಾ ಜಾಗ್ರತೆಯಾಗಿ ನಾವೀರ್ವರೂ ಸತಿಪತಿಗಳಾಗುವಂತೆ ಮಾಡು" ಎಂದು ದೇವರನ್ನು ಬೇಡಿಕೊಂಡಳು. ಅವಳು ಕೈಮುಗಿದು ನಿಂತಿರುವಾಗ, ಶಂಕರನು ಸ್ವಲ್ಪ ದೂರದಲ್ಲಿ ನಾಸ್ತಿಕ ಭಾವನೆಯಿಂದ ನಗುತ್ತಾ ನಿಂತಿದ್ದನು. ಅಷ್ಟರಲ್ಲಿ ಕತ್ತಲಾಗುತ್ತಾ ಬಂದಿತ್ತು. "ಬನ್ನಿ ಹೋಗೋಣ" ಎಂದು ಅವಳನ್ನು ಕರೆದನು. "ಎಲ್ಲಿಗೆ"? ಎಂದು ಅವಳು ಪ್ರಶ್ನಿಸಿದಳು. "ಬನ್ನಿ ಹೋಗೋಣ ಪ್ರೇಮದ ಗಿರಿಶಿಖರಕ್ಕೆ" ಎಂದು ಹೇಳುತ್ತಾ ಅವಳ ಕೈಯನ್ನು ತನ್ನ ಕೈಯಲ್ಲಿ ಹಿಡಿದುಕೊಂಡು ಸರೋವರದ ಕಡೆಗೆ ಹೋದನು.

ಆಗತಾನೆ ಚಂದ್ರನು ಉದಯವಾಗುತ್ತಿದ್ದನು. ಅವರಿಬ್ಬರ ಮದನ ಕೇಳಿಯ ಚೆಲ್ಲಾಟವನ್ನು ನೋಡಲು ತವಕಿಸುತ್ತಿರುವನೋ ಎಂಬಂತೆ ತನ್ನ ಬೆಳಕನ್ನು ಗಿರಿಯ ಮೇಲೆಲ್ಲಾ ಚೆಲ್ಲಿದ್ದನು. ಚಂದ್ರನ ಬೆಳಕಿನಲ್ಲಿ ಸರೋವರವು ನೀಲಾಂಬರದಂತೆ ಕಾಣುತ್ತಿತ್ತು. ಬಿರುಸಾಗಿ ಬೀಸುತ್ತಿದ್ದ ತಂಗಾಳಿ ಕಾಡುಪುಷ್ಪಗಳ ಸುಗಂಧವನ್ನು ಎಲ್ಲೆಲ್ಲೂ ಬೀರುತ್ತಿತ್ತು. ಬಗೆಬಗೆಯ ವೃಕ್ಷಲತೆಗಳಿಂದ ಆವರಿಸಲ್ಪಟ್ಟಿದ್ದ ಸರೋವರವು ರಮಣೀಯವಾಗಿತ್ತು. ಸರೋವರದ ಸೋಪಾನದ ಮೇಲೆ ಇಬ್ಬರೂ ಇದಿರುಬದಿರಾಗಿ ನಿಂತು, ಒಬ್ಬರನ್ನೊಬ್ಬರು ಮೌನವಾಗಿ ನೋಡುತ್ತಿದ್ದರು. ಮದನಕ್ರೀಡೆಯನ್ನು ಯಾರು ಮೊದಲು ಆರಂಭಿಸಬೇಕೆಂದು ಇಬ್ಬರೂ ಯೋಚಿಸುತ್ತಿರುವಂತೆ ತೋರುತ್ತಿದ್ದರು. ಚಂಚಲೆಗೆ ಮದನಕೇಳಿ ಹೊಸದು. ಶಂಕರನು ಮದನಕ್ರೀಡೆಯಲ್ಲಿ ಪಳಗಿದ್ದ ಕ್ರೀಡಾಪಟುವಾಗಿದ್ದನು. ಆ ಅನಿಶ್ಚಿತ ಮೌನ ಬಹಳ ಕಾಲ ಉಳಿಯಲಿಲ್ಲ. ಶಂಕರನೇ ಮೊದಲು ಕ್ರೀಡೆಯನ್ನು ಆರಂಭಿಸಿ, ಅವಳನ್ನು ಬರಸೆಳೆದು ಅವಳ ಮೈ ಹಣ್ಣಾಗುವಂತೆ ಆಲಂಗಿಸಿ, ಅವಳ ತುಟಿಗಳು ಹಣ್ಣಾಗುವಂತೆ ಚುಂಬಿಸಿದನು. ಎಷ್ಟೋ ವರ್ಷಗಳ ಕಾಲ ಕಾಮತೃಷೆಯಿಂದ ಬರಗೆಟ್ಟ ವ್ಯಕ್ತಿಗಳಂತೆ ಒಬ್ಬರನ್ನೊಬ್ಬರು ಪದೇ ಪದೇ ಆಲಂಗಿಸಿ ಚುಂಬಿಸುತ್ತಿದ್ದರು. ನಂತರ ನಿಜವಾದ ರತಿಕ್ರೀಡೆ ಆರಂಭವಾಯಿತು. ಕಾಮಕೇಳಿಯಲ್ಲಿ ಕೋವಿದನಾದ ಶಂಕರನು ಚಂಚಲೆಯನ್ನು ತನ್ನ ತೋಳ್ತೆಕ್ಕೆಯಲ್ಲಿ ಸಿಲುಕಿಸಿ, ಅವಳ ತುಟಿಗಳ ಮೇಲೆ ತನ್ನ ತುಟಿಗಳನ್ನೊತ್ತಿ, ಅವಳೆದೆಗೆ ತನ್ನದೆಯನ್ನೌಕಿ, ಅವಳ ನಡುವಿಗೆ ತನ್ನ ನಡುವನ್ನು ನೂಕಿ, ಅವಳ ತೊಡೆಗಳಿಗೆ ತನ್ನ ತೊಡೆಗಳನ್ನು ತೀಡಿ, ವಿವಿಧ ಭಂಗಿಗಳಿಂದ ಅವಳೊಡನೆ ರಮಿಸಿದನು. ಅಂದು ಪ್ರಪ್ರಥಮವಾಗಿ ಲಭಿಸಿದ್ದ ರತಿಸುಖ ಚಂಚಲೆಗೆ ಆನಂದದಾಯಕವಾಗಿತ್ತು. ಅವಳ ಮನಸ್ಸು ಹೃದಯಗಳಿಗೆ ಮಾತ್ರವಲ್ಲದೆ ಸಮಸ್ತ ಅಂಗಾಂಗಗಳಿಗೂ ಸಂತೃಪ್ತಿ ದೊರಕಿತ್ತು. ಅಂದು ಶಂಕರನಿಂದ ತನಗೆ ಪ್ರಾಪ್ತಿಯಾಗಿದ್ದ ಸುಖ ಇನ್ನಾವ ಪುರುಷನಿಂದಲೂ ಲಭಿಸಲಾರದೆಂದು ಅವಳ ಭಾವನೆಯಾಗಿತ್ತು.

ಸರೋವರದಿಂದ ಹಿಂದಿರುಗಿ ಬರುತ್ತಿದ್ದಾಗ, ತಾರುಣ್ಯದ ಭರದಲ್ಲಿ ಕಾಮ ಪರವಶಳಾಗಿ ವಿವಾಹಕ್ಕೆ ಮುಂಚೆ ರತಿಸುಖಕ್ಕೆ ಮನಸ್ಸು ಮಾಡಿದ್ದು ಅಕ್ಷಮ್ಯ ಅಪರಾಧವೆಂದು ಅವಳಿಗೆ ಅನ್ನಿಸಿತು. ಅಕಸ್ಮಾತ್ ಯಾರಿಗಾದರೂ ಗೊತ್ತಾದರೆ ಅಥವಾ ಗರ್ಭವತಿಯಾದರೆ ತನ್ನ ಗತಿಯೇನೆಂದು ತನ್ನನ್ನು ತಾನೇ ಶಪಿಸಿಕೊಂಡಳು. ಶಂಕರನು ಎಷ್ಟಾದರೂ

ಅಪರಿಚಿತ ವ್ಯಕ್ತಿ ಅವನನ್ನು ನಂಬಿ ಮದುವೆಯಾಗುವುದಕ್ಕೆ ಮುಂಚೆ ಸಂಭೋಗಕ್ಕೆ ಮನಸ್ಸು ಮಾಡಿದ್ದು ತಪ್ಪೆಂದು ಪರಿತಪಿಸುತ್ತಿದ್ದಳು. ಆದರೆ ಕಾರ್ಯ ಮಿಂಚಿಹೋಗಿತ್ತು. ಮುಂದೇನು ಮಾಡಬೇಕೆಂದು ಯೋಚಿಸುತ್ತಾ, ಚಿಂತಾಕ್ರಾಂತಳಾಗಿ ಶಂಕರನ ಮುಂದೆ ಯಾವ ಮಾತನ್ನೂ ಆಡದೆ, ಮೌನವಾಗಿ ಹೋಗುತ್ತಿದ್ದಳು. ಶಂಕರನು ಹಾಸ್ಯದ ಚಟಾಕಿಗಳನ್ನು ಹಾರಿಸುತ್ತಾ ಮುಂದೆ ಸಾಗುತ್ತಿದ್ದನು. ಆದರೆ ಚಂಚಲೆ ಅವನ ಮಾತಿಗೆ ಪ್ರತ್ಯುತ್ತರ ನೀಡದೆ ಯಾವುದೋ ವಿಪತ್ತಿಗೊಳಗಾದವಳಂತೆ ತಲೆಯನ್ನು ತಗ್ಗಿಸಿಕೊಂಡು ಹಿಂಬಾಲಿಸುತ್ತಿದ್ದಳು.

ಶಂಕರನು ತಿರುಗಿ ನಿಂತು "ಏನಾಗಿದೆ ನಿಮಗೆ? ಯಾಕೆ ಸುಮ್ಮನಿದ್ದೀರಿ? ಕಾಲಿಗೇನಾದರೂ ಮುಳ್ಳು ಹೊಕ್ಕಿದೆಯೇನು?" ಎಂದು ಪ್ರಶ್ನಿಸಿದನು.

"ಆಗಬಾರದ್ದು ಆಗಿಹೋಗಿದೆ. ಕಾಲಿಗೆ ಮುಳ್ಳು ಹೊಕ್ಕಿಲ್ಲ, ಮನಸ್ಸಿಗೆ ಮುಳ್ಳು ಹೊಕ್ಕಿದೆ. ನಾನಿಲ್ಲಿಗೆ ಇಂದು ಬರಬಾರದಾಗಿತ್ತು. ಬಂದರೂ ನಿಮ್ಮೊಡನೆ ಕೂಡಬಾರದಾಗಿತ್ತು. ನಿಮ್ಮೊಡನೆ ಕೂಡಿದ್ದು ಯಾರಿಗಾದರೂ ಗೊತ್ತಾದರೆ ನಾನು ಸಮಾಜದಲ್ಲಿ ತಲೆ ಎತ್ತಿ ತಿರುಗುವುದು ಹೇಗೆ? ಅಕಸ್ಮಾತ್ ಗರ್ಭಿಣಿಯಾದರೆ ಯಾವ ಬಾವಿಯನ್ನು ಹಾರಲಿ"? ಎಂದಳು.

ಶಂಕರನು ಗಹಗಹಿಸಿ ನಗುತ್ತಾ, "ನೀವು ಗ್ರಾಜುಯೇಟಾಗಿ, ಓಬಿರಾಯನ ಕಾಲದವರ ಹಾಗೆ ಮಾತಾಡುತ್ತಿರುವುದು ಹಾಸ್ಯಾಸ್ಪದ. ಈಗಿನ ಕಾಲದ ಕೆಲವರಿಗೆ ಇದು ನಿತ್ಯ ಕಸಬು. ಅದನ್ನು ತಪ್ಪೆಂದು ಎಂದೂ ಅವರು ಭಾವಿಸುವುದಿಲ್ಲ. ಗರ್ಭನಿರೋಧಕ್ಕೆ ಮುನ್ನೆಚ್ಚರಿಕೆಯ ಕ್ರಮ ಕೈಗೊಳ್ಳಲಾಗಿದೆ. ಆ ಬಗ್ಗೆ ನಿಮಗೆ ಚಿಂತೆಬೇಡ" ಎಂದನು.

"ನೀವು ಏನೇ ಹೇಳಿದರೂ ನಾನು ಈ ದಿನ ಮಾಡಿದ್ದು ತಪ್ಪು. ಈ ತಪ್ಪಿಗೆ ಪ್ರಾಯಶ್ಚಿತ್ತ ನಾವಿಬ್ಬರೂ ಮದುವೆ ಆಗುವುದು."

"ನಮಗಿಬ್ಬರಿಗೆ ಗಾಂಧರ್ವ ರೀತಿಯಲ್ಲಿ ಇಂದೇ ವಿವಾಹವಾಗಿದೆಯಲ್ಲವೇನು?"

"ನಿಮ್ಮ ಮಾತನ್ನು ಕೇಳಿದರೆ ನನಗ್ಯಾಕೋ ಭಯವಾಗುತ್ತದೆ. ನನ್ನ ಚಿಂತೆ ಸಕಾರಣವಾಗಿದೆಯೆಂದು ನಿಮ್ಮ ಮಾತುಗಳಿಂದಲೇ ವ್ಯಕ್ತವಾಗಿದೆ."

"ರಾಣೀ ಸಾಹೇಬರಿಗೆ ನನ್ನ ಮೇಲೆ ಅದೇಕೆ ಇಷ್ಟೊಂದು ಅನುಮಾನ? ನಾನು ತಮ್ಮ ಆಜ್ಞಾರಾಧಕ. ಏನಾಗಬೇಕೆಂದು ಸ್ಪಷ್ಟವಾಗಿ ಹೇಳಿ" ಎಂದು ಅವಳ ಮುಂಗುರುಳನ್ನು ನೇವರಿಸಿದನು.

ನನಗೆ ಬೇಕಾದ್ದು ವಿವಾಹ. ಅದೂ ಜನರೊಪ್ಪುವ ರೀತಿಯಲ್ಲಿ ಶಾಸ್ತ್ರೋಕ್ತವಾಗಿ ಆಗಬೇಕು. ನಾನು ಗಾಂಧರ್ವ ವಿವಾಹದ ಅಗ್ಗದ ಗಿರಾಕಿಯಲ್ಲ".

"ಅದ್ಯಾಕೆ ಇಷ್ಟೊಂದು ಚಿಂತೆ? ನಾನು ಕ್ರಾಂತಿಕಾರ; ಗೊಡ್ಡು ಶಾಸ್ತ್ರಗಳನ್ನು ಒಪ್ಪುವವನಲ್ಲ. ಆದರೂ ನಿಮಗೋಸ್ಕರ ಶಾಸ್ತ್ರೋಕ್ತವಾಗಿ ಮದುವೆಯಾಗಲು ಸಿದ್ಧ. ಆದರೆ ಮದುವೆಗೆ ಇಷ್ಟೇಕೆ ಆತುರ? ದಾಂಪತ್ಯ ಬಂಧನದ ನಿರ್ಬಂಧ ಪ್ರೇಮಕ್ಕಿಂತ

ಬಂಧನವಿಲ್ಲದ ಸ್ವೇಚ್ಛಾಪ್ರೇಮವೇ ಸುಖಕರ ಮತ್ತು ಸ್ವಾರಸ್ಯಕರ. ಇನ್ನು ಐದಾರು ತಿಂಗಳು ಹೋಗಲಿ, ಆಮೇಲೆ ಇಬ್ಬರೂ ಕುಳಿತು ನಿರ್ಧರಿಸೋಣ" ಎಂದು ಹೇಳಿ ಅವಳನ್ನು ಚುಂಬಿಸಿ, ಅನಂತರ ಶ್ರೀಪುರದ ಹೆದ್ದಾರಿಯವರೆಗೆ ಅವಳ ಜೊತೆಯಲ್ಲಿ ಹೋಗಿ ಅವಳನ್ನು ಕಳುಹಿಸಿಕೊಟ್ಟನು.

ಇದು ಆರು ತಿಂಗಳ ಹಿಂದೆ ನಡೆದಿದ್ದ ಘಟನೆ. ಅಲ್ಲಿಂದೀಚೆಗೆ ವಾರಕ್ಕೊಮ್ಮೆ ಅಥವಾ ಹದಿನೈದು ದಿನಗಳಿಗೊಮ್ಮೆ ಇಬ್ಬರೂ ಕೋಟೆಯಲ್ಲಿ ಕದ್ದು ಸಂಧಿಸಿ ಅಕ್ರಮ ಸಂಭೋಗ ನಡೆಸುತ್ತಿದ್ದರು. ಚಂಚಲೆಗೆ ಕ್ರಮೇಣ ಮೊದಲ ದಿನದ ಕಳವಳ ಮಾಯವಾಗಿ ಹೋಗಿತ್ತು. ಕೋಟೆಯಲ್ಲಿ ತನ್ನ ಪ್ರಿಯತಮನನ್ನು ಕೂಡುವುದು ಅವಳಿಗೊಂದು ಸಂತಸದ ಸುಗ್ಗಿಯಾಗಿತ್ತು. ಅವನು ಅವಳಿಗೆ 'ವಿಮಲ' ಎಂಬ ಕೃತಕನಾಮದಲ್ಲಿ ಪ್ರಣಯ ಪತ್ರಗಳನ್ನು ಬರೆಯುತ್ತಿದ್ದರೆ, ಅವಳು 'ಚಂದ್ರ' ಎಂಬ ಹೆಸರಿನಲ್ಲಿ ಅವನಿಗೆ ಬರೆಯುತ್ತಿದ್ದಳು. ಹಿಂದಿನವಾರ ಅವರಿಬ್ಬರೂ ಸೇರಿ ನಿರ್ಧರಿಸಿದ್ದ ಪ್ರಕಾರ ಚಂಚಲೆ ಆ ದಿನ ಅವನನ್ನು ಕೂಡುವ ಸಲುವಾಗಿ ಕೋಟೆಗೆ ಬಂದಿದ್ದಳು. ಹಿಂದೆ ಯಾವಾಗಲೂ ನಿಯಮಿತ ಕಾಲಕ್ಕೆ ಸರಿಯಾಗಿ ಅವನು ಕೋಟೆಯಲ್ಲಿ ಅವಳಿಗಾಗಿ ಕಾದಿರುತ್ತಿದ್ದನು. ಅಂದು ಅವನು ಬಾರದಿದ್ದುದು ಅವಳಿಗೆ ಬಹಳ ನಿರಾಶೆಯನ್ನುಂಟು ಮಾಡಿತ್ತು.

ಈ ರೀತಿ ಅವಳು ಶಂಕರನಿಂದ ಪಡೆದ ರತಿಸುಖದ ಆನಂದವನ್ನು ಸ್ಮರಿಸಿಕೊಳ್ಳುತ್ತಾ ಕುಳಿತಿರುವಾಗ, ಅವಳ ಕಿವಿಗೆ ಎಲ್ಲಿಂದಲ್ಲೋ ರೋದನ ಕೇಳಿಸಿದಂತಾಯಿತು. ಕೈಗಡಿಯಾರವನ್ನು ನೋಡಿದಳು. ಆಗಲೇ ರಾತ್ರಿ ಏಳುವರೆ ಘಂಟೆಯಾಗಿತ್ತು. ಸುತ್ತಲೂ ನೋಡಿದಳು. ಅಮವಾಸ್ಯೆಯ ಕತ್ತಲು ಎಲ್ಲೆಲ್ಲೂ ಕವಿದಿತ್ತು. ಕೋಟೆಯ ಸುತ್ತಮುತ್ತಲ ಪ್ರದೇಶವೆಲ್ಲವೂ ಗಾಢಾಂಧಕಾರದಲ್ಲಿ ಮುಳುಗಿದಂತಿತ್ತು. ಸಮಸ್ತ ಚರಾಚರ ಜೀವಿಗಳು ಗಾಢ ನಿದ್ರೆಯಲ್ಲಿ ಪವಡಿಸಿರುವಂತಿತ್ತು. ಭೀಕರತೆ ನೀರವತೆಯನ್ನು ಆಲಿಂಗಿಸಿದಂತಿತ್ತು. ಪಕ್ಕದಲ್ಲಿ ಸಿರಿಮಾವತಿ ನದಿಯ ಕತ್ತಲಿಗೆ ಹೆದರಿ, ಚಳಿಗೆ ಮುದುರಿ, ಸದ್ದಿಲ್ಲದೆ ಕದ್ದು ಹೋಗುತ್ತಿರುವಂತೆ ಪ್ರವಹಿಸುತ್ತಿತ್ತು. ಬಹುದೂರದಲ್ಲಿ ಶ್ರೀಪುರ ನಗರದಲ್ಲಿ ಮಿಂಚು ಹುಳುಗಳ ಗೊಂಚಲುಗಳಂತೆ ನೂರಾರು ವಿದ್ಯುತ್ ದೀಪಗಳು ಮಿನುಗುತ್ತಿದ್ದವು. ಯುವತಿಗೆ ಒಂದು ಕಡೆ ಭಯ; ಇನ್ನೊಂದು ಕಡೆ ನಿರಾಸೆ; ಮತ್ತೊಂದು ಕಡೆ ತಂದೆ ಕೃಷ್ಣಕಾಂತ್ ಆಫೀಸಿನಿಂದ ಮನೆಗೆ ಬರುವುದರೊಳಗಾಗಿ ಮನೆಯನ್ನು ಸೇರಬೇಕೆಂಬ ತವಕ.

ಈ ಉದ್ವಿಗ್ನ ಪರಿಸ್ಥಿತಿಯಲ್ಲಿದ್ದಾಗ, ಮತ್ತೊಮ್ಮೆ ನಿಶ್ಯಬ್ದವನ್ನು ಭೇದಿಸಿ ನದಿಯ ಕಡೆಯಿಂದ ರೋದನ ಶಬ್ದ ಕೇಳಿಸಿತು. ಮರುಕ್ಷಣದಲ್ಲಿಯೇ ಆಕಡೆಯಿಂದ ಬೆಳಕು ಕಾಣಿಸಿದಂತಾಯಿತು. ಶಂಕರನ ಕಾರಿನ ಬೆಳಕಿರಬೇಕೆಂದು ಭ್ರಮಿಸಿ, ಚಂಚಲೆ ಆತುರದಿಂದ ಮೇಲಕ್ಕೆದ್ದು, ಕೋಟೆಯ ಅಂಚಿನವರೆಗೆ ಹೋಗಿ, ಬೆಳಕು ಬರುತ್ತಿದ್ದ ಕಡೆಗೆ ದೃಷ್ಟಿಯನ್ನು ಹೊರಳಿಸಿದಳು. ಸಿರಿಮಾವತಿ ನದಿಯ ಮಳಲ ದಿಬ್ಬದ ಮೇಲೆ ನೂರಾರು ಜನರಿಂದ ಕೂಡಿದ್ದ ಗುಂಪೊಂದು ಕಾಣಿಸಿತು. ಗುಂಪಿನ ಮಧ್ಯೆ, ಯಾರೋ ಕೆಲವರು ಗಟ್ಟಿಯಾಗಿ

ರೋದಿಸುತ್ತಿದ್ದರು. ಕೆಲವರು ಲಾಂದ್ರಗಳ ಬೆಳಕಿನಲ್ಲಿ ಆಕಡೆ ಈಕಡೆ ಓಡಾಡುತ್ತಿದ್ದರು. ಕೆಲವರು ಕಟ್ಟಿಗೆಗಳನ್ನು ಒಂದು ಕಡೆ ಒಟ್ಟುತ್ತಿದ್ದರು. ಅದು ಶವಸಂಸ್ಕಾರಕ್ಕೆ ಸೇರಿದ್ದ ಜನಸಮೂಹವೆಂದು ಅವಳಿಗೆ ತಕ್ಷಣ ಹೊಳೆಯಿತು. ಮೊದಲೇ ಭಯಗ್ರಸ್ತಳಾಗಿದ್ದ ಅವಳಿಗೆ ಭಯದಿಂದ ನಡುಗುವಂತಾಯಿತು. ಕೂಡಲೇ ಸ್ಥಳವನ್ನು ಬಿಟ್ಟು ಓಡಬೇಕೆನ್ನಿಸಿತು. ಆದರೂ ಶಂಕರನು ಬಂದೇ ಬರುತ್ತಾನೆಂಬ ಭರವಸೆಯಿಂದ ಇನ್ನೂ ಅರ್ಧ ಘಂಟೆಯ ಕಾಲ ಕಾಯಬೇಕೆಂದು ನಿರ್ಧರಿಸಿ, ಸ್ಕೂಟರನು ರಸ್ತೆಯ ಮಧ್ಯೆ ನಿಲ್ಲಿಸಿ, ಅದನ್ನು ಚಲಿಸಿನೋಡಿ ಸರಿಯಾಗಿದೆ ಎಂದು ದೃಢಪಡಿಸಿಕೊಂಡು, ಯಾವಾಗಬೇಕಾದರೂ ಹೊರಡಲು ಸಿದ್ಧಳಾಗಿ, ಅದರ ಪಕ್ಕದಲ್ಲೇ ನಿಂತಿದ್ದಳು. ಅವಳು ನಿಂತಿದ್ದ ಸ್ಥಳದಿಂದ ಶವಸಂಸ್ಕಾರದ ದೃಶ್ಯ ಸ್ಪಷ್ಟವಾಗಿ ಕಾಣಿಸುತ್ತಿದ್ದರೂ ಗಾಳಿಯ ರಭಸದಿಂದ ಅಲ್ಲಿ ನಡೆಯುತ್ತಿದ್ದ ಮಾತುಕತೆಗಳೊಂದೂ ಕೇಳಿಸುತ್ತಿರಲಿಲ್ಲ.

ಇತ್ತ ಸಿರಿಮಾವತಿ ನದಿಯ ಮಳಲ ದಿಬ್ಬದ ಮೇಲೆ ಶವಸಂಸ್ಕಾರಕ್ಕೆ ಸಿದ್ದತೆ ಭರದಿಂದ ನಡೆದಿತ್ತು. ಕೆಲವರು ಮೌನವಾಗಿ ಶೋಕಿಸುತ್ತಿದ್ದರು. ಕೆಲವರು ಗಟ್ಟಿಯಾಗಿ ಅಳುತ್ತಿದ್ದರು. ಕೆಲವರು ಚಿತೆಯನ್ನು ಸಿದ್ಧಗೊಳಿಸುತ್ತಿದ್ದರು. ಐದಾರು ವರ್ಷದ ಹೆಣ್ಣು ಮಗುವೊಂದು "ನನ್ನ ಅಜ್ಜೀನಾ ಸುಡಬೇಡಿ" ಎಂದು ಅಂಗಲಾಚಿ ಹೃದಯ ಕರಗುವಂತೆ ಬೇಡಿಕೊಳ್ಳುತ್ತಾ ಅಳುತ್ತಿತ್ತು. ಆ ಮಗುವಿನ ಅಜ್ಜ ಸುಮಾರು ಎಪ್ಪತ್ತು ವರ್ಷದ ವೃದ್ಧನೊಬ್ಬನು ಗದ್ಗದ ಧ್ವನಿಯಲ್ಲಿ ಆ ಮಗುವನ್ನು ಸಂತೈಸುತ್ತಿದ್ದನು. ಚಿತೆಯನ್ನು ಸಿದ್ಧಗೊಳಿಸುತ್ತಿದ್ದ ಸ್ಥಳದ ಸಮೀಪದಲ್ಲೇ ಇಳಿವಯಸ್ಸಿನ ಮಹಿಳೆಯೊಬ್ಬಳ ಶವ ಚಟ್ಟದ ಮೇಲಿತ್ತು. ಹೆಣದ ಮುಖವೆಲ್ಲಾ ಸುಟ್ಟುಹೋಗಿ ವಿಕಾರ ರೂಪವನ್ನು ತಾಳಿತ್ತು. ಹೆಣದ ಪಕ್ಕದಲ್ಲೇ ಸುಮಾರು ಇಪ್ಪತ್ತೆಂಟು ವರ್ಷದ ಯುವಕನೊಬ್ಬನು ಕುಳಿತುಕೊಂಡಿದ್ದನು. ಅವನು ಒಮ್ಮೊಮ್ಮೆ ಹೆಣದಕಡೆ ನೋಡುತ್ತಾ, ನಿಟ್ಟುಸಿರು ಬಿಡುತ್ತಿದ್ದನು. ಒಮ್ಮೊಮ್ಮೆ ಅನ್ಯಮನಸ್ಕನಾಗಿ ಏನನ್ನೋ ಚಿಂತಿಸುತ್ತಿದ್ದನು. ಅವನು ದೃಢಕಾಯನಾಗಿದ್ದ, ಆರು ಅಡಿ ಎತ್ತರದ ಸುಂದರ ಪುರುಷನಂತೆ ಕಾಣುತ್ತಿದ್ದನು. ಶೋಕತಪ್ತನಾಗಿದ್ದರೂ ಮುಖದಲ್ಲಿ ಏನೋ ಒಂದು ವಿಧವಾದ ತೇಜಸ್ಸು ಕಾಣಿಸುತ್ತಿತ್ತು. ಮುಂದಲೆಯ ಮುಂಗುರುಳು ವಿಶಾಲವಾದ ಹಣೆಯಮೇಲೆ ಕವಿದುಕೊಂಡಿತ್ತು. ಯಾವುದಕ್ಕೂ ಹೆದರದ ಕೆಚ್ಚದೆಯ ಕಲಿಪುರುಷನಂತೆ ಕಾಣಿಸುತ್ತಿದ್ದನು. ಅಂತೆಯೇ ಅತ್ಯಂತ ಸುಸಂಸ್ಕೃತನೆಂಬುದನ್ನು ಅವನ ಮುಖಮುದ್ರೆ ಸಾರುತ್ತಿತ್ತು. ಆತನು ಒಂದು ಧೋತ್ರವನ್ನುಟ್ಟು, ಮೇಲೊಂದು ಜುಬ್ಬವನ್ನು ತೊಟ್ಟಿದ್ದನು.

ಸ್ವಲ್ಪ ಹೊತ್ತಿನಲ್ಲಿಯೇ ಮತ್ತೊಬ್ಬ ಯುವಕನು ಅವನ ಬಳಿಗೆ ಬಂದು "ಚಂದ್ರಹಾಸ ಚಿತೆ ಸಿದ್ಧವಾಗಿದೆ. ಏಳು ದುಃಖಪಡಬೇಡ. ನಿಮ್ಮ ತಾಯಿ ರುಮಾದೇವಿಯವರಿಗೆ ಈ ದುರ್ಮರಣ ಪ್ರಾಪ್ತಿಯಾಗಬಾರದಾಗಿತ್ತು. ಧೂರ್ತರು ನಿನ್ನನ್ನು ಕೊಲ್ಲಲು ಹಾಕಿದ ಬಾಂಬಿಗೆ ಅವರು ಆಹುತಿಯಾದರು. ಸಧ್ಯ ನೀನು ಬದುಕಿದ್ದುದು ನಮ್ಮೆಲ್ಲರ ಪುಣ್ಯ. ಎದ್ದೇಳು" ಎಂದು ಹೇಳುತ್ತಾ ಅವನ ಕೈಗಳನ್ನು ಹಿಡಿದು ಮೇಲಕ್ಕೇಳಿಸಿದನು.

ಆಗ ಚಂದ್ರಹಾಸನು ತನ್ನನ್ನು ಕುರಿತು ಮಾತನಾಡಿದ ಯುವಕನನ್ನು ತಬ್ಬಿ ಹಾಕಿಕೊಂಡು, "ಕಿಶೋರ್, ಇನ್ನು ಯಾರನ್ನು ನಾನು ಅಮ್ಮಾ ಎಂದು ಕರೆಯಲಿ? ನನ್ನಮ್ಮನಿಗೆ ನಾನೆ ಸರ್ವಸ್ವನಾಗಿದ್ದೆ. ಅವರಿಗೆ ಕನಸಿನಲ್ಲಿಯೂ ನನ್ನ ಯೋಚನೆಯೇ? ಆಗಿತ್ತು. ನಾನು ಸತ್ತಿದ್ದರೂ ಚಿಂತೆ ಇರಲಿಲ್ಲ. ಬದುಕಿ ಮಾತೃವಿಯೋಗವನ್ನು ಸಹಿಸುವುದು ಕಷ್ಟವಾಗಿದೆ. ಪಾಪಿ ಶಂಕರನು ನಮ್ಮ ಮನೆಗೆ ಬಾಂಬ್ ಹಾಕಿಸುವ ನೀಚಕೃತ್ಯಕ್ಕೆ ಕೈಹಾಕುತ್ತಾನೆಂದು ಗೊತ್ತಾಗಿದ್ದರೆ ಅವನಿಗೆ ಮಣ್ಣು ಮುಕ್ಕಿಸುತ್ತಿದ್ದೆ. ಅಯ್ಯೋ ಪಾಪಿ, ನಮ್ಮಮ್ಮನನ್ನು ಕೊಂದೆಯಾ?" ಎಂದು ಬಿಕ್ಕಿ ಬಿಕ್ಕಿ ಅಳತೊಡಗಿದನು.

"ಚಂದ್ರಹಾಸಾ, ನೀನು ಧೈರ್ಯಶಾಲಿ. ಧೀರನಾದ ನಿನಗೆ ಈ ರೀತಿಯ ಅಳು ಸಲ್ಲದು. ನೀನು ಹೇಳುತ್ತಿರುವುದೇನು? ನೀನು ಸತ್ತಿದ್ದರೆ ನಿನ್ನನ್ನು ನಂಬಿದ್ದ ಅಸಂಖ್ಯಾತ ಜನರ ಗತಿಯೇನಾಗುತ್ತಿತ್ತು? ಅದನ್ನು ಯೋಚಿಸಿದ್ದೀಯಾ? ಅಳುವನ್ನು ನಿಲ್ಲಿಸು. ಬಾಬು ಅವರು ಈ ಕಡೆ ಬರುತ್ತಿದ್ದಾರೆ."

ಅಷ್ಟು ಹೊತ್ತಿಗೆ ಹೆಣ್ಣು ಮಗುವನ್ನು ಸಂತೈಸುತ್ತಿದ್ದ ಆ ವೃದ್ಧರು ಅವರಿಬ್ಬರಿದ್ದಲ್ಲಿಗೆ ಬಂದರು. ಅವರನ್ನು ನೋಡಿದೊಡನೆ, ಚಂದ್ರಹಾಸನು ಅವರನ್ನು ತಬ್ಬಿಕೊಂಡು ಅಪ್ಪ, "ಅಮ್ಮ ನಮ್ಮಿಬ್ಬರನ್ನೂ ಕೈ ಬಿಟ್ಟು ಹೋದರು" ಎಂದು ಅಳಲಾರಂಭಿಸಿದನು. ಆ ವೃದ್ಧರು ಅವನನ್ನು ಸಮಾಧಾನಪಡಿಸಿದರು. ಆ ನಂತರ ಎಲ್ಲರೂ ಸೇರಿ ಚಟ್ಟದ ಮೇಲಿದ್ದ ಶವವನ್ನು ಚಿತೆಯ ಸಮೀಪ ಕೊಂಡೊಯ್ದು ಶವಕ್ಕೆ ಅಂತ್ಯಪೂಜೆ ಮಾಡಿದರು. ಆನಂತರ ಶವವನ್ನು ಚಿತೆಯ ಮೇಲಿಟ್ಟರು. ಹಿರಿಯರ ಆದೇಶದಂತೆ ಚಂದ್ರಹಾಸನು ಚಿತೆಗೆ ಬೆಂಕಿಯನ್ನಿಟ್ಟು, "ಅಮ್ಮಾ ನನ್ನನ್ನು ಅನಾಥನನ್ನಾಗಿ ಮಾಡಿ ಹೋದೆಯಾ? ಎಷ್ಟು ಪ್ರೇಮದಿಂದ "ಚಂದ್ರಾ" ಎಂದು ಬಾಯ್ತುಂಬಾ ಕರೆಯುತ್ತಿದ್ದೆ. ಇನ್ನಾರು ನನ್ನನ್ನು ಹಾಗೆ ಕರೆಯುತ್ತಾರೆ? ಹೇಡಿ ಶಂಕರಾ, ನಮ್ಮಮ್ಮನನ್ನು ಕೊಂದ ನಿನ್ನನ್ನು ಯಮಸದನಕ್ಕೆ ಕಳುಹಿಸದಿದ್ದರೆ ನಾನು ಚಂದ್ರಹಾಸನಲ್ಲ' ಎಂದು ಹೇಳುತ್ತಾ ಆಯಾಸ ಮತ್ತು ಶೋಕದಿಂದ ಚಿತೆಯ ಪಕ್ಕದಲ್ಲಿ ಬಿದ್ದುಬಿಟ್ಟನು. ಅಲ್ಲಿದ್ದವರು ಗಾಬರಿಗೊಂಡು, ಅವನಿಗೆ ಶೈತ್ಯೋಪಚಾರವನ್ನು ಮಾಡಿ, ಅವನನ್ನೆತ್ತಿಕೊಂಡು ಹೋಗಿ, ದೂರದಲ್ಲಿ ಒಂದು ಕಂಬಳಿಯ ಮೇಲೆ ಮಲಗಿಸಿದರು. ಸ್ವಲ್ಪ ಹೊತ್ತಿನ ನಂತರ ಅವನು ಎದ್ದು ಮಂಕು ಹಿಡಿದವನಂತೆ ಅಲ್ಲೇ ಕುಳಿತಿದ್ದನು. ಚಿತೆಗಿಟ್ಟ ಬೆಂಕಿ ಪ್ರಜ್ವಲಿಸಿ ತನ್ನ ನಾಲಗೆಯನ್ನು ಚಾಚಿ, ಹೆಣವನ್ನು ಕಬಳಿಸುತ್ತಿರುವುದೋ ಎಂಬಂತೆ ಧಗಧಗನೆ ಉರಿಯುತ್ತಿತ್ತು. ಪುನಃ ಹೆಣ್ಣುಮಗು "ಅಜ್ಜೀ ಅಜ್ಜೀ" ಎಂದು ಪದೇ ಪದೇ ಕೂಗುತ್ತಿತ್ತು. ಮಗುವಿನ ಅಜ್ಜ ಪುರುಷೋತ್ತಮಬಾಬು ಆ ಮಗುವನ್ನು ಸಂತೈಸುತ್ತಿದ್ದರು. ನೆರೆದಿದ್ದ ಮಹಿಳೆಯರು ನಿಶ್ಶಬ್ದವಾಗಿ ಕಣ್ಣೀರಿಡುತ್ತಿದ್ದರು. ಗಂಡಸರಲ್ಲಿ ಕೆಲವರು ಶೋಕತಪ್ತರಾಗಿ ಮೌನವಾಗಿ ಕುಳಿತಿದ್ದರೆ, ಕೆಲವರು ಅಳುತ್ತಿದ್ದ ಹೆಂಗಸರನ್ನು ಸಂತೈಸುತ್ತಿದ್ದರು. ಕೆಲವರು ಗುಂಪು ಗುಂಪಾಗಿ ಮಳಲ ದಿಬ್ಬದ ಮೇಲೆ ಮೃದು ಸಂಭಾಷಣೆಯಲ್ಲಿ ತೊಡಗಿದ್ದರು. ಶೋಕಿಸುತ್ತಿದ್ದವರ ಶೋಕಾಗ್ನಿಯನ್ನು ತಣಿಸುವ ಸಲುವಾಗಿಯೋ ಎಂಬಂತೆ ನದಿಯ

ಕಡೆಯಿಂದ ತಂಗಾಳಿ ಮಂದವಾಗಿ ಬೀಸುತ್ತಿತ್ತು. ಅನಾದಿಯಿಂದಲೂ, ತನ್ನ ಪಾತ್ರದಲ್ಲಿಯೇ ನಡೆದಿದ್ದ ಅಸಂಖ್ಯಾತ ಶವಸಂಸ್ಕಾರಗಳನ್ನು ನೋಡಿದ್ದ ಸಿರಿಮಾವತಿ ನದಿ, ಸ್ವಾಭಾವಿಕವಾದ ದಿನಚರಿಯ ಘಟನೆ ಎಂಬುದನ್ನು ಮನಗಂಡಿತ್ತೋ ಎನ್ನುವ ರೀತಿಯಲ್ಲಿ ನಿರ್ಲಿಪ್ತತೆಯಿಂದ ನಿಧಾನವಾಗಿ ಪ್ರವಹಿಸುತ್ತಿತ್ತು. ರುದ್ರಭೂಮಿಯ ಆ ರಾತ್ರಿಯ ದೃಶ್ಯಭೀಕರ ಸನ್ನಿವೇಶಕ್ಕೆ ಶೋಕದ ಪೋಷಾಕನ್ನು ಹಾಕಿದಂತಾಗಿತ್ತು. ಚಿತೆ ಉರಿಯುತ್ತಿದ್ದಾಗ, ಕೆಲವರು ಅನಿಲಪುರದ ರೈತರು ದೂರದಲ್ಲಿ ಮರುಳುರಾಶಿಯ ಮೇಲೆ ಒಂದು ಕಡೆ ಗುಂಪಾಗಿ ಕುಳಿತು ಮೆತ್ತಗೆ ಮಾತುಕತೆಗಳನ್ನಾಡುತ್ತಿದ್ದರು. ಅವರ ಮಾತುಕತೆಗಳಿಂದ ಹಿಂದಿನ ರಾತ್ರಿ ಅನಿಲಪುರದ ಮಾಜಿ ಲೋಕಸಭಾ ಸದಸ್ಯ ಪುರುಷೋತ್ತಮಬಾಬು ಅವರ ಮನೆಗೆ ಕ್ರಾಂತಿ ಸೇನೆಯ ಉಗ್ರಗಾಮಿಗಳು ಬಾಂಬ್ ಹಾಕಿದ್ದರ ಪರಿಣಾಮವಾಗಿ ಅವರ ಪತ್ನಿ ರುಮಾದೇವಿಯವರು ಮೃತಪಟ್ಟರೆಂದು ವ್ಯಕ್ತವಾಗುತ್ತಿತ್ತು. ಬಾಂಬ್ ಪ್ರಕರಣ ಸಂಬಂಧ ಆ ರೈತರು ತಮ ತಮಗೆ ತಿಳಿದಂತೆ ಮಾತನಾಡುತ್ತಿದ್ದರು. ಈ ರೀತಿ ಮಾಡನಾಡುತ್ತಿದ್ದಾಗ ಅವರ ಪೈಕಿ ಇಳಿವಯಸ್ಸಿನ ರೈತನೊಬ್ಬನು ಪುರುಷೋತ್ತಮಬಾಬು ಅವರ ಆಳು ತಾಂಡವ ಎನ್ನುವನನ್ನು ಕುರಿತು "ಏ ತಾಂಡ್ವಾ, ವೊಂದು ಬೀಡಿಕೊಡೊ, ಬ್ವಾಳ ಛಳಿ ಎಷ್ಟು ಹೊತ್ತಾಗೋ ಬಾಂಬ್ ಬಿದ್ದದ್ದು"? ಎಂದು ಪ್ರಶ್ನಿಸಿದನು.

"ರಾತ್ರಿ ಸುಮಾರು ಒಂದು ಘಂಟೆ ಆಗಿರ್ಬೋದು" ಎಂದು ತಾಂಡವ ಒಂದು ಬೀಡಿಯನ್ನು ಕೊಟ್ಟನು.

"ನೀ ಎಲ್ಲಿ ಮನಿಗಿದ್ದಿ ಆಗಾವ?" "ನಾ ಪಣ್ತದಕೊಟ್ಗೆಲಿ ಮನಿಗಿದ್ದೆ. ನಿದ್ರೆ ಜೋರಾಗಿ ಹತ್ತಿತ್ತು ಸಿಡ್ಲು ಬಡದಾಗೆ ಸಬ್ದಾತು, ಕೊಟ್ಗೆಮುರ್ದುಬಿತ್ತು ಅಂತ ಮಾಡಿದ್ದೆ. ಸಬ್ದ ಆದ ಕೂಡ್ಲೆ ಎದ್ದು ಹೊರಗೋಡ್ದೆ."

"ನೀ ಬಾಂಬ್ ಹಾಕ್ದೋರ್ರ ನೋಡ್ದೇನು?"

"ನಾ ಹ್ವರ್ಗೆ ಓಡ್ಬಂದಾಗ ಮಕಕ್ಕೆ ಕರೀ ಮುಖವಾಡ ಹಾಕ್ದೋರು ಏಳೆಂದು ಜನ ರಸ್ತೀ ಕಡೀಗೆ ಓಡ್ತಾ ಇದ್ರು. ನಾ "ಕಳ್ರೂ ಕಳ್ರೂ" ಅಂತಾ ಕೂಗ್ದೆ. ಅವರು ಜೀಪ್ ಹತ್ಗುಂಡು ಓಡೇ ಬಿಟ್ರು."

"ಹ್ಯಾಂಗ್ ಬಾಂಬ್ ಹಾಕುದ್ರೋ?"

'ಬೆಳಕಂಡೀಲಿ ಹಾಕ್ದ್ರು, ಮತ್ತೆಲ್ಲಿ ಹಾಕಾಕೆ ಆಗ್ತದೆ? ದೇವರ ಮಾಯ ಹ್ಯಾಂಗಿದೇ ನೋಡಿ. ಅವ್ವೋರ ಜತೀಗೇ ಮನಿಗಿದ್ದ ಅವರ ಮಮ್ಮಗಳೀಗೆ ವೊಂದು ರೋಮಕ್ಕೂ ಪೆಟ್ಟಾಗಿರಲ್ಲ, ಪಾಪ! ಆ ಹುಡ್ಗಿ ತಾಯಿ ಕಳ್ಕುಂಡು ಪರ್ದೇಸಿ ಅಗಿ, ಅಜ್ಜೀ ಮನೆ ಸೇರಿತ್ತು. ಈಗ ಅಜ್ಜೀನೂ ಹೋತು. ಆದ್ರ ಗೋಳು ಕಣ್ಣಾಗೆ ನೋಡೋಕೆ ಆಗೂದಿಲ್ಲ. ನೋಡಿ ಅಲ್ಲಿ 'ಅಜ್ಜೀ, ಅಜ್ಜೀ' ಅಂತ ಒರಲ್ತದೆ.

"ರುಮಾದೇವಿ ನಮ್ಮೂರಿಗ್ಯಲ್ಲಾ ಮಾತಾಯಿ ಹಾಂಗೆ ಇದ್ರು, ಬಡ ಬಗ್ಗರು ಅಂತ ಅಂದ್ರೆ ಆ ತಾಯಿಗೆ ಏನ್ ಅಕ್ಕರೆ. ಬಾಬೂ ಅವರೂ ದೇವರಂತ ಮನುಸ್ಯ.

ಇಂತೋರ ಮನೀಗೇ ಬಾಂಬ್ ಹಾಕೋದು ಅಂದ್ರೆ ಏನ್ ಕೇಡ್ಗಾಲ! ಯಾ ಸೂಳೇಮಕ್ಕಳು ಈ ಕೆಲಸ ಮಾಡಿರ್ಬೋದು ಹೇಳು."

"ಸಂಕ್ರಾ ಅಂತ ಗುಮಾನಿ ಹೇಳ್ತಾರೆ" "ಯಾವ ಸಂಕರನೋ?" "ಮಾವನ ಸೈನ್ಯದ ಸಂಕ್ರಾ ಅಂತಾರಪ್ಪ, ನಂಗೇನ್ ಗೊತ್ತಪ್ಪಾ."

ಇನ್ನೊಬ್ಬ ರೈತ ಮಧ್ಯೆ ಬಾಯಿ ಹಾಕಿ, "ಏ ಬೆಪ್ಪತಕ್ಕಡಿ, ಮಾವನ ಸೈನ್ಯ ಅಲ್ಲೋ ಮಾವೋ ಸೈನ್ಯ ಅಂತ ಹೇಳು" ಎಂದು ತಾಂಡವನ ತಪ್ಪನ್ನು ತಿದ್ದಿದನು.

"ನಾ ಯೇನ್ ನಿನ್ನಾಗೆ ಬರಾಗಿರಾ ಕಲ್ತವ್ನೇನೋ. ಯಲ್ಲಾರೂ "ಮಾವನ ಸೈನ್ಯ" "ಮಾವನ ಸೈನ್ಯ" ಅಂತಾರೆ ನಾನೂ ಹಾಗೆ ಹೇಳ್ದೆ"

ಆಗ ಮತ್ತೊಬ್ಬ ರೈತ ಮಧ್ಯೆ ಬಾಯಿ ಹಾಕಿ "ಸುಳ್ಳು ಸುಳ್ಳು ಸಂಕ್ರ ಅಂತವ್ನಲ್ಲ, ಅವ ಬಡಬಗ್ಗರ ದೇವರು ಇದ್ದಾಗೆ. ಅವ್ನಮ್ಯಾಲೆ ಯಾರೋ ಹುಟಾರು ಹುಟ್ಸ್ಯರೆ" ಎಂದನು.

"ನಂಗೇನ್ ಗೊತ್ತಪ್ಪಾ, ಪಿಸು ಪಿಸು ಗುಸು ಗುಸು ಅಂತಾ ಜನ ಮಾತಾಡಿದ್ದು ನಾ ಕೇಳಿದ್ದು. ಉಂದು ಹುಡುಗೀ ನೆವ್ದಾಗೆ ಸಣ್ಣ ದಣೇರೀಗೂ ಸಂಕ್ರಗೂ ವೈಮನಸ್ಸು ಅಂತ ಹೇಳ್ತಾರೆ. ಸಣ್ ದಣೇರನ್ನೇ ಕೊಲ್ಲೂಕೆ ಅಂತ ಬಾಂಬ್ ಹಾಕದ್ರೂ ಅಂತ ಹೇಳ್ತಾರೆ. ಯಾರಿಗೆ ಗೊತ್ತಪ್ಪಾ."

ಈ ರೀತಿ ಮಾತುಕತೆ ನಡೆಯುತ್ತಿರುವಾಗ ಗುಂಪಿನಲ್ಲಿದ್ದ ಒಬ್ಬ ರೈತನು ಕೋಟೆಯ ಕಡೆ ಕೈತೋರಿಸಿ, "ಅಲ್ನೋಡಿ, ಅಲ್ನೋಡಿ ಕ್ವಾಟೆಮ್ಯಾಲೆ ಕೊಳ್ಳಿದೆಯ್ಯ" ಎಂದನು. ಎಲ್ಲರ ದೃಷ್ಟಿಯೂ ಕೋಟೆಯ ಕಡೆಗೆ ಹರಿದಿತ್ತು. ಕೋಟೆಯ ಕಡೆಯಿಂದ ಒಂದು ಬೆಳಕು ಕೆಳಗಿಳಿದು ಬರುತ್ತಿರುವಂತೆ ಕಾಣಿಸುತ್ತಿತ್ತು. ಚಂಚಲೆ ಶಂಕರನಿಗಾಗಿ ಕಾದು ಕಾದು ನಿರಾಶಳಾಗಿ ಸ್ಕೂಟರ್ ಮೇಲೆ ಕೆಳಗಿಳಿಯುತ್ತಿದ್ದಳು. ಆ ಬೆಳಕೇ ಕೊಳ್ಳೀದೆವ್ವದ ಬೆಳಕೆಂದು ಆ ರೈತನು ಭ್ರಮಿಸಿದ್ದನು.

"ತಳಪುರಾಣ ಗೊತ್ತಿಲ್ದೆ ಸುಮ್ಕೆ ಮಾತಾಡ್ತಿಯಪ್ಪಾ, ಇಂದು ಅಮಾಸೆ, ಪಾಪ! ರಾಜಕುಮಾರಿ ದೀಪ ಹಚ್ಚಿಗೊಂಡು, ಅಪ್ಪನ್ನ ಅವ್ವನ್ನ ಹುಡ್ಕಾಡ್ತಾ ಅದ್ಯಾಳೆ. ಆಸೆ ತೀರದೆ ಸತ್ತರೆ ಹೀಗೇ ಪಿಸಾಚಿ ಆಗೋದು" ಎಂದು ಇನ್ನೊಬ್ಬ ರೈತ ಹೇಳಿದ.

"ತಗೀರೋ ತಗೀರೋ ಸಾಕು. ಕಲ್ಬುಪುರಾಣ ಹೇಳ್ತೀರಿ. ಕೊಳ್ಳಿದೆಯ್ಯಾನೂ ಅಲ್ಲಾ ರಾಜಕುಮಾರೀನೂ ಅಲ್ಲ. ಸಂಕ್ರ ಅವನ ಮಿಂಡ್ಗಾತಿ, ಹಡ್ಬೆ ಕೆಲ್ಸಕ್ಕೆ ಕ್ವಾಟೀಗೆ ಹೋಗಿ, ವಾಪಾಸು ಬತ್ತಾ ಅದ್ಯಾರೆ" ಎಂದು ಮತ್ತೊಬ್ಬ ರೈತ ಹೇಳಿದ.

"ಯಾವ ಸಂಕ್ರನೋ?" ಎಂದು ಶಂಕರನ ಹಿತೈಷಿ ಮಧ್ಯೆ ಬಾಯಿಹಾಕಿ ಕೇಳಿದನು.

"ಇನ್ಯಾವ ಸಂಕ್ರ? ಮಾವನ ಸೈನ್ಯದ ಸಂಕ್ರ"

"ನಿಂಗೆ ಕಳ್ಬಟ್ಟಿ ನೆತ್ತೀಗೆ ಹತ್ಯದೆ ಅಂತ ಕಾಣ್ತದೆ. ಸುಕಾ ಸುಮ್ನೆ ಸಂಕ್ರನ ಮ್ಯಾಲೆ ಅಪದ್ದ ನುಡದ್ರೆ ನಿನ್ನ ಬಾಯಾಗೆ ಹುಳಬಿದ್ದಾವು."

"ತೈಪ್ಪಗಿರೋ ಸಾಕು. ಸಂಕ್ರನ ಸಾಕ್ಮಗ ನೀನು. ನೀನೂ ಸಂಪನ್ನ! ನಿನ್ನ ಸಂಕ್ರನೂ ಸಂಪನ್ನ! ನಾ ಕುಡುಕ"

"ನೀ ಇಲ್ಲಿ ಕೂತ್ಗೊಂಡಾವ್ಗೆ, ನಮ್ಮ ಕಣ್ಣೀಗೆ ಕಾಣ್ದೆ ಇದ್ದ ಸಂಕ್ರ ನಿನ್ನ ಕಣ್ಣೀಗೆ ಹ್ಯಾಂಗೆ ಕಂಡಾ? ಸುಳ್ಳು ಸುಳ್ಳು ಯಾಕೆ ಬೊಗಳ್ತಿಯಾ?"

"ಬೊಗಳೋಕೆ ನಾ ನಾಯಲ್ಲ. ನಿನ್ನ ಸಂಕ್ರನೇ ಕ್ವಾಟೇಲಿ ನಾಯಿ ಕೆಲಸ ಮಾಡಿದ್ದು ನಾ ಕಣ್ಣಾರ ನೋಡಿದ್ದು. ನಾ ಹೇಳ್ತೀನಿ."

"ಏನ್ ನೋಡ್ದೆ? ಎಂದ್ ನೋಡಿದ್ದೆ? ಅದನ್ನಾರೂ ಬೊಗಳು."

"ಹಲ್ಲು ಹಿಡ್ದು ಮಾತಾಡು. ಬೊಗ್ಳುಗಿಗ್ಳು ಅಂದ್ರೇ ಹಲ್ಲೆಲ್ಲಾ ಉದ್ರಸೇನು".

ಅವರಿಬ್ಬರಿಗೂ ಈ ರೀತಿ ಜಟಾಪಟಿ ಷುರುವಾದುದನ್ನು ನೋಡಿ ಉಳಿದ ರೈತರು ಮಧ್ಯೆ ಪ್ರವೇಶಿಸಿ ಅವರಿಬ್ಬರನ್ನೂ ಸಮಾಧಾನಪಡಿಸಿ ಕುಳ್ಳಿರಿಸಿದರು. ಅನಂತರ ಕೆಲವರು ರೈತರು ಕುತೂಹಲ ಪೀಡಿತರಾಗಿ, ಕೋಟೆಯಮೇಲೆ ಶಂಕರನು ಏನು ಮಾಡಿದ ಎಂಬುದನ್ನು ಹೇಳಬೇಕೆಂದು ಆ ರೈತನನ್ನು ಒತ್ತಾಯಪಡಿಸಿದರು. ಆ ರೈತನು ನಾಲ್ಕು ಜನ ಇರುವ ಸ್ಥಳದಲ್ಲಿ ಆ ವಿಚಾರವನ್ನು ಹೇಳುವುದು ಅಶ್ಲೀಲವಾಗುತ್ತದೆಂದು ವಾದಿಸತೊಡಗಿದನು. ಆದರೆ ಉಳಿದವರು ಹೇಳಲೇಬೇಕೆಂದು ಒತ್ತಾಯಪಡಿಸಿದ್ದರಿಂದ ಅವನು ಈ ರೀತಿ ಹೇಳಿದನು.

"ಈಗ ಸುಮಾರು ನಾಲ್ಕು ತಿಂಗಳು ಆಗಿರ್ಬೋದು. ಹಿಂದಿನ ರಾತ್ರಿ, ಕೋವಿತಗುಂಡು, ಮೊಲ ಹಿಡಿಯೋಕೆ ಅಂತ, ಕ್ವಾಟೀಗೆ ಹೋಗಿದ್ದೆ. ಅಲ್ಲಿ ಕೊಳ ಅದಿಯಲ್ಲಾ, ಅದ್ರ ದಂಡೆಮ್ಯಾಲೆ ಉಂದು ಮರ್ದ ಬುಡ್ದಾಗ ಕೂತಿದ್ದೆ. ತಿಂಗಳ್ಬೆಳಕು ಹಾಲ್ ಚೆಲ್ದಾಂಗಿತ್ತು. ಮೊಲ ನೀರ್ಕುಡಿಯಾಕೆ ಬತ್ತಾವೆ ಅಂತ ನೋಡ್ತಾ ಇದ್ದೆ. ಯೇನೋ ಸಬ್ದ ಆದಂಗಾತು, ಮಿಗಾನ್ನೋ, ಹಂದೀನ್ನೋ ಬಂತು ಅಂತ ಕೋವಿ ಸರಿಮಾಡ್ತಾ ಇದ್ದೆ. ಯೇನ್ ನೋಡ್ತೀರಿ! ಒಬ್ಬ ಗಂಡ್ಸು, ಒಬ್ಬಳು ಹುಡುಗಿ ದೇವಲೋಕ್ದಾಗಿಂದ ಬಂದ ಹಾಂಗೆ ಬಂದಿಳಿದ್ರು. ನೋಡ್ತೀನಿ! ಮಾವನ ಸೈನ್ಯದ ಸಂಕ್ರ ! ಜತಿ ವುಂದು ಹುಡುಗಿ! ಬಂದ್ ಬಂದೋರೆ ಬಟ್ಟೆ ಬಿಚ್ಚಿ ಇಬ್ಬರೂ ಬಿಸಾಕದ್ರು. ಒಬ್ಬರ ಮೈಮ್ಯಾಲೂ ಉಂದು ನೂಲೆಳೇನೂ ಇರಲಿಲ್ಲ."

"ನೀ ಹೇಳೋದು ವಳ್ಳೆ ಮಜಾ ಅದೆ, ಆಮ್ಯಾಲೆ ಯೇನಾತು?" ಎಂದು ಒಬ್ಬನು ಪ್ರಶ್ನಿಸಿದನು.

"ನಂಗೆ ಹೇಳೋಕೇ ನಾಚಿಗೆ ಆತದೋ ಮಾರಾಯ"

"ನಾಚ್ಗೆ ಆಗೋಕೆ ಇಲ್ಲಿ ಯಾರೂ ಹೆಂಗಸ್ರಿಲ್ಲ. ಹೇಳೋ ಸಾಕು"

"ಆಮ್ಯಾಲೆ ಇಬ್ರೂ ತಬ್ಕೊಂಡು ಹಾವು ಯಣೆ ಆಡೂ ಹಾಗೆ ಮಾಡ್ತಾ ಇದ್ರು, ಕಂಣಾಗೆ ನೋಡೂಕೇ ಆಗ್ತ ಇರಲ್ಲ."

"ಆಮ್ಯಾಲೆ ಯೇನಾತೋ?" ಎಂದು ಮತ್ತೊಬ್ಬ ಪ್ರಶ್ನಿಸಿದನು.

"ಆಮ್ಯಾಲೆ ಇಬ್ರೂ ಕೈ ಕೈ ಹಿಡುಕುಂಡು ಕುಣಿದರು. ಆಮ್ಯಾಲೆ ಯಮ್ಮೆ ಬಿದ್ದ ಹಾಗೆ ಕೊಳ್ದಾಗೆ ಬಿದ್ರು. ನಾ ಮೃತ್ತಗೆ ಕಾಲೀಗೆ ಬುದ್ದಿ ಹೇಳ್ದೆ. ಮುಂಡೆಮಕ್ಳ ದೆಸೇಲಿ ನನ್ನ ಸಿಕಾರೀಗೂ ಕಲ್ಬಿತ್ತು. ನಂಮ್ಮನೇಲಿ ಅವಳು ಮೊಲ ಹೊಡ್ಕುಂಡು ಬತ್ತೀನಿ ಅಂತ ಕಾರ ಸರಿಮಾಡ್ಕುಂಡು ಕೂತಿದ್ಲು. ನಾ ಜೋಬದ್ರ ಮಕ ಮಾಡ್ಕುಂಡು ಬರೀ ಕೈಯ್ಯಾಗೆ ಮನೀಗೋದೆ."

"ನೀನೂ ನಿಮ್ಮವಳೂ ಕ್ವಾಟೇಲಿ ಅವರಿಬ್ರೂ ಮಾಡ್ದಾಂಗೆ ಬಟ್ಟೆ ಬಿಚ್ಚಾಕಿ ಯಣೆ ಆಡ್ಬೇಕಾಗಿತ್ತು. ಯಾರ್ಬೇಡ ಅಂತ ಹೇಳಿದ್ರು" ಎಂದು ತುಂಟ ರೈತನೊಬ್ಬನು ಗೇಲಿ ಮಾಡಿದನು.

"ತೂ, ಥೂ, ನಿನ್ನ ಬಾಯಾಕೆ ಮಣ್ಣು ಹಾಕ. ನೀ ಯಾರೋ ನನ್ನ ಹೆಂಡ್ತಿಯಿಚಾರ ಮಾತಾಡೋಕೆ? ಸುಡ್ಗಾಡಾಗೆ ಹೆಣ ಬೇಯ್ತಾ ಅದೆ, ಇವ ಭಂಡ್ ಭಂಡ್ ಮಾತಾಡ್ತಾನೆ."

"ನೀನೇ ಭಂಡ ಮಾತು ಸುರು ಮಾಡಿದ್ದು ನೀ ಹೇಳಿದ್ದೇ ನಾ ಹೇಳ್ದೆ."

ಈ ಮಾತುಗಳನ್ನು ಸುಮ್ಮನೆ ಕೇಳುತ್ತಿದ್ದ ಶಂಕರನ ಹಿತೈಷಿಯು ಎದ್ದು ನಿಂತು, "ಏಯ್, ನೀ ಸಂಕ್ರನ್ನಯೆಂದಾರೂ ನೋಡಿದ್ದೇನೊ? ಬಾಯಿಗೆ ಬಂದಾಗ ಮಾತಾಡ್ತೀಯಲ್ಲಾ?" ಎಂದು ಸವಾಲು ಹಾಕಿದನು.

"ಹ್ವಾದಕಾಲ ಸಿರಿಪುರ್ದಾಗೆ ಸಂಕ್ರ ಮೀಟಿಂಗ್ ಮಾಡ್ದಾಗ ನಾ ಅವನ್ನ ನೋಡಿಲ್ಲೇನೋ? ಸುಳ್ಳು ನನ್ನ ಬಾಯಾಗೆಯೆಂದೂ ಬರೂದಿಲ್ಲ" ಎಂದು ಹೇಳುತ್ತಿರುವಾಗ, ಹೆಣವೆಲ್ಲಾ ಭಸ್ಮವಾಗಿದೆಯೆಂದೂ, ಎಲ್ಲರೂ ಅವರವರ ಮನೆಗೆ ಹೋಗಬಹುದೆಂದೂ, ಯಾರೋ ಕೂಗಿ ಹೇಳಿದರು. ಅಲ್ಲಿಗೆ ಮಾತು ಮುಕ್ತಾಯವಾಯಿತು. ಎಲ್ಲರೂ ಅವರವರ ಮನೆಗಳಿಗೆ ಹೊರಟರು.

೨

ಶ್ರೀಪುರದ ವಕೀಲ್ ಕೃಷ್ಣಕಾಂತನು, ಯಾವಾಗಲೂ ತನ್ನ ಆಫೀಸಿನಿಂದ ರಾತ್ರಿ ಒಂಭತ್ತು ಗಂಟೆಗೆ ಮನೆಗೆ ಬರುತ್ತಿದ್ದವನು, ಅಂದು ಜ್ವರದ ಪ್ರಯುಕ್ತ ಸಾಯಂಕಾಲ ಎಂಟು ಘಂಟೆಗೇ ಮನೆಗೆ ಬಂದಿದ್ದನು. ಕೃಷ್ಣಕಾಂತನ ಮನೆಯು ಶ್ರೀಪುರ ನಗರದ ರಾಜೇಂದ್ರಪ್ರಸಾದ್ ಬಡಾವಣೆಯಲ್ಲಿತ್ತು. ಮನೆ ಅತಿ ದೊಡ್ಡದಾಗಿಲ್ಲದಿದ್ದರೂ, ವಾಸಕ್ಕೆ ಅನುಕೂಲವಾಗಿತ್ತು. ಮನೆಯ ಸುತ್ತಲೂ ಪ್ರಾಕಾರದ ಒಳಗಡೆ ವಿಶಾಲವಾದ ಸ್ಥಳವಿತ್ತು. ಹೊರಗಡೆಯಿಂದ ನೋಡಲು ಮನೆ ಅಂದವಾಗಿ ಕಾಣುತ್ತಿದ್ದರೂ, ಒಳಗಡೆ ಹೋಗಿ ನೋಡಿದವರಿಗೆ ಮನೆಯ ಯಜಮಾನ ಗೃಹಕೃತ್ಯದ ಕೆಲಸ ಕಾರ್ಯಗಳಲ್ಲಿ ಶ್ರದ್ಧೆ ವಹಿಸುತ್ತಿರಲಿಲ್ಲವೆಂದು ಸ್ಪಷ್ಟವಾಗಿ ಗೊತ್ತಾಗುತ್ತಿತ್ತು. ಮನೆಯಲ್ಲಿದ್ದ ಸಾಮಾನುಗಳೂ, ಬಟ್ಟೆ ಬರೆಗಳೂ ಒಪ್ಪವೈನಗಳಿಲ್ಲದ ಅಸ್ತವ್ಯಸ್ತವಾಗಿ ಅಲ್ಲಲ್ಲಿ ಬಿದ್ದಿದ್ದವು. ನಡುಮನೆಯಲ್ಲಿ ಗೋಡೆಗೆ ತೂಗು ಹಾಕಿದ್ದ ಚಿತ್ರಪಟಗಳನ್ನು ನೋಡಿದರೆ ಮನೆಯ ಯಜಮಾನ ದೇಶಭಕ್ತನೆಂದು ಗೊತ್ತಾಗುತ್ತಿತ್ತು.

ಕೃಷ್ಣಕಾಂತನು ಮನೆಗೆ ಬಂದಾಗ, ಮನೆಯಲ್ಲಿ ಅಡುಗೆಯ ಆಳು ನಾರಾಯಣನ ವಿನಾ ಇನ್ಯಾರೂ ಇರಲಿಲ್ಲ. ಕೃಷ್ಣಕಾಂತನು ಆಫೀಸಿನಿಂದ ತಂದಿದ್ದ ಫೈಲುಗಳನ್ನೆಲ್ಲಾ ನಡುಮನೆಯಲ್ಲಿದ್ದ ಒಂದು ಮೇಜಿನ ಮೇಲೆ ಒಗೆದು, ಅಲ್ಲೇ ಹತ್ತಿರದಲ್ಲಿದ್ದ ಒಂದು ಆರಾಮ ಕುರ್ಚಿಯ ಮೇಲೆ "ಅಯ್ಯಪ್ಪಾ" ಎಂದು ನರಳುತ್ತಾ ಒರಗಿಕೊಂಡನು. ನಾರಾಯಣನನ್ನು ಕರೆದು "ಕಮಲಾ, ಚಂಚಲಾ ಎಲ್ಲಿ ಹೋಗಿದ್ದಾರೋ" ಎಂದು ಕೇಳಿದನು. ನಾರಾಯಣನು "ದೊಡ್ಡ ಅಮ್ಮೋರು ಐದೂವರೆ ಗಂಟೆ ಹೊತ್ನಾಗೆ ನಿರಂಜನ ಸಾಹೇಬರ ಕಾರಾಗೆ ಹೋದ್ರು, ಸಣ್ಣ ಅಮ್ಮೋರು ಫ್ರೆಂಡ್ಸ್ ಮನೆಗೆ ಹೋಗ್ತೀನಿ ಅಂತ ಸ್ಕೂಟರ್ ಮ್ಯಾಗೆ ಹೋದ್ರು" ಎಂದು ಉತ್ತರವಿತ್ತನು.

"ನಿರಂಜನ ಸಾಹೇಬ್ರು ಆಗಾಗ ಮನೇಗೆ ಬರ್ತಾ ಇರ್ತಾರೇನು?"

"ಹೌದು ಸಾರ್, ವಾರಕ್ಕೆ ಮೂರು ನಾಕು ಸಾರಿ ಬರ್ತಾರೆ. ದೊಡ್ಡ ಅಮ್ಮೋರೂ ಅವ್ರ ಮನೀಗೆ ಆಗಾಗ ಹೋಗ್ತಾ ಇರ್ತಾರೆ. ನಿರಂಜನ ಸಾಹೇಬ್ರು ಈ ಮನೆ ಯಜಮಾನ್ರ ಹಾಗೆ ಮಾಡ್ತಾರೆ ಸಾರ್. ಒಂದಿನ ಕುಡ್ದು ಬಂದೋರು ನಂಗೆ ಕತ್ತೆ ಅಂತ ಬೈದ್ರು ಸಾರ್. ನಂಗೆ ಸಿಟ್ಟು ಬಂತು, "ನಾ ಕತ್ತೆ ಹೌದು, ಆದ್ರೆ ಕುಡ್ಕಕತ್ತೆ ಅಲ್ಲ" ಅಂತ ಹೇಳ್ದೆ. ಆಗ ಅವರು ನನ್ನ ಕಪಾಳಕ್ಕೆ ಟಪಾರ್ ಅಂತ ಹೊಡ್ದ್ರು. ಏನೋ ನಿಮ್ಮುಖ ನೋಡ್ಕೊಂಡು ಸುಮ್ನೆ ಇದ್ದೆ."

"ಅವ್ರು ನಿಂಗೆ ಹೊಡ್ದಾಗ ಕಮಲಾ ಏನೂ ಹೇಳ್ಲಿಲ್ಲವೇನೋ?"

"ಅವರೂ ಅವರ ಪರಾನೆ ಮಾತಾಡಿ, ನಂಗೇ ಬೈದ್ರು ಸಾರ್. ಈ ಅಮ್ಮೋರ ಕೈಯ್ಯಾಗೆ ಉರಿಯೋದು ಬಹಳ ಕಷ್ಟ ಸಾರ್. ಅವ್ರೀಗೆ ನಾನು ಅಂದ್ರೆ ನಾಯೀಗೆ ಸಮಾನ. ತಮ್ಮ ಹಿರೀ ಹೆಂಡ್ತಿ ತಾರಮ್ಮೋರ ಕಾಲ್ದಾಗೆ ನಾ ಈ ಮನೆ ಸೇರಿದ್ದು. ಆ ಮಹಾತಾಯಿ ಮಗನ ಹಾಗೆ ನನ್ನ ನೋಡ್ತಾ ಇದ್ರು, ಇವ್ರ ರೀತೀನೇ ಬೇರೆ. ಭಿಕ್ಷೆ ಬೇಡಿದ್ರೂ ಪರ್ವಾ ಇಲ್ಲ, ಇವ್ರ ಹತ್ರ ಇರೋದು ಬ್ಯಾಡ ಅಂತ ಆಗಿದೆ. ತಾವು ಬೇರೆ ಯಾರಾದ್ರೂ ಜನ ಗೊತ್ಮಾಡಿಕೊಳ್ಳಿ ಸಾರ್. ನಾಯಿಲ್ಲಿ ಇರಲಾರೆ".

"ನಾರಾಯಣಾ, ನೀ ಸಣ್ಣ ಹುಡ್ಗ ಆದಲಾಗಾಯ್ತು ನಮ್ಮನೇಲೇ ಇದ್ದೀಯಾ. ಮನೆ ಮಗನ ಹಾಗೆ ನಾನಿನ್ನ ನೊಡ್ತಾ ಇದ್ದೀನಿ. ನನ್ನಿಂದ ನಿಂಗೇನು ತೊಂದ್ರೆ ಆಗಿದೆ ಹೇಳು?"

"ತಮ್ಮಿಂದ ತೊಂದ್ರೆ ಆಗಿದೆ ಅಂದ್ರೆ ನಾ ಹಾಳಾಗಿ ಹೋಗೇನು. ಅಮ್ಮೋರ ಕೈಯ್ಯಾಗೆ ಯೇಗೀ ಯೇಗೀ ನಂಗೂ ಸಾಕಾಗಿ ಹೋಗ್ಯದೆ. ಮಾತುಮಾತಿಗೆ ಜಗಳಕ್ಕೆ ಬರ್ತಾರೆ. ಒಂದೊಂದು ಸಾರಿ ಮೆಟ್ಟು ಕಳಚಿಕೊಂಡು ಹೊಡ್ಯೋಕೇ ಬತ್ತಾರೆ. ಮಾತ್ ಮಾತಿಗೆ ಮನೆಬಿಟ್ಟು ಹೋಗು ಅಂತಾರೆ. ನಾನು ಮನುಸ್ಯ ನಂಗೂ ಮಾನಮರ್ಯಾದೆ ಇದೆ."

"ನೀನು ಇಷ್ಟು ಕಾಲಾನೇ ನಮ್ಮಲ್ಲಿದ್ದೀಯಾ, ಇನ್ನೊಂದು ವರ್ಷ ನೋಡು. ಅವಳ ಸ್ವಭಾವಾನೇ ಹಾಗೆ. ಅವ್ಳೇನು ಹೇಳಿದ್ರೂ ನೀ ತಿರ್‍ಗಿ ಜವಾಬು ಹೇಳ್ಬ್ಯಾಡ. ನೀ ಹೋದ್ರೆ ನಂಗೆ ಬಹಳ ತೊಂದ್ರೆ ಅಪ್ಪಾ."

"ತಂಕಷ್ಟ ನಂಗೆ ಗೊತ್ತಾಗ್ತದೆ. ನಿಮ್ಮನ್ನು ಬಿಟ್ಟು ಹೋಗಾಕ್ಕೆ ನಂಗೆ ಮನ್ಸಿಲ್ಲ. ನಂಗೆ ಉಭಯ ಸಂಕಟ. ಈ ಅಮ್ಮೋರ ಬಾಯಾಗೆ ಬೇಯೋಕೆ ನಂಗೆ ಕಷ್ಟ. ಅವರು ನಿಮಗೇ ಬಾಯಿಗೆ ಬಂದ್ಹಾಗೆ ಹೇಳೋರು ನನ್ನ ಬಿಡ್ತಾರೇನ್ ಸಾರ್? ನಿಮಗೆ ಬ್ಯಾರೆ ಜನ ಸಿಕ್ಕೋತಂಕ ನಾಯಿರ್‍ತೀನಿ. ಆದಷ್ಟು ಬ್ಯಾಗ ಬೇರೆ ಜನ ಗೋತ್ಮಾಡಿಕೊಳ್ಳಿ. ಈ ಅಮ್ಮನ ಜೋತೀಗೆ ನೀವು ಬಾಳುವೆ ಮಾಡೋದೂ ಕಷ್ಟ."

"ಏ ನಾರಾಯಣ, ಯೇನೋ ಉದ್ದುದ್ದಾ ಮಾತಾಡ್ತೀಯಾ? ನನ್ನ ಹತ್ರ ಇದನ್ಯಲ್ಲಾ ಹೇಳ್ದೆ ಅಂತ ಬೇರೆಯವರ ಹತ್ರ ಹೀಗೆಲ್ಲಾ ಹೇಳ್ಬಾರದು."

"ಆಗಲಿ ಸಾರ್ ಹೇಳೋದಿಲ್ಲ. ನಂಗೆ ಅಷ್ಟೂ ಬುದ್ಧಿಯಿಲ್ಲೇನ್ ಸಾರ್? ಯಾಕೆ ನರಳ್ತೀರಿ ಸಾರ್?"

"ಜ್ವರ ಬಂದಿದೆಯಪ್ಪಾ"

"ಡಾಕ್ಟರ್ ಕರ್‍ಕೊಂಡ್ ಬರ್‍ಲೇನ್ ಸಾರ್?"

"ಈಗೇನೂ ಬ್ಯಾಡಪ್ಪಾ, ನಾಳೆ ನೋಡೋಣ. ನಾ ಇವತ್ತು ರಾತ್ರಿ ಊಟ ಮಾಡೋದಿಲ್ಲ. ಒಂಬತ್ತು ಘಂಟೆ ಹೊತ್ತಿಗೆ ಒಂದು ಲೋಟ ಹಾಲು ಕೊಡು. ಈಗ ನನ್ನ ರೂಮಾಗೆ ನನ್ನ ಹಾಸಿಗೆ ಸರಿಮಾಡು."

ನಾರಾಯಣನು ಹಾಸಿಗೆ ಸರಿಪಡಿಸಿದ ನಂತರ ಕೃಷ್ಣಕಾಂತನು ತನ್ನ ಕೊಠಡಿಗೆ ಹೋಗಿ ಮಲಗಿದನು. ಜ್ವರದ ತಾಪ ವಿಪರೀತವಾಗಿದ್ದರೂ, ಆಯಾಸ ಹೆಚ್ಚಾಗಿದ್ದರೂ, ನಿದ್ದೆ ಹತ್ತಲಿಲ್ಲ. ಈಚೆಗೆ ಅವನಿಗೆ ಸರಿಯಾಗಿ ನಿದ್ದೆಯೂ ಬರುತ್ತಿರಲಿಲ್ಲ. ಅದಕ್ಕೆ ಕಾರಣವೂ ಇತ್ತು. ಹಿಂದೆ ಯೌವನದಲ್ಲಿ ಸಿಹಿಯಾಗಿದ್ದ ಅವನ ಬಾಳು ಇಂದು ಇಳಿವಯಸ್ಸಿನಲ್ಲಿ ಕಹಿಯಾಗುತ್ತಾ ಬಂದಿತ್ತು. ಜೀವನದ ಮೇಲೆ ಸಾಕಷ್ಟು ಜಿಗುಪ್ಸೆಯುಂಟಾಗಿತ್ತು. ಮೊದಲನೆಯ ಹೆಂಡತಿಯ ಮಗಳು ಚಂಚಲೆಗೆ ಮದುವೆಯಾಗದಿರುವುದು ಅವನಿಗೊಂದು ದೊಡ್ಡ ಮನೋರೋಗವಾಗಿತ್ತು. ಅವನ ಎರಡನೆಯ ಹೆಂಡತಿ ಕಮಲೆಯ ಚಂಡಿತನ ಮತ್ತು ದುರಹಂಕಾರದಿಂದ ಅವನಿಗೆ ಬಾಳು ಬೇಡವೆನ್ನಿಸಿತ್ತು. ಸಾಲದುದಕ್ಕೆ ಇತ್ತೀಚಿನ ವರ್ಷಗಳಲ್ಲಿ ಅವನ ವಕೀಲಿವೃತ್ತಿಯೂ ಹುಲುಸಾಗಿ ನಡೆಯದೆ, ವರಮಾನವೂ ಕಡಿಮೆಯಾಗಿತ್ತು ಅವನು ಆಗತಾನೆ ಐವತ್ತೈದು ವರ್ಷಗಳನ್ನು ದಾಟಿದ್ದರೂ ನೋಡಿದವರಿಗೆ ಎಪ್ಪತ್ತು ವರ್ಷಗಳ ವೃದ್ಧನಂತೆ ಕಾಣುತ್ತಿದ್ದನು. ಯೌವನದಲ್ಲಿ ಸ್ಫುರದ್ರೂಪಿಯಾಗಿಯೂ, ಬಲಿಷ್ಠನಾಗಿಯೂ ಇದ್ದನು. ಆದರೆ ವಯಸ್ಸು ಕಳೆದಂತೆ ಬೊಜ್ಜು ಬೆಳೆದು ಮುಂದಲೆಯ ಕೂದಲುಗಳೆಲ್ಲವೂ ಉದುರಿ ಹೋಗಿ, ಅದು ಫಳಫಳನೆ ಹೊಳೆಯುತ್ತಿತ್ತು. ನೂರಾರು ಕೋಟಲೆಗಳ ಕೊಡಲಿ ಪೆಟ್ಟುಗಳು

ಅವನ ಮುಖದ ಮೇಲೆ ಎದ್ದು ಕಾಣಿಸುತ್ತಿದ್ದವು. ಜೊತೆಗೆ ಈಚೆಗೆ ಅವನು ಸಿಹಿಮೂತ್ರ ರೋಗದಿಂದ ನರಳುತ್ತಿದ್ದನು.

ಅಂದು ಜ್ವರದ ತಾಪದಿಂದ ನರಳುತ್ತಾ ಮಲಗಿದ್ದಾಗ, ಅವನ ಬಾಳಿನ ಕಹಿ ಸಿಹಿ ಘಟನೆಗಳು ಒಂದೊಂದಾಗಿ ಸ್ಮೃತಿಪಟಲದ ಮೇಲೆ ಸುಳಿದು ಹೋಗುತ್ತಿದ್ದವು. ಕೃಷ್ಣಕಾಂತನು ಬಡತನದಿಂದ ಮೇಲಕ್ಕೆ ಬಂದವನು. ಕಾನೂನು ಪರೀಕ್ಷೆಯಲ್ಲಿ ಉತ್ತೀರ್ಣನಾದ ನಂತರ, ಆ ಕಾಲದಲ್ಲಿ ಸುಪ್ರಸಿದ್ಧ ವಕೀಲರೆನಿಸಿಕೊಂಡಿದ್ದ ಪುರುಷೋತ್ತಮಬಾಬು ಅವರ ಆಫೀಸಿಗೆ ಸೇರಿ ಅವರಿಂದ ತರಬೇತಿ ಪಡೆದಿದ್ದನು. ಪುರುಷೋತ್ತಮಬಾಬು ಅವರು ಗಾಂಧೀಜಿಯವರ ಕರೆಗೆ ಓಗೊಟ್ಟು, ವಕೀಲಿ ವೃತ್ತಿಯನ್ನು ಬಿಟ್ಟು, ಅಸಹಕಾರ ಚಳವಳಿಯಲ್ಲಿ ಧುಮುಕಿದ ನಂತರ, ಕೃಷ್ಣಕಾಂತನು ಅವರ ಆಫೀಸಿನಲ್ಲಿಯೇ ತನ್ನ ವೃತ್ತಿಯನ್ನು ಮುಂದುವರಿಸಿದನು. ಕಾಲಕ್ರಮೇಣ ಅವನು ಶ್ರೀಪುರದಲ್ಲಿ ಹೆಸರುವಾಸಿಯಾದ ವಕೀಲನಾದನು. ಅವನ ಪ್ರತಿಭೆ ಮತ್ತು ವಾಕ್‌ಚಾತುರ್ಯಗಳನ್ನು ಮೆಚ್ಚಿದ ಅಂದಿನ ಬ್ರಿಟಿಷ್ ಸರ್ಕಾರದವರು ಅವನಿಗೆ ಡಿಸ್ಟ್ರಿಕ್ಟ್ ಜಡ್ಜರ ಹುದ್ದೆಯನ್ನು ಕೊಡುವುದಾಗಿ ಜಿಲ್ಲಾ ಕಲೆಕ್ಟರ್ ಮುಖಾಂತರ ಹೇಳಿ ಕಳುಹಿಸಿದ್ದರು.

ಅಂದು ಅಸಹಕಾರ ಚಳವಳಿಯ ಕಾಲವಾಗಿತ್ತು. ಕೃಷ್ಣಕಾಂತನು ಚಳವಳಿಯಲ್ಲಿ ಭಾಗವಹಿಸಿ ಸೆರೆಮನೆಗೆ ಹೋಗದಿದ್ದರೂ ಸಹ ರಾಷ್ಟ್ರೀಯ ಕಾಂಗ್ರೆಸ್ಸಿನ ಸದಸ್ಯನಾಗಿದ್ದನು. ಸರ್ಕಾರದೊಡನೆ ಸಹಕರಿಸುವುದೂ, ಸರ್ಕಾರಿ ನೌಕರನಾಗಿರುವುದೂ, ರಾಷ್ಟ್ರದ್ರೋಹದ ಕೆಲಸವೆಂದು ಅವನು ಭಾವಿಸಿದ್ದನು. ಆದ್ದರಿಂದ ಡಿಸ್ಟ್ರಿಕ್ಟ್ ಜಡ್ಜರ ಹುದ್ದೆಯನ್ನು ಅವನು ನಿರಾಕರಿಸಿದನು. ಆ ರೀತಿ ನಿರಾಕರಿಸಿದ್ದರಿಂದ ಸಮಾಜದಲ್ಲಿ ಅವನ ಗೌರವ, ಪ್ರತಿಷ್ಠೆಗಳು ಹೆಚ್ಚಾದವು. ಆ ಕಾಲದಲ್ಲಿ ಅವನೊಬ್ಬ ಆದರ್ಶ ವಕೀಲನೆಂದು ಜನರ ಅಭಿಪ್ರಾಯವಾಗಿತ್ತು. ತನ್ನ ಬಳಿಗೆ ಬರುತ್ತಿದ್ದ ಕಕ್ಷಿಗಾರರನ್ನು ಸುಲಿಗೆ ಮಾಡದೆ, ಅವರೊಡನೆ ಪ್ರಾಮಾಣಿಕತೆಯಿಂದಲೂ, ಕನಿಕರದಿಂದಲೂ ವರ್ತಿಸುತ್ತಿದ್ದನು. ಜನರಿಗೆ ಅವನ ಮೇಲೆ ಬಹಳ ಗೌರವವಿತ್ತು. ಅಂದು ಅವನ ಬಾಳು ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಅವನ ಮೊದಲನೆಯ ಹೆಂಡತಿ ತಾರ ವಿದ್ಯಾವತಿಯಾಗಿ ಆದರ್ಶಪತ್ನಿಯಾಗಿದ್ದಳು. ಜೊತೆಗೆ ಸೌಂದರ್ಯದ ಅಧಿದೇವತೆಯಂತಿದ್ದಳು. ಕೃಷ್ಣಕಾಂತನಿಗೆ ಮನೆಯಲ್ಲಿ ಸ್ವರ್ಗಸುಖವಿತ್ತು; ಕೈತುಂಬ ಸಂಪಾದನೆಯಿತ್ತು; ಸಮಾಜದಲ್ಲಿ ಗೌರವವಿತ್ತು.

ದುರದೃಷ್ಟವಶಾತ್ ಅವನ ಮೂವತ್ತನಾಲ್ಕನೆಯ ವಯಸ್ಸಿನಲ್ಲಿ ತಾರ ಎರಡನೆಯ ಬಾರಿ ಗರ್ಭವತಿಯಾಗಿದ್ದಾಗ, ಗರ್ಭಸ್ರಾವವಾಗಿ, ಆಗ ಮೂರು ವರ್ಷದ ಮಗುವಾಗಿದ್ದ ಮಗಳು ಚಂಚಲೆಯನ್ನು ತಬ್ಬಲಿಯನ್ನಾಗಿ ಮಾಡಿ, ಪರಲೋಕ ಯಾತ್ರೆಯನ್ನು ಕೈಗೊಂಡಿದ್ದಳು. ಮುದ್ದಿನ ಮಡದಿಯನ್ನು ಕಳೆದುಕೊಂಡಿದ್ದ ಕೃಷ್ಣಕಾಂತನಿಗೆ ಬಾಳು ನಶ್ವರವೆನಿಸಿತ್ತು. ಯಾವುದರಲ್ಲೂ ಅವನಿಗೆ ಉತ್ಸಾಹ, ಆಸಕ್ತಿಗಳಿರಲಿಲ್ಲ. ವಕೀಲಿ ವೃತ್ತಿಯಲ್ಲೂ ಕೂಡ ಅವನಿಗೆ ಶ್ರದ್ಧೆ ಕಡಿಮೆಯಾಯಿತು. ಮಗಳು ಚಂಚಲೆಯನ್ನು ಅವಳ ಅಜ್ಜಿಯ ಮನೆಯಲ್ಲಿ ಬಿಟ್ಟು ತಾನು ಏಕಾಂಗಿಯಾಗಿ ಕೊರಗುತ್ತಿದ್ದನು. ಬೇಕೋ ಬೇಡವೋ

ಎನ್ನುವ ರೀತಿಯಲ್ಲಿ ವಕೀಲಿ ವೃತ್ತಿಯನ್ನು ನಡೆಸುತ್ತಿದ್ದನು. ಅವನ ಸ್ಥಿತಿಯನ್ನು ನೋಡುತ್ತಿದ್ದ ಅವನ ಬಂಧುಗಳೂ, ಗೆಳೆಯರೂ, "ನಿನಗಿನ್ನೂ ಚಿಕ್ಕವಯಸ್ಸು, ಎಷ್ಟುಕಾಲ ಹೀಗೇ ಏಕಾಂಗಿಯಾಗಿರಲು ಸಾಧ್ಯ? ಪುನಃ ಮದುವೆಯಾದರೆ ಪತ್ನಿವಿಯೋಗದ ದುಃಖ ನಿವಾರಣೆಯಾಗುತ್ತದೆ" ಎಂದು ಅವನಿಗೆ ಆಗಾಗ ಹೇಳುತ್ತಿದ್ದರು. ಅವನು "ನನ್ನ ತಾರಳಂತ ಪತ್ನಿ ನನಗೆ ಈ ಜನ್ಮದಲ್ಲಿ ಸಿಕ್ಕಲಾರಳು. ಹೀಗೆಯೇ ಬಾಳನ್ನು ಕಳೆಯುತ್ತೇನೆ. ಹೇಗಿದ್ದರೂ ಒಬ್ಬಳು ಮಗಳಿದ್ದಾಳೆ" ಎಂದು ಜವಾಬು ಹೇಳುತ್ತಿದ್ದನು.

ಹೀಗೆಯೇ ಮೂರು ವರ್ಷಗಳ ಕಾಲ ಕಳೆದವು. ಅವನ ಮಾನಸಿಕ ಸ್ಥಿತಿ ಸುಧಾರಿಸಲಿಲ್ಲ. ಉತ್ಸಾಹ ಮಾಯವಾಗಿ ಹೋಗಿತ್ತು. ಸುಖಸಂತೋಷಗಳು ತಾರಾಳ ಜೊತೆಯಲ್ಲಿಯೇ ಮಾಯವಾಗಿದ್ದವು. ಸದಾ ಮಂಕು ಹಿಡಿದವನಂತೆ ಇರುತ್ತಿದ್ದನು. ನಿರ್ವಾಹವಿಲ್ಲದೆ ಜೀವನೋಪಾಯಕ್ಕೆ ವಕೀಲಿ ಕೆಲಸವನ್ನು ನಿರ್ವಹಿಸುತ್ತಿದ್ದನು. ಪುನಃ ಮದುವೆಯಾದರೆ ಹಿಂದಿನ ಸುಖ ಸಂತೋಷಗಳು ಬರಬಹುದೆಂಬ ಭಾವನೆ ಕ್ರಮೇಣ ಅವನಲ್ಲಿ ಉದ್ಭವಿಸತೊಡಗಿತ್ತು. ಆ ಸಮಯಕ್ಕೆ ಸರಿಯಾಗಿ ವಿಷ್ಣುಪುರದ ಸಾಹುಕಾರನು ತನ್ನ ಮಗಳನ್ನು ಕೊಡುವುದಾಗಿ ಕೃಷ್ಣಕಾಂತನ ಸ್ನೇಹಿತನ ಮೂಲಕ ಹೇಳಿ ಕಳುಹಿಸಿದನು. ಕೃಷ್ಣಕಾಂತನು ತನ್ನ ಗುರು ಪುರುಷೋತ್ತಮ ಬಾಬು ಅವರ ಸಲಹೆಯನ್ನು ಕೇಳಿದನು. "ಕೃಷ್ಣಾ, ಇದು ನಿನ್ನ ಸ್ವಂತ ವಿಚಾರಕ್ಕೆ ಸಂಬಂಧಪಟ್ಟಿದ್ದು. ಆದ್ದರಿಂದ ಇದನ್ನು ನೀನೇ ನಿರ್ಧರಿಸಬೇಕು. ಜಿತೇಂದ್ರಿಯಾಗಿ, ಬ್ರಹ್ಮಚರ್ಯೆಯಿಂದ ಇರಲು ನಿನಗೆ ಸಾಧ್ಯವಾದರೆ, ಅದು ಶ್ರೇಷ್ಠ ಮಾರ್ಗ. ಅದು ಸಾಧ್ಯವಾಗದಿದ್ದರೆ ಮದುವೆಯಾಗುವುದು ಲೇಸು. ಒಂದು ಮುನ್ನೆಚ್ಚರಿಕೆಯ ಮಾತು. ಹೆಣ್ಣನ್ನು ಬಡವರ ಮನೆಯಿಂದ ತರಬೇಕು. ಕೊಡುವಾಗ ಶ್ರೀಮಂತರ ಮನೆಗೆ ಕೊಡಬೇಕು. ವಿಷ್ಣುಪುರದ ಸಾಹುಕಾರರು ಶ್ರೀಮದ್ಗಾಂಭೀರ್ಯದ ಒಣಜಂಬದವರು. ನೂರಾರು ಮನೆಗಳನ್ನು ಮುರಿದು ಶ್ರೀಮಂತರಾದವರು. ಅವರ ಮನೆಯ ಹುಡುಗಿ ನಿನ್ನ ಸರಳ ಸ್ವಭಾವಕ್ಕೆ ಹೊಂದಿಕೊಳ್ಳುತ್ತಾಳೆಯೇ ಎಂಬುದನ್ನು ನೀನು ಯೋಚಿಸಬೇಕು", ಎಂದು ಪುರುಷೋತ್ತಮ ಬಾಬು ಅವರು ಕೃಷ್ಣಕಾಂತನಿಗೆ ಹೇಳಿದ್ದರು. ಆದರೆ ಕೃಷ್ಣಕಾಂತನ ಸ್ನೇಹಿತರೂ, ಬಂಧುಗಳೂ, ವಿಷ್ಣುಪುರದ ಸಾಹುಕಾರರ ಬಾಂಧವ್ಯ ಶ್ರೇಯಸ್ಕರವೆಂದೂ ಅವರ ಮನೆತನ ಬಹಳ ಹೆಸರುವಾಸಿಯಾದ ಮನೆತನವೆಂದೂ ವಾದಿಸತೊಡಗಿದರು. ಅವರ ಅಭಿಪ್ರಾಯಕ್ಕೆ ಮಣಿದು ಕೃಷ್ಣಕಾಂತನು ಆ ಸಾಹುಕಾರನ ಮಗಳನ್ನು ಮದುವೆಯಾಗಲು ಒಪ್ಪಿದನು.

ವಿಷ್ಣುಪುರದ ಸಾಹುಕಾರನ ಮೂರನೆಯ ಮಗಳು ಕಮಲ ಹೈಸ್ಕೂಲಿನ ಮೂರನೆಯ ತರಗತಿಯಲ್ಲಿ ಮೂರುಬಾರಿ ಅಪಜಯ ಹೊಂದಿದ್ದಳು. ಕುರೂಪಿಯಾಗಿಲ್ಲದಿದ್ದರೂ, ಅವಳನ್ನು ಸುರೂಪಿಯೆಂದು ಪರಿಗಣಿಸುವಂತಿರಲಿಲ್ಲ. ತಾನು ರೂಪವತಿಯಲ್ಲದಿದ್ದರೂ, ತನ್ನನ್ನು ಮದುವೆಯಾಗುವವನು ಶ್ರೀಮಂತನೂ, ವಿದ್ಯಾವಂತನೂ, ಸ್ಫುರದ್ರೂಪಿಯೂ ಆಗಿರಬೇಕೆಂದು ಅವಳ ಬಯಕೆಯಾಗಿತ್ತು. ಆದರೆ

ಶ್ರೀಮಂತವರ್ಗದಲ್ಲಿ ಅವಳಿಗೆ ಸರಿಯಾದ ವರ ಸಿಗದೆ ಹೋದ್ದರಿಂದ ಅವಳ ತಂದೆ ಸಾಹುಕಾರನು ವಿಧುರನನ್ನು ಮದುವೆಯಾಗುವಂತೆ ಕಮಲೆಯನ್ನು ಒಪ್ಪಿಸುವುದು ತಂದೆ ತಾಯಿಗಳಿಗೆ ಕಷ್ಟವಾಗಿತ್ತು. ಕೃಷ್ಣಕಾಂತನು ಪ್ರತಿಭಾವಂತ ವಕೀಲನೆಂದೂ, ಕಾಲಕ್ರಮೇಣ ಅವನು ಹೈಕೋರ್ಟ್ ಜಡ್ಜ್ ಅಗುವ ಸಂಭವವಿದೆಯೆಂದೂ ಸಾಹುಕಾರನು ಮಗಳಿಗೆ ಪುಸಲಾಯಿಸಿದನು. ತಾನೊಪ್ಪುವ ವರ ಸಿಕ್ಕದೆ ಹೋದ್ದರಿಂದಲೂ, ತಂದೆಯ ಮಾತನ್ನು ಉಲ್ಲಂಘಿಸಲು ಸಾಧ್ಯವಾಗದೆ ಇದ್ದುದರಿಂದಲೂ ಅವಳು ನಿರ್ವಾಹವಿಲ್ಲದೆ ಕೃಷ್ಣಕಾಂತನನ್ನು ಮದುವೆಯಾಗಲು ಒಪ್ಪಿದಳು. ಕೃಷ್ಣಕಾಂತನು ಪ್ರತಿಭಾವಂತ ಲಾಯರಾದ್ದರಿಂದ ಆಗರ್ಭ ಶ್ರೀಮಂತನಾಗಿರಬೇಕೆಂದು ಕಮಲೆ ಊಹಿಸಿದ್ದಳು.

ಕೃಷ್ಣಕಾಂತನು ವರದಕ್ಷಿಣೆಯನ್ನು ಅಪೇಕ್ಷಿಸಿಯೂ ಇರಲಿಲ್ಲ; ಕೇಳಿಯೂ ಇರಲಿಲ್ಲ. ಆದರೆ ಸಾಹುಕಾರನು ತಾನಾಗಿಯೇ ಹತ್ತುಸಾವಿರ ರೂಪಾಯಿಗಳ ವರದಕ್ಷಿಣೆಯನ್ನು ಕೊಡುವುದಾಗಿ ಕೃಷ್ಣಕಾಂತನಿಗೆ ಹೇಳಿ ಕಳುಹಿಸಿದನು. ಕೃಷ್ಣಕಾಂತನು ನಿರಾಕರಿಸಿದನು. ಸಾಹುಕಾರನು ತಾನು ವಿಶ್ವಾಸ ಪೂರ್ವಕವಾಗಿ ಕೊಡಬೇಕೆಂದಿರುವ ಹಣವನ್ನು ನಿರಾಕರಿಸಬಾರದೆಂದು ಕೃಷ್ಣಕಾಂತನಿಗೆ ಒತ್ತಾಯ ಮಾಡಿದ್ದರಿಂದ, ಕೃಷ್ಣಕಾಂತನು ಹತ್ತುಸಾವಿರ ರೂಪಾಯಿಗಳ ವರದಕ್ಷಿಣೆಯನ್ನು ತೆಗೆದುಕೊಂಡು, ಕಮಲೆಯನ್ನು ಮದುವೆಯಾದನು. ಮದುವೆಯಾದ ನಂತರ, ತಾನು ಭಾವಿಸಿದ್ದಂತೆ ತನ್ನ ಗಂಡ ಕೃಷ್ಣಕಾಂತನು ಆಗರ್ಭ ಶ್ರೀಮಂತನಾಗಿಲ್ಲವೆಂದು ಕಮಲೆಗೆ ಗೊತ್ತಾಗಲು ಹೆಚ್ಚು ಕಾಲ ಹಿಡಿಯಲಿಲ್ಲ. ಅವಳು ನಿರೀಕ್ಷಿಸಿದಂತೆ ಮನೆತುಂಬ ಆಳು ಕಾಳುಗಳೂ ಇರಲಿಲ್ಲ; ಓಡಾಡಲು ಕಾರು ಸಹಾ ಇರಲಿಲ್ಲ. ಕೃಷ್ಣಕಾಂತನು ಆಡಂಬರವಿಲ್ಲದೆ ನೆಮ್ಮದಿಯಿಂದ ಜೀವನ ಸಾಗಿಸುವಷ್ಟು ಸಂಪಾದನೆ ಮಾಡುತ್ತಿದ್ದನು. ಮನೆಯಲ್ಲಿ ಹಿಂದಿನಿಂದ ಅಡಿಗೆ ಕೆಲಸದಲ್ಲಿ ಪಳಗಿದ್ದ ನಾರಾಯಣನು ಸೊಗಸಾಗಿ ಅಡುಗೆ ಮಾಡುತ್ತಿದ್ದನು. ಕಸ, ಮುಸುರೆ ಇತ್ಯಾದಿ ಕೆಲಸಗಳಿಗೆ ಒಬ್ಬ ಹೆಣ್ಣಾಳನ್ನು ನೇಮಿಸಿಕೊಂಡಿದ್ದನು. ತನ್ನ ಓಡಾಟಕ್ಕೋಸ್ಕರ ಒಂದು ಮೋಟಾರ್ ಸೈಕಲ್ ಇಟ್ಟುಕೊಂಡಿದ್ದನು.

ಆದರೆ ಶ್ರೀಮಂತ ಮನೆಯಲ್ಲಿ ಅಟ್ಟಹಾಸದಿಂದ ಮೆರೆದ ಕಮಲೆಗೆ ಈ ಅಲ್ಪ ಸ್ವಲ್ಪ ಸುಖಗಳಿಂದ ಸ್ವಲ್ಪವೂ ತೃಪ್ತಿಯಾಗಲಿಲ್ಲ. ಮಾತು ಮಾತಿಗೆ ಗಂಡನಿಗೆ ಚುಚ್ಚುವ ರೀತಿಯಲ್ಲಿ ತನ್ನ ತೌರುಮನೆಯ ವೈಭವವನ್ನು ವರ್ಣಿಸುತ್ತಿದ್ದಳು. ಮದುವೆಯಾಗಿ ಒಂದು ವರ್ಷದೊಳಾಗಿ ತನ್ನ ಮತ್ತು ಕಮಲೆಯ ಸ್ವಭಾವ ಮತ್ತು ವಿಚಾರಧಾರೆಗಳು ವಿಪರೀತ ಭಿನ್ನವಾಗಿವೆಯೆಂಬುದನ್ನು ಸೂಕ್ಷ್ಮಮತಿಯಾದ ಕೃಷ್ಣಕಾಂತನು ಗ್ರಹಿಸಿದ್ದನು. ಅವನು ಆದರ್ಶವಾದಿಯಾಗಿದ್ದರೆ, ಅವಳು ಆಡಂಬರವಾದಿಯಾಗಿದ್ದಳು. ಅವನು ನಿಗರ್ವಿಯಾಗಿದ್ದರೆ ಅವಳು ದುರಹಂಕಾರಿಯಾಗಿದ್ದಳು. ಅವನು ಆಧ್ಯಾತ್ಮಿಕ ಪ್ರವೃತ್ತಿಯವನಾಗಿದ್ದರೆ , ಅವಳು ಸಂಪೂರ್ಣ ಲೌಖಿಕ ಪ್ರವೃತ್ತಿಯವಳಾಗಿದ್ದಳು. ಅವನಿಗೆ ಬಡಬಗ್ಗರಲ್ಲಿ ಮಮತೆಯಿದ್ದರೆ ಅವಳಿಗೆ ಬಡಬಗ್ಗರೆಂದರೆ ಕಸಕ್ಕೆ ಸಮಾನ. ಸಾಲದುದಕ್ಕೆ ಅವರಿಬ್ಬರ ವಯಸ್ಸಿನಲ್ಲಿ ಇಪ್ಪತ್ತು ವರ್ಷಗಳ ಅಂತರ. ಮೋಸದಿಂದ ಬಡಬಗ್ಗರ

ರಕ್ತವನ್ನು ಹೀರಿ ಶ್ರೀಮಂತರಾದವರ ಮನೆತನದಲ್ಲಿ ಹುಟ್ಟಿದವರಿಗೆ ರಕ್ತಗತವಾಗಿ ಬರುವ ದುರ್ಗುಣಗಳೆಲ್ಲವೂ ಕಮಲೆಗೆ ರಕ್ತಗತವಾಗಿ ಬಂದಿದ್ದವು. ಮದುವೆಯಾದ ಒಂದೂವರೆ ವರ್ಷದಲ್ಲಿ ಕಮಲೆಗೆ ಒಂದು ಗಂಡುಮಗು ಆಯಿತು ಆ ಮಗುವಿಗೆ ಗಂಗಾಧರ ಎಂದು ನಾಮಕರಣ ಮಾಡಿದ್ದರು. ಗಂಡುಮಗು ಹುಟ್ಟಿದ್ದು ಕೃಷ್ಣಕಾಂತನಿಗೆ ಸಂತೋಷವನ್ನುಂಟುಮಾಡಿತ್ತು. ಹೆರಿಗೆ ವಿಷ್ಣುಪುರದಲ್ಲೇ ಆಗಿತ್ತು. ಹೆರಿಗೆಯಾದ ಸಮಯದಲ್ಲಿ ಕೃಷ್ಣಕಾಂತನು ಶ್ರೀಪುರದಲ್ಲಿದ್ದನು. ಮಾವನಿಂದ ಕಾಗದ ಬಂದನಂತರ, ಗಂಡುಮಗು ಆದದ್ದನ್ನು ತಿಳಿದು, ಹೆಂಡತಿ ಮತ್ತು ಮಗುವನ್ನು ನೋಡಲು ವಿಷ್ಣುಪುರಕ್ಕೆ ಹೋದನು. ಬಾಣಂತಿಯಾದ ಕಮಲೆಯನ್ನು ಕುರಿತು "ಹೇಗಿದ್ದೀಯಾ" ಎಂದು ಕೇಳಿದ್ದಕ್ಕೆ ಕಮಲೆ "ನಿಮ್ಮ ಮನೆಯಲ್ಲಿದ್ದುದಕ್ಕಿಂತಾ ಚೆನ್ನಾಗಿದ್ದೇನೆ" ಎಂದು ಸೊಟ್ಟ ಮೋರೆ ಹಾಕಿಕೊಂಡು, ಜವಾಬು ಹೇಳಿದಳು. ಗಂಗಾಧರ ಹುಟ್ಟಿದ ಎರಡನೆಯ ವರ್ಷದಲ್ಲಿ ಕಮಲೆಗೆ ಒಂದು ಹೆಣ್ಣುಮಗುವಾಯಿತು. ಆ ಮಗುವಿಗೆ ಊರ್ಮಿಳಾ ಎಂದು ಹೆಸರಿಟ್ಟಿದ್ದಳು. ಊರ್ಮಿಳಾ ಹುಟ್ಟಿದನಂತರ ತನಗಿನ್ನು ಮಕ್ಕಳು ಬೇಡವೆನ್ನುವ ದೃಷ್ಟಿಯಿಂದ ಕೃಷ್ಣಕಾಂತನು ವಾಸೆಕ್ಟಮಿ ಆಪರೇಷನ್ ಮಾಡಿಸಿಕೊಂಡನು, ತನ್ನನ್ನು ಕೇಳದೆ, ತನ್ನ ಅಪ್ಪಣೆಯಿಲ್ಲದೆ, ವಾಸೆಕ್ಟಮಿ ಆಪರೇಷನ್ ಮಾಡಿಸಿಕೊಂಡಿದ್ದಕ್ಕೆ ಕಮಲೆ ದೊಡ್ಡ ರಾದ್ಧಾಂತವನ್ನೇ ಎಬ್ಬಿಸಿದ್ದಳು. ಅವಳ ಆಕ್ಷೇಪಣೆಯ ಉದ್ದೇಶವೇನೆಂಬುದು ಕೃಷ್ಣಕಾಂತನಿಗೆ ಗೊತ್ತಾಗಲಿಲ್ಲ.

ಗಂಗಾಧರ ಹುಟ್ಟಿದ ವರ್ಷ, ಮೊದಲನೆಯ ಹೆಂಡತಿಯ ಮಗಳು ಚಂಚಲೆಯ ಅಜ್ಜಿ ತೀರಿಕೊಂಡಳು. ಅಜ್ಜಿಯ ಮನೆಯಲ್ಲಿ ಇನ್ನಾರೂ ಅವಳನ್ನು ನೋಡಿಕೊಳ್ಳುವವರಿಲ್ಲದೆ ಚಂಚಲೆಯನ್ನು ತನ್ನ ಮನೆಗೆ ಕರೆದುಕೊಂಡು ಬಂದನು. ಅಷ್ಟು ಹೊತ್ತಿಗಾಗಲೇ ಗಂಡ ಹೆಂಡತಿಯಲ್ಲಿ ವಿರಸ ಬೆಳೆಯಲಾರಂಭಿಸಿತ್ತು. ಚಂಚಲೆ ಮನೆಗೆ ಬಂದ ಮೇಲೆ ಆ ವಿರಸ ದಿನೇ ದಿನೇ ಹೆಚ್ಚಾಗುತ್ತಿತ್ತು. ಚಂಚಲೆಯ ವಿಚಾರದಲ್ಲಿ ಕಮಲೆ ಮಲತಾಯಿ ಧೋರಣೆಯನ್ನು ಅನುಸರಿಸುತ್ತಿದ್ದಳು. ತನ್ನ ಮಕ್ಕಳನ್ನು ಮುದ್ದು ಮಾಡಿದರೆ ಚಂಚಲೆಗೆ ಗುದ್ದು ಕೊಡುತ್ತಿದ್ದಳು. ಕೃಷ್ಣಕಾಂತನಿಗೆ ಇದನ್ನು ನೋಡಿ ಸಹಿಸಲಾಗಲಿಲ್ಲ. ಚಂಚಲೆಯ ಸಲುವಾಗಿ ಗಂಡ ಹೆಂಡಿರಿಬ್ಬರೂ ಆಗಾಗ ಜಗಳವಾಡುತ್ತಿದ್ದರು. ಕಮಲೆ ಜಗಳಕ್ಕೆ ನಿಂತರೆ ಶೂರ್ಪನಖಿಯಂತೆ ವರ್ತಿಸುತ್ತಿದ್ದಳು. ಸಿಟ್ಟುಬಂದಾಗ ಗಂಡನನ್ನು ಏಕವಚನದಲ್ಲಿ 'ನೀನು' 'ನಿನ್ನ' 'ಕತ್ತೆ' 'ನಾಯಿ' 'ರಾಕ್ಷಸ' ಎಂದು ಸಂಬೋಧಿಸುತ್ತಿದ್ದಳು. ತನ್ನ ಮನೆಯ ಹುಳುಕು ಇತರರಿಗೆ ಗೊತ್ತಾಗಬಾರದೆಂಬ ದೃಷ್ಟಿಯಿಂದ ಕೃಷ್ಣಕಾಂತನು ಹೆಂಡತಿ ಏನು ಹೇಳಿದರೂ ಮರು ಮಾತನಾಡದೆ ಸುಮ್ಮನಿರುತ್ತಿದ್ದನು.

ತನ್ನ ತಂದೆಯ ನಿಸ್ಸಹಾಯಕ ಪರಿಸ್ಥಿತಿಯನ್ನು ಅರಿತ ಚಂಚಲೆ, ಮಲತಾಯಿಯ ಕಿರುಕುಳಗಳನ್ನು ಮೌನವಾಗಿ ಸಹಿಸಿಕೊಂಡು, ವಿದ್ಯಾರ್ಜನೆಯಲ್ಲಿ ನಿರತಳಾಗಿದ್ದಳು. ಅವಳು ತಾಯಿಯಂತೆ ಅತ್ಯಂತ ಸುಂದರಿಯಾಗಿದ್ದಳು ಮತ್ತು ಸದ್ಗುಣಿಯಾಗಿದ್ದಳು.

ಅವಳು ಚುರುಕು ಬುದ್ಧಿಯವಳಾಗಿದ್ದರಿಂದ ಪ್ರತಿಯೊಂದು ತರಗತಿಯಲ್ಲಿಯೂ ಮೊದಲನೆಯ ದರ್ಜೆಯಲ್ಲಿ ಉತ್ತೀರ್ಣಳಾಗುತ್ತಿದ್ದಳು. ಚಂಚಲೆಯ ವಿದ್ಯಾಪ್ರಗತಿಯನ್ನು ಕಂಡು ಕಮಲೆ ಕರುಬುತ್ತಿದ್ದಳು. ಏನಾದರೂ ನೆಪದಲ್ಲಿ ಯಾವಾಗಲೂ ಅವಳನ್ನು ಬಯ್ಯುತ್ತಿದ್ದಳು. ಅವಳ ಮೇಲೆ ನೆರೆಹೊರೆಯವರಿಗೂ ಸಹ ಚಾಡಿ ಹೇಳುತ್ತಿದ್ದಳು. ಊಟ ಉಪಚಾರಗಳಲ್ಲೂ ಮತ್ತು ತಿಂಡಿ ತೀರ್ಥಗಳಲ್ಲೂ ಸಹ ತನ್ನ ಮಕ್ಕಳಿಗೆ ಒಂದು ರೀತಿಯಾದರೆ ಚಂಚಲೆಗೆ ಇನ್ನೊಂದು ರೀತಿ. ತಿಂಡಿತಿನಿಸುಗಳನ್ನು ಕದ್ದಿಟ್ಟು ತನ್ನ ಮಕ್ಕಳಿಗೆ ಮಾತ್ರ ಕೊಡುತ್ತಿದ್ದಳು. ಕೃಷ್ಣಕಾಂತನು ಚಂಚಲೆಗಾಗುವ ಪಕ್ಷಪಾತವನ್ನು ಸಹಿಸಲಾರದೆ ಚಂಚಲೆಗೆ ಪ್ರತ್ಯೇಕವಾಗಿ ತಿಂಡಿಗಾಗಿ ಹಣಕೊಡುತ್ತಿದ್ದನು. ಚಂಚಲೆಗೆ ದುಡ್ಡು ಕೊಟ್ಟಿದ್ದು ಗೊತ್ತಾದಾಗ ಕಮಲೆ 'ಅವಳು ಮಾತ್ರ ನಿಮ್ಮ ಮಗಳು, ನನ್ನ ಮಕ್ಳೀಗೂ ನಿಮ್ಗೂ ಏನಾದರೂ ಸಂಬಂಧವಿದೆಯೇನು?' ಎಂದು ಹಂಗಿಸಿ ಮಾತನಾಡುತ್ತಿದ್ದಳು. ಚಂಚಲೆ ಇಷ್ಟೆಲ್ಲಾ ಕಿರುಕುಳಗಳಿಗೆ ಒಗ್ಗಿದ್ದರೂ ಧೃತಿಗೆಡದೆ ತನ್ನ ಹದಿನೆಂಟನೆಯ ವಯಸ್ಸಿನಲ್ಲಿ ಕಾಲೇಜು ಮೆಟ್ಟಿಲೇರಿದಳು. ಅವಳು ಕಾಲೇಜಿಗೆ ಹೋದಮೇಲೆ ಅವಳ ಅಜ್ಜಿ ತಾನು ಸಾಯುವ ಮುನ್ನ ಅವಳ ಹೆಸರಿನಲ್ಲಿ ಇಟ್ಟಿದ್ದ ಹಣದಿಂದ ಕೃಷ್ಣಕಾಂತನು ಅವಳಿಗೊಂದು ಸ್ಕೂಟರನ್ನು ಕೊಂಡು ಕೊಟ್ಟಿದ್ದನು. ಅವಳಿಗೆ ಸ್ಕೂಟರನ್ನು ಕೊಡಿಸಿದ್ದೇ ಒಂದು ದೊಡ್ಡ ಅಪರಾಧವಾಯಿತು. ಸ್ಕೂಟರಿಗೆ ಕೊಟ್ಟ ದುಡ್ಡು ಚಂಚಲೆಯ ಅಜ್ಜಿ ಇಟ್ಟಿದ್ದ ಹಣವೆಂದು ಎಷ್ಟು ಹೇಳಿದರೂ ಕಮಲೆ ಒಪ್ಪದೆ ಎಂಟಾನೆಂಟುದಿನ ಅದೇ ವಿಷಯದ ಮೇಲೆ ಗಂಡನ ಮೇಲೆ ಜಗಳವಾಡಿ ವಿಷಕಾರಿದಳು.

ಬರುಬರುತ್ತಾ ಕಮಲೆಯ ಆರ್ಭಟ ಹೆಚ್ಚಾಗಿ, ಕೃಷ್ಣಕಾಂತನ ಬಾಳು ಗೋಳಿನ ಕತೆಯಾಗಿತ್ತು. ಅವರಿಬ್ಬರ ನಡುವಿನ ವಿರಸ ಎಲ್ಲೆ ಮೀರಿತು. ಅವನನ್ನು ನಾಯಿಗಿಂತ ಕಡೆಯಾಗಿ ಕಾಣುತ್ತಿದ್ದಳು. ಮಾತುಮಾತಿಗೆ "ನಮ್ಮಪ್ಪ ನಿನ್ನ ಹತ್ತುಸಾವಿರ ರೂಪಾಯಿಗೆ ಕೊಂಡು ಕೊಂಡಿದ್ದ" ಎಂದು ತಿರಸ್ಕಾರದಿಂದ ಮಾತನಾಡುತ್ತಿದ್ದಳು. ಗೃಹಕೃತ್ಯದ ಖರ್ಚಿಗಾಗಿ ಎಷ್ಟು ದುಡ್ಡು ಕೊಟ್ಟರೂ ಸಾಲದೆಂದು ಗುಡುಗುಡಿಸುತ್ತಿದ್ದಳು. ಗಂಡನ ಶ್ರೇಯೋಭಿವೃದ್ಧಿ ತನಗೆ ಸಂಬಂಧವಿಲ್ಲವೆಂಬ ರೀತಿಯಲ್ಲಿ ಅವಳು ವರ್ತಿಸುತ್ತಿದ್ದಳು. ಅವಳು ಬಯಸುತ್ತಿದ್ದ ಆಡಂಬರದ ಜೀವನಕ್ಕೆ ಸಾಕಾಗುವಷ್ಟು ಹಣ ಗಳಿಸದಿದ್ದ ತನ್ನ ಗಂಡ ಮುಟ್ಠಾಳನೆಂದೇ ಅವಳು ಭಾವಿಸಿದ್ದಳು. ಸಾಮಾನ್ಯವಾಗಿ ಗಂಡನಿಗೆ ಕಷ್ಟ ಬಂದಾಗ ಹೆಂಡತಿ ವ್ಯಥೆ ಪಡುವುದು ಸ್ವಾಭಾವಿಕ. ಆದರೆ ಕಮಲೆಯ ವರ್ತನೆ ಇದಕ್ಕೆ ತದ್ವಿರುದ್ಧವಾಗಿತ್ತು. ಕೃಷ್ಣಕಾಂತನಿಗೆ ತೊಂದರೆಯಾದಷ್ಟೂ ಅವಳಿಗೆ ಸಂತೋಷವೆನಿಸುತ್ತಿತ್ತು. ಅವನನ್ನು ಯಾರಾದರೂ ಬೈದರೆ ಅವಳಿಗೆ ಹಿಡಿಸಲಾರದಷ್ಟು ಆನಂದ. ಅವನ ಹೊಗಳಿಕೆಯನ್ನು ಅವಳು ಎಂದೂ ಸಹಿಸುತ್ತಿರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಅವಳೊಡನೆ ಬಾಳುವುದಕ್ಕಿಂತ ಆತ್ಮಹತ್ಯೆ ಲೇಸೆಂದು ಕೃಷ್ಣಕಾಂತನಿಗೆ ಎಷ್ಟೋಸಾರಿ ಅನಿಸಿತ್ತು. ಆದರೆ ಮಕ್ಕಳನ್ನು ಅನಾಥರನ್ನಾಗಿ ಮಾಡಿ ಹೇಡಿಯಂತೆ ಸಾಯಲು ಅವನ ಮನಸ್ಸು ಒಪ್ಪಲಿಲ್ಲ. ವರದಕ್ಷಿಣೆಯ ಹಂಗಿನಿಂದ ಮುಕ್ತನಾಗಬೇಕೆಂದು ದೃಢ ಸಂಕಲ್ಪ ಮಾಡಿ, ೨-೩

ವರ್ಷಗಳ ಕಾಲ ಕಷ್ಟ ಪಟ್ಟು ಹಣವನ್ನು ಕೂಡಿಹಾಕಿ, ಹತ್ತು ಸಾವಿರ ರೂಪಾಯಿಗಳನ್ನು ಕಮಲೆಯ ಹೆಸರಿನಲ್ಲಿ ಬ್ಯಾಂಕಿನಲ್ಲಿ ಫಿಕ್ಸೆಡ್ ಡಿಪಾಜಿಟ್ ಇಟ್ಟು, ರಸೀದಿಯನ್ನು ಅವಳ ಕೈಗೆ ತಂದುಕೊಟ್ಟು, "ನಿನ್ನ ಋಣದಿಂದ ಇಂದು ಮುಕ್ತನಾಗಿದ್ದೇನೆ" ಎಂದು ಹೇಳಿದನು. ಇದರಿಂದಲೂ ಅವಳು ತೃಪ್ತಳಾದಂತೆ ತೋರಲಿಲ್ಲ. ಅವಳ ವರ್ತನೆಯಲ್ಲಿ ಸ್ವಲ್ಪವೂ ಬದಲಾವಣೆ ಆಗಲಿಲ್ಲ.

ಈಚೆಗೆ ಕೆಲವು ವರ್ಷಗಳಿಂದ ಅವನ ಆರೋಗ್ಯವೂ ಸರಿ ಇರಲಿಲ್ಲ; ಮನಸ್ಸೂ ಸಮಾಧಾನವಿರಲಿಲ್ಲ. ಚಂಚಲೆ ಪದವೀಧರಳಾಗಿ ಕಾಲೇಜನ್ನು ಬಿಟ್ಟಿದ್ದಳು. ಅವಳಿಗಾಗಿ ಎಷ್ಟೋ ಕಡೆ ವರಾನ್ವೇಷಣೆ ಮಾಡಿ, ವರನ ಕಡೆಯವರು ಕೇಳುತ್ತಿದ್ದ ದುಬಾರಿ ವರದಕ್ಷಿಣೆಯನ್ನು ಕೊಡಲಾಗದೆ, ನಿಸ್ಸಹಾಯಕವಾಗಿ ಪರಿತಪಿಸುತ್ತಿದ್ದನು. ವರದಕ್ಷಿಣೆಯನ್ನು ಅಪೇಕ್ಷಿಸದಿದ್ದ ಕೆಲವು ಗಂಡುಗಳನ್ನು ಚಂಚಲೆ ಒಪ್ಪದೆ ತಿರಸ್ಕರಿಸಿದ್ದಳು. ಚಂಚಲೆಗೇ ಆಗಲೇ ಇಪ್ಪತ್ತೈದು ವರ್ಷವಾಗಿತ್ತು. ಮಗಳಿಗೆ ಮದುವೆ ಮಾಡದಿರುವುದು ತನ್ನ ಭಾಗದ ದೊಡ್ಡ ಅಪರಾಧವೆಂದು ಅವನು ಕೊರಗುತ್ತಿದ್ದನು. ಅವನ ಕಷ್ಟ ಕಾರ್ಪಣ್ಯಗಳು ದಿನ ದಿನಕ್ಕೂ ಹೆಚ್ಚಾಗುತ್ತಿದ್ದವು. ಒಂದು ಕಡೆ ಪ್ರಾಪ್ತವಯಸ್ಸಿಗೆ ಬಂದ ಮಗಳಿಗೆ ಮದುವೆಯಾಗಿಲ್ಲವೆಂಬ ಚಿಂತೆ; ಇನ್ನೊಂದು ಕಡೆ ಕಮಲೆಯ ಅಸಹನೀಯ ವರ್ತನೆ; ಮತ್ತೊಂದು ಕಡೆ ಹಣದ ಅಡಚಣೆ. ಈ ಕಾರಣಗಳಿಂದ ಅವನ ಮನಸ್ಸು ಮತ್ತು ದೇಹ ಜರ್ಜರಿತವಾಗಿದ್ದವು.

ಶ್ರೀಪುರದ ರೀಜನಲ್ ಟ್ರಾನ್ಸ್‌ಪೋರ್ಟ್ ಆಫೀಸರ್ ನಿರಂಜನ ಮತ್ತು ಕಮಲೆಯ ಒಡನಾಟ ಕೃಷ್ಣಕಾಂತನಿಗೆ ಬಿಡಿಸಲಾರದ ಒಗಟಾಗಿತ್ತು. ಹೆಂಡತಿಯ ಶೀಲವನ್ನು ಅನಾವಶ್ಯಕವಾಗಿ ಶಂಕಿಸುವುದು ಅವನಿಗೆ ಸರಿಯೆನಿಸಿರಲಿಲ್ಲ. ಆದರೆ ಅವರೀರ್ವರ ಮೈತ್ರಿಯನ್ನು ಸಹಿಸುವುದು ಕಷ್ಟವಾಗಿತ್ತು. ನಿರಂಜನನು ಕಮಲೆಯ ಅಣ್ಣನ ಹೆಂಡತಿಯ ತಮ್ಮನಾಗಿದ್ದನು. ಕಮಲೆಯೂ ನಿರಂಜನನೂ ವಿಷ್ಣುಪುರದಲ್ಲಿ ಒಂದೇ ಶಾಲೆಯಲ್ಲಿ ಓದುತ್ತಿದ್ದವರು. ಅವರಿಬ್ಬರೂ ಒಂದೇ ಓರಗೆಯವರಾಗಿದ್ದರು. ನಿರಂಜನನು ಹಿಂದೆ ಸಿರಗೂರು ಜಿಲ್ಲೆಯಲ್ಲಿ ರೀಜನಲ್ ಟ್ರಾನ್ಸ್‌ಪೋರ್ಟ್ ಆಫೀಸರಾಗಿದ್ದನು. ಅವನು ಸಿರಗೂರಿನಲ್ಲಿದ್ದಾಗ ಕಮಲೆ ತನ್ನ ಬಂಧುವೆಂಬ ಕಾರಣದಿಂದ ಅವಳ ಯೋಗಕ್ಷೇಮ ವಿಚಾರಣೆಗಾಗಿ ಆಗಾಗ ಶ್ರೀಪುರಕ್ಕೆ ಬಂದು ಹೋಗುತ್ತಿದ್ದನು. ನಿರಂಜನನು ತಿಂಗಳಿಗೆ ಐನೂರು ರೂಪಾಯಿಗಳ ಸಂಬಳವನ್ನು ಪಡೆಯುವ ಅಧಿಕಾರಿಯಾಗಿದ್ದನು. ಆದರೆ ಅವನ ಪ್ರತಿ ತಿಂಗಳ ಅಕ್ರಮ ಸಂಪಾದನೆ ಐದುಸಾವಿರ ರೂಪಾಯಿಗಳನ್ನು ಮೀರುತ್ತಿತ್ತು. ಅವನು ದೊಡ್ಡ ಅಧಿಕಾರಿಯಂತೆ ದೊಡ್ಡದೊಂದು ಕಾರನ್ನು ಇಟ್ಟುಕೊಂಡು, ಮೋಜಿನ ಜೀವನವನ್ನು ನಡೆಸುತ್ತಿದ್ದನು. ಅವನು ಸ್ಫುರದ್ರೂಪಿಯಾಗಿ, ಅತ್ಯಂತ ಸುಸಂಸ್ಕೃತನಂತೆ, ಅತ್ಯಾಧುನಿಕ ರೀತಿಯಲ್ಲಿ ಪೋಷಾಕನ್ನು ಧರಿಸುತ್ತಿದ್ದನು. ಅಕ್ರಮ ಸಂಪಾದನೆಯವರಿಗಿರ ಬೇಕಾದ ಸಕಲ ದುರ್ವ್ಯಸನಗಳೂ ಅವನಲ್ಲಿ ಕೇಂದ್ರೀಕೃತವಾಗಿದ್ದವು. ವಿದ್ಯೆಯಲ್ಲಾಗಲೀ; ಬುದ್ಧಿಯಲ್ಲಾಗಲೀ; ಗುಣದಲ್ಲಾಗಲೀ; ಜನಾನುರಾಗದಲ್ಲಾಗಲೀ, ಕೃಷ್ಣಕಾಂತನು

ನಿರಂಜನನಿಗಿಂತ ಲಕ್ಷಪಾಲು ಮೇಲಾಗಿದ್ದನು. ಆದರೆ ಕಮಲೆಯ ದೃಷ್ಟಿಯಲ್ಲಿ ಕೃಷ್ಣಕಾಂತನು ಕೆಲಸಕ್ಕೆ ಬಾರದ ಪಶುವಾಗಿದ್ದನು. ನಿರಂಜನನು ಆದರ್ಶವ್ಯಕ್ತಿಯಾಗಿದ್ದನು. ನಿರಂಜನನು ತನ್ನ ಬಂಧುವೆಂದು ಬಹಳ ಹೆಮ್ಮೆಯಿಂದ ನೆರೆಹೊರೆಯವರ ಹತ್ತಿರ ಹೇಳುತ್ತಿದ್ದಳು. ನಿರಂಜನನನ್ನು ಕಂಡರೆ ಕೃಷ್ಣಕಾಂತನಿಗೂ, ಚಂಚಲೆಗೂ ಆಗುತ್ತಿರಲಿಲ್ಲ. ಆದರೆ ಅವನು ಕಮಲೆಯ ಬಂಧುವೆಂಬ ಕಾರಣದಿಂದ ಸುಮ್ಮನಿರುತ್ತಿದ್ದರು.

ಕೃಷ್ಣಕಾಂತನು ಇವೇ ಮುಂತಾದ ವಿಚಾರಗಳನ್ನು ಯೋಚಿಸುತ್ತಾ ಮಲಗಿರುವಾಗ ಮನೆಯ ಮುಂದುಗಡೆ ಯಾವುದೋ ಕಾರು ಬಂದಂತೆ ಶಬ್ದವಾಯಿತು. ಯಾರೋ ಕಾರಿನಿಂದ ಇಳಿದಂತಾಯಿತು. ಆಗಲೇ ರಾತ್ರಿ ಎಂಟೂವರೆ ಗಂಟೆಯಾಗಿತ್ತು. ಕೃಷ್ಣಕಾಂತನು ನಾರಾಯಣನನ್ನು ಕೂಗಿ "ಯಾರೋ ಬಂದಿದ್ದು?" ಎಂದು ಕೇಳಿದನು. "ದೊಡ್ಡಮ್ಮ ಬಂದ್ರು" ಎಂದು ನಾರಾಯಣ ಹೇಳಿದನು. "ಅವರನ್ನು ಬರಹೇಳು" ಎಂದು ಕೃಷ್ಣಕಾಂತನು ನಾರಾಯಣನಿಗೆ ಆಜ್ಞಾಪಿಸಿದನು. ಐದು ನಿಮಿಷಗಳ ತರುವಾಯ ಕಮಲೆ ಠೀವಿಯಿಂದ ಕೃಷ್ಣಕಾಂತನ ಕೊಠಡಿಗೆ ಬಂದು "ಯಾಕೆ ಕರೆದದ್ದು?" ಎಂದು ಬಿಗುಮಾನದಿಂದ ಕೇಳಿದಳು.

"ಎಲ್ಲಿಗೆ ಹೋಗಿತ್ತು ಸವಾರಿ, ಇಷ್ಟು ಹೊತ್ನಾಗೆ? ಜ್ವರ ಅಂತ ಮನೀಗೆ ಬಂದ್ರೆ ನೀನೂ ಇಲ್ಲ; ಚಂಚಲಾನೂ ಇಲ್ಲ."

"ಜ್ವರ ಬಂದ್ರೆ ನಾಯೇನ್ ಮಾಡ್ಬೇಕಾಗಿತ್ತು? ಅಲ್ಲೇ ಆಫೀಸಿಂದ ಬರುವಾಗ ಡಾಕ್ಟರ್ ಹತ್ರ ಔಷಧ ತರ್ಬೇಕಾಗಿತ್ತು. ಮನೇಲಿ ಇದ್ದೂ ಇದ್ದೂ ಬೇಜಾರಾಗಿತ್ತು. ಕ್ಲಬ್ಬಿಗೆ ಹೋಗಿದ್ದೆ."

"ಯಾಕೆ ಸುಳ್ಳು ಹೇಳ್ತಿಯಾ? ಈಗ್ತಾನೇ ನಿರಂಜನನ ಕಾರ್‍ನಾಗೆ ಬಂದಿಳಿದೆ."

"ನೀವೇನ್ ನನ್ನ ಕೊಂಡ್ಕೊಂಡೀರೇನು, ಯಾವಾಗ್ಲೂ ಮನೇಲೇ ಬಿದ್ದಿರೋಕೆ? ಬೇಜಾರು ಅಂತ ಕ್ಲಬ್ಬಿಗೆ ಹೋಗಿದ್ದೆ. ಅಲ್ಲಿಂದ ಬರುವಾಗ ನಿರಂಜನ ಭಾವನ ಮನೀಗೆ ಹೋಗಿದ್ದೆ. ಅವರು ಕಾರಾಗೆ ಬಿಟ್ಟು ಹೋದ್ರು, ನೆಂಟರಿಷ್ಟರ ಮನೀಗೂ ಹೋಗ್ಬಾರದು ಅಂತ ಹೇಳೋಕೆ ನಾಯೇನು ನಿಮ್ಮ ಗುಲಾಮಳೇನು?"

"ನಾ ನಿನ್ನ ಕೊಂಡುಕೊಂಡಿಲ್ಲ; ನೀ ನನ್ನ ಕೊಂಡುಕೊಂಡಿಲ್ಲ. ಹೋಗ್ಲಿ ಬಿಡು ತಪ್ಪಾದ್ರೆ ಕ್ಷಮಿಸು. ಚಂಚಲೆ ಎಲ್ಲೀಗ್ಹೋದ್ಲು? ಒಂಬತ್ತು ಗಂಟೆ ಆಗ್ತಾ ಬಂತು. ಇನ್ನೂ ಬರಲೇ ಇಲ್ಲ."

"ನಿಮ್ಮುದ್ದಿನ ಮಗಳ ವಿಚಾರ ನಂಗೇನ್ಗೊತ್ತು? ಅವಳು ನಂಗೇನು ಹೇಳಿ ಕೇಳಿ ಹೋಗ್ತಾಳೇನು? ಅವಳಿಗೆ ಸ್ಕೂಟರ್ ಕೊಡ್ಸೀರಿ. ಊರೆಲ್ಲಾ ಕೇರೆಲ್ಲಾ ತಿರ್ಗತಾಳೆ ದಿಂಡೆ ಬಸವೀ ಹಾಗೆ. ಮದುವೆ ಆಗ್ದೇ ಇದ್ದ ಹೆಣ್ಮಕ್ಳು ಎಲೆಮರೆ ಕಾಯಿದ್ದ ಹಾಗೆ ಇರ್ಬೇಕು. ಅವಳಿಗೆ ಯಾರದ್ದಾದ್ರೂ ಅಂಕೆ ಸಂಕೆ ಇದ್ರೆ ತಾನೆ? ಬಿ.ಎ. ಪಾಸ್ ಮಾಡಿದ್ಮೇಲಂತೂ ಅವಳನ್ನ ಯಾರೂ ಮಾತಾಡಿಸೋ ಹಾಗೇ ಇಲ್ಲ. ನಾನೂ ಅಂದ್ರೆ ಅವಳಿಗೆ ಕಸಕ್ಕೆ

ಸಮಾನ. ಯಾವನಾದ್ರೂ ಒಂದು ಗಂಡು ಗೊತ್ತು ಮಾಡಿ, ಗಡಿದಾಟಿಸಿ ಬಿಡಿ ಅಂದ್ರೆ ನೀವು ಕೇಳ್ಬೇಕಲ್ಲಾ."

"ಅವಳ ಮ್ಯಾಲೆ ನೀಯೇನಾರೂ ಹೇಳ್ತಾನೇ ಇರ್ಬೇಕಲ್ಲ; ಮಲತಾಯಿ ಮತ್ಸರ ಎಲ್ಲಿ ಬಿಡ್ತದೆ? ಯಾವನಿಗಾರೂ ಕೊಟ್ಟು ಗಡಿ ದಾಟ್ಸೋಕೆ ಅವಳೇನು ಅಷ್ಟು ಅಗ್ಗದ ಮಾಲೂ ಅಂತ ಹೇಳಿ ನೀ ತಿಳಕೊಂಡೀಯೇನು? ಎರಡು ವರ್ಷದಿಂದ ಗಂಡು ಹುಡುಕ್ತಾ ಇದ್ದೀನಿ. ನಿಂಗೆ ಗೊತ್ತಿಲ್ಲೇನು? ಬಾಯಿಗೆ ಬಂದ ಹಾಗೆ ವರದಕ್ಷಿಣೆ ಕೇಳ್ತಾರೆ. ನಾಯೆಲ್ಲಿಂದ ತರಲಿ, ಈಗಿನ ಕಾಲದ ಹುಡುಗರು ಕೈ ತುಂಬಾ ವರದಕ್ಷಿಣೆ ಸಿಕ್ಕರೆ ಹಾದರಗಿತ್ತೀನಾದ್ರೂ ಮದುವೆ ಆಗ್ತಾರೆ. ಮನೆತನ, ವಿದ್ಯೆ, ಬುದ್ಧಿ, ಗುಣ, ಇವುನ್ನೆಲ್ಲಾ ಎಲ್ಲಿ ನೋಡ್ತಾರೆ? ಅವರಿಗೆ ಬೇಕಾದ್ದು ದುಡ್ಡೊ, ದುಡ್ಡೊ, ದುಡ್ಡೊ."

"ಬೇರೆಯವರಿಗೆಲ್ಲಾ ವರ ಸಿಕ್ತಾರೆ. ನಿಮಗೆ ಮಾತ್ರ ಸಿಕ್ಕೋದಿಲ್ಲ. ನಮ್ಮಕ್ಕ ರಮಾ ಹೋದ ವರ್ಷ ಇಬ್ಬರು ಹೆಣ್ಮಕ್ಳಿಗೆ ಒಂದೇ ಸಾರಿ ಮದುವೆ ಮಾಡಿದ್ಲು. ನಮ್ಮ ಎದುರು ಮನೆ ನಾರಾಯಣದಾಸ್ ಮೂರು ವರ್ಷಕ್ಕೆ ಮೂವರು ಹೆಣ್ಣು ಮಕ್ಕಳನ್ನ ಮದುವೆ ಮಾಡಿಕೊಟ್ರು."

"ನಿಮ್ಮಕ್ಕನ ಗಂಡ ಎಕ್ಸೈಜ್ ಇನ್ಸ್‌ಪೆಕ್ಟರು. ಸಂಬಳದ ಜೊತೀಗೆ ಕೈತುಂಬಾ ಗಿಂಬಳ ಬರ್ತದೆ. ಎದುರು ಮನೆ ದಾಸಗೆ ಬ್ಲಾಕ್ ಮಾರ್ಕೆಟ್ ದುಡ್ಡು ಬರ್ತದೆ. ನನ್ಹತ್ರ ಕಳ್ಳ ದುಡ್ಡು ಯಾವುದೂ ಇಲ್ಲ. ನಾ ಯೇನು ಮಾಡ್ಲಿ?"

"ನನ್ನ ಭಾವನ ಬೂಡ್ಸಿನ ಯೋಗ್ಯತೆ ನಿಮಗಿಲ್ಲ. ಅವರ ಯೋಗ್ಯತೇಲಿ ಕಾಲುಭಾಗ ನಿಮಗಿದ್ದಿದ್ರೆ ನಮಗ್ಯಾಕೆ ಈ ಕಷ್ಟ ಬರ್ತಾಯಿತ್ತು? ಈ ಜಗತ್ತಿನಲ್ಲಿ ನೀವೊಬ್ಬರೇ ಪ್ರಾಮಾಣಿಕರು. ಉಳಿದವರೆಲ್ಲಾ ಅಪ್ರಮಾಣಿಕರು!"

"ಹೌದು ಕಣೇ, ನಿನ್ನ ಅಕ್ಕನ ಗಂಡನೂ ಯೋಗ್ಯ! ಎದುರು ಮನೆದಾಸನೂ ಯೋಗ್ಯ! ನಾನೇ ಅಯೋಗ್ಯ. ಈಗಿನ ಕಾಲ್ದಾಗೆ ಲಂಚಕೋರರೂ, ಲಾಭಕೋರರೂ ಯೋಗ್ಯರು; ಸತ್ಯವಂತರೆಲ್ಲಾ ಅಯೋಗ್ಯರು."

"ನಿಮ್ಹತ್ರ ಮಾತಾಡೋದೂ ಒಂದೇ, ನಾಯೀ ಬಾಯಿಗೆ ಕೋಲು ಹಾಕೋದೂ ಒಂದೇ. ಯಾವಾಗ್ಲೂ ಚುಚ್ಚೋ ಮಾತೇ. ನಿಮ್ಮ ಮುದ್ದಿನ ಮಗಳನ್ನ ಮದುವೆ ಮಾಡ್ದೆ ಮನೇಲೇ ಇಟ್ಟುಕೊಳ್ಳಿ. ನಮ್ಮಪ್ಪನ ಗಂಟೇನು ಹೋದದ್ದು? ಏನಾದ್ರೂ ಹೆಚ್ಚೂ ಕಡಿಮೆಯಾದ್ರೆ, ನಾಳೇ ಇಡೀ ಮನೆತನಕ್ಕೇ ಕೆಟ್ಟಮಾತು ಬಂದ್ರೆ, ಏನ್ಮಾಡೋದು ಅಂತ ನನ್ನ ಯೋಚನೆ. ಕ್ವಾಟೆ ಕಡೇಗೆ ಆಗಾಗ ಹೋಗ್ತಾಳೆ ಅಂತ ಮೊನ್ನೆ ಯಾರೋ ನಮ್ಮ ಕ್ಲಬ್ಬಾಗೆ ಹೇಳ್ತಾಯಿದ್ರು."

"ಸಾಕೇ, ಸುಮ್ನಿರೆ, ನಿನ್ನಮ್ಯಾಲೂ ಹೇಳ್ತಾರೆ. ನಿರಂಜನನ ಜತೇಲಿ ನೀನು ಯಾವಾಗ್ಲೂ ತಿರಗ್ತೀಯಾ ಅಂತ ಹೇಳ್ತಾರೆ."

"ನನ್ನ ಮ್ಯಾಲೆ ಯಾರು ಹೇಳ್ತಾರೆ? ನೀವೇ ಹೇಳೋದು. ಇನ್ಯಾರು ಹೇಳ್ತಾರೆ? ನಿರಂಜನ ನನ್ನ ನೆಂಟ. ಅವನ ಜತೇಲಿ ಹೋಗ್ತೀನಿ. ಅದರಲ್ಲಿ ತಪ್ಪೇನು ಬಂತು?

ನೀವು ಕೇಸಿನ ನೆಪದಲ್ಲಿ ಪದ್ಮಾವತಿ ಮನೆಗೆ ಹೋಗ್ತೀರಲ್ಲಾ, ಆ ಬಗ್ಗೆ ಯಾರೂ ಹೇಳೋದಿಲ್ಲ ಅಲ್ವೇ?"

"ಪದ್ಮಾವತಿ ಮೇಲೆ ಹೇಳಿದ್ರೆ ನಿನ್ನ ಬಾಯಲ್ಲಿ ಹುಳ ಬಿದ್ದಾವು."

"ನಿರಂಜನನ ಮೇಲೆ ಹೇಳಿದ್ರೆ ನಿಮ್ಮ ಬಾಯಾಗೆ ಹುಳ ಬಿದ್ದಾವು. ಕೇಳಬಾರದ ಮಾತೆಲ್ಲ ನಿಮ್ಮಿಂದ ಕೇಳಾಯ್ತು. ಈಗ ನಿರಂಜನನ ಮೇಲೆ ಕತೆ ಕಟ್ಟೋಕೆ ಷುರು ಮಾಡೀರಿ; ಏನೇನು ಹೇಳ್ಬೇಕೋ ಹೇಳಿಬಿಡಿ. ನಿಮ್ಮ ಕೈ ಹಿಡಿದಿದ್ದಕ್ಕೆ ಒಡವೆ ವಸ್ತೂನೂ ಇಲ್ಲ; ಸುಖ ಸಂಪತ್ತೂ ಇಲ್ಲ; ಕೊನೆಗೆ ಒಳ್ಳೇಮಾತೂ ಇಲ್ಲ. ಮದ್ವೆಗೆ ಮುಂಚೆ ನಮ್ಮಪ್ಪ ಹೇಳಿದ್ದೇ ಹೇಳಿದ್ದು, ಅಳಿಯ ಹೈಕೋರ್ಟು ಜಡ್ಜ್ ಆಗ್ತಾನೆ ಅಂತ."

"ನನ್ನ ಕೈ ಹಿಡಿದು ನೀನೂ ಕೆಟ್ಟೆ; ನಿನ್ನ ಕೈ ಹಿಡಿದು ನಾನೂ ಕೆಟ್ಟೆ. ಮನಸ್ಸು ಮಾಡಿದ್ರೆ ನಾನು ಎಂದೋ ಜಡ್ಜ್ ಆಗ್ತಾ ಇದ್ದೆ; ನಾ ಆದರ್ಶಕ್ಕೋಸ್ಕರ ಬಾಳಿದೆ."

"ಕೈಲಾಗದೆ ಇದ್ದೋರೆಲ್ಲಾ ಹೀಗೇ ಬಡಾಯಿ ಕೊಚ್ಚೋದು. ನಿಮ್ಮ ಜೂನಿಯರು ಶಂಕರಮೂರ್ತಿನ "ಬೆಪ್ಪ ಶಂಕರ", "ಬೆಪ್ಪಶಂಕರ" ಅಂತ ನೀವೇ ಕರೀತಾ ಇದ್ರಿ. ಇಂದು ಅವ ಹೈ ಕೋರ್ಟು ಜಡ್ಜ್; ನೀವು ಕಾಸಿಲ್ಲದ ದಾಸಯ್ಯ. ಆದರ್ಶ ಅಂತೆ ಆದರ್ಶ! ನಿಮಗೆ ಆದರ್ಶದ ಕೋಡು ಬಂದಿದ್ದೇನು? ಅವನಿಗೆ ಆದರ್ಶದ ಕೋಡು ಮುರಿದದ್ದೇನು?"

"ನೀನು ಮೂರ್ಖಳು. ಆದರ್ಶದ ಬಗ್ಗೆ ನಿನಗೇನು ಗೊತ್ತಾಗ್ತದೆ? ನಾನೂ ಶಂಕರಮೂರ್ತಿ ಹಾಗೆ ಇದ್ದಬದ್ದವರ ಕೈಕಾಲು ಕಟ್ಟಿಕೊಂಡಿದ್ದರೆ ಹೈಕೋರ್ಟು ಜಡ್ಜ್ ಆಗಿ ಎಷ್ಟೋವರ್ಷ ಆಗಿರ್ತಿತ್ತು. ನಾನು ಮನೀಗೇ ಬಂದ ಡಿಸ್ಟ್ರಿಕ್ಟ್ ಜಡ್ಜಿ ಕೆಲ್ಸಾನಾ ಬ್ಯಾಡ ಅಂದವನು."

"ಹೌದಪ್ಪಾ, ನಿಮ್ಮಂತ ಅಭಾವ ವೈರಾಗಿಗಳು ಹೀಗೇ ಹೇಳೋದು."

ಈ ರೀತಿ ಗಂಡಹೆಂಡಿರ ಮಧ್ಯೆ ವಾಗ್ವಾದ ನಡೆಯುತ್ತಿರುವಾಗ ಹೊರಗಡೆ ಸ್ಕೂಟರ್ ಶಬ್ದವಾಯಿತು. ಚಂಚಲೆ ಬಂದಳೆಂದು ತಿಳಿದು, ಕಮಲೆ ಸೊಟ್ಟ ಮೋರೆ ಮಾಡಿಕೊಂಡು, ಅಡುಗೆಮನೆ ಕಡೆಗೆ ಹೊರಟು ಹೋದಳು. ಐದು ನಿಮಿಷಗಳ ನಂತರ ಚಂಚಲೆ ತಂದೆಯ ಕೊಠಡಿಗೆ ಹೋಗಿ, "ಏನಪ್ಪಾಜೀ, ಇಷ್ಟುಹೊತ್ತಿಗೇ ಮಲಗಿದ್ದೀರಿ? ಯಾಕೆ ಆರೋಗ್ಯ ಸರಿ ಇಲ್ಲವೇ?" ಎಂದು ಕಳವಳದಿಂದ ಕೇಳಿದಳು. ಕೃಷ್ಣಕಾಂತನು ತನಗೆ ಜ್ವರ ಎಂದು ಹೇಳಿದೊಡನೆ ಚಂಚಲೆ ತಂದೆಯ ಪಕ್ಕದಲ್ಲಿ ಮಂಚದ ಮೇಲೆ ಕುಳಿತು ಅವನ ಹಣೆಯನ್ನೂ ಮೈಯನ್ನೂ ಮುಟ್ಟಿನೋಡಿ "ಅಪ್ಪಾಜೀ, ತುಂಬಾ ಜ್ವರವಿದೆ. ಡಾಕ್ಟರನ್ನ ಕರೆದುಕೊಂಡು ಬರಲೇ; ಏನಾದರೂ ಕುಡೀತೀರಾ? ಎಂದು ಪ್ರೇಮ ಪೂರ್ವಕವಾಗಿ ಕೇಳಿದಳು. ಕೃಷ್ಣಕಾಂತನು "ಆ ಜಗಳಗಂಟೀಗೂ, ನನ್ನ ಮಗಳಿಗೂ ಎಷ್ಟು ವ್ಯತ್ಯಾಸ!" ಎಂದು ಮನಸ್ಸಿನಲ್ಲಿಯೇ ಅಂದುಕೊಂಡು,

"ಈಗ ಡಾಕ್ಟರು ಬ್ಯಾಡಮ್ಮಾ. ನಾಳೆ ಜ್ವರ ಬಿಡದೆ ಇದ್ರೆ ನೋಡೋಣ. ನಾರಾಯಣನಿಗೆ ಆಮೇಲೆ ಹಾಲು ಕೊಡು ಅಂತ ಹೇಳೀನಿ; ಈಗೇನೂ ಬೇಡ. ನೀನು ಇಷ್ಟು ರಾತ್ರಿಯವರೆಗೆ ಎಲ್ಲಿಗೆ ಹೋಗಿದ್ದೆ?"

"ನಾನು ನನ್ನ ಫ್ರೆಂಡ್ ವಿಮಲ ಮನೆಗೆ ಹೋಗಿದ್ದೆ. ಕೇರಂ ಆಡ್ತಾ ಹೊತ್ತು ಹೊದದ್ದೇ ಗೊತ್ತಾಗಲಿಲ್ಲ."

"ನಿನ್ನ ಹತ್ರ ಸ್ವಲ್ಪ ಮಾತಾಡೋದಿದೆ. ಆ ಬಾಗಿಲು ಹಾಕು."

ಚಂಚಲೆ ಕೊಠಡಿಯ ಕದವನ್ನು ಮುಚ್ಚಿ, ತಂದೆಯ ಮಂಚದ ಮೇಲೆ ಕುಳಿತು, "ಏನಪ್ಪಾಜೀ" ಎಂದು ಪ್ರಶ್ನಿಸಿದಳು.

"ನೀನು ಸಿರಗೂರು ಡಿಸ್ಟ್ರಿಕ್ಟ್ ಕಾಂಗ್ರೆಸ್ ಪ್ರೆಸಿಡೆಂಟ್ ಗೋಪಾಲನ ವಿಚಾರ ಕೇಳಿದ್ದೀಯೇನು?"

"ಆಗಾಗ ನ್ಯೂಸ್ ಪೇಪರ್ನಲ್ಲಿ ಅವರ ಹೆಸರು ಬರ್ತಾ ಇದೆ. ಅಷ್ಟೇ ಹೊರತು ಬಾಕಿ ವಿಚಾರ ನಂಗೆ ಗೊತ್ತಿಲ್ಲ. ಅವರ ವಿಚಾರ ಯಾಕೆ ಅಪ್ಪಾಜೀ?"

"ಆತನಿಗೆ ಇನ್ನೂ ಮದುವೆಯಾಗಿಲ್ಲ. ಆಗರ್ಭ ಶ್ರೀಮಂತ. ಗ್ರಾಜುಯೇಟು, ತುಂಬಾಯೋಗ್ಯ, ಪುರುಷೋತ್ತಮಬಾಬುಗಳ ಮುಖಾಂತರ ಅವನಿಗೆ ಹೇಳಿಕಳಿಸಿದ್ದೆ. ಬಾಬುರವರು ನನಗೋಸ್ಕರ ಶ್ರಮಪಟ್ಟು ಅವನನ್ನ ಒಪ್ಪಿಸಿದ್ದಾರೆ."

"ಏನು ಒಪ್ಪಿದ್ದಾರೆ ಅಪ್ಪಾಜಿ?"

"ನಿನ್ನನ್ನ ಮದುವೆಯಾಗಲು ಒಪ್ಪಿರುತ್ತಾರಂತೆ."

"ಅವರು ಒಪ್ಪಿರಬಹುದು; ನಾನು ಒಪ್ಪಬೇಕಲ್ಲ."

"ನಿನಗೇನು ಬುದ್ಧಿಗಿದ್ದಿ ಇದೆಯೋ ಇಲ್ಲವೋ? ಈಗಾಗಲೇ ಇಪ್ಪತ್ತೈದು ವರ್ಷ ಆಯಿತು. ಇನ್ನು ಮೂರ್ನಾಲ್ಕು ವರ್ಷ ಹೋದರೆ ನಿನ್ಯಾರು ಮದುವೆ ಆಗ್ತಾರೆ? ಹೆಣ್ಮಕ್ಕಳು ಮೂವತ್ತು ವರ್ಷ ದಾಟಿದ ಮ್ಯಾಲೆ ಜನ ಮುದುಕಿ ಅಂತಾರೆ. ನನಗೂ ವರ ಹುಡ್ಕಿಹುಡ್ಕಿ ಸಾಕಾಗಿ ಹೋಯಿತು. ಇನ್ನು ಎಷ್ಟು ಕಾಲ ನೀನು ಹೀಗೆ ಇರಬಲ್ಲೆ! ಈಚೆಗೆ ನನ್ನ ಆರೋಗ್ಯಾನೂ ಸರಿಯಿಲ್ಲ. ಅಕಸ್ಮಾತ್ ನಾ ಸತ್ತರೆ ನಿನ್ನ ಗತಿ ಏನು? ಗೋಪಾಲ ವರದಕ್ಷಿಣೆ ಕೇಳ್ತಾ ಇಲ್ಲ. ಎಲ್ಲಾ ರೀತಿಯಲ್ಲೂ ನಿನಗೆ ಅನುರೂಪನಾದ ವರ. ಸ್ವಲ್ಪ ವಯಸ್ಸು ಜಾಸ್ತಿಯಾಗಿರಬಹುದು ಅಷ್ಟೇ. ಮೂವತ್ತೈದು ವರ್ಷ ಆಗಿರಬಹುದು. ರಾಜಕಾರಣದಲ್ಲಿ ಅವನಿಗೆ ಒಳ್ಳೆ ಭವಿಷ್ಯವಿದೆ. ಚಂಚಲಾ ನೀನು ಸುಖವಾಗಿ ಇದ್ದರೆ, ನಾನು ಸುಖಿ. ನನ್ನನ್ನು ನಿರಂತರ ದುಃಖಕ್ಕೆ ಈಡು ಮಾಡಬೇಡ" ಎಂದು ಹೇಳುತ್ತಾ ಹನಿತುಂಬಿದ ಕಣ್ಣುಗಳನ್ನು ಕರವಸ್ತ್ರದಿಂದ ಒರಸಿಕೊಳ್ಳತೊಡಗಿದನು.

ಚಂಚಲೆಗೂ ಅಳು ಬಂತು. ಸ್ವಲ್ಪಕಾಲ ಮೌನವನ್ನು ತಾಳಿ ಸುಮ್ಮನಿದ್ದಳು ಕ್ರಾಂತಿಸೇನೆಯ ಅಧಿಪತಿ ಶಂಕರನು ತನ್ನನ್ನು ಮದುವೆಯಾಗಲು ಒಪ್ಪಿದ್ದಾನೆಂದು ತಂದೆಗೆ ಹೇಳಬೇಕೆಂದು ಮನಸ್ಸು ಮಾಡಿದಳು. ಆದರೆ ಅವಳ ಅಂತರಾತ್ಮ "ಸ್ವಲ್ಪ ತಾಳು, ದುಡುಕಬೇಡ. ಇನ್ನೊಮ್ಮೆ ಹೇಳಿದರಾಯ್ತು" ಎಂದು ನುಡಿದಂತೆ ಭಾಸವಾಯಿತು.

ಏನೋ ಸ್ವಲ್ಪ ಯೋಚಿಸಿದವಳಂತೆ ಇದ್ದು, ನಂತರ ತಂದೆಯನ್ನು ಕುರಿತು, "ಅಪ್ಪಾಜೀ ಈ ಜಗತ್ತಿನಲ್ಲಿ ನೀವಲ್ಲದೆ ನನಗಿನ್ಯಾರು ಇದ್ದಾರೆ? ನೀವು ನನಗೋಸ್ಕರ ಎಷ್ಟು ಕೊರಗುತ್ತೀರೆಂಬುದು ನನಗೆ ಗೊತ್ತಿದೆ. ನಿಮ್ಮ ಮನಸ್ಸನ್ನು ನೋಯಿಸಬೇಕೆಂಬ ಉದ್ದೇಶ ಸ್ವಲ್ಪವೂ ನನಗಿಲ್ಲ. ನನ್ನ ಫ್ರೆಂಡ್ ವಿಮಲ, ಅವಳ ದೂರದ ಬಂಧು ಒಬ್ಬರನ್ನು ಮದುವೆಯಾಗಬೇಕೆಂದು ನನ್ನನ್ನು ಪೀಡಿಸುತ್ತಿದ್ದಾಳೆ. ಅವರು ವರದಕ್ಷಿಣೆ ಅಪೇಕ್ಷಿಸುವುದಿಲ್ಲವೆಂದೂ, ತುಂಬ ಯೋಗ್ಯರೆಂದೂ ಅವಳು ಹೇಳುತ್ತಾಳೆ. ಅವರು ಯಾವುದೋ ಬಿಸಿನೆಸ್ ಮಾಡುತ್ತಾರಂತೆ. ಇನ್ನು ಹದಿನೈದು ಇಪ್ಪತ್ತು ದಿನಗಳೊಳಗಾಗಿ ಅವರನ್ನು ಇಲ್ಲಿಗೆ ಕರೆಯಿಸುವುದಾಗಿ ನನಗೆ ಹೇಳಿದ್ದಾಳೆ. ಅಲ್ಲಿಯವರೆಗೆ ನನಗೆ ಅವಕಾಶ ಕೊಡಿ. ಅವಳು ಹೇಳಿದ ಆ ವರ ನನಗೆ ಒಪ್ಪಿಗೆಯಾದರೆ ನಾನು ಅವರನ್ನು ಮದುವೆಯಾಗುತ್ತೇನೆ. ಇಲ್ಲವಾದರೆ ನೀವು ಹೇಳಿದ ವರನನ್ನು ನಾನು ಮದುವೆಯಾಗುತ್ತೇನೆ. ಇದೇ ನನ್ನ ಕಟ್ಟಕಡೆಯ ತೀರ್ಮಾನ."

"ಆ ವರನ ಹೆಸರು ವಿಳಾಸಗಳನ್ನು ತಿಳಿಸಿದರೆ ನಾನೂ ಆತನ ಪೂರ್ವೋತ್ತರಗಳನ್ನು ತಿಳಿದುಕೊಳ್ಳಲು ಪ್ರಯತ್ನ ಪಡುತ್ತೇನೆ."

ಆ ವಿವರ ನನಗಿನ್ನೂ ಗೊತ್ತಿಲ್ಲ. ಮೊನ್ನೆ ತಾನೆ ವಿಮಲ ಪ್ರಸ್ತಾಪಿಸಿದಳು."

"ಆಗಲಿ, ನೀನು ಹೇಳಿದಂತೆ ಹದಿನೈದು ದಿನಗಳ ಕಾಲ ಅವಕಾಶ ಕೊಟ್ಟಿದ್ದೇನೆ. ಅಂತೂ ಈ ವರ್ಷ ಮದುವೆಯಾಗಲೇಬೇಕು. ನನ್ನ ಅಭಿಪ್ರಾಯದಲ್ಲಿ ಗೋಪಾಲನೇ ಎಲ್ಲ ದೃಷ್ಟಿಯಲ್ಲಿಯೂ ಅನುಕೂಲವಾದ ವರ. ಚಂಚಲಾ ಇನ್ನೊಂದು ಮಾತು."

"ಅದೇನು ಅಪ್ಪಾಜೀ"

"ನೀನು ಇನ್ನು ಮೇಲೆ ರಾತ್ರಿಯ ಹೊತ್ತು ಮನೆಬಿಟ್ಟು ಎಲ್ಲಿಗೂ ಹೋಗಬಾರದು.

"ಅದೇಕೆ ಅಪ್ಪಾಜಿ ಇಂತಹಾ ಕಟ್ಟಾಜ್ಞೆ? ನಾನೇನು ತಪ್ಪು ಮಾಡಿದ್ದೇನೆ?"

"ನೀನು ಚಿಕ್ಕ ಹುಡುಗಿಯಲ್ಲ. ಪ್ರಾಪ್ತ ವಯಸ್ಸಿಗೆ ಬಂದವಳು. ಕಾಲ ಕೆಟ್ಟು ಹೋಗಿದೆ. ಅದರಲ್ಲೂ ನಿನ್ನಂತಹ ರೂಪವತಿಯರು ರಾತ್ರಿಯ ಹೊತ್ತು ಏಕಾಂಗಿಯಾಗಿ ತಿರುಗುವುದು ಅಪಾಯ. ನೀನು ಗೌರಿಯ ವಿಚಾರವನ್ನು ಕೇಳಿಲ್ಲವೇನು?"

"ಯಾವ ಗೌರಿ ಅಪ್ಪಾಜೀ?"

"ಡಾಕ್ಟರ್ ಸುರೇಶ್ಚಂದ್ರರ ಮಗಳು ಗೌರಿ"

"ಅವಳು ನನ್ನ ಫ್ರೆಂಡ್, ನಿಮ್ಮ ಜೊತೆಯಲ್ಲೇ ಅನೇಕ ಬಾರಿ ಅವರ ಮನೆಗೆ ಹೋಗಿದ್ದೆ. ಅವಳಿಗೇನಾಯಿತು?"

"ಅವಳನ್ನು ಅಪಹರಿಸಲು ಕ್ರಾಂತಿಸೇನೆಯವರು ಮಾಡಿದ್ದ ಪ್ಲಾನು ನಿನಗೆ ಗೊತ್ತಾಗಲ್ಲಿಲ್ಲವೇನು?"

"ನಂಗೆ ಗೊತ್ತಿಲ್ಲ ಅಪ್ಪಾಜಿ"

"ಹಾಗಾದರೆ ನೀನು ಈ ಜಗತ್ತಿನಲ್ಲೇ ಇಲ್ಲ. ಈ ಊರಲ್ಲಿ ಎಲ್ಲರ ಬಾಯಲ್ಲೂ ಅದೇ ಸುದ್ದಿ. ನಿಂಗೆ ಗೊತ್ತಾಗದೆ ಇರೋದು ಆಶ್ಚರ್ಯ"

"ಅದೇನು ಸಮಾಚಾರ ಅಪ್ಪಾಜೀ?"

"ಕೆಲವು ವರ್ಷಗಳ ಹಿಂದೆ ನೋಡಿದ್ದೆ"

"ಚಂದ್ರಹಾಸನೂ, ಗೌರಿಯೂ ಕಾಳೀಪುರದಲ್ಲಿ ಓದುತ್ತಿದ್ದರು. ಅವರಿಬ್ಬರೂ ಕಾಲೇಜು ಬಿಟ್ಟುಬಂದ ನಂತರ ಕ್ರಾಂತಿಸೇನೆಯನ್ನು ಸೇರಿದ್ದರಂತೆ. ಕ್ರಾಂತಿಸೇನೆಯ ಶಂಕರನ ಕಣ್ಣು ಗೌರಿಯ ಮೇಲೆ ಬಿತ್ತಂತೆ. ಅದನ್ನು ಸೈರಿಸದೆ ಚಂದ್ರಹಾಸನೂ, ಗೌರಿಯೂ ಕ್ರಾಂತಿಸೇನೆಯನ್ನು ಬಿಟ್ಟು ಬಂದರಂತೆ. ಈಗ ಹದಿನೈದು ದಿನಗಳ ಹಿಂದೆ ಗೌರಿ ಇನ್ನೊಬ್ಬ ಹುಡುಗಿಯ ಜೊತೆಯಲ್ಲಿ ರಾತ್ರಿ ಸಿನಿಮಾ ನೋಡಿಕೊಂಡು, ಗಾಂಧೀಪಾರ್ಕ್ ಹತ್ತಿರ ಬರುತ್ತಿರುವಾಗ, ಕ್ರಾಂತಿಸೇನೆಯ ಶಂಕರನು ಅವರಿಬ್ಬರನ್ನು ಅಪಹರಿಸಲು ಪ್ರಯತ್ನ ಪಟ್ಟನಂತೆ. ಆ ಸಂಬಂಧ ಚಂದ್ರಹಾಸನು ಪೊಲೀಸಿಗೆ ಫಿರ್ಯಾದು ಕೊಟ್ಟನಂತೆ. ತನ್ನ ಮೇಲೆ ಫಿರ್ಯಾದು ಕೊಟ್ಟನೆಂಬ ಸಿಟ್ಟಿನಿಂದ ಶಂಕರನು ನಿನ್ನೆ ರಾತ್ರಿ ಚಂದ್ರಹಾಸನನ್ನು ಕೊಲ್ಲುವ ಉದ್ದೇಶದಿಂದ ಪುರುಷೋತ್ತಮಬಾಬುರವರ ಮನೆಗೆ ಬಾಂಬ್ ಹಾಕಿಸಿ, ಅದರ ಪರಿಣಾಮವಾಗಿ ಪುರುಷೋತ್ತಮಬಾಬುರವರ ಪತ್ನಿ ರುಮಾದೇವಿಯವರು ಮೃತಪಟ್ಟು ಹೋದರು. ಈ ವಿಚಾರ ನಿನಗೆ ಗೊತ್ತಿಲ್ಲವೇನು?"

"ಇಲ್ಲ ಅಪ್ಪಾಜೀ."

"ಈ ಊರಲ್ಲೆಲ್ಲಾ ಅದೇ ಸುದ್ದಿ. ಈ ದಿನ ಕೋರ್ಟಿಗೆ ಹೋದನಂತರ ರುಮಾದೇವಿಯವರು ಸತ್ತ ವಿಚಾರ ನನಗೆ ಗೊತ್ತಾಯಿತು. ನಾನು ಕೋರ್ಟಿನಿಂದ ಅನಿಲಪುರಕ್ಕೆ ಹೋಗಿದ್ದೆ. ಪುರುಷೋತ್ತಮಬಾಬುರವರ ಸ್ಥಿತಿಯನ್ನು ನೋಡುವ ಹಾಗೇ ಇಲ್ಲ. ನಾನು ಅವರ ಜೂನಿಯರ್ ಆಗಿದ್ದಾಗ ರುಮಾದೇವಿಯವರ ಆತಿಥ್ಯ ಸದಾ ನನಗಾಗುತ್ತಿತ್ತು. ಅವರು ನನಗೆ ತಾಯಿಯಂತೆ ಇದ್ದರು. ಬಾಂಬು ಸಿಡಿತದಿಂದ ಮುಖವೆಲ್ಲಾ ವಿಕಾರವಾಗಿ ಹೋಗಿತ್ತು. ಅವರನ್ನು ಗುರುತಿಸುವುದೂ ಕಷ್ಟವಾಗಿತ್ತು. ನನಗಂತೂ ಆ ದೃಶ್ಯವನ್ನು ನೋಡಲಾಗಲಿಲ್ಲ. ಪುರುಷೋತ್ತಮಬಾಬು ಅಂತಹ ಸಭ್ಯರ ಮನೆಯ ಮೇಲೆ ಬಾಂಬ್ ಹಾಕಿದವರು ಏನು ಬೇಕಾದರೂ ಮಾಡಿಯಾರು."

ತಂದೆಯ ಮಾತನ್ನು ಕೇಳಿ ಚಂಚಲೆಗೆ ಸಖೇದಾಶ್ಚರ್ಯವಾಯಿತು. ಚಂಚಲೆಯ ಶಂಕರನ ವಿಚಾರ ಏನೂ ಗೊತ್ತಿಲ್ಲದವಳಂತೆ "ಶಂಕರ ಎಂದರೆ ಯಾರು ಅಪ್ಪಾಜೀ?" ಎಂದು ಕೇಳಿದಳು.

"ಅವನೊಬ್ಬ ಖೋಟಾ ಕ್ರಾಂತಿಕಾರ. ತಾನೊಬ್ಬ ಉಗ್ರಗಾಮಿ ಕಮ್ಯೂನಿಸ್ಟ್ ಎಂದು ಕೊಚ್ಚಿಕೊಳ್ಳುತ್ತಿದ್ದಾನೆ. ಸಮಾಜಘಾತುಕ ವ್ಯಕ್ತಿಗಳನ್ನೆಲ್ಲಾ ಒಂದುಗೂಡಿಸಿ ಕ್ರಾಂತಿಸೇನೆ ಎಂಬ ಸಂಸ್ಥೆಯನ್ನು ಕಟ್ಟಿದ್ದಾನೆ. ಅವನು ಈಗಾಗಲೇ ಕೆಲವು ಕಡೆ ಲೂಟಿ ಮಾಡಿಸಿದ್ದಾನಂತೆ; ತನಗಾಗದ ಕೆಲವರನ್ನು ಕೊಲೆ ಮಾಡಿಸಿದ್ದಾನಂತೆ. ನಾನು ಅವನನ್ನು ನೋಡಿಲ್ಲ. ಅವನು ಯಾವುದಕ್ಕೂ ಹೇಸದವನೆಂದು ಜನರಾಡಿಕೊಳ್ಳುತ್ತಿದ್ದಾರೆ."

"ಅಪ್ಪಾಜೀ ನೀವು ಹೇಳುವುದೆಲ್ಲವೂ ನಿಜವಾಗಿದ್ದರೆ ಸರ್ಕಾರದವರು ನಿದ್ದೆ ಮಾಡ್ತಾ ಇದ್ದಾರೇನು?"

"ಈ ರಾಜ್ಯದ ಗೃಹಮಂತ್ರಿ ಶಂಕರನ ಸ್ನೇಹಿತನಂತೆ. ಆದ್ದರಿಂದ ಪೋಲೀಸಿನವರು ಅವನ ತಂಟೆಗೆ ಹೋಗುವುದಿಲ್ಲ. ಅವನು ಕೆಲವು ಅಧಿಕಾರಿಗಳನ್ನು ಲಂಚದಿಂದ ಸರಿಪಡಿಸಿಕೊಂಡಿದ್ದಾನೆ. ಉಳಿದವರು ಅವನಿಗೆ ಹೆದರುತ್ತಾರೆ. ಹೀಗಾಗಿ ಅವನು ಮಾಡಿದ್ದೇ ಮಾಟವಾಗಿದೆ."

"ಬಹಳ ಆಶ್ಚರ್ಯ! ಗೃಹಮಂತ್ರಿ ಇಂತವರಿಗೆ ಪ್ರೋತ್ಸಾಹ ಕೊಡುತ್ತಾರೆಂದರೆ ನಂಬುವುದು ಕಷ್ಟ. ಇದು ಕಟ್ಟುಕತೆ ಇರಬೇಕು ಅಪ್ಪಾಜೀ"

"ನೀನಿನ್ನೂ ಹುಡುಗಿ; ನಿನಗೆ ಇದೆಲ್ಲಾ ಗೊತ್ತಾಗುವುದಿಲ್ಲ".

"ಬಾಂಬ್ ಹಾಕಿದ್ದ ಸ್ಥಳವನ್ನು ನೀವು ನೋಡಿದ್ದಿರೇನು?"

"ಕಣ್ಣಾರೆ ನೋಡಿದ್ದೇನೆ. ಅದರಲ್ಲಿ ಅನುಮಾನವಿಲ್ಲ. ಶಂಕರನ ಕಡೆಯವರೇ ಬಾಂಬು ಹಾಕಿದ್ದೆಂದು ಚಂದ್ರಹಾಸನ ಖಚಿತ ಅಭಿಪ್ರಾಯ."

"ಅನಿಲಪುರ ಎಲ್ಲಿದೆ ಅಪ್ಪಾಜೀ?"

"ಅನಿಲಗಿರಿಯ ಪಕ್ಕದಹಳ್ಳಿ. ಕೋಟೆಯ ಮೇಲೆ ನಿಂತುಕೊಂಡು ನೋಡಿದರೆ ಕಾಣುತ್ತದೆ."

"ನೀವು ಅನಿಲಪುರದಿಂದ ಎಷ್ಟು ಹೊತ್ತಿಗೆ ಬಂದಿರಿ?"

"ನಾನು ಅಲ್ಲಿಂದ ಹೊರಟಾಗ ಸುಮಾರು ಏಳೂವರೆ ಗಂಟೆಯಾಗಿರಬಹುದು. ನಾನು ಸ್ಮಶಾನದವರೆಗೆ ಹೋಗಿದ್ದೆ. ಆದರೆ ಜ್ವರ ಬಂದಿದ್ದರಿಂದ ನದಿಯ ಹತ್ತಿರ ನಿಲ್ಲಲಾಗಲಿಲ್ಲ. ಟ್ಯಾಕ್ಸಿ ತೆಗೆದುಕೊಂಡು ಹೋಗಿದ್ದೆ. ಸೀದಾ ಬಂದುಬಿಟ್ಟೆ. ನಾನು ಮನೆಗೆ ಬಂದಾಗ ಎಂಟು ಗಂಟೆಯಾಗಿರಬಹುದು."

"ಅಪ್ಪಾಜೀ ಸ್ಮಶಾನವೆಲ್ಲಿ?"

"ಸ್ಮಶಾನ, ಸಿರಿಮಾವತಿ ನದಿಯಲ್ಲಿ, ಕೋಟೆಯ ಹತ್ತಿರ."

ತಂದೆಯ ಮಾತನ್ನು ಕೇಳಿದ ಕೂಡಲೆ ಚಂಚಲೆಗೆ ತಾನು ನೋಡಿದ್ದ ಶವಸಂಸ್ಕಾರ ರುಮಾದೇವಿಯವರ ಶವದ ಸಂಸ್ಕಾರವೆಂಬುದು ತಕ್ಷಣ ಹೊಳೆಯಿತು. ಅವಳ ಮನಸ್ಸು ಅಲ್ಲೋಲಕಲ್ಲೋಲ ಪರಿಸ್ಥಿತಿಯಲ್ಲಿ ತೊಳಲಾಡುತ್ತಿತ್ತು. ತಾನು ಯಾರನ್ನು ಪತಿಯನ್ನಾಗಿ ಆರಿಸಿಕೊಂಡಿದ್ದಳೋ ಆತನ ಮೇಲೆ ಬಂದಿದ್ದ ಅಪವಾದದ ಸುದ್ದಿಯನ್ನು ಒಪ್ಪದೆ ಅವಳ ಮನಸ್ಸು ತಿರಸ್ಕರಿಸುತ್ತಿತ್ತು. ಆದರೆ ಆ ಸುದ್ದಿ ತನ್ನ ತಂದೆಯ ಬಾಯಿಂದಲೇ ಬಂದಿತ್ತು. ಆ ಸುದ್ದಿ ಅವಳ ಮನಸ್ಸಿನ ಮೇಲೆ ಅಗಾಧವಾದ ಪರಿಣಾಮವನ್ನುಂಟು ಮಾಡಿತ್ತು. ಮನಸ್ಸನ್ನು ಸ್ಥಿಮಿತಕ್ಕೆ ತರಲು ಸಾಧ್ಯವಾಗದೆ ಆದಷ್ಟು ಜಾಗ್ರತೆ ತನ್ನ ಕೊಠಡಿಗೆ ಹೋಗಬೇಕೆಂಬ ಇಚ್ಛೆಯಿಂದ ತಂದೆಯ ಅಪ್ಪಣೆ ಪಡೆದು, ತಂದೆಯ ಕೊಠಡಿಯಿಂದ ಹೊರಡಲುದ್ಯುಕ್ತಳಾಗುತ್ತಿರುವಾಗ ಕೃಷ್ಣಕಾಂತನು ಅವಳನ್ನು ಕೂಗಿ "ಇಲ್ಲಿ ನೋಡು ನಿನಗೆ ಬಂದ ಕಾಗದ ಯಾರೋ ನನ್ನ ಮೇಜಿನ ಮೇಲೆ ತಂದಿಟ್ಟಿದ್ದಾರೆ. ತೆಗೆದುಕೊಂಡು ಹೋಗು" ಎಂದನು. ಚಂಚಲೆಯು ಮೇಜಿನ ಮೇಲಿದ್ದ ಕಾಗದವನ್ನು ತೆಗೆದುಕೊಂಡು ತನ್ನ ಕೊಠಡಿಗೆ ಹೋದಳು.

ಕೊಠಡಿಗೆ ಹೋದೊಡನೆ ಆ ಕಾಗದವನ್ನು ಒಡೆದು ನೋಡಿದಳು. ಅದು ಶಂಕರನಿಂದ ಆ ದಿನ ಬಂದ ಕಾಗದವಾಗಿತ್ತು. ಕಾಗದದ ಒಕ್ಕಣೆ ಈ ರೀತಿ ಇತ್ತು:

"ಪ್ರಿಯ ಚಂಚಲೆಗೆ,

ಅನಿವಾರ್ಯ ಕಾರಣಗಳ ದೆಸೆಯಿಂದ ಹೋದವಾರ ತಿಳಿಸಿದಂತೆ ನಾಳೆ ನಾನು ಬರಲಾಗುವುದಿಲ್ಲ. ಮುಂದಿನ ಭಾನುವಾರ ಸೇರೋಣ.

ಇತಿ, ನಿನ್ನ ಪ್ರೀತಿಯ ಗೆಳತಿ.

ವಿಮಲ"

ಈ ಪತ್ರವನ್ನು ನೋಡಿದ ಮೇಲೆ ಯಾವುದೋ ಪ್ರಬಲವಾದ ಕಾರಣದಿಂದ ಶಂಕರನು ಕೋಟೆಗೆ ಬರಲಾಗಲಿಲ್ಲವೆಂಬುದು ಅವಳಿಗೆ ಗೊತ್ತಾಯಿತು. ಆ ಕಾಗದ ಆದಿನ ಮಧ್ಯಾಹ್ನವೇ ಟಪಾಲು ಮೂಲಕ ಬಂದಿತ್ತು. ಆದರೆ ಕಮಲೆಯೋ, ನಾರಾಯಣನೋ ಅದನ್ನು ಅವಳಿಗೆ ಕೊಡುವ ಬದಲು ಕೃಷ್ಣಕಾಂತನ ಮೇಜಿನ ಮೇಲೆ ಹಾಕಿದ್ದರು. ಆಗಲೇ ರಾತ್ರಿ ಹತ್ತು ಗಂಟೆಯಾಗಿತ್ತು. ಕೋಟೆಗೆ ಹೋಗಿಬಂದ ಪ್ರಯಾಸದಿಂದ ಹಸಿವು ಆಗಿತ್ತು. ಆದರೆ ತಂದೆಯಿಂದ ತಿಳಿದುಬಂದ ವಿಷಯಗಳಿಂದುಂಟಾದ ಮನಸ್ಸಿನ ದುಮ್ಮಾನದಿಂದ ಊಟವೇ ಅವಳಿಗೆ ಬೇಕಾಗಿರಲಿಲ್ಲ. ಊಟದ ಶಾಸ್ತ್ರವನ್ನು ಮಾಡಿ ತನ್ನ ಕೊಠಡಿಗೆ ಹೋದಳು. ಮಂಚದ ಮೇಲೆ ಕುಳಿತು ತಂದೆಯು ಶಂಕರನ ವಿಚಾರದಲ್ಲಿ ಹೇಳಿದ್ದ ಆಪಾದನೆಗಳ ಸತ್ಯಾಸತ್ಯಗಳನ್ನು ಕುರಿತು ತುಲನೆ ಮಾಡತೊಡಗಿದಳು.

ಶಂಕರನ ಸ್ನೇಹ ಲಭಿಸಿದಲಾಗಾಯ್ತು, ಅವನು ಅವಳೊಡನೆ ವರ್ತಿಸುತ್ತಿದ್ದ ರೀತಿ ನೀತಿಗಳನ್ನೂ, ಅವನ ನಡೆನುಡಿಗಳನ್ನೂ, ತುಲನಾತ್ಮಕ ದೃಷ್ಟಿಯಿಂದ ಒಂದೊಂದಾಗಿ ಸ್ಮರಿಸಿಕೊಳ್ಳುತ್ತಿದ್ದಳು. ಯಾವ ಸಂದರ್ಭದಲ್ಲೂ ಶಂಕರನು ಒಬ್ಬ ದುಷ್ಟ ವ್ಯಕ್ತಿಯೆಂಬ ಭಾವನೆ ಅವಳ ಮನಸ್ಸಿಗೆ ಬಂದಿರಲಿಲ್ಲ. ಬದಲಾಗಿ ಅವನೊಬ್ಬ ಅತ್ಯಂತ ಸುಸಂಸ್ಕೃತ ವ್ಯಕ್ತಿಯೆಂಬ ಭಾವನೆ ಅವಳ ಮನಸ್ಸಿನಲ್ಲಿ ಸ್ಪಷ್ಟವಾಗಿ ಮೂಡಿಹೋಗಿತ್ತು. ಅವಳ ಆ ಭಾವನೆಯನ್ನು ಹೋಗಲಾಡಿಸುವುದು ಕಷ್ಟವಾಗಿತ್ತು. ಆದರೆ ತಂದೆ ಹೇಳಿದ್ದು ಸುಳ್ಳೆಂದು ನಿರಾಕರಿಸುವುದು ಕಷ್ಟವಾಗಿತ್ತು. ಶಂಕರನು ಹಲವು ವೇಳೆ ಅವಳೊಡನೆ ಮಾತನಾಡುತ್ತಿರುವಾಗ "ಬಂಡವಾಳ ಶಾಹಿಗಳು ನನ್ನ ಮೇಲೆ ಹಲವು ಕಟ್ಟು ಕತೆಗಳನ್ನು ಕಟ್ಟಿದ್ದಾರೆ" ಎಂದು ಹೇಳಿದ್ದು ಅವಳ ನೆನಪಿಗೆ ಬಂತು. "ಬಹುಶಃ ಬಂಡವಾಳ ಶಾಹಿಗಳು ನೇಯ್ದಿದ್ದ ಕಟ್ಟುಕತೆಗಳನ್ನು ನಮ್ಮ ಅಪ್ಪಾಜಿ ನಂಬಿರಬೇಕು" ಎಂದು ಮನಸ್ಸಿಗೆ ಸಮಾಧಾನ ತಂದುಕೊಂಡಳು. ಆದರೂ ಶಂಕರನ ಪೂರ್ವೋತ್ತರಗಳನ್ನು ಸರಿಯಾಗಿ ತಿಳಿದುಕೊಳ್ಳಲು ಕಾತುರವುಳ್ಳವಳಾಗಿದ್ದಳು. ಅವನ ಮೇಲೆ ಬಂದಿದ್ದ ಆಪಾದನೆಯ ಸತ್ಯಾಸತ್ಯಗಳನ್ನು ತಿಳಿದುಕೊಳ್ಳುವುದು ಅವಶ್ಯಕವೆಂದು ಮನಗಂಡಳು. ಇವೇ ಮುಂತಾದ ವಿಚಾರಗಳ ಹಿನ್ನೆಲೆಯಲ್ಲಿ ನಿದ್ದೆ ಹೋಗಲೆತ್ನಿಸಿದಳು. ಕಣ್ಮುಚ್ಚಿದೊಡನೆ ಕೋಟೆಯಲ್ಲಿ

ತಾನು ಕಂಡ ಶವ ಸಂಸ್ಕಾರದ ದೃಶ್ಯ ಕಣ್ಮುಂದೆ ಸುಳಿದಂತಾಗುತ್ತಿತ್ತು. ಬಹಳ ಹೊತ್ತಿನ ನಂತರ ಸ್ವಲ್ಪ ಮಾನಸಿಕ ನೆಮ್ಮದಿ ಬಂದಂತಾಗಿ ನಿದ್ದೆ ಹೋದಳು.

ಚಂಚಲೆ ಮರುದಿನ ಬೆಳಿಗ್ಗೆ ಹಾಸಿಗೆಯಿಂದ ಎದ್ದೊಡನೆ ತಂದೆಯ ಕೋಣೆಗೆ ಹೋದಳು. ಅಷ್ಟು ಹೊತ್ತಿಗಾಗಲೇ ಕೃಷ್ಣಕಾಂತನು ಎದ್ದು ಆಗತಾನೆ ಬಂದಿದ್ದ ವೃತ್ತ ಪತ್ರಿಕೆಗಳನ್ನು ಓದುತ್ತಿದ್ದನು.

"ಜ್ವರ ಬಿಟ್ಟದಿಯೇ ಅಪ್ಪಾಜೀ?" ಎಂದು ಚಂಚಲೆ ತನ್ನ ತಂದೆಯನ್ನು ಪ್ರಶ್ನಿಸಿದಳು.

"ಇಲ್ಲಮ್ಮಾ, ಇನ್ನೂ ಬಿಟ್ಟಿಲ್ಲಾ. ಇನ್ನೂ ಸ್ವಲ್ಪ ಇದೆ. ರಾತ್ರಿ ವಿಪರೀತ ಜ್ವರವಿತ್ತು."

"ಸ್ವಲ್ಪ ಕಾಫಿ ತರಲಾ ಅಪ್ಪಾಜೀ?"

"ಸ್ವಲ್ಪ ತಾಳು. ನಾನಿನ್ನೂ ಮುಖ ತೊಳೆದಿಲ್ಲ. ಮುಖ ತೊಳೆದ ಮೇಲೆ ತಂದು ಕೊಡು ಬರೀ ಕಾಫಿ; ತಿಂಡಿ ಬೇಡ" ಎನ್ನುತ್ತಾ ಕೃಷ್ಣಕಾಂತನು ಮುಖ ತೊಳೆಯಲು ಬಚ್ಚಲು ಮನೆಗೆ ಹೋದನು.

ಅವನು ಹೋದನಂತರ ಅವನ ಮೇಜಿನ ಮೇಲಿದ್ದ ಆ ದಿನದ ವೃತ್ತ ಪತ್ರಿಕೆಗಳನ್ನು ಚಂಚಲೆ ತಿರುವಿಹಾಕುತ್ತಿದ್ದಳು. ಎಲ್ಲಾ ಪತ್ರಿಕೆಗಳಲ್ಲೂ ಅನಿಲಪುರದ ಬಾಂಬ್ ಪ್ರಕರಣದ ಸುದ್ದಿ ಮುಖಪುಟಗಳಲ್ಲಿ ಪ್ರಕಟವಾಗಿತ್ತು. ಯಾವ ಪತ್ರಿಕೆಯಲ್ಲೂ ಕ್ರಾಂತಿಸೇನೆಯ ವಿಚಾರವಾಗಲೀ ಶಂಕರನ ವಿಚಾರವಾಗಲೀ ನಮೂದಾಗಿರಲಿಲ್ಲ. ಇದು ಚಂಚಲೆಗೆ ಸಮಾಧಾನಕರವಾದ ಸಂಗತಿಯಾಗಿತ್ತು. ಕೃತ್ಯವನ್ನೆಸಗಿದವರು ಯಾರೆಂಬುದು ಗೊತ್ತಾಗಿಲ್ಲವೆಂದೂ, ಪೊಲೀಸಿನವರು ಪತ್ತೆ ತರದೂದು ನಡೆಸುತ್ತಿದ್ದಾರೆಂದೂ ಪತ್ರಿಕೆಗಳಲ್ಲಿ ವರದಿಯಾಗಿತ್ತು. ಸ್ವಲ್ಪ ಹೊತ್ತಿನಲ್ಲಿ ಕೃಷ್ಣಕಾಂತನು ಮುಖ ತೊಳೆದುಕೊಂಡು ಕೊಠಡಿಗೆ ಬಂದನು. ಅವನನ್ನು ನೋಡಿದ ಚಂಚಲೆ "ಅಪ್ಪಾಜೀ, ನೀನು ನಿನ್ನೆ ಪುರುಷೋತ್ತಮ ಬಾಬು ಅವರ ಮನೆಗೆ ಬಾಂಬ್ ಹಾಕಿಸಿದವನು ಶಂಕರ ಎಂದು ಹೇಳಿದ್ದೀರಿ. ಆದರೆ ಪತ್ರಿಕೆಗಳಲ್ಲಿ ಅವನ ಹೆಸರೇ ಇಲ್ಲವಲ್ಲಾ? ಅವನ ಕೈವಾಡ ಇದ್ದಿದ್ದರೆ ಪತ್ರಿಕೆಯವರು ಬರೆದೇ ಬರೆಯುತ್ತಿದ್ದರು" ಎಂದು ತಂದೆಗೆ ಹೇಳಿದಳು.

"ನೀನಿನ್ನೂ ಹಸುಗೂಸು. ನಿನಗೇನೂ ಗೊತ್ತಾಗುವುದಿಲ್ಲ. ಈ ರಾಜ್ಯದಲ್ಲಿ ಶಂಕರನ ಮೇಲೆ ಬರೆಯುವ ಧೈರ್ಯ ಯಾವ ಪತ್ರಿಕೆಗೆ ಇದೆ? ಯಾರಾದರೂ ಅವನ ಮೇಲೆ ಬರೆದರೆ ಅವರು ಉಳಿಯುವುದೇ ಕಷ್ಟ. ಅವರ ಹೆಸರನ್ನು ಕೇಳಿದರೆ ಸಾಕು, ಜನ ತತ್ತರಿಸುತ್ತಾರೆ."

"ನೀವು ಹೇಳುವುದನ್ನು ಕೇಳಿದರೆ ಸಭ್ಯರು ಕಾಲಹರಣ ಮಾಡುವುದೇ ಕಷ್ಟವೆಂದಾಯಿತು"

"ಇಂದು ಈ ಪ್ರದೇಶದಲ್ಲಿ ಅದೇ ಪರಿಸ್ಥಿತಿ ಇದೆ. ದುಷ್ಟರ ಉಪಟಳವನ್ನು ಸಹಿಸಲಾರದೆ ಶಿಷ್ಟರು ಹೆದರಿ ಮೂಲೆ ಸೇರಿದ್ದಾರೆ. ಅದಕ್ಕೇ ನಿನಗೆ ನಿನ್ನೆ ಎಚ್ಚರಿಕೆಯಿಂದ ಇರಬೇಕೆಂದು ಹೇಳಿದ್ದು."

"ಅಪ್ಪಾಜೀ ಡಾಕ್ಟರಿಗೆ ಬರಹೇಳಲೇ?"

"ಬರಹೇಳು ನಾನು ಅನಿಲಪುರಕ್ಕೆ ಹೋಗಬೇಕಾಗಿತ್ತು. ಬಾಬು ಅವರ ಹತ್ತಿರ ನಾನಿದ್ದರೆ ಅವರಿಗೆ ಸ್ವಲ್ಪ ಸಮಾಧಾನ. ಏನು ಮಾಡ್ಲಿ ಅಂತಾ ಯೋಚನೆ ಮಾಡ್ತಾ ಇದ್ದೀನಿ?"

"ಅಪ್ಪಾಜೀ ನಿಮಗೇನು ಹುಚ್ಚೆ? ಇನ್ನೂ ಜ್ವರ ಬಿಟ್ಟಿಲ್ಲಾ, ಇವತ್ತು ಖಂಡಿತಾ ಹೋಗೋಕೆ ಆಗೋದಿಲ್ಲಾ. ಜ್ವರ ಬಿಟ್ಮೇಲೆ ಹೋಗುವಿರಂತೆ. ಅವರಿಗೆ ಬೇಕಾದರೆ ಇವತ್ತು ಒಂದು ಕಾಗದ ಬರೆಯಿರಿ. ನೀವು ಹೋಗುವಾಗ ನಾನು ನಿಮ್ಮ ಜತೆಗೆ ಬರ್ತೀನಿ."

"ಜ್ವರ ಹ್ಯಾಗಾಗ್ತದೆ ನೋಡೋಣ" ಎಂದು ಕೃಷ್ಣಕಾಂತ ನುಡಿದು ಸುಮ್ಮನಾದನು.

೩

ಕಾಂಗ್ರೆಸ್ ರಾಜಕಾರಣದಲ್ಲಿ ಆದರ್ಶದ ಅಧಃಪತನ ಆರಂಭವಾಗಿದ್ದ ಕಾಲ. ರಾಜ್ಯದ ಕಾಂಗ್ರೆಸ್ ಮುಖಂಡರು ಭ್ರಷ್ಟಾಚಾರದ ಹೊನಲಿನಲ್ಲಿ ಈಜಾಡುತ್ತಾ, ಸಮಾಜವಾದದ ಸೋಗಿನಲ್ಲಿ ತಮಗಾಗಿ ಮತ್ತು ತಮ್ಮವರಿಗಾಗಿ ಸಂತರ್ಪಣೆ ನಡೆಸುತ್ತಿದ್ದರು. ರಾಜ್ಯದ ಆಡಳಿತ ಲಂಚಮಯವಾಗಿತ್ತು. ಲಂಚ, ಶಿಫಾರಸ್ಸುಗಳಿಲ್ಲದೆ ಯಾವ ಕೆಲಸವೂ ನಡೆಯುವಂತಿರಲಿಲ್ಲ. ಕಾಂಗ್ರೆಸ್ ಶಾಸಕರೂ, ಮಂತ್ರಿಗಳೂ ಅಧಿಕಾರ ಲಾಲಸೆಯಲ್ಲಿ, ಹಾಗೂ ಹಣ ಸಂಪಾದನೆಯಲ್ಲಿ ಮಗ್ನರಾಗಿದ್ದರು. ಅಧಿಕಾರ ಮತ್ತು ಹಣದ ಸಂಪಾದನೆ ಕಾಂಗ್ರೆಸ್ ನಾಯಕರ ಅಂತಿಮ ಗುರಿಯಾಗಿತ್ತು. ಸರ್ಕಾರಿ ಅಧಿಕಾರಿಗಳಿಂದ ಜನರಿಗೆ ಪ್ರಯೋಜನಕ್ಕಿಂತ ಕಿರುಕುಳ ತೊಂದರೆಗಳೇ ಹೆಚ್ಚಾಗಿದ್ದುವು. ಇದರಿಂದ ಸಾಮಾನ್ಯ ಜನರಲ್ಲಿ ಅತೃಪ್ತಿ ದಿನೇ ದಿನೇ ಹೆಚ್ಚಾಗುತ್ತಿತ್ತು. ಅಂತಹ ಪರಿಸ್ಥಿತಿಯಲ್ಲಿ ಕಾಂಗ್ರೆಸ್ಸನ್ನೂ, ಸರ್ಕಾರವನ್ನೂ ಖಂಡಿಸುವವರೂ, ಟೀಕಿಸುವವರೂ ಹೆಚ್ಚು ಶ್ರಮವಿಲ್ಲದೆ ಪ್ರಸಿದ್ಧ ಪುರುಷರಾಗುತ್ತಿದ್ದರು. ಸರ್ಕಾರವನ್ನು ಖಂಡಿಸುತ್ತಿದ್ದ ಕೇಡಿಗಳೂ ಸಹ ದೊಡ್ಡ ಮನುಷ್ಯರೆನಿಸಿಕೊಳ್ಳುತ್ತಿದ್ದರು. ಅಲ್ಪ ತಿಳಿವಳಿಕೆಯ ಜನ ಸಾಮಾನ್ಯರು ಖಂಡಿಸುವವರ ಪುರ್ವೋತ್ತರ ಅಥವಾ ಗುಣದೋಷಗಳನ್ನು ವಿಮರ್ಶೆ ಮಾಡುವ ಗೊಡವೆಗೆ ಹೋಗುತ್ತಿರಲಿಲ್ಲ. ಅವರ ದೃಷ್ಟಿಯಲ್ಲಿ ಸರ್ಕಾರವನ್ನು ಬಯ್ಯುವವರೆಲ್ಲರೂ ಅಪ್ರತಿಮ ದೇಶಭಕ್ತರಂತೆ ಕಾಣುತ್ತಿದ್ದರು.

ಕಾಂಗ್ರೆಸ್ಸಿನ ದುರಾಡಳಿತ, ಭ್ರಷ್ಟಾಚಾರ, ಬಡತನ ಇವುಗಳಿಂದ ನೊಂದು ಬೇಸತ್ತ ಬಡಬಗ್ಗರು, 'ಸೋಷಿಯಲಿಸಂ,' 'ಕಮ್ಯೂನಿಸಂ', 'ಕ್ರಾಂತಿ' ಈ ಪದಗಳು ತಮ್ಮ ಅಭ್ಯುದಯ ಬೀಜಮಂತ್ರಗಳೆಂದು ಭಾವಿಸಿದ್ದರು. ಈ ಗುಟ್ಟನ್ನರಿತ ರಾಜಕಾರಣಿಗಳು ಈ ಪದಗಳನ್ನು ತಮ್ಮ ಅಭ್ಯುದಯದ ಬೀಜಮಂತ್ರಗಳನ್ನಾಗಿ ಮಾಡಿಕೊಂಡಿದ್ದರು. 'ಸೋಷಿಯಲಿಸಂ' ಮತ್ತು 'ಕಮ್ಯೂನಿಸಂ' ಸಿದ್ಧಾಂತಗಳ ಓ ನಾಮವೇ ಗೊತ್ತಿಲ್ಲದ ಕೆಲವು ಸ್ವಾರ್ಥಸಾಧಕರು ಅಲ್ಲಲ್ಲಿ ಕ್ರಾಂತಿಕಾರರ ಮತ್ತು ಸಮಾಜವಾದಿಗಳ ವೇಷವನ್ನು ಧರಿಸಿ ಹಲವು ಸಂಘ ಸಂಸ್ಥೆಗಳನ್ನು ರಾಜ್ಯದಲ್ಲಿ ಸ್ಥಾಪಿಸಿ, ಬಡವರ ಬಂಧುಗಳಂತೆ

ನಟಿಸುತ್ತಿದ್ದರು. ಶ್ರೀಪುರದ ನಿವೃತ್ತ ಹೆಡ್‌ಕಾನ್‌ಸ್ಟೇಬಲ್ ಭೀಮಸೇನ್ ಎಂಬುವವನ ದ್ವಿತೀಯ ಪುತ್ರ ಶಂಕರನು ಅಂತಹ ಸ್ವಾರ್ಥಸಾಧಕರಲ್ಲಿ ಒಬ್ಬನಾಗಿದ್ದನು.

ಹೆಡ್‌ಕಾನ್‌ಸ್ಟೇಬಲ್ ಭೀಮಸೇನ್ ಲಂಚಕ್ಕೆ ಎಷ್ಟು ಹೆಸರುವಾಸಿಯಾಗಿದ್ದನೋ ದೌರ್ಜನ್ಯ ಕ್ರೌರ್ಯಗಳಿಗೂ ಅಷ್ಟೇ ಹೆಸರುವಾಸಿಯಾಗಿದ್ದನು. ಅವನು ಲಂಚದಿಂದ ಬಂದ ಹಣದಿಂದ ಶ್ರೀಪುರ ನಗರದಲ್ಲಿ ತನ್ನ ಹಿರಿಯ ಮಗ ರಾಹುಲನ ಹೆಸರಿನಲ್ಲಿ ಒಂದು ಅಂಗಡಿಯನ್ನಿಟ್ಟಿದ್ದನು. ತನ್ನ ಕಿರಿಯ ಮಗ ಶಂಕರನನ್ನು ಶ್ರೀಪುರದ ಕಾಲೇಜಿನಲ್ಲಿ ಓದಿಸುತ್ತಿದ್ದನು. ಶಂಕರನು ಅಂತಿಮ ಬಿ.ಎ. ತರಗತಿಯಲ್ಲಿ ಓದುತ್ತಿದ್ದಾಗ, ಸರ್ಕಾರದವರು ಅವನ ತಂದೆ ಭೀಮಸೇನನನ್ನು ಲಂಚದ ಆಪಾದನೆಯ ಮೇಲೆ ಕಡ್ಡಾಯವಾಗಿ ನಿವೃತ್ತಿ ಮಾಡಿದರು. ಅಂದಿದ್ದ ಲಂಚಕೋರ ಸರ್ಕಾರವೇ, ಲಂಚದ ಆಪಾದನೆಯ ಮೇಲೆ ಒಬ್ಬ ಅಧಿಕಾರಿಯನ್ನು ನಿವೃತ್ತಿ ಮಾಡುವುದೆಂದರೆ ಆ ಅಧಿಕಾರಿ ಅಗ್ರಗಣ್ಯ ಲಂಚಕೋರನಾಗಿರಬೇಕೆಂದು ತೋರುತ್ತದೆ. ತಂದೆಯ ಕಲ್ಯಾಣ ಗುಣಗಳೆಲ್ಲವೂ ಅವನಿಗೆ ರಕ್ತಗತವಾಗಿ ಬಂದಿದ್ದವು. ಅಂದು ಲೋಕಸಭೆಯ ಸದಸ್ಯರಾಗಿದ್ದ ಪುರುಷೋತ್ತಮಬಾಬುರವರನ್ನು ಶಂಕರನು ಭೇಟಿ ಮಾಡಿ, ತನ್ನ ತಂದೆಯ ಪರವಾಗಿ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕೆಂದು ವಿನಂತಿ ಮಾಡಿಕೊಂಡನು. ಪುರುಷೋತ್ತಮಬಾಬು ಅವರು ಲಂಚಕೋರರಿಗೆ ತಾವು ಸಹಾಯ ಮಾಡಲು ಸಾಧ್ಯವಿಲ್ಲವೆಂದು ಖಂಡತುಂಡಾಗಿ ಹೇಳಿಬಿಟ್ಟರು. ಇದರಿಂದ ಶಂಕರನು ಅವರ ಮೇಲೆ ವಿಪರೀತ ಕುಪಿತನಾದನು. ಆನಂತರ ಶ್ರೀಪುರ ನಗರ ಕ್ಷೇತ್ರದಿಂದ ಆಯ್ಕೆಯಾಗಿ ಹೋಗಿದ್ದ ವಿಧಾನಸಭೆಯ ಸದಸ್ಯರನ್ನು ಕಂಡು ತನ್ನ ಅಹವಾಲನ್ನು ಹೇಳಿಕೊಂಡನು. ಅವರೂ ಸಹ ಅವನಿಗೆ ಸಹಾಯ ಮಾಡಲಿಲ್ಲ. ಅಂದಿನಿಂದಲೇ ಶಂಕರನು ಸರ್ಕಾರದ ಮೇಲೂ, ಕಾಂಗ್ರೆಸ್ಸಿನ ಮೇಲೂ ವಿಷವನ್ನು ಕಾರಲಾರಂಭಿಸಿದನು.

ತಂದೆಗೆ ನಿವೃತ್ತಿಯಾದ ಒಂದು ವರ್ಷದ ನಂತರ ಶಂಕರನು ಪದವೀಧರನಾದನು. ಪದವೀಧರನಾದ ಮೇಲೆ ಕೆಲಸಕ್ಕಾಗಿ ಪುರುಷೋತ್ತಮಬಾಬು ಅವರನ್ನು ಪುನಃ ಆಶ್ರಯಿಸಿದನು. ಬಾಬು ಅವರು ಅವನಿಗಾಗಿ ಬಹಳ ಶ್ರಮಪಟ್ಟರೂ ಸಹ, ಕೆಲಸವನ್ನು ಕೊಡಿಸಲಾಗಲಿಲ್ಲ. ಆದರೆ ಶಂಕರನು, ಬಾಬು ಅವರು ತನ್ನ ತಂದೆಯ ಮೇಲಿದ್ದ ದುರಭಿಪ್ರಾಯದಿಂದ ತನಗೆ ಕೆಲಸ ಕೊಡಿಸಲಿಲ್ಲವೆಂದೂ, ಅವರು ಮನಸ್ಸು ಮಾಡಿದ್ದರೆ ತನಗೆ ಕೆಲಸ ಸಿಗುತ್ತಿತ್ತೆಂದೂ ಅವರಿವರ ಹತ್ತಿರ ಹೇಳುತ್ತಿದ್ದನು. ಸರ್ಕಾರಿ ನೌಕರಿಗಾಗಿ ಅವನು ಇತರರನ್ನು ಆಶ್ರಯಿಸಿದನು, ಯಾರಿಂದಲೂ ಪ್ರಯೋಜನವಾಗಲಿಲ್ಲ. ಆಗಲೇ ನಿರುದ್ಯೋಗದ ಸಮಸ್ಯೆ ಉತ್ಕಟ ಸ್ವರೂಪವನ್ನು ತಾಳಿದ್ದರಿಂದ ಕೆಲಸ ಸಿಗುವುದು ಸುಲಭವಾಗಿರಲಿಲ್ಲ. ಕೆಲಸ ಸಿಗದೆ ಹೋದುದರಿಂದ ಶಂಕರನು ಕೆಲಕಾಲ ತನ್ನ ಅಣ್ಣನ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದನು. ಆದರೆ ಆ ಕೆಲಸ ಅವನಿಗೆ ಹಿಡಿಸಲಿಲ್ಲ. ಅಂಗಡಿಯಲ್ಲಿ ಕುಳಿತು ಸಾಮಾನುಗಳನ್ನು ಮಾರುವುದೂ, ಲೆಕ್ಕ ಬರೆಯುವುದೂ,

ತನ್ನ ಗೌರವಕ್ಕೆ ತಕ್ಕದ್ದಲ್ಲ ಎಂಬ ಭಾವನೆ ಅವನಿಗೆ ಬಂದದ್ದರಿಂದ ಆ ಕೆಲಸವನ್ನು ಬಿಟ್ಟನು.

ಅಣ್ಣನ ಅಂಗಡಿಯನ್ನು ಬಿಟ್ಟ ಬಳಿಕ, ಸ್ವಲ್ಪಕಾಲ ಅಲ್ಲಿ ಇಲ್ಲಿ ಅಲೆಯುತ್ತಿದ್ದನು. ಕೆಲಕಾಲದ ನಂತರ ಅವನೂ, ಅವನಂತೆಯೇ ನಿರುದ್ಯೋಗಿಗಳಾಗಿದ್ದ ಅವನ ಸ್ನೇಹಿತರೂ ಸೇರಿ, ಪುರುಷೋತ್ತಮಬಾಬು ಅವರ ರಾಜಕೀಯ ವಿರೋಧಿಗಳ ಸಹಾಯದಿಂದ, 'ಕ್ರಾಂತಿ' ಎಂಬ ಒಂಭತ್ತು ಕಾಸಿನ ವಾರಪತ್ರಿಕೆಯನ್ನು ಆರಂಭಿಸಿದರು. ಶಂಕರನೇ ಆ ಪತ್ರಿಕೆಯ ಸಂಪಾದಕನಾದನು. ಕಾಂಗ್ರೆಸ್ ಸರ್ಕಾರವನ್ನೂ, ಪುರುಷೋತ್ತಮಬಾಬು ಅವರನ್ನೂ ವಾಚಾಮಗೋಚರವಾಗಿ ಬಯ್ಯುವುದೇ ಆ ಪತ್ರಿಕೆಯ ಮುಖ್ಯ ಧ್ಯೇಯವಾಗಿತ್ತು. ಆಗಾಗ್ಗೆ ಕಾಂಗ್ರೆಸ್ ಮಂತ್ರಿಗಳ ಮೇಲೆ ಭ್ರಷ್ಟಾಚಾರದ ಆಪಾದನೆಗಳನ್ನು ಆ ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದನು. ಕಾಂಗ್ರೆಸ್ಸಿನ ದುರಾಡಳಿತದಿಂದ ಬೇಸತ್ತಿದ್ದ ಜನರು, ಆಸಕ್ತಿಯಿಂದಲೂ, ಕುತೂಹಲದಿಂದಲೂ ಆ ಪತ್ರಿಕೆಯನ್ನು ಓದುತ್ತಿದ್ದರು. ಕೇವಲ ಒಂದು ವರ್ಷದೊಳಗಾಗಿ ಶಂಕರನ ಪತ್ರಿಕೆ ರಾಜ್ಯದ ಮೂಲೆ ಮೂಲೆಗೂ ಹೋಗುವಂತಾಯಿತು. ಸರ್ಕಾರದ ವಿರೋಧಿಗಳು ಅವನಿಗೆ ಯಥೇಚ್ಛವಾಗಿ ಪ್ರೋತ್ಸಾಹ ನೀಡುತ್ತಿದ್ದರು. ಅವನಿಗೆ ಶಹಭಾಸ್‌ಗಿರಿಯನ್ನು ಕೊಡುತ್ತಿದ್ದ ಜನರು ಅವನನ್ನು 'ಕ್ರಾಂತಿ ಶಂಕರ' ಎಂಬುದಾಗಿ ಕರೆಯಲಾರಂಭಿಸಿದರು. ಪತ್ರಿಕೆಗೆ ಜಾಹಿರಾತು ಮತ್ತು ಚಂದಾ ಇವುಗಳ ರೂಪದಲ್ಲಿ ಅವನಿಗೆ ಹೇರಳವಾಗಿ ಹಣ ಸಿಗುತ್ತಾ ಬಂತು. ಜೊತೆಗೆ ಯಾರ ಮೇಲಾದರೂ ಏನಾದರೂ ಆಪಾದನೆ ಇದೆಯೆಂದು ಅವನಿಗೆ ಕಂಡು ಬಂದಾಗ, ಆ ಆಪಾದನೆಯನ್ನು ತನ್ನ ಪತ್ರಿಕೆಯಲ್ಲಿ ಪ್ರಕಟಿಸುವುದಾಗಿ ಹೆದರಿಸಿ ಅವರಿಂದ ಕಪ್ಪ ಕೀಳುತ್ತಿದ್ದನು.

ಪತ್ರಿಕೆಯಲ್ಲಿ ತನಗುಂಟಾದ ಜಯದಿಂದ ಪ್ರೋತ್ಸಾಹಗೊಂಡ ಶಂಕರನ ದೃಷ್ಟಿ ರಾಜಕಾರಣದ ಕಡೆಗೆ ಹೊರಳಿತು. ಅವನು ಸೂಕ್ಷ್ಮಮತಿ ಮತ್ತು ದುರಾಸೆ ಪ್ರವೃತ್ತಿಯವನು. ಉತ್ತರೋತ್ತರ ತಾನೊಬ್ಬ ರಾಜಕೀಯ ಮುಖಂಡನಾಗಬೇಕೆಂದು ಹವಣಿಸುತ್ತಿದ್ದನು. ಶ್ರೀಪುರ ಮತ್ತು ಸಿರಗೂರು ಜಿಲ್ಲೆಗಳು ಶ್ರೀಮಂತರ ದಬ್ಬಾಳಿಕೆ ಶೋಷಣೆಗಳಿಗೆ ಹೆಸರಾದ ಜಿಲ್ಲೆಗಳಾಗಿದ್ದವು. ಈ ಎರಡು ಜಿಲ್ಲೆಗಳಲ್ಲೂ ಭೂಮಾಲಿಕರ ಮೇಲೆ ರೈತರಿಗೆ ಬಹಳ ಅಸಮಾಧಾನವಿತ್ತು. ಈ ಎರಡು ಜಿಲ್ಲೆಗಳಲ್ಲೂ ರೈತರನ್ನು ಸಂಘಟನೆ ಮಾಡಿದರೆ ತಾನು ಅವರ ಮುಖಂಡನಾಗುವುದು ಸುಲಭವೆಂದು ಶಂಕರನು ಭಾವಿಸಿದನು. ತನ್ನ ಉದ್ದೇಶ ಸಾಧನೆಗಾಗಿ ಈ ಎರಡು ಜಿಲ್ಲೆಗಳಿಗೆ ಸಂಬಂಧಿಸಿದಂತೆ ಒಂದು ರೈತ ಸಂಘವನ್ನು ಸ್ಥಾಪಿಸಿದನು. ಅವನೇ ಆ ಸಂಘದ ಅಧ್ಯಕ್ಷನಾದನು. ಎರಡು ಜಿಲ್ಲೆಗಳಲ್ಲೂ, ಅವನಿಗಾಗದ ಭೂಮಾಲಿಕರನ್ನೂ ವಾಚಾಮಗೋಚರವಾಗಿ ಹಳಿಯುತ್ತಿದ್ದನು. ಸಾರ್ವಜನಿಕ ವೇದಿಕೆಗಳ ಮೇಲೆ ಅವನ ಹೊಲಸು ನಾಲಿಗೆ ಅವನಿಗೊಂದು ಪ್ರಬಲವಾದ ಅಸ್ತ್ರದಂತಿತ್ತು.

ಅವನ ಬಂಡವಾಳವನ್ನರಿಯದ ಬಡರೈತರು ಅವನೊಬ್ಬ ಬಡವರ ಬಂಧುವೆಂದು ಹೊಗಳಲಾರಂಭಿಸಿದರು. ಅವನ ಮತ್ತು ಅವನ ಕಡೆಯವರ ಉಪಟಳವನ್ನು ಸಹಿಸಲಾರದೆ ಕೆಲವು ಭೂಮಾಲಿಕರೂ ಸಹ, ಅವನ ಕೃಪಾಕಟಾಕ್ಷಕ್ಕೆ ಪಾತ್ರರಾಗುವ ಉದ್ದೇಶದಿಂದ ಅವನಿಗೆ ಆಗಾಗ ಕಪ್ಪವನ್ನು ನೀಡುತ್ತಿದ್ದರು. ಶಂಕರನು ತನಗೆ ಅನುವರ್ತಿಗಳಾಗಿದ್ದ ಭೂಮಾಲೀಕರಿಗೆ ಹಲವು ವಿಧಗಳಲ್ಲಿ ಸಹಾಯ ಮಾಡುತ್ತಿದ್ದನು. ಒಮ್ಮೊಮ್ಮೆ ಆ ಭೂಮಾಲೀಕರಿಗೆ, ಅವರ ರೈತರನ್ನು ಭೂಮಿಯಿಂದ ಅಕ್ರಮ ಉಚ್ಚಾಟನೆ ಮಾಡಲೂ ಸಹ ನೆರವು ನೀಡುತ್ತಿದ್ದನು. ಶಂಕರನು ಒಂದು ಕಡೆ ಸಂಘದ ಚಟುವಟಿಕೆಗಳ ನೆವದಲ್ಲಿ ನಾನಾ ರೂಪದಲ್ಲಿ ಶುಲ್ಕವನ್ನು ವಸೂಲು ಮಾಡುತ್ತಿದ್ದನು. ಇನ್ನೊಂದೆಡೆ ತನ್ನ ಪತ್ರಿಕೆಗಾಗಿ ಚಂದಾ ಹಣ ಸಂಗ್ರಹಿಸುತ್ತಿದ್ದನು. ಈ ರೀತಿ ವಸೂಲು ಮಾಡುತ್ತಿದ್ದ ಹಣಕ್ಕೆ ದಾಖಲೆ ಗೀಖಲೆಗಳು ಇರಲಿಲ್ಲ; ಲೆಕ್ಕ ಪತ್ರಗಳೂ ಇರಲಿಲ್ಲ. ಅವನು ಖರ್ಚು ವೆಚ್ಚಗಳಿಗೆ ಯಾವ ಕೊರತೆಯೂ ಇಲ್ಲದೆ ಆಡಂಬರದ ಜೀವನವನ್ನು ನಡೆಯಿಸಲಾರಂಭಿಸಿದನು. ಓಡಾಡುವುದಕ್ಕೋಸ್ಕರ ಒಂದು ಕಾರನ್ನು ಕೂಡ ಕೊಂಡುಕೊಂಡನು.

ಕೈಯಲ್ಲಿ ದುಡ್ಡು ಹೆಚ್ಚು ಹೆಚ್ಚಾಗಿ ಓಡಾಡಲಾರಂಭಿಸಿದಾಗ ಅವನಲ್ಲಿ ದುಶ್ಚಟಗಳೂ ಹೆಚ್ಚಾ ಹೆಚ್ಚಾಗಿ ಮನೆ ಮಾಡಲಾರಂಭಿಸಿದವು. ಯಥೇಚ್ಛವಾಗಿ ಬ್ರಾಂದಿ, ವಿಸ್ಕಿಗಳನ್ನು ಕುಡಿಯುತ್ತಿದ್ದನು. "ಶ್ರೀಮಂತರು ಬೆಲೆ ಬಾಳುವ ಬ್ರಾಂದಿ ವಿಸ್ಕಿಗಳನ್ನು ಕುಡಿಯುತ್ತಿರುವಾಗ ಬಡವರು ಕಳ್ಳಭಟ್ಟಿ ಸಾರಾಯಿ ತಯಾರು ಮಾಡಿದರೆ ತಪ್ಪೇನು?" ಎಂದು ಸಾರ್ವಜನಿಕ ಸಭೆಗಳಲ್ಲಿ ಸವಾಲು ಹಾಕುತ್ತಿದ್ದನು. ವಾಸ್ತವಿಕವಾಗಿ ಅವನ ಹಿಂಬಾಲಕರು ಕೆಲವರು ಕಳ್ಳಭಟ್ಟಿ ಸಾರಾಯಿ ತಯಾರಿಕೆ ಮತ್ತು ಇತರ ಕಳ್ಳ ವ್ಯವಹಾರಗಳಲ್ಲಿ ನಿರತರಾಗಿದ್ದರು. ಅವರ ಕಳ್ಳ ಉತ್ಪತ್ತಿಯಲ್ಲಿ ಇವನಿಗೂ ಒಂದು ಪಾಲಿತ್ತು. ಜನರನ್ನು ಒಳ್ಳೆಯ ಹಾದಿಯಲ್ಲಿ ಕೊಂಡೊಯ್ಯುವ ಬದಲು ಅವರ ದುರ್ವ್ಯಸನ, ದುರ್ವ್ಯವಹಾರಗಳಿಗೆ ಅವನು ಪ್ರೋತ್ಸಾಹ ನೀಡುತ್ತಿದ್ದನು.

ಎರಡು ವರ್ಷಗಳೊಳಗಾಗಿ, ಶಂಕರನ ರೈತ ಸಂಘ ಪ್ರಬಲ ಸಂಸ್ಥೆಯಾಗಿ ಬೆಳೆಯಿತು. ರಾಜ್ಯದ ರಾಜಕಾರಣ ಮತ್ತಷ್ಟು ಹೊಲಸಾಗಿ ಹೋಗಿತ್ತು. ಆಡಳಿತ ಇನ್ನಷ್ಟು ಹದಗೆಟ್ಟು ಹೋಗಿತ್ತು. ಅರಾಜಕತೆ ತಾಂಡವವಾಡುತ್ತಿತ್ತು. ಮೂರು ವರ್ಷಗಳಲ್ಲಿ ಮೂರು ಮಂತ್ರಿಮಂಡಲಗಳು ಅಸ್ತಿತ್ವಕ್ಕೆ ಬಂದು ಅಳಿದು ಹೋಗಿದ್ದವು. ರಾಜ್ಯದಲ್ಲಿ ಹಲವು ರಾಜಕೀಯ ಪಕ್ಷಗಳು ಹುಟ್ಟಿಕೊಂಡಿದ್ದವು. ಕೆಲವರ ಬಾಯಲ್ಲಿ ಅಲ್ಲಲ್ಲಿ ಕ್ರಾಂತಿಯ ಕೂಗು ಕೇಳಿಸುತ್ತಿತ್ತು. ಶಂಕರನು ತನ್ನ ಮುಂದಿನ ಹಂತದ ಕನಸನ್ನು ಕಾಣುತ್ತಿದ್ದನು. ರೈತಾಪಿ ಜನರಲ್ಲಿ ತನಗಿದ್ದ ಪ್ರಭಾವವನ್ನು ಉಪಯೋಗಿಸಿಕೊಂಡು ತನ್ನದೇ ಆದ ಒಂದು ರಾಜಕೀಯ ಪಕ್ಷವನ್ನು ಕಟ್ಟಬೇಕೆಂದು ನಿರ್ಧರಿಸಿದ್ದನು. ತನ್ನ ಸಂಘದ ಹೆಸರನ್ನು ಬದಲಾಯಿಸಿ ಅದಕ್ಕೆ "ಕ್ರಾಂತಿಸೇನೆ" ಎಂದು ನಾಮಕರಣ ಮಾಡಿದನು. ತಾನು ಚೇನಾ ಪಂಥದ ಉಗ್ರಗಾಮಿ ಕಮ್ಯೂನಿಸ್ಟ್ ಎಂದೂ, ಈ ದೇಶದಲ್ಲಿ ಕ್ರಾಂತಿಯಾಗಿ,

ಬಂಡವಾಳಗಾರರ ನಾಶವಾದ ಹೊರತು, ಜನಸಾಮಾನ್ಯರ ಉದ್ಧಾರವಾಗುವುದಿಲ್ಲವೆಂದೂ, ತನ್ನ ಪತ್ರಿಕೆಯಲ್ಲಿ ಮತ್ತು ಸಾರ್ವಜನಿಕ ಸಭೆಗಳಲ್ಲಿ ಸಾರುತ್ತಿದ್ದನು. ಅವನ ಪೊಳ್ಳು ಘೋಷಣೆಗಳನ್ನು ಕೇಳುತ್ತಿದ್ದ ಅನಕ್ಷರಸ್ಥ ಬಡಬಗ್ಗರು ಅವನೊಬ್ಬ ನಿಜವಾದ ಕ್ರಾಂತಿ ಪುರುಷನೆಂದು ಭಾವಿಸಿದರು.

ಬಡತನದಿಂದ ನೊಂದವರೂ, ನಿರುದ್ಯೋಗದಿಂದ ನರಳುತ್ತಿದ್ದವರೂ, ಸರ್ಕಾರದ ದುರಾಡಳಿತದಿಂದ ಬೇಸತ್ತವರೂ, ಶ್ರೀಮಂತರ ದುರಾಸೆಯಿಂದ ಕುಪಿತರಾದವರೂ ಶಂಕರನ ಮಾರ್ಗವೇ ತಮ್ಮ ಮುಕ್ತಿಗೆ ಹೆದ್ದಾರಿ ಎಂದು ಭಾವಿಸಿ, ಅವನ ಸೇನೆಯನ್ನು ಸೇರತೊಡಗಿದರು. ಆದರ್ಶ ಪ್ರೇರಿತರಾದ ವಿದ್ಯಾವಂತ ಯುವಕ ಯುವತಿಯರೂ ಸಹ ಅವನ ಸೇನೆಯನ್ನು ಸೇರಲಾರಂಭಿಸಿದರು. ಅನಿಲಪುರದ ಮಾಜಿ ಲೋಕಸಭಾ ಸದಸ್ಯರಾಗಿದ್ದ ಪುರುಷೋತ್ತಮಬಾಬು ಅವರ ಮಗ ಚಂದ್ರಹಾಸನೂ, ಅವನ ಗೆಳೆಯ ಕಿಶೋರನೂ, ಅವರಿಬ್ಬರ ಗೆಳೆಯ ಕರುಣಾಕರನೆಂಬ ಯುವಕನೂ, ಕಾಂಗ್ರೆಸ್ ಸರಕಾರದ ದುರಾಡಳಿತ ಭ್ರಷ್ಟಾಚಾರಗಳಿಂದ ಬೇಸತ್ತು, ಆದರ್ಶ ಪ್ರೇರಿತರಾಗಿ, ಶಂಕರನೊಬ್ಬ ಆದರ್ಶ ಕ್ರಾಂತಿಕಾರನೆಂಬ ಭಾವನೆಯಿಂದ, ಕ್ರಾಂತಿಸೇನೆಯನ್ನು ಸೇರಿದ್ದರು. ಅವರ ಜೊತೆಯಲ್ಲಿ ಶ್ರೀಪುರದ ದಿವಂಗತ ಡಾಕ್ಟರ್ ಸುರೇಶ್ಚಂದ್ರರವರ ಮಗಳು ಗೌರಿಯೂ ಕೂಡ ಕ್ರಾಂತಿಸೇನೆಯ ಸದಸ್ಯಳಾದಳು.

ವಿದ್ಯಾವಂತರೂ, ಸುಸಂಸ್ಕೃತರೂ ಆದರ್ಶಪ್ರೇರಿತರಾಗಿ, 'ಈ ದೇಶದಲ್ಲಿ ಕ್ರಾಂತಿಯಾಗಬೇಕೆಂಬ ಸದ್ಭಾವನೆಯಿಂದ ಕ್ರಾಂತಿಸೇನೆಯ ಸದಸ್ಯರಾಗಿದ್ದರೆ, ಸ್ವಾರ್ಥ ಸಾಧಕರು ತಮ್ಮ ಸ್ವಂತ ಲಾಭಕ್ಕಾಗಿ ಕ್ರಾಂತಿಸೇನೆಯ ಸದಸ್ಯರಾಗಿದ್ದರು. ಕಳ್ಳಸಾಗಾಣಿಕೆ, ಕಳ್ಳಬಟ್ಟಿ ಸಾರಾಯಿ ತಯಾರಿಕೆ, ಕಳ್ಳ ನೋಟುಗಳ ತಯಾರಿಕೆ, ಕಾಳಸಂತೆ ವ್ಯಾಪಾರ ಮುಂತಾದ ಕಳ್ಳ ವ್ಯವಹಾರಗಳಲ್ಲಿ ತೊಡಗಿದ್ದ ಜನರೂ ಸಹ, ಕ್ರಾಂತಿಸೇನೆಯ ಪೋಷಾಕಿನಿಂದ ತಮ್ಮ ಕಳ್ಳ ವ್ಯವಹಾರಗಳನ್ನು ನಿರಾತಂಕವಾಗಿ ಸಾಗಿಸಬಹುದೆಂಬ ಆಸೆಯಿಂದ ಕ್ರಾಂತಿಸೇನೆಯ ಸದಸ್ಯರಾಗಿದ್ದರು. ಕಳ್ಳಕಾಕರೂ, ಪುಂಡುಪೋಕರಿಗಳೂ, ಕೆಲವರು ದರೋಡೆಕಾರರೂ ಸಹಕ್ರಾಂತಿಯ ಹೆಸರಿನಲ್ಲಿ ಕಳ್ಳತನ ದರೋಡೆಗಳನ್ನು ಸುಲಭವಾಗಿ ನಡೆಸಬಹುದೆಂಬ ದುರಭಿಪ್ರಾಯದಿಂದ. ಕ್ರಾಂತಿಸೇನೆಯ ಸದಸ್ಯರಾಗಿದ್ದರು. ಕೆಲವರು ಶ್ರೀಮಂತರೂ ಸಹ, ಕ್ರಾಂತಿಸೇನೆಯಿಂದ ಒದಗಬಹುದಾದ ಅಪಾಯವನ್ನು ತಪ್ಪಿಸಿಕೊಳ್ಳುವ ಸಲುವಾಗಿಯೋ, ಅಥವಾ ಕ್ರಾಂತಿಸೇನೆಯ ಪೋಷಾಕಿನಲ್ಲಿ ಮತ್ತಷ್ಟು ಶ್ರೀಮಂತರಾಗಬೇಕೆಂಬ ದುರದ್ದೇಶದಿಂದಲೋ, ಅಥವಾ ಶಂಕರನ ಬೆಂಬಲದಿಂದ ರಾಜಕೀಯ ಮುಖಂಡರಾಗಬೇಕೆಂಬ ಆಸೆಯಿಂದಲೋ ಅಲ್ಲಲ್ಲಿ ಕ್ರಾಂತಿಸೇನೆಯ ಸದಸ್ಯರಾಗಿದ್ದರು. ಹೀಗಾಗಿ ಒಂದೆರಡು ವರ್ಷಗಳಲ್ಲಿ ಕ್ರಾಂತಿಸೇನೆ ರಾಜ್ಯದಲ್ಲಿ ಪ್ರಬಲ ಸಂಸ್ಥೆಯಾಗಿ ಬೆಳೆಯಿತು. ಅವನ ಅನುಯಾಯಿಗಳು ಅವನನ್ನು "ಜನರಲ್ ಶಂಕರ್" ಎಂದು ಸಂಬೋಧಿಸುತ್ತಿದ್ದರು. ಮತ್ತು ಕ್ರಾಂತಿಸೇನೆಯನ್ನು 'ಮಾವೋಸೇನೆ' ಎಂದೂ ಸಹ ಕರೆಯುತ್ತಿದ್ದರು.

ಶಂಕರನು ತನ್ನ ಸೇನೆಯ ಸದಸ್ಯರನ್ನು ಮೂರು ವರ್ಗಗಳನ್ನಾಗಿ ವಿಂಗಡಿಸಿದ್ದನು. ಮೊದಲನೆಯ ವರ್ಗದವರಿಗೆ ಕಳ್ಳ ತುಪಾಕಿಗಳನ್ನೂ, ಪಿಸ್ತೂಲುಗಳನ್ನೂ ಒದಗಿಸಿದ್ದನು. ಅವರೆಲ್ಲರೂ ಅವನ ಆಪ್ತ ಅನುಚರರಾಗಿದ್ದರು. ಅವರಿಗೆ ತಿಂಗಳಿಗೆ ಒಂದು ನೂರು ರೂಪಾಯಿಗಳಿಂದ ಹಿಡಿದು ಎರಡು ನೂರು ರೂಪಾಯಿಗಳವರೆಗೆ ಸಂಬಳ ಕೊಡುತ್ತಿದ್ದನು. ಕುಪ್ರಸಿದ್ಧ ಥಕಾಯಿತರಾಗಿದ್ದ ಭೋಲಾನಾಥ್, ಇಸ್ಮೇಯಿಲ್, ದೇಬಿನ್ ಇವರುಗಳು ಈ ವರ್ಗಕ್ಕೆ ಸೇರಿದವರಾಗಿದ್ದರು. ಪ್ರಸಿದ್ಧ ಕ್ರಾಂತಿಕಾರನೆಂದು ಹೆಸರಾಗಿದ್ದ, ಕ್ರಾಂತಿ ಸೇನೆಯಲ್ಲಿ ರಕ್ತಕೇಸರಿಯೆಂದು, ಕರೆಯಲ್ಪಡುತ್ತಿದ್ದ ಕೇಸರಿಸಿಂಗನೂ ಸಹ ಮೊದಲನೆಯ ವರ್ಗದ ಸದಸ್ಯನಾಗಿದ್ದನು. ಮೊದಲನೆಯ ವರ್ಗದ ಸದಸ್ಯರು ಶಂಕರನ ಗುಪ್ತ ಮಂತ್ರಾಲೋಚನೆಯ ಸಲಹೆಗಾರರಾಗಿದ್ದರು. ಎರಡನೆಯ ವರ್ಗದ ಸದಸ್ಯರಿಗೆ ತಿಂಗಳಿಗೆ ಐವತ್ತು ರೂಪಾಯಿಗಳ ತಲಬು ಕೊಡುತ್ತಿದ್ದನು. ಕತ್ತಿ, ದೊಣ್ಣೆ ಈಟಿ ಮುಂತಾದ ಸಾಮಾನ್ಯ ಆಯುಧಗಳನ್ನು ಅವರಿಗೆ ಒದಗಿಸಿದ್ದನು. ಒಂದು ಮತ್ತು ಎರಡನೆಯ ವರ್ಗದ ಸದಸ್ಯರಿಗೆ ಸಮವಸ್ತ್ರಗಳನ್ನು ಒದಗಿಸಿದ್ದನು. ಅವರು ಸಮವಸ್ತ್ರವನ್ನು ಧರಿಸಿ ಸಿಪಾಯಿಗಳಂತೆ ಆಗಾಗ ಕವಾಯಿತು ನಡೆಯಿಸುತ್ತಿದ್ದರು. ಶಂಕರನ ಸೈನ್ಯದಲ್ಲಿ ಸುಮಾರು ಒಂದು ಸಾವಿರ ಸಮವಸ್ತ್ರಧಾರಿಗಳು ಅವನ ಆಜ್ಞಾಧಾರಕರಾಗಿದ್ದರು. ಶಂಕರನು ಒಂದು ಸಣ್ಣ ಸೈನ್ಯದ ದಳಪತಿಯಂತೆ ಇದ್ದನು. ಅವನು ಸೈನ್ಯದ ದಳಪತಿಯಂತೆ ಉಡುಪನ್ನು ಧರಿಸುತ್ತಿದ್ದನು. ಮೂರನೆಯ ವರ್ಗದ ಸದಸ್ಯರು ಸಾಮಾನ್ಯ ಜನರಾಗಿದ್ದರು. ಒಂದು ವರ್ಗದವರ ಕಾರುಬಾರುಗಳು ಇನ್ನೊಂದು ವರ್ಗದವರಿಗೆ ಗೊತ್ತಾಗದಂತೆ ಶಂಕರನು ವ್ಯವಸ್ಥೆ ಮಾಡಿದನು.

ಶಂಕರನಿಗಾಗಲೀ ಅವನ ಅಗ್ರಗಣ್ಯ ಅನುಯಾಯಿಗಳಿಗಾಗಲೀ ಕಾರ್ಲಮಾರ್ಕ್ಸ್ ಸಿದ್ಧಾಂತ ಸ್ವಲ್ಪವೂ ಅರ್ಥವಾಗಿರಲಿಲ್ಲ. ಚೀನಾದೇಶದ ಅಧ್ಯಕ್ಷ ಮಾವೋ ಅವರ ಉವಾಚಗಳನ್ನು ಶಂಕರನು ಅಲ್ಪ ಸ್ವಲ್ಪ ತಿಳಿದು ಕೊಂಡಿದ್ದನು. ಅವುಗಳನ್ನು ಗಿಳಿಪಾಠ ಮಾಡಿಕೊಂಡು ಪಕ್ಷದ ಸಭೆಗಳಲ್ಲಿ "ಕೋವಿಯ ನಳಿಗೆಯಲ್ಲಿಯೇ ಕ್ರಾಂತಿಯ ಶಕ್ತಿ ಅಡಗಿದೆ" ಮುಂತಾಗಿ ಅಬ್ಬರಿಸುತ್ತಿದ್ದನು. ವಾಸ್ತವಿಕವಾಗಿ ಅವನಿಗೆ ಬೇಕಾಗಿದ್ದುದು ಕ್ರಾಂತಿಯಲ್ಲ; ಹಣ, ಹೆಣ್ಣು, ಹೆಂಡ, ಅಧಿಕಾರ. ಅವನ ದುರಾಸೆಗೆ ಮಿತಿಯೇ ಇರಲಿಲ್ಲ. ಅವನಿಗೆ ನಾನಾ ಆಸೆಗಳಿದ್ದವು. ಒಂದು ಕಡೆ ರಾಜಕೀಯ ಮುಖಂಡನಾಗಬೇಕೆಂಬ ಮಹತ್ವಾಕಾಂಕ್ಷೆ; ಇನ್ನೊಂದು ಕಡೆ ಶ್ರೀಮಂತನಾಗಬೇಕೆಂಬ ದುರಾಸೆ; ಮತ್ತೊಂದು ಕಡೆ ಭೋಗ ವಿಲಾಸ ಮೋಜಿನ ಜೀವನವನ್ನು ನಡೆಯಿಸಬೇಕೆಂಬ ಚಟ. ಅವನು ಮಹಾ ಕುಟಿಲ ಪ್ರವೃತ್ತಿಯವನು. ಜೊತೆಗೆ ತನ್ನ ತಂದೆಯ ದುರ್ಗುಣಗಳೆಲ್ಲವೂ ಅವನಿಗೆ ರಕ್ತಗತವಾಗಿ ಬಂದಿದ್ದವು. ಹೊರನೋಟಕ್ಕೆ ಸಭ್ಯನಂತೆ ಕಾಣಿಸುತ್ತಿದ್ದರೂ. ಅವನು ಎಂತಹ ಹೇಯ ಕೆಲಸವನ್ನಾದರೂ ಮಾಡಲು ಹೇಸುವವನಾಗಿರಲಿಲ್ಲ.

ಅವನು ತನಗಾಗದವರನ್ನೆಲ್ಲಾ ಭೂರ್ಷ್ವಾಗಳೆಂದು ಕರೆಯುತ್ತಿದ್ದನು. ರಕ್ತಪಾತದಿಂದಲೇ ಈ ದೇಶಕ್ಕೆ ಮುಕ್ತಿಯೆಂದೂ, ಕ್ರಾಂತಿಯಾಗಿ ಹಣವಂತರನ್ನು

ಕೊಲ್ಲುವುದು ಕ್ರಾಂತಿಸೇನೆಯ ಪವಿತ್ರ ಕರ್ತವ್ಯವೆಂದೂ, ಕ್ರಾಂತಿಸೇನೆಯನ್ನು ವಿರೋಧಿಸುವವರೆಲ್ಲರೂ ಬಡಬಗ್ಗರ ಶತ್ರುಗಳೆಂದೂ, ತನ್ನ ಸೇನೆಗೆ ಸೇರಿದ್ದ ಎಳೆವಯಸ್ಸಿನ ಮುಗ್ಧರಾದ ಯುವಕ ಯುವತಿಯರಿಗೂ, ಅನಕ್ಷರಸ್ಥರಿಗೂ ಬೋಧಿಸುತ್ತಿದ್ದನು. ಅವನ ಬೋಧನೆಯನ್ನು ಕೇಳಿದ ಮುಗ್ಧರಾದ ಕ್ರಾಂತಿಸೇನೆಯ ಸದಸ್ಯರು ತಮ್ಮ ಪಕ್ಷಕ್ಕೆ ವಿರೋಧವಾಗಿರುವವರನ್ನು ಆಸ್ತಿವಂತರನ್ನೂ ಕೊಲ್ಲುವುದೇ ತಮ್ಮ ಗುರಿಯೆಂದು ತಿಳಿದಿದ್ದರು. ಲೋಕಾನುಭವವಿಲ್ಲದ ಅವರಿಗೆ ಶಂಕರ ಹೇಳಿದ್ದೇ ವೇದವಾಕ್ಯವಾಗಿತ್ತು. ಶಂಕರನಿಗಾಗಲೇ ಮೂವತ್ತೈದು ವರ್ಷಗಳಾಗಿತ್ತು. ಆತನಿಗೆ ಇನ್ನೂ ವಿವಾಹವಾಗಿರಲಿಲ್ಲ. ಕ್ರಾಂತಿಯಾಗುವವರೆಗೆ ಮದುವೆಯಾಗುವುದಿಲ್ಲವೆಂದೂ, ದೇಶದ ಕಲ್ಯಾಣಕ್ಕಾಗಿ ತಾನು ಬ್ರಹ್ಮಚಾರಿಯಾಗಿರುತ್ತೇನೆಂದೂ ಹೇಳುತ್ತಿದ್ದನು. ಆದರೆ ವಾಸ್ತವಿಕವಾಗಿ, "ಹಾಲು ಸುಲಭವಾಗಿ ಸಿಗುತ್ತಿರುವಾಗ ಹಸುವನ್ನು ಕಟ್ಟಿ ಏಕೆ ಶ್ರಮ ಪಡಬೇಕು" ಎಂಬುದು ಅವನ ಸಿದ್ಧಾಂತವಾಗಿತ್ತು.

ಶಂಕರನು ತನ್ನ ಸೇನೆಯ ಖರ್ಚು ವೆಚ್ಚಗಳಿಗಾಗಿ ಸದಸ್ಯರಿಂದಲೂ, ಇತರರಿಂದಲೂ ಯಥೇಚ್ಛವಾಗಿ ಹಣವನ್ನು ಸಂಗ್ರಹಿಸುತ್ತಿದ್ದನು. ಆದರೂ ದಿನೇದಿನೇ ಪಕ್ಷದ ಖರ್ಚುವೆಚ್ಚಗಳು ಹೆಚ್ಚಾಗುತ್ತಿದ್ದವು. ಅವನ ಸ್ವಂತ ಖರ್ಚು, ವೆಚ್ಚಗಳೂ ಹೆಚ್ಚಾಗುತ್ತಿದ್ದವು. ಅವನು ಯಾವ ಶ್ರೀಮಂತರನ್ನು ದೂಷಿಸುತ್ತಿದ್ದನೋ, ಆ ಶ್ರೀಮಂತರು ಅವರ ಜೀವನಕ್ಕಾಗಿ ಖರ್ಚು ಮಾಡುತ್ತಿದ್ದನು. ಅವನಿಗೆ ವಿದೇಶಿ ಮದ್ಯವೇ ಬೇಕಾಗಿತ್ತು. ಅವನು ಹಣಕ್ಕೋಸ್ಕರ ಏನು ಮಾಡಬೇಕೆಂದು ಯೋಚಿಸುತ್ತಿರುವಾಗ, ಅವನ ಹಣದ ಸಮಸ್ಯೆಗೆ ಪರಿಹಾರವನ್ನು ಸೂಚಿಸಲೋಸುಗವೋ ಎಂಬಂತೆ ಒಂದು ಪ್ರಸಂಗ ತಾನಾಗಿ ಒದಗಿ ಬಂತು.

ಶ್ರೀಪುರ ಜಿಲ್ಲೆಯ ಮಂಗಳಹಾರ ಎಂಬ ಪಟ್ಟಣದಲ್ಲಿದ್ದ ವಾಸುದೇವನೆಂಬ ಶ್ರೀಮಂತನು ಶಂಕರನ ಉಪಟಳವನ್ನು ತಡೆಗಟ್ಟುವ ಸಲುವಾಗಿ, ಇತರ ಕೆಲವು ಶ್ರೀಮಂತರನ್ನು ತನ್ನ ಜೊತೆಯಲ್ಲಿ ಸೇರಿಸಿಕೊಂಡು, ಒಂದು ಸಂಘವನ್ನು ಸ್ಥಾಪಿಸಿದನು. ಆ ಶ್ರೀಮಂತನೇ ಆ ಸಂಘದ ಅಧ್ಯಕ್ಷನಾಗಿದ್ದನು. ಸಂಘದ ವತಿಯಿಂದ, ಅವನು ಒಂದು ವಾರ ಪತ್ರಿಕೆಯನ್ನು ಹೊರಡಿಸುತ್ತಿದ್ದನು. ಅವನೇ ಆ ಪತ್ರಿಕೆಯ ಸಂಪಾದಕ ನಾಗಿದ್ದನು. ಶಂಕರನ ಮತ್ತು ಅವನ ಅನುಯಾಯಿಗಳ ಪುಂಡಾಟಿಕೆಗಳನ್ನು ಬಯಲಿಗೆಳೆ ಯುವುದೇ ಆ ಪತ್ರಿಕೆಯ ಪ್ರಬಲ ಉದ್ದೇಶವಾಗಿತ್ತು. ಜೊತೆಗೆ ಶಂಕರನ ಸೇನೆಯ ವಿರುದ್ಧ ಒಂದು ಸೇನೆಯನ್ನು ನಿರ್ಮಾಣ ಮಾಡಬೇಕೆಂದು ಸಹ ವಾಸುದೇವನೂ ಅವನ ಸಂಗಾತಿಗಳೂ ಸನ್ನಾಹ ಮಾಡುತ್ತಿದ್ದರು.

ಪ್ರತಿವಾರವೂ ಆ ಶ್ರೀಮಂತರ ಪತ್ರಿಕೆಯಲ್ಲಿ ತನ್ನ ವಿರುದ್ಧ ಬರೆಯುತ್ತಿದ್ದ ಲೇಖನಗಳನ್ನು ಓದಿ ಶಂಕರನು ಕೋಪದಿಂದ ಕಿಡಿಕಿಡಿಯಾಗುತ್ತಿದ್ದನು. ಆ ಪತ್ರಿಕೆಯಲ್ಲಿ, ಒಂದುವಾರ ಅವನ ಮೋಜಿನ ಜೀವನದ ವಿಚಾರದಲ್ಲಿ ಬರೆದರೆ, ಇನ್ನೊಂದುವಾರ ಅವನ ಸೇನೆಯಲ್ಲಿದ್ದ ಢಕಾಯಿತರ ಮತ್ತು ಕಳ್ಳಕಾಕರ ಜೀವನ ಚರಿತ್ರೆಯನ್ನು ಬರೆಯಲಾಗುತ್ತಿತ್ತು. ಆ ಪತ್ರಿಕೆಯನ್ನು ಹೊರಡಿಸುತ್ತಿದ್ದ ಶ್ರೀಮಂತರಿಗೆ ಬುದ್ಧಿ ಕಲಿಸದಿದ್ದರೆ

ತನಗೂ ತನ್ನ ಸೇನೆಗೂ ಧಕ್ಕೆಯುಂಟಾಗುವುದೆಂಬುದನ್ನು ಶಂಕರನು ಮನಗಂಡಿದ್ದನು. ಆ ಪತ್ರಿಕೆಯಲ್ಲಿ ಬರತಕ್ಕ ಪ್ರತಿಯೊಂದು ಲೇಖನವೂ ಅವನ ಗೌರವ ಪ್ರತಿಷ್ಠೆಗಳನ್ನು ಕುಗ್ಗಿಸುವಂತಿದ್ದವು. ವಾಸುದೇವನಿಗೆ ಯಾವರೀತಿ ಬುದ್ಧಿ ಕಲಿಸಬೇಕೆಂಬುದನ್ನು ನಿರ್ಧರಿಸುವ ಸಲುವಾಗಿ ಒಂದು ದಿನ ಅವನ ಆಪ್ತ ಅನುಚರರಾದ ಇಸ್ಮೇಯಿಲ್, ಬೋಲಾನಾಥ್, ಕೇಸರೀನಾಥ್, ದೇಬಿನ್ ಇವರುಗಳನ್ನು ಸಮಾಲೋಚನೆಗೆ ಬರಮಾಡಿಕೊಂಡನು. ಆ ಪತ್ರಿಕೆಯನ್ನು ನಡೆಸುತ್ತಿದ್ದ ಶ್ರೀಮಂತರ ಉಪಟಳವನ್ನು ಹೇಗಾದರೂ ನಿಲ್ಲಿಸುವುದು ಅಗತ್ಯವಿದೆಯೆಂದೂ, ಆ ಬಗ್ಗೆ ಏನಾದರೂ ಉಪಾಯವನ್ನು ಕಂಡು ಹಿಡಿಯಬೇಕೆಂದೂ ಶಂಕರನು ಅವರಿಗೆ ಸೂಚಿಸಿದನು. ಆ ಇಸ್ಮೇಯಿಲನು "ಅದಕ್ಯಾಕೆ ಇಷ್ಟೊಂದು ಚಿಂತೆ ನಿಮಗೆ? ಆ ಕೆಲಸವನ್ನು ನಮಗೆ ಬಿಡಿ, ಒಂದು ವಾರದೊಳಗಾಗಿ ಅವನಿಗೆ ತಕ್ಕ ಬುದ್ಧಿ ಕಲಿಸುತ್ತೇವೆ" ಎಂದನು.

ಎಂಟು ದಿನಗಳನಂತರ ಇಸ್ಮೇಯಿಲನ ಮುಖಂಡತ್ವದಲ್ಲಿ ಇಪ್ಪತ್ತು ಜನರಿಂದ ಕೂಡಿದ್ದ ಕ್ರಾಂತಿಸೇನೆಯ ತಂಡವೊಂದು ಲಾರಿಯಲ್ಲಿ, ರಾತ್ರಿ ಒಂದು ಘಂಟೆಯ ಹೊತ್ತಿಗೆ, ಮಂಗಳಹಾರಕ್ಕೆ ಹೋಯಿತು. 'ವಾಸುದೇವನೂ, ಅವನ ಮನೆಯವರೂ ಮಲಗಿದ್ದರು. ವಾಸುದೇವನು ಪೊಲೀಸರು ಅಥವಾ ಇತರರೊಡನೆ ಟೆಲಿಫೋನಿನಲ್ಲಿ ಮಾತನಾಡಲು ಅವಕಾಶವಿಲ್ಲದಂತೆ, ಮಾಡುವ ಸಲುವಾಗಿ, ಮೊದಲು ಟೆಲಿಫೋನ್ ತಂತಿಗಳನ್ನು ಸದ್ದಿಲ್ಲದೆ ಕತ್ತರಿಸಿ ಹಾಕಿದರು. ಆಮೇಲೆ ವಾಸುದೇವನ ಮನೆಮುಂದೆ ನಿಂತು, ಅವನ ಹೆಸರು ಹಿಡಿದು ಕೂಗಿ, ತಾವು ಶ್ರೀಪುರಕ್ಕೆ ಹೋಗತಕ್ಕವರೆಂದೂ, ತಮ್ಮ ಲಾರಿ ಕೆಟ್ಟು ಹೊಗಿದೆಯೆಂದೂ, ಏನಾದರೂ ಒಂದು ಬೆಳಕನ್ನು ಕೊಟ್ಟರೆ ಲಾರಿಯನ್ನು ಸರಿಪಡಿಸಿಕೊಳ್ಳಲು ಸಾಧ್ಯವಾಗುವುದೆಂದೂ ಬಹಳ ದೈನ್ಯದಿಂದ ಕೇಳಿದರು. ಆತನ ನಮ್ರತೆಯ ಮಾತುಗಳನ್ನು ನಂಬಿ ವಾಸುದೇವನು ಬಾಗಿಲನ್ನು ತೆಗೆದು ಹೊರಗೆ ಬಂದನು.

ಅವನು ಹೊರಗೆ ಬಂದೊಡನೆ ಕೆಲವರು ಅವನನ್ನು ಹಿಡಿದುಕೊಂಡರು. ಉಳಿದವರು ಅವನ ಮನೆಯೊಳಗೆ ನುಗ್ಗಿದರು. ಮನೆಯಲ್ಲಿದ್ದವರ ಕೈಕಾಲುಗಳನ್ನು ಕಟ್ಟಿಹಾಕಿ, ಅವರೆಲ್ಲರನ್ನೂ ಒಂದು ಕೊಠಡಿಯೊಳಗೆ ಹಾಕಿ, ಅವರ ಬಾಯಿಗೆ ಬಟ್ಟೆಯನ್ನು ತುರುಕಿ, ಕೊಠಡಿಯ ಬಾಗಿಲನ್ನು ಮುಚ್ಚಿಕೊಂಡರು. ನಂತರ ಮನೆಯನ್ನೆಲ್ಲಾ ಶೋಧಿಸಿ, ಸುಮಾರು ಒಂದು ಲಕ್ಷರೂಪಾಯಿ ಬೆಲೆಬಾಳುವ ಬೆಳ್ಳಿ ಬಂಗಾರದ ಮಾಲುಗಳನ್ನೂ, ಇಪ್ಪತ್ತು ಸಾವಿರ ರೂಪಾಯಿಗಳ ನಗದಿ ಹಣವನ್ನೂ ದೋಚಿಕೊಂಡರು. ಮನೆಯ ಮುಂದುಗಡೆ ಇದ್ದವರು ಮನೆಯ ಯಜಮಾನನಾದ ವಾಸುದೇವನ ರುಂಡವನ್ನು ಕತ್ತರಿಸಿ, ಅದನ್ನು ಮುಂಭಾಗದ ಗೇಟಿಗೆ ನೇತು ಹಾಕಿದರು. ಮುಂಡವನ್ನು ಮನೆಯ ಮುಂಭಾಗದ ಜಗಲಿಯ ಕಂಬಕ್ಕೆ ಕಟ್ಟಿಬಿಗಿದರು. ಆನಂತರ ಮನೆಯಲ್ಲಿದ್ದ ಎರಡು ಬಂದೂಕುಗಳನ್ನೂ, ದೋಚಿಕೊಂಡಿದ್ದ ಸಾಮಾನುಗಳನ್ನೂ ಕೊಂಡೊಯ್ದರು.

ಹೊರಡುವ ಮುನ್ನ "ಕ್ರಾಂತಿಯನ್ನು ಎದುರಿಸುವರಿಗೆಲ್ಲಾ ಇದೇ ಶಾಸ್ತಿ" ಎಂದು ಒಂದು ಚೀಟಿಯಲ್ಲಿ ಬರೆದು ಮನೆಯ ಮುಂದುಗಡೆ ಚಿಟಗಾಯಿಸಿದರು.

ಮರುದಿನ ಬೆಳಿಗ್ಗೆ ಇಸ್ಮೇಯಿಲನೂ, ಭೋಲಾನಾಥನೂ, ಕೇಸರೀಸಿಂಗನೂ ತಾವು ಲೂಟಿ ಮಾಡಿದ್ದ ಹಣವನ್ನೂ, ಬೆಳ್ಳಿ ಬಂಗಾರದ ಸಾಮಾನುಗಳನ್ನೂ ಶಂಕರನಿಗೆ ಒಪ್ಪಿಸಿ ವಾಸುದೇವನನ್ನು ತುಂಡರಿಸಿದ ಪ್ರಸಂಗವನ್ನು ವರದಿ ಮಾಡಿದರು. ಒಂದೇಸಾರಿ ಇಪ್ಪತ್ತು ಸಾವಿರರೂಪಾಯಿಗಳ ಆದಾಯವನ್ನು ಶಂಕರನು ಎಂದೂ ನೋಡಿರಲಿಲ್ಲ. ಅಷ್ಟೊಂದು ಹಣದ ಜೊತೆಗೆ ಒಂದು ಲಕ್ಷ ರೂಪಾಯಿಗಳ ಬೆಲೆಬಾಳುವ ಬೆಳ್ಳಿ ಬಂಗಾರದ ಸಾಮಾನುಗಳನ್ನು ನೋಡಿ ಅವನು ಸಂತೋಷದಿಂದ ಹಿಗ್ಗಿದನು. "ಹಣದ ಕೊರತೆಗೆ ಲೂಟಿಯೇ ಪರಿಹಾರ" ಎಂದು ಮನಸ್ಸಿನಲ್ಲೇ ಅಂದುಕೊಂಡನು. ಅಂದಿನಿಂದ ಶಂಕರನ ಕಾರ್ಯಾಚರಣೆಯಲ್ಲಿ ಲೂಟಿ ಒಂದು ಪ್ರಮುಖ ಅಸ್ತ್ರವಾಯಿತು. ಕೊಲೆ ಅವನ ವೈರಿಗಳ ನಿರ್ನಾಮದ ದಿನಚರಿಯಾಯಿತು.

ಮಂಗಳಹಾರದ ಘಟನೆಯಾದ ನಂತರ ಕ್ರಾಂತಿಸೇನೆಯವರು ಕಾಳೀಪುರದ ಒಂದು ಬ್ಯಾಂಕಿನಲ್ಲಿ ದರೋಡೆ ಮಾಡಿದರು. ಆ ದರೋಡೆಯಲ್ಲಿ ಸುಮಾರು ಐದುಲಕ್ಷ ರೂಪಾಯಿ ಶಂಕರನ ಕೈವಶವಾಯಿತು. ಅಲ್ಲಿಂದಾಚೆಗೆ ಹಣಕ್ಕಾಗಿ ದರೋಡೆ ಮಾಡುವುದೂ, ತಮಗಾಗದವರನ್ನು ಕೊಲ್ಲಿಸುವುದೂ ಕ್ರಾಂತಿಸೇನೆಯ ಅನುದಿನ ಕಾರ್ಯಾಚರಣೆಯಾಯಿತು. ಶಂಕರನು ಸ್ವತಃ ಲೂಟಿಗಳಲ್ಲಾಗಲೀ, ಕೊಲೆಗಳಲ್ಲಾಗಲೀ ಭಾಗವಹಿಸುತ್ತಿರಲಿಲ್ಲ. ಅವುಗಳನ್ನೆಲ್ಲಾ ತನ್ನ ನೆಚ್ಚಿನ ದಳವಾಯಿಗಳಂತಿದ್ದ ಇಸ್ಮೇಯಿಲ್, ಭೋಲಾನಾಥ್, ಕೇಸರಿಸಿಂಗ್, ದೇಬಿನ್ ಇವರುಗಳಿಂದ ಮಾಡಿಸುತ್ತಿದ್ದನು. ಆದರೆ ಬಹಿರಂಗ ಸಭೆಗಳಲ್ಲಿ ಅಲ್ಲಲ್ಲಿ ನಡೆಯುತ್ತಿದ್ದ ಕೊಲೆ ದರೋಡೆಗಳಿಗೆ ತಾನಾಗಲೀ, ತನ್ನ ಕ್ರಾಂತಿಸೇನೆಯಾಗಲೀ ಕಾರಣರಲ್ಲವೆಂದೂ, ತನಗಾಗದವರು ಸುಳ್ಳು ಆಪಾದನೆ ಮಾಡುತ್ತಿದ್ದಾರೆಂದೂ ಹೇಳುತ್ತಿದ್ದನು. ಲೂಟಿಯಿಂದ ಬಂದ ಹಣಕ್ಕೆ ಶಂಕರನು ಲೆಕ್ಕಪತ್ರಗಳನ್ನು ಇಟ್ಟಿರಲಿಲ್ಲ. ಕಾಲುವಾಸಿ ಹಣವನ್ನು ಲೂಟಿ ಮಾಡಿದವರಿಗೆ ಹಂಚುತ್ತಿದ್ದನು. ಕಾಲುವಾಸಿ ಹಣವನ್ನು ಕ್ರಾಂತಿಸೇನೆಯ ಖರ್ಚಿಗೆ ವಿನಿಯೋಗಿಸುತ್ತಿದ್ದನು. ಇನ್ನುಳಿದ ಹಣವನ್ನು ತನ್ನ ಸ್ವಂತ ಬೊಕ್ಕಸಕ್ಕೆ ಸೇರಿಸುತ್ತಿದ್ದನು. ಲೂಟಿಯ ಹಣದಿಂದ ತನ್ನ ಅಣ್ಣನ ಹೆಸರಿನಲ್ಲಿ ಶ್ರೀಪುರದಲ್ಲಿ ಎರಡು ಮನೆಗಳನ್ನೂ ಒಂದು ಸಿನಿಮಾಮಂದಿರವನ್ನೂ ಒಂದು ಕಾರ್ಖಾನೆಯನ್ನೂ ಕೊಂಡಿದ್ದನು. ಕೊಲೆ, ಲೂಟಿಗಳಿಗೆ ಇಸ್ಮೇಯಿಲ್, ಭೋಲಾನಾಥ್ ಮತ್ತು ಕೇಸರಿಸಿಂಗ್, ದೇಬಿನ್ ಇವರುಗಳ ನೇತೃತ್ವದಲ್ಲಿ ಒಂದು ಗುಪ್ತ ಪಡೆಯನ್ನು ನೇಮಕ ಮಾಡಿದ್ದನು, ಕೊಲೆ, ಲೂಟಿಗಳ ವಿಚಾರದಲ್ಲಿ ಕ್ರಾಂತಿಸೇನೆಯ ಸಾಮಾನ್ಯ ಸದಸ್ಯರಿಗೆ ಯಾವ ತಿಳಿವಳಿಕೆಯೂ ಬಾರದಂತೆ ವ್ಯವಸ್ಥೆ ಮಾಡಿದ್ದನು. ಆದರೆ ಅವನು ಕೊಲೆ ಮತ್ತು ಲೂಟಿಗಳನ್ನು ಎಷ್ಟುಗುಟ್ಟಾಗಿ ಮಾಡಿಸಿದರೂ ಸಹ ಒಮ್ಮೊಮ್ಮೆ ಗುಟ್ಟುರಟ್ಟಾಗದೆ ಇರುತ್ತಿರಲಿಲ್ಲ.

ಪಕ್ಷದಲ್ಲಿದ್ದ ವಿದ್ಯಾವಂತರು ಕೊಲೆ ಮತ್ತು ಲೂಟಿಗಳ ಸಂಬಂಧ ಸಾಕಾದಷ್ಟು ವಿಷಯುಗಳನ್ನು ಸಂಗ್ರಹಿಸಿದ್ದರು. ವಿದ್ಯಾವಂತರಿಗೆಲ್ಲಾ ಚಂದ್ರಹಾಸನೇ ಮುಖಂಡನಾಗಿದ್ದನು ವಿದ್ಯಾವಂತರಿಗೆ ಶಂಕರನು ನಡೆಸುತ್ತಿದ್ದ ಮೋಜಿನ ಜೀವನ ಸರಿತೋರಲಿಲ್ಲ. ಬಡಬಗ್ಗರ ಉದ್ಧಾರಕ್ಕೆಂದು ಹೊರಟಿರುವವರು, ಸರಳ ಜೀವನ ನಡೆಸಬೇಕೆಂದು ಅವರು ಅಭಿಪ್ರಾಯ ಪಡುತ್ತಿದ್ದರು. ಶಂಕರನು ಮಹಿಳಾ ಸದಸ್ಯರೊಡನೆ ವರ್ತಿಸುತ್ತಿದ್ದ ವಿಧಾನವನ್ನು ವಿದ್ಯಾವಂತ ತರುಣ ತರುಣಿಯರು ಸಹಿಸುತ್ತಿರಲಿಲ್ಲ. ಅನಾವಶ್ಯಕವಾಗಿ ಜನರನ್ನು ಕೊಲ್ಲುವುದನ್ನೂ, ಹಣಕ್ಕಾಗಿ ಲೂಟಿಮಾಡುವುದನ್ನೂ ಅವರು ಒಪ್ಪುತ್ತಿರಲಿಲ್ಲ. ಚಂದ್ರಹಾಸನೂ, ಗೌರಿಯೂ ಒಬ್ಬರನ್ನೊಬ್ಬರು ಪ್ರೀತಿಸುತ್ತಿದ್ದರು. ಕಾಳೀಪುರದಲ್ಲಿ ಅವರಿಬ್ಬರೂ ಓದುತ್ತಿರುವಾಗಲೇ ಅವರ ಪ್ರೇಮ ಪ್ರಾರಂಭವಾಗಿತ್ತು. ಶಂಕರನು ಗೌರಿಯ ರೂಪಕ್ಕೆ ಮನಸೋತು, ಒಂದೆರಡು ಸಾರಿ ಅವಳ ಜೊತೆಯಲ್ಲಿ ಅಸಭ್ಯ ರೀತಿಯಲ್ಲಿ ವರ್ತಿಸಿದನು. ಅದನ್ನು ಗೌರಿ ಸಹಿಸಿರಲಿಲ್ಲ. ಇದಾದ ನಂತರ ಗೌರಿ ಕ್ರಾಂತಿಸೇನೆಯ ಸಭೆಗಳಿಗೆ ಹೋಗುವುದನ್ನು ನಿಲ್ಲಿಸಿದಳು. ಗೌರಿ ಕ್ರಾಂತಿಸೇನೆಯ ಸಭೆಗಳಿಗೆ ಏಕೆ ಬರುವುದಿಲ್ಲವೆಂದು ಶಂಕರನು ಕೆಲವು ಸಾರಿ ಚಂದ್ರಹಾಸನನ್ನು ಕೇಳಿದನು. ಚಂದ್ರಹಾಸನು ತನಗೆ ಗೊತ್ತಿಲ್ಲವೆಂದು ಜಾರಿಕೆಯ ಉತ್ತರವನ್ನು ಕೊಡುತ್ತಿದ್ದನು.

ಈ ಮಧ್ಯೆ ಇನ್ನೊಂದು ಘಟನೆ ನಡೆಯಿತು. ಕ್ರಾಂತಿಸೇನೆಯವರು ಆಗಾಗ ತಮ್ಮ ಶಕ್ತಿ ಪ್ರದರ್ಶನಕ್ಕಾಗಿ ಹಳ್ಳಿಗಾಡುಗಳಿಗೆ ಹೋಗುತ್ತಿದ್ದರು. ಒಮ್ಮೆ ಐದುನೂರು ಜನ ಕ್ರಾಂತಿಸೇನೆಯವರು ತಮ್ಮ ಶಕ್ತಿ ಪ್ರದರ್ಶನಕ್ಕಾಗಿ ಬೂರದಾಳ್ ಎಂಬ ಸಣ್ಣಪಟ್ಟಣಕ್ಕೆ ಹೋಗಿದ್ದರು. ಆ ಗುಂಪಿನ ಜೊತೆಯಲ್ಲಿ ಚಂದ್ರಹಾಸನೂ, ಅವನ ಕೆಲವು ಯುವಕ ಮಿತ್ರರೂ ಅಲ್ಲಿಗೆ ಹೋಗಿದ್ದರು. ಬೂರದಾಳಿನಲ್ಲಿ ನಿತ್ಯಾನಂದನೆಂಬ ಒಬ್ಬ ಪ್ರಭಾವಶಾಲಿಯೂ, ಸುಸಂಸ್ಕೃತನೂ ಆಗಿದ್ದ ಒಬ್ಬ ಗಣ್ಯವ್ಯಕ್ತಿ ಇದ್ದನು. ಅವನ ಮಾತಿಗೆ ಸುತ್ತಮುತ್ತಲ ಪ್ರದೇಶದ ಜನರು ಬಹಳ ಮನ್ನಣೆ ಕೊಡುತ್ತಿದ್ದರು. ಅವನು ಶಂಕರನ ಮತ್ತು ಅವನ ಸೇನೆಯ ದೌರ್ಜನ್ಯ ಕೃತ್ಯಗಳನ್ನು ಆಗಾಗ ಬಹಿರಂಗವಾಗಿ ಸಾರ್ವಜನಿಕ ಸಭೆಗಳಲ್ಲಿ ಖಂಡಿಸುತ್ತಿದ್ದನು. ಅವನ ದೆಸೆಯಿಂದ ಕ್ರಾಂತಿಸೇನೆಯು ಆ ಪ್ರದೇಶದಲ್ಲಿ ತಲೆ ಎತ್ತುವಂತಿರಲಿಲ್ಲ. ಈ ಕಾರಣದಿಂದ ಶಂಕರನಿಗೆ ನಿತ್ಯಾನಂದನ ಮೇಲೆ ಬಹಳ ದ್ವೇಷವಿತ್ತು. ಶಂಕರನ ಆದೇಶದಂತೆ ನಿತ್ಯಾನಂದನಿಗೆ ಬುದ್ಧಿ ಕಲಿಸುವ ಉದ್ದೇಶದಿಂದ ರಕ್ತಕೇಸರಿಯ ನೇತೃತ್ವದಲ್ಲಿ ಅಂದು ಕ್ರಾಂತಿಸೇನೆಯವರು ಬೂರದಾಳಿಗೆ ಹೋಗಿದ್ದರು. ಈ ಉದ್ದೇಶ ಚಂದ್ರಹಾಸನಿಗಾಗಲೀ, ಅವನ ಯುವಕ ಮಿತ್ರರಿಗಾಗಲೀ ತಿಳಿದಿರಲಿಲ್ಲ.

ಬೂರದಾಳಿಗೆ ಹೋದನಂತರ ಕ್ರಾಂತಿಸೇನೆಯವರು ಊರಲ್ಲೆಲ್ಲಾ ಮೆರವಣಿಗೆ ಹೊರಟು ಗಸ್ತು ತಿರುಗಿದರು. ಮೆರವಣಿಗೆ ಮುಗಿದ ನಂತರ ತಂಡದಲ್ಲಿದ್ದ ಸುಮಾರು ಮೂರುನೂರು ಜನರು ರಕ್ತಕೇಸರಿಯ ಆದೇಶದಂತೆ ನಿತ್ಯಾನಂದನ ಮನೆಗೆ ನುಗ್ಗಿದರು, ಮಟ ಮಟ ಮಧ್ಯಾಹ್ನದ ಸಮಯ ನಿತ್ಯಾನಂದನೂ ಆತನ ತಮ್ಮನೂ ಇನ್ನೇನು ಊಟಕ್ಕೆ ಹೋಗಬೇಕೆನ್ನುವ ಹೊತ್ತಿಗೆ, ಕ್ರಾಂತಿಸೇನೆಯ ದೂರ್ತರು ಅವನ ಮನೆಯೊಳಗೆ

ನುಗ್ಗಿದರು. ನುಗ್ಗಿದ ತಕ್ಷಣ ಆರೇಳು ಜನ ದೂರ್ತರು ಈಟಿಗಳಿಂದ ನಿತ್ಯಾನಂದನನ್ನೂ, ಅವನ ತಮ್ಮನನ್ನೂ ಮೃಗಗಳನ್ನು ಬೇಟೆಯಾಡುವಂತೆ, ಅಟ್ಟಿಸಿಕೊಂಡು ಹೋಗಿ ತಿವಿಯಲಾರಂಭಿಸಿದರು. ಇಬ್ಬರು ಸಹೋದರರೂ ನೋವನ್ನು ತಡೆಯಲಾಗದೆ ಅಡಿಗೆಯ ಮನೆಗೆ ಓಡಿ ಹೋದರು. ಅಡಿಗೆಯ ಮನೆಯಲ್ಲಿದ್ದ ಅವರಿಬ್ಬರ ತಾಯಿ ಅವರಿಬ್ಬರನ್ನೂ ಅವಿತಿಟ್ಟು ಬಾಗಿಲನ್ನು ಭದ್ರ ಮಾಡಿದಳು. ಕ್ರಾಂತಿಸೇನೆಯವರು ಅಡಿಗೆಯ ಮನೆಯ ಕದವನ್ನು ಒಡೆದು ಒಳಗೆ ನುಗ್ಗಿದರು. ನಿತ್ಯಾನಂದನ ತಾಯಿ ತನ್ನ ಮಕ್ಕಳನ್ನು ಕೊಲ್ಲಬಾರದೆಂದೂ ಅವರನ್ನು ಕೊಲ್ಲುವ ಬದಲು ತನ್ನನ್ನು ಕೊಲ್ಲಬೇಕೆಂದೂ ಅಂಗಲಾಚಿ ಬೇಡಿಕೊಂಡಳು. ದೂರ್ತರು ಅವಳನ್ನು ಒದ್ದು ಕೆಳಗುರುಳಿಸಿ, ಅವಳ ಕಣ್ಣೆದುರಿನಲ್ಲಿಯೇ ಅವಳ ಇಬ್ಬರು ಮಕ್ಕಳನ್ನು ಮೃಗಗಳನ್ನು ಕೊಲ್ಲುವಂತೆ ಭರ್ಜಿಗಳಿಂದ ಇರಿದು ಸಾಯಿಸಿದರು. ಅಷ್ಟಕ್ಕೆ ತೃಪ್ತರಾಗದೆ ತಾಯಿಯ ಕಣ್ಣೆದುರಿನಲ್ಲಿಯೇ ನಿತ್ಯಾನಂದ ಎರಡು ಕಣ್ಣುಗುಡ್ಡೆಗಳನ್ನೂ ಈಟಿಯಿಂದ ಕಿತ್ತು ಅವಳ ಮೈಮೇಲೆ ಎಸೆದರು, ನೀಚರು ಅಷ್ಟಕ್ಕೂ ತೃಪ್ತರಾಗದೆ, ಮನೆಯನ್ನು ಸುಟ್ಟು ಹಾಕಬೇಕೆಂಬ ಉದ್ದೇಶದಿಂದ ಮನೆಯ ಚೌಕಿಯಲ್ಲಿ ಗುಡ್ಡೆ ಹಾಕಿದ್ದ ಹುಲ್ಲುರಾಶಿಗೆ ಬೆಂಕಿ ಹಾಕಿದರು. ಅನಂತರ ಮನೆಯಲ್ಲಿ ಇದ್ದುದೆಲ್ಲವನ್ನೂ ದೋಚಿಕೊಂಡು ಹೋಗುತ್ತಿರುವಾಗ, ಅವರ ದಾರಿಗೆ ಅಳುತ್ತಾ ಅಡ್ಡ ಬಂದ ನಿತ್ಯಾನಂದನ ನಾಲ್ಕು ವರ್ಷದ ಗಂಡು ಮಗುವನ್ನು ಧಗಧಗಿಸಿ ಉರಿಯುತ್ತಿದ್ದ ಬೆಂಕಿಗೆ ಎಸೆದು ಹೊರಟುಹೋದರು. ಮಗುವು ಬೆಂಕಿಯಲ್ಲಿ ಬೆಂದು ಭಸ್ಮವಾಗಿ ಹೋಯಿತು.

ಈ ಅಮಾನುಷ ಕೃತ್ಯ ಪೊಲೀಸಿನವರ ಕಣ್ಣೆದುರಿನಲ್ಲಿಯೇ ನಡೆಯಿತು. ಅಷ್ಟೊಂದು ಭಾರಿ ಸಂಖ್ಯೆಯಲ್ಲಿ ಬಂದಿದ್ದ ಶಸ್ತ್ರ ಸಜ್ಜಿತ ಕ್ರಾಂತಿಸೇನೆಯವರನ್ನು ಎದುರಿಸುವುದು ಪೊಲೀಸರಿಗೆ ಸಾಧ್ಯವಿರಲಿಲ್ಲ. ಆದ್ದರಿಂದ ಪೊಲೀಸಿನವರು ನಿಸ್ಸಹಾಯಕ ಪ್ರೇಕ್ಷಕರಂತೆ ಆ ಘೋರ ದೃಶ್ಯವನ್ನು ನೋಡುತ್ತಿದ್ದರು. ಆ ಘೋರ ದೃಶ್ಯವನ್ನು ನೋಡಿದ ಚಂದ್ರಹಾಸನೂ ಅವನ ಯುವಕಮಿತ್ರರೂ ಅತ್ಯಂತ ವ್ಯಾಕುಲ ಭರಿತರಾಗಿ ಸ್ಥಂಭೀಭೂತರಾದರು. ಅವರ ಹೃದಯದ ಅಂತರಾಳ ಕಲಕಿ ಹೋಗಿತ್ತು, ಕ್ರಾಂತಿಯ ಹೆಸರಿನಲ್ಲಿ ಇಂತಹ ಭೀಕರ ಅಮಾನುಷ ಕೃತ್ಯಗಳನ್ನು ಸಹಿಸಲು ಅವರು ಸಿದ್ಧರಿರಲಿಲ್ಲ. ಆದರೆ ಅವರೂ ಸಹ ಪೊಲೀಸಿನವರಷ್ಟೇ ನಿಸ್ಸಹಾಯಕರಾಗಿದ್ದರು. 'ರಾಕ್ಷಸರಂತಿದ್ದ ಗುಂಡಾಗಳ ಮುಂದೆ ಅವರ ಮಾತು ನಡೆಯುವಂತಿರಲಿಲ್ಲ.

ಈ ಕರುಣಾಜನಕ ದೃಶ್ಯವನ್ನು ನೋಡಿ, ಚಂದ್ರಹಾಸನ ಸ್ನೇಹಿತ ಕರುಣಾಕರ ನೆಂಬುವನು ಮನಸ್ಸಿನ ಯಾತನೆಯನ್ನು ತಾಳಲಾರದೆ ಅಳಲಾರಂಭಿಸಿದನು. ಅವನು ಅಳುತ್ತಾ "ಇದು ಕ್ರಾಂತಿಯಲ್ಲ, ಅಮಾನುಷ ಕ್ರೌರ್ಯ" ಎಂದು ಗಟ್ಟಿಯಾಗಿ ಕೂಗಿದನು. ಅವನು ಈ ರೀತಿ ಕೂಗುವುದನ್ನು ಕೇಳಿದ ಕ್ರಾಂತಿಸೇನೆಯ ಕೇಡಿಯೊಬ್ಬನು "ಇದ್ಯಾರೋ ಭೂರ್ಷ್ವಾ ಕುನ್ನಿ ಕ್ರಾಂತಿಕಾರನ ವೇಷದಲ್ಲಿ ನಮ್ಮ ಸೇನೆಯಲ್ಲಿ ಸೇರಿಕೊಂಡಿದೆ. ಇವನನ್ನು ಕೊಲ್ಲಿ" ಎಂದು ಕೂಗಿದನು. ತಕ್ಷಣ ಸುಮಾರು ನೂರು ಜನ ಕ್ರಾಂತಿಸೇನೆಯ ದೂರ್ತರು ಕರುಣಾಕರನ ಮೇಲೆರಗಿ ಅವನನ್ನು ಈಟಿಗಳಿಂದ ಇರಿದು ಕೊಂದು

ಹಾಕಿದರು. ಆ ದೃಶ್ಯವನ್ನು ನೋಡಲಾರದೆ ಚಂದ್ರಹಾಸನೂ, ಅವನ ಸ್ನೇಹಿತರೂ ಕಣ್ಮುಚ್ಚಿ ಮೈಮರೆತು ನಿಂತಿದ್ದರು. ಅವರ ಕೈಯಲ್ಲಿ ಏನಾದರೂ ಆಯುಧಗಳಿದ್ದಿದ್ದರೆ ಅವರು ಮೌನವಾಗಿ ಹೋರಾಟವನ್ನೇ ನಡೆಸುತ್ತಿದ್ದರು. ಆದರೆ ನಿರಾಯುಧರಾಗಿದ್ದ ಅವರು ಮೌನವಾಗಿ ಶೋಕಪರವಶರಾಗಿ ನಿಂತಿದ್ದರು. ಆ ತಂಡದಲ್ಲಿ ಸುಮಾರು ಐವತ್ತು ಜನ ಕಾಲೇಜು ಶಿಕ್ಷಣವನ್ನು ಮುಗಿಸಿದ್ದ ತರುಣರಿದ್ದರು. ಅವರೆಲ್ಲರೂ ತಮ್ಮ ಸ್ನೇಹಿತ ಕರುಣಾಕರನಿಗೆ ಪ್ರಾಪ್ತಿಯಾಗಿದ್ದ ದುರ್ಗತಿಯಿಂದ ನೊಂದು ಮನಮರುಗಿ ನಿಟ್ಟುಸಿರು ಬಿಡುತ್ತಿದ್ದರು.

ಕರುಣಾಕರನ ಕರುಣಾಜನಕ ಕಗ್ಗೊಲೆಯ ವಿಚಾರ ಕ್ರಾಂತಿಸೇನೆಯ ವಲಯದಲ್ಲಿ ಕಾಳ್ಗಿಚ್ಚಿನಂತೆ ಹರಡಿತ್ತು. ಬೂರದಾಳಿಗೆ ಹೋಗಿದ್ದ ಚಂದ್ರಹಾಸನೂ, ಅವನ ಸಂಗಾತಿಗಳೂ ಅಲ್ಲಿ ನಡೆದಿದ್ದ ಭೀಕರ ಘಟನೆಗಳನ್ನು ಹೃದಯಂಗಮವಾಗಿ ಇತರರಿಗೆ ವರ್ಣಿಸುತ್ತಿದ್ದರು. ಆದರ್ಶ ಪ್ರೇರಿತರಾಗಿ ಕ್ರಾಂತಿಸೇನೆಯನ್ನು ಸೇರಿದ್ದ ವಿದ್ಯಾವಂತರೆಲ್ಲರಿಗೂ ಕರುಣಾಕರನ ಕೊಲೆ ಅತ್ಯಂತ ದಾರುಣವಾದ ಪ್ರಸಂಗವಾಗಿತ್ತು. ಈಟಿಗಳ ತಿವಿತದಿಂದ ಮೃತನಾಗಿದ್ದ ಅವರ ಮಿತ್ರನ ಅಮಾನುಷ ಕೊಲೆಯಿಂದ ಅವರು ಮನಸ್ಸು ಹೃದಯಗಳಿಗೆ ಈಟಿಯಿಂದ ತಿವಿದಂತಾಗಿತ್ತು. ಕ್ರಾಂತಿಸೇನೆಯಲ್ಲಿದ್ದ ವಿದ್ಯಾವಂತ ತರುಣರನೇಕರು ಬೂರದಾಳ್ ಘಟನೆಯಿಂದ ಕ್ರೋಧಪರವಶರಾಗಿ ಕೆರಳಿಹೋಗಿದ್ದರು. ಎಂಟುದಿನಗಳ ತರುವಾಯ ಅವರೆಲ್ಲರೂ ಸೇರಿ ಚಂದ್ರಹಾಸನ ಅಧ್ಯಕ್ಷತೆಯಲ್ಲಿ ಬಂದು ಗುಪ್ತಸಭೆಯನ್ನು ಸೇರಿಸಿ, ಕ್ರಾಂತಿಸೇನೆಯನ್ನು ಬಿಡಬೇಕೆಂದೂ "ಕ್ರಾಂತಿಕೂಟ" ಎಂಬ ಹೆಸರಿನಲ್ಲಿ ಒಂದು ಪ್ರತಿ ಪಕ್ಷವನ್ನು ರಚಿಸಬೇಕೆಂದೂ ತೀರ್ಮಾನ ಮಾಡಿದರು.

ಚಂದ್ರಹಾಸನೇ ಕ್ರಾಂತಿಕೂಟದ ಅಧ್ಯಕ್ಷನಾದನು. ಅವನ ಸ್ನೇಹಿತ ಕಿಶೋರನು ಕಾರ್ಯದರ್ಶಿಯಾದನು. ಕ್ರಾಂತಿಸೇನೆಯ ರಾಕ್ಷಸರನ್ನು ಎದುರಿಸಬೇಕಾದರೆ ಕ್ರಾಂತಿಸೇನೆಯಂತೆಯೇ ತಾವೂ ಒಂದು ಶಸ್ತ್ರ ಸಜ್ಜಿತ ಸೈನ್ಯವನ್ನು ನಿರ್ಮಾಣ ಮಾಡಬೇಕೆಂದು ಕ್ರಾಂತಿಕೂಟದ ಪ್ರಮುಖರು ನಿರ್ಧರಿಸಿದರು. ಕ್ರಾಂತಿಸೇನೆಯ ಅಮಾನುಷ ಕೃತ್ಯಗಳಿಂದ ಬೇಸತ್ತು ಹೋಗಿದ್ದ ಕ್ರಾಂತಿಸೇನೆಯ ಸದಸ್ಯರನೇಕರು ಕ್ರಾಂತಿಕೂಟಕ್ಕೆ ಸೇರಿಕೊಂಡರು. ಅಂದು ಶ್ರೀಪುರ ಮತ್ತು ರಾಜ್ಯದ ಇತರ ಪ್ರದೇಶಗಳಲ್ಲಿದ್ದ ಅರಾಜಕತೆಯ ಪರಿಸ್ಥಿತಿಯಲ್ಲಿ ಜನರಿಗೆ ರಾಜಕಾರಣಕ್ಕಿಂತ ಆತ್ಮರಕ್ಷಣೆಯ ಪ್ರಶ್ನೆ ಪ್ರಾಮುಖ್ಯವಾಗಿತ್ತು. ಆದ್ದರಿಂದ ಜನರು ನಾನಾ ರೂಪದಲ್ಲಿ ಕ್ರಾಂತಿಕೂಟಕ್ಕೆ ಬೆಂಬಲ ನೀಡಲಾರಂಭಿಸಿದರು. ಆರು ತಿಂಗಳೊಳಗಾಗಿ ಕ್ರಾಂತಿಕೂಟ ರಾಜ್ಯದಲ್ಲಿ ಒಂದು ಪ್ರಬಲ ಸಂಸ್ಥೆಯಾಗಿ ಬೆಳೆಯತೊಡಗಿತು. ಶಂಕರನು ಆ ಪ್ರದೇಶದಲ್ಲಿ ತಾನೇ ಏಕೈಕ ಕ್ರಾಂತಿಕಾರ ನಾಯಕನೆಂದು ಮೆರೆಯುತ್ತಿದ್ದನು. ಕ್ರಾಂತಿಕೂಟದ ಉದಯದಿಂದ ಚಂದ್ರಹಾಸನ ರೂಪದಲ್ಲಿ ಪ್ರತಿನಾಯಕನೊಬ್ಬನ ಸೃಷ್ಟಿಯಾಯಿತು. ಚಂದ್ರಹಾಸನೂ, ಅವರ ಕೂಟದವರೂ ಕ್ರಾಂತಿಸೇನೆಯವರು ದರೋಡೆಕೋರರೆಂದೂ, ಕೊಲೆಗಡುಕರೆಂದೂ, ಬಹಿರಂಗವಾಗಿ ಸಾರುತ್ತಿದ್ದರು. ಇದಕ್ಕೆ ಪ್ರತಿಯಾಗಿ, ಶಂಕರನೂ ಅವನ ಅನುಯಾಯಿಗಳೂ

ಕ್ರಾಂತಿಕೂಟದವರು ಬಂಡವಾಳಗಾರರ ಬಾಲಬಡುಕರೆಂದೂ, ಅವರಿಗೆ ಬೆಂಬಲ ನೀಡಬಾರದೆಂದೂ ಜನರಿಗೆ ತಿಳಿಸುತ್ತಿದ್ದರು. ಚಂದ್ರಹಾಸನು ಕಾರ್ಲ್‌ಮಾರ್ಕ್ಸ್‌ನ ಸಿದ್ಧಾಂತಗಳನ್ನೂ ಇತರ ರಾಜಕೀಯ ಮತ್ತು ಆರ್ಥಿಕ ಸಿದ್ಧಾಂತಗಳನ್ನೂ ಆಮೂಲಾಗ್ರವಾಗಿ ಅಧ್ಯಯನ ಮಾಡಿದವನಾಗಿದ್ದನು. ಈ ದೇಶದ ಇತಿಹಾಸ ಪರಂಪರೆಗನುಗುಣವಾಗಿ, ಸನ್ನಿವೇಶ ಸ್ಥಿತಿಗತಿಗಳಿಗನುಗುಣವಾಗಿ, ಕಾರ್ಲ‌ಮಾರ್ಕ್ಸ್‌ನ ಸಿದ್ಧಾಂತವನ್ನೂ, ಇತರ ಉತ್ಕೃಷ್ಟ ಪದ್ಧತಿಗಳನ್ನೂ ಅಳವಡಿಸಿಕೊಂಡು, ಪರರಾಷ್ಟ್ರಗಳ ಅಂಧ ಅನುಕರಣೆಯಿಲ್ಲದೆ, ಅನಾವಶ್ಯಕ ರಕ್ತಪಾತವಿಲ್ಲದೆ, ಹೊಸ ಮಾದರಿಯ ಸಮಾಜವನ್ನು ಸೃಷ್ಟಿಸಬೇಕೆಂದು ಅವನು ಪ್ರತಿಪಾದಿಸುತ್ತಿದ್ದನು.

ರಾಜ್ಯದಲ್ಲಿ ಕ್ರಾಂತಿಸೇನೆಯ ಮತ್ತು ಕ್ರಾಂತಿಕೂಟದ ಪೈಪೋಟಿ ದಿನೇದಿನೇ ಹೆಚ್ಚಾಗುತ್ತಿತ್ತು. ಕ್ರಾಂತಿಸೇನೆಯವರು ಕ್ರಾಂತಿಕೂಟದವರನ್ನು ಕೊಲ್ಲುವುದೂ, ಕ್ರಾಂತಿಕೂಟದವರು ಕ್ರಾಂತಿಸೇನೆಯುವರನ್ನು ಕೊಲ್ಲುವುದೂ, ಅನುದಿನದ ಪ್ರಸಂಗಗಳಾಗಿದ್ದವು. ಚಂದ್ರಹಾಸನನ್ನು ಕೊಲ್ಲಬೇಕೆಂದು ಶಂಕರನು ನಾನಾ ವಿಧವಾಗಿ ಮಸಲತ್ತು ಪ್ರಯತ್ನಗಳನ್ನು ಮಾಡುತ್ತಿದ್ದನು. ಆದರೆ ಚಂದ್ರಹಾಸನಿಗೆ ಪ್ರಬಲವಾದ ಶಸ್ತ್ರ ಸಜ್ಜಿತ ರಕ್ಷಣಾದಳದ ಬೆಂಬಲವಿದ್ದುದರಿಂದ ಕ್ರಾಂತಿಸೇನೆಯ ಆಟ ಅಷ್ಟೊಂದು ಸುಲಭವಾಗಿ ನಡೆಯುವಂತಿರಲಿಲ್ಲ. ಜೊತೆಗೆ ಕ್ರಾಂತಿಕೂಟದ ಗೂಢಚಾರ ದಳದವರು ಕ್ರಾಂತಿಸೇನೆಯವರ ಚಟುವಟಿಕೆಗಳನ್ನು ಸುವ್ಯವಸ್ಥಿತ ರೀತಿಯಲ್ಲಿ ಪ್ರತಿದಿನವೂ ಚಂದ್ರಹಾಸನಿಗೂ, ಕಿಶೋರನಿಗೂ ವರದಿ ಮಾಡುತ್ತಿದ್ದರು. ಆದ್ದರಿಂದ ಕ್ರಾಂತಿಸೇನೆಯವರಿಗೆ ನೇರವಾಗಿ ಚಂದ್ರಹಾಸನನ್ನು ಎದುರಿಸುವ ಸಾಮರ್ಥ್ಯವಿರಲಿಲ್ಲ. ಕುಟಿಲ ಮಾರ್ಗದಿಂದಲೇ ಚಂದ್ರಹಾಸನನ್ನು ಕೊಲೆಮಾಡಬೇಕೆಂದು ಅವರು ಹವಣಿಸುತ್ತಿದ್ದರು. ಚಂದ್ರಹಾಸನೂ, ಅವನ ಅನುಯಾಯಿಗಳೂ ಹೇಗಾದರೂ ಮಾಡಿ ಶಂಕರನನ್ನು ಕೊಲ್ಲಬೇಕೆಂದು ಪ್ರಯತ್ನಿಸುತ್ತಿದ್ದರು. ಈ ಎರಡು ಪಕ್ಷಗಳ ಭಯಂಕರ ಪೈಪೋಟಿಯ ಇತಿಹಾಸ ಶ್ರೀಪುರ ರಾಜ್ಯದ ಇತಿಹಾಸದಲ್ಲಿ ಕಾಲಕ್ರಮೇಣ ಒಂದು ಪ್ರಾಮುಖ್ಯವಾದ ಅಧ್ಯಾಯವಾಗಿ ಪರಿಣಮಿಸುತ್ತದೆ ಎಂಬುದನ್ನು ಮುಂದೆ ತಿಳಿಯಬಹುದಾಗಿದೆ.

೪

ಕೃಷ್ಣಕಾಂತನಿಗೆ ಮೂರುದಿನಗಳ ನಂತರ ಜ್ವರ ಬಿಟ್ಟಿತು. ಜ್ವರದಿಂದ ಮಲಗಿರುವಾಗಲೇ ಅನಿಲಪುರಕ್ಕೆ ಹೋಗಬೇಕೆಂದು ಹಂಬಲಿಸುತ್ತಿದ್ದನು. ಜ್ವರಬಿಟ್ಟ ಮೂರನೆ ದಿನ ಬೆಳಿಗ್ಗೆ, ತಾನು ಅನಿಲಪುರಕ್ಕೆ ಹೋಗುವುದಾಗಿ ಚಂಚಲೆಗೆ ತಿಳಿಸಿದನು. ಅನಿಲಪುರದಲ್ಲಿ ನಡೆಯಬಹುದಾದ ಮಾತುಕತೆಗಳಿಂದ ಶಂಕರನ ಇತಿಹಾಸವನ್ನು ತಿಳಿದುಕೊಳ್ಳಲು, ಹಾಗೂ ಬಾಂಬ್ ಪ್ರಕರಣದಲ್ಲಿ ಅವನ ಕೈವಾಡ ಇತ್ತೆಂಬುದರಲ್ಲಿ ಸತ್ಯಾಂಶ ಇದೆಯೋ ಇಲ್ಲವೋ ಎಂಬುದನ್ನು ಅರಿತುಕೊಳ್ಳಲು, ಚಂಚಲೆ ಕಾತುರಳಾಗಿದ್ದಳು. ಆದ್ದರಿಂದ ತಂದೆಯ ಜೊತೆಯಲ್ಲಿ ತಾನೂ ಅನಿಲಪುರಕ್ಕೆ ಬರುವುದಾಗಿ ಹೇಳಿದಳು.

ಕೃಷ್ಣಕಾಂತನು "ನಿನಗೇನಮ್ಮಾ ಅಲ್ಲಿ ಕೆಲಸ? ಅವರ ಗೋಳನ್ನು ನೋಡಿ ನೀನು ಅನಾವಶ್ಯಕ ವ್ಯಥೆ ಪಡುತ್ತಿಯ. ನೀನು ಬರಬೇಕಾಗಿಲ್ಲ" ಎಂದು ಹೇಳಿದನು. ಆದರೆ ಚಂಚಲೆ ತಾನು ಪುರುಷೋತ್ತಮಬಾಬು ಅವರಿಗೆ ಸಂತಾಪವನ್ನು ಸಲ್ಲಿಸಬೇಕೆಂದೂ, ಬಾಂಬ್ ಹಾಕಿದ್ದ ಸ್ಥಳವನ್ನು ನೋಡಬೇಕೆಂದೂ ಹಟ ಹಿಡಿದಳು. ಆದ್ದರಿಂದ ಕೃಷ್ಣಕಾಂತನು ನಿರ್ವಾಹವಿಲ್ಲದೆ ಅವಳನ್ನು ತನ್ನ ಜೊತೆಯಲ್ಲಿ ಅನಿಲಪುರಕ್ಕೆ ಕರೆದುಕೊಂಡು ಹೋಗಲು ಸಮ್ಮತಿಸಿದನು.

ಬೆಳಿಗ್ಗೆ ಒಂಬತ್ತು ಗಂಟೆಯ ಹೊತ್ತಿಗೆ ಟ್ಯಾಕ್ಸಿ ಕೃಷ್ಣಕಾಂತನ ಮನೆಯ ಮುಂದೆ ಬಂದು ನಿಂತಿತು. ತಂದೆ ಮಗಳಿಬ್ಬರೂ ಟ್ಯಾಕ್ಸಿಯಲ್ಲಿ ಕುಳಿತು ಅನಿಲಪುರಕ್ಕೆ ಪ್ರಯಾಣ ಬೆಳೆಸಿದರು. ಅನಿಲಪುರಕ್ಕೆ ಹೋಗುವ ರಸ್ತೆಯು ಅನಿಲಗಿರಿಯ ಪಕ್ಕದಲ್ಲೇ ಹಾಯ್ದುಹೋಗಿತ್ತು. ಶ್ರೀಪುರವನ್ನು ಬಿಟ್ಟ ಮೇಲೆ ರಸ್ತೆಯ ಅಕ್ಕಪಕ್ಕದ ದೃಶ್ಯ ಸುಂದರವಾಗಿತ್ತು. ಬೆಳಗಿನ ತಂಗಾಳಿ ಹಿತಕರವಾಗಿತ್ತು. ಆಗಲೇ ರೈತರು ತಂತಮ್ಮ ಹೊಲ ಗದ್ದೆಗಳಲ್ಲಿ ತಂತಮ್ಮ ಕೆಲಸಕಾರ್ಯಗಳಲ್ಲಿ ನಿರತರಾಗಿದ್ದರು. ತಂದೆ ಮಗಳೀರ್ವರೂ ಮೌನವಾಗಿ ಚಿಂತಾಕ್ರಾಂತವಾಗಿದ್ದವರಂತೆ ಕಾಣುತ್ತಿದ್ದರು. ಕೃಷ್ಣಕಾಂತನು ಪುರುಷೋತ್ತಮಬಾಬು ಅವರಿಗೆ ಒದಗಿದ್ದ ಅನಿರೀಕ್ಷಿತ ವಿಪತ್ತಿನ ದೆಸೆಯಿಂದ ಚಿಂತಾಕ್ರಾಂತನಾಗಿದ್ದರೆ, ಚಂಚಲೆ ತನ್ನ ಪ್ರಿಯತಮ ಶಂಕರನ ವಿಚಾರದಲ್ಲಿ ಜನರಾಡುತ್ತಿದ್ದ ಮಾತುಗಳ ದೆಸೆಯಿಂದ ಚಿಂತಾಕ್ರಾಂತಳಾಗಿದ್ದಳು. ಆದ್ದರಿಂದ ಅವರೀರ್ವರ ದೃಷ್ಟಿ ಸೃಷ್ಟಿ ಸೌಂದರ್ಯದ ಕಡೆಗೆ ಹರಿದಿರಲಿಲ್ಲ. ಟ್ಯಾಕ್ಸಿ ಅನಿಲಗಿರಿಯ ಹತ್ತಿರ ಬಂದೊಡನೆ ಕಳೆದ ಅಮಾವಾಸ್ಯೆಯ ರಾತ್ರಿ ತಾನು ಅನಿಲಗಿರಿಯ ಮೇಲೆ ಕುಳಿತು ನೋಡಿದ್ದ ಶವಸಂಸ್ಕಾರದ ದೃಶ್ಯ ಚಂಚಲೆಯ ಕಣ್ಮುಂದೆ ಹೊಳೆದು ಹೋದಂತಾಯಿತು. ಜೊತೆಯಲ್ಲಿಯೇ ತಾನು ಶಂಕರನೊಡನೆ ಹಲವು ಬಾರಿ ಅನಿಲಗಿರಿಯ ಮೇಲೆ ರತಿಕ್ರೀಡೆಯಾಡಿದ್ದ ಆನಂದದಾಯಕ ಅನುಭವವೂ ಅವಳ ನೆನಪಿಗೆ ಬಂತು.

ಸ್ವಲ್ಪ ಹೊತ್ತಿನಲ್ಲಿಯೇ ಟ್ಯಾಕ್ಸಿ ಗಿರಿಪ್ರದೇಶವನ್ನು ದಾಟಿ ಅನಿಲಪುರವನ್ನು ಸಮೀಪಿಸಿತು. ಅನಿಲಪುರವು ಐವತ್ತು, ಅರವತ್ತು ಮನೆಗಳಿರತಕ್ಕ ಒಂದು ಸಣ್ಣ ಹಳ್ಳಿಯಾಗಿತ್ತು. ಪುರುಷೋತ್ತಮಬಾಬು ಅವರ ಮನೆಯೊಂದು ವಿನಹ ಉಳಿದ ಮನೆಗಳೆಲ್ಲವೂ ಹಳೆಯಕಾಲದ ಹೆಂಚಿನ ಅಥವಾ ಹುಲ್ಲುಮನೆಗಳಾಗಿದ್ದವು. ಬಾಬು ಅವರ ಮನೆ ದೊಡ್ಡದಾಗಿಲ್ಲದಿದ್ದರೂ ಆಧುನಿಕ ರೀತಿಯಲ್ಲಿ ಕಟ್ಟಲ್ಪಟ್ಟಿತ್ತು. ಮನೆಯ ಮುಂಭಾಗದಲ್ಲಿ ಅಗಲವಾದ ಜಗಲಿಯಿತ್ತು. ಜಗಲಿಯ ಪಕ್ಕ ಎಡಭಾಗದಲ್ಲಿ ಒಂದು ಆಫೀಸು ಕೋಣೆಯಿತ್ತು; ಬಲಭಾಗದಲ್ಲಿ ಒಂದು ವಾಸದ ಕೊಠಡಿ ಇತ್ತು. ಜಗಲಿಯ ಹಿಂಭಾಗ ಒಂದು ಹಜಾರವಿತ್ತು. ಅದರ ಎಡಬಲಗಳಲ್ಲಿ ಎರಡು ವಾಸದ ಕೊಠಡಿಗಳೂ, ಅವುಗಳ ಹಿಂಭಾಗ ದೇವರಕೋಣೆಯೂ, ಅಡುಗೆಮನೆಯೂ, ಊಟದ ಮನೆಯೂ ಇದ್ದವು. ವಾಸದ ಕೊಠಡಿಗಳ ಕಿಟಕಿಗಳಿಗೆ ಸರಳುಗಳಿಲ್ಲದೆ ಗಾಜಿನ ಬಾಗಿಲುಗಳನ್ನು ಇರಿಸಲಾಗಿತ್ತು. ಬಹುಶಃ ಪುರುಷೋತ್ತಮಬಾಬುಗಳು ಆ ಮನೆಯನ್ನು ಕಟ್ಟಿಸಿದಾಗ, ರಾತ್ರಿಯ ವೇಳೆಯಲ್ಲಿ

ಕಳ್ಳತನದಿಂದ ಬಾಂಬ್ ಹಾಕುವ ಮಹಾತ್ಮರು ಈ ದೇಶದಲ್ಲಿ ಹುಟ್ಟುತ್ತಾರೆಂಬ ಕಲ್ಪನೆ ಅವರಿಗಿರಲಿಲ್ಲವೆಂದು ತೋರುತ್ತದೆ. ಮನೆಯ ಹಿಂದುಗಡೆ ಆಳುಗಳ ವಸತಿಗಾಗಿಯೂ, ದವಸಧಾನ್ಯಗಳ ದಾಸ್ತಾನಿಗಾಗಿಯೂ ಒಂದು ಉಪಕಟ್ಟಡ ಇತ್ತು. ಮನೆಯ ಮುಂದುಗಡೆ ಎಡಪಾರ್ಶ್ವದಲ್ಲಿ ಕಾರನ್ನು ನಿಲ್ಲಿಸಲು ಒಂದು ಕಟ್ಟಡವಿತ್ತು. ಮನೆಯ ಸುತ್ತಲೂ ವಿಶಾಲವಾದ ಕಾಂಪೌಂಡ್ ಇತ್ತು.

ಪುರುಷೋತ್ತಮಬಾಬುಗಳು ಹಿಂದಿನ ಕಾಲದಲ್ಲಿ ಹೆಸರಾದ ವಕೀಲರಾಗಿದ್ದರು. ವಕೀಲವೃತ್ತಿಯಿಂದ ಯಥೇಚ್ಛವಾಗಿ ಬರುತ್ತಿದ್ದ ವರಮಾನವನ್ನು ತ್ಯಜಿಸಿ ಗಾಂಧೀಜಿಯವರ ಕರೆಗೆ ಓಗೊಟ್ಟು, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿ, ಮೂರುಬಾರಿ ಕಾರಾಗೃಹ ವಾಸವನ್ನನುಭವಿಸಿದ್ದರು. ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಬಾಬುಗಳ ಹೆಸರು ರಾಜ್ಯದ ಎಲ್ಲಾ ಕಡೆಗಳಲ್ಲೂ ಮನೆಮಾತಾಗಿದ್ದಿತು. ಅವರ ಮಾತು ವೇದವಾಕ್ಯವಾಗಿದ್ದಿತು. ಸ್ವಾತಂತ್ರ್ಯ ಲಭಿಸಿದ ನಂತರ, ಅವರು ಎರಡು ಸಾರಿ ಶ್ರೀಪುರ ಕ್ಷೇತ್ರದಿಂದ ಲೋಕಸಭೆಗೆ ಚುನಾಯಿತರಾಗಿದ್ದರು. ಇತ್ತೀಚಿನ ವರ್ಷಗಳಲ್ಲಿ ರಾಜಕಾರಣದ ಹೆಸರಿನಲ್ಲಿ ರಾಜಕಾರಣಿಗಳು ನಡೆಸುತ್ತಿದ್ದ, ಭ್ರಷ್ಟ ಮತ್ತು ದುಷ್ಟ ಕಾರುಬಾರುಗಳಿಂದ ಅವರು ಬೇಸತ್ತು, ರಾಜಕೀಯದಿಂದ ನಿವೃತ್ತರಾಗಿದ್ದರು. ಪುರುಷೋತ್ತಮಬಾಬುಗಳ ಒಬ್ಬ ಮಗಳು ಅವಳ ಗಂಡನ ಜೊತೆಯಲ್ಲಿ ಇಂಗ್ಲೆಂಡಿನಲ್ಲಿದ್ದಳು. ಅವರ ಎರಡನೆಯ ಮಗಳನ್ನು ಕಾಳೀಪುರದಲ್ಲಿ ಒಬ್ಬ ಕೇಂದ್ರ ಸರ್ಕಾರದ ಆಫೀಸರನಿಗೆ ಮದುವೆಮಾಡಿ ಕೊಟ್ಟಿದ್ದರು. ಆ ಮಗಳು ಎರಡು ವರ್ಷಗಳ ಹಿಂದೆ ತೀರಿಹೋಗಿ, ಆಕೆಯ ಮಗಳು ನಿರ್ಮಲ ಎಂಬ ಹುಡುಗಿಯನ್ನು ಅಜ್ಜ ಅಜ್ಜಿಯರೇ ಅನಿಲಪುರದಲ್ಲಿ ಸಾಕುತ್ತಿದ್ದರು. ಬಾಬು ಅವರ ಏಕಮಾತ್ರ ಪುತ್ರ ಚಂದ್ರಹಾಸನು ಮೂರು ವರ್ಷಗಳ ಹಿಂದೆ ಬಿ.ಇ. ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣನಾಗಿದ್ದನು. ಯಾವ ಉದ್ಯೋಗವೂ ಸಿಕ್ಕದೆ ಹೋದುದರಿಂದ ಅವನು ಮನೆಯಲ್ಲಿಯೇ ಇರುತ್ತಿದ್ದನು.

ಕೃಷ್ಣಕಾಂತನೂ, ಚಂಚಲೆಯೂ ಬಾಬು ಅವರ ಮನೆಗೆ ಹೋದಾಗ, ಅವರಿಗೆ ಸಂತಾಪವನ್ನು ಸೂಚಿಸಲೋಸುಗ, ದೂರ ಮತ್ತು ಹತ್ತಿರದ ಊರುಗಳಿಂದ ಹಲವರು ಬಂದಿದ್ದರು. ಕ್ರಾಂತಿಕೂಟದ ಕಾರ್ಯದರ್ಶಿ ಕಿಶೋರನು ಕೃಷ್ಣಕಾಂತನನ್ನೂ, ಚಂಚಲೆಯನ್ನೂ ಸ್ವಾಗತಿಸಿ ಪುರುಷೋತ್ತಮಬಾಬು ಅವರ ಕೊಠಡಿಗೆ ಕರೆದೊಯ್ದನು. ಬಾಬು ಅವರಿಗೆ ಆಗಲೇ ಎಪ್ಪತ್ತು ವರ್ಷವಾಗಿತ್ತು. ದೇಹವೆಲ್ಲವೂ ಕೃಶವಾಗಿ ಮೈ ಸುಕ್ಕು ಬಿದ್ದಿತ್ತು. ಧೋತ್ರವನ್ನು ತೊಟ್ಟು, ಉದ್ದನೆಯ ಜುಬ್ಬಾವನ್ನು ಹಾಕಿದ್ದರು. ಅವರನ್ನು ನೋಡಿದೊಡನೆ ಅವರೊಬ್ಬ ಸಾತ್ವಿಕ ಶಿರೋಮಣಿಯೆಂಬುದನ್ನು ಗುರುತಿಸಬಹುದಾಗಿತ್ತು. ಕೃಷ್ಣಕಾಂತನನ್ನು ನೋಡಿದೊಡನೆ ಬಾಬು ಅವರು ಗಳಗಳನೆ ಕಣ್ಣೀರಿಡಲು ಆರಂಭಿಸಿದರು. ಕೃಷ್ಣಕಾಂತನೂ ಅಳತೊಡಗಿದನು. ಅವರೀರ್ವರೂ ಅಳುತ್ತಿರುವುದನ್ನು ನೋಡಿ ಚಂಚಲೆಯೂ ಅಳಲಾರಂಭಿಸಿದಳು. ಬಾಬು ಅವರು ಅವಳು ಅಳುತ್ತಿರುವುದನ್ನು ನೋಡಿ ತಮ್ಮ ದುಃಖವನ್ನು ಶಮನ ಮಾಡಿಕೊಂಡು, "ಕೃಷ್ಣ, ಇವಳು ನಿನ್ನ ಮಗಳಲ್ಲವೇ?

ಇವಳನ್ನು ನೋಡಿ ಬಹಳ ದಿನಗಳಾಗಿದ್ದವು. ನೀವು ಅಳಬೇಡಮ್ಮಾ. ಒಳಗೆ ಹೋಗಮ್ಮಾ, ಹೆಂಗಸರ ಜೊತೆಗಿರು. ನಾನು ನಿನ್ನ ಅಪ್ಪನ ಜೊತೆಯಲ್ಲಿ ಸ್ವಲ್ಪ ಗುಟ್ಟಿನ ಮಾತನಾಡಬೇಕು" ಎಂದು ಚಂಚಲೆಗೆ ಹೇಳಿದರು. ಚಂಚಲೆ ಉದ್ದೇಶಪೂರ್ವಕವಾಗಿಯೇ ಶಂಕರನ ಪೂರ್ವೋತ್ತರಗಳನ್ನು ತಿಳಿದುಕೊಳ್ಳಲು ಬಂದಿದ್ದವಳಾದ್ದರಿಂದ, ತಂದೆ ಮತ್ತು ಪುರುಷೋತ್ತಮಬಾಬು ಅವರ ನಡುವೆ ನಡೆಯಲಿದ್ದ ಸಂಭಾಷಣೆಯನ್ನು ಕೇಳಲು ಬಹಳ ಆಸಕ್ತಿಯಿಂದಿದ್ದಳು. ಅವಳು ಪಿಸುಮಾತಿನಲ್ಲಿ, ತಂದೆಯ ಕಿವಿಯಲ್ಲಿ ತನಗೆ ಒಳಗಡೆ ಯಾರ ಪರಿಚಯವೂ ಇಲ್ಲವೆಂದೂ, ತಾನು ಅಲ್ಲಿಯೇ ಇರಲು ಅನುಮತಿ ಕೊಡಬೇಕೆಂದೂ, ಮನವಿ ಮಾಡಿಕೊಂಡಳು. ಆಗ ಕೃಷ್ಣಕಾಂತನು ತನ್ನ ಮಗಳು ಗುಟ್ಟನ್ನು ರಟ್ಟು ಮಾಡತಕ್ಕಂತ ಸ್ವಭಾವದವಳಲ್ಲವೆಂದೂ, ಅವಳಿದ್ದರೆ ಮಾತನಾಡಲು ಅಡ್ಡಿಯಿಲ್ಲವೆಂದೂ, ಬಾಬು ಅವರಿಗೆ ಅರಿಕೆ ಮಾಡಿದನು.

ಬಾಬು ಅವರು ಮಾತನ್ನು ಪ್ರಾರಂಭಿಸಿ, ಕೃಷ್ಣ ನನಗೆ ದಿಕ್ಕು ತೋಚದಂತಾಗಿದೆ. ದುಷ್ಟರು ನನ್ನ ಮನೆಗೆ ಬಾಂಬ್ ಹಾಕುತ್ತಾರೆಂದು ಕನಸಿನಲ್ಲಿಯೂ ಯೋಚಿಸಿರಲಿಲ್ಲ. ರುಮೆಯಂತೂ ನನ್ನ ಕೈ ಬಿಟ್ಟು ಹೋದಳು. ನನ್ನ ಒಬ್ಬನೇ ಮಗನನ್ನು ದುಷ್ಟರಿಂದ ಹೇಗೆ ರಕ್ಷಿಸಬೇಕೆಂಬುದೇ ಒಂದು ದೊಡ್ಡ ಸಮಸ್ಯೆಯಾಗಿದೆ. ಪೊಲೀಸರಿಂದ ರಕ್ಷಣೆ ದೊರೆಯುವುದಿಲ್ಲವೆಂಬುದು ಶತಸಿದ್ಧವಾಗಿದೆ. ಆದ್ದರಿಂದ ಚಂದ್ರಹಾಸನು ಕೆಲಕಾಲ ಅವನ ಅಕ್ಕನ ಜೊತೆಯಲ್ಲಿ ಇಂಗ್ಲೆಂಡಿನಲ್ಲಿದ್ದರೆ ವಾಸಿ ಎಂದು ನನಗನ್ನಿಸುತ್ತದೆ. ನನ್ನ ಬಳಿ ಸಾಕಷ್ಟು ಹಣವೂ ಇಲ್ಲ. ಆದರೂ ಅವನು ಒಪ್ಪಿದರೆ ಹೇಗಾದರೂ ಮಾಡಿ ಕಳುಹಿಸುವ ಏರ್ಪಾಡು ಮಾಡಲು ನಾನು ಸಿದ್ಧ ಎಂದರು.

"ತಾವು ಅವನ ಅಭಿಪ್ರಾಯವನ್ನು ಕೇಳಿದಿರಾ?"

"ನಾನು ಬೆಳಿಗ್ಗೆ ಸೂಕ್ಷ್ಮವಾಗಿ ಅವನೊಡನೆ ಪ್ರಸ್ತಾಪಿಸಿದೆ. ಆಗ ಅವನು 'ನನ್ನನ್ನು ನಂಬಿದವರನ್ನು ಕೈಬಿಟ್ಟು ಇಂಗ್ಲೆಂಡಿಗೆ ಹೋಗುವ ಹೇಡಿಯಲ್ಲ' ಎಂದು ಹೇಳಿದ. ಅವನಿಲ್ಲಿಯೇ ಇದ್ದರೆ ಅವನಿಗೂ ಶಂಕರನಿಗೂ ಇನ್ನೂ ಹೆಚ್ಚಿನ ದ್ವೇಷ ಬೆಳೆಯುತ್ತದೆ. ಶಂಕರನಿಂದ ಅವನ ಜೀವಕ್ಕೆ ಅಪಾಯವಿದೆ. ನೀನೇ ಏನಾದರೂ ಮಾಡಿ ಅವನನ್ನು ಒಪ್ಪಿಸಬೇಕು."

"ತಮ್ಮ ಮಾತನ್ನು ಕೇಳದಿದ್ದವನು ನನ್ನ ಮಾತನ್ನು ಕೇಳುತ್ತಾನೆಂಬ ಭರವಸೆ ಇಲ್ಲ. ಆದರೂ ಹೇಳಿ ನೋಡುತ್ತೇನೆ. ಅವನಿಗೂ ಶಂಕರನಿಗೂ ಇಷ್ಟು ಬದ್ಧವೈರ ಬೆಳೆಯಲು ಕಾರಣವೇನೆಂಬುದು ತಮಗೆ ಗೊತ್ತಾಗಿದೆಯೆ?"

"ನನಗೆ ಗೊತ್ತಿದ್ದ ಮಟ್ಟಿಗೆ ರಾಜಕಾರಣದ ಪೈಪೋಟಿಯೇ ಕಾರಣ. ನಮ್ಮ ಹುಡುಗ ಕ್ರಾಂತಿಕೂಟವೆಂಬ ಪಕ್ಷವನ್ನು ಸ್ಥಾಪಿಸಿದ್ದಾನೆ. ಶಂಕರನ ಮಾವೋಸೇನೆಯಲ್ಲಿದ್ದ ಅನೇಕರು ವಿದ್ಯಾವಂತರು ನಮ್ಮ ಹುಡುಗನ ಪಕ್ಷಕ್ಕೆ ಸೇರಿದ್ದಾರೆ. ಅದರಿಂದ ಶಂಕರನಿಗೆ ಅವನ ಮೇಲೆ ವೈರ ಬೆಳೆದಿದೆಯೆಂದು ಕಿಶೋರ್ ನನ್ನ ಹತ್ತಿರ ಹೇಳುತ್ತಿದ್ದ. ಚಂದ್ರಹಾಸ ನನ್ನೊಡನೆ ಯಾವ ವಿಚಾರದಲ್ಲಿಯೂ ಸರಿಯಾಗಿ ಬಾಯಿಬಿಟ್ಟು ಮಾತನಾಡುವುದಿಲ್ಲ.

ಕ್ರಾಂತಿಕೂಟವನ್ನು ಕಟ್ಟುವಾಗಲೂ ಸಹ ನನಗೆ ಒಂದು ಮಾತನ್ನೂ ತಿಳಿಸಲಿಲ್ಲ. ಅವನಿಗೆ ರಾಜಕಾರಣ ಬೇಕಾಗಿರಲಿಲ್ಲ. ಈಗಿನ ಕಾಲದ ಹುಡುಗರು ಎಲ್ಲಿ ಹಿರಿಯರ ಮಾತನ್ನು ಕೇಳುತ್ತಾರೆ?"

"ಜನ ಬಾಯಿಗೆ ಬಂದಂತೆ ಹೇಳುತ್ತಿದ್ದಾರೆ. ಡಾ॥ ಸುರೇಶ್ ಚಂದ್ರರ ಮಗಳು ಗೌರಿಗೂ ನಿಮ್ಮ ಚಂದ್ರಹಾಸನಿಗೂ ಪ್ರೇಮವಿದೆಯೆಂದೂ, ಅವರಿಬ್ಬರೂ ಶಂಕರನ ಕ್ರಾಂತಿಸೇನೆಯ ಸದಸ್ಯರಾಗಿದ್ದರೆಂದೂ, ಶಂಕರನ ವಕ್ರದೃಷ್ಟಿ ಗೌರಿಯ ಮೇಲೆ ಬಿದ್ದಿದ್ದರಿಂದ, ಗೌರಿಯ ಚಂದ್ರಹಾಸನೂ ಕ್ರಾಂತಿಸೇನೆಯನ್ನು ತ್ಯಜಿಸಿ ಹೊಸ ಪಕ್ಷವನ್ನು ಕಟ್ಟಿದ್ದರೆಂದೂ, ಅನಂತರ ಈಗ ಹತ್ತು ಹದಿನೈದು ದಿನಗಳ ಹಿಂದೆ ಗೌರಿ ತನ್ನ ಸ್ನೇಹಿತಳೊಡನೆ ಸಿನಿಮಾ ನೋಡಿಕೊಂಡು ರಾತ್ರಿ ಸುಮಾರು ೯ ಗಂಟೆಗೆ ಗಾಂಧಿ ಪಾರ್ಕ್ ಹತ್ತಿರ ಬರುತ್ತಿದ್ದಾಗ ಶಂಕರನ ಕಡೆಯವರು ಅವಳನ್ನು ಅಪಹರಿಸಲು ಪ್ರಯತ್ನ ಪಟ್ಟರೆಂದೂ, ಆ ಸಂಬಂಧ ಚಂದ್ರಹಾಸನು ಗೌರಿಯಿಂದ ಶಂಕರನ ಮೇಲೆ ಪೊಲೀಸಿಗೆ ಫಿರ್ಯಾದು ಕೊಡಿಸಿದ್ದನೆಂದೂ, ಅದರಿಂದ ರೊಚ್ಚಿಗೆದ್ದ ಶಂಕರನು ನಿಮ್ಮ ಮನೆಗೆ ಬಾಂಬ್ ಹಾಕಿಸಿದನೆಂದೂ ಹೇಳುತ್ತಾರೆ.

"ನನಗೊಂದೂ ಗೊತ್ತಿಲ್ಲಾ, ಅವ ನನ್ನ ಹತ್ತಿರ ಏನೂ ಹೇಳೋದೇ ಇಲ್ಲ. ನೀನೇ ಅವನ ಹತ್ತಿರ ಮಾತಾಡು"

"ಹಾಗಾದರೆ ತಾವು ದಯವಿಟ್ಟು ಹೋಗಿ ಅವನನ್ನು ಕಳಿಸಿಕೊಡಿ. ನಾನೇ ಅವನ ಹತ್ತಿರ ಮಾತಾಡ್ತೀನಿ"

ಸ್ವಲ್ಪ ಹೊತ್ತಿನ ನಂತರ ಕೃಷ್ಣಕಾಂತನೂ, ಚಂಚಲೆಯೂ ಕುಳಿತಿದ್ದ ಕೊಠಡಿಗೆ ಚಂದ್ರಹಾಸನು ಬಂದನು. ಕೃಷ್ಣಕಾಂತನು ಅವನಿಗೆ ಕುಳಿತುಕೊಳ್ಳುವಂತೆ ಎದುರುಗಡೆ ಇದ್ದ ಕುರ್ಚಿಯನ್ನು ತೋರಿಸಿದನು. ಚಂದ್ರಹಾಸನ ದೃಷ್ಟಿ ಸ್ವಾಭಾವಿಕವಾಗಿ ಚಂಚಲೆಯ ಕಡೆಗೆ ಹರಿದಿತ್ತು. ಚಂಚಲೆಯ ದೃಷ್ಟಿ ಚಂದ್ರಹಾಸನ ಕಡೆಗೆ ಬಿದ್ದಿತ್ತು. ಅವರಿಬ್ಬರೂ ಒಬ್ಬರನ್ನೊಬ್ಬರು ಚಿಕ್ಕವರಾಗಿದ್ದಾಗ ನೋಡಿದ್ದರು. ಇತ್ತೀಚಿನ ವರ್ಷಗಳಲ್ಲಿ ಅವರಿಬ್ಬರೂ ಸಂಧಿಸಿರಲಿಲ್ಲ. ಕೃಷ್ಣಕಾಂತನು ತನ್ನ ಮಗಳಿಗೆ ಚಂದ್ರಹಾಸನ ಪರಿಚಯ ಮಾಡಿಕೊಟ್ಟನು. ಚಂಚಲೆಯು ಶಂಕರನಿಗೆ ಮನಸೋತವಳಾಗಿದ್ದಳು. ಆದರೂ ಚಂದ್ರಹಾಸನನ್ನು ನೋಡಿದ ಮೇಲೆ ಚಂದ್ರಹಾಸನು ಶಂಕರನಿಗಿಂತ ರೂಪವಂತನೆಂದು ಅವಳು ಭಾವಿಸಲು ಸಕಾರಣಗಳಿದ್ದವು. ಚಂದ್ರಹಾಸನು ಯಾವುದೋ ಮಹತ್ಕಾರ್ಯಕ್ಕಾಗಿ ಜನ್ಮ ತಾಳಿದ ಮಹಾಪುರುಷನಂತೆ ಅವಳ ಕಣ್ಣಿಗೆ ಕಂಡಿದ್ದನು. ಅವನ ತೇಜೋಮಯ ಮುಖಮುದ್ರೆಯನ್ನು ನೋಡಿದ ಮೇಲೆ ಅವನು ಶಂಕರನಿಗಿಂತ ಹಲವು ವಿಚಾರಗಳಲ್ಲಿ ಶ್ರೇಷ್ಠನಾಗಿರಬೇಕೆಂದು ಅವಳು ಭಾವಿಸಿದಳು. ಕೃಷ್ಣಕಾಂತನು ಚಂದ್ರಹಾಸನನ್ನು ಚಿಕ್ಕಂದಿನಿಂದ ಬಲ್ಲವನು. ಆದ್ದರಿಂದ ಅವನನ್ನು ಏಕವಚನದಿಂದಲೇ ಸಂಬೋಧಿಸುತ್ತಿದ್ದನು. ಅವನನ್ನು ಕುರಿತು ತನ್ನ ಸಂತಾಪವನ್ನು ಸೂಚಿಸಿದ ನಂತರ, "ಚಂದ್ರಾ, ನಾನು

ನಿನ್ನೊಡನೆ ಸ್ವಲ್ಪ ಮಾತನಾಡಬೇಕಾಗಿದೆ. ನಾನು ನಿನ್ನ ಮತ್ತು ನಿಮ್ಮ ತಂದೆಯ ಹಿತೈಷಿಯೆಂಬುದು ನಿನಗೆ ಗೊತ್ತೇ ಇದೆ."

"ನಮಗೆ ನಿಮಗಿಂತ ಹೆಚ್ಚು ಹಿತೈಷಿಗಳು ಇನ್ನಾರಿದ್ದಾರೆ? ನೀವು ಸಂಕೋಚವಿಲ್ಲದೆ ಮಾತನಾಡಬಹುದು."

"ನಾನು ಮಾತನಾಡುವುದು ಹೆಚ್ಚೇನೂ ಇಲ್ಲ. ನಿನ್ನಿಂದ ಕೆಲವು ವಿಚಾರಗಳನ್ನು ತಿಳಿದುಕೊಳ್ಳಬೇಕಾಗಿದೆ. ವಿಷಯ ಗೊತ್ತಾದ ನಂತರ ಮುಂದೆ ಏನು ಮಾಡಬೇಕೆಂಬುದನ್ನು ನಾನೂ, ನೀನೂ ನಿಮ್ಮ ತಂದೆಯವರೂ ಕುಳಿತು ಒಂದು ನಿರ್ಧಾರಕ್ಕೆ ಬರಬೇಕಾಗಿದೆ ಆದ್ದರಿಂದ ಮುಚ್ಚುಮರೆ ಇಲ್ಲದೆ ನಡೆದ ಸಂಗತಿಗಳನ್ನು ನೀನು ತಿಳಿಸಬೇಕು."

"ನಿಮ್ಮ ಹತ್ತಿರ ಮುಚ್ಚುಮರೆ ಎಲ್ಲಿ ಬಂತು? ನನಗೆ ಗೊತ್ತಿರುವ ಸಂಗತಿಗಳನ್ನು ನಿಮಗೆ ತಿಳಿಸಲು ಯಾವ ಅಭ್ಯಂತರವೂ ಇಲ್ಲ. ಆದರೆ ಕೆಲವು ವಿಚಾರಗಳನ್ನು ಇವರು ಕೇಳುವುದು ಸೂಕ್ತವಲ್ಲವೆನಿಸುತ್ತದೆ" ಎಂದು ಚಂಚಲೆಯ ಕಡೆಗೆ ನೋಡಿದನು.

"ನಾನು ಯಾವ ಗುಟ್ಟನ್ನೂ ರಟ್ಟು ಮಾಡುವವಳಲ್ಲ. ನಾನೂ ನಿಮ್ಮ ಹಿತೈಷಿಯೆಂದೂ ನೀವು ಭಾವಿಸಬಹುದು" ಎಂದು ಚಂಚಲೆ ನುಡಿದಳು.

ಕೃಷ್ಣಕಾಂತನೂ ಸಹ ಅವಳೆದುರಿನಲ್ಲಿ ನಿಸ್ಸಂಕೋಚವಾಗಿ ಮುಚ್ಚುಮರೆ ಇಲ್ಲದೆ ಮಾತಾಡಬಹುದೆಂದು ಚಂದ್ರಹಾಸನಿಗೆ ಸೂಚಿಸಿದನು.

"ಹಾಗಾದರೆ ನಿಮಗೆ ಯಾವ ವಿಷಯದಲ್ಲಿ ಮಾಹಿತಿ ಬೇಕು ಎಂಬುದನ್ನು ತಿಳಿಸಿದರೆ ಹೇಳುತ್ತೇನೆ" ಎಂದು ಚಂದ್ರಹಾಸ ಕೇಳಿದನು.

"ಶಂಕರನೇ ಬಾಂಬ್ ಪ್ರಕರಣಕ್ಕೆ ಕಾರಣಕರ್ತನೆಂದು ನಿನಗೆ ಖಚಿತವಾಗಿದೆಯೇ?" ಎಂದು ಕೃಷ್ಣಕಾಂತನು ಪ್ರಶ್ನಿಸಿದನು.

"ಅದರಲ್ಲಿ ಸಂಶಯ ಲವಲೇಶವೂ ಇಲ್ಲ. ಆ ನೀಚನೇ ನನ್ನನ್ನು ಕೊಲ್ಲುವ ಉದ್ದೇಶದಿಂದ ಬಾಂಬ್ ಹಾಕಿಸಿದನು. ಆದರೆ ನಿರಪರಾಧಿ ನಮ್ಮ ತಾಯಿ ಅದಕ್ಕೆ ಬಲಿಯಾದರು."

"ನಿನಗೂ ಅವನಿಗೂ ಇಷ್ಟೊಂದು ವೈರ ಬೆಳೆಯಲು ಕಾರಣವೇನು?"

"ರಾಜಕೀಯ ಪೈಪೋಟಿಯೇ ಮುಖ್ಯ ಕಾರಣ."

"ನೀನೂ ಗೌರಿಯೂ ಹಿಂದೆ ಶಂಕರನ ಕ್ರಾಂತಿಸೇನೆಗೆ ಸೇರಿದ್ದರೆಂದು ವದಂತಿ ನಿಜವೇ?"

"ನಿಜ."

"ನಿಮ್ಮಪ್ಪನನ್ನು ಕೇಳದೆ ಆ ರಾಕ್ಷಸರ ಪಕ್ಷವನ್ನು ನೀವು ಸೇರಿದ್ದು ಹೇಗೆ?"

"ನಾನು ಸೇರಿದ್ದಾಗ ಅವರು ರಾಕ್ಷಸರೆಂಬುದು ಗೊತ್ತಿರಲಿಲ್ಲ. ನಮ್ಮಪ್ಪನನ್ನು ಕೇಳಿದ್ದರೆ ಗಾಂಧೀವಾದಿಗಳಾದ ಅವರು ಖಂಡಿತಾ ಒಪ್ಪುತ್ತಿರಲಿಲ್ಲ."

"ಯಾರಿಗೂ ಹೇಳದೆ ಕೇಳದೆ ಕ್ರಾಂತಿಸೇನೆಯನ್ನು ಸೇರುವ ಜರೂರು ಅವಶ್ಯಕತೆ ಏನಿತ್ತು ನಿನಗೆ?"

"ನಾನು ಸೇರಿದ್ದು ತಪ್ಪು, ಆದರೆ ಸೇರಿದ್ದಕ್ಕೆ ಸಕಾರಣಗಳಿದ್ದವು. ನಾನು ವಿದ್ಯಾರ್ಥಿಯಾಗಿದ್ದಾಗ ಸತ್ಯ, ನ್ಯಾಯ, ಮಾನವೀಯತೆ ಮುಂತಾದ ಸದ್ಗುಣಗಳು ಮಾನವ ಜಿವನದ ಆದರ್ಶವೆಂದು ತಿಳಿದಿದ್ದೆ. ನಾನು ಓದುತ್ತಿದ್ದ ಪುಸ್ತಕಗಳೂ ಅದನ್ನೇ ಸಾರುತ್ತಿದ್ದವು. ನಮ್ಮ ಅಧ್ಯಾಪಕರೂ ಅದನ್ನೇ ಹೇಳುತ್ತಿದ್ದರು. ಕಾಲೇಜನ್ನು ಬಿಟ್ಟ ಮೇಲೆ ಇವೆಲ್ಲವೂ ಪೊಳ್ಳುಮಾತುಗಳೆಂಬುದು ನನಗೆ ಅರ್ಥವಾಯಿತು. ವಾಸ್ತವಿಕ ಜೀವನದಲ್ಲಿ ಸತ್ಯ, ನ್ಯಾಯ, ಮಾನವೀಯತೆ ಮುಂತಾದ ಗುಣಗಳಿಗೆ ಬೆಲೆಯೇ ಇಲ್ಲವೆಂದು ನನಗೆ ಸ್ಪಷ್ಟವಾಯಿತು. ಸಮಾಜದಲ್ಲಿ ಮುಂದಾಳುಗಳೆನಿಸಿಕೊಂಡವರು ಜನಸಾಮಾನ್ಯರನ್ನು ಮೋಸಗೊಳಿಸಿ, ಸ್ವಾರ್ಥಸಾಧಕ ಜೀವನವನ್ನು ನಡೆಸುತ್ತಾರೆಂಬುದನ್ನು ಅರಿತುಕೊಳ್ಳಲು ನನಗೆ ಹೆಚ್ಚು ಕಾಲ ಬೇಕಾಗಲಿಲ್ಲ. ಒಂದು ಕಡೆ ಭ್ರಷ್ಟರೂ, ಇನ್ನೊಂದು ಕಡೆ ದುಷ್ಟರೂ ರಾಜಕೀಯ ಧುರಂಧರರಂತೆ ಮೆರೆಯುತ್ತಿರುವುದನ್ನು ಕಂಡು ನನಗೆ ಸಹಿಸಲಾಗಲಿಲ್ಲ. ನಾನು ಪ್ರಥಮ ಶ್ರೇಣಿಯಲ್ಲಿ ಇಂಜಿನಿಯರಿಂಗ್ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದರೂ ಕೆಲಸಕ್ಕಾಗಿ ಅಲೆದಲೆದು ಸಾಕಾಯಿತು. ಕೊನೆಗೂ ಕೆಲಸ ಸಿಕ್ಕಲಿಲ್ಲ. ನೌಕರಿ ಪಡೆಯಲೂ ಸಹ ಲಂಚ ಕೊಡಬೇಕೆಂದು ನನಗೆ ಗೊತ್ತಾದಾಗ, ನನ್ನ ಸಾತ್ವಿಕ ಕೆಚ್ಚು ಕೆರಳಿತು. ಈ ದೇಶದಲ್ಲಿ ಕ್ರಾಂತಿಯಾಗದ ಹೊರತು ಜನರಿಗೆ ಮುಕ್ತಿ ಇಲ್ಲವೆಂಬ ತೀರ್ಮಾನಕ್ಕೆ ಬಂದೆ. ಶಂಕರನ ಹೇಳಿಕೆಗಳನ್ನು ಪತ್ರಿಕೆಗಳಲ್ಲಿ ಆಗಾಗ ಓದುತ್ತಿದ್ದೆ. ಅವನೊಬ್ಬ ಆದರ್ಶ ಕಮ್ಯೂನಿಸ್ಟ್ ಎಂಬ ಭ್ರಮೆಯಿಂದ, ಆದರ್ಶ ಪ್ರೇರಿತನಾಗಿ, ಅವನ ಸೇನೆಯನ್ನು ಸೇರಿದೆ. ನನ್ನಂತೆಯೇ ಅನೇಕ ವಿದ್ಯಾವಂತ ಯುವಕ ಯುವತಿಯರೂ ಅವನ ಪಕ್ಷವನ್ನು ಸೇರಿದ್ದರು."

"ಹಾಗಾದರೆ ನಂತರ ಅವನ ಕ್ರಾಂತಿಸೇನೆಯನ್ನು ನೀನು ಬಿಟ್ಟಿದ್ದೇಕೆ?"

"ಅದು ದೊಡ್ಡ ಕತೆ. ನಾನು ಕ್ರಾಂತಿಸೇನೆಯನ್ನು ಸೇರಿದ ಆರು ತಿಂಗಳೊಳಗಾಗಿ ಶಂಕರನ ಬಣ್ಣ ಒಂದೊಂದಾಗಿ ಬಯಲಾಗುತ್ತಾ ಬಂತು. ಅವನು ಖೋಟಾ ಕಮ್ಯುನಿಸ್ಟೆಂದು ನನಗೂ, ನನ್ನ ಸ್ನೇಹಿತರಿಗೂ ಅರ್ಥವಾಯಿತು. ಅವನೂ, ಅವನ ಕಡೆಯವರೂ ಸ್ವಾರ್ಥಕ್ಕಾಗಿ ಕ್ರಾಂತಿಯ ಹೆಸರಿನಲ್ಲಿ ಮಾಡಬಾರದ ಕೆಲಸ ಮಾಡುತ್ತಿದ್ದರು. ಅವರು ಮಾಡಿದ್ದ ಕೆಲವು ಅಮಾನುಷ ಕೃತ್ಯಗಳಿಂದ ನಾವು ದಿಗ್ಭ್ರಾಂತರಾದೆವು. ಕ್ರಾಂತಿಸೇನೆಯಲ್ಲಿ ನಿಜವಾದ ಕ್ರಾಂತಿಕಾರರಿಗಿಂತ ಕಳ್ಳಕಾಕರ ಮತ್ತು ಪುಂಡುಪೋಕರ ತಂಡವೇ ಹೆಚ್ಚಾಗಿತ್ತು. ಹಲವು ಕಡೆ ಹಣಕ್ಕಾಗಿ ದರೋಡೆ ಮಾಡಿಸುತ್ತಿದ್ದರು. ತಮಗಾಗದ ಹಲವರನ್ನು ಕೊಲ್ಲಿಸುತ್ತಿದ್ದರು. ಈ ಕಾರಣಗಳಿಂದ ನಾನೂ, ನನ್ನ ಸ್ನೇಹಿತರೂ ಅವನ ಕ್ರಾಂತಿಸೇನೆಯನ್ನು ಬಿಟ್ಟು ಕ್ರಾಂತಿಕೂಟವನ್ನು ಕಟ್ಟಿದೆವು."

"ಡಾಕ್ಟರ್ ಸುರೇಶ್ಚಂದ್ರರವರ ಮಗಳಾದ ಗೌರಿ ಸಂಬಂಧ ಅವನಿಗೂ ನಿನಗೂ ದ್ವೇಷ ಹುಟ್ಟಿತೆಂದು ಕೆಲವರು ಹೇಳುತ್ತಾರೆ ನಿಜವೆ?"

"ಹೌದು, ಅದೂ ಒಂದು ಕಾರಣ. ಗೌರಿ ನನ್ನ ಜೊತೆಯಲ್ಲಿ ಕ್ರಾಂತಿಸೇನೆಯನ್ನು ಸೇರಿದ್ದಳು. ಶಂಕರನು ಅವಳನ್ನು ತನ್ನ ಪ್ರೇಯಸಿಯನ್ನಾಗಿ ಮಾಡಿಕೊಳ್ಳಲು ಪ್ರಯತ್ನಪಟ್ಟನು.

ಗೌರಿ ಇದನ್ನು ಸಹಿಸಲಿಲ್ಲ. ಅವಳು ಕ್ರಾಂತಿಸೇನೆಯನ್ನು ನನಗಿಂತ ಮುಂಚೆಯೇ ಬಿಟ್ಟಿದ್ದಳು. ಈಗ ಸುಮಾರು ಹದಿನೈದು ದಿನಗಳ ಹಿಂದೆ ಅವಳೂ, ಇನ್ನೊಬ್ಬ ಹುಡುಗಿಯೂ ರಾತ್ರಿ ಗಾಂಧೀಪಾರ್ಕಿನ ಹತ್ತಿರ ಬರುತ್ತಿರುವಾಗ ಶಂಕರನ ಆಣತಿಯಂತೆ ಅವನ ಅನುಯಾಯಿಗಳಾದ ಇಸ್ಮೇಯಿಲ್ ಮತ್ತು ಭೋಲಾನಾಥ್ ಶಂಕರನ ಕಾರಿನಲ್ಲಿ ಹೊಂಚು ಹಾಕಿಕೊಂಡು ಪಾರ್ಕಿನ ಸಮೀಪ ಕಾದಿದ್ದರು. ಹುಡುಗಿಯರಿಬ್ಬರೂ ಪಾರ್ಕಿನ ಹತ್ತಿರ ಬಂದೊಡನೆ ಅವರಿಬ್ಬರನ್ನು ಅಡ್ಡಗಟ್ಟಿ ಬಲಾತ್ಕಾರವಾಗಿ ಅವರನ್ನು ಹೊತ್ತುಕೊಂಡು ಹೋಗಲು ಪ್ರಯತ್ನಿಸುತ್ತಿದ್ದಾಗ. ಅವರ ಅದೃಷ್ಟಕ್ಕೆ ಸರಿಯಾಗಿ ಸರ್ಕಾರಿ ಬಸ್ಸೊಂದು ಅದೇ ಮಾರ್ಗವಾಗಿ ಬಂತು. ಹುಡುಗಿಯರ ಆರ್ತನಾದವನ್ನು ಕೇಳಿ ಬಸ್ಸಿನ ಡ್ರೈವರ್ ಬಸ್ಸನ್ನು ನಿಲ್ಲಿಸಿದನಂತೆ. ಬಸ್ಸು ನಿಂತೊಡನೆ ಆ ಧೂರ್ತರು ಹುಡುಗಿಯರನ್ನು ಅಲ್ಲೇ ಬಿಟ್ಟು ಕಾರಿನಲ್ಲಿ ಪರಾರಿಯಾದರು. ಮರುದಿನ ಗೌರಿ ನನಗೆ ಹೇಳಿಕಳುಹಿಸಿದಳು. ನಾನು ಪೊಲೀಸ್ ಸೂಪರಿಂಟೆಂಡೆಂಟ್‌ರವರಿಗೆ ಗೌರಿಯಿಂದ ಫಿರ್ಯಾದು ಕೊಡಿಸಿದೆ. ಈ ಕಾರಣದಿಂದಲೂ ಕೂಡ ಶಂಕರನಿಗೆ ನನ್ನ ಮೇಲೆ ದ್ವೇಷ ಹೆಚ್ಚಾಗಿ, ಬಾಂಬನ್ನು ಹಾಕಿಸಲು ಕಾರಣವಾಯಿತು."

"ಮುಂದಾದರೂ ಅವನಿಂದ ಅಪಾಯ ತಪ್ಪಿದ್ದಲ್ಲವೆಂದು ನಿನಗೆ ಗೊತ್ತಾಗಿದೆ ತಾನೆ?"

"ನಿಜ. ಗೊತ್ತಾಗಿದೆ."

"ಆ ಬಗ್ಗೆ ನೀನೇನು ಮಾಡಬೇಕೆಂದು ಯೋಜಿಸಿರುವೆ?"

"ಅವನ ಕ್ರಾಂತಿಸೇನೆಯ ಪ್ರಾಬಲ್ಯವನ್ನು ಕಡಿಮೆ ಮಾಡಿ, ನಮ್ಮ ಕೂಟದ ಪ್ರಾಬಲ್ಯವನ್ನು ಹೆಚ್ಚಿಸುವುದೊಂದೇ ಮಾರ್ಗ. ದಿನೇ ದಿನೇ ನಮ್ಮ ಕ್ರಾಂತಿಕೂಟ ಬೆಳೆಯುತ್ತಾ ಇದೆ. ಶಂಕರನ ಕಪಟ ನಾಟಕ ಜನಗಳಿಗೆ ಈಗೀಗ ಗೊತ್ತಾಗುತ್ತಾ ಬಂದಿದೆ."

"ನಿಮ್ಮ ತಂದೆ, ನೀನು ಇಂಗ್ಲೆಂಡಿಗೆ ಹೋದರೆ ವಾಸಿ ಎಂದು ಹೇಳುತ್ತಿದ್ದಾರೆ ನಿನ್ನ ಅಭಿಪ್ರಾಯವೇನು?"

"ಪುರುಷೋತ್ತಮಬಾಬು ಅವರ ಮಗನಾಗಿ ನನ್ನನ್ನು ನಂಬಿದ ಜನರನ್ನೆಲ್ಲಾ ಬಿಟ್ಟು ಹೇಡಿಯಂತೆ ಇಂಗ್ಲೆಂಡಿಗೆ ಓಡಿ ಹೋಗಬೇಕೆಂದು ನೀವೂ ಸಲಹೆ ಮಾಡುತ್ತೀರಾ?"

"ಒಂದು ವೇಳೆ ನಿನ್ನ ಕ್ರಾಂತಿಕೂಟವನ್ನು ವಿಸರ್ಜಿಸಿ ಸುಮ್ಮನಿದ್ದರೇನಾಗುತ್ತದೆ?"

"ಅದಕ್ಕಿಂತ ಹೆಚ್ಚಿನ ಅಪಾಯ ಇನ್ನಾವುದೂ ಇಲ್ಲ. ಕ್ರಾಂತಿಕೂಟವನ್ನು ವಿಸರ್ಜಿಸಿದ ಮೇಲೆ ನಾನೂ ಬದುಕುವಂತಿಲ್ಲ; ನಮ್ಮ ಮಿತ್ರರೂ ಬದುಕುವಂತಿಲ್ಲ; ಈ ಪ್ರದೇಶದ ಯಾವ ಜನರೂ ಬದುಕುವಂತಿಲ್ಲ. ಇಂದು ಈ ಪ್ರದೇಶದಲ್ಲಿ ಅರಾಜಕತೆ ತಾಂಡವವಾಡುತ್ತಿದೆ. ರಕ್ಷಣೆಗಾಗಿ ಪೊಲೀಸಿನವರನ್ನು ನಂಬಿಕೊಳ್ಳುವುದು ಸಾಧ್ಯವೇ ಇಲ್ಲ. ಶಂಕರನೂ ಅವನ ಅನುಯಾಯಿಗಳೂ ಕ್ರಾಂತಿಯ ಸೋಗಿನಲ್ಲಿ ನಡೆಸುತ್ತಿರುವ ಅಮಾನುಷ ಕೃತ್ಯಗಳನ್ನು ತಡೆಗಟ್ಟಬೇಕಾದರೆ ಕ್ರಾಂತಿಕೂಟದಿಂದ ಮಾತ್ರ ಸಾಧ್ಯ. ಮೊನ್ನೆ

ತಾನೇ ಒಂದು ಘಟನೆ ನಡೆದಿದೆ. ಅದನ್ನು ನೀವು ಕೇಳಿದರೆ ಕ್ರಾಂತಿಸೇನೆಯ ಕರಾಳ ಕೃತ್ಯಗಳು ಯಾವ ಮಟ್ಟಕ್ಕೇರಿವೆಯೆಂಬುದು ಅರ್ಥವಾಗುತ್ತದೆ."

"ಅದೇನು ಘಟನೆ?"

"ಬಲರಾಮ್ ಎಂಬ, ವಿದ್ಯಾವಂತ ಯುವಕನು ಕೆಲವು ದಿನಗಳ ಹಿಂದೆ ಕ್ರಾಂತಿಸೇನೆಯ ಅಮಾನುಷ ಕೃತ್ಯಗಳನ್ನು ಸಹಿಸಲಾರದೆ ಕ್ರಾಂತಿಸೇನೆಯನ್ನು ಬಿಟ್ಟು ಬಂದನು. ಅವನು ಬಿಟ್ಟು ಬಂದವನು ಬಾಯಿ ಮುಚ್ಚಿಕೊಂಡು ಸುಮ್ಮನಿದ್ದಿದ್ದರೆ ಚೆನ್ನಾಗಿರುತ್ತಿತ್ತು. ಆದರೆ ಅವನು ಕ್ರಾಂತಿಸೇನೆಯವರ ದುಷ್ಕೃತ್ಯಗಳನ್ನು ಒಂದೊಂದಾಗಿ ಬಹಿರಂಗವಾಗಿ ಜನರಿಗೆ ತಿಳಿಸತೊಡಗಿದನು. ತನ್ನ ಸೇನೆಯ ಗುಟ್ಟು ರಟ್ಟಾಗುತ್ತಿದೆಯೆಂಬ ಕಾರಣದಿಂದ. ಬಲರಾಮನು ಶ್ರೀಪುರದ ರಸ್ತೆಯಲ್ಲಿ ರಾತ್ರಿ ಏಕಾಂಗಿಯಾಗಿ ಹೋಗುತ್ತಿರುವಾಗ, ಶಂಕರನು ಇಸ್ಮೇಯಿಲ್ ಮತ್ತು ಭೋಲಾ ಇವರುಗಳ ಸಹಾಯದಿಂದ ಅವನನ್ನು ಹಿಡಿದುಕೊಂಡು ಹೋಗಿ, ಅವನು ಮಾತನಾಡದಂತೆ ಅವನ ನಾಲಿಗೆಯನ್ನು ಕತ್ತರಿಸಿ ಹಾಕಿಸಿದನು. ಅನಂತರ ನಮ್ಮ ಕಿಶೋರ್ ಅವನನ್ನು ಶ್ರೀಪುರದ ಆಸ್ಪತ್ರೆಗೆ ಸೇರಿಸಿದ್ದಾನೆ."

"ಅವನಿಂದ ಪೊಲೀಸರಿಗೆ ಫಿರ್ಯಾದು ಕೊಡಿಸಿದ್ದೆಯೇನು?"

"ಪೊಲೀಸರಿಗೆ ಫಿರ್ಯಾದು ಕೊಟ್ಟರೆ ನಾಲಿಗೆಯ ಜೊತೆಗೆ ಪ್ರಾಣವೂ ಹೋಗುತ್ತದೆ. ಶಂಕರನ ಕಡೆಯವರು ಅವನನ್ನು ಕೊಂದೇ ಹಾಕುತ್ತಾರೆ. ಆದ್ದರಿಂದ ಆಸ್ಪತ್ರೆಯಲ್ಲಿ ಏನಾಯಿತೆಂದು ಕೇಳಿದಾಗ, ಅಕಸ್ಮಾತ್ ಕೆಳಗೆ ಬಿದ್ದಾಗ ಎರಡು ದಂತಪಂಕ್ತಿಗಳ ನಡುವೆ ನಾಲಿಗೆ ಸಿಕ್ಕಿ ತುಂಡಾಯಿತೆಂದು ನಮ್ಮ ಕಿಶೋರ್ ಹೇಳಿದನಂತೆ."

ಈ ಸಂಭಾಷಣೆಯನ್ನು ಕೇಳುತ್ತಿದ್ದ ಚಂಚಲೆಗೆ ಆಕಾಶವೇ ಕಳಚಿ ಬಿದ್ದಂತಾಯಿತು. ಕ್ರಾಂತಿ ಪುರುಷನೊಬ್ಬನ ಪತ್ನಿಯಾಗಿ ಸುಪ್ರಸಿದ್ಧ ಮಹಿಳೆಯಾಗಬೇಕೆಂಬ ಅವಳ ಆಶಾಗೋಪುರ ಕುಸಿದು ಬಿದ್ದಂತಾಗಿತ್ತು. ಇದ್ದಕ್ಕಿದ್ದಂತೆಯೇ ಅಂತರಂಗದ ವೇದನೆಯಿಂದ ಅವಳು ಅಳಲಾರಂಭಿಸಿದಳು. ಅವಳ ವೇದನೆಯನ್ನರಿಯದ ಅವಳ ತಂದೆಯೂ, ಚಂದ್ರಹಾಸನೂ ಕ್ರಾಂತಿಸೇನೆಯವರ ಅಮಾನುಷ ಕೃತ್ಯಗಳನ್ನು ಕೇಳಿ ಅಳುತ್ತಿದ್ದಾಳೆಂದು ಭಾವಿಸಿದರು. ಕೃಷ್ಣಕಾಂತನು "ನೀನು ಬಹಳ ಕೋಮಲ ಹೃದಯದವಳು. ಅದಕ್ಕಾಗಿಯೇ ನೀನು ನನ್ನೊಡನೆ ಬರಬಾರದೆಂದು ನಿನಗೆ ಹೇಳಿದ್ದು" ಎಂದು ಹೇಳಿ ಚಂಚಲೆಯನ್ನು ಸಮಾಧಾನ ಪಡಿಸುತ್ತಿದ್ದನು. ಚಂಚಲೆಯ ಅಳಲು ತಂದೆಯ ಸಮಾಧಾನೋಕ್ತಿಗಳಿಂದ ನಿವಾರಣೆಯಾಗುವ ಸ್ಥಿತಿಯಲ್ಲಿರಲಿಲ್ಲ. ಆದಷ್ಟು ಜಾಗ್ರತೆ ಮನೆಗೆ ಹೋಗಿ, ಏಕಾಂತದಲ್ಲಿ ತನ್ನ ಅಳಲನ್ನು ಕಳೆಯಬೇಕೆಂದು ಆತುರಪಡುತ್ತಿದ್ದಳು. ಮುಂದೆ ತಂದೆಗೂ ಚಂದ್ರಹಾಸನಿಗೂ ಆಗಲಿದ್ದ ಮಾತುಕತೆಗಳಲ್ಲಿ ಅವಳಿಗೆ ಸ್ವಲ್ಪವೂ ಆಸಕ್ತಿ ಇರಲಿಲ್ಲ. ಅವಳು ತನ್ನ ಮನದ ಉದ್ವೇಗವನ್ನು ತಾಳಲಾರದೆ ಮನಸ್ಸನ್ನು ಬೇರೆ ಕಡೆಗೆ ತಿರುಗಿಸುವ ಸಲುವಾಗಿ ಒಳಗಡೆ ಮಹಿಳೆಯರಿದ್ದಲ್ಲಿ ಹೋಗುವುದಾಗಿ ಹೇಳಿ, ಒಳಗಡೆ ಹೋಗಿ ಮಹಿಳೆಯರೊಡನೆ ಮಾತುಕತೆ ನಡೆಸುತ್ತಿದ್ದಳು. ನಂತರ ಕೃಷ್ಣಕಾಂತನೂ

ಪುರುಷೋತ್ತಮಬಾಬುಗಳೂ ಪರಿಸ್ಥಿತಿಯನ್ನು ಸುದೀರ್ಘವಾಗಿ ವಿಮರ್ಶಿಸಿದರು. ಚಂದ್ರಹಾಸನು ಇಂಗ್ಲೆಂಡಿಗೆ ಹೋಗುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿದ ಮೇಲೆ, ಅವನನ್ನು ಒತ್ತಾಯಪಡಿಸುವುದರಿಂದ ಯಾವ ಪ್ರಯೋಜನವೂ ಇಲ್ಲವೆಂದು ತೀರ್ಮಾನಕ್ಕೆ ಬಂದರು. ಅಂದಿನ ಪರಿಸ್ಥಿತಿಯಲ್ಲಿ, ಮಗನ ಕ್ರಾಂತಿಕೂಟಕ್ಕೆ ತಾವೂ ತಮ್ಮ ಅನುಯಾಯಿಗಳೂ ಬೆಂಬಲ ನೀಡುವುದೊಂದೇ ಮಾರ್ಗವಾಗಿತ್ತು. ಗಾಂಧೀವಾದದಲ್ಲಿ ಅಚಲವಾದ ನಂಬಿಕೆ ಇದ್ದ ಅವರಿಗೆ ಅಂದಿದ್ದ ಅರಾಜಕತೆಯ ವಾತಾವರಣದಲ್ಲಿ ಗಾಂಧೀವಾದ ಪ್ರಯೋಜನಕ್ಕೆ ಬರುತ್ತದೆಯೆಂಬ ಭರವಸೆಯೂ ಕಡಿಮೆಯಾಗುತ್ತಾ ಬಂದಿತ್ತು. ಆ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಪೊಲೀಸಿನವರಿಂದ ಜನರಿಗೆ ರಕ್ಷಣೆ ಸಿಗುತ್ತದೆಂಬ ಭರವಸೆಯೂ ತಪ್ಪಿಹೋಗಿತ್ತು. ಈ ಎಲ್ಲಾ ಕಾರಣಗಳಿಂದ ಚಂದ್ರಹಾಸನು ಯಾವ ರೀತಿ ನಡೆದುಕೊಳ್ಳಬೇಕೆಂಬುದನ್ನು ಅವನ ವಿವೇಚನೆಗೇ ಬಿಡುವುದು ಸೂಕ್ತವೆಂದು ತೀರ್ಮಾನಿಸಿದರು. ಮಾತುಕತೆ ಮುಗಿದ ನಂತರ ಕೃಷ್ಣಕಾಂತನು ಬಾಂಬ್ ಹಾಕಿದ್ದ ರುಮಾದೇವಿಯವರ ಕೊಠಡಿಯನ್ನು ಮಗಳಿಗೆ ತೋರಿಸಿ ಬಾಬು ಅವರ ಅಪ್ಪಣೆ ಪಡೆದು ಮಗಳೊಡನೆ ಶ್ರೀಪುರಕ್ಕೆ ಪ್ರಯಾಣ ಬೆಳೆಸಿದರು.

ದಾರಿಯಲ್ಲಿ ಚಂಚಲೆ ಒಂದು ಮಾತನ್ನೂ ಆಡದೆ, ಚಂದ್ರಹಾಸನು ಹೇಳಿದ್ದ ವಿಷಯಗಳನ್ನು ಕುರಿತು ಗಾಢವಾಗಿ ಚಿಂತಿಸುತ್ತಿದ್ದಳು. ಚಂದ್ರಹಾಸನು ಹೇಳಿದ್ದ ಮಾತುಗಳನ್ನು ನಂಬದಿರುವುದು ಕಷ್ಟವಾಗಿತ್ತು; ನಂಬುವುದು ದುಃಖಕರವಾಗಿತ್ತು. ಶಂಕರನ ಸ್ನೇಹ ಪ್ರಾಪ್ತಿಯಾಗಿ ಆಗಲೇ ಆರು ತಿಂಗಳಾಗಿತ್ತು. ಆ ಆರು ತಿಂಗಳ ಅವಧಿಯಲ್ಲಿ ಅವಳು ಅವನೊಡನೆ ಬೆರೆತ ಸಂದರ್ಭಗಳಲ್ಲೆಲ್ಲಾ ಅವನು ಅತ್ಯಂತ ಸುಸಂಸ್ಕೃತ ವ್ಯಕ್ತಿಯಂತೆ ವರ್ತಿಸಿದ್ದನು. ಅವಳು ಅವನಲ್ಲಿ ಕಪಟವನ್ನಾಗಲೀ, ಕ್ರೌರ್ಯವನ್ನಾಗಲೀ ಎಂದೂ ಕಂಡಿರಲಿಲ್ಲ. ಆದರೆ ತನ್ನ ತಂದೆಯೂ, ಚಂದ್ರಹಾಸನೂ, ಪುರುಷೋತ್ತಮಬಾಬುಗಳೂ ಹೇಳಿದ್ದ ಮಾತುಗಳನ್ನು ಅಲ್ಲಗಳೆಯುವುದು ಕಷ್ಟವಾಗಿತ್ತು. ಸತ್ಯಾಂಶವನ್ನು ತಿಳಿದುಕೊಳ್ಳುವ ಸಲುವಾಗಿ ತನ್ನ ಹಳೆಯ ಸ್ನೇಹಿತಳಾದ ಗೌರಿಯೊಡನೆ ಮಾತನಾಡಬೇಕೆಂದು ನಿರ್ಧರಿಸಿದಳು. ಗೌರಿ ಸುಳ್ಳು ಹೇಳುವುದಿಲ್ಲವೆಂದು ಅವಳಿಗೆ ಭರವಸೆ ಇತ್ತು. ಟ್ಯಾಕ್ಸಿ ಅನಿಲಗಿರಿಯನ್ನು ದಾಟಿದ ಮೇಲೆ ತಂದೆಯನ್ನು ಕುರಿತು ಮೆತ್ತಗೆ, "ಅಪ್ಪಾಜೀ, ನಾನು ಗೌರಿಯನ್ನು ನೋಡಿ ಬಹಳ ದಿನಗಳಾದವು. ಮನೆಗೆ ಹೋಗುವ ಮುನ್ನ ಹಾಗೆಯೇ ಅವಳನ್ನು ನೋಡಿಕೊಂಡು ಹೋಗೋಣವೇ?" ಎಂದು ಕೇಳಿದಳು. "ನಾನೂ ಅವರ ಮನೆಗೆ ಹೋಗಿ ಬಹಳ ದಿನಗಳಾದವು. ಆಗಲಿ ಹೋಗೋಣ" ಎಂದು ಕೃಷ್ಣಕಾಂತನು ಒಪ್ಪಿದನು.

ಗೌರಿಯ ತಂದೆ ಡಾ॥ ಸುರೇಶ್ಚಂದ್ರರು ಶ್ರೀಪುರದಲ್ಲಿ ಹೆಸರಾದ ವೈದ್ಯರಾಗಿದ್ದರು. ಅವರು ಕೆಲಕಾಲ ಮಿಲಿಟರಿ ಸರ್ವೀಸ್‌ನಲ್ಲಿದ್ದರು. ಅವರು ಏಳು ವರ್ಷಗಳ ಹಿಂದೆ ಮಗಳು ಗೌರಿಯನ್ನೂ, ಮಗ ರವಿಶಂಕರನನ್ನೂ, ಪತ್ನಿ ಪದ್ಮಾವತಿಯನ್ನು ಬಿಟ್ಟು ಮರಣ ಹೊಂದಿದ್ದರು. ಡಾ॥ ಸುರೇಶ್ಚಂದ್ರರು ಪುರುಷೋತ್ತಮಬಾಬುಗಳ ಮತ್ತು

ಕೃಷ್ಣಕಾಂತನ ಮನೆಗೆ ಬರುತ್ತಿದ್ದರು. ಚಂಚಲೆಯೂ ಹಲವು ಬಾರಿ ತಂದೆಯೊಡನೆ ಸುರೇಶ್ಚಂದ್ರರ ಮನೆಗೆ ಹೋಗಿದ್ದಳು. ಅಗಲೇ ಚಂಚಲೆಗೆ ಗೌರಿಯ ಸ್ನೇಹವಾದದ್ದು. ತಂದೆ ಸತ್ತ ನಂತರ, ಗೌರಿ ಕಾಳೀಪುರದಲ್ಲಿ ಅವಳ ಚಿಕ್ಕಮ್ಮ ರೂಪನ ಮನೆಯಲ್ಲಿದ್ದುಕೊಂಡು ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಳು. ಮೂರು ವರ್ಷಗಳ ಹಿಂದೆ ಕಾಲೇಜು ಶಿಕ್ಷಣ ಮುಗಿಸಿ ಮನೆಗೆ ಬಂದಿದ್ದಳು. ಗೌರಿ ಕಾಳೀಪುರಕ್ಕೆ ಹೋದ ಮೇಲೆ ಅವಳಿಗೂ ಚಂಚಲೆಗೂ ಸಮಾಗಮವಾಗಿರಲಿಲ್ಲ. ಅದಕ್ಕೆ ಕಾರಣವೂ ಇತ್ತು. ಸುರೇಶ್ಚಂದ್ರರು ಸತ್ತನಂತರ ಗೌರಿಯ ತಾಯಿ ಪದ್ಮಾವತಿ ಕೆಲವು ಬಾರಿ ತನ್ನ ವ್ಯವಹಾರಗಳ ಸಂಬಂಧ ಕಾನೂನು ಸಲಹೆಗಾಗಿ ಕೃಷ್ಣಕಾಂತನ ಮನೆಗೆ ಹೋಗಿದ್ದಳು. ಆದರೆ ಕಮಲ ಅವಳನ್ನು ತಿರಸ್ಕಾರ ಭಾವನೆಯಿಂದ ನೋಡುತ್ತಿದ್ದಳಲ್ಲದೆ ಅವಳ ವಿಚಾರದಲ್ಲಿ ಕೆಲವು ಆಡಬಾರದ ಮಾತುಗಳನ್ನೂ ಸಹ ಆಡಿದ್ದಳು. ಆದ್ದರಿಂದ ಪದ್ಮಾವತಿಯಾಗಲೀ, ಗೌರಿಯಾಗಲೀ ಕೃಷ್ಣಕಾಂತನ ಮನೆಗೆ ಬರುತ್ತಿರಲಿಲ್ಲ. ಏನಾದರೂ ಕೃಷ್ಣಕಾಂತನಿಂದ ಸಹಾಯ ಬೇಕಾದಲ್ಲಿ ಪದ್ಮಾವತಿ ಅವನನ್ನು ತನ್ನ ಮನೆಗೆ ಕರೆಯಿಸಿಕೊಳ್ಳುತ್ತಿದ್ದಳು.

ಡಾ॥ ಸುರೇಶ್ಚಂದ್ರರ ಜೀವಿತ ಕಾಲದಲ್ಲಿ ಪದ್ಮಾವತಿಯು ಅತ್ಯಂತ ಅಟ್ಟಹಾಸದಿಂದ ಬಾಳಿದವಳು. ಗಂಡ ಸತ್ತನಂತರ ಸಂಸಾರ ನಿರ್ವಹಣೆ ಕಷ್ಟವಾದ್ದರಿಂದ ಗಂಡನ ಕಾಲದಲ್ಲಿ ವಾಸಿಸುತ್ತಿದ್ದ ದೊಡ್ಡಮನೆಯನ್ನು ೩೫೦ ರೂಪಾಯಿಗಳ ಬಾಡಿಗೆಗೆ ಕೊಟ್ಟು, ಆ ದೊಡ್ಡ ಮನೆಯ ಪಕ್ಕದಲ್ಲಿ ಹಿಂದೆ ಡಾ॥ ಸುರೇಶ್ಚಂದ್ರರು ಆಸ್ಪತ್ರೆಗಾಗಿ ಉಪಯೋಗಿಸುತ್ತಿದ್ದ ಸಣ್ಣ ಕುಟೀರದಲ್ಲಿ ವಾಸಿಸುತ್ತಿದ್ದಳು. ಮಗ ರವಿಶಂಕರನನ್ನು ಶ್ರೀಪುರದ ಕಾಲೇಜಿನಲ್ಲಿ ಓದಿಸುತ್ತಿದ್ದಳು. ಕೃಷ್ಣಕಾಂತನೂ, ಚಂಚಲೆಯೂ ಪದ್ಮಾವತಿಯ ಮನೆಗೆ ಹೋದಾಗ, ಮಧ್ಯಾಹ್ನ ಹನ್ನೆರಡು ಘಂಟೆಯಾಗಿತ್ತು. ಪದ್ಮಾವತಿಯೂ, ಗೌರಿಯೂ ಒಳಗಡೆ ಊಟ ಮಾಡುತ್ತಾ ಇದ್ದರು. ಮುಂದುಗಡೆ ಬಾಗಿಲು ಹಾಕಿತ್ತು. ಕೃಷ್ಣಕಾಂತನು ಪದ್ಮಾವತಿಯ ಹೆಸರನ್ನು ಹಿಡಿದು ಕೂಗಿದ ನಂತರ ಪದ್ಮಾವತಿ ಕೃಷ್ಣಕಾಂತನ ಧ್ವನಿಯನ್ನು ಗುರುತಿಸಿ ಎಂಜಲು ಕೈಯಲ್ಲೇ ಬಂದು ಬಾಗಿಲನ್ನು ತೆರೆದು ಅತಿಥಿಗಳನ್ನು ಸ್ವಾಗತಿಸಿದಳು.

ಇಬ್ಬರನ್ನೂ ನಡುಮನೆಯಲ್ಲಿ ಸೋಫಾದ ಮೇಲೆ ಕುಳ್ಳಿರಿಸಿ ಚಂಚಲೆಯ ಕಡೆ ನೋಡುತ್ತಾ, 'ನಾ ಚಂಚಲಾನ ನೋಡ್ದೆ ಐದಾರು ವರ್ಷಗಳಾಗಿತ್ತು. ಚೆಂದಾಗಿ ಬೆಳೆದೀಯಮ್ಮ. ಕೃಷ್ಣಕಾಂತನೂ ನಮ್ಮನೀಗೆ ಬಹಳ ಅಪರೂಪವಾಗಿ ಹೋದರು. ನಾನೇ ನಿಮಗೆ ಹೇಳಿ ಕಳ್ಸಬೇಕು ಅಂತಿದ್ದೆ. ಕರದ್ಹಾಗೆ ಬಂದೀರಿ, ಕೂತ್ಕೊಳ್ಳಿ. ಐದ್ ನಿಮಿಷದಲ್ಲಿ ಊಟ ಮುಗಿಸಿ ಬರ್ತೀನಿ. ನಿಮಗೆ ಇನ್ನೂ ಊಟಾಗಿಲ್ಲ ಅಂತ ಕಾಣ್ತದೆ. ಅರ್ಧ ಗಂಟೇಲಿ ರೆಡಿ ಮಾಡ್ತೀನಿ. ಅಪರೂಪಕ್ಕೆ ಚಂಚಲಾನೂ ಬಂದಾಳೆ. ಕುತ್ಕೊಳ್ಳಿ ಬಂದೆ' ಎಂದು ಹೇಳಿದಳು.

'ನಾವು ಊಟಕ್ಕೆ ಮನೀಗೇ ಬರ್ತೀವಿ ಅಂತ ಹೇಳಿದ್ದೀವಿ. ನೀವು ಅಡಿಗೆ ಮಾಡೋ ಹೊತ್ತಿಗೆ ನಾವು ಮನಿಗೇ ಹೋಗ್ತೀವಿ. ಎಷ್ಟು ದೂರ ಹೋಗ್ಬೇಕು? ನಾವು ಅನಿಲಪುರಕ್ಕೆ ಹೋಗಿ ಅಲ್ಲಿಂದ ಬರುತ್ತಾ ಇದ್ದೀವಿ. ನಿಮ್ಮನ್ನು ನೋಡಿ ಹೋಗೋಣ ಅಂತ

ಕುರಿತು, "ಗೌರೀ ಯಾರನ್ನೂ ಈ ಕಾಲದಲ್ಲಿ ನಂಬಬಾರದು. ಬೆಳ್ಳಗಿದ್ದುದೆಲ್ಲ ಹಾಲೆಂದು ತಿಳಿಯುವ ಪ್ರಕೃತಿ ನಿನ್ನದು. ಮನೆಬಿಟ್ಟು ಹೊರಡಬಾರದು. ತುಂಬಾ ಎಚ್ಚರಿಕೆ" ಎಂದು ಹೇಳಿದಳು.

ಚಂಚಲೆ ಹೊರಡಲು ಅನುವಾದಾಗ ಗೌರಿಯ ಕಣ್ಣುಗಳಲ್ಲಿ ಹನಿ ತುಂಬಿತ್ತು. ಅದನ್ನು ನೋಡಿದ ಚಂಚಲೆಯ ಕಣ್ಣುಗಳಲ್ಲಿ ಹನಿತುಂಬಿ ಹರಿಯುತ್ತಿತ್ತು. ಕೃಷ್ಣಕಾಂತನು ಅವರಿಬ್ಬರಿಗೂ ಸಮಾದಾನ ಹೇಳಿ ಪದ್ಮಾವತಿಗೆ ಧೈರ್ಯದಿಂದಿರಬೇಕೆಂದು ಹೇಳಿ ಮಗಳೊಡನೆ ಮನೆಗೆ ಹೊರಟನು.

೫

ಅನಿಲಪುರಕ್ಕೆ ಹೋಗಿ ಬಂದಂದಿನಿಂದ ಚಂಚಲೆಯ ಮನಸ್ಸು ಸ್ಥಿಮಿತದಲ್ಲಿರಲಿಲ್ಲ. ಹುಚ್ಚು ಹಿಡಿದವಳಂತೆ ಆಗಿದ್ದಳು. ಯಾವುದರಲ್ಲೂ ಆಸಕ್ತಿ ಇಲ್ಲದೆ ಸದಾ ಏಕಾಂತದಲ್ಲಿರುತ್ತಿದ್ದಳು. ತಾನು ಯಾರನ್ನು ಪುರುಷಸಿಂಹನೆಂದು ಭಾವಿಸಿ, ಮನಃಪೂರ್ವಕವಾಗಿ ತನ್ನ ಪತಿಯೆಂದು, ಗಾಂಧರ್ವ ರೀತಿಯಲ್ಲಿ ವರಿಸಿದ್ದಳೋ, ಅವನ ಮೇಲೆ ಬಂದಿದ್ದ ಕೊಲೆ, ದರೋಡೆ, ಕನ್ಯಾಪಹರಣ ಮುಂತಾದ ಆಪಾದನೆಗಳನ್ನು ಕೇಳಿದ ಮೇಲೆ ಅವಳ ಮನಸ್ಸು ಸ್ಥಿರವಾಗಿರುವುದಾದರೂ ಹೇಗೆ? ಆ ಆಪಾದನೆಗಳು ಯಾಕೆ ಸುಳ್ಳಾಗಿರಬಾರದೆಂದು ಮನಸ್ಸಿನಲ್ಲೇ ತರ್ಕಿಸುತ್ತಿದ್ದಳು. ಚಂದ್ರಹಾಸನು ರಾಜಕೀಯ ಪೈಪೋಟಿಯ ದೆಶೆಯಿಂದ ಆ ಆಪಾದನೆಗಳನ್ನು ಯಾಕೆ ಸೃಷ್ಟಿಸಿರಬಾರದೆಂದು ಒಮ್ಮೊಮ್ಮೆ ಅವಳ ಮನಸ್ಸು ಹೇಳುತ್ತಿತ್ತು. ಆದರೆ ತನ್ನ ಸ್ನೇಹಿತಳಾದ ಗೌರಿ ಎಂದೂ ಸುಳ್ಳು ಹೇಳಲಾರಳೆಂದೂ ಅದೇ ಮನಸ್ಸು ಹೇಳುತ್ತಿತ್ತು. ಈ ರೀತಿಯ ಮನಸ್ಸಿನ ಹೊಯ್ದಾಟದಲ್ಲಿ ಬಹಳಕಾಲ ಅನಿಶ್ಚಿತ ಪರಿಸ್ಥಿತಿಯಲ್ಲಿರಲು ಅವಳಿಗೆ ಸಾಧ್ಯವಿರಲಿಲ್ಲ. ಹದಿನೈದು ದಿನಗಳೊಳಗಾಗಿ ಸಿರಗೂರು ಗೋಪಾಲನ ವಿಚಾರದಲ್ಲಿ ತನ್ನ ಅಂತಿಮ ತೀರ್ಮಾನವನ್ನು ತಿಳಿಸುವುದಾಗಿ ತಂದೆಗೆ ಮಾತು ಕೊಟ್ಟಿದ್ದಳು. ಆದ್ದರಿಂದ ಅವಧಿ ಮುಗಿಯುವುದರೊಳಗಾಗಿ ಅವಳು ಯಾವುದಾದರೂ ತೀರ್ಮಾನಕ್ಕೆ ಬರುವುದು ಅವಶ್ಯಕವಿತ್ತು.

ಆದರೆ ತೀರ್ಮಾನಕ್ಕೆ ಬರುವುದು ಅಷ್ಟೊಂದು ಸುಲಭವಾದ ಪ್ರಶ್ನೆಯಾಗಿರಲಿಲ್ಲ. ಶಂಕರನನ್ನು ತನ್ನ ಮನೋಪ್ರಪಂಚದಿಂದ ಹೊರದೂಡುವ ವಿಷಯ ಸುಲಭವಾಗಿರಲಿಲ್ಲ. ಅವನೇ ತನ್ನ ಪತಿಯೆಂದು ಮನಸಾರೆ ಒಪ್ಪಿದ್ದಳು. ಅವನಲ್ಲಿ ಸಾಹಸ ಪ್ರವೃತ್ತಿ ಇತ್ತು; ರಸಿಕತೆ ಇತ್ತು; ವಶೀಕರಣ ಶಕ್ತಿ ಇತ್ತು. ಅವನಿಂದ ತಾನು ಪಡೆದಿದ್ದ ಸುಖವನ್ನು ಇತರ ಪುರುಷರಿಂದ ಪಡೆಯಲು ಸಾಧ್ಯವಿಲ್ಲವೆಂದು ಅವಳ ಅಭಿಪ್ರಾಯವಾಗಿತ್ತು. ಸಿರಗೂರು ಗೋಪಾಲನ ವಿಚಾರವನ್ನು ಅಂತೆ-ಕಂತೆ ಮಾತುಗಳಿಂದ ಅಲ್ಪಸ್ವಲ್ಪ ತಿಳಿದುಕೊಂಡಿದ್ದಳು. ಅವನು ಆಗರ್ಭ ಶ್ರೀಮಂತನಾಗಿದ್ದರೂ ಆಗಲೇ ಸುಮಾರು ಮೂವತ್ತೇಳು ವರ್ಷಗಳ ವಯಸ್ಸಾಗಿದೆಯೆಂದು ವದಂತಿ ಇತ್ತು. ಅವನು ಸಂಕೋಚ ಸ್ವಭಾವದವನೆಂದೂ, ಮಿತಭಾಷಿಯೆಂದೂ ಕೇಳಿದ್ದಳು. ಒಮ್ಮೆ ಪತ್ರಿಕೆಯಲ್ಲಿ ಬಂದಿದ್ದ ಅವನ ಭಾವಚಿತ್ರವನ್ನು

ನೋಡಿದ್ದಳು. ಅವಳಿಗೆ ನೆನಪಿದ್ದಂತೆ ಅಂದು ನೋಡಿದ್ದ ಅವನ ಚಿತ್ರ, ಅವನೊಬ್ಬ ನೀರಸ ವ್ಯಕ್ತಿಯೆಂದು ಸೂಚಿಸುತ್ತಿತ್ತು. ಜನರು ಹೇಳುವಂತೆ ಗೋಪಾಲನು ಶ್ರೀಮಂತನಾಗಿ ಸದ್ಗುಣವಂತನಾಗಿದ್ದರೂ, ಅವನು ತನಗೆ ಅನುರೂಪನಾದ ಪತಿಯಾಗುವುದಿಲ್ಲವೆಂಬ ಕಲ್ಪನೆ ಯಾವ ಕಾರಣದಿಂದಲೋ ಅವಳ ಮನಸ್ಸಿನಲ್ಲಿ ಮೂಡಿತ್ತು. ಅಲ್ಲದೆ ಶಂಕರನನ್ನು ಮದುವೆಯಾಗಲು ಒಪ್ಪಿ, ಅವನೊಡನೆ ಹಲವು ಸಾರಿ ಸಂಭೋಗ ನಡೆಸಿದ್ದ ನಂತರ, ಅವನು ಕೆಟ್ಟವನೆಂಬ ಕಾರಣದಿಂದ ಅವನನ್ನು ತ್ಯಜಿಸುವುದು ಸರಿಯಲ್ಲವೆಂಬುದು ಅವಳ ಅಭಿಪ್ರಾಯವಾಗಿತ್ತು. ಕೂಡಿದವನನ್ನು ಅಷ್ಟೊಂದು ಸುಲಭವಾಗಿ ಬಿಡುವುದು ಧರ್ಮವಲ್ಲವೆಂದು ಅವಳು ಭಾವಿಸಿದ್ದಳು. ಶಂಕರನ ಮೇಲೆ ಬಂದ ಆಪಾದನೆಗಳು ಒಂದು ವೇಳೆ ನಿಜವಾಗಿದ್ದರೂ ಸಹ ಅವನನ್ನು ಮದುವೆಯಾಗುವುದು ತನ್ನ ಧರ್ಮವೆಂದು ನಿರ್ಧರಿಸಿದಳು.

ತಂದೆ ಕೃಷ್ಣಕಾಂತನು, ಶಂಕರನೊಡನೆ ತಾನು ಮದುವೆಯಾಗುವುದನ್ನು, ಖಂಡಿತವಾಗಿ ಒಪ್ಪುವುದಿಲ್ಲವೆಂದು ಅವಳಿಗೆ ಗೊತ್ತಿತ್ತು. ಅವನು ಒಪ್ಪದಿದ್ದರೂ ತಾನು ಶಂಕರನನ್ನು ವರಿಸುವುದು ಖಂಡಿತವೆಂದು ತೀರ್ಮಾನ ಮಾಡಿಕೊಂಡಳು. ತಂದೆ ಹೇಳಿದ್ದ ಹದಿನೈದು ದಿನಗಳ ಅವಧಿಯಲ್ಲಿ ಐದಾರು ದಿನಗಳು ಆಗಲೇ ಕಳೆದುಹೋಗಿದ್ದವು! ಇನ್ನು ಹೆಚ್ಚು ಕಡಿಮೆ ಒಂದುವಾರದೊಳಗಾಗಿ ತಂದೆಗೆ ನಿರ್ದಿಷ್ಟವಾದ ಜವಾಬನ್ನು ಹೇಳಬೇಕಾಗಿತ್ತು. ಅಷ್ಟರೊಳಗೆ ಶಂಕರನೊಡನೆ ಮಾತುಕತೆ ನಡೆಯಿಸಿ, ಮದುವೆಯ ದಿನವನ್ನು ಗೊತ್ತು ಮಾಡಿಕೊಂಡು, ಶಾಸ್ತ್ರೋಕ್ತವಾಗಿ ಅಥವಾ ರಿಜಿಸ್ಟರ್ ಮದುವೆಯನ್ನು ಮಾಡಿಕೊಳ್ಳಬೇಕೆಂದು ನಿರ್ಧರಿಸಿ, ಮುಂದಿನ ಶನಿವಾರ ಏಳುಗಂಟೆಗೆ ಕೋಟೆಗೆ ಖಂಡಿತವಾಗಿ ಬರಬೇಕೆಂದು ಶಂಕರನಿಗೆ ಒಂದು ಪತ್ರವನ್ನು ಬರೆದಳು. ಆ ಪತ್ರ ಅವನಿಗೆ ತಲುಪಿ ಮುಂದಿನ ಶನಿವಾರ ಅವಳ ಪತ್ರದಂತೆ ಏಳುಗಂಟೆಗೆ ಸರಿಯಾಗಿ, ಯಾವಾಗಲೂ ಸಂಧಿಸುತ್ತಿದ್ದ ಸ್ಥಳದಲ್ಲಿ ಕಾದಿರುವುದಾಗಿ ಅವನು ಉತ್ತರವನ್ನು ಬರೆದಿದ್ದನು.

ಚಂಚಲೆಯು ಶನಿವಾರ ಏಳುಗಂಟೆಗೆ ಸರಿಯಾಗಿ ಕೋಟೆಗೆ ಹೋದಳು. ಶಂಕರನು ಅವಳಿಗಾಗಿ ಅಲ್ಲಿ ಕಾಯುತ್ತಿದ್ದನು. ಅವಳನ್ನು ಕಂಡಕೂಡಲೆ ಕಾರಿನಿಂದಿಳಿದು, "ಕ್ಷಮಿಸಬೇಕು ರಾಣೀ ಸಾಹೇಬರು, ಕಳೆದವಾರ ನನ್ನ ಹತ್ತಿರದ ಬಂಧುಗಳೊಬ್ಬರು ತೀರಿಹೋದ್ದರಿಂದ ಬರಲಾಗಲಿಲ್ಲ. ಆದಿನ ಬರಲಾಗದ ತಪ್ಪಿಗಾಗಿ ತೆಗೆದುಕೊಳ್ಳಿ ಈ ದಂಡವನ್ನು" ಎಂದು ಅವಳ ಕೈ ಬೆರಳಿಗೆ ಒಂದು ವಜ್ರದ ಉಂಗುರವನ್ನು ತೊಡಿಸಿ, "ನಿಮ್ಮನ್ನು ಒಂದು ವಾರ ನೋಡಿದ್ದರೆ ಒಂದುವರ್ಷ ಅಗಲಿದಂತೆ ಆಗುತ್ತದೆ" ಎಂದು ಹೇಳಿ ಅವಳನ್ನು ಆಲಂಗಿಸಿ ಮುತ್ತಿಟ್ಟನು. ಅವನಿಂದ ಪಡೆದ ಉಡುಗೊರೆಯಿಂದಲೂ, ಅವನ ಪ್ರೇಮದ ಮಾತುಗಳಿಂದಲೂ, ಆಲಿಂಗನ ಚುಂಬನಗಳಿಂದಲೂ, ಹರ್ಷಿತಳಾದ ಚಂಚಲೆಗೆ ಅವನ ಮೇಲೆ ಬಂದಿದ್ದ ಆರೋಪವೂ ಮರೆತುಹೋಗಿತ್ತು; ತಾನು ಅಲ್ಲಿಗೆ ಹೋಗಿದ್ದ ಉದ್ದೇಶವೂ ಮರೆತುಹೋಗಿತ್ತು.

ಇಬ್ಬರೂ ಎಂದಿನಂತೆ ಸರೋವರದ ಕಡೆಗೆ ಹೋದರು. ಅಲ್ಲಿ ತಮ್ಮ ಬಟ್ಟೆಬರೆಗಳನ್ನು ಕಳಚಿಹಾಕಿ ಬೆತ್ತಲೆಯಾಗಿ ರಮಿಸಿದರು. ಅನಂತರ ಸರೋವರಕ್ಕೆ ಧುಮುಕಿದರು. ಒಬ್ಬರ ಮೇಲೊಬ್ಬರು ನೀರೆರಚಿದರು. ಒಬ್ಬರನ್ನೊಬ್ಬರು ಅಟ್ಟಿಸಿಕೊಂಡು ಹೋದರು. ನೀರಿನಲ್ಲಿಯೂ ಒಬ್ಬರನ್ನೊಬ್ಬರು ಆಲಂಗಿಸಿ, ಜಲಕ್ರೀಡೆ ಆಡಿದರು. ಆ ಸಮಯದಲ್ಲಿ ಶಂಕರನು ಕೆಟ್ಟವನೆಂಬ ಭಾವನೆ ಅವಳಲ್ಲಿ ಸಂಪೂರ್ಣ ಅಳಿಸಿಹೋಗಿತ್ತು. ಅವನ ಮಾತು ಕೃತಿಗಳಲ್ಲಿ ಕ್ರೌರ್ಯವಾಗಲೀ ನೀಚತನವಾಗಲೀ ಸ್ವಲ್ಪವೂ ಕಾಣಿಸುತ್ತಿರಲಿಲ್ಲ. ಸರಸಿಯಾಗಿ, ನಯ ವಿನಯಗಳ ಪ್ರತಿರೂಪದಂತಿದ್ದ ಅವನನ್ನು ದುಷ್ಟನೆಂದು ಜನರು ಹೇಳುವುದನ್ನು ನಂಬುವುದು ಅವಳಿಗೆ ಅಸಾಧ್ಯವಾಗಿತ್ತು. ಅವನೊಡನೆ ನರಕಕ್ಕೆ ಹೋಗಲು, ಅವನಿಗಾಗಿ ಸರ್ವತ್ಯಾಗ ಮಾಡಲು ಅಂದು ಅವಳು ಸಿದ್ಧಳಾಗಿದ್ದಳು. ಎಲ್ಲವೂ ಮುಗಿದು ಸರೋವರದಿಂದ ಕಾರಿದ್ದಲ್ಲಿಗೆ ಬರುತ್ತಿರುವಾಗ ಅವಳಿಗೆ ಆ ದಿನ ತಾನು ಬಂದಿದ್ದ ಉದ್ದೇಶದ ನೆನಪಾಯಿತು. ಅವನನ್ನು ಕುರಿತು, "ಈ ದಿನ ಆಖೈರು ತೀರ್ಮಾನವಾಗಲೇಬೇಕು", ಎಂದು ಹೇಳಿದಳು.

"ಏನು ತೀರ್ಮಾನ?"

"ನನ್ನ ಮತ್ತು ನಿಮ್ಮ ವಿವಾಹದ ತೀರ್ಮಾನ. ಇಂದಿನಿಂದ ಒಂದು ವಾರದೊಳಗಾಗಿ ಶಾಸ್ತ್ರೋಕ್ತವಾಗಿ ಅಥವಾ ರಿಜಿಸ್ಟರ್ ರೀತಿಯ ಮದುವೆಯಾಗಲೇ ಬೇಕು."

"ನಮಗಿಬ್ಬರಿಗೂ ವಿವಾಹವಾಗಿ ಆರು ತಿಂಗಳ ಮೇಲಾಗಿಲ್ಲವೇ?"

"ಆರು ತಿಂಗಳ ಹಿಂದೆ ಆಗಿದ್ದು ಗಾಂಧರ್ವ ವಿವಾಹ. ಈಗ ಆಗಬೇಕಾಗಿರುವುದು ಕಾನೂನು ರೀತಿಯ ಸಮಾಜ ಒಪ್ಪುವ ವಿವಾಹ. ನಾವಿಬ್ಬರೂ ಮೊಟ್ಟಮೊದಲು ಇಲ್ಲಿ ಸೇರಿದ್ದಾಗ, ಆರು ತಿಂಗಳ ನಂತರ ಮದುವೆ ಆಗೋಣ ಎಂದು ನೀವು ಹೇಳಿದ್ದು ನೆನಪಿದೆಯೆ?"

"ಅದ್ಯಾಕೆ ಇಷ್ಟೊಂದು ಆತುರ. ನಾವಿಬ್ಬರೂ ಸತಿಪತಿಗಳಂತೆಯೇ ಇದ್ದೇವೆ ಅಲ್ಲವೇ?"

"ಅದು ನಿಜ, ಆದರೆ ಸಮಾಜದ ದೃಷ್ಟಿಯಲ್ಲಿ ನಾವು ಮಾಡುತ್ತಿರುವುದು ಹಾದರ."

"ನಮ್ಮಿಬ್ಬರ ಆತ್ಮ ಒಪ್ಪಿದರೆ ಸರಿ. ಸಮಾಜವನ್ನು ಕಟ್ಟಿಕೊಂಡು ನಮಗೇನು ಆಗಬೇಕು? ಕೆಲವು ಮುಂದುವರಿದ ಐರೋಪ್ಯ ದೇಶಗಳಲ್ಲಿ ಶೇಕಡ ಐವತ್ತರಷ್ಟು ಗಂಡು ಹೆಣ್ಣುಗಳು ವಿವಾಹದ ಬಂಧನವಿಲ್ಲದೆ ಸ್ವೇಚ್ಛಾವಿಹಾರಿಗಳಾಗಿ ಇರುವುದನ್ನು ನೀವು ಕೇಳಿಲ್ಲವೇನು? ನಾವೂ ಹಾಗೆಯೇ ಇದ್ದರಾಯಿತು."

"ಇಂತಹ ವಿಚಾರದಲ್ಲಿ ಸಮಾಜದಲ್ಲಿ ಬಹು ಜನರು ಒಪ್ಪಿರುವುದೇ ನೀತಿ. ಬಹು ಜನರು ಒಪ್ಪದಿರುವುದೇ ಅನೀತಿ. ನಮ್ಮ ಸಮಾಜದಲ್ಲಿ ಸ್ವೇಚ್ಛಾವಿಹಾರ ಕಾನೂನು ಬದ್ಧವಾಗಿದ್ದಿದ್ದರೆ ನಾನೂ, ನೀವೂ ಹೀಗೆಯೇ ಇರಬಹುದಾಗಿತ್ತು."

"ನಮ್ಮ ಸಮಾಜದಲ್ಲಿ ಒಂದೊಂದು ವರ್ಗದವರಿಗೆ, ಒಂದೊಂದು ರೀತಿ. ಸಮಾಜದಲ್ಲಿ ಗಣ್ಯರೆನಿಸಿಕೊಂಡಿರುವ ನಟ–ನಟಿಯರೂ, ಸಚಿವ–ಸಚಿವೆಯರೂ, ಶಾಸಕ–

ಶಾಸಕಿಯರೂ, ಲೇಖಕ-ಲೇಖಕಿಯರೂ, ಆಗರ್ಭ ಶ್ರೀಮಂತರೂ, ಉನ್ನತ ಅಧಿಕಾರಿಗಳೂ ಅಕ್ರಮ ಪ್ರಣಯದಲ್ಲಿ ತೊಡಗಿದರೆ ಅದು ಅವರ ಖಾಸಗಿ ವ್ಯವಹಾರವೆನಿಸುತ್ತದೆ. ಅದೇ ಕೆಲಸವನ್ನು ಸಾಮಾನ್ಯ ಜನ ಮಾಡಿದರೆ ಅದು ಹಾದರವೆನಿಸುತ್ತದೆ."

"ಸ್ವೇಚ್ಛಾ ಸಂಭೋಗ ಭಗವಂತನ ನಿಯಮಕ್ಕೆ ವಿರುದ್ಧ"

"ನಿಮ್ಮ ಭಗವಂತನನ್ನು ನಾನು ನಂಬುವುದಿಲ್ಲ. ಪುರಾಣ ಮಹಾಕಾವ್ಯಗಳಲ್ಲಿ ದೇವಾಧಿದೇವತೆಗಳು, ಮಹಾಪುರುಷರೆನಿಸಿಕೊಂಡವರು ಹಾದರ ಮಾಡಿದ್ದರೆನ್ನುವ ಬಗ್ಗೆ ಉದಾಹರಣೆಗಳಿಲ್ಲವೇನು? ಹಸಿವು ತೃಷೆಗಳಾದಾಗ ಮನಸ್ಸೊಪ್ಪಿದ ಸ್ಥಳಗಳಲ್ಲಿ ಅವುಗಳನ್ನು ನಿವಾರಿಸಿಕೊಳ್ಳುತ್ತೇವೆ. ಹಾಗೆಯೇ, ಕಾಮದ ವಿಚಾರ. ಮನಸ್ಸೊಪ್ಪಿದವರನ್ನು ಕೂಡಲು ಭಗವಂತನ ಹೆಸರಿನಲ್ಲಿ ವಿವಾಹದ ಮುದ್ರೆ ಏಕೆ ಬೇಕು?"

"ಭಗವಂತನನ್ನು ನಂಬದಿದ್ದರೆ ಬಿಡಿ ; ಸೃಷ್ಟಿ ನಿಯಮವನ್ನು ನೋಡಿ. ಜಗತ್ತಿನಲ್ಲಿ ಹೆಣ್ಣು ಗಂಡುಗಳ ಸಂಖ್ಯೆ ಸರಿಸಮಾನವಾಗಿದೆ. 'ಒಬ್ಬ ಗಂಡಿಗೆ ಒಂದು ಹೆಣ್ಣು' ಎಂಬುದು ಸೃಷ್ಟಿಕರ್ತನ ನಿಯಮವಾಗಿರಬೇಕು. ಹೆಣ್ಣು ಗಂಡುಗಳೆರಡೂ ಒಲಿದು ನಲಿದು ಸುಖ ಸಂತೋಷಗಳಿಂದ ಜೀವಿಸಬೇಕೆಂಬುದು ಸೃಷ್ಟಿಕರ್ತನ ಉದ್ದೇಶವಾಗಿರ ಬೇಕು. ನಿಮ್ಮ ಸಿದ್ಧಾಂತವನ್ನು ಒಪ್ಪುವುದಾದರೆ 'ವಿವಾಹ', 'ತಂದೆ' ಈ ಶಬ್ದಗಳನ್ನು ಡಿಕ್ಷನರಿಯಿಂದ ತೆಗೆದು ಹಾಕಬೇಕಾಗುತ್ತದೆ. ಎಲ್ಲರೂ ಸ್ವೇಚ್ಛಾಪ್ರೇಮದಲ್ಲಿ ಪ್ರವರ್ತರಾದರೆ ಹುಟ್ಟುವ ಮಕ್ಕಳ ಗತಿಯೇನು? ಅವು ಯಾರನ್ನು 'ತಂದೆ' ಎನ್ನಬೇಕು?"

"ಅವು ರಾಷ್ಟ್ರದ ಮಕ್ಕಳಾಗುತ್ತವೆ. ಅವರನ್ನು ಸಾಕುವ ಹೊಣೆ ರಾಷ್ಟ್ರಕ್ಕೆ ಸೇರಿದ್ದು. ಅದಿರಲಿ ನೀವು ನನ್ನನ್ನು ಮದುವೆಯಾಗಲು ನಿಮ್ಮ ತಂದೆ ಒಪ್ಪಿಗೆ ಕೊಟ್ಟಿದ್ದಾರೆಯೇ?"

"ನಮ್ಮ ತಂದೆಯನ್ನು ನಾನು ಇದುವರೆಗೂ ಕೇಳಿಲ್ಲ. ಒಂದು ವೇಳೆ ಅವರು ಒಪ್ಪದಿದ್ದರೂ ನಾನು ನಿಮ್ಮನ್ನು ಮದುವೆಯಾಗಲು ಸಿದ್ಧಳಾಗಿದ್ದೇನೆ."

"ನೀವು ನನ್ನ ಮೇಲಿಟ್ಟಿರುವ ಅನುರಾಗಕ್ಕಾಗಿ ತುಂಬಾ ವಂದನೆಗಳು."

"ನಿಮಗೆ ನನ್ನ ಮೇಲೆ ಅನುರಾಗವಿಲ್ಲವೇನು?"

"ನಾನು ನಿಮ್ಮನ್ನು ಹೃತ್ಪೂರ್ವಕವಾಗಿ ಪ್ರೀತಿಸುತ್ತೇನೆ."

"ಹಾಗಾದರೆ ನಮ್ಮಿಬ್ಬರ ಮದುವೆಗೆ ಅಡ್ಡಿಯೇನು?"

"ಸ್ಪಷ್ಟವಾಗಿ ನಿಮಗೆ ಹೇಳುವುದಾದರೆ ಕ್ರಾಂತಿಯಾದ ಮೇಲೆ ನಮ್ಮಿಬ್ಬರ ವಿವಾಹ."

"ನಾನೇನೂ ನಿಮ್ಮ ಕ್ರಾಂತಿಗೆ ಅಡ್ಡಿ ಬರುವುದಿಲ್ಲವಲ್ಲಾ."

"ವಿವಾಹದ ಬಂಧನಕ್ಕೆ ಸಿಕ್ಕ ಮೇಲೆ ನಾನಾ ವಿಧವಾದ ತೊಡಕುಂಟಾಗುತ್ತದೆ."

"ಕ್ರಾಂತಿ ಯಾವಾಗ ಆಗುತ್ತದೆ? ಅದನ್ನಾದರೂ ಹೇಳುವಿರಾ?"

"ಒಂದೆರಡು ವರ್ಷಗಳೊಳಗಾಗಿ ನಡೆಯುತ್ತದೆ. ಅದಕ್ಕಾಗಿ ಸಂಘಟನೆ ನಡೆಯುತ್ತಾ ಇದೆ. ನಮ್ಮ ಅಧ್ಯಕ್ಷರ ಸಹಾಯಕ್ಕಾಗಿ ಕಾದಿದ್ದೇವೆ."

"ನಿಮ್ಮ ಪಾರ್ಟಿಗೆ ನೀವೇ ಅಧ್ಯಕ್ಷರಲ್ಲವೇ?"

"ನಮ್ಮ ಪಾರ್ಟಿಗೆ ಇಲ್ಲಿ ನಾನೇ ಅಧ್ಯಕ್ಷ. ಆದರೆ ನಾವೆಲ್ಲರೂ ಚೀನಾದೇಶದ ಅಧ್ಯಕ್ಷ ಮಾವೋರವರನ್ನು ನಮ್ಮ ಅಧ್ಯಕ್ಷರೆಂದು ಒಪ್ಪಿದ್ದೇವೆ."

"ಏನು! ಮಾವೋ ನಿಮ್ಮ ಅಧ್ಯಕ್ಷರು! ಅದ್ಹೇಗೆ ಅವರು ನಿಮ್ಮ ಅಧ್ಯಕ್ಷರಾದರು?"

"ನಾವು ಅವರ ಪಾರ್ಟಿಗೆ ಸೇರಿದವರು"

"ನಿಮಗೆ ನಾಚಿಕೆಯಾಗುವುದಿಲ್ಲವೇ?"

"ಯಾಕೆ ನಾಚಿಕೆಯಾಗಬೇಕು?"

"ಮಾವೋ ಶಿಷ್ಯರು ನಮ್ಮ ದೇಶದ ಮೇಲೆ ದಂಡೆತ್ತಿ ಬಂದು ನಮ್ಮ ದೇಶಕ್ಕೆ ಸೇರಿದ ಸಾವಿರಾರು ಚದರಮೈಲಿ ಪ್ರದೇಶವನ್ನು ಆಕ್ರಮಿಸಿಕೊಂಡಿರುವುದು ನಿಮಗೆ ಗೊತ್ತಿಲ್ಲವೇನು?"

"ಕಮ್ಯೂನಿಸ್ಟರು ಯಾವಾಗಲೂ ಆಕ್ರಮಣ ಮಾಡುವುದಿಲ್ಲ. ಅವರು ಅಂತರ ರಾಷ್ಟ್ರೀಯವಾದಿಗಳು. ಚೀನಾದವರು ಮಾಡಿದ್ದು ಆಕ್ರಮಣವಲ್ಲ; ಅದು ವಿಮೋಚನಾ ಕಾರ್ಯ. ನೀವು ಹೆಂಗಸರು ನಿಮಗೆ ಕಮ್ಯೂನಿಸ್ಟ್ ಸಿದ್ಧಾಂತ ಅರ್ಥವಾಗುವುದಿಲ್ಲ."

"ಹೌದು, ನಾನು ಹೆಂಗಸು, ಆದರೆ ನಾನು ರಾಷ್ಟ್ರದ್ರೋಹಿಯಲ್ಲ"

"ಹಾಗಾದರೆ ನಾವೆಲ್ಲರೂ ರಾಷ್ಟ್ರದ್ರೋಹಿಗಳೇನು?"

"ಅದನ್ನು ನೀವೇ ಯೋಚಿಸಬೇಕು. ರಷ್ಯಾದವರಿಗೆ ರಾಷ್ಟ್ರಭಕ್ತಿಯಿದೆ. ಚೀನಾ ದವರಿಗೆ ರಾಷ್ಟ್ರಭಕ್ತಿ ಇದೆ. ನಿಮಗೆ ಮಾತ್ರ ರಾಷ್ಟ್ರ ಬೇಡ. ರಷ್ಯಾದ ಜನರು ಚೀನಾ ಅಧ್ಯಕ್ಷರನ್ನು ತಮ್ಮ ಅಧ್ಯಕ್ಷರೆಂದು ಕರೆಯುವುದಿಲ್ಲ. ಚೀನಾದ ಜನರು ರಷ್ಯಾದ ಅಧ್ಯಕ್ಷರನ್ನು ತಮ್ಮ ಅಧ್ಯಕ್ಷರೆಂದು ಕರೆಯುವುದಿಲ್ಲ. ಫ್ರಾನ್ಸ್ ದೇಶದ ಜನರು ಇಂಗ್ಲೆಂಡಿನ ರಾಣಿಯನ್ನು ತಮ್ಮ ರಾಣಿಯೆಂದು ಕರೆಯುವುದಿಲ್ಲ. ಇಂಗ್ಲೆಂಡಿನ ಜನರು ಫ್ರಾನ್ಸಿನ ಅಧ್ಯಕ್ಷರನ್ನು ತಮ್ಮ ಅಧ್ಯಕ್ಷರೆಂದು ಕರೆಯುವುದಿಲ್ಲ. ಈ ದೇಶದಲ್ಲಿ ಮಾತ್ರ ಜಯಚಂದ್ರನ ಪರಂಪರೆಯವರು ತಮ್ಮ ಸ್ವಾರ್ಥಕ್ಕಾಗಿ ಪರರಾಷ್ಟ್ರಗಳ ಗುಲಾಮರಾಗಲು ಸಿದ್ಧರಾಗಿದ್ದಾರೆ"

"ಜಯಚಂದ್ರ ಅಂದರೆ ಯಾರು?"

"ನೀವು ಹಿಂದೂಸ್ಥಾನದ ಇತಿಹಾಸವನ್ನು ಓದಿಲ್ಲವೇನು? ರಾಷ್ಟ್ರದ್ರೋಹಿ ಜಯಚಂದ್ರನು ತನ್ನ ಸ್ವಾರ್ಥಕ್ಕೋಸ್ಕರ ಪೃಥ್ವೀರಾಜನನ್ನು ಕೊಲ್ಲಿಸಿದ ವಿಚಾರ ನಿಮಗೆ ಗೊತ್ತಿಲ್ಲವೇನು? ಮಾವೋ ಅವರು ಅಪ್ರತಿಮ ದೇಶಭಕ್ತರೆಂದೂ, ನಿಸ್ಪೃಹರೆಂದೂ ಕೇಳಿದ್ದೇನೆ. ನೀವೇಕೆ ಅವರ ಹೆಸರನ್ನು ದುರುಪಯೋಗಿಸಿಕೊಂಡು ಈ ದೇಶದಲ್ಲಿ ಮಾಡಬಾರದ ಕೆಲಸವನ್ನು ಮಾಡುತ್ತಿದ್ದೀರಿ? ಮಾವೋ ದೇಶದಲ್ಲಿ ಲೈಂಗಿಕ ವಿಚಾರದಲ್ಲಿ ಕಟ್ಟುನಿಟ್ಟಿನ ಕಟ್ಟುಪಾಡುಗಳಿವೆಯೆಂಬುದನ್ನು ಕೇಳಿದ್ದೇನೆ"

"ನಾವೇನು ಮಾಡಬಾರದ್ದನ್ನು ಮಾಡುತ್ತಿದ್ದೇವೆ ಅದನ್ನಾದರೂ ಹೇಳಿ"

"ಜನ ನಿಮ್ಮ ಮೇಲೆ ಏನೇನೋ ಹೇಳ್ತಾರೆ."

"ಏನು ಹೇಳುತ್ತಿದ್ದಾರೆ? ಅದನ್ನಾದರೂ ಕೇಳೋಣ."

"ನೀವು ಸುರೇಶ್ಚಂದ್ರರ ಮಗಳು ಗೌರಿಯನ್ನು ಅಪಹರಿಸಲು ಪ್ರಯತ್ನಪಟ್ಟರೆಂದು ಹೇಳುತ್ತಾರೆ. ಆ ಸಂಬಂಧ ಚಂದ್ರಹಾಸನು ನಿಮ್ಮ ಮೇಲೆ ಪೋಲೀಸರಿಗೆ ಫಿರ್ಯಾದು ಕೊಟ್ಟಿದ್ದರಿಂದ ನೀವು ಚಂದ್ರಹಾಸನ ಮನೆಗೆ ಬಾಂಬ್ ಹಾಕಿಸಿ ಅವನ ತಾಯಿಯನ್ನು ಕೊಲ್ಲಿಸಿದಿರೆಂದು ಹೇಳುತ್ತಾರೆ. ಕೆಲವು ಕಡೆಗಳಲ್ಲಿ ಲೂಟಿ ಮಾಡಿಸಿದ್ದೀರೆಂದೂ, ಕೊಲೆ ಮಾಡಿಸಿದ್ದೀರೆಂದೂ ಹೇಳುತ್ತಾರೆ."

ಅದನ್ನು ಕೇಳಿದ ಕೂಡಲೇ ಶಂಕರನು ಬೆಚ್ಚಿಬಿದ್ದು, ಗಡಸು ಧ್ವನಿಯಲ್ಲಿ, "ನಿಮಗ್ಯಾರು ಇದನ್ನೆಲ್ಲಾ ಹೇಳಿದರು" ಎಂದು ಪ್ರಶ್ನಿಸಿದನು.

"ಊರೆಲ್ಲಾ ಹೇಳುತ್ತಾರೆ"

"ಈ ದಿನ ನೀವು ಮಾತನಾಡುತ್ತಿರುವ ರೀತಿಯನ್ನು ನೋಡಿದರೆ ನೀವು ಬಂಡವಾಳ ಶಾಹಿಗಳ ಗೂಢಚಾರಿಣಿಯಾಗಿರಬೇಕೆಂದು ತೋರುತ್ತದೆ. ಇವೆಲ್ಲಾ ಬಂಡವಾಳಗಾರರು ನನ್ನ ಮೇಲೆ ಕಟ್ಟಿದ ಕಟ್ಟುಕತೆಗಳು. ರಾಜ್ಯದಲ್ಲಿ ಬೇರೆ ಬೇರೆ ಕ್ರಾಂತಿಕಾರಕ ತಂಡಗಳಿವೆ. ಅವರ್‍ಯಾರಾದರು ಆ ಕೃತ್ಯಗಳನ್ನು ಮಾಡಿಸಿರಬಹುದು. ನನ್ನ ಮೇಲೆ ಸುಮ್ಮನೇ ಅಪರಾಧವನ್ನು ಹೊರಿಸುತ್ತಾರೆ."

"ನಾನು ಗೂಢಚಾರಳಲ್ಲ; ನನ್ನನ್ನು ಅಷ್ಟು ನೀಚಳೆಂದು ನೀವು ಭಾವಿಸಬಾರದು. ನಿಮ್ಮಲ್ಲಿ ಅನುರಾಗವುಳ್ಳವಳಾಗಿ, ನಿಮ್ಮನ್ನು ಮದುವೆಯಾಗ ಬೇಕೆಂದು ಅಪೇಕ್ಷೆ ಉಳ್ಳವಳು. ನಿಮ್ಮ ಮೇಲೆ ಬಂದಿರುವ ಎಲ್ಲಾ ಆಪಾದನೆಗಳೂ ನಿಜವಾಗಿದ್ದರೂ ಸಹ ನಿಮ್ಮ ಬಾಳಿನ ಸಂಗಾತಿಯಾಗಿ ಬಾಳಲು ಸಿದ್ಧಳಿದ್ದೇನೆ. ನಿಮ್ಮ ಜೊತೆ ನರಕಕ್ಕೆ ಹೋಗಲು ಸದಾಸಿದ್ಧ. ನೀವು ಅಖೈರಾಗಿ ಏನು ಹೇಳುತ್ತೀರಿ? ಹೇಳಿ."

"ಆಗಲೇ ನನ್ನ ಅಂತಿಮ ತೀರ್ಮಾನವನ್ನು ಹೇಳಿದ್ದೇನೆ. ನೀವು ಸ್ವತಂತ್ರವಾಗಿರಬೇಕಾದರೆ ನಿಮಗೆ ಒಂದು ಮನೆಯನ್ನು ಕೊಡಿಸುತ್ತೇನೆ."

"ನಾನು ನಿಮ್ಮ ಸೂಳೆಯಂತೆ ಬಾಳಲು ತಯಾರಾಗಿಲ್ಲ"

"ನನ್ನ ಸೂಳೆಯಂತೆ ಬಾಳಬೇಕಾಗಿಲ್ಲ. ಭಾವೀ ಪತ್ನಿಯಂತೆ ಬಾಳಿ".

"ಮುಂದೆ ಆದರೂ ನೀವು ನನ್ನನ್ನು ಮದುವೆಯಾಗುತ್ತೀರೆಂದು ಭರವಸೆ ಏನು? ನನಗಿಂತ ಹೆಚ್ಚು ಸುಂದರಿಯಾದವಳು ಸಿಕ್ಕರೆ ಆಗ ನಾನು ಬೀದಿಯ ನಾಯಿ"

"ನನ್ನ ಮೇಲೆ ನಿಮಗೆ ಭರವಸೆ ಇಲ್ಲದಿದ್ದರೆ ನಿಮಗೆ ಇಷ್ಟ ಬಂದಂತೆ ಮಾಡಬಹುದು. ನಾನು ಕ್ರಾಂತಿಯಾಗುವವರೆಗೆ ಮದುವೆಯಾಗುವವನಲ್ಲ. ನನ್ನ ದೃಷ್ಟಿಯಿಂದ ವಿವಾಹಕ್ಕಿಂತ ಜರೂರು ಪ್ರಶ್ನೆ ಕ್ರಾಂತಿ.

"ನನ್ನ ದೃಷ್ಟಿಯಿಂದ ಕ್ರಾಂತಿಗಿಂತ ಜರೂರು ಪ್ರಶ್ನೆ ನನ್ನ ಆತ್ಮ ಗೌರವದ ಪ್ರಶ್ನೆ"

"ಹಾಗಾದರೆ ಮುಂದೇನು ಮಾಡಬೇಕೆಂದು ಯೋಚಿಸಿದ್ದೀರಿ?"

"ನಾನು ನನ್ನ ಭವಿಷ್ಯವನ್ನು ನಿರ್ಧರಿಸುತ್ತೇನೆ. ಅದನ್ನು ಕಟ್ಟಿಕೊಂಡು ನಿಮಗೇನಾಗಬೇಕು? ನೀವು ವಿವಾಹದ ಬಂಧನವಿಲ್ಲದೆ, ನನ್ನೊಡನೆ ಸುಖ ಪಡೆಯುವ ಇಚ್ಛೆಯುಳ್ಳ ವ್ಯಕ್ತಿಯೆಂದು ನನಗೆ ಮೊದಲೇ ಗೊತ್ತಿದ್ದರೆ ನಿಮ್ಮೊಡನೆ ಸೇರುತ್ತಿರಲಿಲ್ಲ.

ಕ್ರಾಂತಿಯ ನೆಪದಲ್ಲಿ ಮದುವೆಯಾಗುವುದನ್ನು ತಪ್ಪಿಸಿಕೊಳ್ಳುತ್ತಿದ್ದೀರಿ. ನಿಮಗೂ ಗೊತ್ತಿದೆ, ಈ ದೇಶದಲ್ಲಿ ಅಷ್ಟು ಸುಲಭವಾಗಿ ಕ್ರಾಂತಿಯಾಗುವುದಿಲ್ಲವೆಂಬುದು. ಸುಮ್ಮನೆ ಕುಂಟುನೆಪ ಹೇಳುತ್ತಿದ್ದೀರಿ. ನನ್ನ ದುರ್ದೈವ, ನಿಮ್ಮನ್ನು ದೂರುವುದಕ್ಕಿಂತ ನನ್ನನ್ನು ನಾನೇ ಶಪಿಸಿಕೊಳ್ಳಬೇಕು. ನನ್ನದೇ ತಪ್ಪು. ತಪ್ಪಿಗೆ ಪ್ರಾಯಶ್ಚಿತ್ತವಾಗಲೇಬೇಕು, ಇದೋ ನೀವು ಕೊಟ್ಟ ಉಂಗುರ"

ಹೀಗೆ ಹೇಳುತ್ತಾ, ಉಂಗುರವನ್ನು ಅವನ ಕಡೆಗೆ ಎಸೆದು, ಸ್ಕೂಟರಿದ್ದಲ್ಲಿಗೆ ಹೊರಟೇಬಿಟ್ಟಳು. ಶಂಕರನು ಅವಳನ್ನು ಪುಸಲಾಯಿಸುವ ಉದ್ದೇಶದಿಂದ ಅವಳನ್ನು ಹಿಂಬಾಲಿಸಿದನು. ಆದರೆ ಅವಳು ಬಿರಬಿರನೆ ಹೋಗಿ, ಅವನು ನೋಡುತ್ತಿದ್ದಂತೆಯೇ ಇಳಿಜಾರಿನಲ್ಲಿ ಹೋಗಿ ಸ್ಕೂಟರನ್ನು ಹತ್ತಿ ಹೊರಟೇಬಿಟ್ಟಳು. ಶಂಕರನು, ಅವಳು ಅಷ್ಟು ಗಟ್ಟಿ ಮನಸ್ಸು ಮಾಡಿ ತನ್ನನ್ನು ತ್ಯಜಿಸುತ್ತಾಳೆಂದು ಯೋಚಿಸಿರಲಿಲ್ಲ. ಅವಳು ತನ್ನ ನಿರ್ಧಾರವನ್ನು ಬದಲಾಯಿಸಿ ಕಾಗದ ಬರೆಯಬಹುದೆಂದು ಬಿಡೆಯಾಸೆಯಿಂದ ಸುಮ್ಮನಿದ್ದನು.

ರಾತ್ರಿ ಮನೆಗೆ ಹೋದಾಗ ಎಂಟೂವರೆ ಗಂಟೆಯಾಗಿತ್ತು. ಅದೃಷ್ಟವಶಾತ್ ಕೃಷ್ಣಕಾಂತನು ಇನ್ನೂ ಮನೆಗೆ ಬಂದಿರಲಿಲ್ಲ. ಅವಳ ಸುತ್ತಲೂ ನಿರಾಸೆಯ ಕಾರ್ಗತ್ತಲು ಕವಿದಿತ್ತು. ಜೀವನ ಬೇಡವಾಗಿತ್ತು. ನಾರಾಯಣನು ಬಂದು ಊಟಕ್ಕೆ ಕರೆದನು. ತನಗೆ ಸ್ವಸ್ಥವಿಲ್ಲವೆಂದೂ, ಊಟ ಮಾಡುವುದಿಲ್ಲವೆಂದೂ ಹೇಳಿ, ತನ್ನ ಕೊಠಡಿಯ ಬಾಗಿಲನ್ನು ಹಾಕಿಕೊಂಡು, ಮನಶ್ಶಾಂತಿಗೋಸ್ಕರ, ಹಾಸಿಗೆಯ ಮೇಲೆ ಕುಳಿತು ಭಗವಂತನನ್ನು ಧ್ಯಾನಿಸತೊಡಗಿದಳು. ಆರು ತಿಂಗಳ ಹಿಂದೆ ಅದೇ ಹಾಸಿಗೆಯ ಮೇಲೆ ಕುಳಿತು, ಶಂಕರನು ತನ್ನ ಪತಿಯಾಗುವಂತೆ ಕರುಣಿಸಬೇಕೆಂದು ಭಗವಂತನನ್ನು ಪ್ರಾರ್ಥಿಸಿದ್ದಳು. ಇಂದು ಅದೇ ಹಾಸಿಗೆಯ ಮೇಲೆ ಕುಳಿತು ಶಂಕರನೊಡನೆ ಅಕ್ರಮ ಸಂಭೋಗ ಮಾಡಿದ್ದಕ್ಕಾಗಿ ತನ್ನನ್ನು ಕ್ಷಮಿಸಬೇಕೆಂದು ಭಗವಂತನಲ್ಲಿ ಮೊರೆ ಇಟ್ಟಳು. ಎಷ್ಟು ಪ್ರಾರ್ಥಿಸಿದರೂ ಮನಸ್ಸಿಗೆ ಶಾಂತಿ ದೊರೆಯಲೊಲ್ಲದು. ಶಂಕರನು ಅವಳೊಡನೆ ಆ ದಿನ ಆಡಿದ ಮಾತುಗಳನ್ನು ಒಂದೊಂದಾಗಿ ಸ್ಮರಿಸಿಕೊಂಡು, ಆ ಮಾತುಗಳನ್ನು ಎಷ್ಟರಮಟ್ಟಿಗೆ ತಾನು ನಂಬಬಹುದೆಂಬುದನ್ನು ತರ್ಕಿಸಿದಳು. ಎಷ್ಟು ತರ್ಕಿಸಿದರೂ ಶಂಕರ ಮದುವೆಯಾಗುವುದನ್ನು ತಪ್ಪಿಸಿಕೊಳ್ಳುವ ಸಲುವಾಗಿ ಸುಳ್ಳು ನೆಪ ಹೇಳಿದನೆಂಬುದರಲ್ಲಿ ಯಾವ ಸಂದೇಹವೂ ಕಾಣಲಿಲ್ಲ. ಅವನು ಹೇಳಿದ್ದಂತೆ ತನ್ನನ್ನು ಅವನು ನಿಜವಾಗಿ ಪ್ರೀತಿಸುತ್ತಿದ್ದರೆ ವಿವಾಹವಾಗದಿರಲು ಅವನ ಕೊಟ್ಟ ಕಾರಣ ಸಕಾರಣವಾಗಿಲ್ಲವೆಂಬುದು ಸ್ಪಷ್ಟವಾಗಿತ್ತು. ಎಲ್ಲರೂ ಹೇಳುವಂತೆ ಅವನೊಬ್ಬ ಕಪಟನಾಟಕದ ಧೂರ್ತ ಶಿರೋಮಣಿ ಎಂದು ತೀರ್ಮಾನಿಸಿದಳು.

ಮುಂದೆ ಏನು ಮಾಡಬೇಕೆಂಬುದನ್ನು ಕುರಿತು ಚಿಂತಿಸುತ್ತಿರುವಾಗ, ಅವಳ ಮನಸ್ಸಿಗೆ ನಾಲ್ಕು ಮಾರ್ಗಗಳು ಹೊಳೆದವು. ತಂದೆಯ ಮಾತಿನಂತೆ ಗೋಪಾಲನನ್ನು ಮದುವೆಯಾಗುವುದು ಒಂದು ಮಾರ್ಗವಾಗಿತ್ತು. ಅದಿಲ್ಲದಿದ್ದರೆ ಆಜನ್ಮ

ಬ್ರಹ್ಮಚಾರಿಣಿಯಾಗಿ ಬಾಳುವುದೂ ಇನ್ನೊಂದು ಮಾರ್ಗವಾಗಿತ್ತು. ಶಂಕರನ ಸೂಳೆಯಾಗಿ ಬಾಳುವುದು ಮತ್ತೊಂದು ಮಾರ್ಗವಾಗಿತ್ತು. ಆತ್ಮಹತ್ಯೆ ಮಾಡಿಕೊಳ್ಳುವುದು ಮಗದೊಂದು ಮಾರ್ಗವಾಗಿತ್ತು. ಈ ನಾಲ್ಕು ಮಾರ್ಗಗಳ ಸಾಧಕ ಬಾಧಕಗಳನ್ನು, ನ್ಯಾಯ-ಅನ್ಯಾಯಗಳನ್ನು ವಿಮರ್ಶಿಸತೊಡಗಿದಳು. ಶಂಕರನೊಡನೆ ತಾನು ಆರು ತಿಂಗಳಿಗೆ ಮೇಲ್ಪಟ್ಟು ಅಕ್ರಮ ಪ್ರಣಯ ಸಂಬಂಧ ಇಟ್ಟುಕೊಂಡಿದ್ದ ವಿಚಾರವನ್ನು ಮರೆಮಾಚಿ, ಸದ್ಗೃಹಸ್ಥನೆನಸಿಕೊಂಡಿದ್ದ ಗೋಪಾಲನನ್ನು ಮೋಸಗೊಳಿಸುವುದು ಯುಕ್ತವಲ್ಲವೆಂದು ಅವಳಿಗೆ ತೋರಿತ್ತು. ಅದೂ ಅಲ್ಲದೆ ಗೋಪಾಲನೊಡನೆ ತನ್ನ ದಾಂಪತ್ಯ ಜೀವನ ಸುಖಮಯವಾಗಿರುತ್ತದೆಯೆಂಬ ಭರವಸೆಯೂ ಅವಳಿಗಿರಲಿಲ್ಲ. ಆಜೀವ ಬ್ರಹ್ಮಚಾರಿಣಿಯಾಗಿ ಬಾಳಲು ಅವಳು ಸಿದ್ಧಳಿದ್ದಳು. ಆದರೆ ಸ್ವತಂತ್ರ ಜೀವನೋಪಾಯದ ಮಾರ್ಗವಿಲ್ಲದೆ ಆ ರೀತಿ ಒಂಟಿಯಾಗಿ ಬಾಳಲು ಸಾಧ್ಯವಿಲ್ಲವೆಂಬ ತೀರ್ಮಾನಕ್ಕೆ ಬಂದಳು. ಮಲತಾಯಿಯ ಜೊತೆಯಲ್ಲಿ ನರಕಯಾತನೆಯನ್ನು ಅನುಭವಿಸುವುದಕ್ಕಿಂತ ಮತ್ತು ಶಂಕರನ ಸೂಳೆಯಾಗಿ ಬಾಳುವುದಕ್ಕಿಂತ ಆತ್ಮಹತ್ಯೆಯೇ ಲೇಸೆಂದು ತೀರ್ಮಾನಿಸಿದಳು. ಆತ್ಮಹತ್ಯೆಯಿಂದ ತನ್ನ ಮತ್ತು ತಂದೆಯ ಸಮಸ್ಯೆಗಳ ಪರಿಹಾರವಾಗುತ್ತವೆ ಎಂಬುದು ಅವಳ ತರ್ಕವಾಗಿತ್ತು.

ಈ ರೀತಿ ಚಂಚಲೆ ತನ್ನ ಕೊಠಡಿಯಲ್ಲಿ ಕುಳಿತು ಚಿಂತಿಸುತ್ತಿರುವ ವೇಳೆಯಲ್ಲಿ, ಕೃಷ್ಣಕಾಂತನು ಆಫೀಸಿನಿಂದ ಮನೆಗೆ ಬಂದನು. ಅವನು ಪ್ರತಿದಿನವೂ ಆಫೀಸಿನಿಂದ ಬಂದಾಗ, ಚಂಚಲೆ ಅವನನ್ನು ಸ್ವಾಗತಿಸಿ ಊಟಕ್ಕೆ ಬಡಿಸುತ್ತಿದ್ದಳು. ಆ ದಿನ ಚಂಚಲೆಯ ಸುಳಿವೇ ಇರಲಿಲ್ಲ. ನಾರಾಯಣನನ್ನು ಕೂಗಿ, ಚಂಚಲೆ ಎಲ್ಲಿ ಹೋದಳೆಂದು ಕೇಳಿದನು. ನಾರಾಯಣನು ರೂಮಿನಲ್ಲಿದ್ದಾಳೆಂದೂ, ಅವಳಿಗೆ ಹುಷಾರಿಲ್ಲವೆಂದೂ, ಆದ್ದರಿಂದ ಅವಳು ಊಟ ಸಹ ಮಾಡಿಲ್ಲವೆಂದೂ ವರದಿ ಮಾಡಿದನು. ಕೃಷ್ಣಕಾಂತನು ನೇರವಾಗಿ ಮಗಳ ಕೊಠಡಿಗೆ ಹೋದನು. ಚಂಚಲೆ ಕದವನ್ನು ಮುಚ್ಚಿಕೊಂಡಿದ್ದಳು. ಕೃಷ್ಣಕಾಂತನು ಬಾಗಿಲನ್ನು ತಟ್ಟಿ ಅವಳನ್ನು ಕರೆದನು. ಚಂಚಲೆ ಎದ್ದು ಬಾಗಿಲನ್ನು ತೆರೆದಳು. ಕೃಷ್ಣಕಾಂತನು ಅವಳ ಮುಖವನ್ನು ನೋಡಿದನು. ಮುಖ ಮ್ಲಾನವಾಗಿತ್ತು. ಆಗತಾನೆ ಅಳುತ್ತಿದ್ದವಳು ಕಣ್ಣೀರನ್ನು ಒರೆಸಿಕೊಂಡಿರುವಂತೆ ತೋರಿತು. ಅವಳನ್ನು ನೋಡಿದ ಕೃಷ್ಣಕಾಂತನು "ಯಾಕಮ್ಮಾ, ಮುಖ ಬಾಡಿಹೋಗಿದೆ? ಅಳುತ್ತಿದ್ದಂತೆ ತೋರುತ್ತಿದೆ. ನಿನಗೇನಾಗಿದೆ" ಎಂದು ಮುಂಗುರಳನ್ನು ನೇವರಿಸಿದನು. ಆಗ ಚಂಚಲೆ, "ಅಪ್ಪಾಜೀ, ನನಗೆ ಜೀವನವೇ ಬೇಡವಾಗಿದೆ. ನಾನು ಸತ್ತರೆ ನಿಮ್ಮ ತೊಂದರೆಯೂ ನಿವಾರಣೆಯಾಗುತ್ತದೆ; ನನ್ನ ಕಷ್ಟವೂ ಕೊನೆಗಾಣುತ್ತದೆ; ಚಿಕ್ಕಮ್ಮನಿಗೂ ಪೀಡೆ ತೊಲಗಿದಂತಾಗುತ್ತದೆ" ಎಂದು ಹೇಳಿ ಅಳಲಾರಂಭಿಸಿದಳು.

"ಯಾಕೇ, ಅವಳೇನಾದರೂ ಹೇಳಿದಳೇನು?"

"ಇಲ್ಲಪ್ಪಾ, ಇವತ್ತೇನೂ ಹೇಳಲಿಲ್ಲ. ಸುಮ್ಮನೆ ನನ್ನ ಮನಸ್ಸನ್ನು ಬಿಚ್ಚಿ ಹೇಳಿದೆ."

"ಹಾಗಾದರೆ ನೀನು ಅಳಲು ಕಾರಣವೇನು?"

"ನನಗೆ ಈ ಜೀವನದಲ್ಲಿಯೇ ಸುಖ ಲಭಿಸುವಂತೆ ಕಾಣುವುದಿಲ್ಲ. ನನ್ನಿಂದ ನಿಮಗೂ ಸುಖವಿಲ್ಲ. ಆದ್ದರಿಂದ ನಾನು ಸಾಯುವುದೇ ಕ್ಷೇಮ ಎಂಬ ತೀರ್ಮಾನಕ್ಕೆ ಬಂದಿದ್ದೇನೆ."

"ನೀನು ಸಾಯುವುದಾದರೆ, ಸಾಯುವುದಕ್ಕಿಂತ ಮುಂಚೆ ನನಗೆ ಸ್ವಲ್ಪ ವಿಷ ಕೊಟ್ಟು ಆಮೇಲೆ ಸಾಯಿ. ನೀನು ಸಾಯಬೇಕೆಂದು ನಿನಗಾಗಿ ನಾನು ಇಷ್ಟು ಕಷ್ಟಪಡಬೇಕಾಗಿತ್ತೇ? ನಿನಗಾಗಿ ಮತ್ತು ನಿನ್ನ ತಮ್ಮ ತಂಗಿಗಾಗಿ ನಾನು ಬದುಕಿದ್ದೇನೆ. ಇಲ್ಲವಾದರೆ ಎಂದೋ ನಿನ್ನ ಚಿಕ್ಕಮ್ಮನ ಉಪಟಳದಿಂದ ನೊಂದು ಆತ್ಮಹತ್ಯೆ ಮಾಡಿಕೊಳ್ಳಬೇಕಾಗಿತ್ತು. ನನಗೆ ನನ್ನ ಮಕ್ಕಳಲ್ಲದೆ ಈ ಜಗತ್ತಿನಲ್ಲಿ ಹೆಚ್ಚು ಪ್ರಿಯರಾರಿದ್ದಾರೆ? ನಿನಗೇನು ಅಂತಹ ಕಷ್ಟ ಪ್ರಾಪ್ತವಾಗಿದೆ?"

"ನನ್ನ ಕಷ್ಟ ನಿಮಗೆ ಅರ್ಥವಾಗುವಂತಿಲ್ಲ. ನನಗೇತಕ್ಕೋ ಮಾನಸಿಕ ಅಶಾಂತಿ ಪ್ರಾರಂಭವಾಗಿದೆ. ಅದನ್ನು ವಿವರಿಸುವುದು ಕಷ್ಟ. ಅಂತೂ ಜೀವ ಬೇಡವಾಗಿದೆ.

"ಚಂಚಲಾ ನೀನು ವಿದ್ಯಾವತಿ ; ನಿರಕ್ಷರಕುಕ್ಷಿ ಅಲ್ಲ. ನಮಗಿಂತ ಕಷ್ಟದಲ್ಲಿದ್ದವರು ಈ ಜಗತ್ತಿನಲ್ಲಿ ಎಷ್ಟು ಜನರಿದ್ದಾರೆಂಬುದನ್ನು ಯೋಚಿಸು. ಜೀವನವೆಲ್ಲವೂ ಸುಖಮಯವಾಗಿರಲು ಸಾಧ್ಯವಿಲ್ಲ. ನನ್ನ ಪರಿಸ್ಥಿತಿಯನ್ನು ಸ್ವಲ್ಪ ಯೋಚಿಸು. ನನಗೆ ಈಚೆಗೆ ಆರೋಗ್ಯವಿಲ್ಲ. ಕೈಯಲ್ಲಿ ಹಣವಿಲ್ಲ. ಪ್ರತಿದಿನವೂ ಕೂಲಿಯಾಳಿನಂತೆ ದುಡಿಯಬೇಕು, ಜೀವನ ಸಾಗಿಸಬೇಕು. ಇದರ ಜೊತೆಗೆ ನಿನ್ನ ಚಿಕ್ಕಮ್ಮನ ಅಸಹನೀಯವಾದ ವರ್ತನೆ ಅವಳ ಜೊತೆಯಿರುವುದಕ್ಕಿಂತ ದೇಶಾಂತರ ಹೋಗುವುದು ಕ್ಷೇಮವೆಂದು ಎಷ್ಟೋ ಬಾರಿ ಯೋಚಿಸಿದ್ದೇನೆ. ಆದರೆ ನನ್ನ ಗೌರವ ಪ್ರತಿಷ್ಠೆಗಳಿಗೆ ಮತ್ತು ಮಕ್ಕಳಾದ ನಿಮ್ಮಗಳ ಭವಿಷ್ಯಕ್ಕೆ ಧಕ್ಕೆ ಉಂಟಾಗಬಾರದೆಂಬ ದೃಷ್ಟಿಯಿಂದ ಬಾಳಿನ ನೌಕೆಯನ್ನು ನಡೆಸುತ್ತಿದ್ದೇನೆ. ಎಲ್ಲರ ಜೀವನದಲ್ಲೂ ಉಬ್ಬರವಿಳಿತಗಳು ಇದ್ದೇ ಇರುತ್ತವೆ. ಸುಖವನ್ನು ಮಾತ್ರ ಆರಿಸಿಕೊಂಡು ಕಷ್ಟವನ್ನು ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ನಿನಗೋಸ್ಕರ ನಾನು ಬದುಕಿದ್ದೇನೆ. ನನಗೋಸ್ಕರ ನೀನು ಬದುಕಿರಬೇಕು. ನನ್ನ ವೃದ್ಧಾಪ್ಯದಲ್ಲಿ ನನ್ನನ್ನು ನೋಡಿಕೊಳ್ಳುವವರು ಯಾರು? ನಿನ್ನ ಚಿಕ್ಕಮ್ಮ ನೋಡಿಕೊಳ್ಳುವಳೆಂಬ ಭರವಸೆ ಇಲ್ಲ. ನೀನು ಕೈಬಿಟ್ಟು ಹೋದರೆ ನನ್ನ ಗತಿ ಏನೆಂಬುದನ್ನು ಯೋಚಿಸಿನೋಡು."

ತಂದೆ ಹೇಳಿದುದನ್ನು ಚಂಚಲೆ ಸ್ವಲ್ಪ ಕಾಲ ತುಲನೆ ಮಾಡಿ ನೋಡಿದಳು. ಆತನು ಹೇಳಿದ್ದರಲ್ಲಿ ಸತ್ಯವಿತ್ತು. ಆತನ ವಾದವನ್ನು ಅಲ್ಲಗಳೆಯುವಂತಿರಲಿಲ್ಲ.

"ಅಪ್ಪಾಜೀ ಕ್ಷಮಿಸಿ, ನಿಮಗೋಸ್ಕರ ನಾನು ಬದುಕಿರುತ್ತೇನೆ" ಎಂದಳು. ಆ ಸಂದರ್ಭವನ್ನು ಉಪಯೋಗಿಸಿಕೊಂಡು, ಕೃಷ್ಣಕಾಂತನು "ನಿನ್ನ ಸ್ನೇಹಿತಳು ಹೇಳಿದ್ದ ವರನ ವಿಚಾರ ಏನಾಯಿತು?" ಎಂದು ಪ್ರಶ್ನಿಸಿದನು.

"ಆ ವರನನ್ನು ನಾನು ಒಪ್ಪುವುದಿಲ್ಲ."

"ಹಾಗಾದರೆ ಗೋಪಾಲನ ವಿಚಾರದಲ್ಲಿ ನಿನ್ನ ತೀರ್ಮಾನವೇನು?"

"ಏನು ಹೇಳಬೇಕೆಂಬುದೇ ನನಗೆ ತೋಚುವುದಿಲ್ಲ."

"ಈಗ ಒದಗಿರುವ ಅವಕಾಶವನ್ನು ಬಿಟ್ಟರೆ ಬೇರೆ ವರ ಸಿಕ್ಕುವುದು ಕಷ್ಟ. ನಿನಗೇಕೆ ಗೋಪಾಲನ ವಿಚಾರದಲ್ಲಿ ಅಷ್ಟೊಂದು ನಿರಾಸಕ್ತಿ?"

"ನನಗೆ ಜೀವನದಲ್ಲೇ ನಿರಾಸಕ್ತಿ ಪ್ರಾರಂಭವಾಗಿದೆ. ಏನು ಹೇಳಬೇಕೆಂಬುದೇ ಗೊತ್ತಾಗುವುದಿಲ್ಲ. ನೀವು ಹೇಳಿದಂತೆ ಕೇಳುತ್ತೇನೆ."

"ಬಹಳ ಸಂತೋಷ ಮಗೂ, ನನ್ನ ಮಾತಿನಲ್ಲಿ ನಂಬಿಕೆ ಇಡು. ಗೋಪಾಲನನ್ನು ವರಿಸುವುದರಿಂದ ನಿನಗೆ ಸುಖ, ಸಂಪತ್ತು ಪ್ರಾಪ್ತಿಯಾಗುತ್ತದೆ."

"ಆಗಲೀ ಅಪ್ಪಾಜಿ, ನಿಮ್ಮ ಮನಸ್ಸಿದ್ದಂತೆ ಆಗಲೀ."

ಕೃಷ್ಣಕಾಂತನು ಸಂತೋಷದಿಂದ ಮಗಳನ್ನು ತಬ್ಬಿಕೊಂಡನು. ತಲೆಯ ಮೇಲಿದ್ದ ಭಾರ ಅವನಿಗೆ ಇಳಿದಂತಾಗಿತ್ತು. ಸಾಧ್ಯವಿದ್ದಿದ್ದರೆ ಆ ಕ್ಷಣವೇ ಗೋಪಾಲನಿಗೆ ಟೆಲಿಫೋನ್ ಮೂಲಕ ತಿಳಿಸಬೇಕೆಂದು ಯೋಚಿಸಿದನು. ಆದರೆ ತಾನೇ ನೇರವಾಗಿ ಭಾವೀ ಅಳಿಯನ ಜೊತೆಯಲ್ಲಿ ಮಾತನಾಡುವುದಕ್ಕಿಂತ ಮರುದಿನ ಪುರುಷೋತ್ತಮಬಾಬುರವರಿಂದ ಕಾಗದ ಬರೆಸಬೇಕೆಂದು ನಿರ್ಧರಿಸಿದನು. ಸಂತೋಷದ ಭರದಲ್ಲಿ ಮಗಳನ್ನು ಬಲಾತ್ಕಾರವಾಗಿ ಅಡುಗೆ ಮನೆಗೆ ಕರೆದುಕೊಂಡು ಹೋಗಿ, ಅವಳಿಗೆ ತಾನೇ ಬಡಿಸಿ ಊಟ ಮಾಡುವಂತೆ ಮಾಡಿದನು. ತಂದೆಗೆ ಮಗಳ ಉತ್ತರದಿಂದ ಅಪರಿಮಿತ ಆನಂದವಾಗಿದ್ದಾಗ್ಯೂ ಮಗಳ ಮುಖದಲ್ಲಿ ಸಂತೋಷದ ಸೂಚನೆಯೇ ಇರಲಿಲ್ಲ. ತಂದೆಯ ಒತ್ತಾಯಕ್ಕೆ ಅವಳು ಮಣಿದಂತಿತ್ತು.

ಮರುದಿನ, ಕೃಷ್ಣಕಾಂತನು ಖುದ್ದಾಗಿ ಅನಿಲಪುರಕ್ಕೆ ಹೋಗಿ, ಪುರುಷೋತ್ತಮ ಬಾಬು ಅವರನ್ನು ಕಂಡು, ಅವರಿಗೆ ಚಂಚಲೆ ಸಿರಗೂರು ಗೋಪಾಲನನ್ನು ಮದುವೆ ಆಗಲು ಒಪ್ಪಿರುವ ಶುಭ ಸಮಾಚಾರವನ್ನು ತಿಳಿಸಿದನು. ಮದುವೆಯನ್ನು ಯಾವಾಗ ಇಟ್ಟುಕೊಳ್ಳಬಹುದೆಂಬ ವಿಚಾರದಲ್ಲಿ ಗೋಪಾಲನ ಅಭಿಪ್ರಾಯವನ್ನು ಜಾಗ್ರತೆ ಪಡೆಯಬೇಕೆಂದು ಬಾಬು ಅವರಲ್ಲಿ ಮನವಿ ಮಾಡಿಕೊಂಡನು. ಬಾಬು ಅವರು ಆ ದಿನವೇ ಗೋಪಾಲನಿಗೆ ಒಂದು ಪತ್ರವನ್ನು ಬರೆದರು. ಆ ಪತ್ರದಲ್ಲಿ ಕೃಷ್ಣಕಾಂತನಂತಹ ಮಾವ ಮತ್ತು ಚಂಚಲೆಯಂತಹ ಪತ್ನಿ ಸಿಕ್ಕುವುದು ಮಹಾಪುಣ್ಯವೆಂದು ಗೋಪಾಲನಿಗೆ ಬರೆದಿದ್ದರು.

೬

ಗೌರಿ ಪದವೀಧರಳಾಗಿ ಕಾಳೀಪುರದಿಂದ ಬಂದಲಾಗಾಯ್ತು ಅವಳ ತಾಯಿ ಪದ್ಮಾವತಿ ಅವಳ ಮದುವೆಯ ವಿಚಾರವಾಗಿ ಚಿಂತಿಸುತ್ತಿದ್ದಳು. ಗೌರಿಯ ಅಭಿಪ್ರಾಯವನ್ನು ಕೇಳದೆ, ಪದ್ಮಾವತಿಯು ತನ್ನದೂರದ ಬಂಧುವಾಗಿದ್ದ ಅರುಣಕುಮಾರ ಎಂಬುವನಿಗೆ, ಅವಳನ್ನು ಕೊಡಬೇಕೆಂದು ಮನಸ್ಸು ಮಾಡಿದ್ದಳು. ಅರುಣಕುಮಾರನ ತಂದೆ ಒಬ್ಬ ಸಣ್ಣ ಜಮೀನುದಾರನಾಗಿದ್ದನು. ಅರುಣಕುಮಾರನ ತಂದೆಯ ಹತ್ತಿರ, ಮೂರನೆಯವರ

ಮುಖಾಂತರ ಈ ವಿಚಾರವನ್ನು ಪ್ರಸ್ತಾಪಿಸಿದ್ದಾಗ, ಅರುಣಕುಮಾರನ ತಂದೆಯು ಇಪ್ಪತ್ತೈದು ಸಾವಿರ ರೂಪಾಯಿಗಳ ವರದಕ್ಷಿಣೆಯನ್ನು ಕೊಟ್ಟರೆ ಮಾತ್ರ ತನ್ನ ಸಮ್ಮತಿಯಿದೆ ಎಂದು ಹೇಳಿ ಕಳಿಸಿದ್ದನು. ದೂರದ ಬಂಧುವಾದ್ದರಿಂದ ತಾನೇ ನೇರವಾಗಿ ಮಾತನಾಡುವುದು ಲೇಸೆಂದು ಭಾವಿಸಿ ಪದ್ಮಾವತಿ ಅರುಣಕುಮಾರನ ಮನೆಗೆ ಸ್ವತಃ ಹೋಗಿ, ಅರುಣಕುಮಾರನ ತಂದೆಯ ಬಳಿ ತನ್ನ ಕಷ್ಟವನ್ನು ವಿವರಿಸಿ, ತಾನು ನಿಸ್ಸಹಾಯಕಳಾದ ವಿಧವೆಯಾದ್ದರಿಂದ ಹತ್ತು ಸಾವಿರ ರೂಪಾಯಿಗಳ ವರದಕ್ಷಿಣೆಗೆ ಒಪ್ಪಬೇಕೆಂದು ಪ್ರಾರ್ಥಿಸಿದಳು. ಅರುಣಕುಮಾರನ ತಂದೆಯು "ನನ್ನ ಹೆಣ್ಣುಮಕ್ಕಳು ಮದುವೆಗೆ ಬಂದಾರೆ. ನಮಗ್ಯಾರೂ ರಿಯಾಯಿತಿ ತೋರಿಸುವುದಿಲ್ಲ. ಆ ವಿಚಾರದಲ್ಲಿ ಚರ್ಚೆಯೇ ಬೇಡ", ಎಂದು ಖಡಾಖಂಡಿತವಾಗಿ ಹೇಳಿಬಿಟ್ಟನು. ಪದ್ಮಾವತಿಗೆ ಇಪ್ಪತ್ತೈದು ಸಾವಿರ ರೂಪಾಯಿಗಳ ವರದಕ್ಷಿಣೆ ಕೊಡಲು ಚೈತನ್ಯವಿಲ್ಲದೆ ಹೋದುದರಿಂದ ಆ ಮಾತು ಅಲ್ಲಿಗೇ ನಿಂತು ಹೋಯಿತು.

ಗೌರಿಯ ರೂಪಕ್ಕೆ ಮನಸೋತಿದ್ದ ಸಿರಗೂರು ಜಿಲ್ಲೆಯ ಜಮೀನ್ದಾರನೊಬ್ಬನ ಮಗ ಮದನ ಮೋಹನನು, ಗೌರಿ ಕಾಳೀಪುರದಿಂದ ವಾಪಸು ಬಂದಲಾಗಾಯ್ತು, ಅವರಿವರ ಹತ್ತಿರ ಪದ್ಮಾವತಿಗೆ ಹೇಳಿ ಕಳುಹಿಸುತ್ತಿದ್ದನು. ಮದನಮೋಹನನು ಕಾಳೀಪುರದ ಕಾಲೇಜಿನಲ್ಲಿ ಗೌರಿಯ ಜೊತೆಯಲ್ಲಿ ಓದುತ್ತಿದ್ದನು. ಆ ಯುವಕನ ತಂದೆ ಆಗರ್ಭ ಶ್ರೀಮಂತನಾಗಿದ್ದನು. ಅವನ ತಂದೆ ತಾಯಿಗಳು ಪದ್ಮಾವತಿಗೆ ಪರಿಚಯಸ್ಥರು. ನಾನಾ ಕಾರಣಗಳಿಂದ ಪದ್ಮಾವತಿಗೆ ಆ ಸಂಬಂಧ ಅಪೇಕ್ಷಣೀಯವಾಗಿತ್ತು. ಮೊದಲನೆಯದಾಗಿ, ವರದಕ್ಷಿಣೆಯನ್ನು ಅವರು ಕೇಳುತ್ತಿರಲಿಲ್ಲ. ಎರಡನೆಯದಾಗಿ, ಆ ಹುಡುಗನ ತಂದೆತಾಯಿಗಳು ಆಗರ್ಭ ಶ್ರೀಮಂತರು, ಮೂರನೆಯದಾಗಿ, ಆ ಹುಡುಗ ಸ್ಫುರದ್ರೂಪಿ. ಆದರೆ ಗೌರಿಯನ್ನು ಪ್ರಸ್ತಾಪಿಸಿದ್ದಾಗ, ಗೌರಿಯು ಅವನನ್ನು ಒಪ್ಪಲಿಲ್ಲ. ಆ ರೀತಿ ಒಪ್ಪದಿರಲು ಸಕಾರಣವಿತ್ತು. ಮದನಮೋಹನನು ಬಿ.ಎ ಪರೀಕ್ಷೆಯಲ್ಲಿ ಮೂರು ವರ್ಷ ನಪಾಸಾಗಿ, ಕಾಲೇಜನ್ನು ಬಿಟ್ಟಿದ್ದನು. ಜೊತೆಗೆ ಅವನು ವಿಷಯಲಂಪಟನಾಗಿದ್ದನು. ಗೌರಿ ಒಪ್ಪದೆ ಹೋದ್ದರಿಂದ, ಪದ್ಮಾವತಿ ಮದನಮೋಹನನಿಗೆ ನಿರ್ದಿಷ್ಟವಾದ ಜವಾಬನ್ನು ಕೊಡದೆ; "ನಾವು ಈ ವರ್ಷ ಮದುವೆ ಮಾಡುವುದಿಲ್ಲ, ಮುಂದಿನ ವರ್ಷ ನೋಡೋಣ" ಎಂದು ಹೇಳಿ ಕಳಿಸಿದಳು. ಅನಂತರ, ಬೇರೆ ಕೆಲವು ಕಡೆಗಳಲ್ಲಿ ಪ್ರಸ್ತಾಪ ಮಾಡಿದ್ದಳು. ಎಲ್ಲಿಯೂ ಹೊಂದಾಣಿಕೆಯಾಗಿರಲಿಲ್ಲ. ಎಲ್ಲಾ ಕಡೆಯಲ್ಲಿಯೂ ವರದಕ್ಷಿಣೆಯ ಪ್ರಶ್ನೆಯೇ ಅಡ್ಡಿಯಾಗಿತ್ತು.

ಕ್ರಾಂತಿಸೇನೆಯವರು ಗೌರಿಯನ್ನು ಅಪಹರಿಸಬೇಕೆಂದು ಮಾಡಿದ್ದ ಸಂಚಿನ ಸುದ್ದಿ ಎಲ್ಲಾ ಕಡೆಯಲ್ಲಿಯೂ ಹಬ್ಬಿ ಹೋಗಿತ್ತು. ಗೌರಿ ವಾಸ್ತವಿಕವಾಗಿ ಅಪಹರಿಸಲ್ಪಡದೆ ಇದ್ದರೂ, ಜನರು ಬಾಯಿಗೆ ಬಂದಂತೆ ಮಾತನಾಡುತ್ತಿದ್ದರು. ಕೆಲವರು ಅವಳು ಕ್ರಾಂತಿಸೇನೆಗೆ ಸೇರಿದ್ದಾಗ, ಅವಳಿಗೂ ಶಂಕರನಿಗೂ ಅಕ್ರಮ ಸಂಬಂಧವಿತ್ತೆಂದು ಹೇಳುತ್ತಿದ್ದರು. ಕೆಲವರು ಕ್ರಾಂತಿಸೇನೆಯವರು ಗೌರಿಯನ್ನು ಅಪಹರಿಸಿಕೊಂಡು ಹೋಗಿ,

ಅವಳ ಮಾನಭಂಗ ಮಾಡಿ, ನಾಲ್ಕು ದಿನಗಳ ನಂತರ ಅವಳನ್ನು ಬಿಡುಗಡೆ ಮಾಡಿದರೆಂದು ಹೇಳುತ್ತಿದ್ದರು. ಕೆಲವರು ಗೌರಿಗೂ, ಚಂದ್ರಹಾಸನಿಗೂ ಮೊದಲಿನಿಂದಲೂ ಅಕ್ರಮ ಸಂಬಂಧವಿತ್ತೆಂದು ಆಡಿಕೊಳ್ಳುತ್ತಿದ್ದರು. ಅಂತೂ ಇಂತೂ, ಈ ರೀತಿಯ ಅಂತೆಕಂತೆಯ ಮಾತುಗಳಿಂದ ಗೌರಿಯ ಹೆಸರಿಗೆ ಕಳಂಕ ಬಂದಂತಾಗಿತ್ತು. ಈ ರೀತಿ ಕಳಂಕಪ್ರಾಪ್ತವಾದ ಹುಡುಗಿಯರಿಗೆ ಗಂಡು ಸಿಕ್ಕುವುದು ಕಷ್ಟವೆಂದು ಪದ್ಮಾವತಿಗೆ ಅರ್ಥವಾಗಿತ್ತು. ಅಲ್ಲದೆ, ಕ್ರಾಂತಿಸೇನೆಯ ಶಂಕರನ ವಕ್ರದೃಷ್ಟಿ ಗೌರಿಯ ಮೇಲೆ ಬಿದ್ದಿದೆಯೆಂಬ ಸುದ್ದಿ ಜನಜನಿತವಾಗಿ ಹಬ್ಬಿತ್ತು. ಆದ್ದರಿಂದ ಅವಳನ್ನು ಧೈರ್ಯಮಾಡಿ ಯಾರಾದರೂ ಮದುವೆಯಾಗುವುದು ಕಷ್ಟವಾಗಿತ್ತು.

ಪದ್ಮಾವತಿಗೆ ಇಂತಹ ಪರಿಸ್ಥಿತಿಯಲ್ಲಿ ದಿಕ್ಕು ತೋಚದಂತಾಗಿತ್ತು. ಪ್ರಾಪ್ತವಯಸ್ಸಿಗೆ ಬಂದ ಮಗಳಿಗೆ ಮದುವೆ ಮಾಡದೆ ಮನೆಯಲ್ಲಿಟ್ಟುಕೊಂಡಿರುವುದು ಸರಿಯಲ್ಲವೆಂದು ಮನಸ್ಸಿನಲ್ಲಿಯೇ ಕೊರಗುತ್ತಿದ್ದಳು. ಆದರೆ ವರನನ್ನು ಎಲ್ಲಿ ಗೊತ್ತು ಮಾಡುವುದು? ಈ ಮಧ್ಯೆ ಕ್ರಾಂತಿಸೇನೆಯವರು ಯಾವ ನಿಮಿಷದಲ್ಲಿ ಏನು ಮಾಡುತ್ತಾರೆಂಬುದನ್ನು ಹೇಳಲಿಕ್ಕಾಗುತ್ತಿರಲಿಲ್ಲ. ಗೌರಿಯನ್ನು ಮನೆಯಲ್ಲಿಟ್ಟುಕೊಂಡು ಅವಳನ್ನು ರಕ್ಷಣೆ ಮಾಡುವುದು ನಿಸ್ಸಹಾಯಕಳಾದ ತನ್ನ ಕೈಯಲ್ಲಿ ಸಾಧ್ಯವಿಲ್ಲವೆಂದು ಅವಳಿಗನಿಸಿತ್ತು. ಆದ್ದರಿಂದ ಹೇಗಾದರೂ ಮಾಡಿ ಆ ವರ್ಷ ಮದುವೆ ಮಾಡಬೇಕೆಂದು ನಿರ್ಧರಿಸಿದಳು. ಹಿಂದಿನ ವರ್ಷ ಪ್ರಸ್ತಾಪಿಸಿದ್ದ ಸಿರಗೂರು ಜಿಲ್ಲೆಯ ಜಮೀನ್ದಾರನ ಮಗ ಮದನಮೋಹನನಿಗೆ, ಗೌರಿಯನ್ನು ಕೇಳದೆ, ಪದ್ಮಾವತಿ ಹೇಳಿಕಳಿಸಿದ್ದಳು. ಮದನಮೋಹನನು ಗೌರಿಯನ್ನು ಮದುವೆಯಾಗಲು ಸಿದ್ಧನಿದ್ದನು. ಆದರೆ ಅವನ ತಂದೆ, "ಆ ಹುಡುಗಿಯ ವಿಚಾರ ಕೇಳಿದ್ದೇವೆ. ಅವಳ ಪುಣುಗು ನಮಗೆ ಬೇಕಾಗಿಲ್ಲ" ಎಂದು ಹೇಳಿ ಕಳಿಸಿದನು.

ಈಚೆಗೆ, ಪದ್ಮಾವತಿಯ ತಂಗಿ ರೂಪ ಕಾಳೀಪುರದಿಂದ ಬರೆದಿದ್ದ ಪತ್ರದಲ್ಲಿ, ತನ್ನ ಗಂಡನ ದೂರದ ಬಂಧುವೊಬ್ಬನು ಗೌರಿಯನ್ನು ಮದುವೆಯಾಗಲು ಒಪ್ಪಿದ್ದಾನೆಂದೂ, ಅವನು ಸರ್ಕಾರಿ ನೌಕರಿಯಲ್ಲಿದ್ದು ಜೀವನಕ್ಕಾಗುವಷ್ಟು ಸಂಬಳ ಬರುತ್ತಾ ಇದೆಯೆಂದೂ, ಆದರೆ ಹತ್ತು ಸಾವಿರ ರೂಪಾಯಿಗಳ ವರದಕ್ಷಿಣೆ ಕೇಳುತ್ತಾನೆಂದೂ ನಮೂದಿಸಿದ್ದಳು. ಪತ್ರ ಬಂದ ಮೇಲೆ, ಪದ್ಮಾವತಿಯ ಮನಸ್ಸು ಬಹಳ ಹಗುರವಾಯಿತು. ತಂಗಿ ಸೂಚಿಸಿದ ಬಾಂಧವ್ಯ ಲಭಿಸಿದರೆ ತನ್ನ ಸಮಸ್ಯೆ ಪರಿಹಾರವಾಗುತ್ತದೆಂದು ತಿಳಿದಳು. ಮಗಳನ್ನು ಕೇಳದೆ, ತಂಗಿಗೆ ತನ್ನ ಸಮ್ಮತಿಯನ್ನು ಸೂಚಿಸಿ ಪತ್ರವನ್ನು ಬರೆದಿದ್ದಳು. ತಂಗಿಯ ಅಭಿಪ್ರಾಯದ ಪ್ರಕಾರ ವರ ಅನುರೂಪನಾಗಿದ್ದ. ವರದಕ್ಷಿಣೆ ಕಡಿಮೆಯಾಗಿತ್ತು. ಆದ್ದರಿಂದ ಬೇಡವೆಂದು ಹೇಳುವ ಪ್ರಶ್ನೆಯೇ ಇರಲಿಲ್ಲ. ಇನ್ನು ಮದುವೆ ಮತ್ತು ವರದಕ್ಷಿಣೆಯ ಬಗ್ಗೆ ಹಣವನ್ನು ಒದಗಿಸಿಕೊಳ್ಳುವುದು ದೊಡ್ಡ ಪ್ರಶ್ನೆಯಾಗಿತ್ತು. ಶ್ರೀಮಂತನಾದ ತನ್ನ ಅಣ್ಣ ಜ್ಯೋತಿಪುರದ ಆನಂದಪ್ರಸಾದನು ಮದುವೆಯ ಖರ್ಚಿಗೆ ಮತ್ತು ವರದಕ್ಷಿಣೆಗೆ ಬೇಕಾಗುವ ಹಣವನ್ನು ಕೊಡಬಹುದೆಂಬ ಆಸೆಯಿಂದ, ಪದ್ಮಾವತಿ ಅವನಿಗೊಂದು ಪತ್ರವನ್ನು ಬರೆದು, ಜರೂರಾಗಿ ಬರಬೇಕೆಂದೂ, ಅಗತ್ಯವಾಗಿ

ಮಾತನಾಡುವ ಕೆಲಸವಿದೆಯೆಂದೂ ತಿಳಿಸಿದ್ದಳು. ಒಂದು ವೇಳೆ ತನ್ನ ಅಣ್ಣನು ಸಹಾಯ ಮಾಡದೆ ಇದ್ದರೂ ತನ್ನ ಮನೆಯನ್ನು ಆಧಾರ ಮಾಡಿ, ಸಾಲವನ್ನು ಪಡೆಯಬೇಕೆಂದು ನಿರ್ಧರಿಸಿದಳು.

ಮೂರುದಿನಗಳ ನಂತರ, ಪದ್ಮಾವತಿಯ ಅಣ್ಣ ಆನಂದಪ್ರಸಾದನು ಶ್ರೀಪುರಕ್ಕೆ ಬಂದನು. ಪದ್ಮಾವತಿ ಅಪರೂಪವಾಗಿ ಬಂದ ಅಣ್ಣನನ್ನು ಸಡಗರದಿಂದ ಸ್ವಾಗತಿಸಿದಳು. ಟೀ ಮತ್ತು ಕುಶಲ ಪ್ರಶ್ನೆಗಳಾದ ಮೇಲೆ, ಗೌರಿಯ ಅಪಹರಣಕ್ಕಾಗಿ ನಡೆದಿದ್ದ ಸಂಚಿನ ವಿವರಗಳನ್ನೂ, ಪುರುಷೋತ್ತಮ ಬಾಬುರವರ ಮನೆಗೆ ಬಾಂಬ್ ಬಿದ್ದುದನ್ನೂ ಸವಿಸ್ತಾರವಾಗಿ ಅಣ್ಣನಿಗೆ ವರದಿ ಮಾಡಿದಳು.

"ನನಗೆಲ್ಲಾ ಗೊತ್ತಾಗಿದೆ. ಹೆಣ್ಣುಮಕ್ಕಳನ್ನು ಹೇಗೆ ಇಟ್ಟಿರಬೇಕೋ ಹಾಗೆ ಇಟ್ಟಿರಬೇಕು. ಅಂಕೆ ಸಂಕೆಯಿಲ್ಲದೆ ಸ್ವೇಚ್ಛೆಯಾಗಿ ಬಿಟ್ಟರೆ ಹೀಗೇ ಆಗೋದು. ನಿಂದೇ ತಪ್ಪು" ಎಂದು ಆನಂದಪ್ರಸಾದನು ತಂಗಿಯನ್ನು ದೂರಿದನು.

"ನಾನೇನು ಮಾಡ್ದೆ ಅಣ್ಣಾ?"

"ನೀನು ಅವಳನ್ನು ಚಂದ್ರಹಾಸನ ಜೊತೆಯಲ್ಲಿ ಸಲಿಗೆಯಿಂದ ಇರೋಕೆ ಅವಕಾಶ ಕೊಟ್ಟಿದ್ದೇ ತಪ್ಪು."

"ಆ ಹುಡುಗ ಕೆಟ್ಟವನೇನೂ ಅಲ್ಲ. ನಮ್ಮ ಗೌರಿ ಕಾಳೀಪುರದಲ್ಲಿ ಓದುತ್ತಾ ಇದ್ದಾಗ, ಅವನೂ ಅಲ್ಲೇ ಅವನ ಅಕ್ಕನ ಮನೆಯಲ್ಲಿದ್ದು ಓದುತ್ತಾ ಇದ್ದ. ರಜದಲ್ಲಿ ಊರಿಗೆ ಬರುವಾಗ, ಅವಳನ್ನು ಒಬ್ಬಳನ್ನೇ ಹೇಗೆ ಕಳಿಸುವುದು ಅಂತ ರೂಪ ಅವಳನ್ನು ಚಂದ್ರಹಾಸನ ಜೊತೆಯಲ್ಲೇ ಕಳಿಸುತ್ತಾ ಇದ್ದಳು. ಅವನು ನಮ್ಮನೆಗೇನೂ ಹೊಸಬನೇನೂ ಅಲ್ಲ. ಪುರುಷೋತ್ತಮಬಾಬುರವರು ನಮ್ಮೆಜಮಾನರ ಸ್ನೇಹಿತರು. ಚಂದ್ರಹಾಸ ಚಿಕ್ಕ ಹುಡುಗ ಆಗಿದ್ದಾಗ ನಮ್ಮನೆಗೆ ಬರ್ತಾ ಇದ್ದ ಅವನು ಗುಣವಂತ."

"ಅವನು ಗುಣವಂತ ಆಗಿದ್ರೆ ಆ ದುಷ್ಟ ಶಂಕರನ ಸೇನೆಗೆ ಯಾಕೆ ಸೇರ್ತಿದ್ದ? ತಾನೂ ಸೇರಿದ್ದಲ್ಲದೆ ಗೌರೀನೂ ಯಾಕೆ ಸೇರಿಸ್ತಿದ್ದ?"

"ಏನು! ಗೌರಿ ಮಾವೋ ಸೇನೆಗೆ ಸೇರಿದ್ದಳೇ?"

"ಹೌದು ಅಂತಾ ಎಲ್ಲಾ ಹೇಳ್ತಾರೆ"

"ನಂಗೆ ಇದು ಹೊಸ ಸುದ್ದಿ ಅಣ್ಣಾ"

"ನಿಂಗೆ ಹೇಗೆ ಗೊತ್ತಾಗಬೇಕು? 'ಅಜ್ಜಿಗೆ ಅರಿವೆ ಚಿಂತೆ, ಮಗಳಿಗೆ ಮಿಂಡರ ಚಿಂತೆ' ಅಂತ ಹೇಳ್ತಾರಲ್ಲಾ ಹಾಗಾಗಿದೆ. ನಿಂಗೆ ಜೀವನದ ಚಿಂತೆ, ಅವಳಿಗೆ ಮೆರೆಯೋ ಚಿಂತೆ. ಇಲ್ದೆ ಇದ್ದಿದ್ದರೆ ಅವಳು ಮಾವೋ ಸೇನೆಗೆ ಸೇರ್ತಾ ಇರಲಿಲ್ಲ."

"ಅಣ್ಣಾ ಒಂದು ಮಾತು. ಅವಳು ಯಾವ ಸೇನೆ ಸೇರಿದ್ರೂ ಹಾದಿ ತಪ್ಪಿ ಹೋಗತಕ್ಕ ಹುಡುಗಿಯಲ್ಲ"

"ದಾರಿ ತಪ್ಪಿ ಹೋಗದೆ ಇದ್ದವಳು ಶಂಕರನ ಸೇನೆಗೆ ಯಾಕೆ ಸೇರಿದ್ಲು ಅಂತಾ ನನ್ನ ಪ್ರಶ್ನೆ. ಅವನ ಸೇನೆ ಸೇರದೆ ಇದ್ದಿದ್ರೇ ಇಷ್ಟೆಲ್ಲಾ ರಾದ್ಧಾಂತ ಎಲ್ಲಿ ಆಗ್ತಾ ಇತ್ತು? ಮಗಳು ಮಾಡೂಕು, ಜನ ಆಡೂಕು ಸರಿಯಾಗಿದೆ."

"ಈಗ ಆದದ್ದು ಆಗಿ ಹೋಯ್ತು. ಮುಂದೇನು ಮಾಡೋದು ಹೇಳಿ ಅಣ್ಣಾ"

"ಮುಂದೇನು ಮಾಡೋದು, ಅವಳಿಗೊಂದು ಮದುವೆ ಮಾಡೋದು; ಮರ್ಯಾದೆಯಿಂದ ಕಳಿಸ್ಕೊಡೋದು"

"ನಾನೂ ಹಾಗೇ ಯೋಚನೆ ಮಾಡ್ತಾ ಇದ್ದೀನಿ. ರೂಪ ಮೊನ್ನೆ ಕಾಗದ ಬರೆದಿದ್ಲು. ಕಾಳೀಪುರದಲ್ಲಿ ಅವಳ ಯಜಮಾನರ ದೂರದ ಸಂಬಂಧಿ ಒಬ್ಬ ಗ್ರಾಜುಯೇಟ್; ಗೌರ್ನ್‌ಮೆಂಟ್ ಸರ್ವಿಸ್‌ನಲ್ಲಿ ಇದ್ದಾನಂತೆ. ಮುನ್ನೂರು ರೂಪಾಯಿ ಸಂಬಳ ಬರ್‍ತಾ ಇದೆಯಂತೆ. ಆದರೆ ಹತ್ತುಸಾವಿರ ರೂಪಾಯಿ ವರದಕ್ಷಿಣೆ ಕೇಳ್ತಾನಂತೆ. ನಿನ್ನ ಕೇಳದೆ ಆಗಬಹುದು ಅಂತಾ ರೂಪಗೆ ಬರೆದಿದ್ದೀನಿ. ದುಡ್ಡಿಗೆ ಏನು ಮಡೋದು ಅಂತ ಯೋಚನೆ. ನೀವೇನಾದರೂ ಸ್ವಲ್ಪ ಸಹಾಯ ಮಾಡ್ತೀರೇನು?"

"ನಂದೇ ಹಾಡ್ತದೆ ಹೊಚ್ತದೆ, ನಿಂಗೆಲ್ಲಿಂದ ಕೊಡ್ಲಿ?"

"ನಮ್ಮಪ್ಪ ಬೇಕಾದಷ್ಟು ಆಸ್ತಿ ಬಿಟ್ಟು ಹೋಗಿದ್ರು. ನನ್ನ ಮದ್ವೇಲಿ ಅಥವಾ ರೂಪಳ ಮದ್ವೇಲಿ ನೀವೇನು ವರದಕ್ಷಿಣೆ ಕೊಟ್ಟಿದ್ರೇನು? ಈಗಿನ ಕಾನೂನು ಪ್ರಕಾರ ರೂಪಳಿಗೂ, ನನಗೂ ಹಿಸ್ಸೆ ಕೊಡಬೇಕಾಗಿತ್ತು. ಹೋಗ್ಲಪ್ಪಾ ಹಿಸ್ಸೆ ನಾವು ಕೇಳೋದಿಲ್ಲ. ಕಷ್ಟದ ಕಾಲದಲ್ಲಿ ಸ್ವಲ್ಪ ಸಹಾಯ ಮಾಡಿ ಅಂದ್ರೆ ನಿಮ್ಮದೇ ಪರ್ವತದ ಹಾಗೆ ದೊಡ್ಡದು ಮಾಡ್ತಿರಿ; ನಾ–ಏನು ಹೇಳ್ಲಿ?"

"ಪದ್ಮಾ, ನನ್ನ ಕಷ್ಟ ನಿಂಗೆ ಗೊತ್ತಿದ್ದರೇ ನೀ ಇಂತಾ ಮಾತ್ ಹೇಳ್ತಿರಲಿಲ್ಲ. ಅಪ್ಪ ಸತ್ತ ಮೇಲೆ ನಿಮ್ಮಿಬ್ಬರದ್ದು ಮದ್ವೆ ಮಾಡೀನಿ. ನನ್ನ ಮೂರು ಜನ ಹೆಣ್ಮಕ್ಕಳ ಮದ್ವೆ ಮಾಡೀನಿ. ನಿಂಗೂ ರೂಪಳಿಗೂ ವರದಕ್ಷಿಣೆ ಕೊಡ್ಲಿಲ್ಲ. ಆದ್ರೆ ನನ್ನ ಮಕ್ಕಳ ಮದ್ವೇಲಿ ವರದಕ್ಷಿಣೆ ಕೊಡಬೇಕಾಗಿ ಬಂತಲ್ಲಾ. ಹೆಣ್ಣು ಮಕ್ಕಳ ಮದ್ವೀಗೆ ಅರ್ಧ ಆಸ್ತಿ ಮಾರಿದ್ದಾಯ್ತು. ಇನ್ನು ಅಲ್ಪ ಸ್ವಲ್ಪ ಇರೋದು ಜೀವನಕ್ಕೇ ಸಾಕಾಗೋದಿಲ್ಲಾ. ಅದರ ಜೊತೆಗೆ ಹಾಳು ಸರ್ಕಾರ ಲ್ಯಾಂಡ್ ರಿಫಾರಂ ಮಾಡಿ, ಮೂರು ವರ್ಷದಿಂದ ರೈತರು ಮೂರು ಕಾಳು ಗೇಣೀ ಕೊಡ್ತಾ ಇಲ್ಲ. ಕೈಯಿಂದ ಕಂದಾಯ ಕಟ್ತಾ ಇದ್ದೀನಿ, ಏನೋ ಇನ್ನು ನಿರ್ವಾಹ ಇಲ್ಲ ಅಂತ ಹೇಳಿದ್ರೆ ಎರಡು–ಮೂರು ಸಾವಿರ ರೂಪಾಯಿ ಕೊಡಬಹುದು."

"೨–೩ ಸಾವಿರ ರೂಪಾಯಾಗೆ ಏನಾಗ್ತದೆ ಅಣ್ಣಾ? ನಿಮಗೆ ಸಾಧ್ಯವಾಗದಿದ್ದರೆ ಮನೇನೆ ದೀಡು ಮಾಡಿ ಸಾಲ ಮಾಡಬೇಕು."

"ಸಾಲ ಮಾಡಿ ಹ್ಯಾಗೆ ತೀರಸ್ತೀಯಮ್ಮಾ? ರವಿ ಓದು ಮುಗಿದಿಲ್ಲ. ಬಾಡಿಗೆ ಅಲ್ದೆ ಬ್ಯಾರೆ ಉತ್ಪತ್ತಿಯಿಲ್ಲ.

"ಹಾಗಂತ ಮದುವೀಗೆ ಬಂದ ಮಗಳನ್ನು ಮದ್ವೆ ಮಾಡದೆ ಮನೇಲೆ ಇಟ್ಟುಕೊಳ್ಳೋಕೆ ಆಗ್ತದೇನು?"

“ನಿಂಗೆ ಹೋದ ವರ್ಷವೇ ಹೇಳ್ದೆ. ನಮ್ಮ ಹುಡುಗ ಜಂಬೂಗೆ ಗೌರಿ ಮೇಲೆ ಮನಸ್ಸಿದೆ ಅಂತ. ನಾನೇನೂ ವರದಕ್ಷಿಣೆ ಕೇಳೋದಿಲ್ಲ. ನೀ ಮನಸ್ಸಿಗೆ ಹಚ್ಚಿಕೊಳ್ಳಲ್ಲ. ಈಗ್ಲೂ ಯೋಚನೆ ಮಾಡು”

“ಗೌರಿ ಬಿ.ಎ. ಪಾಸ್ ಮಾಡಿದ್ದಾಳೆ. ನಿಮ್ಮ ಮಗ ಜಂಬೂನಾಥ್ ಪಿ.ಯು.ಸಿ. ಫೇಲ್ ಆಗಿದ್ದಾನೆ”

“ಬಿ.ಎ. ಆದ ತಕ್ಷಣ ಹುಡುಗಿಯರಿಗೇನು ಕೋಡು ಬರ್ತದೇನು? ಹುಡುಗಿಯರು ಬಿ.ಎ. ಮಾಡೋದು ಒಂದೇ, ಹುಡುಗರು ಎಸ್ಸೆಸ್ಸೆಲ್ಸಿ ಮಾಡೋದು ಒಂದೇ. ನೋಡು ನಂಗಿರುವ ಒಬ್ಬನೇ ಮಗ. ಮನೆತನದ ಕುಡಿ, ಮನೀಗೆ ಬಂದ ಹಾಗೆ ಆಗ್ತದೆ.

“ಗೌರಿ ಒಪ್ಪಬೇಕಲ್ಲ ಅಣ್ಣಾ”.

“ಕುಂಬಳಕಾಯಿ ಕೇಳಿ ಸಾಂಬಾರ ಅರಿತಾರೇನು? ತಂದೆ ತಾಯಿ ಹೇಳಿದ ಹಾಗೆ ಮಕ್ಕಳು ಕೇಳ್ಬೇಕು. ನೀ ಹೇಳಿದ ಹಾಗೆ ಅವಳು ಕೇಳ್ಬೇಕು. ನಿಂಗೇ ಮನಸ್ಸಿಲ್ಲ ಅಂತ ಹೇಳು”

“ನೀವು ಒಳ್ಳೆ ಮಾತು ಹೇಳ್ತೀರಿ ಅಣ್ಣಾ, ನಂಗೆ ಮನಸ್ಸಿಲ್ದೆ ಏನು? ನನ್ನಣ್ಣನ ಮಗನೀಗೆ ಮಗಳು ಕೊಡೋಕೆ ಸಂತೋಷ. ಆದರೆ ಈಗಿನ ಕಾಲ್ದಾಗೆ ಓದಿರೋ ಹೆಣ್ಮಕ್ಕಳು ಸುಲಭದಾಗೆ ಒಪ್ತಾರೇನು?”

“ಅವಳ ಮ್ಯಾಲೆ ಇಷ್ಟೆಲ್ಲಾ ಗುಲ್ಲಾದ ಮ್ಯಾಲೆ ಯಾರು ಅವಳನ್ನು ಮದುವೆ ಆಗ್ತಾರೇ? ನಾ ಯೇನ ತಂಗೀ ಮಗಳೂ ಅಂತ ಹೇಳ್ತಾ ಇದ್ದೀನಿ. ನಮ್ಮ ಜಂಬೂಗೂ ಆಸೆ ಇದೆ”

“ಗೌರೀನ ನಾನು ಇದುವರೆಗೂ ಕೇಳಿಲ್ಲ. ಇಂದು ಅವಳನ್ನು ಕೇಳಿ ನೋಡ್ತೀನಿ”

“ಹಾಗೇ ಆಗಲಿ ಕೇಳು. ಅವಳಿಗೆ ಸಾಧಕ ಬಾಧಕ ಹೇಳು. ಬ್ಯಾರೆ ವರ ಸಿಕ್ಕೋದು ಕಷ್ಟ ಅಂತಾನೂ ಹೇಳು”

ರಾತ್ರಿ ಊಟವಾದ ನಂತರ, ಆನಂದಪ್ರಸಾದ ಮಲಗಿದ ಮೇಲೆ, ಪದ್ಮಾವತಿ ಗೌರಿಯ ಕೊಠಡಿಗೆ ಹೋದಳು. ಗೌರಿ ನಿದ್ದೆ ಮಾಡಲು ಸಿದ್ಧಳಾಗುತ್ತಿದ್ದಳು. ತಾಯಿಯನ್ನು ನೋಡಿದ ನಂತರ “ಏನಮ್ಮಾ” ಎಂದು ವಿಚಾರಿಸಿದಳು.

“ಏನೂ ಇಲ್ಲ. ನಿನ್ನ ಹತ್ತಿರ ಸ್ವಲ್ಪ ಮಾತನಾಡಬೇಕಾಗಿದೆ” ಎಂದು ಪದ್ಮಾವತಿ ಹೇಳಿದಳು.

ಗೌರಿ ತಾಯಿಗೆ ಕುರ್ಚಿಯನ್ನು ಕೊಟ್ಟು, ತಾನು ಮಂಚದ ಮೇಲೆ ಕುಳಿತು ಯಾವ ವಿಚಾರ ಅಮ್ಮಾ” ಎಂದು ಪ್ರಶ್ನಿಸಿದಳು.

“ಬಹಳ ವಿಚಾರ ಇದೆ.”

“ಹೇಳಿ ಅಮ್ಮಾ.”

“ನೀನು ಕ್ರಾಂತಿಸೇನೆಗೆ ಸೇರಿದ್ದೆ ಅಂತ ಕೇಳಿದೆ ಹೌದೇ?

“ಹೌದು.”

"ನಂಗೆ ಹೇಳದೆ ಕೇಳದೆ ಯಾಕೆ ಸೇರಿದ್ದು?"

"ನಿಮಗೆ ಹೇಳದೆ ಇದ್ದದ್ದು ತಪ್ಪು; ನಾನು ಆ ದುಷ್ಟರ ತಂಡ ಸೇರಿದ್ದೂ ತಪ್ಪು"

"ಆ ನೀಚನ ಬಳಗ ಸೇರೋಕೆ ನಿನಗೆ ಮನಸ್ಸಾದರೂ ಬಂದದ್ದು ಹೇಗೆ?"

"ನನ್ನ ಫ್ರೆಂಡ್ಸ್ ಅನೇಕರು ಸೇರಿದ್ದರು. ನಾನೂ ದೇಶಸೇವೆ ಮಾಡಬೇಕು ಅಂತಾ ಸೇರಿದ್ದೆ. ಶಂಕರ ನೀಚ ಅಂತ ಆಗ ನಂಗೆ ಗೊತ್ತಿರ್ಲಿಲ್ಲ. ಅವನೂ ಅವನ ತಂಡದವರೂ ಸಂಭಾವಿತರು ಅಂತ ತಪ್ಪು ಕಲ್ಪನೆಯಿಂದ ನಾನು ಮಾತ್ರವಲ್ಲ. ನೂರಾರು ಮಂದಿ ಹೆಣ್ಣು ಮಕ್ಕಳು ಆದರ್ಶ ಪ್ರೇರಿತರಾಗಿ ಸೇರಿದ್ದೆವು."

"ಆದರ್ಶ ಪ್ರೇರಣೆ ಅಂತ ಯಾಕೆ ಹೇಳ್ತೀಯ? ಚಂದ್ರಹಾಸನ ಪ್ರೇರಣೆ ಅಂತ ಹೇಳು. ಸುಳ್ಳು ಯಾಕೆ ಹೇಳ್ತಾ ಇದ್ದೀಯ?"

"ಚಂದ್ರಹಾಸನೂ, ನಾನೂ ಸದ್ಭಾವನೆಯಿಂದ ಕ್ರಾಂತಿಸೇನೆಯನ್ನು ಸೇರಿದ್ದೆವು. ಅದರಲ್ಲಿ ಸುಳ್ಳೇನು ಬಂತು?"

"ಚಂದ್ರಹಾಸನ ಸಹವಾಸದಿಂದ ನಮಗೆ ಈಗ ಈ ಕಷ್ಟ ಪ್ರಾಪ್ತಿಯಾಗಿದೆ. ಮಾಡಬಾರದವರ ಸಹವಾಸ ಮಾಡಿದರೆ ಹೀಗೇ ಆಗೋದು."

"ಚಂದ್ರಹಾಸ ಒಬ್ಬ ಆದರ್ಶ ವ್ಯಕ್ತಿ. ಅವರ ವಿಚಾರದಲ್ಲಿ ನೀವು ತಪ್ಪು ತಿಳಿದು ಕೊಂಡಿದ್ದೀರಿ."

"ಆದರ್ಶ ವ್ಯಕ್ತಿಯಾಗಿದ್ದಿದ್ದರೆ ಆದರ್ಶ ರೀತಿಯಲ್ಲಿ ವರ್ತಿಸುತ್ತಿದ್ದ. ನಿನ್ನಂತಹ ಅರಿಯದ ಹುಡುಗೀಗೆ ಪ್ರೋತ್ಸಾಹ ಕೊಟ್ಟು ಕ್ರಾಂತಿಸೇನೆಗೆ ಸೇರಿಸ್ತಿರಲಿಲ್ಲ."

"ಆ ವಿಚಾರದಲ್ಲಿ ಚಂದ್ರಹಾಸನನ್ನು ದೂರುವುದು ತಪ್ಪು. ನಾನು ಸ್ವಯಂಪ್ರೇರಣೆಯಿಂದ ಸೇರಿದವಳು."

"ಈಗ ಅನುಭವಿಸಬೇಕಾಗಿದೆಯಲ್ಲಾ. ನಿನ್ನ ಹೆಸರಿಗೂ ಕಳಂಕ; ಮನೆತನದ ಹೆಸರಿಗೂ ಕಳಂಕ. ಜನ ಬಾಯಿಗೆ ಬಂದಂತೆ ಮಾತಾಡ್ತಾ ಇದ್ದಾರೆ. ನಿಂಗೂ ಶಂಕರನಿಗೂ ಅಕ್ರಮ ಸಂಬಂಧ ಇತ್ತು ಅಂತ ಹೇಳ್ತಾರೆ. ಅದಕ್ಕೇ ನಿನ್ನ ಬಲಾತ್ಕಾರವಾಗಿ ಹೊತ್ತುಕೊಂಡು ಹೋಗಬೇಕು ಅಂತ ಶಂಕರ ತರದೂದು ನಡೆಸಿದ್ದ ಅಂತ ಹೇಳ್ತಾರೆ."

ಗೌರಿ ಅಳುತ್ತಾ, "ಅಮ್ಮಾ ನಾನು ನಿರಪರಾಧಿ. ನನಗೂ ಅವನಿಗೂ ಯಾವ ಸಂಬಂಧವೂ ಇರಲಿಲ್ಲ. ಅವನಿಗೆ ನನ್ನನ್ನು ತನ್ನ ಅಕ್ರಮ ಪ್ರೇಮಕ್ಕೆ ಉಪಯೋಗಿಸಿ ಕೊಳ್ಳುವ ಅಭಿಪ್ರಾಯವಿದ್ದುದು ನಿಜ. ಅವನ ಅಭಿಪ್ರಾಯ ಗೊತ್ತಾದ ಕೂಡಲೆ ನಾನವನ ಸೇನೆ ಬಿಟ್ಟುಬಿಟ್ಟೆ. ಈ ದೇಶದಲ್ಲಿ ಕೆಲವರಿಗೆ ಹೆಣ್ಮಕ್ಕಳ ಮ್ಯಾಲೆ ಕತೆ ಕಟ್ಟೋದೇ ಒಂದು ಉದ್ಯೋಗ, ಅಂತಹ ಜನರ ಮಾತನ್ನು ಕೇಳಿ ನೀವೂ ನಂಬುವುದಾದರೆ ನಾನ್ಯಾಕೆ ಬದುಕಿರಬೇಕು? ನನಗೆ ಆತ್ಮಹತ್ಯೆ ಒಂದೇ ಮಾರ್ಗ."

"ನೀನು ಆತ್ಮಹತ್ಯೆ ಮಾಡಿಕೊಳ್ಳಲಿ ಅಂತ ನಿನ್ನ ಹೆತ್ತು ಹೊತ್ತು ಸಾಕಲಿಲ್ಲ. ಬಾಯಿಗೆ ಬಂದಂತೆ ಮಾತಾಡಬ್ಯಾಡ. ನಿನ್ನ ಶೀಲದ ವಿಚಾರದಲ್ಲಿ ನಂಗೆ ಅನುಮಾನ

ಇಲ್ಲ. ಜನ ಆಡುವ ಮಾತನ್ನು ನಿನಗೆ ಹೇಳಿದೆ ಅಷ್ಟೇ. ಆದದ್ದು ಆಗಿ ಹೋಯಿತು. ಈಗೇನ ಮಾಡಬೇಕು ಅಂತ ಯೋಚಿಸಿದ್ದೀಯ?

"ನಾನೇನು ಯೋಚಿಸಲಿ. ಆ ದುಷ್ಟರ ಸೇನೆ ಸೇರಿದ್ದೇ ತಪ್ಪಾಯಿತು."

"ಹೋಗಲಿ ಬಿಡು. ಅದಕ್ಕೆ ವ್ಯಥೆಪಟ್ಟು ಈಗ ಪ್ರಯೋಜನವಿಲ್ಲಾ. ನಿನ್ನ ಮದುವೆ ಈ ವರ್ಷವೇ ಆಗಬೇಕಾಗಿದೆ. ಆ ವಿಚಾರದಲ್ಲಿ ನಿನ್ನ ಅಭಿಪ್ರಾಯವೇನು?"

"ಯಾರೊಡನೆ ನನ್ನ ಮದುವೆ?"

"ಮೊನ್ನೆ ತಾನೇ ಕಾಳೀಪುರದಿಂದ ನಿನ್ನ ಚಿಕ್ಕಮ್ಮ ಕಾಗದ ಬರೆದಿದ್ದಳು. ನಿನ್ನ ಚಿಕ್ಕಪ್ಪನ ದೂರದ ಬಂಧುವೊಬ್ಬ ಸರ್ಕಾರಿ ನೌಕರಿಯಲ್ಲಿದ್ದಾನಂತೆ. ಗ್ರಾಜುಯೇಷನ್ ಅಂತೆ. ಮುನ್ನೂರು ರೂಪಾಯಿ ಸಂಬಳ ಬರುತ್ತದಂತೆ. ಎಲ್ಲಾ ರೀತಿಲು ನಿಂಗೆ ತಕ್ಕ ವರ ಅಂತ ನಿನ್ನ ಚಿಕ್ಕಮ್ಮ ಬರೆದಿದ್ದಳು. ವರದಕ್ಷಿಣೇನೂ ಕಡಿಮೆ. ಹತ್ತು ಸಾವಿರ ರೂಪಾಯಿ ವರದಕ್ಷಿಣೆ ಕೇಳ್ತಾನಂತೆ. ನಾನು ಆಗಬಹುದು ಅಂತ ಹೇಳಿ ನಿನ್ನ ಚಿಕ್ಕಮ್ಮನಿಗೆ ಕಾಗದ ಬರೆದಿದ್ದೀನಿ.

"ನನ್ನ ಕೇಳ್ದೆ ಯಾಕೆ ಬರಿದ್ರಿ?"

"ನಾನು, ನಿನ್ನ ಚಿಕ್ಕಮ್ಮ, ಚಿಕ್ಕಪ್ಪ ಇಷ್ಟು ಜನ ಒಪ್ಪಿದ ಮೇಲೆ ನಿನ್ನೇನು ಕೇಳ್ಬೇಕು?"

"ಅಮ್ಮಾ, ಹಾಗಾದರೆ ನಂಗೆ ಅಷ್ಟೊಂದೂ ಸ್ವಾತಂತ್ರ್ಯ ಬೇಡವೇ?"

"ಇದುವರೀಗೆ ನಿಂಗೆ ಸ್ವಾತಂತ್ರ್ಯ ಕೊಟ್ಟು, ಸ್ವೇಚ್ಛೆಯಾಗಿ ಬಿಟ್ಟಿದ್ದಕ್ಕೆ ಈಗ ಆಗಿರುವ ಅನಾಹುತವೇ ಸಾಕು. ನಿನ್ನ ಸಾಕಿ ಸಲಹಿದ ತಾಯಿಗೆ, ಚಿಕ್ಕಮ್ಮನಿಗೆ ನಿಂಗೆ ಯಾವುದು ಒಳ್ಳೇದು. ಯಾವುದು ಕೆಟ್ಟುದುದೆಂದು ನಿರ್ಧರಿಸತಕ್ಕ ಸ್ವಾತಂತ್ರ್ಯ ಇಲ್ಲ ಅಂತ ನಿನ್ನ ಅಭಿಪ್ರಾಯ ಏನು?"

"ನೀವೂ, ಚಿಕ್ಕಮ್ಮ ನನ್ನ ಸಾಕಿ ಸಲಹಿದ್ದು ನಿಜ. ಚಿಕ್ಕಮ್ಮ ಒಳ್ಳೆಯ ಭಾವನೆಯಿಂದ ವರ ಗೊತ್ತು ಮಾಡಿರಬಹುದು. ನೀವೂ ಒಳ್ಳೆಯ ಭಾವನೆಯಿಂದ ಆಗಲಿ ಅಂತ ಜವಾಬು ಬರೆದಿರಬಹುದು. ಆದರೆ ನಾನು ನೋಡದೇ ಮಾಡದೇ ವಿಚಾರ ತಿಳಿದುಕೊಳ್ಳದೇ ನನ್ನ ಬಾಳಿನ ಸಂಗಾತಿಯನ್ನು ಒಪ್ಪಿಕೊಳ್ಳುವುದಾದರೂ ಹೇಗಮ್ಮಾ?"

"ನನ್ನ ಮದುವೆ ಮಾಡ್ದಾಗ ನನ್ನ ಅಪ್ಪ ಅಮ್ಮ ನನ್ನ ಕೇಳಿದ್ದರೇನು?"

"ಆಗಿನ ಕಾಲಾನೇ ಬೇರೆ; ಈಗಿನ ಕಾಲಾನೇ ಬೇರೆ."

"ಹಾಗಾದರೆ ನಿನ್ನ ಅಭಿಪ್ರಾಯ ಈಗೇನು? ಅಂತೂ ಈ ವರ್ಷ ನಿನ್ನ ಮದುವೆ ಆಗಬೇಕು."

"ನಾನು ವರದಕ್ಷಿಣೆ ಆಸೆಗಾಗಿ ಮದುವೆ ಆಗುವವನನ್ನ ಎಂದೂ ಒಪ್ಪಲಾರೆ. ವರದಕ್ಷಿಣೆ ತಗೊಂಡು ಮದುವೆ ಆಗೋದು ದುಡ್ಡಿಗಾಗಿ ಮದುವೆಯಾಗ್ತಾರೆಯೇ ಹೊರತು ಹೆಣ್ಣಿಗಾಗಿ ಮದುವೆಯಾಗುವುದಿಲ್ಲ."

"ಹೋಗಲಿ ಬಿಡು. ನಿನ್ನ ಮಾವ ವರದಕ್ಷಿಣೆ ಬ್ಯಾಡ ಅಂತಾ ಹೇಳ್ತಾರೆ. ಅದಕ್ಕೇನು ಹೇಳ್ತೀಯಾ?"

"ಯಾವ ಮಾವ?"

ನನ್ನ ಅಣ್ಣ, ನಿನ್ನ ಸೋದರಮಾವ."

ಯಾರಿಗೋಸ್ಕರ ವರದಕ್ಷಿಣೆ ಬೇಡ ಅಂತ ಅವರು ಹೇಳ್ತಾರೆ?"

"ಜಂಬೂನಾಥ ನಿನ್ನ ಮ್ಯಾಲೆ ಆಸೆ ಇಟ್ಕೊಂಡಾನಂತೆ. ನಿನ್ನ ಮಾವನಿಗೂ ಆಸೆ ಅದೆ. ನೀನೊಪ್ಪಿದರೆ ವರದಕ್ಷಿಣೆ ಬ್ಯಾಡ ಅಂತ ಅಣ್ಣಾ ಹೇಳ್ತಾರೆ.

"ಅಮ್ಮಾ ನಿಮಗೆ ಬಾಯಾದರೂ ಹೇಗೆ ಬರುತ್ತೆ? ನಿಮ್ಮ ಅಣ್ಣನ ಮಗ ಅಂತ ಅಭಿಮಾನದಿಂದ ಹೇಳ್ತೀರಿ ಅಲ್ವೆ? ಜಂಬು ಪಿ.ಯು.ಸಿ. ಪರೀಕ್ಷೆಯಲ್ಲಿ ಮೂರು ಸಾರಿ ಪಲ್ಟಿ ಹೊಡ್ದಾನೆ. ನಿಮ್ಮಳಿಯ ಕೆಲಸಕ್ಕೆ ಬಾರದ ಮುಟ್ಠಾಳ. ಶೃಂಗಾರ ಪುಟ್ಟಸ್ವಾಮಿ ಹಾಗೆ ಸೊಗಸಾಗಿ ಡ್ರೆಸ್ ಮಾಡ್ತಾನೆ. ಅಂತಹವನನ್ನು ಮದುವೆಯಾಗು ಅಂತಾ ಹೇಳ್ತೀರಲ್ಲಾ ಏನು ಹೇಳ್ಲಿ?"

"ಗೌರೀ, ನಿಂಗೆ ಲೋಕಾನುಭವ ಇಲ್ಲ. ವಿದ್ಯೆ, ಬುದ್ಧಿ, ಗುಣ, ರೂಪ, ಸಂಪತ್ತು ಯೆಲ್ಲಾ ಇರತಕ್ಕ ವರ ನಿಂಗೆಲ್ಲಿ ಸಿಕ್ತಾನೆ? ದೂರದ ಬೆಟ್ಟ ನುಣ್ಣಗೆ. ಎಲ್ಲರಲ್ಲೂ ಏನಾದರೂ ನ್ಯೂನತೆ ಇದ್ದೇ ಇರ್ತದೆ. ಜಂಬೂನ ನಾ ಚಿಕ್ಕಂದಿನಿಂದ ನೋಡಿದ್ದು. ಅವನೇನು ಕುರೂಪಿಯಲ್ಲ. ನಮ್ಮ ಅಣ್ಣನಿಗೆ ಒಬ್ಬನೇ ಮಗ. ಆಸ್ತಿ ಬೇಕಾದಷ್ಟಿದೆ. ಅತ್ತೆ, ಮಾವ ಹೇಗಿದ್ರೂ ಗೊತ್ತಿದ್ದವರು. ಯಾವುದಕ್ಕೂ ಕೊರತೆಯಿಲ್ಲದಂತೆ ನೋಡಿಕೊಳ್ತಾರೆ. ನೀನು ಬಿ.ಎ. ಪಾಸ್ ಮಾಡಿದ್ದೀಯ. ಅವನು ಪಿ.ಯು.ಸಿ.ವರೀಗೆ ಓದ್ಯಾನೆ. ವಿದ್ಯೆ ಕಡಿಮೆ ಅಂತ ಒಂದೇ ಕಾರಣದಿಂದ ಬ್ಯಾಡ ಅಂತಾ ಹೇಳೋದು ಸರಿಯಲ್ಲ."

"ಅಮ್ಮಾ, ನಿಮ್ಮ ಸೋದರಳಿಯನ ಇತಿಹಾಸನ ನಿಮಗೆ ಪೂರ್ತಿ ಗೊತ್ತಿಲ್ಲ. ಅವನ ಕೈಗೆ ಆಸ್ತಿ ಸಿಕ್ಕರೆ, ಮೂರು ವರ್ಷದೊಳಗೇ ಪೂರ್ತಿ ಅಸ್ತಿ ಪುಡಿ ಮಾಡಿ ಬಿಡ್ತಾನೆ. ಕುಡಿಯೋದಕ್ಕೆ ಮಿತೀನೇ ಇಲ್ಲವಂತೆ. ನಾನು ಆಸ್ತೀನಲ್ಲ ಮದುವೆ ಆಗೋದು; ನನಗೆ ಬೇಕಾದ್ದು ಒಳ್ಳೆ ವರ."

"ಜಂಬೂ ಕುಡೀತಾನೆ ಅಂತ ಇವತ್ತೇ ನಿನ್ನ ಬಾಯಾಗೇ ಕೇಳಿದ್ದು. ಒಂದು ವೇಳೆ ಕುಡಿಯೋದು ನಿಜ ಅನ್ನು, ಈಗಿನ ಕಾಲ್ದಾಗೆ ಕುಡೀದೆ ಇದ್ದೋರು ಎಷ್ಟು ಜನ ಸಿಕ್ತಾರೆ? ಏನೋ ಹುಡುಗಾಟದಲ್ಲಿ ಸಹವಾಸ ದೋಷದಿಂದ ಅಪ್ಪಿತಪ್ಪಿ ಕುಡಿದಿರಬಹುದು. ಮದುವೆ ಆದ ಮೇಲೆ ನೀನೇ ಅವನ್ನ ತಿದ್ದಬಹುದು."

"ಮದುವೆ ಆದ ಮೇಲೆ ತಿದ್ದೋಕೆ ನಾಯೇನು ಶಾಲಾ ಮಾಸ್ತರಲ್ಲ. ಗಿಡವಾದಾಗ ಬಗ್ಗದೇ ಇದ್ದಿದ್ದು ಮರವಾದ ಮೇಲೆ ಬಗ್ಗುತ್ತದೇನಮ್ಮಾ?"

"ನಿಮ್ಮ ಚಿಕ್ಕಮ್ಮ ಗೊತ್ತು ಮಾಡಿದ ವರ ಯೋಗ್ಯ. ಅವನ್ನ ಮದುವೆಯಾಗು ಅಂದ್ರೆ ಬ್ಯಾಡ ಅಂತೀಯಾ. ಜಂಬೂ ಮದುವೆಯಾಗು ಅಂದ್ರೆ ಅವ ಅಯೋಗ್ಯ ಅಂತೀಯ. ನಿಂಗೆ ಯೋಗ್ಯನೂ ಬೇಡ; ಅಯೋಗ್ಯನೂ ಬೇಡ ಇನ್ಯಾರು ಬೇಕು? ನಿನ್ನ ಮನಸ್ಸಿನಲ್ಲಿ ಏನಿದೆ? ಅದನ್ನಾದರೂ ಹೇಳು, ನಿಂಗೆ ಆಗಲೇ ಇಪ್ಪತ್ನಾಲ್ಕು ವರ್ಷ."

"ನಾನೇ ವರ ಗೊತ್ತು ಮಾಡಿಕೊಂಡೀನಿ. ನೀವು ಒಪ್ಪೋದೊಂದೇ ಬಾಕಿ."

"ಯಾರನ್ನು ಗೊತ್ತು ಮಾಡಿದ್ದೀಯಾ?"

"ಚಂದ್ರಹಾಸ"

"ಗೌರೀ, ನಿಂಗೆ ಹುಚ್ಚುಗಿಚ್ಚು ಹಿಡಿದಿದೆಯೇನು? ಚಂದ್ರಹಾಸನ ಜಾತಿ ಯಾವುದು? ನಮ್ಮ ಜಾತಿ ಯಾವುದು? ಅವ ಶೂದ್ರ; ನಾವು ಬ್ರಾಹ್ಮಣರು."

"ಅಮ್ಮಾ, ನೀವು ತ್ರೇತಾಯುಗದಲ್ಲಿ ಇದ್ದೀರಿ. ಈಗಿನ ಕಾಲದಾಗೆ ಎಷ್ಟು ಜನ ಬೇರೆ ಜಾತಿಯವರನ್ನು ಮದುವೆ ಆಗ್ತಾಯಿಲ್ಲ?"

"ಎಲ್ಲೋ ಆಗಿರಬಹುದು. ನಂಗೆ ಗೊತ್ತಿದ್ದ ಹಾಗೆ ನಮ್ಮ ಕಡೆ ನಮ್ಮ ಜಾತಿ ಹುಡುಗಿರು ಬ್ಯಾರೆ ಜಾತಿಯವರನ್ನು ಮದುವೆ ಮಾಡಿಕೊಂಡಿಲ್ಲ. ಅಲ್ದೆ ನಂಗೆ ಮನಸ್ಸೂ ಒಗ್ಗೋದಿಲ್ಲ. ನಮ್ಮ ನಡವಳಿಕೆಗೂ, ಚಂದ್ರಹಾಸನ ಜಾತಿ ನಡವಳಿಕೆಗೂ ಅಜಗಜಾಂತರ ವ್ಯತ್ಯಾಸ. ನಾವು ಶಾಖಾಹಾರಿಗಳು, ಅವರೋ ಮಾಂಸಾಹಾರಿಗಳು. ನಿಂಗೆ ಮನಸ್ಸಾದರೂ ಹೇಗೆ ಒಪ್ಪುತ್ತದೆಯೇ ಗೌರಿ?"

"ಚಂದ್ರಹಾಸ ಕುರಿ ಕೋಳಿ ಮಾತ್ರ ತಿನ್ತಾರೆ, ನಿಮ್ಮ ಬ್ರಾಹ್ಮಣ ಸೋದರ ಅಳಿಯ ಜಂಬೂನಾಥ ದನದ ಮಾಂಸನೇ ತಿನ್ತಾನೆ. ನಿಮಗೆ ಗೊತ್ತೇನು? ದನ ತಿನ್ನುವವ ನಿಮಗೆ ಆಗಬಹುದು ಅಲ್ಲವೇ?"

"ಜಂಬೂ ಮಾಂಸ ತಿಂತಾನೆ ಅಂತ ನಿಂಗೆ ಯಾರು ಹೇಳಿದ್ರು? ಒಲ್ಲದ ಗಂಡಗೆ ಮೊಸರಾಗೆ ಕಲ್ಲು ಸಿಕ್ತು ಅಂತಾ ಹೇಳ್ತಾರೆ. ಸುಮ್ಮನೆ ಬಾಯಿಗೆ ಬಂದ ಹಾಗೆ ಸುಳ್ಳು ಹೇಳ್ಬಾರ್ದು?

"ಅಮ್ಮ, ನಾ ಹೇಳೋದು ನೂರಕ್ಕೆ ನೂರು ಸತ್ಯ. ಬೇಕಾದರೆ ಸಾಕ್ಷಿ ಕೊಡ್ತೀನಿ. ಜಂಬೂ ಕುಡಿತಾನೇ. ಮಾಂಸ ತಿಂತ್ತಾನೆ. ಈಗಿನ ಕಾಲ್ದಾಗೆ ಎಷ್ಟು ಜನ ಬ್ರಾಹ್ಮಣರು ಮಾಂಸ, ಮದ್ಯ ಸೇವಿಸ್ತಾರೆ ಗೊತ್ತೇನು ನಿಮಗೆ? ಈಗ ಬ್ರಾಹ್ಮಣ್ಯ ಉಳಿದಿಲ್ಲ; ಬರೀ ಜಾತಿ ಮಾತ್ರ ಉಳ್ಕೊಂಡದೆ. ಪುರುಷೋತ್ತಮಬಾಬು ಮಾಂಸಾಹಾರಿ ಅಲ್ಲ; ಶೂದ್ರ ಹೌದು. ಆದರೆ ಸತ್ಯಸಂಧರು. ಅವರ ಪತ್ನಿ ರುಮಾದೇವಿಯವರು ಆದರ್ಶ ಮಹಿಳೆಯಾಗಿದ್ದರು. ಅಂತವರ ಮಗ ಚಂದ್ರಹಾಸರಿಗೆ ಒಳ್ಳೆಯ ಸ್ವಭಾವ ರಕ್ತಗತವಾಗಿ ಬಂದಿದೆ. ಅಲ್ಲದೆ, ನಾವಿಬ್ಬರೂ ಒಂದೇ ಧರ್ಮಕ್ಕೆ ಸೇರಿದವರು. ನಾವಿಬ್ಬರೂ ಹಿಂದುಗಳೂ ಕೂಡ.

"ನಮ್ಮ ಬಂದು ಬಳಗ ಎಲ್ಲಾ ಒಪ್ಪಬೇಕಲ್ಲವೇ? ಅದೂ ಅಲ್ಲದೆ ಶಂಕರನಿಗೂ ಚಂದ್ರಹಾಸನಿಗೂ ಬದ್ಧ ವೈರ. ಚಂದ್ರಹಾಸನನ್ನು ಶಂಕರ ಏನ್ ಸುಮ್ಮನೇ ಬಿಡ್ತಾನೆಯೇ? ನೋಡ್ತಾ ನೋಡ್ತಾ ಅವನ್ನ ಹ್ಯಾಗೆ ಮದುವೆ ಆಗ್ತೀಯ."

"ಅವರ ಸುಖಕಷ್ಟದಲ್ಲಿ ಭಾಗಿಯಾಗಲು ನಾನು ಸಿದ್ಧಳಿದ್ದೇನೆ. ಅಮ್ಮಾ ಇನ್ನೊಂದು ಮಾತು. ಚಂದ್ರಹಾಸ ಅಲ್ಲದೆ ಇನ್ಯಾರು ನನ್ನ ಮದುವೆಯಾದರೂ ಸಹ ಅವರು ನನ್ನ ಮಾನ, ನನ್ನ ಪ್ರಾಣ ಕಾಪಾಡಲಾರರು. ಸರ್ಕಾರ ಅರ್ಧ ಸತ್ತು ಹೋಗಿದೆ. ಸರ್ಕಾರ

ಜನರನ್ನ ಕಾಪಾಡೋ ಕಾಲ ಹೋಗಿದೆ. ಜನ ತಮ್ಮನ್ನ ತಾವೇ ಕಾಪಾಡಿಕೊಳ್ಳಬೇಕು. ಕ್ರಾಂತಿಸೇನೇನ ಮಟ್ಟ ಹಾಕಬೇಕಾದ್ರೆ ಕ್ರಾಂತಿಕೂಟಕ್ಕೆ ಮಾತ್ರ ಸಾಧ್ಯ. ಅಮ್ಮಾ ನೀವು ಒಪ್ಪಿ, ನನಗೆ ಆಶೀರ್ವಾದ ಮಾಡ್ಬೇಕು, ಇದು ನನ್ನ ಆಖೈರು ತೀರ್ಮಾನ.

"ನಿನ್ನ ಮಾವನಿಗೆ ಮೊದಲು ಹೇಳಿ ಒಪ್ಪಿಸು. ಆಮೇಲೆ ನನ್ನ ಆಶೀರ್ವಾದ. ಬಂಧು ಬಳಗ ಕೇಳ್ದೆ ಹ್ಯಾಗಾಗ್ತದೆ?"

"ಮಾವನಿಗೆ ನೀವೇ ಹೇಳ್ಬೇಕು. ನಾನು ಹ್ಯಾಗೆ ಹೇಳಲಿ?"

"ನಿನ್ನ ಅಪ್ಪ ಸಾಯೋ ಬದಲು ನಾನೇ ಮುಂಚೆ ಸತ್ತಿದ್ದರೆ ಈ ಕಷ್ಟಾನೆಲ್ಲಾ ಅನುಭವಿಸಬೇಕಾಗಿರಲಿಲ್ಲ. ನಾ ಬದುಕಿ ನೊಡಬಾರದ್ದು, ಈ ಹಾಳು ಕಣ್ಣಾಗೆ ನೋಡಬೇಕಾಗ್ಯದೆ. ನಿನ್ನ ಹಣೇಲಿ ದೇವರು ಏನು ಬರೆದಾನೋ? ರಾತ್ರಿ ಬಹಳ ಹೊತ್ತಾಯ್ತು. ನಾಳೆ ಯೋಚನೆ ಮಾಡೋಣ. ನೀನು ಇನ್ನೂ ಯೋಚನೆ ಮಾಡು. ಒಂದೇ ಹಟ ಹಿಡೀಬೇಡ" ಎಂದು ನಿಟ್ಟುಸಿರು ಬಿಟ್ಟು ಪದ್ಮಾವತಿ ತನ್ನ ಕೊಠಡಿಗೆ ಹೋದಳು.

ರಾತ್ರಿ ಪದ್ಮಾವತಿಗೆ ಬಹಳ ಹೊತ್ತು ನಿದ್ದೆಯೇ ಬರಲಿಲ್ಲ. ಅನ್ಯ ಜಾತಿಯವನೊಬ್ಬನಿಗೆ, ಅದರಲ್ಲೂ ಶೂದ್ರನೊಬ್ಬನಿಗೆ. ಮಗಳನ್ನು ಕೊಡುವುದು ಅವಳಿಗೆ ಸಮ್ಮತವಿರಲಿಲ್ಲ. ಅಣ್ಣ ಆನಂದಪ್ರಸಾದನು ಪುರುಷೋತ್ತಮಬಾಬುರವರ ಸಂಬಂಧಕ್ಕೆ ಒಪ್ಪುತ್ತಾನೆಂಬ ಭರವಸೆ ಅವಳಿಗಿರಲಿಲ್ಲ. ಚಂದ್ರಹಾಸನೊಡನೆ ಗೌರಿಯ ಮದುವೆಯಾದರೆ, ತನ್ನ ದೂರದ ಮತ್ತು ಹತ್ತಿರದ ಬಂದುಗಳು ಮದುವೆಯನ್ನು ಬಹಿಷ್ಕರಿಸಿದರೂ ಬಹಿಷ್ಕರಿಸಬಹುದೆಂದು ಅನುಮಾನವೂ ಸಹ ಅವಳನ್ನು ಬಾಧಿಸುತ್ತಿತ್ತು. ಆದರೆ ಬಲಾತ್ಕಾರವಾಗಿ ಜಂಬೂನಾಥನೊಡನೆ ಗೌರಿಯ ಮದುವೆ ಮಾಡುವ ಪ್ರಯತ್ನ ಮಾಡಿದರೆ. ಗೌರಿ ಆತ್ಮಹತ್ಯೆ ಮಾಡಿಕೊಳ್ಳಬಹುದೆಂಬ ಭಯವೂ ಅವಳನ್ನು ಬಾಧಿಸುತ್ತಿತ್ತು. ಗಂಡನ ಕಾಲದಲ್ಲಿ ವೈಭವದಿಂದ ಮೆರೆದ ಸುದಿನಗಳನ್ನು ಅಂದಿನ ದುರ್ದಿನಗಳೊಡನೆ ಹೋಲಿಸಿ ದುಃಖಪಟ್ಟಳು.

ಗೌರಿಯ ಅಭಿಪ್ರಾಯವನ್ನು ಅಣ್ಣನ ಮನಸ್ಸಿಗೆ ನೋವಾಗದಂತೆ ಯಾವ ರೀತಿ ಹೇಳಬೇಕೆಂಬುದನ್ನು ಚಿಂತಿಸುತ್ತಿದ್ದಳು. ಗೌರಿ ತನ್ನ ನಿರ್ಧಾರವನ್ನು ಬದಲಾಯಿಸುತ್ತಾಳೆಂಬ ಆಸೆ ಸ್ವಲ್ಪವೂ ಪದ್ಮಾವತಿಗೆ ಇರಲಿಲ್ಲ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಏನು ಮಾಡಬೇಕೆಂದು ಯೋಚಿಸುತ್ತಿರುವಾಗ, ವಕೀಲ್ ಕೃಷ್ಣಕಾಂತನ ನೆನಪಾಯಿತು. ಕೃಷ್ಣಕಾಂತನು ಅವಳ ಕುಟುಂಬದ ಹಿತಚಿಂತಕನಾಗಿದ್ದನು. ಗೌರಿಗೆ ಕೃಷ್ಣಕಾಂತನ ಮೇಲೆ ತುಂಬಾ ಗೌರವವಿತ್ತು. ಕೃಷ್ಣಕಾಂತನು ಆನಂದಪ್ರಸಾದನಗೆ ಚಿರಪರಿಚಯಸ್ಥನಾಗಿದ್ದನು. ಆದ್ದರಿಂದ ಗೌರಿಯೂ, ಆನಂದಪ್ರಸಾದನೂ ಕೃಷ್ಣಕಾಂತನ ಮಾತನ್ನು ಕೇಳಬಹುದೆಂದು ಪದ್ಮಾವತಿ ಭಾವಿಸಿದ್ದಳು. ಕೃಷ್ಣಕಾಂತನು ಸರಿಯಾದ ಮಾರ್ಗದರ್ಶನ ನೀಡಬಲ್ಲನೆಂಬ ನಂಬಿಕೆಯಿಂದ ಅವನನ್ನು ಮರುದಿನ ಬೆಳಿಗ್ಗೆ ಕರೆಯಿಸಬೇಕೆಂದು ನಿರ್ಧಾರ ಮಾಡಿಕೊಂಡು ನಿದ್ದೆ ಹೋದಳು.

ಮರುದಿನ ಬೆಳಿಗ್ಗೆ ಎದ್ದಕೂಡಲೆ, ಪದ್ಮಾವತಿ ಮಗ ರವಿಶಂಕರನನ್ನು ಕರೆದು, ಕೃಷ್ಣಕಾಂತನನ್ನು ಒಂದು ಗಂಟೆಯ ಮಾತಿಗೆ ಬರಹೇಳಬೇಕೆಂದು ಹೇಳಿ ಕಳುಹಿಸಿದಳು. ಕೃಷ್ಣಕಾಂತನು ಕೋರ್ಟು ಕೆಲಸದ ದೆಸೆಯಿಂದ ಬೆಳಿಗ್ಗೆ ಬರಲು ಸಾಧ್ಯವಿಲ್ಲವೆಂದೂ, ಸಂಜೆ ಐದು ಗಂಟೆಯ ಮೇಲೆ ಬರುವುದಾಗಿಯೂ, ರವಿಶಂಕರನ ಹತ್ತಿರ ಹೇಳಿ ಕಳಿಸಿದನು. ಇತ್ತ ಆನಂದಪ್ರಸಾದನು ಪ್ರಾತಃವಿಧಿಗಳನ್ನು ಮುಗಿಸಿ, ಉಪಹಾರಕ್ಕೆ ಕುಳಿತ್ತಿದ್ದಾಗ, ತಂಗಿಯನ್ನು ಕುರಿತು. "ಪದ್ಮಾ, ನಾನು ಒಂಬತ್ತು ಗಂಟೆ ಬಸ್ಸಿಗೆ ಊರಿಗೆ ಹೊರಡಬೇಕಾಗಿದೆ. ತುಂಬಾ ಕೆಲಸವಿದೆ. ಗೌರಿಯನ್ನು ವಿಚಾರಿಸಿದೆಯೇನು?" ಎಂದು ಕೇಳಿದನು.

"ವಿಚಾರಿಸಿದೆ. ಅವಳು ಯಾವುದೂ ಸುಸೂತ್ರ ಜವಾಬು ಹೇಳೋದಿಲ್ಲ. ವಕೀಲ್ ಕೃಷ್ಣಕಾಂತರಿಂದ ಹೇಳಿಸಬೇಕು ಅಂತ ಇದ್ದೀನಿ. ಅವರಿಗೆ ಹೇಳಿಕಳಿಸಿದ್ದೆ, ಬರಬೇಕು ಅಂತ, ಸಂಜೆ ಬರ್ತ್ತಾರಂತೆ. ನೀವು ನಾಳೆ ಬೆಳಿಗ್ಗೆ ಹೋಗಬಹುದು.

"ನೀನೆ ಅವಳನ್ನು ಮುದ್ದು ಮಾಡಿ ಹಾಳುಮಾಡಿದವಳು. ಮಕ್ಕಳನ್ನು ಮುದ್ದು ಮಾಡೋಕೂ ಒಂದು ಲಿಮಿಟ್ ಇರಬೇಕು. ನಾ ನನ್ನ ಮೂರುಜನ ಹೆಣ್ಣುಮಕ್ಕಳ ಮದುವೆ ಮಾಡಿದೆ. ಅವರನ್ನ ಕೇಳಿದ್ನೇನು? ನಾ ಹೇಳಿದೋರನ್ನ, ತೆಪ್ಪಗೆ ಒಪ್ಪಿಕೊಂಡು ಮದುವೆ ಆದ್ರು. ಈಗ ಚೆಂದಾಗಿ ಅವರು ಸಂಸಾರ ಮಾಡ್ತಾ ಇಲ್ಲೇನು?"

"ಅಣ್ಣಾ, ಆಗಿನ ಕಾಲಕ್ಕೂ, ಈಗಿನ ಕಾಲಕ್ಕೂ ಬಹಳ ಫರ್ಕು."

"ಎಂಥಾ ಫರ್ಕು? ನನ್ನ ಮಕ್ಕಳನ್ನ ಮದುವೆ ಮಾಡಿದ್ದೂ ಈಗಿನ ಕಾಲ್ದಾಗೇ ಅಲ್ಲೇನು? ನೀ ಸ್ವಲ್ಪ ಜಬರ್‌ದಸ್ತಾಗಿ ಹೇಳಿದರೆ ಒಪ್ಪದೆ ಏನು ಮಾಡ್ತಾಳೇ? ನೀನೇ ಅಳಜಳುಕು ಮನಸ್ಸು ಮಾಡಿಕೊಂಡಿದ್ರೆ ಅವಳೆಲ್ಲಿ ಒಪ್ಪುತ್ತಾಳೆ?"

"ಉಪದೇಶ ಮಾಡೋಕೆ ಏನು ಅಣ್ಣಾ. ನೀವು ನಾಳೆ ಜಂಬೂಗೆ ಮದುವೆ ಮಾಡ್ತೀರಲ್ಲಾ, ಅವ ಒಪ್ಪದೆ ಇದ್ದ ಹೆಣ್ಣನ್ನು ನೀವು ತರೋಕೆ ಸಾಧ್ಯವೇನು?"

"ಗಂಡು ಹುಡುಗ್ರ ವಿಚಾರನೇ ಬೇರೆ. ನೀ ಏನಾದ್ರೂ ಮಾಡ್ಕೋ ನಂಗೇನಂತೆ."

"ಏನಾದರೂ ಮಾಡೋ ಹಾಗಿದ್ರೆ ನಿಮ್ಮನ್ನ ಯಾಕೆ ಕೇಳಬೇಕಾಗಿತ್ತು. ಕಷ್ಟ ಕಾಲ್ದಾಗ, ನನ್ನ ಅಣ್ಣ ಏನಾದರೂ ದಾರಿ ತೋರ್‍ಸ್ಯಾರು ಅಂತ ಮಾಡದ್ರೆ, ನೀವು ಏನಾದ್ರೂ ಮಾಡ್ಕೋ ಅಂತ ಹೇಳ್ತಾ ಇದ್ದೀರಿ. ಯಜಮಾನ್ರು ಸತ್ತಮೇಲೆ ಹುಡುಗರ ವಿದ್ಯಾಬುದ್ಧಿ ವಿಚಾರದಲ್ಲಿ ನೀವೆಷ್ಟು ಶ್ರದ್ದೆ ವಹಿಸೀರಿ? ನೀವೇ ಯೋಚನೆ ಮಾಡಿ, ನೀವು ಹುಡುಗರಿಗೆ ಸೋದರ ಮಾವ ಅಲ್ಲೇನು?"

"ನನ್ನ ಮ್ಯಾಲೆ ತಪ್ಪು ಹೊರಿಸ್ತೀಯಲ್ಲಾ. ನಾ ಯೇನು ಮಾಡ್ಬೇಕು ಅಂತೀಯಾ?

"ನೀವೇ ಅವಳಿಗೆ ಹೇಳಿ."

"ನನ್ನ ಮಗನ್ನ ಮದುವೆ ಆಗು ಅಂತ ಅವಳನ್ನು ನಾ ಕೇಳ್ಲೇನು?"

"ಒಂದು ವೇಳೆ ಅವಳು ನಿಮ್ಮಗನ್ನ ಒಪ್ಪದೆ ಇದ್ರೆ ಮುಂದೆ ಏನು ಮಾಡೋದು ಅಂತ ಹೇಳ್ತೀರಿ?"

"ಒಪ್ಪದೆ ಇದ್ರೆ ಬಿಡ್ಲಿ. ನಾ ಏನು ಬಲಾತ್ಕಾರ ಮಾಡ್ತೀನೇನು? ಹೊಗ್ಲಿ ಬಿಡು ನಾ ಊರಿಗೆ ಹೋಗ್ತೀನಿ."

"ಅಣ್ಣಾ, ನಿಮಗಿಷ್ಟು ವಯಸ್ಸು ಆಗಿದ್ರೂ ಇಷ್ಟು ಆತುರ ಮಾಡ್ತೀರಲ್ಲಾ, ಸಾಯಂಕಾಲ ಕೃಷ್ಣಕಾಂತ್ ಬರ್ತಾರೆ; ಅವರ ಹತ್ತಿರ ಅವಳಿಗೆ ಹೇಳ್ಸಿ, ನೋಡೋಣ. ನಾಳೆ ಬೆಳಿಗೆ ನೀವು ಹೋಗುವಿರಂತೆ. ವರ್ಷಕ್ಕೊಂದು ಸಾರಿ ತಂಗೀ ಮನೆಗೆ ಬರ್ತೀರಿ. ಇವತ್ತೊಂದು ದಿನ ಇದ್ದರೆ ಜಗತ್ತೇನೂ ತಲೆ ಕೆಳಗಾಗೋದಿಲ್ಲಾ."

ಆನಂದಪ್ರಸಾದನು ನಿರ್ವಾಹವಿಲ್ಲದೆ ತಂಗಿಯ ಮಾತಿಗೆ ಒಪ್ಪಿ ಆ ದಿನ ಇರುವುದಾಗಿ ಒಪ್ಪಿಕೊಂಡನು. ಪದ್ಮಾವತಿ ಉದ್ದೇಶ ಪೂರ್ವಕವಾಗಿಯೇ ಅಣ್ಣನಿಗೆ ಗೌರಿಯ ನಿಲುವೇನೆಂಬುದನ್ನು ತಿಳಿಸಿರಲಿಲ್ಲ. ಚಂದ್ರಹಾಸನ ವಿಚಾರವನ್ನು ಆನಂದಪ್ರಸಾದನಿಗೆ ತಿಳಿಸಿದ್ದರೆ, ಆನಂದಪ್ರಸಾದನು ತಕ್ಷಣ ತನ್ನ ಊರಿಗೆ ಹೊರಡುತ್ತಾನೆಂದು ಪದ್ಮಾವತಿಗೆ ಗೊತ್ತಿತ್ತು. ಆದ್ದರಿಂದಲೇ ಅವನ ವಿಚಾರವನ್ನು ಅವಳು ಅಣ್ಣನಿಗೆ ತಿಳಿಸಿರಲಿಲ್ಲ. ಹಿಂದಿನ ರಾತ್ರಿ ಮಗಳೊಡನೆ ನಡೆಯಿಸಿದ್ದ ಮಾತುಕತೆಗಳಿಂದ ಮಗಳು ಚಂದ್ರಹಾಸನನ್ನು ಬಿಟ್ಟು ಬೇರೆ ಯಾರನ್ನೂ ಒಪ್ಪುವುದಿಲ್ಲವೆಂದು ಅವಳಿಗೆ ಸ್ಪಷ್ಟವಾಗಿ ಗೊತ್ತಾಗಿತ್ತು. ಚಂದ್ರಹಾಸನು ತನ್ನ ಅಳಿಯನಾಗುವುದು ಅವಳಿಗೆ ಬೇಡವಾಗಿದ್ದರೂ, ಮಗಳಿಗಾಗಿ ಒಪ್ಪಿಕೊಳ್ಳುವುದು ಅನಿವಾರ್ಯವಾಗಿ ಪರಿಣಮಿಸಿತ್ತು. ಆದ್ದರಿಂದ ಕೃಷ್ಣಕಾಂತನಿಂದ ಅಣ್ಣನನ್ನು ಒಪ್ಪಿಸಬೇಕೆಂದು ಅವಳು ಯೋಚಿಸುತ್ತಿದ್ದಳು.

ಸಂಜೆ ಐದೂವರೆ ಗಂಟೆಗೆ, ಕೃಷ್ಣಕಾಂತನು ಕೋರ್ಟ್ ಕೆಲಸವನ್ನು ಮುಗಿಸಿಕೊಂಡು. ಪದ್ಮಾವತಿಯ ಮನೆಗೆ ಬಂದನು. ಪದ್ಮಾವತಿಯು, ಕೃಷ್ಣಕಾಂತನೊಡನೆ ಪ್ರತ್ಯೇಕ ಮಾತುಕತೆ ಯಾಡದೆ, ತನ್ನ ಅಣ್ಣನಿದ್ದಲ್ಲಿಗೆ, ನಡುಮನೆಗೆ ಅವನನ್ನು ಕರೆದೊಯ್ದಳು. ಕುಶಲ ಸಂಭಾಷಣೆಯಾದ ಮೇಲೆ ಕೃಷ್ಣಕಾಂತನು ತನ್ನನ್ನು ಬರಮಾಡಿದ್ದು ಏಕೆಂದು ಪ್ರಶ್ನಿಸಿದನು.

"ನಿಮ್ಮ ಮಗಳಿಗೆ ವರ ಗೊತ್ತಾಯ್ತು ಅಂತ ಕೇಳ್ದೆ. ತುಂಬಾ ಸಂತೋಷ. ಹುಡುಕಿ ಹುಡುಕಿ ಕೊನೆಗೆ ಒಳ್ಳೆ ಸಂಬಂಧಾನೆ ಆಯ್ತು. ನನ್ನ ಮಗಳಿಗೆ ಎಲ್ಲಾರೂ ಒಂದು ವರ ಗೊತ್ತು ಮಾಡಿಕೊಡಿ ಅಂತ ನಿಮ್ಮನ್ನ ಕರೆಸಿದ್ದು" ಎಂದು ಪದ್ಮಾವತಿ ನಕ್ಕಳು.

"ವರ ಇಂತಹ ಕಡೆ ಇದ್ದಾನೆ ಅಂತ ಹೇಳಿದರೆ ನಾ ಶಿರಸಾವಹಿಸಿ ಪ್ರಯತ್ನ ಮಾಡ್ತೇನೆ."

"ನನ್ನ ತಂಗಿ ರೂಪ ಅವಳ ಗಂಡನ ದೂರದ ನೆಂಟ ಒಬ್ಬನನ್ನ ಗೊತ್ತು ಮಾಡಿದ್ದಳಂತೆ. ಹುಡುಗ ಯೋಗ್ಯ ಅಂತ ಬರ್ದ್ದಾಳೆ. ಸರ್ಕಾರಿ ನೌಕರೀಲಿ ಇದ್ದಾನಂತೆ. ಮುನ್ನೂರು ರೂಪಾಯಿ ಸಂಬಳ ಬರ್ತದಂತೆ. ವರದಕ್ಷಿಣೇನೂ ಕಡಿಮೆ, ಹತ್ತು ಸಾವಿರ ರೂಪಾಯಿ ಕೇಳ್ತಾನಂತೆ. ನೀವು ನಮ್ಮಣ್ಣನ ಮಗ ಜಂಬೂನಾಥನ್ನ ನೋಡಿದ್ದೀರಲ್ಲ? ಅವನೂ ಗೌರೀನ ಮದುವೆ ಆಗ್ತೀನಿ ಅಂತ ಹೇಳ್ತಾನಂತೆ. ನಮ್ಮಣ್ಣನಿಗೂ ಇಷ್ಟ ಇದೆ. ನಂಗೂ ಇಷ್ಟ" ಎಂದು ಹೇಳುತ್ತಾ, ತನ್ನ ಅಣ್ಣನ ಕಡೆ ನೋಡಿದಳು.

"ನೀವು ಗೌರಿ ಹತ್ತಿರ ಮಾತಾಡಿದ್ದೀರೇನು? ಎಂದು ಕೃಷ್ಣಕಾಂತ್ ಪದ್ಮಾವತಿಯನ್ನು ಕೇಳಿದನು.

"ಮಾತಾಡ್ದೆ. ಯಾವುದೂ ಸುಸೂತ್ರ ಹೇಳೋದಿಲ್ಲ. ಅದಕ್ಕೇ ನಿಮ್ಮನ್ನು ಕರೆಸಿದ್ದು ನೀವೇ ಅವಳಿಗೆ ಹೇಳ್ಬೇಕು."

"ನಿಮ್ಮ ಹತ್ತಿರಾನೆ ಸುಸೂತ್ರ ಮಾತಾಡದೆ ಇದ್ದವಳು ನನ್ನ ಹತ್ತಿರ ಮಾತಾಡ್ತಾಳೆ ಅಂತ ಏನು ಗ್ಯಾರಂಟಿ?"

"ನಾನು ತಾಯಿ ಅಂತ ಅವಳಿಗೆ ತಾತ್ಸಾರ. ನೀವು ಮೂರನೆಯವರು. ನಿಮ್ಮ ಮಾತಿಗೆ ಅವಳು ಬೆಲೆ ಕೊಟ್ಟೇಕೊಡ್ತಾಳೆ. ಸಾಧಕ ಬಾಧಕ ಎಲ್ಲಾ ಅವಳಿಗೆ ವಿವರಿಸಿ. ಇನ್ನೆಲ್ಲೂ ವರ ಸಿಕ್ಕುವುದಿಲ್ಲಾ ಅಂತ ಹೇಳಿ."

"ಆಗಲಿ ಅಮ್ಮಾ ಹೇಳಿನೋಡ್ತೀನಿ. ಗೌರಿ ಎಲ್ಲಿದ್ದಾಳೆ ಈಗ?"

"ಅವಳು ರೂಮಾಗೆ ಇದ್ದಾಳೆ. ಬನ್ನಿ ಹೋಗೋಣ" ಎಂದು ಪದ್ಮಾವತಿ ಕೃಷ್ಣಕಾಂತನನ್ನು ಗೌರಿಯ ಕೊಠಡಿಗೆ ಕರೆದೊಯ್ದು, ಗೌರಿಯನ್ನು ಕುರಿತು, "ಗೌರೀ, ಕೃಷ್ಣಕಾಂತರು ಬಂದಿದ್ದಾರೆ. ಅವರು ನಮಗೆ ಬೇಕಾದವರು. ನೀ ಹೇಳಿದ್ದ ಸಮಾಚಾರ ಎಲ್ಲಾ ಅವರೀಗೆ ತಿಳಿಸೀನಿ. ಅವರು ನಿನ್ನ ತಂದೆಯಿದ್ದ ಹಾಗೆ. ಅವರ ಹತ್ತಿರ ಏನೂ ಗುಟ್ಟು ಮಾಡದೆ ಎಲ್ಲಾ ಹೇಳಿಬಿಡು. ಅವರು ಹೇಳಿದ್ದಕ್ಕೆ ನಾವಿಬ್ಬರೂ ಒಪ್ಪಿಕೊಳ್ಳೋಣ" ಎಂದು ಹೇಳಿದಳು.

"ನಾ ಹೇಳೋದನ್ನೆಲ್ಲಾ ನಿನ್ನೆ ನಿಮ್ಮ ಹತ್ತಿರ ಹೇಳಿದ್ದೀನಿ."

"ಅದನ್ನೇ ಅವರ ಹತ್ತಿರ ಹೇಳಿಬಿಡು. ಅವರ ತೀರ್ಮಾನಕ್ಕೆ ನಂದು ಅಡ್ಡಿಯಿಲ್ಲ" ಎಂದು ಹೇಳಿ ಪದ್ಮಾವತಿಯು ಹೊರಟುಹೋಗಿ ನಡುಮನೆಯಲ್ಲಿ ಅಣ್ಣನ ಜೊತೆಯಲ್ಲಿ ಮಾತನಾಡುತ್ತಾ ಕುಳಿತುಕೊಂಡಳು. ಪದ್ಮಾವತಿಗೆ ಉಭಯಸಂಕಟವಾಗಿತ್ತು. ಅವಳು ಅಣ್ಣನ ಮನಸ್ಸನ್ನೂ ನೋಯಿಸುವಂತಿರಲಿಲ್ಲ; ಮಗಳ ಇಷ್ಟಕ್ಕೆ ವಿರುದ್ಧವಾಗಿ ಅವಳೊಪ್ಪದಿದ್ದವನಿಗೆ ಮದುವೆ ಮಾಡಿಕೊಡಲೂ ಸಿದ್ಧಳಿರಲಿಲ್ಲ. ಜಂಬೂನಾಥನಿಗೆ ಮಗಳನ್ನು ಕೊಡಲು ತನ್ನ ಅಡ್ಡಿಯಿಲ್ಲವೆಂಬುದನ್ನು ತೋರ್ಪಡಿಸುವ ಸಲುವಾಗಿ ಕೃಷ್ಣಕಾಂತನ ಮೇಲೆ ಜವಾಬ್ದಾರಿಯನ್ನು ಹೊರೆಸಿದಳು.

ಕೃಷ್ಣಕಾಂತನು ಚಂದ್ರಹಾಸನ ಮತ್ತು ಗೌರಿಯ ಹಿತಚಿಂತಕನಾಗಿದ್ದನು. ಪುರುಷೋತ್ತಮಬಾಬುರವರಿಗೆ ಕೃಷ್ಣಕಾಂತನ ಮೇಲೆ ಅಪರಿಮಿತ ವಾತ್ಸಲ್ಯ. ಈ ಕಾರಣದಿಂದ ಕೃಷ್ಣಕಾಂತನಿಂದ ತನಗೆ ನ್ಯಾಯ ದೊರಕುತ್ತದೆಯೆಂಬ ಭರವಸೆಯಿಂದ, ಗೌರಿ ತನ್ನ ಮನೋಭೀಷ್ಟವನ್ನು ಮರೆಮಾಚದೆ ಕೃಷ್ಣಕಾಂತನಿಗೆ ತಿಳಿಸಿದಳು. ಗೌರಿಯು ತಾನು ಚಂದ್ರಹಾಸನನ್ನು ಬಿಟ್ಟು ಇನ್ಯಾರನ್ನೂ ಮದುವೆಯಾಗುವುದಿಲ್ಲವೆಂದು ಕೃಷ್ಣಕಾಂತನಿಗೆ ಸ್ಪಷ್ಟವಾಗಿ ತಿಳಿಸಿದಳು. ಅವಳ ಮಾತುಗಳನ್ನು ತಾಳ್ಮೆಯಿಂದ ಕೇಳಿದ ಕೃಷ್ಣಕಾಂತನು, "ಗೌರೀ, ನಿನ್ನ ಅಭೀಷ್ಟ ಯೋಗ್ಯವಾದುದು. ಚಂದ್ರಹಾಸನೂ ಯೋಗ್ಯ. ಈಗಿನ ಕಾಲದಲ್ಲಿ ಅಂತರ್ಜಾತೀಯ ವಿವಾಹ ಸ್ವಾಗತಾರ್ಹ. ಆದರೆ ನಿನ್ನ ಮತ್ತು

ಚಂದ್ರಹಾಸನ ಜಾತಿ ಬೇರೆಯಾದುದರಿಂದ ನಿಮ್ಮಿಬ್ಬರ ಬಂಧುಬಾಂಧವರು ಒಪ್ಪಬೇಕು. ಮುಖ್ಯವಾಗಿ ಆ ಕಡೆ ಪುರುಷೋತ್ತಬಾಬುರವರೂ ಒಪ್ಪಬೇಕು; ಈ ಕಡೆ ನಿಮ್ಮ ತಾಯಿ ಮತ್ತು ಸೋದರಮಾವ ಒಪ್ಪಬೇಕು" ಎಂದು ನುಡಿದನು.

"ಅವರನ್ನು ಒಪ್ಪಿಸುವ ಭಾರವನ್ನು ನೀವೇ ಹೊರಬೇಕು. ನಮ್ಮಿಬ್ಬರ ಜಾತಿ ಒಂದಾಗದೇ ಇದ್ದರೂ, ರೀತಿ ನೀತಿಗಳು ಒಂದೇ ಆಗಿವೆ. ನೀವು ತಿಳಿದವರು. ವಿವಾಹಕ್ಕೆ ಅನುರಾಗ ಮುಖ್ಯವೇ ಹೊರತು ಜಾತಿಯಲ್ಲ. ನಾವು ಉಭಯ ಕುಟುಂಬಗಳ ಹಿತಚಿಂತಕರು. ನೀವು ಮನಸ್ಸು ಮಾಡಿದರೆ ನನ್ನ ಮದುವೆ ಸರಾಗವಾಗಿ ಆಗುತ್ತದೆ."

"ಚಂದ್ರಹಾಸನು ಒಪ್ಪಿದ್ದಾನೇನು?"

"ಅವರೊಪ್ಪದಿದ್ದರೆ ನಾನು ಈ ಮಾತನ್ನು ನಿಮ್ಮ ಹತ್ತಿರ ಹೇಳುವ ಪ್ರಮೇಯವೇ ಇರುತ್ತಿರಲಿಲ್ಲ. ಅವರೂ ಒಪ್ಪಿದ್ದಾರೆ; ನಾನೂ ಒಪ್ಪಿದ್ದೇನೆ. ಇನ್ನು ದೊಡ್ಡವರ ಆಶೀರ್ವಾದ ಮಾತ್ರ ಬೇಕು."

"ನೀವಿಬ್ಬರೂ ಪರಸ್ಪರ ಪ್ರೀತಿಸುವುದು ಬಾಬು ಅವರಿಗೆ ಗೊತ್ತಿದೆಯೇನು?"

"ಗೊತ್ತಿದ್ದ ಹಾಗೆ ತೋರಲಿಲ್ಲ. ರುಮಾದೇವಿಯವರು ಬದುಕಿದ್ದಾಗ ಅವರು ಚಂದ್ರಹಾಸರೊಡನೆ ಕೆಲವು ಹೆಣ್ಣುಗಳ ವಿಚಾರವನ್ನು ಪ್ರಸ್ತಾಪಿಸಿದ್ದರಂತೆ. ಈ ವಿಚಾರವನ್ನು ಚಂದ್ರಹಾಸ ನನಗೆ ಹೇಳಿದ್ದರು. ಇಷ್ಟು ಮಾತ್ರ ನನಗೆ ಗೊತ್ತು."

ಗೌರಿಯ ಮಾತನ್ನು ಕೇಳಿದ ನಂತರ, ಆಕೆ ಚಂದ್ರಹಾಸನನ್ನು ಬಿಟ್ಟು ಇನ್ನಾರನ್ನೂ ಮದುವೆಯಾಗುವುದಿಲ್ಲವೆಂದು ಕೃಷ್ಣಕಾಂತನಿಗೆ ಮನದಟ್ಟಾಯಿತು. ಪುರುಷೋತ್ತಮ ಬಾಬುರವರು ಜಾತ್ಯತೀತ ಭಾವನೆಯುಳ್ಳವರಾದ್ದರಿಂದ ಅವರನ್ನು ಒಪ್ಪಿಸುವುದು ಸುಲಭವೆಂದು ಕೃಷ್ಣಕಾಂತನು ಭಾವಿಸಿದ್ದನು. ಆದರೆ ಪದ್ಮಾವತಿಯನ್ನೂ, ಆಕೆಯ ಅಣ್ಣ ಆನಂದಪ್ರಸಾದನನ್ನೂ ಒಪ್ಪಿಸುವುದು ಅವನಿಗೆ ಕಠಿಣವೆನಿಸಿತ್ತು. ಚಂದ್ರಹಾಸನನ್ನೂ, ಗೌರಿಯನ್ನೂ ಕೃಷ್ಣಕಾಂತನು ಚಿಕ್ಕಂದಿನಿಂದ ನೋಡಿದ್ದವನು. ಅವರೀರ್ವರ ಮೇಲೆ ಅವನಿಗೆ ತುಂಬ ವಾತ್ಸಲ್ಯವಿತ್ತು. ತನ್ನ ಕೈಯಲ್ಲಾದ ಎಲ್ಲಾ ಪ್ರಯತ್ನವನ್ನು ಮಾಡಿ, ಅವರೀರ್ವರೂ ಸತಿಪತಿಗಳಾಗುವಂತೆ ಮಾಡಬೇಕೆಂಬ ಸಂಕಲ್ಪ ಮಾಡಿಕೊಂಡು, ನಡುಮನೆಗೆ ಹೋದನು.

ಅವನನ್ನು ನೋಡಿದ ಕೂಡಲೇ ಪದ್ಮಾವತಿ, ಬಹಳ ಕುತೂಹಲದಿಂದ "ಏನಾಯಿತು?" ಎಂದು ಪ್ರಶ್ನಿಸಿದಳು. ಕೃಷ್ಣಕಾಂತನು ಆನಂದಪ್ರಸಾದನ ಪಕ್ಕದಲ್ಲಿ ಸೋಫಾದ ಮೇಲೆ ಕುಳಿತು, "ನಾನು ಗೌರೀಗೆ ಹೇಳಬೇಕಾದ್ದೆಲ್ಲವನ್ನೂ ಹೇಳಿದ್ದೇನೆ. ಅವಳು ನೀವು ಹೇಳಿದ ಇಬ್ಬರು ವರಗಳನ್ನೂ ಒಪ್ಪುವುದಿಲ್ಲ. ಆ ವಿಚಾರದಲ್ಲಿ ಅವಳನ್ನು ಬಲಾತ್ಕಾರ ಮಾಡುವುದು ಯೋಗ್ಯವಲ್ಲ. ಅವಳೊಪ್ಪಿದವರಿಗೆ ಅವಳನ್ನು ಮದುವೆ ಮಾಡುವುದು ಕ್ಷೇಮವೆಂದು ನನ್ನ ಅಭಿಪ್ರಾಯ" ಎಂದು ಹೇಳಿದನು.

"ಅವಳು ಒಪ್ಪಿದವರು ಅವಳನ್ನು ಒಪ್ಪಬೇಕಲ್ಲ" ಎಂದು ಆನಂದಪ್ರಸಾದ್ ವ್ಯಂಗ್ಯವಾಗಿ ನುಡಿದನು.

"ಅವಳೂ, ಅವಳು ಒಪ್ಪಿದವನೂ ಒಪ್ಪಿಕೊಂಡರೆ ನಿಮ್ಮ ಅಡ್ಡಿಯಿಲ್ಲವಲ್ಲ" ಎಂದು ಕೃಷ್ಣಕಾಂತ್ ಆನಂದಪ್ರಸಾದನ ಮುಖವನ್ನು ನೋಡಿದನು.

"ಹಾಗಾದರೆ ಚಿಂತೆನೇ ಇಲ್ಲವಲ್ಲ. ನಂಗೇನಂತೆ ನನ್ನ ಮಗನಿಗೆ ಬೇರೆ ಕಡೆ ಹೆಣ್ಣು ಸಿಕ್ಕೋಲ್ವೇನು? ಅವನಿಗೆ ಸಾವಿರಗಟ್ಟಲೆ ವರದಕ್ಷಿಣೆ ಕೊಡೋಕೆ ಜನ ತಯಾರಾಗಿದ್ದಾರೆ."

"ನೀವು ಅಷ್ಟು ಒಪ್ಪಿಗೆ ಕೊಟ್ಟುಬಿಟ್ಟರೆ ಸಮಸ್ಯೇನೆ ಬಗೆಹರಿಯುತ್ತೆ."

"ಕೃಷ್ಣಕಾಂತ, ನೀವು ಬಹಳ ಸುಲಭವಾಗಿ ಹೇಳ್ತಾ ಇದ್ದೀರಿ. ವರದಕ್ಷಿಣೆ ಕೊಡಬೇಕಲ್ಲಾ. ಅದಕ್ಕೇನು ಮಾಡ್ತೀರಾ? ಪದ್ಮಾ ಹತ್ರಾನೂ ದುಡ್ಡಿಲ್ಲ; ನನ್ನ ಹತ್ತಿರಾನೂ ದುಡ್ಡಿಲ್ಲ. ನೀವು ಕೊಡ್ತೀರೇನು?"

"ವರದಕ್ಷಿಣೆಯಿಲ್ದೆ ಮದುವೆ ಆಗೋರು ಸಿಕ್ರೆ ನಿಮ್ಮ ಅಡ್ಡಿಯಿಲ್ಲವಲ್ಲ?"

"ಓಹೋ, ತುಂಬ ಸಂತೋಷ. ನಮಗೂ ಅದೇ ಬೇಕಾಗಿದ್ದು."

ಆನಂದಪ್ರಸಾದ ಮತ್ತು ಕೃಷ್ಣಕಾಂತನ ಸಂಭಾಷಣೆಯನ್ನು ಕೇಳುತ್ತಿದ್ದ ಪದ್ಮಾವತಿಗೆ ಕೃಷ್ಣಕಾಂತನ ಮನಸ್ಸಿನಲ್ಲಿ ಏನಿತ್ತೆಂಬುದು ಸೂಕ್ಷ್ಮವಾಗಿ ಆಗಲೇ ಗೊತ್ತಾಗಿತ್ತು. ಕೃಷ್ಣಕಾಂತನು ತನ್ನ ವಕೀಲಿ ಚಾತುರ್ಯದ ಚತುರ್ಬಂಧನಕ್ಕೆ ಆನಂದಪ್ರಸಾದನನ್ನು ಸಿಕ್ಕಿಸುತ್ತಿದ್ದಾನೆಂದು ಅವಳಿಗೆ ಸೂಕ್ಷ್ಮವಾಗಿ ಹೊಳೆಯಿತು.

ಕೃಷ್ಣಕಾಂತನು ಮತ್ತೊಮ್ಮೆ ಆನಂದಪ್ರಸಾದನ ಕಡೆಗೆ ನೋಡಿ, "ವರದಕ್ಷಿಣೆಯಿಲ್ಲದಿದ್ದರೆ ಗೌರಿ ಒಪ್ಪಿದ ವರನಿಗೆ ಮದುವೆ ಮಾಡಿಕೊಡಲು ನಿಮ್ಮ ಅಭ್ಯಂತರ ಇಲ್ಲ ತಾನೇ" ಎಂದು ಪ್ರಶ್ನಿಸಿದನು.

"ನನ್ನ ಅಭ್ಯಂತರವೇನೂ ಇಲ್ಲ" ಎಂದು ಆನಂದಪ್ರಸಾದ್ ಹೇಳಿದನು.

"ನಿಮ್ಮದೂ ಅಡ್ಡಿಯಿಲ್ಲ ತಾನೆ?" ಎಂದು ಕೃಷ್ಣಕಾಂತನು ಪದ್ಮಾವತಿಯ ಕಡೆ ತಿರುಗಿ ಅವಳನ್ನು ಕೇಳಿದನು.

"ಅಣ್ಣ ಒಪ್ಪಿದರೆ ನಾನೂ ಒಪ್ಪಿದ ಹಾಗೆ" ಎಂದು ಪದ್ಮಾವತಿ ಮೆತ್ತಗೆ ಸಂಕೋಚದಿಂದ ನುಡಿದಳು.

"ಕೃಷ್ಣಕಾಂತ್, ಯಾರಾದ್ರೂ ವರಾನ ನೀವು ಗೊತ್ತು ಮಾಡಿದ್ದೀರೇನು?" ಎಂದು ಆನಂದಪ್ರಸಾದ್ ಕೃಷ್ಣಕಾಂತನನ್ನು ಕೇಳಿದನು.

"ವರನನ್ನು ಗೊತ್ತು ಮಾಡಿಯಾಗಿದೆ, ವಧುವೂ ಒಪ್ಪಿದ್ದಾಳೆ. ನಿಮ್ಮಿಬ್ಬರ ಆಶೀರ್ವಾದ ಬೇಕು" ಎಂದು ಕೃಷ್ಣಕಾಂತ್ ನುಡಿದನು.

"ಹಾಗಾದರೆ ವರ ಯಾರು?" ಎಂದು ಬೆಚ್ಚಿಬಿದ್ದವನಂತೆ ಆನಂದಪ್ರಸಾದ್ ಕೇಳಿದನು.

"ನಿಮಗಿಬ್ಬರಿಗೂ ಗೊತ್ತಿದ್ದವನೇ ಚಂದ್ರಹಾಸ."

"ಏನು, ಚಂದ್ರಹಾಸ!"

"ನಿಮಗೆ ಇಷ್ಟೊಂದು ಆಶ್ಚರ್ಯವೇಕೆ ಆನಂದಪ್ರಸಾದರವರೇ?"

"ಆಶ್ಚರ್ಯವಲ್ಲದೆ ಮತ್ತೇನು? ಮೊದಲನೆಯದಾಗಿ ಚಂದ್ರಹಾಸ ನಮ್ಮ ಜಾತಿಯವನಲ್ಲ. ಎರಡನೆಯದಾಗಿ ಚಂದ್ರಹಾಸನಿಂದ ಈಗ ಆಗಿರತಕ್ಕ ಹಗರಣವೇ ಸಾಕು."

"ಈಗಿನ ಕಾಲದಲ್ಲಿ ಜಾತಿ ವಿವಾಹಕ್ಕೆ ಅಡ್ಡಿಯಾಗಬಾರದು."

"ಈಗಿನ ಕಾಲದಲ್ಲಿ ಜಾತಿಯನ್ನು ಬಿಟ್ಟವರ್‍ಯಾರು ಹೇಳಿ ಕೃಷ್ಣಕಾಂತ್? ನೀವು ಬಿಟ್ಟಿದ್ದೀರೇನು?"

"ನಾನು ಬಿಡಲು ಸಿದ್ಧನಾಗಿದ್ದೇನೆ. ನೀವು ಸಿದ್ಧರಾಗಬೇಕು."

ಕೃಷ್ಣಕಾಂತ್ ನೀವು ಏನೇ ಹೇಳಿದರೂ ನಮ್ಮ ಬ್ರಾಹ್ಮಣರ ಹೆಣ್ಣನ್ನು ಶೂದ್ರರಿಗೆ ಕೊಡೋಕೆ ಮನಸ್ಸು ಒಪ್ಪೋದಿಲ್ಲ."

"ನಿಮ್ಮಂತಹ ಕೆಲವರು ಬ್ರಾಹ್ಮಣರ ವಿಚಾರಧಾರೆ ಬಹು ವಿಚಿತ್ರ. ನಿಮ್ಮ ಪೂರ್ವಿಕರೇ ಜಾತಿಗಳನ್ನು ನಿರ್ಮಾಣ ಮಾಡಿದವರು. ಈಗ ಜಾತಿಗೆ ಬಲವಾಗಿ ಅಂಟಿಕೊಂಡಿರುವವರೂ ನೀವೇ. ಇತರರನ್ನು ಜಾತಿವಾದಿಗಳೆಂದು ಕರೆಯುತ್ತಿರುವವರೂ ನೀವೇ. ನಿಮ್ಮ ವಿಚಾರಧಾರೆ ಬದಲಾವಣೆ ಆಗಬೇಕಾದ್ದು ಬಹಳ ಅಗತ್ಯ. ಪುರುಷೋತ್ತಮ ಬಾಬುರವರಂತಹ ಸತ್ಯವಂತ. ಸುಸಂಸ್ಕೃತ ವ್ಯಕ್ತಿಯನ್ನು ಈ ಪ್ರದೇಶದಲ್ಲಿರುವ ನಿಮ್ಮ ಬ್ರಾಹ್ಮಣ ಸಮಾಜದಲ್ಲಿ ಒಬ್ಬನನ್ನು ತೋರಿಸಿ?"

"ಪುರುಷೋತ್ತಮಬಾಬು ಅವರು ಸತ್ಯವಂತರೂ ನಿಜ; ಸುಸಂಸ್ಕೃತರೂ ನಿಜ. ಆದರೆ...."

"ಆದರೆ ಏನು?"

"ಏನೂ ಇಲ್ಲ. ಅವರ ನಡವಳಿಕೆಗೂ, ನಮ್ಮ ನಡವಳಿಕೆಗೂ ಹೊಂದಬೇಕಲ್ಲ."

ಮಿಸ್ಟರ್ ಆನಂದಪ್ರಸಾದ್, ಮದುವೆ ಆಗುವವರು ನೀವಲ್ಲ. ಮದುವೆ ಆಗೋ ಗಂಡು ಹೆಣ್ಣು ಹೊಂದಿಕೊಂಡರೆ ನಿಮಗೇನು ತೊಂದ್ರೆ?"

"ಮಿಸ್ಟರ್ ಕೃಷ್ಣಕಾಂತ್, ಚಂದ್ರಹಾಸ ಗೌರೀನ ಮದುವೆ ಆದರೆ ಶಂಕರ ಅವನ್ನ ಕೊಲೆ ಮಾಡ್ದೆ ಬಿಡ್ತಾನೇನು? ನೋಡ್ತಾ ನೋಡ್ತಾ ಹ್ಯಾಗೆ ನಮ್ಮ ಹುಡ್ಗೀನ ಚಂದ್ರಹಾಸನಿಗೆ ಕೊಡೋದು?"

"ನಿಮ್ಮಗ ಜಂಬೂನಾಥ್ ಮದುವೆ ಆದರೆ ಅವನ್ನ ಶಂಕ್ರ ಸುಮ್ನೆ ಬಿಡ್ತಾನೇನು? ಅದನ್ನು ಯೋಚನೆ ಮಾಡಿದ್ದೀರೇನು ನೀವು? ಚಂದ್ರಹಾಸನಿಗಾದರೂ ಬಲಿಷ್ಟವಾದ ಕ್ರಾಂತಿಕೂಟದ ಬೆಂಬಲ ಇದೆ; ಜನ ಬೆಂಬಲ ಇದೆ. ನಿಮಗ್ಯಾರ ಬೆಂಬಲ ಇದೆ. ಹೇಳಿ ನೋಡೋಣ?"

ಕೃಷ್ಣಕಾಂತನು ಕೊನೆಯಲ್ಲಿ ಹೇಳಿದ ಮಾತು ಆನಂದಪ್ರಸಾದನ ಮೇಲೆ ಬಹಳ ಪರಿಣಾಮವನ್ನುಂಟುಮಾಡಿತು. ಆನಂದಪ್ರಸಾದನು ಮಗನಿಗೆ ಗೌರಿಯನ್ನು ಮದುವೆ ಮಾಡಬೇಕೆಂಬ ತರದೂದಿನಲ್ಲಿ ಕ್ರಾಂತಿಸೇನೆಯಿಂದ ಒದಗಬಹುದಾದ ಅಪಾಯವನ್ನೇ ಯೋಚಿಸಿರಲಿಲ್ಲ.

"ನೀವು ಹೇಳೋದು ನಿಜವೇ ಅನ್ನಿ. ಗೌರೀನ ಯಾರು ಮದುವೆ ಆದರೂ ಅವರ ಮೇಲೆ ಶಂಕರನ ಕಣ್ಣು ಇದ್ದೇ ಇರ್ತದೆ. ನಮ್ಮ ಜಂಬೂಗೆ ಗೌರೀನ ಮದುವೆ ಆಗಬೇಕು ಅಂತಾ ತುಂಬಾ ಇಷ್ಟ ಇತ್ತು. ಮದುವೆ ಆದ್ರೆ ಅಪಾಯಾನೂ ಇದೆ. ನೀವು ಹೇಳೋ ಹಾಗೆ, ಹೋಗ್ಲಿ ಬಿಡಿ. ಗೌರಿ ಇಷ್ಟ ಇದ್ದ ಹಾಗೆ ಆಗ್ಲಿ. ನೀ ಏನು ಹೇಳ್ತೀಯಾ ಪದ್ಮಾ?" ಎಂದು ಆನಂದಪ್ರಸಾದ್ ತಂಗಿ ಕಡೆಗೆ ನೋಡಿದನು.

"ನಾ ಯೇನು ಹೇಳಲಿ ಅಣ್ಣಾ? ನೀವಿಬ್ಬರೂ ಹ್ಯಾಗೆ ಹೇಳ್ತೀರೋ ಹಾಗೇ ನಾನು. ಅವಳ ಹಣೇಲಿ ಏನು ಬರ್ದಿದಿಯೋ? ನನ್ನ ದುರಾದೃಷ್ಟ. ಏನು ಮಾಡೋಕೆ ಆಗ್ತದೆ?" ಎಂದು ಪದ್ಮಾವತಿ ನಿಟ್ಟುಸಿರುಬಿಟ್ಟಳು.

ಅವರೀರ್ವರೂ ಗೌರಿ ಮನಃಪೂರ್ವಕವಾಗಿ ಆಶೀರ್ವಾದ ಮಾಡಬೇಕೆಂದು ಕೃಷ್ಣಕಾಂತನು ಆನಂದಪ್ರಸಾದನಿಗೂ, ಪದ್ಮಾವತಿಗೂ ಮನವಿ ಮಾಡಿದನು. ಎಲ್ಲಾ ದೃಷ್ಟಿಯಿಂದಲೂ ಗೌರಿ ಚಂದ್ರಹಾಸನನ್ನು ವರಿಸುವುದು ವಿಹಿತವೆಂದು ಅವರೀರ್ವರಿಗೂ ಮನದಟ್ಟಾಗುವಂತೆ ಮತ್ತೊಮ್ಮೆ ವಿವರಿಸಿದನು. ಅನಂತರ, ಹೊರಡುವ ಮುನ್ನ ಕೃಷ್ಣಕಾಂತನು ಗೌರಿಯ ಕೊಠಡಿಗೆ ಹೋಗಿ, "ಗೌರೀ, ನಿನ್ನ ಅಭೀಷ್ಟ ಈಡೇರುತ್ತದೆ, ಹೆದರಬೇಡ. ನಾಳೆ ಅನಿಲಪುರಕ್ಕೆ ಹೋಗಿ, ನಿಮ್ಮ ಮಾವನವರನ್ನು ನೋಡುತ್ತೇನೆ. ನಿನಗೆ ಶುಭವಾಗಲಿ" ಎಂದು ಹೇಳಿದನು. ಗೌರಿ ಕೃತಜ್ಞತಾಪೂರ್ವಕವಾಗಿ ಕೃಷ್ಣಕಾಂತನ ಕಾಲನ್ನು ಮುಟ್ಟಿ ನಮಸ್ಕರಿಸಿದಳು. ಕೃಷ್ಣಕಾಂತನು ಆನಂದಪ್ರಸಾದನ ಮತ್ತು ಪದ್ಮಾವತಿಯ ಅನುಮತಿಯನ್ನು ಪಡೆದು ಹೊರಟು ಹೋದನು

ರುಮಾದೇವಿಯವರು ಬದುಕಿದ್ದಾಗಲೇ, ಚಂದ್ರಹಾಸನಿಗೆ ಮದುವೆ ಮಾಡಬೇಕೆಂಬ ಆಶೆಯಿಂದ, ಕೆಲವು ಕಡೆ ಹೆಣ್ಣುಗಳನ್ನು ನೋಡಿದ್ದರು. ಹೆಣ್ಣು ಕೊಡುವವರು ಸಿದ್ಧರಾಗಿದ್ದರು. ಆದರೆ ಚಂದ್ರಹಾಸನು ಸಿದ್ಧನಾಗಿರಲಿಲ್ಲ. ಈಗಲೇ ತನಗೆ ಮದುವೆ ಬೇಡವೆಂದು ತಾಯಿಗೆ ಸಮಾಧಾನ ಹೇಳುತ್ತಿದ್ದನು. ಗೌರಿಯನ್ನು ಪ್ರೀತಿಸುತ್ತಿದ್ದ ವಿಚಾರವನ್ನು ತಂದೆಗಾಗಲೀ ತಾಯಿಗಾಗಲೀ ಅವನು ಹೇಳಿರಲಿಲ್ಲ. ತಂದೆಯ ವಿಶಾಲ ಮನೋಭಾವ ಅವನಿಗೆ ಚೆನ್ನಾಗಿ ಅರ್ಥವಾಗಿತ್ತು. ಗೌರಿಯ ಮದುವೆಗೆ ಅವರು ಅಡ್ಡಿ ಬರಲಾರರೆಂದು ಅವನು ಭಾವಿಸಿದ್ದನು. ತಾಯಿ ಸ್ವಲ್ಪ ಹಳೆಯ ಕಾಲದ ಮನೋಧರ್ಮದವಳಾಗಿದ್ದರಿಂದ ಸಮಯವನ್ನು ಸಾಧಿಸಿ ಅವಳನ್ನು ಒಪ್ಪಿಸಬೇಕೆಂದು ಯೋಚಿಸಿದ್ದನು. ಈ ಮಧ್ಯೆ ದುರ್ದೈವವಶಾತ್ ತಾಯಿ ಸತ್ತು ಹೋಗಿದ್ದರಿಂದ, ತಂದೆಯನ್ನು ಒಪ್ಪಿಸುವುದು ಒಂದು ದೊಡ್ಡ ಸಮಸ್ಯೆಯೇನೂ ಆಗಿರಲಿಲ್ಲ. ಆದರೆ ಗೌರಿಯ ತಾಯಿಯು ಒಪ್ಪಿದ ಹೊರತು ತಂದೆಯನ್ನು ಕೇಳುವುದರಿಂದ ಯಾವ ಪ್ರಯೋಜನವೂ ಇಲ್ಲವೆಂದು ಸುಮ್ಮನಿದ್ದನು.

ರುಮಾದೇವಿಯವರ ಮರಣಾನಂತರ, ಗೃಹಕೃತ್ಯಾದಿ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಪುರುಷೋತ್ತಮಬಾಬು ಅವರ ಮನೆಯಲ್ಲಿ ಹೆಂಗಸರ್ಯಾರೂ ಇರಲಿಲ್ಲ. ಬಾಬು ಅವರೇ ಪ್ರತಿಯೊಂದು ವಿಚಾರಕ್ಕೂ ತಲೆ ಹಾಕಬೇಕಿತ್ತು. ಒಬ್ಬ ಅಡುಗೆಯವನನ್ನು

ನೇಮಕ ಮಾಡಿಕೊಂಡಿದ್ದರು. ಆದರೆ ಅವನಿಂದ ಅಡುಗೆಯ ಕೆಲಸ ಮಾತ್ರ ಆಗುತ್ತಿತ್ತೇ ಹೊರತು ಉಳಿದ ವಿಚಾರಗಳ ಹೊಣೆಯೆಲ್ಲಾ ಬಾಬು ಅವರ ಮೇಲೆ ಬಿದ್ದಿತ್ತು. ಅಜ್ಜಿ ಸತ್ತಮೇಲೆ ಮೊಮ್ಮಗಳು ನಿರ್ಮಲ ಬಾಬು ಅವರನ್ನು ಬಿಟ್ಟು ಒಂದು ಗಳಿಗೆಯೂ ಇರುತ್ತಿರಲಿಲ್ಲ. ಈ ಕಾರಣದಿಂದ ಮಗನಿಗೆ ಮದುವೆಯಾದರೆ ತಮ್ಮ ತೊಂದರೆ ಸ್ವಲ್ಪಮಟ್ಟಿಗೆ ನಿವಾರಣೆಯಾಗಬಹುದೆಂದು ಬಾಬು ಅವರು ಯೋಚಿಸುತ್ತಿದ್ದರು.

ಪದ್ಮಾವತಿಯ ಮನೆಯಿಂದ ಬಂದ ಮರುದಿನ, ಕೃಷ್ಣಕಾಂತನು ಅನಿಲಪುರಕ್ಕೆ ಹೋದನು. ಅವನು ಅಲ್ಲಿಗೆ ಹೋಗಲು ಎರಡು ಕಾರಣಗಳಿದ್ದವು. ಚಂಚಲೆಯ ಲಗ್ನವನ್ನು ಯಾವಾಗ ಇಟ್ಟುಕೊಳ್ಳಬೇಕೆಂಬುದನ್ನು ಪುರುಷೋತ್ತಮಬಾಬು ಅವರೊಡನೆ ಸಮಾಲೋಚನೆ ಮಾಡಿ ನಿರ್ಧರಿಸಬೇಕಾಗಿತ್ತು. ಆ ವಿಚಾರದಲ್ಲಿ ಗೋಪಾಲನಿಗೆ ಬಾಬು ಅವರು ಬರೆದಿದ್ದ ಪತ್ರಕ್ಕೆ ಗೋಪಾಲನಿಂದ ಜವಾಬು ಬಂದಿದೆಯೇ ಎಂಬುದನ್ನು ತಿಳಿದುಕೊಳ್ಳಬೇಕಾಗಿತ್ತು. ಎರಡನೆಯದಾಗಿ ಗೌರಿ ಮತ್ತು ಚಂದ್ರಹಾಸರ ಮದುವೆಯ ವಿಚಾರದಲ್ಲಿ ಪುರುಷೋತ್ತಮಬಾಬು ಅವರೊಡನೆ ಮಾತನಾಡಿ ಅವರ ಒಪ್ಪಿಗೆಯನ್ನು ಪಡೆಯಬೇಕಾಗಿತ್ತು. ಈ ಎರಡು ಕಾರಣಗಳ ದೆಸೆಯಿಂದ ಅವನು ಅನಿಲಪುರಕ್ಕೆ ಹೋಗಿದ್ದನು. ಮುಂದಿನ ತಿಂಗಳು ಲಗ್ನವನ್ನು ಇಟ್ಟುಕೊಳ್ಳಬಹುದೆಂದು ಗೋಪಾಲನು ಪುರುಷೋತ್ತಮಬಾಬು ಅವರಿಗೆ ಬರೆದಿದ್ದನು. ಆ ಕಾಗದವನ್ನು ನೋಡಿ ಕೃಷ್ಣಕಾಂತನಗೆ ತುಂಬಾ ಸಂತೋಷವಾಗಿತ್ತು. ಗೋಪಾಲ ಮತ್ತು ಚಂಚಲೆಯರ ಮದುವೆಯನ್ನು ಸರಳ ರೀತಿಯಲ್ಲಿ ಮುಂದಿನ ತಿಂಗಳು ನಡೆಯಿಸಬೇಕೆಂದು ಬಾಬು ಅವರು ಕೃಷ್ಣಕಾಂತನಿಗೆ ಸೂಚಿಸಿದರು. ಗೋಪಾಲ ಮತ್ತು ಚಂಚಲೆಯರ ವಿಚಾರವಾಗಿ ಮಾತುಕತೆ ಮುಗಿದ ನಂತರ, ಕೃಷ್ಣಕಾಂತನು "ಚಂದ್ರಹಾಸನಿಗೆ ಏಕೆ ಈ ವರ್ಷವೇ ಮದುವೆ ಮಾಡಬಾರದು?" ಎಂದು ಬಾಬು ಅವರನ್ನು ಪ್ರಶ್ನಿಸಿದನು.

"ನಾನೂ ಅದನ್ನೇ ಯೋಚಿಸುತ್ತಿದ್ದೆ. ಅವನು ಈ ವರ್ಷ ಮದುವೆ ಆಗಲು ಒಪ್ಪಿದರೆ ತಾನು ಮದುವೆ ಮಾಡಲು ಸಿದ್ಧನಾಗಿದ್ದೇನೆ."

"ಎಲ್ಲಾದ್ರೂ ಹೆಣ್ಣನ್ನು ಗೊತ್ತು ಮಾಡಿದ್ದೀರೇನು?"

"ಇದುವರೆಗೆ ಎಲ್ಲಿಯೂ ಗೊತ್ತುಮಾಡಿಲ್ಲ. ರುಮೆ ಇದ್ದಾಗ ಕೆಲವು ಹೆಣ್ಣುಗಳನ್ನು ನೋಡಿದ್ದಳು. ಆಗ ಚಂದ್ರ ಸಧ್ಯಕ್ಕೆ ಮದುವೆ ಬೇಡವೆಂದು ಹೇಳಿದ್ದನಂತೆ. ನಾನೇನೂ ಕೇಳಲಿಲ್ಲ. ಹೆಣ್ಣುಗಳಿಗೇನು ಬರಗಾಲ? ಒಳ್ಳೆಯ ಮನೆತನವನ್ನು ನೋಡಿ ಆರಿಸಬೇಕು ಅಷ್ಟೆ. ಯಾವುದಕ್ಕೂ ಹೆಣ್ಣನ್ನು ಆರಿಸತಕ್ಕವನು ಅವನು. ಈಗಿನ ಕಾಲದಲ್ಲಿ ಹುಡುಗರು ತಂದೆತಾಯಿಗಳ ಮಾತಿನ ಪ್ರಕಾರ ಎಲ್ಲಿ ಮದುವೆ ಆಗ್ತಾರೆ?"

"ಹಾಗಾದರೆ ಅವನೊಪ್ಪಿದ ಕನ್ಯೆ ಒಳ್ಳೆ ಮನೆತನಕ್ಕೆ ಸೇರಿದ್ದರೆ ತಮ್ಮ ಅಭ್ಯಂತರವಿಲ್ಲವಲ್ಲಾ?"

"ಖಂಡಿತಾ ಇಲ್ಲ." : ಅಂತರ್ಜಾತೀಯ ವಿವಾಹವಾದರೆ ಪರವಾ ಇಲ್ಲ ತಾನೇ?"

"ಓಹೋ ಪರ್ವಾ ಇಲ್ಲ. ಆದರೆ ಮನೆತನ ಸರಿಯಾಗಿ ಇರಬೇಕು. ನಮಗೂ ಹೆಣ್ಣಿನ ಕಡೆಯವರಿಗೂ ಹೊಂದಾಣಿಕೆ ಆಗುವಂತಿರಬೇಕು. ಅದೇನಯ್ಯಾ ಕೃಷ್ಣ, ಅಂತರ್ಜಾತೀಯ ವಿವಾಹದ ಪ್ರಶ್ನೆ ನನ್ನ ಮುಂದೆ ಇಡ್ತಾ ಇದ್ದೀಯಾ? ಲಾಯರ್ ಹಾಗೆ ಪಾಟಿ ಸವಾಲ್ ಮಾಡ್ತಾ ಇದ್ದೀಯಾ. ಏನೋ ಇರ್ಬೇಕು ಅಂತ ಕಾಣ್ತದೆ."

"ತಾವು ನನಗೆ ಗುರುಗಳು. ತಮ್ಮನ್ನು ಪಾಟಿ ಸವಾಲು ಮಾಡುವ ಯೋಗ್ಯತೆ ನನಗೆಲ್ಲಿ ಬರಬೇಕು? ಲಾಯರ್ ವಿದ್ಯೆಯನ್ನು ತಮ್ಮಿಂದಲೇ ನಾನು ಕಲಿತಿದ್ದು. ಕೆಲವು ವಿಚಾರಗಳು ತಮ್ಮ ಗಮನಕ್ಕೆ ಬಂದಿಲ್ಲವೆಂದು ತೋರುತ್ತದೆ."

"ಅದೇನು ಸಮಾಚಾರ ಕೃಷ್ಣಾ."

"ಚಂದ್ರಹಾಸ ಮತ್ತು ಡಾ॥ ಸುರೇಶ್ಚಂದ್ರರ ಮಗಳು ಗೌರಿ ಇವರುಗಳು ಪರಸ್ಪರ ಪ್ರೀತಿಸುತ್ತಿರುವುದು ನಿಮಗೆ ಗೊತ್ತಿದೆಯೇನು?"

"ನನಗೆ ಗೊತ್ತಿಲ್ಲ. ಡಾ॥ ಸುರೇಶ್ಚಂದ್ರನಾಥರೂ, ನಾನು ಸ್ನೇಹಿತರು. ಅವರು ಜೀವಿತರಾಗಿದ್ದಾಗ ನಮ್ಮಲ್ಲಿ ಅನೇಕ ಸಾರಿ ಬಂದಿದ್ದರು. ನಾನು ಅವರಲ್ಲಿಗೆ ಅನೇಕ ಸಾರಿ ಹೋಗಿದ್ದೆ. ಗೌರಿಯೂ, ಚಂದ್ರಹಾಸನೂ ಕಾಳೀಪುರದಲ್ಲಿ ಓದುತ್ತಿದ್ದಾಗ ಇಬ್ಬರೂ ಅಲ್ಲಿಂದ ಒಟ್ಟಿಗೆ ಬರುತ್ತಿದ್ದರು ಮತ್ತು ಒಟ್ಟಿಗೆ ಹೋಗುತ್ತಿದ್ರು. ಪ್ರೇಮದ ವಿಚಾರ ನನಗೆ ಗೊತ್ತಿಲ್ಲ. ಅವನು ಇದುವರೆಗೆ ನನ್ನೊಡನೆ ಆ ವಿಚಾರದಲ್ಲಿ ಮಾತನಾಡಿಯೂ ಇಲ್ಲ. ನೀನು ಆ ದಿನ ಅವರಿಬ್ಬರಿಗೂ ಪ್ರೇಮವಿದೆಯೆಂದು ಸೂಕ್ಷ್ಮವಾಗಿ ಹೇಳಿದ್ದೆ, ಅಷ್ಟೆ."

"ಅವರಿಬ್ಬರೂ ಪರಸ್ಪರ ಅನುರಾಗವುಳ್ಳವರಾಗಿದ್ದಾರೆಂದು ನನಗೆ ಖಚಿತವಾಗಿ ಗೊತ್ತಾಗಿದೆ."

"ಗೌರಿಯನ್ನು ಚಂದ್ರಹಾಸ ಮದುವೆಯಾಗುವುದಾದರೆ ನನ್ನ ಅಡ್ಡಿಯಿಲ್ಲ. ಆದರೆ ಗೌರಿಯ ತಾಯಿ ಒಪ್ಪಬೇಕಲ್ಲ."

"ಗೌರಿಯ ತಾಯಿ ಒಪ್ಪಿದರೆ ನಿಮ್ಮದು ಅಡ್ಡಿ ಇಲ್ಲವಲ್ಲ?"

"ನಾನೇಕಯ್ಯಾ ಅಡ್ಡಿ ಮಾಡ್ತೀನಿ. ನಾನು ಜಾತಿಗೆ ಅಂಟಿದವನಲ್ಲ. ಅದೂ ಅಲ್ಲದೆ ಗೌರಿಯ ತಂದೆ ತಾಯಿಗಳು ನನಗೇನೂ ಹೊಸಬರಲ್ಲ. ಚಂದ್ರ ಒಪ್ಪಿದರೆ, ಗೌರಿ ಮತ್ತು ಅವಳ ತಾಯಿ ಒಪ್ಪಿದರೆ, ನಾನು ಅಡ್ಡಿ ಬರುವವನಲ್ಲ. ಅವಳು ಒಳ್ಳೆಯ ಹುಡುಗಿಯಂತೆ ತೋರುತ್ತಾಳೆ. ನಿನ್ನ ಅಭಿಪ್ರಾಯವೇನು? ಪ್ರಶ್ನೆ ಹಾಕುವುದರ ಬದಲು ಸ್ಪಷ್ಟವಾಗಿ ನಿನ್ನಭಿಪ್ರಾಯವನ್ನು ತಿಳಿಸು."

"ಹುಡುಗಿ ಮತ್ತು ಮನೆತನ ವಿಚಾರದಲ್ಲಿ ಯೋಚಿಸಬೇಕಾದ್ದೇ ಇಲ್ಲ. ಗೌರಿಯ ತಾಯಿ ಒಪ್ಪುವುದೇ ಕಷ್ಟವಾಗಿತ್ತು. ಬಹಳ ಕಷ್ಟದಿಂದ ಅವರನ್ನು ಒಪ್ಪಿಸಿದ್ದೇನೆ. ಅವರ ಅಣ್ಣ ಆನಂದಪ್ರಸಾದರನ್ನೂ ಒಪ್ಪಿಸಿದ್ದೇನೆ. ಇನ್ನು ನಿಮ್ಮ ಆಶೀರ್ವಾದ ಮಾತ್ರ ಬೇಕು."

"ನೀನು ಬಹಳ ಕಿಲಾಡಿ ಕಣಯ್ಯಾ. ಎಲ್ಲರ ಹತ್ತಿರಾನೂ ಅಸ್ತು ಅನಿಸಿಕೊಂಡು, ಎಲ್ಲಾ ಮುಗಿದು ಹೋದ ಮೇಲೆ ನನ್ನ ಕೇಳೋಕೆ ಬಂದಿದ್ದೀಯ."

"ಅನಿರೀಕ್ಷಿತವಾಗಿ ಸನ್ನಿವೇಶ ಕೂಡಿಬಂತು. ಉದ್ದೇಶಪೂರ್ವಕವಾಗಿ ನಾನೇನೂ ಅದರಲ್ಲಿ ಪ್ರವೇಶಿಸಿರಲಿಲ್ಲ. ಗೌರಿಯ ತಾಯಿ ಪದ್ಮಾವತಿ, ಗೌರಿಯನ್ನು ತನ್ನ ಅಣ್ಣನ ಮಗ ಜಂಬೂನಾಥನಿಗೆ ಕೊಡಬೇಕೆಂದು ಉದ್ದೇಶಿಸಿ ಗೌರಿಯನ್ನು ಒತ್ತಾಯಪಡಿಸುತ್ತಿದ್ದರು. ಗೌರಿ ಅದಕ್ಕೆ ಒಪ್ಪಲಿಲ್ಲ. ನನ್ನ ಮುಖಾಂತರ ಹೇಳಿ, ಗೌರಿಯನ್ನು ಒಪ್ಪಿಸಬೇಕೆಂದು ಪದ್ಮಾವತಿ ನನಗೆ ಹೇಳಿ ಕಳಿಸಿದ್ದರು. ನಾನು ಗೌರಿಯೊಡನೆ ಮಾತನಾಡುತ್ತಿದ್ದಾಗ, ಗೌರಿ, ತಾನು ಚಂದ್ರಹಾಸನನ್ನು ಬಿಟ್ಟು ಬೇರೊಬ್ಬನನ್ನು ಮದುವೆಯಾಗುವುದಿಲ್ಲವೆಂದು ಹೇಳಿದಳು. ಆ ಸಂದರ್ಭದಲ್ಲಿ ಪದ್ಮಾವತಿಯವರೊಡನೆ ಮತ್ತು ಅವರ ಅಣ್ಣನೊಡನೆ ಮಾತನಾಡಬೇಕಾದ ಪ್ರಸಂಗ ಬಿತ್ತು. ನಾನು ಇನ್ನೂ ಚಂದ್ರಹಾಸನ ಜೊತೆ ಮಾತನಾಡಿಲ್ಲ.

"ಆಗಲಿ, ಸಂತೋಷ. ಚಂದ್ರನ ಹತ್ತಿರ ಮಾತನಾಡು. ಅವನೊಪ್ಪಿದರೆ ನಿನ್ನ ಮಗಳ ಮತ್ತು ಗೋಪಾಲನ ಮದುವೆಯಾಗುವ ಕಾಲದಲ್ಲಿಯೇ ಅವನ ಮದುವೆಯನ್ನು ಮಾಡಿದರಾಯಿತು."

ಇಷ್ಟು ಸುಲಭವಾಗಿ ಗೌರಿಯ ಮದುವೆಯ ಪ್ರಶ್ನೆ ಬಗೆ ಹರಿಯುತ್ತದೆಯೆಂಬುದು ಕೃಷ್ಣಕಾಂತನು ಹಿಂದಿನ ದಿನ ಪದ್ಮಾವತಿಯ ಮನೆಗೆ ಹೋದಾಗ ನಿರೀಕ್ಷಿಸಿರಲಿಲ್ಲ. ಸನ್ನಿವೇಶ ಒಂದಕ್ಕೊಂದು ಕೂಡಿ ಬಂದು, ಆಖ್ಯೆರು ಪುರುಷೋತ್ತಮಬಾಬು ಅವರ ಅನುಜ್ಞೆ ಸಿಕ್ಕಮೇಲೆ ಕೃಷ್ಣಕಾಂತನೂ ಚಂದ್ರಹಾಸನನ್ನು ಕರೆದು, ಅಲಾಯಿದ ಮಾತಾಡಿ ನಡೆದ ಸಂಗತಿಗಳನ್ನೆಲ್ಲಾ ಅವನಿಗೆ ತಿಳಿಸಿದನು. ಪದ್ಮಾವತಿಯ ತಾಯಿ ಒಪ್ಪುತ್ತಾಳೆಂಬ ಭರವಸೆ ಚಂದ್ರಹಾಸನಿಗೆ ಇರಲೇ ಇಲ್ಲ. ಅವಳು ಒಪ್ಪಿಗೆ ಇತ್ತದ್ದನ್ನು ಕೇಳಿ ಆನಂದಭರಿತನಾದನು. ಕೃಷ್ಣಕಾಂತನನ್ನು ಕುರಿತು "ನೀವು ಸಮರ್ಥ ವಕೀಲರು, ನನ್ನ ಮತ್ತು ಗೌರಿಯ ಪರವಾಗಿ ವಕಾಲತ್ತು ವಹಿಸಿ, ಬಹಳ ಚಾತುರ್ಯದಿಂದ ನಮ್ಮ ಕೇಸನ್ನು ಗೆದ್ದುಕೊಟ್ಟಿದ್ದೀರಿ. ಅದಕ್ಕಾಗಿ ನಾವಿಬ್ಬರು ನಿಮಗೆ ಜೀವಾವಧಿ ಋಣಿಗಳಾಗಿದ್ದೇವೆ" ಎಂದು ಹೇಳಿ ಕೃಷ್ಣಕಾಂತನ ಕಾಲು ಮುಟ್ಟಿ ನಮಸ್ಕರಿಸಿದನು. ಕೃಷ್ಣಕಾಂತನು ಅವನನ್ನು ಹರಸಿದನು. ಅನಂತರ ಗೌರಿ ಚಂದ್ರಹಾಸನ ವಿವಾಹವನ್ನೂ, ಚಂಚಲಾ ಗೋಪಾಲರ ವಿವಾಹವನ್ನೂ ಏಕಕಾಲದಲ್ಲಿ ಮುಂದಿನ ತಿಂಗಳು ಶ್ರೀಪುರದಲ್ಲಿ ಆರ್ಯಸಮಾಜದ ಕಲ್ಯಾಣಮಂದಿರದಲ್ಲಿ ನಡೆಯಿಸತಕ್ಕದೆಂದು ಕೃಷ್ಣಕಾಂತನೂ ಪುರುಷೋತ್ತಮಬಾಬು ಅವರೂ ಕೂಡಿ ನಿರ್ಧರಿಸಿದರು.

೭

ಎರಡು ವಿವಾಹಗಳೂ, ಶ್ರೀಪುರದ ಆರ್ಯಸಮಾಜದ ಕಲ್ಯಾಣ ಮಂದಿರದಲ್ಲಿ ನಡೆಯತಕ್ಕದ್ದೆಂದು ನಿಶ್ಚಯವಾಗಿ ಆಹ್ವಾನ ಪತ್ರಿಕೆಗಳನ್ನು ಹಂಚಲಾಗಿತ್ತು. ಮದುವೆಗಳ ಸಿದ್ಧತೆ ನಡೆಯುತ್ತಿತ್ತು. ಗೋಪಾಲನ ತಾಯಿ, ಸ್ವರೂಪರಾಣಿ ಸೊಸೆಗೋಸ್ಕರ, ಮೂವತ್ತು ಸಾವಿರ ರೂಪಾಯಿಗಳ ಬಂಗಾರದ ಒಡವೆಗಳನ್ನು ಮಾಡಿಸಿದ್ದಳು. ಕೊನೆಗಾದರು

ತನ್ನ ಮಗ ಮದುವೆಯಾಗಲು ಒಪ್ಪಿದನೆಂದು ಅವಳಿಗೆ ಸಂತೋಷವಾಗಿತ್ತು. ಚಂಚಲೆ ಸುಂದರಿಯೆಂದೂ, ಪದವೀಧರಳೆಂದೂ ಸ್ವರೂಪರಾಣಿ ಕೇಳಿದ್ದಳು. ಅಂತಹ ಕನ್ಯೆ ಸೊಸೆಯಾಗಿ ತನ್ನ ಮನೆಗೆ ಬರುತ್ತಾಳೆಂದು ಅವಳು ಹಿಗ್ಗಿ ಹೋಗಿದ್ದಳು. ಗೌರಿಯ ತಾಯಿಯಾಗಲೀ ಚಂದ್ರಹಾಸನ ತಂದೆಯಾಗಲೀ ಶ್ರೀಮಂತರಾಗಿರಲಿಲ್ಲ. ಆದ್ದರಿಂದ ಒಡವೆ ಮಾಡಿಸುವ ಸಡಗರ ಗೌರಿಯ ಮನೆಯಲ್ಲೂ ಇರಲಿಲ್ಲ; ಚಂದ್ರಹಾಸನ ಮನೆಯಲ್ಲೂ ಇರಲಿಲ್ಲ. ಕಮಲೆಗೆ ಚಂಚಲೆಗೆ ಮದುವೆಯಾಗುವುದು ಒಂದು ದೃಷ್ಟಿಯಿಂದ ತೃಪ್ತಿಯಾಗಿದ್ದರೆ, ಇನ್ನೊಂದು ದೃಷ್ಟಿಯಿಂದ ಅಸೂಯೆ ಉಂಟಾಗಿತ್ತು. ಚಂಚಲೆ ಮನೆಬಿಟ್ಟು ತೊಲಗಿ ಹೋಗುತ್ತಾಳೆಂಬ ಸಮಾಧಾನ ಒಂದು ಕಡೆಯಾದರೆ, ಇನ್ನೊಂದು ಕಡೆ ಅವಳು ಶ್ರೀಮಂತ ಗೋಪಾಲನ ಹೆಂಡತಿಯಾಗುತ್ತಾಳೆಂಬ ಅಸೂಯೆ ಅವಳನ್ನು ಕಾಡುತಿತ್ತು.

ಗೌರಿ ತಾನು ಮೆಚ್ಚಿದ ಯುವಕನನ್ನು ಮದುವೆಯಾಗುವ ಅವಕಾಶ ಸಿಕ್ಕಿದ್ದಕ್ಕಾಗಿ ಆನಂದಭರಿತಳಾಗಿದ್ದಳು. ಚಂದ್ರಹಾಸನು ಗೌರಿಯನ್ನು ಹೃತ್ಪೂರ್ವಕವಾಗಿ ಪ್ರೀತಿಸುತ್ತಿದ್ದರೂ, ಅವಳು ಬೇರೆ ಜಾತಿಯವಳಾದ್ದರಿಂದ, ಅವಳನ್ನು ಮದುವೆಯಾಗಲು ಅನೇಕ ಎಡರು ತೊಡರುಗಳನ್ನು ಎದುರಿಸಬೇಕಾಗಬಹುದೆಂದು ಭಾವಿಸಿದ್ದನು. ಹೆಚ್ಚು ಅಡ್ಡಿ ಆತಂಕಗಳಿಲ್ಲದೆ, ಗೌರಿಯನ್ನು ವರಿಸುವ ಸುಯೋಗ ಲಭಿಸಿದ್ದಕ್ಕಾಗಿ, ಚಂದ್ರಹಾಸನು ಬಹಳ ಹರ್ಷಿತನಾಗಿದ್ದನು. ಚಂದ್ರಹಾಸನು ಆಗಾಗ ಗೌರಿಯ ಮನೆಗೆ ಹೋಗಿ ಅವಳೊಡನೆ ಸರಸ ಸಲ್ಲಾಪ ನಡೆಸುತ್ತಿದ್ದನು. ಗೌರಿಯ ತಾಯಿ ಪದ್ಮಾವತಿಗೆ, ಮಗಳಿಗೆ ಮದುವೆಯಾಗುತ್ತದೆಯೆಂಬ ತೃಪ್ತಿ ಇದ್ದರೂ, ಅಳಿಯನು ಅನ್ಯಜಾತಿಯವನೆಂಬ ಭಾವನೆ ಅವಳ ಮನಸ್ಸನ್ನು ಸದಾ ಕೊರೆಯುತ್ತಿತ್ತು. ಜೊತೆಗೆ ಕಮ್ಯೂನಿಸ್ಟ್ ಆಗಿದ್ದ ಚಂದ್ರಹಾಸನೊಡನೆ ಮಗಳು ಸುಖವಾಗಿ ಬಾಳುತ್ತಾಳೋ ಇಲ್ಲವೋ ಎಂಬ ಯೋಚನೆಯೂ ಅವಳನ್ನು ಬಾಧಿಸುತ್ತಿತ್ತು.

ಗೌರಿಯೂ, ಚಂದ್ರಹಾಸನೂ ಆನಂದಭರಿತರಾಗಿದ್ದರೆ, ಚಂಚಲೆಯ ಪರಿಸ್ಥಿತಿಯೇ ಬೇರೆಯಾಗಿತ್ತು. ಚಂಚಲೆಗೆ ತನ್ನ ಮದುವೆಯ ಬಗ್ಗೆ ಸಂತೋಷವೂ ಇರಲಿಲ್ಲ; ಸಡಗರವೂ ಇರಲಿಲ್ಲ. ಕೇವಲ ಆರು ತಿಂಗಳ ಹಿಂದೆ ಅವಳು ಶಂಕರನನ್ನು ಗಾಂಧರ್ವ ರೀತಿಯಲ್ಲಿ ವರಿಸಿದ್ದಳು. ಶಂಕರನು ಅವಳನ್ನು ಮದುವೆಯಾಗಲು ನಿರಾಕರಿಸಿದ ಮೇಲೆ ಅವಳ ಪ್ರೇಮಧಾರೆ ಬತ್ತಿ ಹೋದಂತಾಗಿತ್ತು. ಗೋಪಾಲನೊಡನೆ ತನ್ನಬಾಳು ಯಾವ ರೀತಿ ಸಾಗುತ್ತದೆಯೆಂಬುದರ ಬಗ್ಗೆ ಅವಳಿಗೆ ಯಾವ ಕಲ್ಪನೆಯೂ ಇರಲಿಲ್ಲ. ಸನ್ನಿವೇಶಗಳ ಒತ್ತಡದಿಂದ ಗೋಪಾಲನನ್ನು ಮದುವೆಯಾಗಲು ಅವಳು ಒಪ್ಪಿದ್ದಳು. ಆದರೂ ಗೋಪಾಲನು ಸದ್ಗುಣಿಯೆಂಬ ಸಮಾಚಾರ ಅವಳಿಗೊಂದು ಸಮಾಧಾನಕರವಾದ ಸಂಗತಿಯಾಗಿತ್ತು. ಜೊತೆಗೆ ಮದುವೆಯಾದ ನಂತರ ಮಲತಾಯಿ ಕಮಲೆಯ ಕಿರುಕುಳದಿಂದ ಮುಕ್ತಳಾಗುತ್ತೇನೆಂಬ ಹೆಚ್ಚಿನ ಸಮಾಧಾನ ಅವಳಿಗುಂಟಾಗಿತ್ತು. ಚಂಚಲೆಯ ತಂದೆ ಕೃಷ್ಣಕಾಂತನಿಗೆ ಚಂಚಲೆಯು ಮದುವೆಯಾಗಲು ಒಪ್ಪಿದುದು

ಒಂದು ಆನಂದದಾಯಕವಾದ ಸಂಗತಿಯಾಗಿತ್ತು. ಅದರಲ್ಲೂ ಪ್ರಭಾವಶಾಲಿಯೂ, ಶ್ರೀಮಂತನೂ ಆಗಿದ್ದ ಗೋಪಾಲನು ಅಳಿಯನಾಗುವುದು ಅವನಿಗೆ ಬಹಳ ಸಂತೋಷಕರವಾಗಿತ್ತು. ಇತ್ತ ಮಿತಭಾಷಿಯೂ, ಸಂಕೋಚ ಸ್ವಭಾವದವನೂ ಆಗಿದ್ದ ಗೋಪಾಲನ ಮನಸ್ಸಿನಲ್ಲಿ ತನ್ನ ಮದುವೆಯ ಬಗ್ಗೆ ಯಾವ ಭಾವನೆ ಇತ್ತೆಂದು ಊಹಿಸಲೂ ಯಾರಿಗೂ ಸಾಧ್ಯವಿರಲಿಲ್ಲ.

ಮದುವೆಗೆ ಎರಡು ದಿನಗಳ ಹಿಂದೆ ಗೋಪಾಲನಿಗೊಂದು ಅನಾಮಧೇಯ ಕಾಗದ ಬಂದಿತ್ತು. ಆ ಕಾಗದ ಟಪಾಲು ಮೂಲಕ ಶ್ರೀಪುರದಿಂದ ರವಾನೆಯಾಗಿತ್ತು. ಕಾಗದದ ಒಕ್ಕಣೆ ಈ ರೀತಿ ಇತ್ತು:

"ಶ್ರೀ ಗೋಪಾಲರವರಿಗೆ, ನಿಮ್ಮ ಹಿತೈಷಿಯೊಬ್ಬನು ಮಾಡುವ ವಿಜ್ಞಾಪನೆಗಳು.

ನೀವು ಶ್ರೀಪುರದ ವಕೀಲ ಕೃಷ್ಣಕಾಂತನ ಮಗಳು ಚಂಚಲೆಯನ್ನು ಮದುವೆಯಾಗಲು ಒಪ್ಪಿರುವುದಾಗಿ ತಿಳಿದು ಬಂದಿದೆ. ಅವಳು ಕ್ರಾಂತಿಸೇನೆಯ ಅಧ್ಯಕ್ಷ ಜನರಲ್ ಶಂಕರನ ಪ್ರೇಯಸಿ. ಅವಳೂ ಶಂಕರನೂ ಆಗಾಗ ಅನಿಲಗಿರಿಯ ಕೋಟೆಯಲ್ಲಿ, ಅಕ್ರಮ ಸಂಭೋಗಕ್ಕೆ ಸೇರುತ್ತಾರೆಂಬ ಸುದ್ದಿ ಜನಜನಿತವಾಗಿದೆ. ಶಂಕರನು 'ವಿಮಲ' ಎಂಬ ಕೃತಕನಾಮದಿಂದ ಅವಳಿಗೆ ಆಗಾಗ ಪತ್ರ ಬರೆಯುತ್ತಿದ್ದಾನೆ. ನಿಷ್ಕಪಟಿಗಳೂ, ಗೌರವಸ್ಥರೂ ಆದ ನಿಮ್ಮನ್ನು ವಂಚಿಸಿ, ಅವಳ ಮದುವೆಗೆ ನಿಮ್ಮನ್ನು ಒಪ್ಪಿಸಿರುತ್ತಾರೆ. ಈ ಮದುವೆ ನಿಮಗೆ ಶ್ರೇಯಸ್ಕರವಲ್ಲ. ಆದ್ದರಿಂದ ಏನಾದರೂ ಉಪಾಯ ಮಾಡಿ ಮದುವೆಯಾಗುವುದನ್ನು ತಪ್ಪಿಸಿಕೊಳ್ಳಿ. "ಇತಿ ನಿಮ್ಮ ಹಿತೈಷಿ,"

ಈ ಪತ್ರವನ್ನು ನೋಡಿದ ಕೂಡಲೆ, ಗೋಪಾಲನ ಮನಸ್ಸು ಸ್ವಲ್ಪ ಕಲಕಿತು. ಆದರೆ ಅನಾಮಧೇಯ ಪತ್ರವಾದ್ದರಿಂದ ಅದಕ್ಕೆ ಮಹತ್ವ ಕೊಡುವ ಪ್ರಮೇಯ ಅವನಿಗೆ ಕಾಣಲಿಲ್ಲ. ಹೆಣ್ಣಿನ ತಂದೆತಾಯಿಗಳಿಗೆ ಆಗದವರು, ದುರುದ್ದೇಶದಿಂದ ಮದುವೆಯನ್ನು ತಪ್ಪಿಸಲಿಕ್ಕಾಗಿ, ಮದುವೆ ಗಂಡಿಗೆ ಇಂತಹ ಪತ್ರಗಳನ್ನು ಬರೆದ ಕೆಲವು ಸಂದರ್ಭಗಳು ಅವನ ಗಮನಕ್ಕೆ ಬಂದಿದ್ದವು. ಆದ್ದರಿಂದ ಕೃಷ್ಣಕಾಂತನಗೆ ಆಗದವರು ಯಾರೋ ಆ ಅನಾಮಧೇಯ ಪತ್ರವನ್ನು ಬರೆದಿರಬೇಕೆಂದು ಭಾವಿಸಿದನು. ಅಲ್ಲದೆ ಪುರುಷೋತ್ತಮ ಬಾಬು ಅವರ ಸಲಹೆ ಮೇರೆಗೆ ಅವನು ಚಂಚಲೆಯನ್ನು ಮದುವೆಯಾಗಲು ಒಪ್ಪಿದ್ದನು. ಬಾಬು ಅವರು, ಕೃಷ್ಣಕಾಂತನ ವಿಚಾರದಲ್ಲಿ ಮತ್ತು ಚಂಚಲೆಯ ವಿಚಾರದಲ್ಲಿ, ಒಳ್ಳೆಯ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಆದ್ದರಿಂದ ಕಾಗದವನ್ನು ಚೂರುಚೂರಾಗಿ ಹರಿದು ಬಿಸಾಕಿದನು. ಆದರೂ, ಸಂಶಯದ ಗುಂಗು ಅವನ ಮನಸ್ಸಿನ ಒಂದು ಮೂಲೆಯಲ್ಲಿ ಅವನಿಗರಿವಾಗದಂತೆ ಎಲ್ಲಿಯೋ ಸೇರಿಕೊಂಡಿತ್ತು.

ಗೊತ್ತಾದ ದಿನ ಎರಡು ಮದುವೆಗಳೂ ಶ್ರೀಪುರದ ಆರ್ಯಸಮಾಜದ ಕಲ್ಯಾಣ ಮಂದಿರದಲ್ಲಿ ನಡೆದವು. ಮದುವೆ ಸರಳ ರೀತಿಯಲ್ಲಿ ಇದ್ದರೂ, ನೂರಾರು ಜನ ಬಂಧು ಬಾಂಧವರೂ, ಹಿತೈಷಿಗಳೂ ಮದುವೆಯಲ್ಲಿ ಹಾಜರಿದ್ದರು. ಮದುವೆಯ ಮಂಟಪದಲ್ಲಿ ಗೌರಿ ಮತ್ತು ಚಂದ್ರಹಾಸರು ಹಸನ್ಮುಖಿಗಳಾಗಿ ಒಬ್ಬರನ್ನೊಬ್ಬರು ಲೇವಡಿ

ಮಾಡುತ್ತಲೂ, ಒಬ್ಬನ್ನೊಬ್ಬರು ಮೆತ್ತಗೆ ಪೀಡಿಸುತ್ತಲೂ, ಸಣ್ಣ ಪುಟ್ಟ ಪ್ರಣಯ ಚೇಷ್ಟೆಗಳನ್ನು ಮಾಡುತ್ತಲೂ ಚಕ್ಕಂದವಾಡುತ್ತಿದ್ದರು. ಆದರೆ, ಗೋಪಾಲ ಚಂಚಲೆಯರ ರೀತಿ ಇನ್ನೊಂದು ವಿಧವಾಗಿತ್ತು. ಗೋಪಾಲನ ಬಾಯಲ್ಲಿ ಮಾತೂ ಹೊರಡುತ್ತಿರಲಿಲ್ಲ; ನಗುವೂ ಹನಿಯುತ್ತಿರಲಿಲ್ಲ. ಅವನು ಮೌನದ ಮೂರ್ತಿಯಂತೆ ಕುಳಿತಿದ್ದನು. ಚಂಚಲೆ ಮದುವೆಯ ಮಂಟಪದಲ್ಲೇ ಮೊಟ್ಟ ಮೊದಲು ಅವನನ್ನು ನೋಡಿದ್ದು. ಅವನು ಬೆಳ್ಳಗಿದ್ದರೂ, ಮುಖದಲ್ಲಿ ವರ್ಚಸ್ಸು ಇರಲಿಲ್ಲ. ಅವನು ಸಂಕೋಚ ಪ್ರವೃತ್ತಿಯ ನೀರಸ ವ್ಯಕ್ತಿಯೆಂದು ಚಂಚಲೆಗೆ ಅನಿಸಿತ್ತು. ಆಳ್ತನದಲ್ಲಿ ಅವನೂ ದಷ್ಟಪುಷ್ಟನಾಗಿರಲಿಲ್ಲ; ತೆಳ್ಳಗೆ ಉದ್ದವಾಗಿದ್ದನು. ಆದರೂ ಆರೋಗ್ಯವಾಗಿದ್ದನು. ಚಂಚಲೆ ಊಹಿಸಿದ್ದಂತೆ ಅವನ ವಯಸ್ಸು ಸುಮಾರು ಮೂವತ್ತೇಳು ವರ್ಷವಾಗಿತ್ತು.

ಮದುವೆ ಮುಗಿದ ನಂತರ ಊಟವಾಯಿತು. ಊಟವಾದ ನಂತರ, ಚಂದ್ರಹಾಸನೂ, ಗೌರಿಯೂ ಅವರ ದಿಬ್ಬಣದ ಸಮೇತ, ಅನಿಲಪುರಕ್ಕೆ ಹೋದರು. ಗೋಪಾಲನೂ, ಚಂಚಲೆಯೂ ಮರುದಿನ ಬೆಳಿಗ್ಗೆ ಸಿರಗೂರಿಗೆ ಹೊರಡತಕ್ಕದೆಂದು ಗೊತ್ತಾಗಿತ್ತು. ಆ ದಿನ ಸಂಜೆ, ಕೃಷ್ಣಕಾಂತನ ಮನೆಯಲ್ಲಿ ಚಂಚಲೆಯೂ, ಗೋಪಾಲನೂ ತಮಗೆ ಬಂದಿದ್ದ ಶುಭ ಸಂದೇಶಗಳನ್ನು ಒಂದೊಂದಾಗಿ ನೋಡುತ್ತಿದ್ದರು. ಶಂಕರನಿಗೆ ಯಾರೂ ಆಮಂತ್ರಣವನ್ನು ಕಳುಹಿಸದಿದ್ದರೂ, ಅವನು ಚಂಚಲೆಗೆ 'ವಿಮಲ' ಎಂಬ ಹೆಸರಿನಲ್ಲಿ, ತಂತಿಯ ಮೂಲಕ ಶುಭಾಶಯಗಳನ್ನು ಕಳುಹಿಸಿದ್ದನು. ಅದನ್ನು ನೋಡಿದ ತಕ್ಷಣ, ಗೋಪಾಲನಿಗೆ ಆ ಅನಾಮಧೇಯ ಪತ್ರದ ನೆನಪಾಯಿತು. ಅವನ ಕುತೂಹಲ ಕೆರಳಿತು. "ಅದ್ಯಾರು ವಿಮಲ ಎನ್ನುವವರು?" ಎಂದು ಗಂಭೀರವಾಣಿಯಲ್ಲಿ ಹೆಂಡತಿಯನ್ನು ಪ್ರಶ್ನಿಸಿದನು. ಚಂಚಲೆಯ ಎದೆ ಜಗ್ ಎಂದಿತು. ತನ್ನ ಗುಟ್ಟು ರಟ್ಟಾಗಿರಬಹುದೆಂಬ ಭಯದಿಂದ, ಕಕ್ಕಾವಿಕ್ಕಿಯಾದಳು, ಏನು ಹೇಳಬೇಕೆಂದು ತೋರದೆ, ಅವಳ ಮನಸ್ಸು ಗೊಂದಲದಲ್ಲಿ ಸಿಕ್ಕಿತ್ತು. ಗಂಡನ ಪ್ರಶ್ನೆಗೆ ಜವಾಬು ಕೊಡಬೇಕಾಗಿತ್ತು. ಯೋಚನೆ ಮಾಡುವಷ್ಟು ಅವಕಾಶವಿರಲಿಲ್ಲ. 'ರಮೇಶ್' ಎಂಬ ಹೆಸರು ತಕ್ಷಣ ಅವಳ ಬಾಯಿಗೆ ಬಂತು. "ವಿಮಲಾ ಎನ್ನುವವಳು ನನ್ನ ಸ್ನೇಹಿತಳು. ಅವಳ ತಂದೆ ಶ್ರೀಪುರದ ಲಾಯರು ರಮೇಶ್" ಎಂದು ಬಾಯಿಗೆ ಬಂದುದನ್ನು ಹೇಳಿದಳು. ಆಗ ಗೋಪಾಲನು "ಇದೇ ಊರಿನಲ್ಲಿದ್ದವರು ಮದುವೆಗೇಕೆ ಬರಲಿಲ್ಲ?" ಎಂದು ಪ್ರಶ್ನಿಸಿದನು. "ಏನೋ ತೊಂದರೆ ಇರಬೇಕು" ಎಂದು ಚಂಚಲೆ ಜವಾಬು ಕೊಟ್ಟಳು, ಗೋಪಾಲನು ಸುಮ್ಮನಾದನು.

ಆ ದಿನ ರಾತ್ರಿ ಊಟವಾದ ನಂತರ, ಗೋಪಾಲನೂ, ಕೃಷ್ಣಕಾಂತನು ಮಾತನಾಡುತ್ತಿರುವಾಗ, ಗೋಪಾಲನು ಪ್ರಾಸಂಗಿಕವಾಗಿ, "ಈ ಊರಿನಲ್ಲಿ ರಮೇಶ್ ಎಂಬ ಲಾಯರಿದ್ದಾರೆಯೇ" ಎಂದು ಮಾವನನ್ನು ಕೇಳಿದನು. ಆಗ ಕೃಷ್ಣಕಾಂತನು, "ಈ ಊರಲ್ಲಿ ಅಂಥ ಹೆಸರಿನ ಲಾಯರು ಯಾರು ಇಲ್ಲವಲ್ಲಾ. ಅವರ ಹೆಸರನ್ನು ಯಾಕೆ ಕೇಳಿದಿರಿ?" ಎಂದನು.

"ಯಾಕೂ ಇಲ್ಲ. ಸಿರಗೂರಿನಲ್ಲಿ ನನ್ನ ಸ್ನೇಹಿತರೊಬ್ಬರು, ನಿನ್ನೆ ದಿನ ನನ್ನನ್ನು ಭೇಟಿಯಾಗಿದ್ದಾಗ, ಈ ಊರಾಗೆ ಅವರ ಬಂಧು ರಮೇಶ್ ಎಂಬ ಲಾಯರಿದ್ದಾರೆಂದು ಹೇಳಿದ್ದರು. ನನ್ನ ಸ್ನೇಹಿತ ಹೇಳಿದ್ದನ್ನು ಸರಿಯಾಗಿ ಕೇಳಿಸಿಕೊಂಡೆನೋ ಇಲ್ಲವೋ, ಬಹುಶಃ ಅವರು ಹೇಳಿದ ಲಾಯರ್ ಹೆಸರು ಬೇರೆಯಿರಬೇಕು" ಎಂದು ಹೇಳಿ ಗೋಪಾಲನು ಸುಮ್ಮನಾದನು.

ಮಾವನ ಮಾತನ್ನು ಕೇಳಿದ ಮೇಲೆ, ಗೋಪಾಲನ ಮನಸ್ಸಿನಲ್ಲಿ ಹೆಂಡತಿಯ ಶೀಲದ ಬಗ್ಗೆ ಸಂಶಯದ ಬಿರುಗಾಳಿ ಎದ್ದಂತಾಗಿತ್ತು. "ಅವಳು ಹೇಳಿದಂತೆ ಅವಳ ಗೆಳತಿ ವಿಮಲ ಇದೇ ಊರಿನವಳಾಗಿದ್ದಿದ್ದರೆ ಅವಳು ಮದುವೆಗೆ ಬರದೆ ತಂತಿಯ ಮೂಲಕ ಸಂದೇಶವನ್ನು ಕಳಿಸುವ ಪ್ರಮೇಯವೇನಿತ್ತು?' ವಿಮಲ ನಿಜವಾಗಿಯೂ ಹೆಂಗಸಾಗಿ, ಇವಳ ಗೆಳತಿಯಾಗಿದ್ದರೆ, "ರಮೇಶ್" ಎಂಬ ಈ ಊರಲ್ಲಿಲ್ಲದ ವಕೀಲನೊಬ್ಬನ ಹೆಸರನ್ನು ಇವಳು ಯಾಕೆ ಹೇಳುತ್ತಿದ್ದಳು? ನನಗೆ ಬಂದ ಅನಾಮಧೇಯ ಪತ್ರದಲ್ಲಿ ಬರೆದ ಮಾತುಗಳು ನಿಜವಿರಬೇಕು" ಎಂದು ಗೋಪಾಲನು ಮನಸ್ಸಿನಲ್ಲಿಯೇ ಅಂದುಕೊಂಡನು. ಅಂದಿನಿಂದ ಅನುಮಾನ ಅವನ ಮನಸ್ಸಿನಲ್ಲಿ ಶಾಶ್ವತವಾಗಿ ಮನೆಮಾಡಿತು. ಆದರೆ, ಮದುವೆ ಮುಗಿದು ಹೋದ್ದರಿಂದ, ಆ ಅನುಮಾನಕ್ಕೆ ಪರಿಹಾರವೇ ಇರಲಿಲ್ಲ. ಮದುವೆಯಾದ ತಪ್ಪಿಗೆ ಅವಳೊಡನೆ ದಾಂಪತ್ಯ ಜೀವನ ನಡೆಸಬೇಕೆಂದು ತೀರ್ಮಾನಿಸಿದನು.

ಮದುವೆಯಾದ ಮರುದಿನ ಬೆಳಿಗ್ಗೆ, ಗೋಪಾಲನ ಮದುವೆಯ ದಿಬ್ಬಣ ವಧೂವರರ ಸಮೇತ ಸಿರಗೂರಿಗೆ ಹೊರಟಿತು. ಮದುಮಕ್ಕಳು ಕುಳಿತಿದ್ದ ಮುಂದುಗಡೆಯ ಕಾರಿನಲ್ಲಿ ಗೋಪಾಲನ ಬಂಧುಗಳಾದ ಮೂರು ಜನ ಹೆಣ್ಣುಮಕ್ಕಳಿದ್ದರು. ದಾರಿಯಲ್ಲಿ ಚಂಚಲೆ ಗೋಪಾಲನೊಡನೆ ಮಾತನಾಡಬೇಕೆಂದು ಬಯಸಿ, ಅವಳೇ ಮೇಲೆ ಬಿದ್ದು ಮಾತನಾಡಿದಳು. ಆದರೆ ಗೋಪಾಲನು ಅವಳ ಹತ್ತು ಮಾತಿಗೆ ಒಂದು ಮಾತಾಡಿದರೆ ಹೆಚ್ಚಾಗಿತ್ತು. ಅವನ ಈ ವರ್ತನೆಯನ್ನು ನೋಡಿ, ಜೊತೆಯಲ್ಲಿ ಪ್ರಯಾಣ ಮಾಡುತ್ತಿದ್ದ ಹೆಣ್ಣುಮಕ್ಕಳು ಚಂಚಲೆಯನ್ನು ಕುರಿತು "ನಮ್ಮ ಮದುವಣಿಗರಿಗೆ ಬಹಳ ನಾಚಿಕೆ; ಹೆಂಗಸರನ್ನು ಕಂಡರೆ ಬಹಳ ಹೆದರಿಕೆ" ಎಂದು ಗೋಪಾಲನಿಗೆ ಚುಚ್ಚುವಂತೆ ಮಾತನಾಡುತ್ತಿದ್ದರು. ಆ ಹುಡುಗಿಯರು ಲೇವಡಿ ಮಾಡಿದರೂ ಕೂಡ ಗೋಪಾಲನು ಏನೂ ಹೇಳದೆ ಮಂಕುತಿಮ್ಮನಂತೆ ಮೌನವಾಗಿದ್ದನು.

ಮಧ್ಯಾಹ್ನ ಒಂದು ಗಂಟೆಯ ಹೊತ್ತಿಗೆ ಮದುವೆಯ ದಿಬ್ಬಣ ಸಿರಗೂರನ್ನು ತಲುಪಿತು. ಗೋಪಾಲನ ಮನೆಯು ಸಿರಗೂರಿನ ಹೊರವಲಯದಲ್ಲಿತ್ತು. ಸಿರಗೂರು ದೊಡ್ಡ ಪಟ್ಟಣವಾಗಿದ್ದರೂ; ಗೋಪಾಲನ ಮನೆಯಿದ್ದ ಪ್ರದೇಶ ಹಳ್ಳಿಯಂತಿತ್ತು. ಮನೆಯು ಹಳೆಯ ಕಾಲದ ಸಣ್ಣ ಅರಮನೆಯಂತಿತ್ತು. ಮನೆಯ ಮುಂದುಗಡೆ ವಿಶಾಲವಾದ ಅಂಗಳವಿತ್ತು. ಅಂಗಳದಲ್ಲಿ ಬಗೆಬಗೆಯ ಹೂವಿನ ಗಿಡಗಳಿದ್ದವು. ಮನೆಯ ಎಡಬಲಗಳಲ್ಲಿ ಕೈತೋಟಗಳಿದ್ದವು. ಮನೆಯ ಹಿಂದುಗಡೆ ಬಹಳ ದೂರದವರೆಗೆ ಗೋಪಾಲನಿಗೆ

ಸೇರಿದ್ದ ನೂರಾರು ಎಕರೆ ವ್ಯವಸಾಯದ ಭೂಮಿಯಿದ್ದಿತು. ಗೋಪಾಲನ ತಂದೆ ಒಬ್ಬ ಆಗರ್ಭ ಶ್ರೀಮಂತನಾಗಿದ್ದನು. ಅವನ ಏಕೈಕ ಪುತ್ರನಾದ ಗೋಪಾಲನು ತಂದೆಯ ಸಂಪೂರ್ಣ ಐಶ್ವರ್ಯಕ್ಕೆ ಅಧಿಪತಿಯಾಗಿದ್ದನು. ಗೋಪಾಲನು ಚಿಕ್ಕ ವಯಸ್ಸಿನಲ್ಲಿಯೇ ಕಾಂಗ್ರೆಸ್ಸಿಗೆ ಸೇರಿದ್ದವನಾಗಿದ್ದನು. ಅಂದು ಅವನು ಸಿರಗೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷನಾಗಿದ್ದನು. ಅವನು ಅಪ್ಪಟ ಗಾಂಧೀವಾದಿಯೆಂದೂ, ಬಹಳ ಪ್ರಾಮಾಣಿಕ ರಾಜಕಾರಣಿಯೆಂದೂ ಹೆಸರು ವಾಸಿಯಾಗಿದ್ದನು. ಅವನು ಸಿರಗೂರು ಜಿಲ್ಲೆಯಲ್ಲಿ ಬಹುಜನರ ಗೌರವಕ್ಕೆ ಪಾತ್ರನಾಗಿದ್ದನು.

ಗೋಪಾಲನ ಕಾರು ಅವನ ಮನೆಯ ಹತ್ತಿರ ಹೋದಾಗ, ಅವನನ್ನೂ, ಚಂಚಲೆಯನ್ನೂ ಸ್ವಾಗತಿಸುವುದಕ್ಕಾಗಿ, ನೂರಾರು ಜನ ಬಂಧು ಮಿತ್ರರೂ, ಅಭಿಮಾನಿಗಳೂ, ಕಾಂಗ್ರೆಸ್ ಕಾರ್ಯಕರ್ತರೂ, ಗೋಪಾಲನ ರೈತರೂ, ಅವನ ಮನೆಯ ಬಳಿ ಕಾದಿದ್ದರು. ಆ ಭವ್ಯ ಸ್ವಾಗತವನ್ನು ನೋಡಿ ಚಂಚಲೆ ಸಂತೋಷಭರಿತಳಾಗಿದ್ದಳು. ಆ ಸ್ವಾಗತ ತನ್ನ ಗಂಡನ ಜನಾನುರಾಗಕ್ಕೆ ಸಾಕ್ಷಿಯಾಗಿದೆಯೆಂದು ಮನಸ್ಸಿನಲ್ಲಿಯೇ ಅಂದುಕೊಂಡಳು. ಮನೆಗೆ ಹೋದೊಡನೆ ಗೋಪಾಲನ ತಾಯಿ ಸ್ವರೂಪರಾಣಿ ಸೊಸೆಯನ್ನು ಪ್ರೀತ್ಯಾದರಗಳಿಂದ ಬರಮಾಡಿಕೊಂಡಳು. ಸೊಸೆಯ ರೂಪಲಾವಣ್ಯಗಳನ್ನು ನೋಡಿ ಮೆಚ್ಚಿದಳು. ತನ್ನ ಮಗ ತಡವಾಗಿ ಮದುವೆಯಾದರೂ ಕೂಡ, ಸರ್ವಾಂಗ ಸುಂದರಿಯೊಬ್ಬಳನ್ನು ಮದುವೆಯಾದನೆಂದು ಮನಸ್ಸಿನಲ್ಲಿಯೇ ಹಿಗ್ಗುತ್ತಿದ್ದಳು. ಗೋಪಾಲನು ಆ ದಿನ ರಾತ್ರಿ ದೊಡ್ಡದೊಂದು ಭೋಜನಕೂಟವನ್ನೇರ್ಪಡಿಸಿದ್ದನು. ಐದಾರು ಸಾವಿರ ಜನರು ಭೋಜನಕೂಟಕ್ಕೆ ಬಂದಿದ್ದರು.

ಗೋಪಾಲನ ಮನೆಯಲ್ಲಿ ಆಳುಕಾಳುಗಳಾಗಲೀ, ಇತರ ಸೌಕರ್ಯಗಳಿಗಾಗಲೀ ಯಾವ ಕೊರತೆಯೂ ಇರಲಿಲ್ಲ. ಸ್ವರೂಪರಾಣಿಯು ಚಂಚಲೆಯನ್ನು ಮಗಳಂತೆ ನೋಡಿಕೊಳ್ಳುತ್ತಿದ್ದಳು. ಗೋಪಾಲನು ತನ್ನೊಡನೆ ಸಲಿಗೆಯಿಂದ ಮಾತನಾಡದೆ ಇದ್ದರೂ ಕೂಡ, ಕಾಲಕ್ರಮೇಣ ಆತನಲ್ಲಿ ತನ್ನ ಮೇಲೆ ಅನುರಾಗ ಹುಟ್ಟಬಹುದೆಂಬ ಆಸೆಯನ್ನು ಚಂಚಲೆಯಿಟ್ಟುಕೊಂಡಿದ್ದಳು. ಗೋಪಾಲನೊಡನೆ ಚಂಚಲೆಯ ಪ್ರಥಮ ಸಂಭೋಗ ಕೇವಲ ಯಾಂತ್ರಿಕ ರೀತಿಯಲ್ಲಿತ್ತು. ಅದರಲ್ಲಿ ಅನುರಾಗವಾಗಲೀ, ಅಭಿರುಚಿಯಾಗಲೀ, ರಸಿಕತೆಯಾಗಲೀ, ಸರಸವಾಗಲೀ ಇರಲಿಲ್ಲ. ಹಿಂದೆ ಶಂಕರನೊಡನೆ ಅವಳು ಪಡೆದಿದ್ದ ಅನುಭವಕ್ಕೂ ಅಂದು ಗೋಪಾಲನೊಡನೆ ಅವಳು ಪಡೆದಿದ್ದ ಅನುಭವಕ್ಕೂ, ಅಜಗಜಾಂತರ ವ್ಯತ್ಯಾಸವಿತ್ತು. ತಾರುಣ್ಯದ ತುಂಬು ಪ್ರವಾಹದಲ್ಲಿ ತೇಲುತ್ತಿದ್ದ ಅವಳಿಗೆ ತನ್ನೊಡನೆ ಸರಿಸಮನಾಗಿ ಈಜುವ ಸಂಗಾತಿಯೊಬ್ಬನು ಬೇಕಾಗಿದ್ದನು. ಮನ್ಮಥ ಕೇಳಿಯಲ್ಲಿ ಗೋಪಾಲನು ತನಗೆ ಸರಿಜೋಡಿಯಲ್ಲವೆಂಬ ಅಭಿಪ್ರಾಯಕ್ಕೆ ಪ್ರಥಮ ಸಂಭೋಗದ ದಿನವೇ ಅವಳು ಬಂದಿದ್ದಳು.

ದಾಂಪತ್ಯ ಜೀವನ ಆರಂಭವಾಗಿ ಕೆಲವು ತಿಂಗಳುಗಳು ಕಳೆದರೂ ಕೂಡ, ಗೋಪಾಲನು ಚಂಚಲೆಯೊಡನೆ ಮಾತನಾಡುತ್ತಲೇ ಇರಲಿಲ್ಲ. ಸದಾ ಮೌನಿಯಾಗಿರುತ್ತಿದ್ದನು. ಅವನು ಸ್ವಾಭಾವಿಕವಾಗಿಯೇ ಮಿತಭಾಷಿ. ತನ್ನ ತಾಯಿಯ ಜೊತೆಯಲ್ಲಿ ಮಾತ್ರ ಸಲಿಗೆಯಿಂದ ಸರಾಗವಾಗಿ ಮಾತನಾಡುತ್ತಿದ್ದನು. ಉಳಿದವರೊಡನೆ ಮಾತುಮಾತಿಗೂ ತೂಕ ಹಾಕುವವನಂತೆ ಮಾತನಾಡುತ್ತಿದ್ದನು. ಚಂಚಲೆಯ ಹತ್ತಿರ ಅದೂ ಇರಲಿಲ್ಲ. ಚಂಚಲೆಯ ಕಣ್ಣಿಗೆ ಅವನು ಯಾವುದೋ ವಿವಾಹ ಮನೋವ್ಯಥೆಯಿಂದ ನರಳುತ್ತಿರುವಂತೆ ತೋರುತ್ತಿದ್ದನು. ತನ್ನ ಮತ್ತು ಶಂಕರನ ಅಕ್ರಮ ಸ್ನೇಹ ಗೊತ್ತಾಗಿ, ಅವನು ತನ್ನ ವಿಚಾರದಲ್ಲಿ ಈ ರೀತಿ ವರ್ತಿಸುತ್ತಿರಬಹುದೆಂದು ಅವಳು ಒಮ್ಮೊಮ್ಮೆ ಭಾವಿಸುತ್ತಿದ್ದಳು. ಆದರೆ ಗೋಪಾಲನು ಎಂದು ಅವಳಿಗೆ ಕಠಿಣ ವಾಕ್ಯವನ್ನಾಡಿರಲಿಲ್ಲ. ಎಂದಾದರೂ ಅವಳೊಡನೆ ಮಾತನಾಡುವ ಅವಶ್ಯಕತೆ ಒದಗಿದಾಗ, ಬಹಳ ಸೌಜನ್ಯದಿಂದ ಮಾತನಾಡುತ್ತಿದ್ದನು. ತನ್ನ ವಿಚಾರದಲ್ಲಿ, ದ್ವೇಷ ಭಾವನೆಯನ್ನು ಅವನು ತಾಳಿಲ್ಲವೆಂಬುದು ಅವನ ಮಾತಿನಿಂದಲೂ, ವರ್ತನೆಯಿಂದಲೂ ಸ್ಪಷ್ಟವಾಗಿ ಗೊತ್ತಾಗುತ್ತಿತ್ತು. ಕಾಲಕ್ರಮೇಣ ಗೋಪಾಲನ ವರ್ತನೆ ಬದಲಾವಣೆಯಾಗಬಹುದೆಂಬ ನಿರೀಕ್ಷೆಯಿಂದ, ಚಂಚಲೆ ತಾಳ್ಮೆಯಿಂದ ಕಾಲ ಕಳೆಯುತ್ತಿದ್ದಳು. ಆದರೆ ಅವಳ ನಿರೀಕ್ಷೆ ಫಲಿಸಲಿಲ್ಲ. ಗೋಪಾಲನು ಅವಳನ್ನು ಹಿಂಸಿಸುತ್ತಲೂ ಇರಲಿಲ್ಲ; ದ್ವೇಷಿಸುತ್ತಲೂ ಇರಲಿಲ್ಲ; ಪ್ರೀತಿಸುತ್ತಲೂ ಇರಲಿಲ್ಲ. ಅವನ ವರ್ತನೆಯಲ್ಲಿ ವಿರಸವಿಲ್ಲದಿದ್ದರೂ ಸರಸವಿರಲಿಲ್ಲ; ಕಾಠಿಣ್ಯವಿಲ್ಲದಿದ್ದರೂ ಪ್ರೇಮವಿರಲಿಲ್ಲ.

ಚಂಚಲೆಯು ಸ್ವಾಭಾವಿಕವಾಗಿ ಪ್ರೇಮಮಯಿ ಮತ್ತು ಸರಸಿ. ಗೋಪಾಲನ ಆ ರೀತಿ ವರ್ತನೆ, ಚಂಚಲೆಗೆ ಉಸಿರು ಕಟ್ಟಿದಂತಾಗಿ ಅಸಹನೀಯವಾಗಿತ್ತು. ಬರುಬರುತ್ತಾ ಅವಳಿಗೆ ಜೀವನದಲ್ಲಿ ಜಿಗುಪ್ಸೆಯಾಗತೊಡಗಿತು. ಗಂಡನಿಗೆ ಬೇಡವಾದ ಹೆಂಡತಿಯಾಗಿ ಬಾಳುವುದು ಅವಳಿಗೆ ದುಸ್ತರವಾಗಿತ್ತು. ಮದುವೆಗೆ ಮುಂಚೆ ಚಿಗರೆಯಂತೆ ಚಿಮ್ಮಿ ನೆಗೆದಾಡುತ್ತಿದ್ದ ಅವಳು, ಮದುವೆಯಾದ ಒಂದು ವರ್ಷದೊಳಗಾಗಿ ಜಡಭರಿತ ಮಂದಗಾಮಿನಿಯಾದಳು. ಅವಳ ಹಿಂದಿನ ಉತ್ಸಾಹ ಮಾಯವಾಗುತ್ತಾ ಬಂದಿತ್ತು. ಅವಳ ರೂಪ ಲಾವಣ್ಯಗಳು ಕಳೆಗುಂದುತ್ತಾ ಬಂದಿದ್ದವು. ದೇಹ ಕೃಶವಾಗುತ್ತಾ ಬಂದಿತ್ತು. ಒಮ್ಮೊಮ್ಮೆ ಮಂಕು ಹಿಡಿದವಳಂತೆ ಸುಮ್ಮನೆ ಕುಳಿತಿರುತ್ತಿದ್ದಳು.

ಈ ಮಧ್ಯೆ ಚಂಚಲೆ ಗರ್ಭಿಣಿಯಾದಳು. ಗರ್ಭಿಣಿಯಾದ್ದರಿಂದ ಸೊಸೆಯ ದೇಹಸ್ಥಿತಿಯಲ್ಲಿ ಈ ಬದಲಾವಣೆಗಳಾಗಿರಬಹುದೆಂದು ಭಾವಿಸಿ, ಸ್ವರೂಪರಾಣಿ ಅವಳಿಗೆ ಷೋಡಶೋಪಚಾರಗಳನ್ನು ಮಾಡುತ್ತಿದ್ದಳು. ಚಂಚಲೆಗೆ ಸಂಪತ್ತು ಸೌಕರ್ಯಗಳಿಗೆ ಯಾವ ಕೊರತೆಯೂ ಇರಲಿಲ್ಲ. ಅತ್ತೆಯ ಪ್ರೇಮ ಔದಾರ್ಯಗಳಿಗೆ ಮಿತಿಯೇ ಇರಲಿಲ್ಲ. ಅವಳಿಗಿದ್ದ ಸಂಪತ್ತು ಸೌಕರ್ಯದಿಂದ ಅವಳು ರಾಣಿಯಂತೆ ಇರಬಹುದಾಗಿತ್ತು. ಆದರೆ ದಾಂಪತ್ಯ ಜೀವನದಲ್ಲಿ ಸುಖವಿಲ್ಲದ್ದರಿಂದ, ಸಂಪತ್ತು ಸೌಕರ್ಯಗಳಿಂದ ಅವಳಿಗೆ ಯಾವ ವಿಧವಾದ ಸುಖ ಶಾಂತಿಯೂ ಲಭಿಸುವಂತಿರಲಿಲ್ಲ. ಗೌರಿಯಿಂದಲೂ ಮತ್ತು

ತಂದೆ ಕೃಷ್ಣಕಾಂತನಿಂದಲೂ ಆಗಾಗ ಬರುತ್ತಿದ್ದ ಪತ್ರಗಳು ಅವಳ ಮನಸ್ಸಿಗೆ ಅಲ್ಪ ಸ್ವಲ್ಪ ನೆಮ್ಮದಿಯನ್ನುಂಟು ಮಾಡುತ್ತಿದ್ದವು.

ಮಗಳು ಗರ್ಭವತಿಯಾದ ಸಮಾಚಾರ ತಿಳಿದು ಕೃಷ್ಣಕಾಂತನು ಸಂತೋಷ ಪಟ್ಟನು. ಹೆರಿಗೆಗಾಗಿ ಮಗಳನ್ನು ಮನೆಗೆ ಕರೆದುಕೊಂಡು ಹೋಗಬೇಕೆಂದು ಅವನು ಆಶಿಸುತ್ತಿದ್ದರೂ, ಮನೆಯಲ್ಲಿ ಕಮಲ ಅವಳನ್ನು ಮಮತೆಯಿಂದ ನೋಡಿಕೊಳ್ಳುತ್ತಾಳೆಂಬ ಭರವಸೆಯಿರಲಿಲ್ಲ. ಮಗಳೊಪ್ಪಿದರೆ ಹೆರಿಗೆಗೆ ಶ್ರೀಪುರದ ಆಸ್ಪತ್ರೆಯಲ್ಲಿ ವ್ಯವಸ್ಥೆ ಮಾಡಬೇಕೆಂದು ಯೋಚಿಸಿ, ಸಾಂಪ್ರದಾಯಿಕವಾಗಿ ಅಳಿಯನನ್ನು ಕೇಳುವ ಉದ್ದೇಶದಿಂದ ಸಿರಗೂರಿಗೆ ಹೋದನು. ಗೋಪಾಲನು, "ಅವಳಿಗಿಷ್ಟ ಬಂದಂತೆ ಮಾಡಲಿ" ಎಂದನು. ಚಂಚಲೆಯನ್ನು ಕೇಳಿದಾಗ, ಚಂಚಲೆ ತನ್ನ ಅತ್ತೆ, ತಾಯಿಗಿಂತಲೂ ಹೆಚ್ಚು ಮಮತೆಯಿಂದ ನೋಡುತ್ತಿರುವುದರಿಂದ ತಾನು ಸಿರಗೂರಿನಲ್ಲಿಯೇ ಇರುವುದಾಗಿ ಹೇಳಿದಳು. ಸ್ವರೂಪರಾಣಿಯು ಸೊಸೆಯನ್ನು ಶ್ರೀಪುರಕ್ಕೆ ಕಳಿಸಲಾಗುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿಬಿಟ್ಟಳು.

ನವಮಾಸ ತುಂಬಿದ ಮೇಲೆ, ಚಂಚಲೆಗೆ ಒಂದು ಗಂಡು ಮಗು ಆಯಿತು. ಮಗುವಿಗೆ 'ಅನಿಲಕುಮಾರ' ಎಂದು ಚಂಚಲೆ ನಾಮಕರಣ ಮಾಡಿದಳು. ಮಗು, ತಾಯಿಯ ಮತ್ತು ಅಜ್ಜಿಯ ಪ್ರೇಮದ ಪುತ್ಥಳಿಯಾಗಿ ಬೆಳೆಯುತ್ತಿತ್ತು. ಗೋಪಾಲನಿಗೆ ಹೆಂಡತಿಯ ವಿಚಾರದಲ್ಲಿ ಪ್ರೇಮವಿದ್ದಂತೆ ಕಂಡು ಬಾರದಿದ್ದರೂ, ಮಗುವನ್ನು ಅತಿಯಾಗಿ ಮುದ್ದಿಸುತ್ತಿದ್ದನು. ಮಗು ಹುಟ್ಟಿದ ಮೇಲೆ ಚಂಚಲೆಯ ನಿರಾಶಾಮಯ ಬಾಳಿನಲ್ಲಿ ಯಾವುದೋ ಒಂದು ವಿಧವಾದ ಆಶಾಕಿರಣ ಉದಯವಾದಂತಿತ್ತು. ಅವಳ ಜೀವನದಲ್ಲಿ ಹೊಸ ಅಧ್ಯಾಯ ಪ್ರಾರಂಭವಾಗಿತ್ತು. ಅವಳ ಆಶೋತ್ತರವೆಲ್ಲವೂ ಮಗುವಿನಲ್ಲಿ ಕೇಂದ್ರೀಕೃತವಾಗಿತ್ತು. ಅವಳಲ್ಲಿ ಉತ್ಸಾಹ ಮತ್ತು ಲವಲವಿಕೆ ಮತ್ತೆ ಕಾಣಿಸಿಕೊಳ್ಳಲಾರಂಭಿಸಿದವು. ಮಗು ಬೆಳೆಯುತ್ತಾ ಬಂದಂತೆಲ್ಲಾ, ಗೋಪಾಲನೂ ಕೂಡ ಹೆಂಡತಿಯ ವಿಚಾರದಲ್ಲಿ ತನ್ನ ವರ್ತನೆಯನ್ನು ಸ್ವಲ್ಪ ಮಟ್ಟಿಗೆ ಬದಲಾಯಿಸುತ್ತಿರುವಂತೆ ಕಂಡಿತ್ತು.

ಇತ್ತ ಗೌರಿ ಚಂದ್ರಹಾಸರು, ಆದರ್ಶ ದಂಪತಿಗಳಾಗಿ ದಾಂಪತ್ಯ ಜೀವನವನ್ನು ಆರಂಭಿಸಿದ್ದರು. ಅವರ ದಾಂಪತ್ಯ ಜೀವನ ಸ್ವರ್ಗ ಸದೃಶವಾಗಿತ್ತು. ಆಡಂಬರದಿಂದ ಜೀವನ ಮಾಡುವಷ್ಟು ಅವರಿಗೆ ಆಸ್ತಿ ಇಲ್ಲದಿದ್ದರೂ, ಸುಖವಾಗಿ ಜೀವನ ಮಾಡುವಷ್ಟು ಸೌಕರ್ಯವಿತ್ತು. ಗೌರಿಯು ಚಂದ್ರಹಾಸನ ಆದರ್ಶಪತ್ನಿಯಾಗಿ, ಪುರುಷೋತ್ತಮಬಾಬು ಅವರ ಅಚ್ಚುಮೆಚ್ಚಿನ ಸೊಸೆಯಾಗಿ, ನಿರ್ಮಲಳ ಪ್ರೀತಿಯ "ಆಂಟಿ" ಆಗಿ ಸಂಸಾರ ನಡೆಸುತ್ತಿದ್ದಳು. ಗೌರಿ ಮನೆಗೆ ಬಂದಮೇಲೆ, ಪುರುಷೋತ್ತಮಬಾಬು ಅವರ ಮನೆಗೆ ಒಂದು ಹೊಸ ಕಳೆ ಬಂದಂತಾಗಿತ್ತು. ಅವಳು ಪಟ್ಟಣದಲ್ಲಿ ಹುಟ್ಟಿ ಬೆಳೆದು ಪದವೀಧರಳಾಗಿದ್ದರೂ, ಗೃಹಕೃತ್ಯದ ಕೆಲಸಕಾರ್ಯಗಳನ್ನು ಸಂತೋಷದಿಂದಲೂ, ವಿಚಕ್ಷಣೆಯಿಂದಲೂ ಸ್ವಂತವಾಗಿ ನಿರ್ವಹಿಸುತ್ತಿದ್ದಳು. ತಾನೊಬ್ಬಳು ವಿದ್ಯಾವತಿ ಎಂಬ ಅಹಂಕಾರವಿಲ್ಲದೆ ಹಳ್ಳಿಯ ಜನರನ್ನು ಸೌಜನ್ಯದಿಂದ ಕಾಣುತ್ತಿದ್ದಳು. ಅವಳು ಅನಿಲಪುರದ

ಸರ್ವಜನರ ಮೆಚ್ಚುಗೆಗೆ ಪಾತ್ರಳಾಗಿದ್ದಳು. ಪುರುಷೋತ್ತಮಬಾಬು ಅವರಿಗೆ ಸೊಸೆ ಅನ್ಯಜಾತಿಯವಳೆಂಬ ಭಾವನೆ ಎಂದೂ ಬಂದಿರಲಿಲ್ಲ. ಅವರು ತಮ್ಮ ಬಂಧುಗಳೊಡನೆ ಮಾತನಾಡುವಾಗ, "ನಮ್ಮ ಜಾತಿಯಲ್ಲಿ ಇಂತಹ ಹುಡುಗಿಯರು ಸಿಕ್ಕುವುದು ಅಪರೂಪ" ಎಂದು ಅಗಾಗ ಹೇಳುತ್ತಿದ್ದರು.

ಚಂದ್ರಹಾಸನು ಕಮ್ಯೂನಿಸ್ಟನಾಗಿ ನಾಸ್ತಿಕನಾಗಿದ್ದರೂ, ಸದ್ಗುಣಗಳಲ್ಲಿ ಮತ್ತು ಆದರ್ಶದಲ್ಲಿ ಆಸ್ತಿಕರನ್ನು ಮೀರಿಸಿದ್ದನು. ಗೌರಿ ಅಸದೃಶ ದೈವಭಕ್ತಳಾಗಿ ಗಂಡನ ಮನಸ್ಸನ್ನು ಪಾರಮಾರ್ಥಿಕದ ಕಡೆಗೆ ತಿರುಗಿಸಲು ಅವಳದೇ ಆದ ಮಾರ್ಗದಲ್ಲಿ ಶ್ರಮಿಸುತ್ತಿದ್ದಳು. ಅಂತಹ ದೈವಭಕ್ತಳಾದ ಸೊಸೆ ತಮಗೆ ಲಭಿಸಿರುವುದು ತಮ್ಮ ಸುದೈವವೆಂದು ಪುರುಷೋತ್ತಮಬಾಬು ಅವರು ಭಾವಿಸಿದ್ದರು. ಗೌರಿಯ ತಾಯಿ ಪದ್ಮಾವತಿ, ಗೌರಿ ಮತ್ತು ಚಂದ್ರಹಾಸನ ಮದುವೆಗೆ ಮೊದಲು ಅಡ್ಡಿಯಾಗಿದ್ದರೂ, ಮದುವೆಯಾದ ನಂತರ ಮಗಳೂ, ಅಳಿಯನೂ ಸಂತೋಷದಿಂದ ನಲಿಯುತ್ತಿರುವುದನ್ನೂ ನೋಡಿ ಆನಂದ ಪಡುತ್ತಿದ್ದಳು. ಚಂದ್ರಹಾಸನು ಶೂದ್ರನಾದರೂ ತುಂಬ ಸದ್ಗುಣಿಯೆಂಬುದು ಅವಳ ಮನಸ್ಸಿಗೆ ಬಂದಿತ್ತು. ಆದರೆ ಅಳಿಯ ಮತ್ತು ಮಗಳಿಗೆ, ಕ್ರಾಂತಿಸೇನೆಯವರಿಂದ ಎಂದಾದರೊಂದು ದಿನ, ಯಾವುದಾದರೂ ರೀತಿಯಲ್ಲಿ ಅಪಾಯ ಸಂಭವಿಸಬಹುದೆಂಬ ಭಯ ಅವಳನ್ನು ಸದಾ ಕಾಡುತ್ತಿತ್ತು. ಗೌರಿಯು ಕೂಡ ಕ್ರಾಂತಿಸೇನೆಯವರಿಂದ ಏನಾದರೊಂದು ವಿಪತ್ತು ಸಂಭವಿಸಬಹುದೆಂದು ಸದಾ ಕೊರಗುತ್ತಿದ್ದಳು.

ಚಂದ್ರಹಾಸನಿಗೆ ಮದುವೆಯಾದ ಮೇಲೆ ಅವನ ಓಡಾಟಕ್ಕೋಸ್ಕರ ಕ್ರಾಂತಿಕೂಟದವರು ಅವನಿಗೊಂದು ಕಾರನ್ನು ಕೊಡಿಸಿದ್ದರು. ಚಂದ್ರಹಾಸನ ಮತ್ತು ಗೌರಿಯ ರಕ್ಷಣೆಗಾಗಿ ಕ್ರಾಂತಿಕೂಟದ ಶಸ್ತ್ರಸಜ್ಜಿತ ಸಿಪಾಯಿಗಳು ಪುರುಷೋತ್ತಮಬಾಬುಗಳ ಮನೆಯಲ್ಲಿ ಸದಾ ಕಾವಲಿರುತ್ತಿದ್ದರು. ಗೌರಿ ಮತ್ತು ಚಂದ್ರಹಾಸ ಅನಿಲಪುರವನ್ನು ಬಿಟ್ಟು, ಹೊರಗಡೆ ಪ್ರಯಾಣ ಮಾಡುವಾಗಲೆಲ್ಲಾ ಅವರಿಬ್ಬರ ಬೆಂಗಾವಲಿಗಾಗಿ ಅವರ ಜೊತೆಯಲ್ಲಿ ಕ್ರಾಂತಿಕೂಟದ ಮುಖ್ಯ ಕಾರ್ಯದರ್ಶಿ ಕಿಶೋರ್ ಪ್ರಯಾಣ ಮಾಡುತ್ತಿದ್ದನು. ಚಂದ್ರಹಾಸನಾಗಲೀ, ಕಿಶೋರನಾಗಲೀ, ಆಯುಧಗಳಿಲ್ಲದೆ ಎಂದೂ ಹೊರಗಡೆ ಹೊರಡುತ್ತಿರಲಿಲ್ಲ. ಕಾರಿನಲ್ಲಿ ಹೊಗುವಾಗ ಚಂದ್ರಹಾಸನ ಜೊತೆಯಲ್ಲಿ ಇಬ್ಬರು ಅಥವಾ ಮೂವರೂ ಕ್ರಾಂತಿಕೂಟದ ಸಿಪಾಯಿಗಳು ಇರುತ್ತಿದ್ದರು. ಗೌರಿ ಶ್ರೀಪುರಕ್ಕೆ ತನ್ನ ತೌರು ಮನೆಗೆ ಹೋದಾಗ ಅವಳ ಬೆಂಗಾವಲಿಗಾಗಿ ನಾಲ್ಕೈದು ಜನ ಕ್ರಾಂತಿಕೂಟದ ಸಿಪಾಯಿಗಳು ಸದಾ ಪದ್ಮಾವತಿಯ ಮನೆಯಲ್ಲಿ ಕಾವಲಿರುತ್ತಿದ್ದರು.

ಚಂದ್ರಹಾಸನು ಗೌರಿಯನ್ನು ಮದುವೆಯಾದ ನಂತರ, ಶಂಕರನಿಗೆ ಚಂದ್ರಹಾಸನ ಮೇಲೆ ವೈರ ಮತ್ತಷ್ಟು ಹೆಚ್ಚಾಗಿತ್ತು. ಕ್ರಾಂತಿಸೇನೆಯವರಿಗೂ, ಕ್ರಾಂತಿಕೂಟದವರಿಗೂ ಪೈಪೋಟಿ ಮತ್ತಷ್ಟು ಹೆಚ್ಚಾಗಿತ್ತು. ಕ್ರಾಂತಿಸೇನೆಯವರು ಅನಾವಶ್ಯಕವಾಗಿ ಕಾಲುಕಿತ್ತು ಕ್ರಾಂತಿಕೂಟದವರ ಮೇಲೆ ಜಗಳಕ್ಕೆ ತೊಡಗುತ್ತಿದ್ದರು. ಅಲ್ಲಲ್ಲಿ ದಿನವೂ ಘರ್ಷಣೆಗಳು

ನಡೆಯುತ್ತಿದ್ದವು. ಚಂದ್ರಹಾಸನನ್ನು ಕೊಂದ ಹೊರತು ತನ್ನ ಕ್ರಾಂತಿಸೇನೆಗೆ ಒಳ್ಳೆಯ ಭವಿಷ್ಯವಿಲ್ಲವೆಂದು ಶಂಕರನು ಮನಗಂಡಿದ್ದನು. ಹಿಂದೆ ಗೌರಿ ಕ್ರಾಂತಿಸೇನೆಯ ಸದಸ್ಯಳಾಗಿದ್ದಾಗ ಶಂಕರನು ಅವಳನ್ನು ಮೋಹಿಸಿ ಒಲಿಸಿಕೊಳ್ಳಲು ಕೆಲವು ಕುಚೇಷ್ಟೆಗಳನ್ನು ಮಾಡಿದ್ದೇನೋ ನಿಜ. ಆದರೆ ಆ ನಂತರ ಅವಳ ಮೇಲೆ ಅವನಿಗೆ ಅನುರಾಗ ಉಳಿದಿರಲಿಲ್ಲ. ತನ್ನನ್ನು ತಿರಸ್ಕರಿಸಿ ತನ್ನ ಮೇಲೆ ಅಪಪ್ರಚಾರ ಮಾಡಿದ್ದಳೆಂದು ಸಿಟ್ಟು ಮಾತ್ರ ಅವಳ ಮೇಲಿತ್ತು. ಅವಳು ಮಾಡಿದ್ದ ಅಪಪ್ರಚಾರಕ್ಕೆ ಪ್ರತಿಯಾಗಿ, ಅವಳನ್ನು ಅಪಹರಿಸಿ, ಅವಳ ಮಾನಭಂಗ ಮಾಡಿ, ಅವಳಿಗೆ ಬುದ್ಧಿ ಕಲಿಸಬೇಕೆಂದೂ ಚಂದ್ರಹಾಸನನ್ನು ಕೊಲ್ಲಬೇಕೆಂದು ಅವನು ಸಂಕಲ್ಪ ಮಾಡಿದ್ದನು. ತನ್ನ ಸಂಕಲ್ಪವನ್ನು ಸಾಧಿಸಲು ಸೂಕ್ತ ಸಮಯಕ್ಕಾಗಿ ಕಾಯುತ್ತಿದ್ದನು. ಆದರೆ ಕ್ರಾಂತಿಕೂಟದ ಗೂಢಚಾರರು ಶಂಕರನ ಮತ್ತು ಅವನ ಅನುಯಾಯಿಗಳ ಚಲನವಲನಗಳನ್ನು ಕಣ್ಣಲ್ಲೆ ಕಣ್ಣಿಟ್ಟು ನೋಡುತ್ತಿದ್ದುದರಿಂದಲೂ, ಚಂದ್ರಹಾಸನು ಮತ್ತು ಗೌರಿಯ ರಕ್ಷಣೆಗೆ ಬಲವಾದ ವ್ಯವಸ್ಥೆ ಇದ್ದುದರಿಂದಲೂ, ಶಂಕರನಿಗೆ ಅವನ ಗುರಿಯನ್ನು ಸಾಧಿಸುವುದು ಸುಲಭವಾಗಿರಲಿಲ್ಲ.

ಚಂದ್ರಹಾಸನೂ, ಗೌರಿಯೂ ಆಗಾಗ ಶ್ರೀಪುರಕ್ಕೆ ಹೋಗಿ ಬರುತ್ತಿದ್ದರು. ಯಾವಾಗಲೂ ಶ್ರೀಪುರಕ್ಕೆ ಹೋದವರು ಸಂಜೆಯಾಗುವುದರೊಳಗಾಗಿ ಅನಿಲಪುರಕ್ಕೆ ಬರುತ್ತಿದ್ದರು. ಇಲ್ಲವಾದರೆ ಶ್ರೀಪುರದಲ್ಲಿಯೇ ತಂಗಿರುತ್ತಿದ್ದರು. ಒಂದು ದಿನ ಚಂದ್ರಹಾಸನೂ, ಗೌರಿಯೂ ಕಾರಿನಲ್ಲಿ ಶ್ರೀಪುರಕ್ಕೆ ಹೋಗಿದ್ದರು. ಯಥಾಪ್ರಕಾರ ಅವರ ಜೊತೆಯಲ್ಲಿ ಕಿಶೋರನೂ, ರಕ್ಷಣೆಯ ಸಿಪಾಯಿಗಳೂ ಇದ್ದರು. ಆ ದಿನ ಸಂಜೆ ಶಂಕರನು ತನ್ನ ಸೇನೆಯ ಕೇಂದ್ರ ಸಮಿತಿಯ ಗುಪ್ತಸಭೆಯನ್ನು ನಡೆಯಿಸಲು ತನ್ನ ನೆಚ್ಚಿನ ಅನುಚರರೊಡನೆ ಅನಿಲಪುರದ ಕೋಟೆಗೆ ಬಂದಿದ್ದನು. ಅವನ ಬೇಹುಗಾರರಿಂದ ಚಂದ್ರಹಾಸನು ಆ ದಿನ ಶ್ರೀಪುರಕ್ಕೆ ಹೋಗಿದ್ದ ಸಮಾಚಾರ ಅವನಿಗೆ ಗೊತ್ತಾಗಿದ್ದಿತು; ಚಂದ್ರಹಾಸನ ಕಾರು ವಾಪಸು ಬಾರದೆ ಇದ್ದ ಸಂಗತಿಯೂ ಗೊತ್ತಾಗಿತ್ತು. ಕತ್ತಲಾದ ನಂತರ, ಚಂದ್ರಹಾಸನು ವಾಪಸು ಅನಿಲಪುರಕ್ಕೆ ಬರಬಹುದೆಂಬ ನಿರೀಕ್ಷೆಯಿಂದ, ಶಂಕರನು ಗಿರಿಯ ಹತ್ತಿರ ಅನಿಲಪುರಕ್ಕೆ ಹೋಗುವ ರಸ್ತೆಯ ಪಕ್ಕದಲ್ಲಿ ಚಂದ್ರಹಾಸನ ಕಾರನ್ನು ಅಡ್ಡಗಟ್ಟುವುದಕ್ಕಾಗಿ, ರಕ್ತ ಕೇಸರಿಯ ಮುಖಂಡತ್ವದಲ್ಲಿ ಒಂದು ಸಣ್ಣ ತಂಡವನ್ನು ನಿಲ್ಲಿಸಿದ್ದನು. ರಕ್ತ ಕೇಸರಿಯೂ, ಅವನ ಜೊತೆಯವರೂ ರಸ್ತೆಯ ಮೇಲೆ ಅಡ್ಡಲಾಗಿ ದೊಡ್ಡ ದೊಡ್ಡ ಕಲ್ಲುಗಳನ್ನು ಒಟ್ಟೆಸಿ, ಕಾರಿನ ಬರುವಿಕೆಗಾಗಿ ಕಾಯುತ್ತಿದ್ದರು. ನಿರೀಕ್ಷೆಯ ಪ್ರಕಾರ ಸಂಚು ಯಶಸ್ವಿಯಾದರೆ ಚಂದ್ರಹಾಸನನ್ನು ಕೊಂದು, ಗೌರಿಯನ್ನು ಸೆರೆಹಿಡಿದುಕೊಂಡು ಬರಬೇಕೆಂದು ಶಂಕರನು ಆಜ್ಞಾಪಿಸಿದ್ದನು.

ಆ ದಿನ ಕೆಲವು ಅನಿವಾರ್ಯ ಕಾರಣಗಳ ದೆಸೆಯಿಂದ, ಚಂದ್ರಹಾಸನು ಕತ್ತಲಾಗುವುದರೊಳಗಾಗಿ ಅನಿಲಪುರಕ್ಕೆ ಹಿಂದಿರುಗಿ ಬರಲಾಗಲಿಲ್ಲ. ಪುರುಷೋತ್ತಮಬಾಬುರವರಿಗೆ ಆರೋಗ್ಯ ಸರಿಯಿಲ್ಲದಿದ್ದುದರಿಂದ ವಾಪಸು ಊರಿಗೆ ಹೋಗುವುದು ಅವಶ್ಯಕವಿತ್ತು. ಮದುವೆಯಾದ ನಂತರ ನೂರಾರು ಸಾರಿ ಶ್ರೀಪುರಕ್ಕೆ

ಹೋಗಿ ಬಂದಿದ್ದನು. ಎಂದೂ ಕ್ರಾಂತಿಸೇನೆಯವರಿಂದ ದಾರಿಯಲ್ಲಿ ಯಾವ ಘಟನೆಯೂ ನಡೆದಿರಲಿಲ್ಲ. ಯಾವ ವಿಧವಾದ ಭಯಕ್ಕೂ ಕಾರಣವಿಲ್ಲವೆಂಬ ಭಾವನೆಯಿಂದ ರಾತ್ರಿ ಎಂಟು ಗಂಟೆಗೆ ಚಂದ್ರಹಾಸನೂ, ಅವನ ಸಂಗಾತಿಗಳೂ ಶ್ರೀಪುರ ನಗರವನ್ನು ಬಿಟ್ಟರು. ಮುಂಜಾಗ್ರತೆಯ ದೃಷ್ಟಿಯಿಂದ ಕಿಶೋರನೇ ಕಾರನ್ನು ನಡೆಸುತ್ತಿದ್ದನು. ಹಿಂದುಗಡೆ ಗೌರಿಯೂ, ಚಂದ್ರಹಾಸನೂ ಕುಳಿತಿದ್ದರು. ಕಿಶೋರ ಪಕ್ಕದಲ್ಲಿ ಕ್ರಾಂತಿಕೂಟದ ಇಬ್ಬರು ಸಿಪಾಯಿಗಳೂ, ಚಂದ್ರಹಾಸನ ಪಕ್ಕದಲ್ಲಿ ಇನ್ನೊಬ್ಬ ಸಿಪಾಯಿಯೂ ಕುಳಿತ್ತಿದ್ದನು. ಕಾರು ಅನಿಲಗಿರಿಯನ್ನು ಸಮೀಪಿಸುತ್ತಿರುವಾಗ, ಯಾರೋ ಕೆಲವರು ರಸ್ತೆಯ ಪಕ್ಕದಲ್ಲಿ ನಿಂತಿರುವಂತೆ ಕಾರಿನ ಬೆಳಕಿನಲ್ಲಿ ಕಿಶೋರನಿಗೆ ಕಾಣಿಸಿತು. ಅನುಮಾನ ಬಂದು ಕಿಶೋರನು ಕಾರನ್ನು ನಿಧಾನವಾಗಿ ನಡೆಸುತ್ತಾ ಮುಂದೆ ಹೋದನು. ಸ್ವಲ್ಪದೂರ ಹೋದಮೇಲೆ, ಸುಮಾರು ಕಾಲು ಫರ್ಲಾಂಗು ದೂರದಲ್ಲಿ, ರಸ್ತೆಯ ಮೇಲೆ ಕಲ್ಲು ಬಿದ್ದಿರುವುದು ಸ್ಪಷ್ಟವಾಗಿ ಕಾಣಿಸಿತು. ಕ್ರಾಂತಿಸೇನೆಯವರು ಒಳ್ಳೆಯ ಆಯಾಕಟ್ಟಿನ ಸ್ಥಳದಲ್ಲಿ ಕಲ್ಲುಗಳನ್ನು ಹಾಕಿದ್ದರು. ಕಾರು ಬಲಗಡೆಯೂ ಹೋಗುವಂತಿರಲಿಲ್ಲ; ಎಡಗಡೆಯೂ ಹೋಗುವಂತಿರಲಿಲ್ಲ. ಕಿಶೋರನು ಧೈರ್ಯ ಶಾಲಿಯಾದರೂ ಏನು ಮಾಡಬೇಕೆಂಬುದು ಗೊತ್ತಾಗದೆ, ದಿಕ್ಕು ತೋಚದಂತಾಗಿ ಕಂಗಾಲಾದನು. ಯೋಚಿಸುವಷ್ಟು ಸಮಯವಿರಲಿಲ್ಲ. ತ್ವರಿತಗತಿಯಲ್ಲಿ ಕಾರನ್ನು ಹಿಮ್ಮುಖವಾಗಿ ಓಡಿಸಲಾರಂಭಿಸಿದನು. ರಕ್ತ ಕೇಸರಿಯು ಹಿಮ್ಮೊಗವಾಗಿ ಓಡುತ್ತಿದ್ದ ಕಾರಿನ ಮುಂಭಾಗದ ಬಲಗಡೆಯ ಚಕ್ರಕ್ಕೆ ಗುರಿಯಿಟ್ಟು ರೈಫಲ್ ಹಾರಿಸಿದನು. ಆದರೆ ಕಾರು ಚಲಿಸುತ್ತಿದ್ದುದರಿಂದ ಚಕ್ರಕ್ಕೆ ಗುಂಡಿನೇಟು ತಗಲಲಿಲ್ಲ. ಚಂದ್ರಹಾಸನು ತನ್ನ ಬಳಿಯೂ ರೈಫಲ್ ಇದೆ ಎಂಬುದನ್ನು ಶತ್ರುಗಳಿಗೆ ತೋರಿಸುವ ದೃಷ್ಟಿಯಿಂದ ಕಾರಿನ ಕಿಟಕಿಯಿಂದ, ಗುರಿಯಿಡಲು ಸಾಧ್ಯವಾಗದಿದ್ದರೂ ಶತ್ರುಗಳಿದ್ದ ಕಡೆಗೆ ಗುಂಡು ಹಾರಿಸಿದನು. ಅಷ್ಟರಲ್ಲಿ ಕಿಶೋರನು ಅನುಕೂಲವಾಗಿದ್ದ ಒಂದುಕಡೆ ಬಹಳ ಚಾಕಚಕ್ಯತೆಯಿಂದ ಕಾರನ್ನು ಹಿಂದಿರುಗಿಸಿ, ಅತಿವೇಗದಿಂದ ಶ್ರೀಪುರಕ್ಕೆ ಹೋದನು.

ಅಂದಿನ ಘಟನೆಯಿಂದ ಗೌರಿ ತತ್ತರಿಸಿ ಹೋಗಿದ್ದಳು. ಅಪಾಯದ ನೆಳಲಿನಡಿಯಲ್ಲಿ ತಾನೂ ತನ್ನ ಗಂಡನೂ ಸಹ ಬಾಳಬೇಕಾಗುತ್ತದೆಯೆಂದು ಮನಸ್ಸಿನಲ್ಲಿಯೇ ಮರುಗಿದಳು. ಇನ್ನು ಮುಂದೆ ಯಾವಾಗಲೂ ರಾತ್ರಿಯ ಹೊತ್ತು ಪ್ರಯಾಣ ಮಾಡಬಾರದೆಂದು ಗಂಡನಿಗೆ ಮನವಿ ಮಾಡಿಕೊಂಡಳು.

೮

ರಾಜ್ಯದಲ್ಲಿ ಕಾಂಗ್ರೆಸ್ ಜನಾನುರಾಗವನ್ನು ಕಳೆದುಕೊಂಡಿತ್ತು; ವಿರೋಧಪಕ್ಷಗಳು ಜನಾನುರಾಗವನ್ನು ಸಂಪಾದಿಸಿರಲಿಲ್ಲ. ವಿರೋಧಪಕ್ಷಗಳಿಗೆ ಆದರ್ಶವೂ ಇರಲಿಲ್ಲ. ಶಕ್ತಿಯೂ ಇರಲಿಲ್ಲ. ಕಾಂಗ್ರೆಸ್ಸಿನ ದೌರ್ಬಲ್ಯ ವಿರೋಧಪಕ್ಷಗಳ ಪ್ರಾಬಲ್ಯವಾಗಿತ್ತು. ಕಾಂಗ್ರೆಸ್ಸನ್ನು ಬಯ್ಯುವುದೇ ಅವರ ಬಂಡವಾಳವಾಗಿತ್ತು. ಉಗ್ರಗಾಮಿ ಪಂಥದವರು

ಕ್ರಾಂತಿಯ ಹೆಸರಿನಲ್ಲಿ ಅನರ್ಥದ ಹಾದಿಯನ್ನು ಹಿಡಿದಿದ್ದರೆ, ಪ್ರಜಾಸತ್ತಾತ್ಮಕ ಪಕ್ಷಗಳು ಜನಗಳ ಮೌಢ್ಯವನ್ನುಪಯೋಗಿಸಿಕೊಂಡು, ಆದರ್ಶವಿಲ್ಲದ ಅಸಂಬದ್ಧ ಪ್ರಲಾಪಗಳಲ್ಲಿ ತೊಡಗಿದ್ದವು. ಮೂರು ತಿಂಗಳಿಗೊಮ್ಮೆ ಅಥವಾ ಆರು ತಿಂಗಳಿಗೊಮ್ಮೆ ಮಂತ್ರಿಮಂಡಲಗಳು ಉರುಳಿ ಹೋಗುತ್ತಿದ್ದವು. ಅರಾಜಕತೆ ಅಪಾಯದ ಮಟ್ಟಕ್ಕೇರುತ್ತಿತ್ತು. ಅಧಿಕಾರಿಗಳು ಹಗಲುಗಳ್ಳರಂತೆ ಜನರನ್ನು ಸುಲಿಗೆ ಮಾಡುತ್ತಿದ್ದರು. ಜನರಿಗೆ ಕಾನೂನಿನ ರಕ್ಷಣೆಯೇ ಇರಲಿಲ್ಲ.

ಹೀಗಿದ್ದ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು, ಕ್ರಾಂತಿಸೇನೆಯವರು ಒಂದು ಕಡೆ ಹಣಕ್ಕಾಗಿ ದರೋಡೆಗಳನ್ನು ಮಾಡುತ್ತಲೂ, ಇನ್ನೊಂದು ಕಡೆ ಸೇಡಿಗಾಗಿ ತಮಗಾಗದವರನ್ನು ಅಮಾನುಷ ರೀತಿಯಲ್ಲಿ ಕೊಲೆ ಮಾಡುತ್ತಲೂ ಇದ್ದರು. ಕ್ರಾಂತಿಕೂಟದವರಿಗೂ, ಕ್ರಾಂತಿಸೇನೆಯವರಿಗೂ ಆಗಾಗ ಪ್ರಬಲ ಹೊಡೆದಾಟಗಳು ನಡೆಯುತ್ತಿದ್ದವು. ತನ್ನ ಬದ್ಧ ವೈರಿಯಾದ ಚಂದ್ರಹಾಸನನ್ನು ಕೊಲ್ಲಲು ಅಸಮರ್ಥನಾದುದಕ್ಕಾಗಿ, ಶಂಕರನು ಅವುಡು ಕಚ್ಚಿ ತನ್ನನ್ನು ತಾನೇ ಹಳಿದುಕೊಳ್ಳುತ್ತಿದ್ದನು. ಕ್ರಾಂತಿಸೇನೆಯ ಗುಪ್ತ ಸಭೆಗಳಲ್ಲಿ ಚಂದ್ರಹಾಸನನ್ನು ಕೊಲ್ಲುವುದರ ಅವಶ್ಯಕತೆಯನ್ನು ಪದೇ ಪದೇ ಒತ್ತಿ ಒತ್ತಿ ಹೇಳುತ್ತಿದ್ದನು. ಕ್ರಾಂತಿಕೂಟದವರು ಎಲ್ಲಿ ಸಿಕ್ಕಿದರೆ ಅಲ್ಲಿ ಕೊಲ್ಲಬೇಕೆಂದು ತನ್ನ ಕಡೆಯವರಿಗೆ ಕಟ್ಟಾಜ್ಞೆ ಮಾಡಿದ್ದನು. ಕ್ರಾಂತಿಸೇನೆಯಲಿದ್ದು, ಅದನ್ನು ಬಿಟ್ಟು ಹೋಗಿ, ಅದರ ಮೇಲೆ ಅಪಪ್ರಚಾರ ಮಾಡುತ್ತಿದ್ದ ವ್ಯಕ್ತಿಗಳನ್ನು ಪತ್ತೆ ಹಚ್ಚಿ ಅವರಿಗೆ ಸೂಕ್ತ ಶಿಕ್ಷೆ ವಿಧಿಸಬೇಕೆಂದು ಇನ್ನೊಂದು ಕಟ್ಟಾಜ್ಞೆ ಮಾಡಿದ್ದನು.

ಆ ಸಮಯದಲ್ಲಿ ಕ್ರಾಂತಿಸೇನೆಯವರು ಮಾಡಿದ್ದ ಕೆಲವು ಅಮಾನುಷ ಕೊಲೆಗಳು ಹೃದಯವಿದ್ರಾವಕವಾಗಿದ್ದವು. ಕ್ರಾಂತಿಸೇನೆಯವರು ನೇರವಾಗಿ ಎದುರುಬದುರಾಗಿ ತಮ್ಮ ಶತ್ರುಗಳ ಮೇಲೆ ಎಂದೂ ಬೀಳುತ್ತಿರಲಿಲ್ಲ. ಹೇಡಿಗಳಂತೆ ಮೋಸದಿಂದ ತಮಗಾಗದವರನ್ನು ಕೊಲ್ಲುವುದು ಅವರ ವಾಡಿಕೆಯಾಗಿತ್ತು. ಇಲ್ಲವೇ ರಾತ್ರಿಯ ಹೊತ್ತು ಎಲ್ಲರೂ ಮಲಗಿರುವಾಗ ಕಳ್ಳರಂತೆ ಮನೆಯನ್ನು ನುಗ್ಗಿ ಕೊಲೆ ದರೋಡೆಗಳನ್ನು ನಡೆಯಿಸುತ್ತಿದ್ದರು.

ಶ್ರೀಪುರದಲ್ಲಿ, ಸುಮಾರು ೨೪ ವರ್ಷ ವಯಸ್ಸಿನ ರಾಮು ಎಂಬ ಕಾಲೇಜು ವಿದ್ಯಾರ್ಥಿಯೊಬ್ಬನು ಹಲವು ವಿದ್ಯಾರ್ಥಿಗಳಂತೆ ಆದರ್ಶಪ್ರೇರಿತನಾಗಿ ಕ್ರಾಂತಿಸೇನೆಗೆ ಸೇರಿದ್ದನು. ಕೆಲವು ತಿಂಗಳ ನಂತರ, ಕ್ರಾಂತಿಸೇನೆಯವರು ನಡೆಯಿಸುತ್ತಿದ್ದ ದೌರ್ಜನ್ಯ ಕೃತ್ಯಗಳನ್ನು ನೋಡಿ ಅಸಹ್ಯಪಟ್ಟು, ಕ್ರಾಂತಿಸೇನೆಯನ್ನು ಬಿಟ್ಟುಬಂದು, ಕಾಲೇಜಿನಲ್ಲಿ ತನ್ನ ಶಿಕ್ಷಣವನ್ನು ಮುಂದುವರಿಸಿದ್ದನು. ಅವನು ಒಂದುದಿನ ರಾತ್ರಿ ಪರೀಕ್ಷೆಗಾಗಿ ಮನೆಯಲ್ಲಿ ಓದುತ್ತಿರುವಾಗ. ಮನೆಯಲ್ಲಿ ಬೇರೆ ಯಾರೂ ಇಲ್ಲದ ಸಮಯವನ್ನು ಸಾಧಿಸಿ, ಕ್ರಾಂತಿಸೇನೆಯವರು ಅವನ ಮನೆಗೆ ನುಗ್ಗಿ, ಬಲಾತ್ಕಾರದಿಂದ ಅವನನ್ನು ಎಳೆದುಕೊಂಡು ಹೋಗಿ, ನಿರ್ಜನ ಪ್ರದೇಶದಲ್ಲಿದ್ದ ಒಂದು ಶಾಲಾ ಕಟ್ಟಡಕ್ಕೆ ಹೊತ್ತುಕೊಂಡುಹೋಗಿ, ಅವನ ಕತ್ತನ್ನು ತುಂಡರಿಸಿ, ಅವನ ದೇಹವನ್ನು ಚರಂಡಿಗೆ

ಎಸೆದುಹೋಗಿದ್ದರು. ಅವನು ಕ್ರಾಂತಿಸೇನೆಯ ವಿಚಾರದಲ್ಲಿ ತನ್ನ ಸ್ನೇಹಿತರೊಡನೆ ಕೆಲವು ಮಾತುಗಳನ್ನು ಹೇಳಿದ್ದೇ ದೊಡ್ಡ ಅಪರಾಧವಾಗಿ ತನ್ನ ಪ್ರಾಣವನ್ನು ಕಳೆದುಕೊಂಡನು.

ಶ್ರೀಪುರ ಜಿಲ್ಲೆಯ ಬಂಕಾಪುರವೆಂಬ ಪಟ್ಟಣದಲ್ಲಿ ಸಿದ್ಧನಾಥ್ ಎಂಬ ಡಾಕ್ಟರಿದ್ದರು, ಅವರ ಒಬ್ಬನೇ ಮಗ ಸುರೇಶ್ ಎಂಬುವನು ಶ್ರೀಪುರದ ಕಾಲೇಜಿನಲ್ಲಿ ಓದುತ್ತಿದ್ದನು. ಅವನಿಗೆ ಇಪ್ಪತ್ತೆರಡು ವರ್ಷ ವಯಸ್ಸಾಗಿತ್ತು. ಅವನು ಕ್ರಾಂತಿಸೇನೆಯ ಪ್ರಭಾವಕ್ಕೊಳಗಾಗಿ, ತನ್ನ ಕೆಲವು ಸ್ನೇಹಿತರೊಡನೆ ಕ್ರಾಂತಿಸೇನೆಯ ಸದಸ್ಯನಾಗಿದ್ದನು. ಕೆಲವು ತಿಂಗಳುಗಳ ನಂತರ, ಕ್ರಾಂತಿಸೇನೆಯ ಗುಟ್ಟುರಟ್ಟಾಗಿ, ಅವನು ಕ್ರಾಂತಿಸೇನೆಯನ್ನು ಬಿಟ್ಟು ತನ್ನ ಶಿಕ್ಷಣದ ಕಡೆಗೆ ಗಮನವಿಟ್ಟಿದ್ದನು. ತಮ್ಮ ಸೇನೆಯನ್ನು ತ್ಯಜಿಸಿದನೆಂದು ಕ್ರಾಂತಿ ಸೇನೆಯವರಿಗೆ ಅವನ ಮೇಲೆ ಕೋಪವಿತ್ತು. ಜೊತೆಗೆ ಆ ಹುಡುಗನು ಪೂರ್ವಾಪರ ವಿವೇಚನೆಯಿಲ್ಲದೆ, ಕ್ರಾಂತಿಸೇನೆಯವರು ಕೊಲೆಗಾರರೆಂದೂ, ದರೋಡೆಕಾರರೆಂದೂ ವಿದ್ಯಾರ್ಥಿಗಳೊಂದಿಗೆ ಹೇಳತೊಡಗಿದನು. ಇದರಿಂದ ಕ್ರಾಂತಿಸೇನೆಯವರಿಗೆ ಅವನ ಮೇಲೆ ಇನ್ನಷ್ಟು ಕೋಪ ಉಂಟಾಯಿತು. ಶ್ರೀಪುರದಲ್ಲಿಯೇ ಅವನನ್ನು ಹಿಡಿಯಬೇಕೆಂದು ಕ್ರಾಂತಿಸೇನೆಯವರು ಪ್ರಯತ್ನಪಟ್ಟಿದ್ದರು. ಆದರೆ ಸಾಧ್ಯವಾಗಿರಲಿಲ್ಲ.

ಕಾಲೇಜಿಗೆ ಕ್ರಿಸ್‌ಮಸ್ ರಜಾ ಬಂದ ಪ್ರಯುಕ್ತ, ಸುರೇಶನು ಊರಿಗೆ ಹೋಗಿ ತಂದೆ ತಾಯಿಗಳ ಜೊತೆಯಲ್ಲಿ ಕೆಲವು ದಿನಗಳಿದ್ದನು. ಅವನು ಊರಿನಲ್ಲಿದ್ದಾಗ, ಒಂದು ದಿನ ನಡುರಾತ್ರಿ, ಕ್ರಾಂತಿಸೇನೆಯ ಸುಮಾರು ಮೂವತ್ತು ಜನರ ತಂಡ ಇಸ್ಮೇಯಿಲನ ನಾಯಕತ್ವದಲ್ಲಿ ಲಾರಿಯಲ್ಲಿ ಬಂಕಾಪುರಕ್ಕೆ ಹೋದರು. ಅಲ್ಲಿಗೆ ಹೋದ ನಂತರ, ಅವರು ತಂದಿದ್ದ ಲಾರಿಯನ್ನು ಸಿದ್ಧಾನಾಥರು ಮನೆಗೆ ಸ್ವಲ್ಪ ದೂರ ನಿಲ್ಲಿಸಿದರು. ಅವರಲ್ಲಿ ಕೆಲವರು ಸಿದ್ಧಾನಾಥರ ಮನೆಯ ಮುಂಭಾಗದಲ್ಲಿ ನಿಂತು, ಸಿದ್ಧಾನಾಥರ ಹೆಸರನ್ನು ಹಿಡಿದು ಕೂಗಿದರು. ಸಿದ್ಧಾನಾಥರು ನಿದ್ದೆಯಿಂದ ಎದ್ದು "ಯಾರು?" ಎಂದು ಒಳಗಡೆಯಿಂದಲೇ ಕೇಳಿದರು. ಕ್ರಾಂತಿಸೇನೆಯ ಧೂರ್ತರು ತಾವು ಸಮೀಪದ ಒಂದು ಹಳ್ಳಿಯವರೆಂದೂ, ಆ ಹಳ್ಳಿಯ ಪ್ರಮುಖರೊಬ್ಬರಿಗೆ ತುಂಬಾ ಖಾಯಿಲೆ ಆಗಿದೆಯೆಂದೂ, ಅವರನ್ನು ಕರೆದುಕೊಂಡು, ಹೋಗಲು ಬಂದಿರುವುದಾಗಿ ಹೇಳಿದರು.

ಸಿದ್ಧಾನಾಥರು ನಿಜವೆಂದು ನಂಬಿ ಬಾಗಿಲನ್ನು ತೆಗೆದ ಕೂಡಲೆ, ಆ ಧೂರ್ತರು ಮನೆಯೊಳಗೆ ನುಗ್ಗಿ ಸಿದ್ಧಾನಾಥರನ್ನು ಹಿಡಿದುಕೊಂಡರು. ಅವರು ಕೂಗಲೆತ್ನಿಸಿದಾಗ ಅವರ ಮುಖದೆದುರು ಒಬ್ಬನು ಪಿಸ್ತೂಲನ್ನು ಹಿಡಿದು ತೆಪ್ಪಗಿರಬೇಕೆಂದು ಘರ್ಜಿಸಿದನು. ಅಷ್ಟರಲ್ಲಿ ಕೆಲವರು ಒಳಗೆ ನುಗ್ಗಿ ಮಲಗಿದ್ದ ಸುರೇಶನನ್ನು ಎಳೆದುಕೊಂಡು ಬಂದರು. ಸುರೇಶನು ಕೂಗುತ್ತಿರುವಾಗ ಅವನ ತಾಯಿ ಓಡಿಬಂದಳು. ತಾಯಿಯ ಬಾಯಿಗೆ ಬಟ್ಟೆಯನ್ನು ತುರುಕಿ ಅವಳನ್ನು ಕೆಲವರು ಹಿಡಿದುಕೊಂಡರು. ಉಳಿದವರು ತಂದೆ ತಾಯಿಗಳ ಎದುರಿನಲ್ಲಿಯೇ ಸುರೇಶನ ರುಂಡವನ್ನು ಕತ್ತರಿಸಿದರು. ಆ ನಂತರ ಸಿದ್ಧಾನಾಥನ ಬಾಯಿಗೂ ಬಟ್ಟೆ ತುರುಕಿ ಕೈಕಾಲುಗಳನ್ನೂ ಕಟ್ಟಿದರು. ಅದೇ ರೀತಿ

ಅವನ ಹೆಂಡತಿಯ ಕೈಕಾಲುಗಳನ್ನೂ ಕಟ್ಟಿದರು. ಆಮೇಲೆ ಮನೆಯನ್ನೆಲ್ಲಾ ಶೋಧಿಸಿ, ಮನೆಯಲ್ಲಿದ್ದ ನಗದು ಹಣವನ್ನೂ, ಆಭರಣವನ್ನೂ ದೋಚಿಕೊಂಡು ಪರಾರಿಯಾದರು. ಸುರೇಶನ ರುಂಡವನ್ನು ತೆಗೆದುಕೊಂಡು ಹೋಗಿ ಅವನು ಓದುತ್ತಿದ್ದ ಕಾಲೇಜಿನ ಮುಂದುಗಡೆ ಒಂದು ಮರಕ್ಕೆ ನೇತು ಹಾಕಿದರು. ಕ್ರಾಂತಿಸೇನೆಯ ವಿರುದ್ಧ ಯಾರೂ ಮಾತನಾಡಬಾರದೆಂಬುದೇ ಆ ರೀತಿ ಮಾಡಿದ್ದರ ಉದ್ದೇಶವಾಗಿತ್ತು.

ಶ್ರೀಪುರದ ಕಾಲೇಜಿನಲ್ಲಿ ಒದುತ್ತಿದ್ದ ಇನ್ನೊಬ್ಬ ವಿದ್ಯಾರ್ಥಿ, ಸುರೇಶನ ಜೊತೆಯಲ್ಲಿಯೇ ಕ್ರಾಂತಿಸೇನೆಯನ್ನು ಸೇರಿದ್ದನು. ಅವನ ಜೊತೆಯಲ್ಲಿಯೇ ಕ್ರಾಂತಿಸೇನೆಯನ್ನು ಬಿಟ್ಟಿದ್ದನು. ಬಿಟ್ಟ ನಂತರ ಕ್ರಾಂತಿಸೇನೆಯವರು ಅನಾಗರಿಕ ಪಶುಗಳೆಂದೂ, ಅವರ ಸೇನೆಗೆ ಸೇರಬಾರದೆಂದೂ, ವಿದ್ಯಾರ್ಥಿಗಳಿಗೆ ಹೇಳುತ್ತಿದ್ದನು. ಅವನು ಕ್ರಾಂತಿಸೇನೆಯನ್ನು ಬಿಟ್ಟ ಕೆಲವು ತಿಂಗಳ ನಂತರ ಒಂದು ದಿನ ಸಾಯಂಕಾಲ ಅವನು ಶ್ರೀಪುರದ ಒಂದು ರಸ್ತೆಯಲ್ಲಿ ಹೋಗುತ್ತಿದ್ದಾಗ, ಕ್ರಾಂತಿಸೇನೆಯವರು ಅವನನ್ನು ಎಳೆದುಕೊಂಡು ಹೋಗಿ, ಅವನಿಗೆ ಕ್ಲೋರೋಫಾರಂ ಕೊಟ್ಟು ಪ್ರಜ್ಞೆತಪ್ಪಿಸಿ, ಅವನನ್ನು ಒಂದು ಟ್ಯಾಕ್ಸಿಯಲ್ಲಿ ಹಾಕಿಕೊಂಡು ಹೋಗುತ್ತಿದ್ದರು. ಎಲ್ಲಿಗೋ ಗೋಪ್ಯ ಸ್ಥಳಕ್ಕೆ ಅವನನ್ನು ಕೊಂಡೊಯ್ದು ಅವನನ್ನು ಕೊಲ್ಲಬೇಕೆಂಬುದು ಅವರ ಉದ್ದೇಶವಾಗಿತ್ತು.

ಅವನಿಗೆ ಖಾಯಿಲೆಯಿಂದ ಪ್ರಜ್ಞೆತಪ್ಪಿ ಹೋಗಿದೆಯೆಂದೂ, ಚಿಕಿತ್ಸೆಗಾಗಿ ಅವನನ್ನು ಕರೆದುಕೊಂಡು ಹೋಗುತ್ತಿರುವುದಾಗಿಯೂ, ಟ್ಯಾಕ್ಸಿಯವನಿಗೆ ಸುಳ್ಳು ಹೇಳಿದರು. ಶ್ರೀಪುರದ ರಸ್ತೆಯಲ್ಲಿ ಟ್ಯಾಕ್ಸಿ ಹೋಗುತ್ತಿರುವಾಗ, ಕ್ಲೋರೋಫಾರಂ ಅಮಲು ಇಳಿದು ಆ ಯುವಕನು ಕೂಗಲಾರಂಭಿಸಿದನು. ಆಗ ಡ್ರೈವರ್ ಟ್ಯಾಕ್ಸಿಯನ್ನು ನಿಲ್ಲಿಸಿ, ಅದೃಷ್ಟವಶಾತ್ ಹತ್ತಿರದಲ್ಲಿಯೇ ಇದ್ದ ಪೊಲೀಸರಿಗೆ ತಿಳಿಸಿದನು. ಪೊಲೀಸರು ಬಂದೊಡನೆ ಕ್ರಾಂತಿಸೇನೆಯವರು ಪೊಲೀಸರ ಮೇಲೂ, ಟ್ಯಾಕ್ಸಿಯಲ್ಲಿದ್ದ ಯುವಕನ ಮೇಲೂ, ಟ್ಯಾಕ್ಸಿಯ ಡ್ರೈವರ ಮೇಲೂ ಬಾಂಬುಗಳನ್ನೆಸದು ಓಡಿಹೋದರು. ಯುವಕನಿಗೆ ಬಾಂಬಿನ ದೆಸೆಯಿಂದ ಸ್ವಲ್ಪ ಘಾಸಿಯಾಯಿತೇ ಹೊರತು ಇನ್ನೇನೂ ಅಪಾಯವಾಗಲಿಲ್ಲ. ಅವನು ಕೂಗದಿದ್ದರೆ ಧೂರ್ತರು ಅವನನ್ನು ಯಮಸದನಕ್ಕೆ ಕಳುಹಿಸುತ್ತಿದ್ದರು.

ಈ ಘಟನೆಯಾದ ಕೆಲವು ದಿನಗಳ ನಂತರ ಕ್ರಾಂತಿಕೂಟದ ಇಪ್ಪತ್ತೈದು ಜನ ಸ್ವಯಂಸೇವಕರು ಅಂಬರೀಶಪುರವೆಂಬ ಸಣ್ಣ ಪಟ್ಟಣಕ್ಕೆ, ಪಕ್ಷದ ಸಂಘಟನಾ ಕಾರ್ಯಕ್ಕಾಗಿ ಹೋಗಿದ್ದರು. ಕ್ರಾಂತಿಸೇನೆಯವರಿಗೆ ಅವರು ಆ ಊರಿಗೆ ಬರುತ್ತಾರೆಂಬ ಸುದ್ದಿಮೊದಲೇ ಗೊತ್ತಾಗಿ, ಇಪ್ಪತ್ತೈದು ಜನ ಕ್ರಾಂತಿಕೂಟದವರನ್ನು ಮೋಸದಿಂದಲೇ ಕೊಲ್ಲಬೇಕೆಂದು ಮಸಲತ್ತು ಮಾಡಿದರು. ಊರಿಗೆ ಸ್ವಲ್ಪ ದೂರದಲ್ಲಿ ನಿರ್ಜನ ಪ್ರದೇಶದಲ್ಲಿ ಇಪ್ಪತ್ತೈದು ಗೋರಿಗಳನ್ನು ಅಗೆದು ಸಿದ್ಧಪಡಿಸಿದರು. ಕೆಲವರು ಗೋರಿಗಳ ಸಮೀಪ ಮರೆಯಲ್ಲಿ ಶಸ್ತ್ರಸಜ್ಜಿತರಾಗಿ ಕಾದಿದ್ದರು. ಕೆಲವರು ವೇಷ ಮರೆಯಿಸಿಕೊಂಡು, ಕ್ರಾಂತಿಕೂಟದ ಹಿತೈಷಿಗಳಂತೆ ನಟಿಸುತ್ತ ಊರ ಹೊರಗಡೆ ಕ್ರಾಂತಿಕೂಟದ ಸ್ವಯಂಸೇವಕರ ಸ್ವಾಗತಕ್ಕಾಗಿ ಕಾದಿದ್ದರು.

ಇಪ್ಪತ್ತೈದು ಜನ ಕ್ರಾಂತಿಕೂಟದ ಯುವಕರು ಊರಿನ ಸಮೀಪ ಬಂದೊಡನೆ, ಅಲ್ಲಿ ಕಾದಿದ್ದ ಕ್ರಾಂತಿಸೇನೆಯ ಧೂರ್ತರು ತಾವು ಕ್ರಾಂತಿಕೂಟದ ಹಿತೈಷಿಗಳೆಂದೂ, ಊರಿನ ಜನರು ಅವರಿಗಾಗಿ ಕಾಯುತ್ತಿದ್ದಾರೆಂದೂ, ಒಂದು ಸಭೆಯನ್ನು ಏರ್ಪಡಿಸಲಾಗಿದೆಯೆಂದೂ, ತಮ್ಮ ಜೊತೆಯಲ್ಲಿ ಬರಬೇಕೆಂದೂ ಹೇಳಿದರು. ಪಾಪ! ಆ ಸ್ವಯಂಸೇವಕರು ಆ ಧೂರ್ತರು ಇಪ್ಪತ್ತೈದು ಜನರನ್ನೂ ಗೋರಿ ತೆಗೆದಿದ್ದ ಸ್ಥಳಕ್ಕೆ ಕರೆದುಕೊಂಡು ಹೋದರು. ಅಲ್ಲಿಗೆ ಹೋದೊಡನೆ ಮರೆಯಲ್ಲಿದ್ದ ಸುಮಾರು ನೂರು ಜನ ಕ್ರಾಂತಿಸೇನೆಯ ಶಸ್ತ್ರಸಜ್ಜಿತ ಸಿಪಾಯಿಗಳು ಆ ಇಪ್ಪತ್ತೈದು ಜನರನ್ನು ಸುತ್ತುಗಟ್ಟಿದರು. ಐದು ನಿಮಿಷಗಳಲ್ಲಿ ಆ ಇಪ್ಪತ್ತೈದು ಜನರೂ ಕ್ರಾಂತಿಸೇನೆಯವರ ಗುಂಡಿಗೆ ತುತ್ತಾದರು. ಇಪ್ಪತ್ತೈದು ಹೆಣಗಳನ್ನು ಇಪ್ಪತ್ತೈದು ಗೋರಿಗಳಲ್ಲಿ ಹಾಕಿ ಮಣ್ಣು ಮುಚ್ಚಿ ಕ್ರಾಂತಿಸೇನೆಯವರು ಪರಾರಿಯಾದರು.

ಈ ಸಾಮೂಹಿಕ ಕೊಲೆಯಾದ ಕೆಲವು ದಿನಗಳ ನಂತರ ಇನ್ನೊಂದು ಘಟನೆ ನಡೆಯಿತು. ಶ್ರೀಪುರ ಜಿಲ್ಲೆಯ ರಂಭಾಪುರಿಯಿಂದ ಕಾನೂರಿಗೆ ಹೊರಟಿದ್ದ ಸರ್ಕಾರಿ ಬಸ್ಸೊಂದು, ಕಾನೂರಿಗೆ ಸುಮಾರು ಹದಿನೆಂಟು ಮೈಲಿಗಳ ದೂರದಲ್ಲಿ ರಾತ್ರಿಯ ಹೊತ್ತು ಕಾಡಿನ ಮಧ್ಯೆ ಬರುತ್ತಿರುವಾಗ, ಸುಮಾರು ಐವತ್ತು ಜನ ಕ್ರಾಂತಿಸೇನೆಯವರು ರಸ್ತೆಯ ಅಕ್ಕಪಕ್ಕದಲ್ಲಿ ಅಡಗಿಕೊಂಡಿದ್ದರು. ಬಸ್ಸು ಅವರಿದ್ದಲ್ಲಿಗೆ ಬಂದ ಕೂಡಲೆ ಅವರ ಪೈಕಿ ಒಬ್ಬನು ಕಂಡಕ್ಟರ್ ಸಿಳ್ಳಿಯನ್ನು ಊದಿದಂತೆ, ಸಿಳ್ಳಿಯನ್ನು ಊದಿದನು. ಬಸ್ಸು ಬೇಗವಾಗಿ ಚಲಿಸುತ್ತಿತ್ತು. ಕಂಡಕ್ಟರನೇ ಸಿಳ್ಳಿಯನ್ನು ಊದಿದನೆಂದು ಭಾವಿಸಿ, ಡ್ರೈವರ್ ಬಸ್ಸನ್ನು ನಿಲ್ಲಿಸಿದನು. ಬಸ್ಸಿನಲ್ಲಿ ಐವತ್ತು ಜನ ಪ್ರಯಾಣಿಕರಿದ್ದರು. ಬಸ್ಸು ನಿಂತೊಡನೆ ಐವತ್ತು ಜನ ಕ್ರಾಂತಿಸೇನೆಯವರು ಬಸ್ಸನ್ನು ಸುತ್ತುಗಟ್ಟಿ ಆಯುಧಗಳನ್ನು ತೋರಿಸಿ ಪ್ರಯಾಣಿಕರನ್ನು ಕೆಳಗಿಳಿಯದಂತೆ ತಡೆದರು. ಅನಂತರ ಬಸ್ಸಿಗೆ ಪೆಟ್ರೋಲ್ ಸುರಿದು ಬೆಂಕಿಯನ್ನು ಹಚ್ಚಿದರು. ಐವತ್ತು ಜನರ ಪೈಕಿ ಇಪ್ಪತ್ತೆಂಟು ಮಂದಿ ಪ್ರಯಾಣಿಕರು ಹೇಗೋ ಕೆಳಗೆ ಧುಮುಕಿ ತಪ್ಪಿಸಿಕೊಂಡು ಓಡಿದರು. ಇಬ್ಬರು ಬಸ್ಸಿನಲ್ಲಿಯೇ ಸುಟ್ಟು ಬೆಂದು ಹೋದರು. ಉಳಿದು ಇಪ್ಪತ್ತು ಮಂದಿ ಬೆಂಕಿಯಿಂದ ಗಾಯಗೊಂಡರು. ಅವರ ಪೈಕಿ ಅನಂತರ ಕೆಲವರು ಆಸ್ಪತ್ರೆಯಲ್ಲಿ ಸತ್ತು ಹೋದರು. ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿದ್ದವರ ಪೈಕಿ ಕೆಲವರು ಕ್ರಾಂತಿಸೇನೆಗೆ ವಿರೋಧವಾಗಿದ್ದರಿಂದ ಅವರನ್ನು ಸುಡುವ ಸಲುವಾಗಿ ಇಡೀ ಬಸ್ಸಿಗೆ ಬೆಂಕಿ ಹಚ್ಚಿದರೆಂದು ಅನಂತರ ಗೊತ್ತಾಯಿತು.

ಈ ಘಟನೆಯಾದ ಹಲವು ದಿನಗಳ ನಂತರ ಒಂದೇ ರಾತ್ರಿ ಮೂವತ್ತು ಜನ ಕ್ರಾಂತಿಸೇನೆಯವರು ತ್ರಿಪುರ ಎಂಬ ಗ್ರಾಮದಲ್ಲಿ ಆರು ಮನೆಗಳನ್ನು ಲೂಟಿ ಮಾಡಿದರು. ಲೂಟಿಗಳನ್ನು ಎದುರಿಸಿದ ಇಬ್ಬರು ಭೂಮಾಲಿಕರನ್ನು ಕೊಲೆ ಮಾಡಿದರು. ಆ ಒಂದು ರಾತ್ರಿಯ ಲೂಟಿಯಿಂದ ಎರಡು ಬಂದೂಕುಗಳೂ, ಸುಮಾರು ಐವತ್ತು ಸಾವಿರ ರೂಪಾಯಿಗಳ ನಗದು ಹಣವೂ, ಸುಮಾರು ಎರಡು ಲಕ್ಷ ರೂಪಾಯಿ ಬೆಲೆ ಬಾಳುವ ಬೆಳ್ಳಿ ಬಂಗಾರದ ಸಾಮಾನುಗಳೂ ಕ್ರಾಂತಿಸೇನೆಯ ವಶವಾದವು. ಈ ಘಟನೆಯಾದ

ಕೆಲವು ದಿನಗಳ ನಂತರ ದೂರ್ವಾಸಪುರದಲ್ಲಿ ಕ್ರಾಂತಿಕೂಟದವರು ತಮ್ಮ ಪಕ್ಷದ ಆಫೀಸಿನಲ್ಲಿ ಸಭೆ ಸೇರಿರುವಾಗ ಕ್ರಾಂತಿಸೇನೆಯವರು ಆ ಆಫೀಸಿಗೆ ನುಗ್ಗಿ ಬಾಂಬನ್ನು ಹಾಕಿದರು. ಅದರ ಪರಿಣಾಮವಾಗಿ ಆಫೀಸಿನ ಮೇಲ್ಛಾವಣಿಯೂ ಹಾರಿಹೋಗಿ ಇಬ್ಬರು ಕ್ರಾಂತಿಕೂಟದವರು ಸತ್ತು ಹೊದರು. ಇದಾದ ಸ್ವಲ್ಪ ದಿನಗಳಾದ ನಂತರ ಒಂದೇ ದಿನ ಏಳುಜನ ಕ್ರಾಂತಿಕೂಟದವರನ್ನು ಶ್ರೀಪುರ ಜಿಲ್ಲೆಯ ಬೇರೆ ಬೇರೆ ಕಡೆಗಳಲ್ಲಿ ಕೊಂದು ಹಾಕಿದರು. ಆ ಪೈಕಿ ಒಬ್ಬನನ್ನು ಕೊಚ್ಚಿಕೊಚ್ಚಿ ಚೂರು ಮಾಡಿ ಹಾಕಿದ್ದರು.

ಕೇವಲ ಒಂದು ವರ್ಷದ ಅವಧಿಯಲ್ಲಿ, ರಾಜ್ಯದಲ್ಲಿ ಕ್ರಾಂತಿಸೇನೆಯವರು ಕ್ರಾಂತಿಯ ಹೆಸರಿನಲ್ಲಿ ನೂರಾರು ಕೊಲೆಗಳನ್ನು ಮಾಡಿದ್ದರು. ಸುಮಾರು ಐವತ್ತು, ಅರವತ್ತು ಲೂಟಿಗಳನ್ನು ಮಾಡಿದ್ದರು. ಶಂಕರನು ಮಾತ್ರ ತಮ್ಮ ಪಕ್ಷಕ್ಕೂ ಕೊಲೆ, ಲೂಟಿಗಳಿಗೂ ಯಾವ ಸಂಬಂಧವೂ ಇಲ್ಲವೆಂದೂ, ಅನಾವಶ್ಯಕವಾಗಿ ಕೆಲವು ಬಂಡವಾಳಶಾಹಿಗಳು ತನ್ನ ಪಕ್ಷದ ಮೇಲೆ ಸುಳ್ಳು ಆಪಾದನೆ ಮಾಡುತ್ತಿದ್ದಾರೆಂದೂ ಹೇಳುತ್ತಿದ್ದನು. "ನಿಮ್ಮ ಪಕ್ಷದಲ್ಲಿ ದುಷ್ಟರನ್ನೇಕೆ ಸೇರಿಸಿಕೊಂಡಿದ್ದೀರಿ?" ಎಂದು ಯಾರಾದರೂ ಪ್ರಶ್ನಿಸಿದರೆ, ಶಂಕರನು "ನಮ್ಮ ಪಕ್ಷದಲ್ಲಿ ಯಾರೂ ಇಲ್ಲವಲ್ಲ. ನನ್ನ ದೃಷ್ಟಿಯಲ್ಲಿ ಆಸ್ತಿಯಿಲ್ಲದವರೆಲ್ಲರೂ ಸಜ್ಜನರು; ಆಸ್ತಿವಂತರು ದುರ್ಜನರು" ಎಂದು ಹೇಳುತ್ತಿದ್ದನು.

ಕ್ರಾಂತಿಸೇನೆಯವರು ಹಲವು ಹೋರಾಟಗಳನ್ನು ಹೂಡಿದ್ದರೂ ಚಂದ್ರಹಾಸನನ್ನು ಕೊಲ್ಲಲು ಅವರಿಗೆ ಸಾಧ್ಯವಾಗಿರಲಿಲ್ಲ. ಕ್ರಾಂತಿಸೇನೆಯವರ ದೌರ್ಜನ್ಯ ಕೃತ್ಯಗಳು ಹೆಚ್ಚಾದಂತೆಲ್ಲಾ ಕ್ರಾಂತಿಕೂಟದ ಪ್ರಾಬಲ್ಯ ಹೆಚ್ಚಾಗುತ್ತಿತ್ತು. ಆದರ್ಶ ಪ್ರೇರಿತರಾದ ಅನೇಕ ಮೇಧಾವಿಗಳು ಕ್ರಾಂತಿಕೂಟವನ್ನು ಸೇರಿದ್ದರು. ಕೆಲವರು ಆದರ್ಶಪ್ರೇರಿತರಾಗಿ ಕ್ರಾಂತಿಕೂಟವನ್ನು ಸೇರಿದ್ದರೆ, ಕೆಲವರು ಕ್ರಾಂತಿಸೇನೆಯ ಉಪಟಳವನ್ನು ತಡೆಗಟ್ಟುವ ಸಲುವಾಗಿ ಸೇರಿದ್ದರು. ಹಲವರು ಕ್ರಾಂತಿಕೂಟದ ಸದಸ್ಯರಾಗದಿದ್ದರೂ ನಾನಾ ರೀತಿಯಲ್ಲಿ ಬೆಂಬಲ ನೀಡುತ್ತಿದ್ದರು. ಕಾಂಗ್ರೆಸ್ಸಿನ ಲಂಚಕೋರ ರೀತಿನೀತಿಗಳಿಂದ ಬೇಸತ್ತಿದ್ದ ನಿಷ್ಠಾವಂತ ಕಾಂಗ್ರೆಸ್ಸಿಗರನೇಕರು ಕ್ರಾಂತಿಕೂಟವನ್ನು ಸೇರಿದ್ದರು.

ಬರಬರುತ್ತಾ ಶಂಕರನ ಮತ್ತು ಅವನ ಅನುಯಾಯಿಗಳ ನಿಜವಾದ ಬಣ್ಣ ಜನಸಾಮಾನ್ಯರಿಗೂ ಗೊತ್ತಾಗುತ್ತಾ ಬಂದಿತ್ತು. ಬಹಿರಂಗ ನೋಟಕ್ಕೆ ಕ್ರಾಂತಿಸೇನೆ ಪ್ರಬಲ ಸಂಸ್ಥೆಯಾಗಿ ಕಂಡಿದ್ದರೂ, ಅದರ ಆರ್ಭಟ ವಿಶೇಷವಾಗಿದ್ದರೂ ಕೂಡ, ಅಂತರಂಗದಲ್ಲಿ ಜನರ ಒಲವು ಕ್ರಾಂತಿಕೂಟದ ಕಡೆಗೇ ವಾಲಿತ್ತು. ಆದರೆ ಶಂಕರನೂ ಅವನ ಅನುಯಾಯಿಗಳೂ ಜನರನ್ನು ಹೆದರಿಸಿ, ಬೆದರಿಸಿ ತಮ್ಮ ಸೇನೆಯ ಕಡೆಗೆ ಒಲಿಸಿಕೊಳ್ಳುವ ಪ್ರಯತ್ನ ನಡೆಯಿಸುತ್ತಿದ್ದರು. ಆದರೂ ಕ್ರಾಂತಿಕೂಟದ ಬಲ ವರ್ಧಿಸುತ್ತಿದೆಯೆಂಬ ವಿಚಾರ ಶಂಕರನಿಗೆ ಗೊತ್ತಾಗಿತ್ತು. ಕ್ರಾಂತಿಕೂಟದ ಪ್ರೇರಕ ಶಕ್ತಿ ಚಂದ್ರಹಾಸನದೆಂಬುದೂ ಅವನಿಗೆ ಅರಿವಾಗಿತ್ತು. ಚಂದ್ರಹಾಸನನ್ನು ಕೊಂದರೆ ಮಾತ್ರ ಕ್ರಾಂತಿಕೂಟದ ಬಲ ಅಡಗುವುದೆಂದು ಅವನಿಗೆ ಮೊದಲಿನಿಂದಲೂ ತಿಳಿದಿತ್ತು.

ಚಂದ್ರಹಾಸನನ್ನು ಅದುವರೆಗೆ ಕೊಲ್ಲಲಾಗದಿದ್ದುದು ಶಂಕರನಿಗೆ ದೊಡ್ಡದೊಂದು ಮನೋರೋಗವಾಗಿದ್ದಿತು.

ಒಂದು ದಿನ ಕ್ರಾಂತಿಸೇನೆಯ ಕೇಂದ್ರ ಸಮಿತಿಯ ಗುಪ್ತಸಭೆ ಸೇರಿದ್ದಾಗ, ಶಂಕರನು ಕ್ರಾಂತಿಕೂಟದ ವಿಚಾರವನ್ನು ಪ್ರಸ್ತಾಪಿಸಿ ಮಾತನಾಡುತ್ತಿರುವಾಗ, "ಆ ಬೂರ್ಷ್ವಾ ಕುನ್ನಿ ಚಂದ್ರಹಾಸನನ್ನು ಕೊಲ್ಲುವ ಧೀರರು ನಮ್ಮ ಸೇನೆಯಲ್ಲಿ ಯಾರೂ ಇಲ್ಲವೆ?" ಎಂದು ಸವಾಲು ಹಾಕಿದಂತೆ ಮಾತನಾಡಿದನು. ಆ ಗುಪ್ತಸಭೆಯಲ್ಲಿ ಹಾಜರಿದ್ದ ರಕ್ತ ಕೇಸರಿಯು ಚಂದ್ರಹಾಸನನ್ನು ಕೊಲ್ಲುವ ಕೆಲಸವನ್ನು ತನಗೆ ವಹಿಸಬೇಕೆಂದೂ, ತನ್ನ ಪ್ರಾಣವನ್ನು ತೆತ್ತಾದರೂ ಆ ಕೆಲಸವನ್ನು ನಿರ್ವಹಿಸುವುದಾಗಿ ಎಲ್ಲರೆದುರಿಗೆ ಪ್ರತಿಜ್ಞೆ ಮಾಡಿದನು.

ಈ ಸಭೆಯ ಕಾರ್ಯಕಲಾಪಗಳಾದ ಸುಮಾರು ಎಂಟು ದಿನಗಳ ನಂತರ, ಒಂದು ದಿನ ಬೆಳಿಗ್ಗೆ ಚಂದ್ರಹಾಸನು ಅನಿಲಪುರದ ತನ್ನ ಮನೆಯಲ್ಲಿ ಎಂದಿನಂತೆ ಅವನ ಕೊಠಡಿಯಲ್ಲಿ ಮುಖ ಕ್ಷೌರ ಮಾಡಿಕೊಳ್ಳುತ್ತಿದ್ದನು. ಪುರುಷೋತ್ತಮಬಾಬು ಅವರು ಸ್ನಾನ ಮಾಡುತ್ತಿದ್ದರು. ಗೌರಿ ಅಡುಗೆಯ ಮನೆಯಲ್ಲಿ ಕೆಲಸ ಮಾಡುತ್ತಿದ್ದಳು. ಮನೆಯನ್ನು ಕಾಯುತ್ತಿದ್ದ ಕ್ರಾಂತಿಕೂಟದ ಸಿಪಾಯಿಗಳಲ್ಲಿ ಒಬ್ಬನ ವಿನಃ ಉಳಿದವರು ಪ್ರಾತರ್ವಿಧಿಗಳನ್ನು ಪೂರೈಸಲು ಬೇರೆ ಬೇರೆ ಕಡೆಗಳಿಗೆ ಹೋಗಿದ್ದರು. ಆ ಸಮಯದಲ್ಲಿ ಆಗಂತುಕನೊಬ್ಬನು ಚಂದ್ರಹಾಸನ ಮನೆಯ ಮುಂದೆ ಸೈಕಲ್ಲಿನಲ್ಲಿ ಬಂದಿಳಿದನು. ಅಬ್ಕಾರಿ ಇಲಾಖೆಯವನಂತೆ ಅವನು ಉಡುಪನ್ನು ಧರಿಸಿದ್ದನು. ಸೈಕಲ್‌ನಿಂದ ಇಳಿದವನೆ, ಸೈಕಲ್ಲಿಗೆ ತೂಗು ಹಾಕಿದ್ದ ಕೈಚೀಲವೊಂದನ್ನು ಹಿಡಿದುಕೊಂಡು, ಮನೆಯ ಮುಂದೆ ನಿಂತಿದ್ದ ಪಹರೆಯುವನನ್ನು ಲೆಕ್ಕಿಸದೆ, ಮನೆಗೆ ಯಾವಾಗಲೂ ಬರುವ ಚಿರಪರಿಚಿತನಂತೆ ಮನೆಯೊಳಗೆ ನುಗ್ಗಲೆತ್ನಿಸಿದನು. ಪಹರೆಯವನು ಅವನನ್ನು ತಡೆದು, ಚಂದ್ರಹಾಸನ ಅಪ್ಪಣೆ ಇಲ್ಲದೆ ಮನೆಯೊಳಗೆ ಬಿಡಲಾಗುವುದಿಲ್ಲವೆಂದನು. ಆಗ ಆಗಂತುಕನು ತಾನು ಅಬ್ಕಾರಿ ಇಲಾಖೆಯವನೆಂದೂ, ಪದ್ಮಾವತಿಯ ಮನೆಯ ಸಮೀಪ ವಾಸಮಾಡತಕ್ಕವ ನೆಂದೂ, ಪದ್ಮಾವತಿ ಗೌರಿಗೆ ಕೊಡಬೇಕೆಂದು ತಿಂಡಿಯನ್ನು ಕಳಿಸಿದ್ದಾರೆಂದೂ ಹೇಳಿದನು, ಪಹರೆಯವನು ಯಾರೇ ಆಗಲಿ ಚಂದ್ರಹಾಸನ ಅಪ್ಪಣೆ ಇಲ್ಲದೆ ಒಳಗೆ ಬಿಡಲು ಸಾಧ್ಯವಿಲ್ಲವೆಂದನು. ಆಗ ಆ ಆಗಂತುಕನ ಚಂದ್ರಹಾಸನಿಗೂ, ಗೌರಿಗೂ ತಾನು ಪರಿಚಯಸ್ಥನೆಂದೂ, ತನ್ನನ್ನು ಒಳಗೆ ಬಿಡಬೇಕೆಂದೂ ಪಹರೆಯವನೊಡನೆ ವಾದಿಸತೊಡಗಿದನು.

ಕ್ಷೌರ ಮಾಡಿಕೊಳ್ಳುತ್ತಿದ್ದ ಚಂದ್ರಹಾಸನಿಗೆ ಅವರಿಬ್ಬರ ವಾಗ್ವಾದ ಕೇಳಿ, ಅವನು ತನ್ನ ಪಿಸ್ತೂಲನ್ನು ಕೈಗೆ ತೆಗೆದುಕೊಂಡು, ನಡುಮನೆಗೆ ಬಂದು ಕಿಟಕಿಯಿಂದ ಆಗಂತುಕನನ್ನು ನೋಡಿದನು. ಅವನನ್ನು ಎಲ್ಲೋ ನೋಡಿದಂತೆ ಚಂದ್ರಹಾಸನ ಮನಸ್ಸು ಹೇಳುತ್ತಿತ್ತು. ಆದರೆ ಅವನ್ಯಾರೆಂಬುದು ಗೊತ್ತಾಗುವಂತಿರಲಿಲ್ಲ. ಅಷ್ಟರಲ್ಲಿ ಪಹರೆಯವನು ಚಂದ್ರಹಾಸನನ್ನು ಕೇಳಿ ಬರುವುದಾಗಿಯೂ, ಅಲ್ಲಿಯವರೆಗೆ ಹೊರಗಡೆ ಇರಬೇಕೆಂದೂ

ಆಗಂತುಕನಿಗೆ ತಾಕೀತು ಮಾಡಿ, ಚಂದ್ರಹಾಸನ ಕೊಠಡಿಗೆ ಹೋಗುವ ಉದ್ದೇಶದಿಂದ ಒಳಗಡೆ ಬರುತ್ತಿದ್ದನು. ಆಗಂತುಕನು ಪಹರೆಯವನಿಗೆ ಗೊತ್ತಾಗದಂತೆ ಅವನನ್ನು ಹಿಂಬಾಲಿಸಿ ಮೆತ್ತಗೆ ಬರುತ್ತಿದ್ದನು. ಇದನ್ನು ನೋಡಿದ ಚಂದ್ರಹಾಸನು ಸದ್ದು ಮಾಡದೆ ನಡುಮನೆಯ ಬಾಗಿಲ ಹಿಂದುಗಡೆ ಅವಿತುಕೊಂಡನು.

ಪಹರೆಯವನು, ಚಂದ್ರಹಾಸನನ್ನು ನೋಡದೆ ಅವನ ಕೊಠಡಿಗೆ ಹೋಗುತ್ತಿದ್ದನು. ಅವನು ನಡುಮನೆಯನ್ನು ದಾಟಿದೊಡನೆ, ಆಗಂತುಕನು ನಡುಮನೆಯನ್ನು ಪ್ರವೇಶಿಸಿ, ಪಹರೆಯವನು ಹೋದ ಕಡೆಗೆ ಹೋಗುತ್ತಿದ್ದಾಗ, ಚಂದ್ರಹಾಸನು ಹಿಂದುಗಡೆಯಿಂದ ಅವನ ಮೇಲೆರಗಿ, ಬಲವಾಗಿ ಹಿಡಿದುಕೊಂಡು ಪಹರೆಯವನನ್ನು ಕೂಗಿದನು. ಆಗಂತುಕನ ತೋಳುಗಳೆರಡೂ ಚಂದ್ರಹಾಸನ ತೋಳ್ತೆಕ್ಕೆಯಲ್ಲಿ ಸಿಕ್ಕಿಕೊಂಡಿದ್ದವು. ತನ್ನನ್ನು ಹಿಡಿದುಕೊಂಡೊಡನೆ, ಆಗಂತುಕನು ತನ್ನ ಕೈಯಲ್ಲಿದ್ದ ಚೀಲವನ್ನು ಎಸೆದನು. ತಕ್ಷಣ ದೊಡ್ಡ ಸ್ಫೋಟವಾದಂತಾಗಿ, ಚಂದ್ರಹಾಸನ ಕೈಗಳಿಗೆ ಘಾಸಿಯಾಯಿತು. ನಡುಮನೆಯಲ್ಲವೂ ಹೊಗೆಯಿಂದ ಮುಚ್ಚಿಕೊಂಡಿತು. ಆದರೂ ಚಂದ್ರಹಾಸನು ಅವನನ್ನು ಬಿಡಲಿಲ್ಲ. ಅಷ್ಟರಲ್ಲಿ ಪಹರೆಯವನು ಓಡಿ ಬಂದನು. ಶಬ್ದವನ್ನು ಕೇಳಿ ಗೌರಿಯು ನಡುಮನೆಗೆ ಓಡಿಬಂದಳು. ಆಗಂತುಕನ ಮುಖದಲ್ಲಿ ಗಾಯವಾಗಿ ರಕ್ತ ಸುರಿಯುತ್ತಿತ್ತು. ಚಂದ್ರಹಾಸನ ಕೈಗಳಿಂದಲೂ ಸಹ ರಕ್ತ ಹರಿಯುತ್ತಿತ್ತು. ಅಷ್ಟು ಹೊತ್ತಿಗೆ ಇತರ ಪಹರೆಯವರೂ ಶಬ್ದವನ್ನು ಕೇಳಿ ಓಡಿಬಂದರು. ಎಲ್ಲರೂ ಸೇರಿ ಅಗಂತುಕನನ್ನು ಹಿಡಿದುಕೊಂಡರು.

ಆಗಂತುಕನ ಬಟ್ಟೆಬರೆಗಳನ್ನೆಲ್ಲಾ ಶೋಧಿಸಿ, ಅವನ ಬಳಿಯಿದ್ದ ಒಂದು ಪಿಸ್ತೂಲನ್ನೂ, ಒಂದು ಚಾಕುವನ್ನೂ ವಶಪಡಿಸಿಕೊಂಡರು. ಬಾಂಬ್ ಸಿಡಿತದಿಂದ ನಡುಮನೆಯ ಗೋಡೆಗೆ ಸ್ವಲ್ಪ ಹಾನಿಯಾಗಿತ್ತು. ಪಹರೆಯವರು ಆಗಂತುಕನನ್ನು ಹೊಡೆಯುತ್ತಿರುವಾಗ, ಏಟನ್ನು ಸಹಿಸಲಾರದೆ ಅವನು ಕಿರಿಚಿಕೊಳ್ಳುತ್ತಿರುವಾಗ, ಪುರುಷೋತ್ತಮಬಾಬು ಅವರು ಅಲ್ಲಿಗೆ ಬಂದು ಅವನನ್ನು ಹೊಡೆಯಬಾರದೆಂದು ಪಹರೆಯವರಿಗೆ ಆಜ್ಞಾಪಿಸಿದರು. ಅನಂತರ ಬಾಬುರವರು ಚಂದ್ರಹಾಸನ ಕೈಗಳಿಗೂ, ಆಗಂತುಕನ ಮುಖಕ್ಕೂ ಪ್ರಥಮ ಚಿಕಿತ್ಸೆ ಮಾಡಿ, ಆಗಂತುಕನನ್ನು ಪ್ರಶ್ನಿಸಲಾರಂಭಿಸಿದರು. ಆಗಂತುಕನು ಅವರ ಪ್ರಶ್ನೆಗೆ ಯಾವ ಉತ್ತರವನ್ನೂ ಹೇಳದೆ ಕಲ್ಲಿನಂತೆ ಕುಳಿತಿದ್ದನು. ಆಗ ಚಂದ್ರಹಾಸನು ಕುಪಿತನಾಗಿ, "ಅಪ್ಪಾ, ಬಿಸಿನೀರಿಗೆ ಬೆಣ್ಣೆ ಕರಗೀತೇ ಹೊರತು ತಣ್ಣೀರಿಗೆ ಕರಗುವುದಿಲ್ಲ. ನಿಮ್ಮ ಸೌಜನ್ಯ ಇವರ ಹತ್ತಿರ ಪ್ರಯೋಜನವಿಲ್ಲ" ಎಂದು ಹೇಳುತ್ತಾ, ಪಹರೆಯವನ ಕೈಯಲ್ಲಿದ್ದ ಚಾಟಿಯನ್ನು ಕಿತ್ತುಕೊಂಡು ಅವನನ್ನು ಥಳಿಸಲಾರಂಭಿಸಿದನು. ಆಗ ಆಗಂತುಕನು "ದಮ್ಮಯ್ಯಾ, ಹೊಡೀಬೇಡಿ, ನಿಮಗೇನು ಬೇಕು ಕೇಳಿ ಹೇಳ್ತೀನಿ" ಎಂದು ದೈನ್ಯದಿಂದ ಪ್ರಾರ್ಥಿಸಿದನು.

"ಹಾಗಾದರೆ ಬೊಗಳು. ಅವರು ಕೇಳಿದ ಪ್ರಶ್ನೆಗೆ ಜವಾಬನ್ನು ಹೇಳು" ಎಂದು ಚಂದ್ರಹಾಸನು ಘರ್ಜಿಸಿದನು.

ಪುರುಷೋತ್ತಮಬಾಬುರವರು ಅವನನ್ನು ಪ್ರಶ್ನಿಸಲಾರಂಭಿಸಿ, "ನೀನ್ಯಾರು, ನೀನೇಕೆ ಇಲ್ಲಿಗೆ ಬಂದೇ" ಎಂದು ಕೇಳಿದನು.

"ನಾನೊಬ್ಬ ಕ್ರಾಂತಿಸೇನೆಯ ಸಿಪಾಯಿ, ಇವರನ್ನು ಕೊಲ್ಲುವ ಉದ್ದೇಶದಿಂದ ಇಲ್ಲಿಗೆ ಬಂದೆ" ಎಂದು ಚಂದ್ರಹಾಸನ ಕಡೆಗೆ ಕೈ ತೋರಿಸಿದನು.

"ಇವರನ್ನು ಕೊಲ್ಲುವ ಉದ್ದೇಶವೇನು" ಎಂದು ಬಾಬುರವರು ಮತ್ತೆ ಪ್ರಶ್ನಿಸಿದರು.

"ಇವರು ಬಂಡವಾಳಗಾರರ ಏಜೆಂಟರೆಂದು ನಿನಗೆ ಯಾರು ಹೇಳಿದರು.?"

"ಜನರಲ್ ಶಂಕರ್ ಹೇಳಿದರು."

"ಜನರಲ್ ಶಂಕರ್ ಚಂದ್ರಹಾಸನನ್ನು ಕೊಲ್ಲಬೇಕೆಂದು ಹೇಳಿದರೇನು?"

"ಹೌದು."

"ನಿನ್ನ ಹೆಸರೇನು? ನಿನ್ನ ಊರು ಯಾವುದು?" ಎಂದು ಪುರುಷೋತ್ತಮ ಬಾಬು ಪುನಃ ಪ್ರಶ್ನಿಸಿದರು.

"ನನಗೆ ವಿಪರೀತ ಬಾಯಾರಿಕೆ ನೀರು ಬೇಕು" ಎಂದು ಆಗಂತುಕನು ನೀರನ್ನು ಕೇಳಿದನು. ಪುರುಷೋತ್ತಮಬಾಬು ನೀರನ್ನು ತರಿಸಿಕೊಟ್ಟು, ಪುನಃ ಅವನ ಹೆಸರೇನೆಂದು ಕೇಳಿದರು. ಅವನು "ನನ್ನ ಹೆಸರು ಕಟ್ಟಿಕೊಂಡು ನಿಮಗೇನು ಆಗಬೇಕು?" ಎಂದು ಹೇಳಿ ಮತ್ತೆ ಕಲ್ಲಿನಂತೆ ಮೌನವಾಗಿ ಕುಳಿತನು. ಚಂದ್ರಹಾಸನು "ಅವರ ಪ್ರಶ್ನೆಗೆ ಉತ್ತರ ಹೇಳ್ತೀಯೋ ಅಥವಾ ಚಾಟಿ ಏಟು ಬೇಕು?" ಎಂದು ಘರ್ಜಿಸುತ್ತಾ ಚಾಟಿಯನ್ನು ಝಳಪಿಸಲಾರಂಭಿಸಿದನು.

"ನನ್ನ ನಿಜವಾದ ಹೆಸರು ಕೇಸರಿಸಿಂಗ್. ಆದರೆ ಕ್ರಾಂತಿಸೇನೆಯವರು ನನ್ನನ್ನು ರಕ್ತ ಕೇಸರಿ ಎಂದು ಕರೆಯುತ್ತಾರೆ" ಎಂದು ಆಗಂತುಕನು ನುಡಿದನು.

"ಏನು? ನೀನು ರಕ್ತ ಕೇಸರಿಯೇ?" ಎಂದು ಚಂದ್ರಹಾಸ ಕೌತುಕಪಟ್ಟವನಂತೆ ಅವನನ್ನು ಪ್ರಶ್ನಿಸಿದನು.

"ಹೌದು ನಾನೇ ರಕ್ತಕೇಸರಿ."

"ನೀನು ನನ್ನನ್ನು ನೋಡಿದ್ದೀಯಾ? ನಿನ್ನ ಗಡ್ಡ ಮೀಸೆಗಳೇನಾದವು?"

"ನೀವು ನಮ್ಮ ಸೈನ್ಯದಲ್ಲಿದ್ದಾಗ ನಿಮ್ಮನ್ನು ನೋಡಿದ್ದೆ. ಗಡ್ಡಮೀಸೆಗಳನ್ನು, ನನ್ನ ಗುರುತು ನಿಮಗೆ ಸಿಕ್ಕಬಾರದೆಂದು ನಿನ್ನೆ ಬೋಳಿಸಿಕೊಂಡೆ."

"ನಿನ್ನ ಹೆಸರನ್ನು ಯಾವಾಗ ಬದಲಾಯಿಸಿಕೊಂಡೆ?"

"ನನ್ನ ಹೆಸರನ್ನು ನಾನು ಬದಲಾಯಿಸಲಿಲ್ಲ. ಬೂರ್ಷ್ವಾ ಕುನ್ನಿಗಳನ್ನು ನಾನು ನಿಷ್ಕರುಣೆಯಿಂದ ಕೊಲ್ಲುತ್ತಾ ಬಂದಿದ್ದರಿಂದ ನನ್ನ ಕ್ರಾಂತಿಸೇನೆಯ ಕಾಮ್ರೇಡುಗಳು ನನಗೆ "ರಕ್ತಕೇಸರಿ" ಎಂಬ ಬಿರುದನ್ನು ಕೊಟ್ಟರು. ಕ್ರಮೇಣ ಅದೇ ಹೆಸರಿನಿಂದ ನನ್ನನ್ನು ಕರೆಯಲಾರಂಭಿಸಿದರು."

"ಬೂರ್ಷ್ವಾ ಕುನ್ನಿ ಎಂದರೇನು?" ಎಂದು ಚಂದ್ರಹಾಸ ಪುನಃ ಪ್ರಶ್ನಿಸಿದನು.

"ಬೂರ್ಷ್ವಾ ಕುನ್ನಿಗಳು ಎಂದರೆ ಹಣ ಇದ್ದವರು; ಆಸ್ತಿ ಇದ್ದವರು."

“ನಿಮ್ಮ ಜನರಲ್ ಶಂಕರನ ಹತ್ರ ಹಣ ಇದೆಯಲ್ಲಾ, ಅವನನ್ನೇಕೆ ನೀನು ಕೊಲ್ಲಲಿಲ್ಲ?”

“ಅವರು ಬೂರ್ಷ್ವಾಗಳ ಶತ್ರು. ಅವರನ್ನೇಕೆ ಕೊಲ್ಲಬೇಕು?”

“ಹೋಗಲಿ ಬಿಡು. ನಿಮ್ಮ ಸೇನೆಯವರು ಲೂಟಿ ಮಾಡಿದ ಹಣ ಏನಾಯಿತು?”

“ಅದು ನಂಗೆ ಗೊತ್ತಿಲ್ಲ. ನಾನು ಶಿಸ್ತಿನ ಸಿಪಾಯಿ.”

“ಹೋಗಲಿ ಬಿಡು ನಿನ್ನ ಊರಾವುದು? ನೀನೇಕೆ ಕ್ರಾಂತಿಸೇನೆಯನ್ನು ಸೇರಿದ್ದು ಅದನ್ನಾದರೂ ಹೇಳ್ತೀಯಾ?” ಎಂದು ಚಂದ್ರಹಾಸ ಪುನಃ ಪ್ರಶ್ನಿಸಿದನು.

“ಸ್ವಾಮಿ ಅದೊಂದು ದೊಡ್ಡ ಕತೆ. ಈ ಊರಿಗೆ ಸುಮಾರು ಮೂವತ್ತು ಮೈಲಿ ದೂರದಲ್ಲಿರುವ ಒಂದು ಹಳ್ಳಿಯಲ್ಲಿ ನಾನು ಹುಟ್ಟಿದವನು. ಆ ಹಳ್ಳಿಯ ಹೆಸರನ್ನು ನಾನು ಹೇಳುವುದಿಲ್ಲ. ನನ್ನ ತಂದೆಯ ಹೆಸರನ್ನೂ ಹೇಳುವುದಿಲ್ಲ. ನನ್ನ ತಂದೆ ಗೌರವಸ್ಥ ಮನೆತನಕ್ಕೆ ಸೇರಿದ್ದರು. ಅವರಿಗೆ ನಾನು ಮತ್ತು ನನ್ನ ಅಕ್ಕ ಇಬ್ಬರೇ ಮಕ್ಕಳು. ನಮ್ಮ ತಂದೆಗೆ ಪಿತ್ರಾರ್ಜಿತವಾದ ಹದಿನೈದು ಎಕರೆ ತರಿ ಜಮೀನಿತ್ತು. ನಮ್ಮ ಅಕ್ಕನ ಮದುವೆಗಾಗಿ ನಮ್ಮ ತಂದೆ ನಮ್ಮೂರಿನ ಸಾಹುಕಾರನಿಂದ ಐದು ಸಾವಿರ ರೂಪಾಯಿ ಸಾಲ ಪಡೆದು, ಸಾಲದ ಖಾತ್ರಿ ಬಗ್ಗೆ, ನಮ್ಮ ಹದಿನೈದು ಎಕರೆ ಜಮೀನನ್ನೂ, ವಾಸದ ಮನೆಯನ್ನೂ ಸಾಹುಕಾರನ ಹೆಸರಿಗೆ ನಂಬಿಕೆ ಕ್ರಯ ಮಾಡಿಕೊಟ್ಟರು. ಸಾಲವನ್ನು ಐದು ವರ್ಷಗಳ ಒಳಗಾಗಿ ವಾಪಸು ಕೊಟ್ಟಾಗ, ಸಾಹುಕಾರನು ವಾಪಸು ಕ್ರಯಪತ್ರ ಕೊಡಬೇಕೆಂದು ಬಾಯಿ ಮಾತಿನ ಒಪ್ಪಂದ ನಮ್ಮ ತಂದೆಗೂ ಆ ಸಾಹುಕಾರನಿಗೂ ಆಗಿತ್ತು. ಮೂರು ವರ್ಷಗಳ ನಂತರ ನಮ್ಮಪ್ಪ ಹಣ ಜೋಡಿಸಿಕೊಂಡು, ಸಾಹುಕಾರನ ಬಳಿ ಹೋಗಿ, ಸ್ವತ್ತುಗಳನ್ನು ವಾಪಸು ಕ್ರಯ ಮಾಡಿಕೊಡಬೇಕೆಂದು ಹೇಳಿದಾಗ, ಸಾಹುಕಾರನು ಸ್ವತ್ತುಗಳು ತನಗೆ ಶುದ್ಧ ಕ್ರಯವಾಗಿದೆಯೆಂದೂ, ಬಿಟ್ಟು ಕೊಡಲು ಸಾಧ್ಯವಿಲ್ಲವೆಂದೂ ಹೇಳಿಬಿಟ್ಟನು.”

“ಆಮೇಲೇನಾಯಿತು?”

“ನಮ್ಮ ತಂದೆ ಸಾಹುಕಾರನ ಮೇಲೆ ಕೋರ್ಟಿನಲ್ಲಿ ದಾವಾ ಹೂಡಿದರು. ಕೇಸಿಗೆ ಐದಾರು ಸಾವಿರ ರೂಪಾಯಿ ಖರ್ಚಾಯಿತು. ಆದರೂ ಕೇಸು ಆಖೈರಾಗಿ ಸಾಹುಕಾರನ ಪರ ತೀರ್ಮಾನವಾಯಿತು. ಕೋರ್ಟಿನ ತೀರ್ಮಾನವಾದನಂತರ, ಸಾಹುಕಾರನು ನಮ್ಮ ಮನೆಯನ್ನು, ನಮ್ಮ ಜಮೀನನ್ನು ತನ್ನ ಸ್ವಾಧೀನ ತೆಗೆದುಕೊಂಡನು. ಜಮೀನಿನ ಮತ್ತು ಮನೆಯ ಬೆಲೆ ಕನಿಷ್ಠ ಪಕ್ಷ ಆಗಿನ ಕಾಲದಲ್ಲಿ ಮೂವತ್ತು ಸಾವಿರ ರೂಪಾಯಿಗಳಾಗುತ್ತಿತ್ತು.” ಆಸ್ತಿ ಸಾಹುಕಾರನ ವಶವಾದ ಮೇಲೆ, ಗೌರವದಿಂದ ಬಾಳಿದ ನಮ್ಮ ತಾಯಿ ಬಡತನದ ಬವಣೆಯನ್ನು ಸಹಿಸಲಾರದೆ ಆತ್ಮಹತ್ಯೆ ಮಾಡಿಕೊಂಡಳು. ನಾನು ಆಗ ಹೈಸ್ಕೂಲಿನಿಂದ ಓದುತ್ತಿದ್ದೆ. ತಾಯಿ ಸತ್ತನಂತರ ಊರಿಗೆ ಬಂದು ನೋಡುವಲ್ಲಿ, ಮನೆ ಮತ್ತು ಜಮೀನು ಸಾಹುಕಾರನ ವಶವಾಗಿತ್ತು. ನನಗೆ ದಿಕ್ಕು ತೋಚದಂತಾಯಿತು. ನಾನು ನನ್ನ ಅಕ್ಕನ ಮನೆಗೆ ಹೋಗಿ ಅಲ್ಲಿ ಇದ್ದೆ.

ನಮ್ಮ ತಂದೆ ಅದೇ ಸಾಹುಕಾರನ ಕೈಕೆಳಗೆ ಕೂಲಿಯಾಳಾಗಿ ಕೆಲಕಾಲ ಕೆಲಸ ಮಾಡಿದರು. ಅನಂತರ ಕೊರಗಿ ಕೊರಗಿ ಅವರೂ ಸತ್ತುಹೋದರು."

"ಆಮೇಲೆ ನೀನೇನು ಮಾಡಿದೆ?"

"ನಾನು ಕೆಲಸಕ್ಕಾಗಿ ಬಹಳ ಕಡೆ ಪ್ರಯತ್ನಪಟ್ಟೆ. ಕೆಲಸ ಸಿಕ್ಕಲಿಲ್ಲ. ಅನಂತರ ನಾನು ಆ ಸಾಹುಕಾರನ ಹತ್ತಿರ ಹೋಗಿ, ಆಸ್ತಿಯಲ್ಲಿ ಹಿಸ್ಸೆಯನ್ನಾದರೂ ಕೊಡಬೇಕೆಂದು ಕೇಳಿಕೊಂಡೆ. ಕೊಡದಿದ್ದರೆ ದಾವ ಹಾಕುವುದಾಗಿ ಅವನಿಗೆ ಬೆದರಿಸಿದೆ. ಅವನು ಪೊಲೀಸು ಸಬ್‌ಇನ್‌ಸ್ಪೆಕ್ಟರ್‌ಗೆ ಲಂಚ ಕೊಟ್ಟು ನನ್ನನ್ನು ಹೊಡೆದು, ನನ್ನಿಂದ ಬಲಾತ್ಕಾರವಾಗಿ ಸಾಹುಕಾರನ ಹೆಸರಿಗೆ ಒಂದು ಪತ್ರವನ್ನು ಬರೆಸಿಕೊಟ್ಟರು. ಸಬ್‌ಇನ್‌ಸ್ಪೆಕ್ಟರ್ ಹೊಡೆತವನ್ನು ತಾಳಲಾರದೆ ನನ್ನ ಸ್ವಂತ ಅಕ್ಷರದಲ್ಲಿಯೇ ಆಸ್ತಿಯಲ್ಲಿ ನನಗೆ ಯಾವ ಹಕ್ಕು ಇಲ್ಲವೆಂದು ಸಾಹುಕಾರನಿಗೆ ಬರೆದುಕೊಟ್ಟೆ."

"ಆಮೇಲೆ ಏನಾಯಿತು?"

"ಹೇಳ್ತೀನಿ ಕೇಳಿ. ಆ ಸಾಹುಕಾರ ಹಲವು ನೀಚ ಕೃತ್ಯಗಳನ್ನು ಮಾಡಿದ್ದನು. ಅನೇಕರ ಮನೆಗಳನ್ನು ಮುರಿದಿದ್ದನು. ಸ್ಥಳೀಯ ಅಧಿಕಾರಿಗಳನ್ನೂ, ಕಾಂಗ್ರೆಸ್ ಪುಡಾರಿಗಳನ್ನೂ ಲಂಚದಿಂದ ಸರಿಪಡಿಸಿಕೊಂಡು, ಸಭ್ಯ ಗೃಹಸ್ಥನಂತೆ ವರ್ತಿಸುತ್ತಿದ್ದನು. ನನ್ನನ್ನೂ, ಅನೇಕರನ್ನೂ ನಿರ್ಗತಿಕರನ್ನಾಗಿ ಮಾಡಿದ್ದ ಅವನನ್ನು ಕೊಲ್ಲುವುದು ನನ್ನ ಪವಿತ್ರ ಕರ್ತವ್ಯವೆಂದು ನಿರ್ಧರಿಸಿದೆ. ಆ ಸಾಹುಕಾರನು ನಮ್ಮೂರಿನ ಪಕ್ಕದ ಹಳ್ಳಿಯಲ್ಲಿ ಒಬ್ಬ ಸೂಳೆಯನಿಟ್ಟುಕೊಂಡಿದ್ದನು. ಸೂಳೆಯ ಮನೆಗೆ ಪ್ರತಿದಿನವೂ ಸಾಯಂಕಾಲ ತಪ್ಪದೇ ಹೋಗುತ್ತಿದ್ದನು. ನಾನು ಹೊಟ್ಟೆಗಿಲ್ಲದೆ ನಮ್ಮೂರಲ್ಲಿ ಮತ್ತು ಸುತ್ತಮುತ್ತಲ ಊರುಗಳಲ್ಲಿ ಸೌದೆಯನ್ನು ಒಡೆದು ಜೀವಿಸುತ್ತಿದ್ದೆ. ಸೌದೆಯನ್ನು ಒಡೆಯುವುದಕ್ಕಾಗಿ ನನ್ನ ಬಳಿಯೊಂದು ಹರಿತವಾದ ಕೊಡಲಿಯಿತ್ತು. ಆ ಸಾಹುಕಾರನನ್ನು ಕೊಲ್ಲಬೇಕೆಂದು ಸಂಕಲ್ಪ ಮಾಡಿದ್ದರೂ ಅವನನ್ನು ಕೊಲ್ಲುವುದು ಅಷ್ಟು ಸುಲಭವಾಗಿರಲಿಲ್ಲ. ಅವನಿಗೆ ಅಧಿಕಾರಿಗಳ ಮತ್ತು ರಾಜಕೀಯ ಮುಖಂಡರ ಬೆಂಬಲವಿತ್ತು. ಅಲ್ಲದೆ ನಾನು ಹೊಟ್ಟೆಗಿಲ್ಲದೆ ನರಪೇತಲ ನಾರಾಯಣನಾಗಿದ್ದೆ; ಅವನು ಬಡವರ ರಕ್ತವನ್ನು ಹೀರಿ ಕೊಬ್ಬಿದ ಹಂದಿಯಂತೆ ಆಗಿದ್ದ."

"ಆಮೇಲೆ ಏನಾಯಿತು?"

"ಅವನ ಚಲನವಲನಗಳನ್ನು ಕಾಯುತ್ತಾ ಬಂದೆ. ಒಂದು ದಿನರಾತ್ರಿ ಆ ಸಾಹುಕಾರನು ಸೂಳೆಯ ಮನೆಯಿಂದ ಬರುತ್ತಿದ್ದಾಗ, ನಿರ್ಜನವಾದ ಒಂದು ಸ್ಥಳದಲ್ಲಿ ಅವನಿಗಾಗಿ ಕಾದಿದ್ದು, ಹಿಂದುಗಡೆಯಿಂದ ಹೋಗಿ ನನ್ನ ಕೊಡಲಿಯಿಂದ ಹೊಡೆದೆ. ಅವನು ಕೆಳಕ್ಕುರುಳಿದನು. ಆದರೂ ಸತ್ತಿರಲಿಲ್ಲ. ಅವನು ಜೇಬಿನಿಂದ ರಿವಾಲರನ್ನು ತೆಗೆಯುತ್ತಿರುವಾಗ ಇನ್ನೊಂದು ಪೆಟ್ಟನ್ನು ಪುನಃ ತಲೆಗೆ ಹೊಡೆದೆ. ಅವನು ಲಿಬಿಲಿಬಿ ಒದ್ದಾಡುತ್ತಿದ್ದನು. ನಾನು ಗಾಬರಿಯಿಂದ ಕೊಡಲಿಯನ್ನು ಅಲ್ಲೇ ಬಿಟ್ಟು ಓಡಿಹೋದೆ.

ನಾನು ಓಡಿ ಹೋಗುತ್ತಿರುವಾಗ ಎದುರುಗಡೆಯಿಂದ ಬರುತ್ತಿದ್ದ ಕೆಲವರು ನನ್ನನ್ನು ನೋಡಿದರೆಂದು ತೋರುತ್ತದೆ."

"ನಿನ್ನ ಕಥೆ ರೋಮಾಂಚಕವಾಗಿದೆ. ಆಮೇಲೇನಾಯ್ತು?"

"ಪೋಲೀಸರು ನನ್ನನ್ನು ದಸ್ತಗಿರಿ ಮಾಡಿ, ನನ್ನ ಮೇಲೆ ಕೇಸನ್ನು ದಾಖಲು ಮಾಡಿದರು. ಕೋರ್ಟಿನಲ್ಲಿ, ಸಾಹುಕಾರನು ನಮ್ಮ ಆಸ್ತಿಯನ್ನು ಮೋಸದಿಂದ ಅಪಹರಿಸಿದ್ದರಿಂದ ಅವನನ್ನು ಕೊಂದಿದ್ದು ನಿಜವೆಂದು ಒಪ್ಪಿಕೊಂಡೆ. ನನಗೆ ನ್ಯಾಯಾಧೀಶರು ಜೀವಾವಧಿ ಕಠಿಣ ಶಿಕ್ಷೆಯನ್ನು ವಿಧಿಸಿದರು. ನನಗೆ ಅಂದಿನಿಂದ ಶ್ರೀಮಂತರೆಲ್ಲರೂ ಮೋಸಗಾರರೆಂಬ ಭಾವನೆ ಮನಸ್ಸಿನಲ್ಲಿ ಬೇರೂರಿತು. ಜೈಲಿನಲ್ಲಿ ನಾನು ಸಭ್ಯ ರೀತಿಯಲ್ಲಿ ವರ್ತಿಸಿದ್ದರಿಂದ ಅವಧಿಗೆ ಮುಂಚಿತವಾಗಿ ನನಗೆ ಬಿಡುಗಡೆಯಾಯಿತು. ಬಿಡುಗಡೆಯಾದ ಮೇಲೆ ಎಲ್ಲಿಗೆ ಹೋಗಬೇಕೆಂದು ನನಗೆ ತೋಚಲಿಲ್ಲ. ನಮ್ಮೂರಿಗೆ ಹೋಗಿ ಜನರಿಗೆ ಮುಖ ತೋರಿಸಲು ಮನಸ್ಸಿರಲಿಲ್ಲ. ನಮ್ಮ ಅಕ್ಕನ ಮನೆಗೆ ಹೋಗಲು ಸಹ ಮನಸ್ಸಾಗಲಿಲ್ಲ. ಅಲ್ಲಲ್ಲಿ ಕೂಲಿ ಕೆಲಸ ಮಾಡುತ್ತಾ ಇದ್ದೆ. ಅದರಿಂದ ನನಗೆ ಹೊಟ್ಟೆಯೂ ತುಂಬುತ್ತಿರಲಿಲ್ಲ; ಮನಸ್ಸಿಗೂ ನೆಮ್ಮದಿಯಾಗುತ್ತಿರಲಿಲ್ಲ. ಬಡವರನ್ನು ಸುಲಿಗೆ ಮಾಡುತ್ತಿದ್ದ ಶ್ರೀಮಂತರ ವರ್ಗದವರನ್ನು ನಾಶ ಮಾಡುವುದು ನನ್ನ ಕರ್ತವ್ಯವೆಂದು ಭಾವಿಸಿದೆ. ಕ್ರಾಂತಿಸೇನೆಯವರು ಶ್ರೀಮಂತ ವರ್ಗದ ಮೇಲೆ ಯುದ್ಧ ಸಾರಿದ್ದಾರೆಂಬ ಸಂಗತಿ ನನಗೆ ಗೊತ್ತಾಯಿತು. ಆಮೇಲೆ ಆ ಸೇನೆಯ ಸದಸ್ಯನಾದೆ. ನಾನು ಸ್ವಾರ್ಥ ಸಾಧನೆಗಾಗಿ ಕ್ರಾಂತಿಸೇನೆಯನ್ನು ಸೇರಲಿಲ್ಲ. ಶ್ರೀಮಂತ ವರ್ಗದವರ ಮೇಲೆ ಸೇಡನ್ನು ತೀರಿಸಿಕೊಳ್ಳುವ ಸಲುವಾಗಿ ಸೇರಿದ್ದೆ. ನೂರಾರು ಜನರನ್ನು ಕೊಂದಿದ್ದೇನೆ."

"ನೀನೊಬ್ಬ ಢಕಾಯಿತನೆಂದೂ, ಇಸ್ಮೇಯಿಲನ ತಂಡಕ್ಕೆ ಸೇರಿದ್ದವನೆಂದೂ ಹೇಳುತ್ತಾರೆ, ನಿಜವೇ?"

"ನಮ್ಮ ಕುಟುಂಬದ ಸರ್ವಸ್ವವನ್ನೂ ಲೂಟಿ ಮಾಡಿದ ನಮ್ಮೂರ ಸಾಹುಕಾರನಂತಹ ಲಾಭ ಬಡುಕರು, ಢಕಾಯಿತರು, ನನ್ನಿಂದ ಬಲಾತ್ಕಾರವಾಗಿ ಪತ್ರ ಬರೆಸಿಕೊಟ್ಟ ಸಬ್‌ಇನ್ಸ್‌ಪೆಕ್ಟರಂತೆ ಲಂಚಕೋರ ಅಧಿಕಾರಿಗಳು ಢಕಾಯಿತರು. ಬಡಬಗ್ಗರ ಹಿತೈಷಿಗಳಂತೆ ನಟಿಸುತ್ತಾ ಸ್ವಾರ್ಥಸಾಧಕ ರಾಜಕಾರಣ ಮಾಡುವ ಕಾಂಗ್ರೆಸ್ ಪುಢಾರಿಗಳು ಢಕಾಯಿತರು. ನಾನು ಢಕಾಯಿತನಲ್ಲ."

"ನಮ್ಮ ಮನೆಗೆ ಬಾಂಬ್ ಹಾಕಿದವರಾರು?"

"ನಾನೇ."

"ಅದ್ಯಾಕೆ ಹಾಕಿದ್ದೆ?"

"ನಮ್ಮ ಜನರಲ್ ಶಂಕರ್ ಹೇಳಿದರು ನಿಮ್ಮನ್ನು ಕೊಲ್ಲಬೇಕು ಅಂತ. ನಾ ಹಾಕ್ದೆ"

"ನೀನು ಈ ದಿನ ಎಲ್ಲಿಂದ ಬಂದೆ. ನಿನ್ನ ಹಂಚಿಕೆ ಏನಿತ್ತು?"

"ನಾನು ಈ ದಿವಸ ಬೆಳಿಗ್ಗೆ ಶ್ರೀಪುರದಿಂದ ಬಂದೆ. ನಿಮ್ಮನ್ನು ಕೊಂದು, ನಿಮ್ಮ ಪಹರೆಯವರ ಮೇಲೆ ಬಾಂಬ್ ಎಸೆದು ಓಡಿಹೋಗಬೇಕೆಂದು ನನ್ನ ಹಂಚಿಕೆಯಾಗಿತ್ತು."

ರಕ್ತಕೇಸರಿಯು ಹೇಳುತ್ತಿದ್ದುದನ್ನೆಲ್ಲಾ ಪುರುಷೋತ್ತಮಬಾಬು ಅವರು ಶಾಂತಚಿತ್ತರಾಗಿ ಕೇಳುತ್ತಿದ್ದರು. ಅವರನ್ನು ನೋಡಿದರೆ ರಕ್ತಕೇಸರಿಯ ಮೇಲೆ ಅವರಿಗೆ ಕನಕರ ಉಂಟಾದಂತೆ ತೋರುತ್ತಿತ್ತು. ಅವರನ್ನು ಕುರಿತು ಚಂದ್ರಹಾಸನು "ಅಪ್ಪಾ ಇವನಿಗೇನು ಶಿಕ್ಷೆ ವಿಧಿಸಲಿ?" ಎಂದು ತಂದೆಯನ್ನು ಕೇಳಿದನು.

"ಚಂದ್ರಾ, ಅವನ ಕತೆಯನ್ನು ಕೇಳಿ ನನಗಂತೂ ಸಂಕಟವಾಯಿತು. ಶ್ರೀಮಂತರ ದುರಾಸೆ, ಸರ್ಕಾರದ ದುರಾಡಳಿತ ಕ್ರಾಂತಿಗೆ ಮೂಲಕಾರಣವೆಂಬುದಕ್ಕೆ ಇವನೇ ಸಾಕ್ಷಿ ಇವನನ್ನು ಕ್ಷಮಿಸಿ ಬಿಟ್ಟುಬಿಡು" ಎಂದು ಪುರುಷೋತ್ತಮಬಾಬು ಅವರು ಹೇಳುತ್ತಿರುವಾಗ ಶ್ರೀಪುರದಿಂದ ಕಿಶೋರನು ಅಲ್ಲಿಗೆ ಬಂದನು. ಅವನು ಮನೆಯೊಳಕ್ಕೆ ಬರುವುದರೊಳಗಾಗಿ ಮನೆಯ ಮುಂದುಗಡೆ ಕಾವಲಿದ್ದ ಕ್ರಾಂತಿಕೂಟದ ಸಿಪಾಯಿಗಳು ಘಟನೆಯ ಸಂಪೂರ್ಣ ವಿವರಗಳನ್ನು ಅವನಿಗೆ ತಿಳಿಸಿದ್ದರು. ಅವನು ಬಂದೊಡನೆ ರಕ್ತಕೇಸರಿಯ ಕೈಹಿಡಿದು ಒದೆಯಲಾರಂಭಿಸಿದನು. ಪುರುಷೋತ್ತಮಬಾಬುಗಳು ಮಧ್ಯೆ ಪ್ರವೇಶಿಸಿ, ಹೊಡೆಯುವುದನ್ನು ತಪ್ಪಿಸಿದರು. "ಕಿಶೋರ್, ನೀನು ಅವನು ಹೇಳಿದ್ದ ಕಥೆಯನ್ನು ಕೇಳಿದ್ದರೆ ಅವನನ್ನು ಹೊಡೆಯುತ್ತಿರಲಿಲ್ಲ; ಅವನ ಮೇಲೆ ನಿನಗೆ ಕನಿಕರ ಉಂಟಾಗುತ್ತಿತ್ತು. ಅವನು ಕೊಲೆ ಪಾತಕಿಯಾಗಿರಬಹುದು. ಆದರೆ ಅವನು ಕೊಲೆಪಾತಕಿಯಾಗಲು ಕಾರಣ ಅವನ ಊರಿನ ಸಾಹುಕಾರ. ಅವನು ಇನ್ನು ಮುಂದೆ ಕೊಲೆ, ದರೋಡೆಗಳನ್ನು ಮಾಡುವುದಿಲ್ಲವೆಂದು ಭರವಸೆ ಕೊಟ್ಟರೆ ಅವನನ್ನು ಬಿಟ್ಟು ಬಿಡಬಹುದೆಂದು ನನ್ನಭಿಪ್ರಾಯ" ಎಂದು ಪುರುಷೋತ್ತಮಬಾಬು ಅವರು ಕಿಶೋರನನ್ನು ಕುರಿತು ನುಡಿದರು.

"ಸ್ವಾಮಿ. ತಾವು ದೊಡ್ಡವರು, ಗಾಂಧೀವಾದಿಗಳು, ನಾಗರಹಾವಿಗೆ ಕಚ್ಚುವುದೇ ಸ್ವಭಾವ. ಅದು ಸಿಕ್ಕಾಗ ಕೊಲ್ಲದೆ ಬಿಟ್ಟರೆ ಸಮಯ ಬಂದಾಗ ಕಚ್ಚೇ ಕಚ್ಚುತ್ತದೆ. ಅದರ ಸ್ವಭಾವವನ್ನು ಬದಲಾಯಿಸಲು ಸಾಧ್ಯವಿಲ್ಲ. ಇವನು ಶಂಕರನ ಆಪ್ತ ಕಿಂಕರ. ಇವನಿಂದ ನೂರಾರು ನಿರಪರಾಧಿಗಳ ಕೊಲೆಯಾಗಿದೆ. ತಮ್ಮ ಮನೆಗೆ ಬಾಂಬ್ ಹಾಕಲು ಬಂದವರ ಪೈಕಿ ಇವನೂ ಒಬ್ಬ ಎಂದು ನಮ್ಮ ಗೂಢಚಾರರಿಂದ ಗೊತ್ತಾಗಿದೆ" ಎಂದು ಕಿಶೋರ್ ನುಡಿದನು.

ಚಂದ್ರಹಾಸನು ಮೌನವಾಗಿ ಮಾತನಾಡದೆ ನಿಂತಿದ್ದನು. ಅವನಿಗೂ ರಕ್ತ ಕೇಸರಿಯ ಮೇಲೆ ಕನಿಕರ ಉಂಟಾಗಿತ್ತು. ಆದರೆ ಅವನನ್ನು ಹಾಗೆಯೇ ಬಿಟ್ಟರೆ ಅವನು ಕ್ರಾಂತಿಸೇನೆಗೆ ಪುನಃ ಸೇರುತ್ತಾನೆಂಬ ಶಂಕೆಯೂ ಇತ್ತು. ತಂದೆಯ ಮಾತಿಗೆ ವಿರುದ್ಧವಾಗಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ಅವನಿಗೆ ಕಷ್ಟವಾಗಿತ್ತು. ಸ್ವಲ್ಪ ಹೊತ್ತು ಹಾಗೆಯೇ ಯೋಚಿಸುತ್ತಿದ್ದು, ರಕ್ತಕೇಸರಿಯ ಕಡೆಗೆ ತಿರುಗಿ "ಏನಯ್ಯಾ ರಕ್ತಕೇಸರಿ, ನಿನಗೆ ಯಾವ ಶಿಕ್ಷೆ ವಿಧಿಸಬೇಕು ನೀನೇ ಹೇಳು?" ಎಂದು ಅವನನ್ನು ಕೇಳಿದನು.

"ನಾನು ಇಂದು ನಿಮ್ಮ ಸೆರೆಯಾಳು. ನೀವು ಬೇಕಾದರೆ ನನ್ನನ್ನು ಕೊಲ್ಲಬಹುದು ಅಥವಾ ಮನಸ್ಸು ಮಾಡಿದರೆ ಬಿಡಲೂಬಹುದು" ಎಂದು ರಕ್ತ ಕೇಸರಿ ನುಡಿದನು.

"ಬಿಟ್ಟರೆ ನೀನೆಲ್ಲಿ ಹೋಗುತ್ತೀಯಾ?"

"ನಾನೆಲ್ಲಿ ಹೋಗಲಿ? ಕ್ರಾಂತಿಸೇನೆಯೇ ನನ್ನ ಮನೆ. ಕ್ರಾಂತಿಸೇನೆಯವರೇ ನನ್ನ ಬಂಧುಗಳು."

"ನೋಡಿದಿರಾ ಅಪ್ಪಾ? ಇವನನ್ನು ಬಿಡಬೇಕೆಂದು ನೀವು ಹೇಳುತ್ತಿದ್ದೀರಿ" ಎಂದು ಚಂದ್ರಹಾಸನು ತಂದೆಯ ಕಡೆ ನೋಡಿದನು.

"ಹೋಗಲಿ ಬಿಡಿ, ಅವನನ್ನು ನೀವು ಕೊಲ್ಲಬೇಡಿ. ಪೊಲೀಸರ ವಶ ಒಪ್ಪಿಸಿ" ಎಂದು ಬಾಬು ಅವರು ಹೇಳಿದರು.

ಕಿಶೋರನಿಗೆ ಅದೇ ಬೇಕಾಗಿತ್ತು. "ಹೌದು ಹೌದು. ಬಾಬು ಅವರು ಹೇಳುವ ಸಲಹೆ ಯೋಗ್ಯವಾದದ್ದು. ಅವನನ್ನು ಪೊಲೀಸರ ವಶಕ್ಕೆ ಒಪ್ಪಿಸುವ ಏರ್ಪಾಡು ಮಾಡುತ್ತೇನೆ" ಎಂದು ಹೇಳಿ, ಕಿಶೋರ್ ರಕ್ತಕೇಸರಿಯನ್ನು ಸೆರೆ ಹಿಡಿದುಕೊಂಡು ಕಾರಿನಲ್ಲಿ ಕೊಂಡೊಯ್ದನು.

ಚಂದ್ರಹಾಸನನ್ನು ಕೊಲ್ಲುವುದಾಗಿ ಪ್ರತಿಜ್ಞೆ ಮಾಡಿದ್ದ ರಕ್ತಕೇಸರಿಯು, ಅನಿಲಪುರಕ್ಕೆ ಹೋಗುವ ಹಿಂದಿನ ದಿನ, ಶಂಕರನನ್ನು ಕಂಡು ಅವನೊಡನೆ ತನ್ನ ಹಂಚಿಕೆಯನ್ನು ವಿವರಿಸಿ, ಅವನ ಆಶೀರ್ವಾದವನ್ನು ಪಡೆದು ಹೋಗಿದ್ದನು. ಎರಡು ದಿನಗಳಾದರೂ ರಕ್ತಕೇಸರಿಯು ಹಿಂತಿರುಗಿ ಬಾರದಿದ್ದುದರಿಂದ ಶಂಕರನು ಕಳವಳಗೊಂಡಿದ್ದನು. ರಕ್ತಕೇಸರಿಯ ನೆಲೆಯನ್ನು ಪತ್ತೆ ಮಾಡಬೇಕೆಂದು ಶಂಕರನು ತನ್ನ ಗೂಢಚಾರರಿಗೆ ಆಜ್ಞಾಪಿಸಿದ್ದನು. ಮೂರನೆಯ ದಿನ ರಕ್ತಕೇಸರಿಯು ಕ್ರಾಂತಿಕೂಟದ ಸೆರೆಯಾಳಾಗಿದ್ದಾನೆಂದು ಶಂಕರನ ಮಿತ್ರ ಬಿಂದುಮಾಧವನಿಂದ ಗೊತ್ತಾಯಿತು. ಬಿಂದುಮಾಧವನು ಪುರುಷೋತ್ತಮಬಾಬು ಅವರ ದಾಯದಿ. ಅವನು ಪೂರ್ವದಲ್ಲಿ ಅನಿಲಪುರದಲ್ಲಿದ್ದವನು. ಹತ್ತು ವರ್ಷಗಳ ಹಿಂದೆ ಅನಿಲಪುರವನ್ನು ಬಿಟ್ಟು, ಶ್ರೀಪುರದಲ್ಲಿ ಒಂದು ದೊಡ್ಡ ವ್ಯಾಪಾರ ಸಂಸ್ಥೆಯ ಒಡೆಯನಾಗಿದ್ದನು. ಅನಿಲಪುರದಲ್ಲಿದ್ದ ತನ್ನ ವ್ಯವಸಾಯದ ಭೂಮಿಯನ್ನು ನಾಥೂ ಮತ್ತು ಮಾಧೂ ಎಂಬ ಇಬ್ಬರು ರೈತರಿಗೆ ಗೇಣಿಗೆ ಕೊಟ್ಟಿದ್ದನು. ಆ ಇಬ್ಬರು ರೈತರು ಪುರುಷೋತ್ತಮಬಾಬು ಅವರ ಮತ್ತು ಚಂದ್ರಹಾಸನ ಹಿತೈಷಿಗಳಂತೆ ನಟಿಸುತ್ತಾ, ಅಂತರಂಗವಾಗಿ ಬಿಂದುಮಾಧವನ ಗೂಢಚಾರರಾಗಿದ್ದರು. ಕಿಶೋರನು ರಕ್ತಕೇಸರಿಯನ್ನು ಹಿಡಿಸಿಕೊಂಡು ಕಾರಿನಲ್ಲಿ ಹೋಗುವುದನ್ನು ಅವರಿಬ್ಬರೂ ನೋಡಿದ್ದರು. ಆ ವಿಚಾರವನ್ನು ಅವರು ಬಿಂದು ಮಾಧವನಿಗೆ ವರದಿ ಮಾಡಿದ್ದರು.

ಪುರುಷೋತ್ತಮಬಾಬು ಅವರು ಕಾಂಗ್ರೆಸ್ ಮುಖಂಡರಾಗಿದ್ದಾಗ ಬಿಂದುಮಾಧವನಿಗೆ ಹಲವು ಉಪಕಾರಗಳನ್ನು ಮಾಡಿದ್ದರು. ಆದರೆ ಅವನು ದಾಯಾದಿ ಮಾತ್ಸರ್ಯದಿಂದ ಉಪಕಾರಕ್ಕೆ ಬದಲಾಗಿ ಅವರಿಗೆ ಅಪಕಾರವನ್ನೇ ಸದಾ ಮಾಡುತ್ತಿದ್ದನು. ಆಗರ್ಭ

ಶ್ರೀಮಂತನಾದ ಮೇಲೆ, ಅವನು ರಾಜಕೀಯ ಮುಖಂಡನಾಗಬೇಕೆಂಬ ಹಂಬಲದಿಂದ, ಶಂಕರನ ರೈತ ಸಂಘದ ಸದಸ್ಯನಾಗಿದ್ದನು. ಆ ನಂತರ ಕ್ರಾಂತಿಸೇನೆಯ ಸದಸ್ಯನಾದನು. ಪುರುಷೋತ್ತಮಬಾಬುರವರಿಗಿಂತ ತಾನೊಬ್ಬ ಪ್ರಸಿದ್ಧ ಪುರುಷನಾಗಬೇಕೆಂಬ ಹಂಬಲದಿಂದ ಅವನು ಕ್ರಾಂತಿಸೇನೆಯನ್ನು ಸೇರಿದ್ದನು. ಶಂಕರನ ಸಹಾಯದಿಂದ ಶಾಸನ ಸಭೆಯ ಸದಸ್ಯನಾಗಬೇಕೆಂದು ಅವನು ಹವಣಿಸುತ್ತಿದ್ದನು. ಚಂದ್ರಹಾಸನು ಕ್ರಾಂತಿಕೂಟವನ್ನು ಕಟ್ಟಿ, ಅದರ ಮುಖಂಡನಾಗಿ ಪ್ರಸಿದ್ಧಿಗೆ ಬರುತ್ತಿರುವುದನ್ನು ನೋಡಿ, ಬಿಂದುಮಾಧವನು ಹೊಟ್ಟೆ ಕಿಚ್ಚಿನಿಂದ ಕರುಬುತ್ತಿದ್ದನು. ಬಾಬುರವರ ಮನೆಗೆ ಬಾಂಬ್ ಬಿದ್ದ ಪ್ರಕರಣದಲ್ಲಿ ಬಿಂದುಮಾಧವನ ಕೈವಾಡವಿತ್ತೆಂದು ವದಂತಿ.

ನಾಲ್ಕನೆ ದಿನ ಅನಿಲಪುರದ ಹತ್ತಿರ ಸಿರಿಮಾವತಿ ನದಿಯ ಒಂದು ಮಡುವಿನಲ್ಲಿ ಒಂದು ಹೆಣ ತೇಲುತ್ತಿತ್ತೆಂದು ಸುದ್ದಿ ಹರಡಿತ್ತು. ನಾಥೂ ಮತ್ತು ಮಾಧೂ ಆ ಸುದ್ದಿಯನ್ನು ಬಿಂದುಮಾಧವನ ಮುಖಾಂತರ ಶಂಕರನಿಗೆ ತಲುಪಿಸಿದರು. ತೇಲುತ್ತಿದ್ದ ಆ ಹೆಣವನ್ನು ನದಿಯಿಂದ ತೆಗೆದು, ಅದು ಯಾರ ಹೆಣವೆಂಬುದನ್ನು ಗೊತ್ತು ಮಾಡಬೇಕೆಂದು, ತನ್ನ ನೆಚ್ಚಿನ ಕಿಂಕರರಿಗೆ ಶಂಕರನು ಆಜ್ಞಾಪಿಸಿದನು. ಅವನ ಕಿಂಕರರು ಬಹಳ ಸಾಹಸದಿಂದ ಹೆಣವನ್ನು ನದಿಯಿಂದ ತೆಗೆದರು. ಹೆಣ ಊದಿ, ಕೊಳೆತುಹೋಗಿತ್ತು. ಮೀನುಗಳು ಕೆಲವು ಭಾಗವನ್ನು ತಿಂದು ಹಾಕಿದ್ದವು. ಆದ್ದರಿಂದ ಯಾರ ಹೆಣವೆಂಬುದನ್ನು ಅವರು ಪತ್ತೆ ಮಾಡಲು ಸಾಧ್ಯವಾಗಲಿಲ್ಲ. ಆ ಸಂಗತಿಯನ್ನು ಆ ಕಿಂಕರರು ಶಂಕರನಿಗೆ ವರದಿ ಮಾಡಿದರು. ಹೆಣವನ್ನು ಗುರ್ತಿಸುವ ಸಲುವಾಗಿ ಶಂಕರನು ಭೋಲಾನಾಥನನ್ನು ಕಳಿಸಿಕೊಟ್ಟನು. ಭೋಲಾನಾಥನು ಹೆಣದ ಕೈಯ್ಯಲ್ಲಿದ್ದ ಉಕ್ಕಿನ ಬಳೆಯ ಆಧಾರದ ಮೇಲೆ ಅದು ರಕ್ತಕೇಸರಿಯ ಶವವೆಂದು ನಿರ್ಣಯಿಸಿದನು.

ಕ್ರಾಂತಿಕೂಟದ ಸೆರೆಯಾಳಾಗಿದ್ದ ರಕ್ತಕೇಸರಿಯನ್ನು ಕ್ರಾಂತಿಕೂಟದವರು ಕೊಲೆ ಮಾಡಿ ಅವನ ಹೆಣವನ್ನು ಸಿರಿಮಾವತಿ ನದಿಗೆ ಎಸೆದಿರಬೇಕೆಂದು ಶಂಕರನು ಊಹಿಸಿದನು. ತನ್ನ ನೆಚ್ಚಿನ ಕಿಂಕರನ ಕೊಲೆಯ ವಾರ್ತೆಯನ್ನು ಕೇಳಿ ಅವನು ಕೋಪದಿಂದ ಕೆರಳಿದನು. ರಕ್ತಕೇಸರಿಯು ಶಂಕರನ ಆಣತಿಯ ಮೇರೆಗೆ ನೂರಾರು ಜನರನ್ನು ಕೊಂದಿದ್ದನು. ಅವನಿಗೆ ಕೊಲ್ಲುವುದೆಂದರೆ ಮೃಗಗಳ ಷಿಕಾರಿ ಮಾಡಿದಂತೆ. ತನಗಾಗದವರನ್ನು ಕೊಲೆ ಮಾಡಬೇಕೆಂದು ಶಂಕರ ಮನಸ್ಸು ಮಾಡಿದಾಗ, ಅವನು ರಕ್ತಕೇಸರಿಯನ್ನು ಕರೆದು ಕೊಲ್ಲಬೇಕಾಗಿದ್ದ ವ್ಯಕ್ತಿಯನ್ನು ಕುರಿತು, "ಅವನೊಬ್ಬ ಬಂಡವಾಳಗಾರರ ಬಾಲಬಡುಕ, ಅವನನ್ನು ಮುಗಿಸಬೇಕು ಗೊತ್ತಾಯಿತೇ?" ಎಂದು ಹೇಳುತ್ತಿದ್ದನು. ರಕ್ತಕೇಸರಿಯು ತನಗೆ ಬೇಕಾದ ಕ್ರಾಂತಿಸೇನೆಯ ಕೂಳರನ್ನು ಜತೆ ಮಾಡಿಕೊಂಡು ಕೊಲೆಯಾಗಬೇಕಾಗಿದ್ದ ವ್ಯಕ್ತಿಯ ಚಲನವಲನಗಳನ್ನು ಹೊಂಚುಹಾಕಿ ನೋಡುತ್ತಿದ್ದು, ನಿರ್ಜನ ಪ್ರದೇಶದಲ್ಲಿ ಅಥವಾ ರಾತ್ರಿಯ ಹೊತ್ತು ಆಯಕಟ್ಟಿನ ಸ್ಥಳದಲ್ಲಿ ಆ ವ್ಯಕ್ತಿ ಸಿಕ್ಕೊಡನೆ, ಅವನ ಮೇಲೆ ಎರಗಿ ಅವನನ್ನು ಕೊಂದು, ಸದ್ದಿಲ್ಲದೆ ತನ್ನ ಜತೆಯವರೊಡನೆ ಮಾಯವಾಗುತ್ತಿದ್ದನು. ಕ್ರಾಂತಿ ಮಾಡುವವರು ಧೀರರೂ,

ಪರಾಕ್ರಮಿಗಳೂ, ಸತ್ಯವಂತರೂ, ದಯಾಶೀಲರೂ ಆಗಿರಬೇಕೆಂದು ಚಂದ್ರಹಾಸನು ತನ್ನ ಹಿಂಬಾಲಕರಿಗೆ ಬೋಧಿಸುತ್ತಿದ್ದರೆ, ಶಂಕರನು ಕ್ರೂರಿಗಳೂ, ನಿಷ್ಕರುಣಿಗಳೂ, ಕುತಂತ್ರಿಗಳೂ ಉತ್ತಮ ಕ್ರಾಂತಿಕಾರರಾಗಲು ಸಾಧ್ಯ ಎಂದು ತನ್ನ ಹಿಂಬಾಲಕರಿಗೆ ಬೋಧಿಸುತ್ತಿದ್ದನು. ಶಂಕರನ ಬೋಧನೆಯನ್ನು ರಕ್ತಕೇಸರಿ ಸಂಪೂರ್ಣವಾಗಿ ನಂಬಿದ್ದನು.

ರಕ್ತಕೇಸರಿಯ ಹೆಣವನ್ನು ಶ್ರೀದೇವಿ ಕಾಡಿನಲ್ಲಿದ್ದ ಕ್ರಾಂತಿಸೇನೆಯ ಕೇಂದ್ರ ಶಿಬಿರಕ್ಕೆ ಕೊಂಡೊಯ್ದರು. ಅಲ್ಲಿ ಅವನಿಗೆ ಅಂತ್ಯ ಗೌರವವನ್ನು ಸಲ್ಲಿಸಲು ನೂರಾರು ಜನ ಕ್ರಾಂತಿಸೇನೆಯ ಸದಸ್ಯರು ಹಾಜರಿದ್ದರು. ಅಲ್ಲಿ ನೆರೆದಿದ ಜನ ಸಮೂಹವನ್ನು ಕುರಿತು ಶಂಕರನು ಹೇಳಿದ್ದ ಮಾತುಗಳ ಸಾರಾಂಶ ಈ ರೀತಿ ಇತ್ತು.'

"ಕಾಮ್ರೇಡ್ ರಕ್ತಕೇಸರಿ ನಮ್ಮನ್ನಗಲಿ ಹೋಗಿದ್ದಾನೆ. ಅಂತಹ ಕೆಚ್ಚೆದೆಯ ವೀರನನ್ನು ನಾನು ಇದುವರೆಗೆ ಯಾರನ್ನೂ ನೋಡಿಲ್ಲ. ನಿಜವಾದ ಕ್ರಾಂತಿಕಾರನಿಗೆ ಇರಬೇಕಾಗಿದ್ದ ಗುಣಗಳೆಲ್ಲವೂ ಅವನಲ್ಲಿದ್ದವು. ಅವನು ನಿಷ್ಕರುಣಿ ಎಂದು ಕೆಲವರು ಹೇಳುತ್ತಿದ್ದರು. ಆದರೆ ಕ್ರಾಂತಿಕಾರನಿಗೆ ಕರುಣೆ ಸಲ್ಲದು. ದಯಾದಾಕ್ಷಿಣ್ಯಗಳುಳ್ಳ ಹೇಡಿಯಿಂದ ಕ್ರಾಂತಿ ಸಾಧ್ಯವಿಲ್ಲ. ಕಾಮ್ರೆಡ್ ರಕ್ತಕೇಸರಿ ಕ್ರಾಂತಿಯ ಸಲುವಾಗಿ ಮಾಡಿದ್ದ ಸೇವೆಯನ್ನು ನಾವು ಸದಾ ಸ್ಮರಿಸುತ್ತಿರಬೇಕು. ನನಗಂತೂ ಅಪಾರ ದುಃಖವಾಗುತ್ತದೆ. ಅವನನ್ನು ಕೊಲ್ಲಿಸಿದ ಬಂಡವಾಳಗಾರರ ಬಾಲಬಡುಕ; ಕೊಲೆಪಾತಕ ಚಂದ್ರಹಾಸನನ್ನು ಹತಮಾಡಲು ನಾವೆಲ್ಲರೂ ಈ ಸಂದರ್ಭದಲ್ಲಿ ದೃಢ ಪ್ರತಿಜ್ಞೆ ಮಾಡಬೇಕು."

೬

ಅನಿಲಪುರದಿಂದ ಸಿರಗೂರಿಗೆ ಹೋಗುವ ದಾರಿಯಲ್ಲಿ, ಶ್ರೀದೇವಿ ಘಾಟಿಯ ಸಮೀಪ ಕಿಂದರಿಗುಡ್ಡದ ಮೇಲೆ, ಸಿದ್ಧಾನಂದರೆಂಬ ತಪಸ್ವಿಗಳ ಆಶ್ರಮವಿತ್ತು. ಅವರ ಆಶ್ರಮವನ್ನು ಸೌಮ್ಯಾಶ್ರಮವೆಂದೂ, ಅವರನ್ನು ಸಿದ್ಧಿಮಹಾರಾಜರೆಂದೂ ಜನರು ಕರೆಯುತ್ತಿದ್ದರು. ಸಿದ್ಧಾನಂದರು ಪವಾಡ ಪುರುಷರೆಂದು ಹೆಸರುವಾಸಿಯಾಗಿದ್ದರು. ಅವರಿಗೆ ರಾಜ್ಯದ ಮತ್ತು ರಾಜ್ಯದ ಹೊರಗಡೆ ಸಾವಿರಾರು ಜನ ಭಕ್ತರಿದ್ದರು. ಸಿದ್ಧಾನಂದರು ಚಿಕ್ಕಂದಿನಿಂದಲೂ ತಪಸ್ಸನ್ನು ಆಚರಿಸಿ ಕೆಲವು ಸಿದ್ಧಿಗಳನ್ನು ಪಡೆದಿದ್ದರು. ಆದರೆ ಅವರಿಗೆ ತಾನೊಬ್ಬ ಸಿದ್ಧ ಪುರಷನೆಂಬ ಅಹಂಕಾರ ಲವಲೇಶವೂ ಇರಲಿಲ್ಲ. ಅವರು ಅರವತ್ತೈದು ವರ್ಷಗಳನ್ನು ದಾಟಿದ್ದರೂ ಐವತ್ತು ವರ್ಷದವರಂತೆ ಕಾಣುತ್ತಿದ್ದರು. ಅವರ ತೇಜಃಪುಂಜವಾದ ಮುಖ ಮುದ್ರೆಯೂ, ಕಾಂತಿಯುತವಾದ ಕಣ್ಣುಗಳೂ ಅವರು ತಪಸ್ವಿ ಎಂಬುದನ್ನು ಸೂಚಿಸುತ್ತಿದ್ದವು. ಇತರ ಸನ್ಯಾಸಿಗಳಂತೆ ಪ್ರಚಾರ ಆಡಂಬರಗಳನ್ನು ಆಶಿಸದೆ, ಅವರು ಎಲೆಯಮರೆಯ ಕಾಯಂತೆ ಸಾಧನೆಯಲ್ಲಿ ನಿರತರಾಗುತ್ತಿದ್ದರು. ತನಗೆ ಸಿದ್ಧಿ ಪ್ರಾಪ್ತಿಯಾಗಿದೆಯೆಂದು ಯಾರೊಡನೆಯೂ ಎಂದೂ ಹೇಳಿದವರಲ್ಲ. ಬದಲಾಗಿ ಅವರು ತಾನಿನ್ನೂ ಸಾಧಕನೆಂದೂ, ಗುರಿಯನ್ನು ಸಾಧಿಸಬೇಕಾದರೆ ಇನ್ನೂ ಹೆಚ್ಚಿನ ಸಾಧನೆ ಅವಶ್ಯಕವೆಂದೂ ಹೇಳುತ್ತಿದ್ದರು.

ಅವರು ಸದಾ ಏಕಾಂತವನ್ನು ಬಯಸುವವರಾಗಿದ್ದರು. ಆದರೆ ಭಕ್ತಾದಿಗಳು ಅವರನ್ನು ಬಿಡುವಂತಿರಲಿಲ್ಲ. ಪ್ರತಿದಿನವೂ ನೂರಾರು ಜನ ಭಕ್ತರು ಅವರ ದರ್ಶನಕ್ಕಾಗಿ, ಅವರ ಅಶೀರ್ವಾದಕ್ಕಾಗಿ, ಅವರ ಉಪದೇಶಕ್ಕಾಗಿ, ಸೌಮ್ಯಾಶ್ರಮಕ್ಕೆ ಬರುತ್ತಿದ್ದರು. ಸೌಮಾಶ್ರಮ ಒಂದು ಯಾತ್ರಾಸ್ಥಳ ವಾದಂತಾಗಿತ್ತು. ಸಿದ್ಧಾನಂದರ ಕೃಪೆಯಿಂದ ರೋಗ ರುಜಿನಗಳಿಂದ ಅಥವಾ ಆಪತ್ತು ವಿಪತ್ತುಗಳಿಂದ ತಾವು ಪಾರಾದೆವೆಂದು ಜನರು ಅಲ್ಲಲ್ಲಿ ಆಡಿಕೊಳ್ಳುತ್ತಿದ್ದರು. ಅವರ ಮಹಿಮೆಯ ವಿಚಾರದಲ್ಲಿ ಸಾಮಾನ್ಯ ಜನರಿಗೆ ಒಂದು ವಿಧವಾದ ಮೂಢನಂಬಿಕೆ ಹುಟ್ಟಿತ್ತು. ಆದ್ದರಿಂದಲೇ, ಅವರನ್ನು ಜನರು ಸಿದ್ಧಿಮಹಾರಾಜರೆಂದು ಕರೆಯುತ್ತಿದ್ದರು. ಸಿದ್ಧಾನಂದರು ಕ್ರಾಂತಿಸೇನೆಯವರಿಂದಾದ ನೂರಾರು ಅಮಾನುಷ ಕೊಲೆಗಳನ್ನೂ, ಹಣಕ್ಕಾಗಿ ಅವರು ಮಾಡುತ್ತಿದ್ದ ದರೋಡೆಗಳನ್ನೂ ತಿಳಿದು ಬಹಳ ನೊಂದಿದ್ದರು. ಅವರು ತಮ್ಮ ಭಕ್ತರಿಗೆ ಕ್ರಾಂತಿಸೇನೆಯನ್ನು ಸೇರಬಾರದೆಂದೂ, ಕ್ರಾಂತಿಸೇನೆಗೆ ಬೆಂಬಲ ನೀಡಬಾರದೆಂದೂ ಉಪದೇಶ ಮಾಡುತ್ತಿದ್ದರು.

ಚಂಚಲೆಯು ಸಿದ್ಧಾನಂದರ ಮಹಿಮೆಯನ್ನು ಕೇಳಿದ್ದಳು. ಅವರ ಆಶ್ರಮಕ್ಕೆ ಹೋಗಿ ಬರಬೇಕೆಂಬ ಬಯಕೆ ಅವಳಿಗೆ ಬಹಳ ದಿನಗಳಿಂದಲೂ ಇತ್ತು. ಅನಿಲಕುಮಾರನಿಗೆ ಆಗಲೇ ಎರಡೂವರೆ ವರ್ಷವಾಗಿತ್ತು. ಅನಿಲಕುಮಾರನು ಹುಟ್ಟಿದ ಮೇಲೆ ಶ್ರೀಪುರಕ್ಕೆ ಹೋಗಿಯೇ ಇರಲಿಲ್ಲ. ತನ್ನ ಗೆಳತಿ ಗೌರಿಯನ್ನು, ಮದುವೆಯಾದ ಲಾಗಾಯ್ತು ನೋಡಿರಲಿಲ್ಲ. ಅವಳನ್ನು ನೋಡಬೇಕೆಂಬ ಆಸೆಯಾಗಿತ್ತು. ಶ್ರೀಪುರಕ್ಕೆ ಹೋಗಿ, ತಂದೆಯ ಮನೆಯಲ್ಲಿ ಒಂದು ವಾರವಿದ್ದು, ಅಲ್ಲಿಂದ ಅನಿಲಪುರಕ್ಕೆ ಹೋಗಿ, ಗೌರಿಯ ಜೊತೆಯಲ್ಲಿ ಒಂದು ದಿನವಿದ್ದು, ಅಲ್ಲಿಂದ ಗೌರಿಯ ಸಂಗಡ ಸೌಮ್ಯಾಶ್ರಮಕ್ಕೆ ಹೋಗಿ, ಸಿದ್ಧಾನಂದರ ಅನುಗ್ರಹವನ್ನು ಪಡೆದು ಬರಬೇಕೆಂದು ಯೋಚಿಸುತ್ತಿದ್ದಳು. ಗೋಪಾಲನಿಗೆ ತನ್ನ ಮನಸ್ಸಿನ ಬಯಕೆಯನ್ನು ತಿಳಿಸಿ, ಆತನೂ ತನ್ನ ಜೊತೆಯಲ್ಲಿ ಬರಬೇಕೆಂದು ಪ್ರಾರ್ಥಿಸಿಕೊಂಡಳು. ಆದರೆ ಆಗತಾನೆ ಅಖಿಲ ಭಾರತ ಕಾಂಗ್ರೆಸ್ಸು ಇಬ್ಭಾಗವಾಗಿ ಗೋಪಾಲನು ಆಡಳಿತ ಕಾಂಗ್ರೆಸ್ಸಿನ ಜಿಲ್ಲಾ ಅಧ್ಯಕ್ಷನಾಗಿದ್ದರಿಂದ ತನಗೆ ಬರಲು ಅನುಕೂಲವಿಲ್ಲವೆಂದೂ, ಬೇಕಾದರೆ ಕಾರನ್ನು ತೆಗೆದುಕೊಂಡು ಅವಳೇ ಹೋಗಿ ಬರಬಹುದೆಂದೂ ಆತನು ಅವಳಿಗೆ ಹೇಳಿದನು. ಅತ್ತೆಯೂ ಅವಳ ಪ್ರಯಾಣಕ್ಕೆ ಅನುಮತಿಯನ್ನು ನೀಡಿದಳು.

ತಾನು ಬರುವ ವಿಚಾರವನ್ನು ತನ್ನ ತಂದೆಗೂ, ಗೌರಿಗೂ ಎಂಟುದಿನಗಳ ಮುಂಚಿತವಾಗಿ ಬರೆದು, ಅನಂತರ ಕಾರಿನಲ್ಲಿ ಶ್ರೀಪುರಕ್ಕೆ ಪ್ರಯಾಣ ಬೆಳೆಸಿದಳು. ಅನಿಲಕುಮಾರನಿಗೆ ಅದೇ ದೂರದ ಪ್ರಯಾಣವಾಗಿತ್ತು. ದಾರಿಯಲ್ಲಿ ಚಂಚಲೆಗೆ ನಾನಾ ವಿಧವಾದ ಯೋಚನೆಗಳು ಬರುತ್ತಿದ್ದುವು. ತಂದೆಯ ಸಂದರ್ಶನಕ್ಕಾಗಿ ಅವಳ ಮನಸ್ಸು ಹಾತೊರೆಯುತ್ತಿತ್ತು. ತನ್ನ ಮತ್ತು ಅನಿಲಕುಮಾರನ ಆಗಮನದಿಂದ ತಂದೆಗೆ ಆನಂದವಾಗುತ್ತದೆಂಬ ವಿಚಾರದಲ್ಲಿ ಅವಳಿಗೆ ಅನುಮಾನವಿಲ್ಲದಿದ್ದರೂ, ಕಮಲ ತನ್ನನ್ನು

ಯಾವ ರೀತಿ ಸ್ವಾಗತಿಸುತ್ತಾಳೋ ಎಂಬ ವಿಚಾರದಲ್ಲಿ ಅವಳಿಗೆ ಯಾವ ಕಲ್ಪನೆಯೂ ಇರಲಿಲ್ಲ. ತಮ್ಮ ಗಂಗಾಧರನಿಗೂ, ತಂಗಿ ಊರ್ಮಿಳಾಗೂ ಉಡುಗೊರೆಗಳನ್ನು ತಂದಿದ್ದಳು. ಶ್ರೀಪುರದ ಹಾದಿಯನ್ನು ಹಿಡಿದಾಗ ಶಂಕರನ ನೆನಪೂ ಆಗಿತ್ತು. ಮಧ್ಯೆ ಮಧ್ಯೆ ಅನಿಲಕುಮಾರನು ತೊದಲು ನುಡಿಗಳಿಂದ ಕಾರನ್ನು ನಡೆಸುತ್ತಿದ್ದ ಡ್ರೈವರನಿಗೂ, ಚಂಚಲೆಗೂ ಏನಾದರೂ ಹೇಳುತ್ತಿದ್ದನು.

ಮಗಳ ಮತ್ತು ಮೊಮ್ಮಗನ ಆಗಮನಕ್ಕಾಗಿ ಕಾಯುತ್ತಾ, ಕೃಷ್ಣಕಾಂತನು ಆದಿನ ಮನೆಯಲ್ಲಿಯೇ ಇದ್ದನು. ಕಾರಿನಲ್ಲಿ ಅವರು ಬಂದಿಳಿದ ಕೂಡಲೆ ಅವನ ಆನಂದಕ್ಕೆ ಮಿತಿಯೇ ಇರಲಿಲ್ಲ. ಅನಿಲಕುಮಾರನನ್ನು ಎತ್ತಿಕೊಂಡು ಮುದ್ದಾಡಿದನು. ಗೋಪಾಲನ ಮತ್ತು ಸ್ವರೂಪರಾಣಿಯ ಯೋಗಕ್ಷೇಮವನ್ನು ವಿಚಾರಿಸಿದನು. ಕಮಲ ಮನಸ್ಸಿಲ್ಲದ ಮನಸ್ಸಿನಿಂದ ಹೊರಗೆ ಬಂದು, ಚಂಚಲೆಯನ್ನು ಕುರಿತು, "ಚೆನ್ನಾಗಿದ್ದೀಯಾ" ಎಂದು ಕೇಳಿದಳು. ಚಂಚಲೆ "ಚೆನ್ನಾಗಿದ್ದೀನಿ ಚಿಕ್ಕಮ್ಮಾ, ನೀವು ಹೇಗಿದ್ದೀರಿ?" ಎಂದು ಬಾಯಿತುಂಬಾ ಕೇಳಿದಳು. ಕಮಲೆ ಅನಿಲಕುಮಾರನನ್ನು ಎತ್ತಿಕೊಳ್ಳಲು ಯತ್ನಿಸಿದಳು. ಆದರೆ ಅನಿಲಕುಮಾರನು ಅವಳ ಸ್ವಭಾವವನ್ನು ಅರಿತವನಾಗಿಯೋ ಎಂಬಂತೆ ಅವಳ ಕೈಗೆ ಹೋಗದೆ ಕಿರಿಚಿದನು. ಚಂಚಲೆ ದೊಡ್ಡ ಕಾರಿನ ಒಡತಿಯಾಗಿ, ಬೆಲೆಬಾಳುವ ಸೀರೆಯನ್ನುಟ್ಟು ಬಂದಿದ್ದನ್ನು ನೋಡಿ ಕಮಲ ಅಸೂಯೆಯಿಂದ ಸಂಕಟಪಟ್ಟಳು. ಆದರೂ ಔಪಚಾರಿಕವಾಗಿ ಚಂಚಲೆಯೊಡನೆ ಮಾತನಾಡಿದ್ದಳು.

ಚಂಚಲೆ ಮನೆಗೆ ಬಂದ ಮೂರನೆಯ ದಿನದ ರಾತ್ರಿ, ಕಮಲ ಕೃಷ್ಣಕಾಂತನ ಕೊಠಡಿಗೆ ಹೋಗಿ, "ಚಂಚಲಾ ಯಾವಾಗ ವಾಪ್ಸು ಹೋಗ್ತಾಳೆ?" ಎಂದು ಕೇಳಿದಳು. ಕೃಷ್ಣಕಾಂತನು ಅವಳ ಪ್ರಶ್ನೆಯ ಉದ್ದೇಶವನ್ನು ಅರ್ಥ ಮಾಡಿಕೊಳ್ಳಲಾರದೆ "ಯಾಕೆ?" ಎಂದು ಪ್ರಶ್ನಿಸಿದನು.

"ನನ್ನ ಅಕ್ಕ ಶಾಂತ ಮತ್ತು ಅವಳ ಮಕ್ಕಳು ಆಚೆನಾಡಿದ್ದು ಬರ್ತಾರಂತೆ, ಅದಕ್ಕೇ ಕೇಳಿದೆ."

"ನಿನ್ನ ಅಕ್ಕ ಬರುವುದಕ್ಕೂ, ಚಂಚಲಾ ಹೋಗುವುದಕ್ಕೂ ಏನು ಸಂಬಂಧ?"

"ಅವರು ಬಂದ್ರೆ ಅವರಿಗೆ ಇರೋಕೆ ರೂಮು ಬೇಕಲ್ಲ? ಸ್ಥಳಸಂಕೋಚ ಅಂತ ಕೇಳಿದೆ."

"ಈ ಮನೇಲಿ ನಿನ್ನ ಬಳಗದವರು ಎಷ್ಟು ಜನಾ ಬಂದ್ರೂ ಸ್ಥಳ ಇದೆ. ಆದರೆ ನನ್ನ ಮಗಳಿಗೆ ಮಾತ್ರ ಸ್ಥಳ ಇಲ್ಲ ಅಲ್ವೇ?"

"ಅದಕ್ಯಾಕೆ ಅಷ್ಟು ಕೋಪ? ನನ್ನ ಅಕ್ಕನಿಗೇ ಈಗ ಬರೋದು ಬ್ಯಾಡ ಅಂತ ಹೇಳಿ ಬರೀತೀನಿ. ಈ ಮನೆ ಯಜಮಾನಿ ಬಂದಾರೆ, ಅವರು ಇರೋವರೀಗೆ ನೀನು ಬರಬ್ಯಾಡ ಅಂತಾ ಬರೀತೀನಿ."

"ನಿನಗ್ಯಾಕೆ ಅಷ್ಟೊಂದು ತೊಂದರೆ, ನನ್ನ ಮಗಳನ್ನೇ ಹೋಗೋಕೆ ಹೇಳ್ತೀನಿ."

"ನಿಮ್ಮ ಮಗಳನ್ನ, ಗಂಡನ್ನ ಬಿಡಿಸಿ, ಮನೇಲಿ ಇಟ್ಕೊಳ್ಳಿ."

"ಬಜಾರಿ, ನಿನಗೆ ಗಂಡ ಬ್ಯಾಡ ಅಂತ ಅಂದ್ರೆ ನನ್ನ ಮಗಳಿಗೂ ಗಂಡ ಬ್ಯಾಡ ಆಗಿದ್ದಾನೇನು? ನಿನ್ನಿಂದ ನನ್ನ ಜೀವನವೆಲ್ಲಾ ಹಾಳಾಗಿ ಹೋಯಿತು. ಮನೇಲಿ ಹುಟ್ಟಿದ ಮಗಳು ಬಂದು ಇನ್ನೂ ಮೂರು ದಿನ ಆಗ್ಲಿಲ್ಲ. ಅವಳು ಯವಾಗ ಹೋಗ್ತಾಳೆ ಅಂತ ಕೇಳ್ತಿಯಲ್ಲಾ! ನಾನೇ ಎಲ್ಲಾದರೂ ಹೋಗ್ತೀನಿ. ನೀನೇ ಮನೇಲಿ ಇರು."

"ಹೋಗ್ತಿನಿ ಅಂತ ಹೇಳ್ತಾ ಬಹಳ ಕಾಲ ಆಯ್ತು. ತಟವಾಡಗಿತ್ತಿ ಮಗಳು ಬಂದ ಕೂಡಲೇ ಏನೋ ಚಾಡಿ ಚುಚ್ಚ್ಯಾಳೆ. ಅದಕ್ಕೇ ಇಷ್ಟು ಖಾರದ ಮಾತು" ಎಂದು ಹೇಳುತ್ತಾ ಶೂರ್ಪನಖಿಯಂತೆ ರಭಸದಿಂದ ತನ್ನ ಕೊಠಡಿಗೆ ಹೋದಳು.

ಪಕ್ಕದ ಕೊಠಡಿಯಲ್ಲಿ ಮಲಗಿದ್ದ ಚಂಚಲೆಗೆ ತಂದೆಯ ಮತ್ತು ಮಲತಾಯಿಯ ಮಾತುಗಳು ಕೇಳಿದ್ದವು. ಈ ಮಾತುಗಳನ್ನು ಕೇಳಿ, ಚಂಚಲೆಯ ಹೃದಯಕ್ಕೆ ಚೂರಿಯನ್ನು ಇರಿದಂತೆ ಆಗಿತ್ತು. ತಂದೆಗೆ ಮಲತಾಯಿ ಕೊಡುತ್ತಿದ್ದ ಕಿರುಕುಳಗಳನ್ನು ಸ್ಮರಿಸಿಕೊಂಡು ಅತ್ತಳು. ತನ್ನ ವಿಚಾರದಲ್ಲಿ ಕಮಲೆಯ ಧೋರಣೆ ಮದುವೆಯಾದ ನಂತರ ಬದಲಾಗಿರಬಹುದೆಂದು ಭಾವಿಸಿದ್ದಳು. ಆದರೆ ಕಮಲ ತಂದೆಯೊಡನೆ ಆಡುತ್ತಿದ್ದ ಮಾತುಗಳಿಂದ ಅವಳ ಭಾವನೆ ಸ್ವಲ್ಪವೂ ಬದಲಾಗಿಲ್ಲವೆಂದು ವ್ಯಕ್ತವಾಯಿತು.

ಬೆಳಿಗ್ಗೆ ಸ್ನಾನ ಮುಂತಾದ ಪ್ರಾತಃರ್ವಿಧಿಗಳಾದ ನಂತರ, ಚಂಚಲೆ ತನ್ನ ತಂದೆಯ ಕೊಠಡಿಗೆ ಹೋಗಿ, ತಾನು ಆ ದಿನವೇ ಅನಿಲಪುರಕ್ಕೆ ಹೋಗಿ, ಅಲ್ಲಿ ಗೌರಿಯ ಜೊತೆಯಲ್ಲಿ ಒಂದು ದಿನವಿದ್ದು, ಮರುದಿನ ಸಿರಗೂರಿಗೆ ಹೋಗುವುದಾಗಿ ಹೇಳಿದಳು. ಕೃಷ್ಣಕಾಂತನು ಮಗಳ ಮಾತನ್ನು ಕೇಳಿ ಖಿನ್ನನಾಗಿ "ನೀನು ಎಂಟುದಿನ ಇಲ್ಲಿರುವುದಾಗಿ ಬರೆದಿದ್ದೆ" ಎಂದನು. ಅದಕ್ಕೆ ಚಂಚಲೆ "ಬರೆದಿದ್ದು ನಿಜ. ಆದರೆ ಈಗ ಜಾಗ್ರತೆ ವಾಪಸು ಹೋಗಬೇಕಾಗಿರುವುದು ಅನಿವಾರ್ಯವಾಗಿದೆ" ಎಂದಳು.

"ಬಹುಶಃ ರಾತ್ರಿ ಆ ರಾಕ್ಷಸಿ ಹೇಳಿದ ಮಾತುಗಳನ್ನು ನೀನು ಕೇಳಿರಬೇಕು; ನನಗೆ ಗೊತ್ತು ನಾನು ಬದುಕಿರುವುದಕ್ಕಿಂತಲೂ ಸಾಯುವುದೇ ಮೇಲು."

"ಅಪ್ಪಾಜೀ ನೀವೂ ನನ್ನ ಜೊತೆಯಲ್ಲಿ ಸಿರಗೂರಿಗೆ ಬನ್ನಿ. ನಾನು ಸಿದ್ಧಿ ಮಹಾರಾಜರ ಆಶ್ರಮಯಕ್ಕೆ ಹೋಗಬೇಕು. ನೀವೂ ಅವರ ದರ್ಶನವನ್ನು ಪಡೆಯಬಹುದು. ನಮ್ಮನೆಯಲ್ಲಿ ಒಂದು ವಾರವಿದ್ದು ವಿಶ್ರಾಂತಿ ಪಡೆಯಬಹುದು.

"ನನಗೆಲ್ಲಮ್ಮಾ ವಿಶ್ರಾಂತಿ? ನನಗೇ ಒಂದೇ ದಿನ ವಿಶ್ರಾಂತಿ, ಸತ್ತಮೇಲೆ. ನಾನು ಹೇಗೆ ಬರಲಿ? ನನ್ನ ಕೇಸುಗಳನ್ನು ಯಾರು ಎಂಟು ದಿನ ನೋಡಿಕೊಳ್ಳುತ್ತಾರೆ? ಕೋರ್ಟಿಗೆ ರಜಾ ಬಂದನಂತರ ಬರುತ್ತೇನೆ" ಎಂದು ಕೃಷ್ಣಕಾಂತನು ಹೇಳಿದನು.

ಬೆಳಿಗ್ಗೆ ಎಂಟು ಗಂಟೆಯಾದರೂ ಕಮಲ ತನ್ನ ಕೊಠಡಿಯಿಂದ ಹೊರಗೆ ಬಂದಿರಲಿಲ್ಲ. ಅಡುಗೆಯ ನಾರಾಯಣನು ಉಪಾಹಾರವನ್ನು ಸಿದ್ಧಪಡಿಸಿ ಚಂಚಲೆಗೂ, ಕೃಷ್ಣಕಾಂತನಿಗೂ, ಚಂಚಲೆಯ ಡ್ರೈವರನಿಗೂ ಬಡಿಸಿದನು. ಚಂಚಲೆ ಹೊರಡುವ ಮುನ್ನ ಕಮಲೆಯ ಕೊಠಡಿಗೆ ಹೋಗಿ ಅವಳಿಗೆ ಹೇಳಿಬರೋಣವೆಂದು ಯೋಚಿಸಿದಳು. ಆದರೆ ತನ್ನನ್ನು ದ್ವೇಷ ಮಾಡುವವಳೊಡನೆ ಮಾತನಾಡುವುದೇ ಒಳ್ಳೆಯದಲ್ಲವೆಂದು

ತಂದೆಯ ಅಪ್ಪಣೆಯನ್ನು ಪಡೆದು, ಅವರ ಕಾಲಿಗೆರಗಿ, ಕಣ್ಣೀರಿಡುತ್ತಾ ಹೊರಡಲು ಸಿದ್ಧಳಾದಳು. ತಂದೆ ಮಗಳನ್ನು ತಬ್ಬಿಕೊಂಡು ಅತ್ತನು. ತಾಯಿ ಮತ್ತು ತಾತ ಇಬ್ಬರೂ ಅಳುತ್ತಿರುವುದನ್ನು ನೋಡಿದ ಅನಿಲಕುಮಾರನೂ ಅಳತೊಡಗಿದನು. ಕೃಷ್ಣಕಾಂತನು ಮೊಮ್ಮಗನನ್ನೆತ್ತಿಕೊಂಡು, ಅವನ ಎರಡು ಕೆನ್ನೆಗಳಿಗೂ ಮುತ್ತುಕೊಟ್ಟು, ಮಗಳನ್ನು ಹರಸಿ ಕಳುಹಿಸಿಕೊಟ್ಟನು.

ಚಂಚಲೆಯು ಶ್ರೀಪುರ ನಗರದಲ್ಲಿ ಕಾರಿನಲ್ಲಿ ಹೋಗುತ್ತಿರುವಾಗ, ಅವಳಿಗೆ ಹಿಂದಿನ ನೆನಪುಗಳೇನಕವು ಬರುತ್ತಿದ್ದವು. ಒಂದು ವಾರ ಶ್ರೀಪುರದಲ್ಲಿರುವುದಾಗಿ ಭಾವಿಸಿ ತಾನು ಹೋಗುವ ಮುನ್ನ ತನ್ನ ಹಿಂದಿನ ಗೆಳತಿಯರನ್ನು ನೋಡಬೇಕೆಂದು ಅವಳು ಬಯಸಿದ್ದಳು. ಆದರೆ ಅನಿವಾರ್ಯವಾಗಿ ನಿಶ್ಚಿತ ಅವಧಿಗಿಂತ ಮುಂಚಿತ ವಾಗಿ ಹೊರಡಬೇಕಾಗಿ ಬಂದುದರಿಂದ ಅವಳು ಯಾರನ್ನೂ ನೋಡುವಂತಿರಲಿಲ್ಲ. ಮುಖ್ಯವಾಗಿ ಪದ್ಮಾವತಿಯನ್ನು ನೋಡಬೇಕೆಂದು ಬಯಸಿದ್ದಳು. ಅದೂ ಸಾಧ್ಯವಾಗಿರಲಿಲ್ಲ. ನಗರದ ಮಧ್ಯೆ ಹೋಗುತ್ತಿರುವಾಗ, ವಿದ್ಯಾರ್ಥಿ ದೆಸೆಯಲ್ಲಿ ತಾನು ಅನುಭವಿಸಿದ್ದ ಅನೇಕ ಸಂಗತಿಗಳು ನೆನಪಿಗೆ ಬಂದವು. ತನ್ನ ಕಾಲೇಜನ್ನು ದೂರದಿಂದ ನೋಡಿ, ಕಾಲೇಜಿನ ದಿನಗಳನ್ನು ಸ್ಮರಿಸಿಕೊಂಡಳು.

ಶ್ರೀಪುರವನ್ನು ಬಿಟ್ಟು ಇನ್ನೂ ಮೂರು ವರ್ಷ ಸಂದಿರಲಿಲ್ಲ. ಆದರೆ ಎಷ್ಟೋ ವರ್ಷಗಳ ಕಾಲ ಸವೆದುಹೋದಂತೆ ಆಗಿತ್ತು. ಅವಳ ಆತ್ಮೀಯ ಗೆಳತಿಯರ ಪೈಕಿ ಕೆಲವರು ಮದುವೆಯಾಗಿ ತಮ್ಮ ತಮ್ಮ ಗಂಡಂದಿರ ಜೊತೆಯಲ್ಲಿ ಬೇರೆ ಕಡೆಗಳಲ್ಲಿ ವಾಸಿಸುತ್ತಿದ್ದರು. ಶ್ರೀಪುರದಲ್ಲಿ ತನ್ನವರೆನಿಸಿಕೊಳ್ಳುವವರು ಬೆಟ್ಟು ಮಡಿಸುವಷ್ಟು ಜನರಿದ್ದರು. ಆ ಪೈಕಿ ಅವಳ ತಂದೆ ಅತ್ಯಂತ ಆತ್ಮೀಯನಾಗಿದ್ದನು. ಅವನ ನಂತರ ಶ್ರೀಪುರಕ್ಕೂ ತನಗೂ ಯಾವ ಸಂಬಂಧವೂ ಉಳಿಯಲಾರದೆಂದು ಯೋಚಿಸುತ್ತಿದ್ದಳು. ತನ್ನ ತಂದೆಗೆ ಜೀವನದಲ್ಲಿ ಸುಖವೇ ಇರಲಿಲ್ಲವೆಂಬುದು ಅವಳನ್ನು ಸದಾ ಬಾಧಿಸುತ್ತಿದ್ದ ಚಿಂತೆಯಾಗಿತ್ತು. ಇತರ ಯಾವ ಯೋಚನೆಗಳು ಮನಸ್ಸಿಗೆ ಬಂದರೂ, ಆ ಚಿಂತೆ ಅವಳನ್ನು ಬಿಡುತ್ತಿರಲಿಲ್ಲ. ದಾರಿಯಲ್ಲಿ ಎಲ್ಲಾದರೂ ಶಂಕರ ಸಿಕ್ಕಿದರೆ ಏನು ಗತಿಯೆಂಬುದನ್ನು ಸಹ ಯೋಚಿಸುತ್ತಿದ್ದಳು.

ಹೀಗೆ ನಾನಾ ವಿಚಾರಗಳಲ್ಲಿ ಮಗ್ನಳಾಗಿರುವಾಗ, ಕಾರು ಅನಿಲಗಿರಿಯನ್ನು ಸಮೀಪಿಸಿತು. ಅನಿಲಗಿರಿಯ ಸಮೀಪದ ಸುಂದರ ಸನ್ನಿವೇಶ ಹಿಂದೆ ಹಲವು ಬಾರಿ ಅವಳನ್ನು ಆನಂದದಿಂದ ಪುಳಕಿತಳಾಗುವಂತೆ ಮಾಡಿತ್ತು. ಆದರೆ ಅಂದು ಅವಳ ಮನಸ್ಸಿನ ಮೇಲೆ ಆ ಸನ್ನಿವೇಶ ಹೆಚ್ಚು ಪರಿಣಾಮವನ್ನುಂಟುಮಾಡಿರಲಿಲ್ಲ. ತಂದೆಯನ್ನಾಗಲಿ ಬಂದ ಕಾರಣದಿಂದ ನೊಂದ ಮನಸ್ಸಿಗೆ ಇನ್ನು ನೆಮ್ಮದಿ ಯುಂಟಾಗಿರಲಿಲ್ಲ. ಅನಿಲಗಿರಿಯ ಹತ್ತಿರ ಬಂದಾಗ, ತಾನು ಶಂಕರನೊಡನೆ ಚೆಲ್ಲಾಟ ವಾಡಿದ ಹಲವು ಪ್ರಸಂಗಗಳು ನೆನಪಿಗೆ ಬಂದವು. ಹಿಂದಿನ ರಸನಿಮಿಷಗಳ ಸವಿನೆನಪು ಮನಸ್ಸಿಗೆ ಏನೋ ಒಂದು ವಿಧವಾದ ಉದ್ದೀಪನ ಮಾಡುವಂತಿದ್ದರೆ, ಇನ್ನೊಂದು

ಕಡೆ ಯೌವನದ ಭರದಲ್ಲಿ, ಸಾಧಕ ಬಾಧಕಗಳನ್ನು ಯೋಚಿಸದೆ, ಧೂರ್ತ ಶಂಕರನೊಡನೆ ಅಕ್ರಮ ಪ್ರೇಮದಲ್ಲಿ ಭಾಗಿಯಾಗಿದ್ದು ತಪ್ಪೆಂದು ಪಶ್ಚಾತ್ತಾಪ ಪಡುತ್ತಿದ್ದಳು.

ಅನಿಲಪುರಕ್ಕೆ ಬಂದಾಗ, ಒಂಬತ್ತು ಗಂಟೆಯಾಗಿತ್ತು ಗೌರಿ ಮನೆಗೆ ಬಂದ ಗೆಳತಿಯನ್ನು ಸ್ವಾಗತಿಸಿ "ಮುಂದಿನವಾರ ಬರುವುದಾಗಿ ಬರೆದಿದ್ದೆ ಇದೇನು ಹೇಳದೆ ಕೇಳದೆ ಇಂದೇ ಬಂದೆ?"

"ಬಂದದ್ದು ತಪ್ಪಾಯಿತೇನು?" ಎಂದು ನಗುತ್ತಾ ಚಂಚಲೆ ಕೇಳಿದಳು.

"ಹೂಂ ತಪ್ಪಾಯಿತು. ಆ ತಪ್ಪಿಗೆ ಶಿಕ್ಷೆ, ನೀನು ನನ್ನ ಜೊತೆಯಲ್ಲಿ ಒಂದುವಾರ ಇಲ್ಲೇ ಇರುವುದು. ಅಂತೂ ಬಂದೆಯಲ್ಲಾ ಮೂರು ವರ್ಷಕ್ಕೆ."

"ನೀನೆಷ್ಟು ಸಾರಿ ನಮ್ಮ ಮನೆಗೆ ಬಂದಿದ್ದೆ? ನಾನು ಈಗಲಾದರೂ ಬಂದೀನಲ್ಲಾ."

"ನಾನೇನಮ್ಮಾ ಮಾಡಲಿ" ಚಂದ್ರಹಾಸನ ಜೊತೆಯಲ್ಲಿ ಅಪಾಯವನ್ನೂ ಸದಾ ವರಿಸಿದ್ದೇನೆ. ಯಾವಾಗಲೂ ಭಯ; ಯಾವಾಗಲೂ ಚಿಂತೆ; ಮನೆಬಿಟ್ಟು ಹೊರಡುವುದಾದರೂ ಹೇಗೆ? ನೀನೇಕೆ ಇಷ್ಟೊಂದು ಸೊರಗಿ ಹೊಗಿದ್ದೀಯಾ ಚಂಚಲಾ?"

"ನನ್ನ ಕತೆಯನ್ನು ಆಮೇಲೆ ಹೇಳುತ್ತೇನೆ."

"ನಿನಗೇನಮ್ಮಾ ಕೊರತೆ? ಬೇಕಾದಷ್ಟು ಸಂಪತ್ತು, ಬಂಗಾರದಂತಹ ಅತ್ತೆ, ಬಂಗಾರದಂತಹ ಗಂಡ–ನಿನಗ್ಯಾವ ಕೊರತೆ?"

"ನಿನಗೇನು ಕಡಿಮೆಯಾಗಿದೆ? ಮುತ್ತಿನಂತಹ ಮಾವ; ಮಾಣಿಕ್ಯದಂತಹ ಮೆಚ್ಚಿದ ಗಂಡ. ಚಂದ್ರಹಾಸ ಎಲ್ಲಿ? ಬಾಬುರವರು ಎಲ್ಲಿ?"

"ಬಾಬುರವರಿಗೆ ಆರೋಗ್ಯ ಅಷ್ಟೊಂದು ಸರಿಯಿಲ್ಲ. ಚಂದ್ರಹಾಸ ಸ್ನಾನ ಮಾಡ್ತಾ ಇದ್ದಾರೆ. ನಿನ್ನ ಕುಮಾರ ಕಂಠೀರವನಿಗೆ ಹೆಸರು ಏನು ಇಟ್ಟಿದ್ದೀಯಾ?"

"ನಿನಗೆ ಅದೂ ಮರೆತುಹೋಗಿದೆ. 'ಅನಿಲಕುಮಾರ' ಎಂದು ನಿನಗೆ ಬರೆದಿರಲಿಲ್ಲವೇ?"

"ಓ ಹೌದು, ಮರೆತಿದ್ದೆ. ಅನಿಲಕುಮಾರ, ಬಾ ಎಂದು ಅನಿಲಕುಮಾರನನ್ನು ಕರೆದುಕೊಳ್ಳಲು ಹೋದಳು. ಆದರೆ ಅವನು ಅವಳ ಜೊತೆಯಲ್ಲಿ ಹೋಗಲು ನಿರಾಕರಿಸಿದನು.

ಅನಂತರ ಗೌರಿಯೂ, ಚಂಚಲೆಯೂ ಪುರುಷೋತ್ತಮಬಾಬುರವರ ಕೊಠಡಿಗೆ ಹೋದರು. ಚಂಚಲೆ ಪುರುಷೋತ್ತಮಬಾಬುರವರ ಕಾಲಿಗೆ ಬಿದ್ದು, ಅವರ ಯೋಗಕ್ಷೇಮವನ್ನು ವಿಚಾರಿಸಿದರು. ಬಾಬುರವರು "ಹೀಗೇ ಇದ್ದೀನಮ್ಮಾ, ಬದಕೋಕೆ ಮನಸ್ಸಿಲ್ಲ; ಸಾವು ಹತ್ತಿರ ಬರೋದಿಲ್ಲ; ಹಾಗಾಗಿದೆ ನನ್ನ ಸ್ಥಿತಿ. ನಮ್ಮ ಮನೇಲಿ ಏನಾದರೊಂದು ಗಂಡಾಂತರ ಆಗ್ತಾನೇ ಇರ್ತದೆ. ಹೋದವಾರ ಒಂದು ಗಂಡಾಂತರ ಆಗಿತ್ತು, ಏನೋ ದೇವರು ಪಾರು ಮಾಡಿದ."

"ಅದ್ಯಾವುದು ಹೊಸ ಗಂಡಾಂತರ?"

"ನಮ್ಮ ಚಂದ್ರನ್ನ ಕೊಲ್ಲೋಕೆ ಮತ್ತೊಂದು ಪ್ಲಾನ್ ಮಾಡಿದ್ರು" ಎಂದು ಹೇಳಿ, ರಕ್ತಕೇಸರಿ ಚಂದ್ರಹಾಸನನ್ನು ಕೊಲ್ಲಬೇಕೆಂದು ಹಿಂದಿನವಾರ ಮನೆಗೆ ನುಗ್ಗಿದ್ದ ವಿಚಾರವನ್ನು ಸೂಕ್ಷ್ಮವಾಗಿ ಪುರುಷೋತ್ತಮಬಾಬುರವರು ಹೇಳಿದರು. ಚಂಚಲೆಯೂ, ಬಾಬು ಅವರೂ ಮಾತನಾಡುತ್ತಿರುವಾಗ, ಚಂದ್ರಹಾಸನು ಸ್ನಾನ ಮಾಡಿಕೊಂಡು ಬಂದವನು, "ಗೌರೀ"ಯೆಂದು ಕೂಗಿದನು. ಗೌರಿ, ಚಂಚಲೆಯನ್ನು ಕುರಿತು "ಅವರಿಗಿನ್ನೂ ಉಪಾಹಾರವಾಗಿಲ್ಲ. ನಮ್ಮ ಜೊತೆಯಲ್ಲಿ ಸ್ವಲ್ಪ ತಿಂಡಿ ತಿನ್ನು. ಅನಿಲಕುಮಾರನಿಗೆ ಏನು ಕೊಡಲಿ?" ಎಂದಳು.

ಆಗ ಚಂಚಲೆ "ನನಗೇನೂ ಬೇಡಮ್ಮಾ, ಸ್ವಲ್ಪ ಟೀ ಕೊಡು. ನಾನು ಮನೆಯನ್ನು ಬಿಡುವಾಗ ತಿಂಡಿ ತಿಂದೇ ಬಂದಿದ್ದೆ. ಅನಿಲಕುಮಾರನಿಗೆ ಸ್ವಲ್ಪ ಹಾಲು ಕೊಡು" ಎಂದು ಗೌರಿಯನ್ನು ಹಿಂಬಾಲಿಸಿ ಊಟದ ಮನೆಗೆ ಹೋದಳು.

ಗೌರಿ ಊಟದ ಮನೆಯಲ್ಲಿ ಚಂಚಲೆಯನ್ನು ಕುಳ್ಳಿರಿಸಿ, ಗಂಡನಿಗೆ ಚಂಚಲ ಬಂದಿರುವ ಸುದ್ದಿಯನ್ನು ತಿಳಿಸುವ ಸಲುವಾಗಿ ಅವನ ಕೊಠಡಿಗೆ ಹೋದಳು. ಚಂದ್ರಹಾಸ ಊಟದ ಮನೆಗೆ ಬಂದವನು, "ಎಲ್ಲಿಂದ ಬಂದಿರಿ? ನೀವು ಮುಂದಿನವಾರ ಬರುತ್ತೀರೆಂದು ಗೌರಿ ಹೇಳುತ್ತಿದ್ದಳು. ಗೋಪಾಲ್ ಆರೋಗ್ಯವೇ, ನಿಮ್ಮ ತಂದೆಯನ್ನು ಈಚೆಗೆ ನೋಡಲೇ ಇಲ್ಲ. ಅವರು ಹ್ಯಾಗಿದ್ದಾರೇ? ಯಾಕೆ ಇಷ್ಟೊಂದು ಬಡವಾಗಿದ್ದೀರಿ? ಒಂದು ಮಗುವಿಗೇ ಇಷ್ಟೊಂದು ಬಡಕಲಾದರೆ ಮೂರು ನಾಲ್ಕು ಮಕ್ಕಳಾದರೆ ಮತ್ತೆ ಗತಿಯೇನು? ಎಂದು ನಕ್ಕನು.

"ನಾವೆಲ್ಲಾ ಚೆನ್ನಾಗಿದ್ದೇವೆ. ನೀವು ಚೆನ್ನಾಗಿರಬೇಕಲ್ಲ. ಈಚೆಗೆ ನೀವು ಮರಣದ ದವಡೆಯಿಂದ ಪಾರಾಗಿದ್ದ ವಿಚಾರ ತಿಳಿಯಿತು."

"ಅದೇನು ಸಣ್ಣ ವಿಷಯ ಬಿಡಿ. ಕ್ರಾಂತಿಯ ಹಾದಿಯನ್ನು ಹಿಡಿದವರು ಇಂತಹ ಪ್ರಸಂಗಗಳನ್ನು ಎದುರಿಸುತ್ತಲೇ ಇರಬೇಕು."

"ನೀವು ಬಹಳ ಸುಲಭವಾಗಿ ಮಾತನಾಡುತ್ತೀರಿ. ನಿಮ್ಮ ಪ್ರಾಣಕ್ಕೆ ಅಪಾಯವಾದರೆ ಗೌರಿಯ ಗತಿಯೇನು? ಈ ದಿನ ನಿಮ್ಮಪ್ಪ ವಿಚಾರಗಳನ್ನು ಹೇಳಿದರು; ಕೇಳಿ ನನ್ನ ಮೈ ನಡುಗಿತು. ಗೌರಿ ತುಂಬಾ ಗಾಬರಿಯಾಗಿದ್ದಾಳೆ."

"ನಿಮ್ಮ ಫ್ರೆಂಡ್ ತುಂಬಾ ಅಂಜುಬುರುಕಿ. ಚಿಂತೆಯ ಹುಳು. ಯಾವಾಗಲೂ ಹೆದರಿಕೆ, ಯಾವಾಗಲೂ ಚಿಂತೆ. ಮದುವೆಯಾಗುವ ಮುಂಚೆ ಇವಳು ಇಷ್ಟೊಂದು ಅಂಜುಬುರಕಿಯೆಂದು ನಾನು ತಿಳಿದಿರಲಿಲ್ಲ."

"ತಿಳಿದಿದ್ದಿದ್ದರೆ ಗೌರಿಯನ್ನು ಮದುವೆಯಾಗುತ್ತಿರಲಿಲ್ಲವೇನೋ?

ಆಗ ಗೌರಿ ಮಧ್ಯೆ ಬಾಯಿಹಾಕಿ, ಕ್ರಾಂತಿಸೇನೆಯವರು ಇತ್ತೀಚೆಗೆ ಕೆಲವು ಕಡೆ ಮಾಡಿದ್ದ ಕೊಲೆ ಲೂಟಿಗಳನ್ನು ವಿವರಿಸುತ್ತಾ, "ಇದನ್ನೆಲ್ಲಾ ಕೇಳಿದ್ರೆ ಯಾರಿಗೆ ತಾನೆ ಭಯವಾಗೋದಿಲ್ಲ ಚಂಚಲಾ? ಆ ನೀಚರು ಕ್ರಾಂತಿಯ ಹೆಸರಿನಲ್ಲಿ ಎಂತಹ ನೀಚ

ಕೆಲಸ ಮಾಡೋಕೊ ಹಿಂಜರಿಯೋದಿಲ್ಲ. ನಾ ಯೇನು ನನಗೋಸ್ಕರ ಚಿಂತೆ ಮಾಡ್ತಾ ಇಲ್ಲಾ; ಇವರಿಗಾಗಿ ನನ್ನ ಚಿಂತೆ" ಎಂದಳು.

ಆಗ ಚಂಚಲೆ "ಈ ದುಷ್ಟರನ್ನು ಅಡಗಿಸುವವರು ಯಾರೂ ಇಲ್ಲವೇ?" ಎಂದಳು.

"ದೇವರೇ ಅವರನ್ನು ಅಡಗಿಸಬೇಕು. ಸರ್ಕಾರದ ಕೈಯಲ್ಲಿ ಆಗೋದಿಲ್ಲ. ಇನ್ನಾರ ಕೈಯಲ್ಲೂ ಆಗೋದಿಲ್ಲಾ" ಎಂದು ಗೌರಿ ನುಡಿದಳು.

"ಕ್ರಾಂತಿಕೂಟದ ಶೂರರೇ ಏನೂ ಮಾಡೋಕೆ ಆಗ್ದೇ ಇದ್ದಾಗ, ಇನ್ಯಾರಿಂದ ಆಗ್ತದೆ?" ಎಂದು ನಗುತ್ತಾ ಚಂಚಲೆ ಚಂದ್ರಹಾಸನ ಕಡೆಗೆ ನೋಡಿದಳು.

"ಗಂಡಸರಿಂದ ಶಂಕರನನ್ನು ಸದೆ ಬಡಿಯೋಕೆ ಇದುವರೆಗೂ ಆಗಿಲ್ಲ. ಇನ್ನೇನಾದರೂ ಹೆಂಗಸರು ಮನಸ್ಸು ಮಾಡಬೇಕು" ಎಂದು ಚಂದ್ರಹಾಸ ಚಂಚಲೆಯತ್ತ ನೋಡಿ ನಕ್ಕನು.

"ಕ್ರಾಂತಿಕಾರರು ಶೂರರೆಂದು ಮೀಸೆ ಹೊತ್ತ ಗಂಡಸರು ಕೈಯಲ್ಲಾಗದವರು ಅಂತ ತೀರ್ಮಾನವಾದರೆ ಹೆಂಗಸರು ಶಂಕರನ ಮರ್ದನ ಮಾಡುತ್ತಾರೆ. ನಿಮ್ಮಿಂದ ಸಾಧ್ಯವಿಲ್ಲ ಅಂತ ಹೇಳಿ ಆಮೇಲೆ ನೋಡೋಣ."

"ನನಗೆ ಮೀಸೇನೇ ಇಲ್ಲವಲ್ಲಾ. ಆದ್ದರಿಂದ ನನ್ನಿಂದ ಸಾಧ್ಯವಿಲ್ಲಾ ಎಂದಾಯ್ತು."

"ಹಾಗಾದರೆ ಕ್ರಾಂತಿಕೂಟದ ಮುಖಂಡತ್ವವನ್ನು ಗೌರಿಗೆ ವಹಿಸಿಕೊಡಿ."

"ಎಲ್ಲಾ ಬಿಟ್ಟು ಗೌರಿಗೆ ವಹಿಸಿಕೊಡುವುದು! ಶಂಕರನ ಹೆಸರು ಕೇಳಿದರೆ ಅವಳಿಗೆ ಚಳಿ ಜ್ವರ ಎರಡೂ ಬರ್ತದೆ. ನಮ್ಮದಿರಲಿ, ನಿಮಗೆ ಅವನ ಭಯ ತಪ್ಪಿದ್ದಲ್ಲ. ನಿಮ್ಮೆಜಮಾನ್ರು ಇಂದಿರಾ ಕಾಂಗ್ರೆಸ್ಸಿನ ಡಿ.ಸಿ.ಸಿ. ಪ್ರೆಸಿಡೆಂಟ್. ತನ್ನ ಪ್ರಗತಿಗೆ ಅಡ್ಡಿ ಆದವರನ್ನೆಲ್ಲಾ ಶಂಕರ ತನ್ನ ಶತ್ರುಗಳು ಅಂತ ಭಾವಿಸ್ತಾನೆ. ಈಗ ನಮ್ಮ ಮ್ಯಾಲೆ ಕತ್ತಿ ಮಸೀತಾ ಇದ್ದಾನೆ; ನಾಳೆ ಕಾಂಗ್ರೆಸ್ಸಿನವರ ಮ್ಯಾಲೂ ಕತ್ತಿ ಮಸೀತಾನೆ."

"ನಮ್ಮ ಊರಾಗೆ ಶಂಕರನ ಆಟ ನಡೆಯೋದಿಲ್ಲ."

"ನೀವು ಹಾಗೆ ಹೇಳಬೇಡಿ. ಅವನ ಕಡೆಯವರು ಎಲ್ಲಿದ್ದಾರೆ, ಎಲ್ಲಿಲ್ಲ ಎಂದು ಹೇಳೋದು ಕಷ್ಟ. ಅವನು ಬಹಳ ಕೇಡಿ. ಇನ್ನೂ ಒಂದು ಸಮಾಚಾರ ಕೇಳಿದೆ. ನಿಮ್ಮ ಯಜಮಾನರು, ಆಡಳಿತ ಕ್ರಾಂಗ್ರೆಸ್ಸಿನ ಅಧ್ಯಕ್ಷರಾದ ಮೇಲೆ, ಶಂಕರ ಅವರಿಗೆ ಫೋನು ಮಾಡಿದ್ದನಂತೆ. ಕ್ರಾಂತಿಸೇನೆಯ ಜೊತೆ ಆಡಳಿತ ಕಾಂಗ್ರೆಸ್ಸು ಸಹಕರಿಸಿಕೊಂಡು ಹೋಗಬೇಕು ಅಂತ ಅವನು ಸೂಚಿಸಿದ್ದನಂತೆ. ನಿಮ್ಮ ಯಜಮಾನರು, 'ನಾನು ಗಾಂಧೀವಾದಿ. ನೀವು ಹಿಂಸಾವಾದಿ. ನಿಮ್ಮಂತಹವರ ಸಹವಾಸ ನನಗೆ ಬೇಡ' ಅಂದರಂತೆ. ಅದರಿಂದ ಶಂರಕನಿಗೆ ನಿಮ್ಮ ಯಜಮಾನರ ಮೇಲೆ ಸ್ವಲ್ಪ ಕೋಪವಂತೆ."

"ನನಗೆ ಈ ವಿಚಾರ ಗೊತ್ತೇ ಇರಲಿಲ್ಲ."

"ನಿಮ್ಮ ಹತ್ತಿರ ನಿಮ್ಮ ಯಜಮಾನ್ರು ಇಂತಹ ವಿಷಯ ಹೇಳೋದೇ ಇಲ್ಲವೇನು?"

ಚಂಚಲೆ ಈ ಪ್ರಶ್ನೆಯಿಂದ ಅಭಿಮಾನ ಕುಂಠಿತಳಾಗಿ, "ನನ್ನ ಹತ್ತಿರ ಅವರು ಪಾಲಿಟಿಕ್ಸ್ ಯಾವಾಗಲೂ ಮಾತಾಡೋದೇ ಇಲ್ಲ."

ಈ ರೀತಿ ಸಂವಾದ ನಡೆಯುತ್ತಿರುವಾಗ, ಕಿಶೋರ್ ಶ್ರೀಪುರದಿಂದ ಅಲ್ಲಿಗೆ ಬಂದನು. ಅವನು ಚಂಚಲೆಯನ್ನು ಗುರ್ತಿಸಲಾಗದೆ "ಇವರ್‍ಯಾರು?" ಎಂದು ಗೌರಿಯನ್ನು ಕೇಳಿದನು. ಆಗ ಚಂಚಲೆ, "ಇಷ್ಟು ಬೇಗ ನನ್ನ ಮರೆತು ಬಿಟ್ಟಿರಾ ಕಿಶೋರ್" ಎಂದು ಕೇಳಿದಳು. ಕಿಶೋರನು ಹಿಂದೆ ನೋಡಿದ್ದನ್ನು ಜ್ಞಾಪಿಸಿ ಕೊಂಡವನಂತೆ, "ಓ ಕ್ಷಮಿಸಿ, ಚಂಚಲಾ ಅವರು, ಇವ ನಿಮ್ಮ ಮಗನೇ?" ಎಂದು ಪ್ರಶ್ನಿಸಿದನು. ಆಗ ಚಂಚಲೆ "ಹೌದು. ಇವ ಅನಿಲಕುಮಾರ' ಎಂದಳು. ಆಗ ಕಿಶೋರನು "ನಾನು ಕಿಶೋರ; ನೀನು ಕುಮಾರ. ನನ್ನ ಹತ್ತಿರ ಬಾರಪ್ಪಾ ಕುಮಾರ" ಎಂದು ಅನಿಲಕುಮಾರನನ್ನು ಕರೆದನು. ಅನಿಲಕುಮಾರನು ತಾಯಿಯನ್ನು ತಬ್ಬಿಕೊಂಡು, ಹೊಸಮುಖವನ್ನು ನೋಡಿ ಅವನ ಹತ್ತಿರ ಹೋಗಲು ಇಷ್ಟವಿಲ್ಲದೆ ತನ್ನ ಮುಖವನ್ನು ತಿರುಗಿಸಿದನು.

ಚಂದ್ರಹಾಸನು ಚಂಚಲೆಯ ಕಡೆ ತಿರುಗಿ, "ನನ್ನ ಫ್ರೆಂಡ್ ಕಿಶೋರ್ ಬಹಳ ಕ್ರೂರಿ, ರಕ್ತಕೇಸರೀನ ನಮ್ಮಪ್ಪ ಪೊಲೀಸರಿಗೆ ಒಪ್ಪಿಸು ಅಂದರೆ, ಇವನು "ಆಗಲೀ" ಅಂತ ಹೇಳಿದವನು, ಪೊಲೀಸಿಗೆ ಅವನನ್ನು ಒಪ್ಪಿಸುವ ಬದಲು, ಯಮಧರ್ಮರಾಯನಿಗೆ ಒಪ್ಪಿಸಿದನಂತೆ. ಅಪ್ಪನಿಗೆ ಈ ವಿಚಾರ ಇನ್ನೂ ಗೊತ್ತಾಗಿಲ್ಲ. ಗೊತ್ತಾದರೆ ಬಹಳ ವ್ಯಥೆ ಪಡ್ತಾರೆ."

"ಕಿಶೋರ್ ಮಾಡಿದ್ದ ಸರಿ. ಅಂತಹ ದುಷ್ಟರನ್ನು ಯಮಸದನಕ್ಕೆ ಕಳುಹಿಸಬೇಕು" ಎಂದು ಚಂಚಲೆ ರಕ್ತಕೇಸರಿಯ ಕೊಲೆಯನ್ನು ಸಮರ್ಥಿಸಿದಳು.

ಗೌರಿಗೆ ಅ ದಿನವೆಲ್ಲಾ ಸಂಭ್ರಮ. ತನ್ನ ತಳಮಳ ಚಿಂತೆಗಳನ್ನು ದೂರವಿಟ್ಟು, ಚಂಚಲೆಯೊಡನೆ ಹರ್ಷದಿಂದ ಕಾಲಹರಣ ಮಾಡುತ್ತಿದ್ದಳು. ಅನಿಲಕುಮಾರನು ನಿರ್ಮಲಳ ಜೊತೆಯಲ್ಲಿ ಆಟವಾಡುತ್ತಿದ್ದನು. ನಿರ್ಮಲೆಗೆ ಅನಿಲಕುಮಾರ ಬಂದಿದ್ದು ಸಂತೋಷವಾಗಿತ್ತು. ನಿರ್ಮಲೆಯೂ ಅನಿಲಕುಮಾರನೂ ಆಗಾಗ ಬಾಬುರವರ ಕೊಠಡಿಗೆ ಹೋಗಿ ಅವರ ಬೇಜಾರನ್ನು ಕಳೆಯುತ್ತಿದ್ದರು. ಸಾಯಂಕಾಲದ ಹೊತ್ತು ಚಂಚಲೆ "ನಾಳೆ ಸೌಮ್ಯಾಶ್ರಮಕ್ಕೆ ಹೋಗೋಣ, ನೀನೂ ಬರುತ್ತೀಯಾ ತಾನೇ" ಎಂದು ಗೌರಿಯನ್ನು ಕೇಳಿದಳು.

"ನಿನ್ನ ಕಾಗದ ಬಂದ ಮೇಲೆ ಅವರೊಡನೆ ಹೇಳಿದ್ದೆ. ನೋಡೋಣ ಅಂತ ಹೇಳಿದ್ದರು, ಈಗ ಏನ್ ಹೇಳ್ತಾರೋ ಗೊತ್ತಿಲ್ಲ. ನಂಗೂ ಬಹಳ ದಿನಗಳಿಂದ ಹೋಗಬೇಕು ಅಂತ ಆಸೆ. ನೀನೇ ಅವರನ್ನು ಕೇಳು. ಅಲ್ಲಿಂದ ಪುನಃ ವಾಪ್ಸು ಇಲ್ಲೀಗೇ ಬರೋದು ತಾನೆ?"

"ಇಲ್ಲಮ್ಮಾ ನಾ ಹಾಗೇ ಮನೀಗೆ ಹೋಗಬೇಕು."

"ಅದು ಆಗೋದಿಲ್ಲಾ. ನೀನು ಎರಡು ದಿನ ಇಲ್ಲಿ ಇರಲೇಬೇಕು."

"ನೀ ಸಿರಗೂರಿಗೆ ಬರ್ತೀನಿ ಅಂತ ಹೇಳಿದ್ರೆ, ಎರಡು ದಿನ ಅಗೋದಿಲ್ಲ; ನಾಳೆ ಒಂದಿನ ಇರ್ತೀನಿ."

"ಚಂದ್ರಹಾಸ ಬಂದ್ರೆ ನಾ ಬರ್ತೀನಿ, ಅವರನ್ನು ಒಪ್ಪಿಸು" ಎಂದು ಹೇಳಿದಳು.

ಟೀ ಕುಡಿಯುತ್ತಿರುವಾಗ ಚಂಚಲೆ ಸೌಮ್ಯಾಶ್ರಮಕ್ಕೆ ಹೊಗುವ ವಿಚಾರವನ್ನೂ, ಅಲ್ಲಿಂದ ಸಿರಗೂರಿಗೆ ಹೋಗುವ ವಿಚಾರವನ್ನೂ, ಚಂದ್ರಹಾಸನೊಡನೆ ಪ್ರಸ್ತಾಪಿಸಿದಳು.

"ನನಗೆ ಆಶ್ರಮ, ಸ್ವಾಮಿಗಳು, ದೇವರು ಇವುಗಳಲ್ಲಿ ನಂಬಿಕೆಯೇ ಇಲ್ಲ. ನಾನು ನಾಸ್ತಿಕನೆಂಬುವುದು ನಿಮಗೆ ಗೊತ್ತೇ ಇದೆಯಲ್ಲ."

"ನೀವು ನಾಸ್ತಿಕರಾಗಿರಬಹುದು. ಆದರೆ ಗೌರಿ ಆಸ್ತಿಕಳು. ನಿಮ್ಮ ನಾಸ್ತಿಕ ವಾದವನ್ನು ಅವಳ ಮೇಲೇಕೆ ಹೊರಿಸುತ್ತೀರಿ?"

"ಅವಳು ನನ್ನ ಅರ್ಧಾಂಗಿಯಲ್ಲವೇ?"

"ಅವಳಿಗೂ, ನಿಮಗೂ ಮದುವೆಯ ಒಪ್ಪಂದವಾದಾಗ ಅವಳು ನಾಸ್ತಿಕಳಾಗಿರಲು ಒಪ್ಪಿದ್ದಳೇನು?"

"ಒಪ್ಪದಿದ್ದರೆ ಏನಾಯಿತು?"

"ಅವಳ ನಂಬಿಕೆಯಂತೆ ಅವಳು ವರ್ತಿಸಲು ಸ್ವತಂತ್ರಳು ; ನಿಮ್ಮ ನಂಬಿಕೆಯಂತೆ ನೀವು ವರ್ತಿಸಲು ಸ್ವತಂತ್ರರು. ನಿಮ್ಮ ಅಪ್ಪ, ಅಮ್ಮ ಇಬ್ಬರೂ ಆಸ್ತಿಕರಲ್ಲವೇನು? ಅದೆಲ್ಲಾ ಚರ್ಚೆ ಬೇಡ. ಸಿದ್ಧಿ ಮಹಾರಾಜರ ಆಶ್ರಮಕ್ಕೆ ನನ್ನೊಡನೆ ಅವಳು ಬರುತ್ತಾಳೆ. ನೀವೂ ಅವಳ ಜೊತೆ ಬರಬೇಕು. ಅಲ್ಲಿಂದ ನಮ್ಮೂರಿಗೆ ಬಂದು, ನಮ್ಮ ಮನೇಲಿ ಒಂದು ದಿನ ಇರಬೇಕು."

"ಏನೋ ನೀವಿಬ್ಬರೂ ಪ್ಲಾನು ಮಾಡಿದ ಹಾಗೆ ಕಾಣುತ್ತದೆ" ಎಂದು ಚಂದ್ರಹಾಸ ನಗುತ್ತಾ ಗೌರಿಯ ಕಡೆ ನೋಡಿದನು.

"ಪ್ಲಾನೂ ಇಲ್ಲ, ಗ್ಲೀನೂ ಇಲ್ಲ. ನಾ ಸಿದ್ಧಿಮಹಾರಾಜರ ಆಶ್ರಮಕ್ಕೆ ಹೋಗಬೇಕು ಅಂತ ಬಹಳ ದಿನಗಳಿಂದ ಯೊಚನೆ ಮಾಡ್ತಾ ಇದ್ದೆ. ಅವಳ ಜೊತೇಲಿ ಹೋಗೋಣ ಅಂತಾ ಮನಸ್ಸಾಗಿದೆ" ಎಂದು ಗೌರಿ ಗಂಡನಿಗೆ ಹೇಳಿದಳು.

"ಹೋಗು ಯಾರು ಬ್ಯಾಡ ಅಂತ ಹೇಳಿದವರು?"

"ನಾ ಒಬ್ಬಳೇ ಹೇಗೆ ಹೋಗಿ ಬರೋದು? ನೀವು ಬರಬೇಕು; ಕಿಶೋರ್ ಸಹ ಬರಬೇಕು."

"ನಮ್ಮಿಬ್ಬರಿಗೂ ನಿಮ್ಮ ಸ್ವಾಮಿಗಳಲ್ಲಿ ನಂಬಿಕೇನೂ ಇಲ್ಲ; ಭಕ್ತೀನೂ ಇಲ್ಲ" ಎಂದು ಕಿಶೋರ್ ನುಡಿದನು.

"ನಂಬಿಕೇನೂ ಬ್ಯಾಡ, ಭಕ್ತೀನೂ ಬ್ಯಾಡ ಸುಮ್ನೆ ನಮ್ಮ ಜೊತೆ ಬನ್ನಿ, ಅಲ್ಲಿಂದ ನಮ್ಮೂರಿಗೆ ಬನ್ನಿ" ಎಂದು ಚಂಚಲೆ ನುಡಿದಳು.

"ಚಂದ್ರಹಾಸ, ನೀ ಹೇಳಿದ್ದು ಸರಿ. ಇಬ್ಬರೂ ಮಸಲತ್ತು ಮಾಡಿಕೊಂಡಿದ್ದಾರೆ." ಸಾವಿರ ಕುದುರೆ ಸರದಾರನಾದ್ರೂ ಮನೆ ಹೆಂಡ್ತಿ ಕಾಸ್ತಾರ" ಅಂತ ಹೇಳೋ ಹಾಗೇ ನೀ ಹೆಂಡ್ತಿ ಹೇಳಿದ ಹಾಗೇ ಕೇಳಬೇಕು ಮತ್ತೇನ್ ಮಾಡ್ತೀಯ?" ಎಂದು ಕಿಶೋರ್ ವ್ಯಂಗ್ಯವಾಗಿ ನಗುತ್ತಾ ಹೇಳಿದನು.

"ಸಾಕ್ರೀ ಕಿಶೋರ್, ನಿಮ್ಮ ತಮಾಷೆ. ಯಾವಾಗಲೂ ಜೈಲಾಗೆ ಇದ್ದ ಹಾಗೆ ಇಲ್ಲೇ ಇದ್ದು, ಸಾಕಾಗಿ ಹೋಗ್ಯದೆ. ಒಂದೆರಡು ದಿವಸ ಹೊರಗಡೆ ಹೋಗೋಣ ಅಂತ ಮನಸ್ಸು" ಎಂದು ಗೌರಿ ಹೇಳಿದಳು.

"ನೀವು ಚಂದ್ರಹಾಸನ್ನ ಮದ್ವೆ ಆಗಬೇಕು ಅಂತ ಹೇಳಿ ಯಾರಾದ್ರೂ ಒತ್ತಾಯ ಮಾಡಿದ್ದರೇನು? ನೀವೇ ಬೇಕೂ ಬೇಕೂ ಅಂತ ಮದ್ವೆ ಆಗಿ, ಈಗ ಜೈಲುವಾಸ ಅಂತ ಹೇಳ್ತೀರಲ್ಲಾ" ಎಂದು ಕಿಶೋರ್ ಗೌರಿಗೆ ಪರಿಹಾಸ್ಯ ಮಾಡಿದನು.

"ಅದೆಲ್ಲಾ ವಿನೋದ ಬೇಡ. ಏನು ಹೇಳಿ ಈಗ? ನೀವು ನಮ್ಮೂರಿಗೆ ಬರ್ತೀರೋ ಇಲ್ಲವೋ ಹೇಳಿ" ಎಂದು ಚಂಚಲೆ ಒತ್ತಾಯಪೂರ್ವಕವಾಗಿ ಕೇಳಿದಳು.

"ನನ್ನೇನು ಕೇಳ್ತೀರಿ, ಚಂದ್ರಹಾಸನ್ನ ಕೇಳಿ. ಏನಪ್ಪಾ ಚಂದ್ರಹಾಸ ಏನು ಹೇಳ್ತೀಯಪ್ಪಾ?"

"ಏನು ಮಾಡೋದು ಹೇಳು? ಒಳ್ಳೆ ಪೀಕಲಾಟಕ್ಕೆ ಸಿಕ್ಕಿ ಹಾಕ್ಕೊಂಡಾಯ್ತಲ್ಲ."

"ಏನು ಮಾಡಕೆ ಆಗ್ತದೆ? ನೀ ಅಮ್ಮಾವ್ರ ಗಂಡ. ಅಮ್ಮಾವರು ಹೇಳಿದ ಹಾಗೆ ಕೇಳಬೇಕು. ನಾಡಿದ್ದು ತಾನೇ ಹೊರಡೋದು. ಯಾವ ಮಾರ್ಗವಾಗಿ ಹೋಗೋದು?"

"ಶ್ರೀದೇವಿಘಾಟಿಯ ರಸ್ತೆಯಲ್ಲಿ ಹೋದರೆ ಪ್ರಕೃತಿ ಸೌಂದರ್ಯ ನೋಡಬಹುದು ಅಂತ ಹೇಳ್ತಾರೆ. ಅಲ್ಲೇ ಹೋಗೋಣ" ಎಂದು ಚಂಚಲೆ ನುಡಿದಳು.

"ಇವರಿಬ್ಬರಿಗೂ ಗೊತ್ತಿಲ್ಲಾ ಅಂತ ಕಾಣ್ತದೆ, ಕ್ರಾಂತಿಸೇನೆಯವರ ಭದ್ರಕೋಟೆ ಶ್ರೀದೇವಿ ಘಾಟಿ ಹತ್ತಿರ ಇದೆ ಅಂತ. ರಸ್ತೆ ಬೇರೆ ಚೆನ್ನಾಗಿಲ್ಲ" ಎಂದು ಕಿಶೋರ್ ನುಡಿದನು.

ಸೌಮ್ಯಾಶ್ರಮಕ್ಕೆ ಬೇರೆ ರಸ್ತೆ ಇದೆಯೇನು" ಎಂದು ಚಂಚಲೆ ಕೇಳಿದಳು.

"ಇದೆ. ಇಲ್ಲಿಂದ ಶ್ರೀಪುರಕ್ಕೆ ಹೋಗಿ, ಅಲ್ಲಿಂದ ನಿಮ್ಮೂರಿಗೆ ಹೋಗಿ, ಅಲ್ಲಿಂದ ಮತ್ತೆ ನಲ್ವತ್ತು ಮೈಲಿ ಹೋಗಬೇಕು. ಬಹಳ ಸುತ್ತು. ಶ್ರೀದೇವಿ ಘಾಟಿ ರಸ್ತೆಯಾದರೆ ಕೇವಲ ಐವತ್ತು ಮೈಲಿ. ಏನಪ್ಪಾ ಮಾಡೋದು ಚಂದ್ರಹಾಸ?"

"ನೀನೆ ಒಪ್ಕೊಂಡು ನನ್ನ ಕೇಳ್ತೀಯಲ್ಲ. ಹೋಗಬೇಕು ಅಂದರೆ, ಶ್ರೀದೇವಿ ಘಾಟಿ ರಸ್ತೇಲೇ ಹೋಗಬೇಕು. ಆದರೆ ಜೊತೆಗೆ ನಮ್ಮ ಕಾರೂ ಬೇಕು; ರೈಫಲ್ ಬೇಕು. ನಮ್ಮಕಡೆ ಸಿಪಾಯಿಗಳೂ ಬೇಕು. ಚಂಚಲಾರವರು ಸೃಷ್ಟಿ ಸೌಂದರ್ಯ ನೋಡಬೇಕು ಅಂತ ಹೇಳ್ತಾರೆ. ಅಲ್ಲೇ ಹೋಗೋಣ. ಆದರೆ ಸೌಮ್ಯಾಶ್ರಮಕ್ಕೆ ಹೋಗ್ತೀವಿ ಅಂತ ಯಾರಿಗೂ ಗೊತ್ತಾಗಬಾರದು. ನಮ್ಮ ಕಡೇರಿಗೂ ಗೊತ್ತಾಗಬಾರದು. ಹುಷಾರ್, ಎಲ್ಲಾ ವ್ಯವಸ್ಥೆ ಮಾಡು. ಶ್ರೀಪುರಕ್ಕೆ ಹೋಗಿ, ಅಲ್ಲಿಂದ ಸಿರಗೂರಿಗೆ ಹೋಗುತ್ತೇವೆ ಅಂತ ನಮ್ಮ ಕಡೆಯವರಿಗೆ ಹೇಳಿರು."

"ರಾತ್ರಿ ಊಟವಾದ ಮೇಲೆ, ಗೌರಿಯೂ ಚಂಚಲೆಯೂ, ತಂತಮ್ಮ ಸುಖಕಷ್ಟಗಳನ್ನು ಒಬ್ಬರಿಗೊಬ್ಬರು ನಿವೇದಿಸಿಕೊಳ್ಳುತ್ತಿದ್ದರು. ಏನೇನೋ ವಿಷಯಗಳನ್ನು ಮಾತನಾಡಿದ ಮೇಲೆ, ತಮ್ಮ ತಮ್ಮ ದಾಂಪತ್ಯ ಜೀವನದ ಒಳ ವಿಚಾರಗಳನ್ನು ಹೇಳಿಕೊಳ್ಳುತ್ತಿದ್ದರು.

ಗೌರಿ ಮಾತನಾಡುತ್ತಾ, "ನನಗೆ ಕ್ರಾಂತಿಸೇನೆಯ ನೀಚರ ಭಯವೊಂದಿಲ್ಲದಿದ್ದರೆ ನಾನು ಬಹಳ ಸುಖವಾಗಿ ಇರುತ್ತಿದ್ದೆ. ನಂಗೆ ನಿನ್ನಷ್ಟು ಸಂಪತ್ತಿಲ್ಲ. ಆದರೆ ನನ್ನ ಮತ್ತು ಚಂದ್ರಹಾಸರ ದಾಂಪತ್ಯ ಜೀವನ ಆದರ್ಶವೆಂದೇ ಹೇಳಬಹುದು. ನಾನು ಚಂದ್ರಹಾಸರನ್ನು ಮೆಚ್ಚಿ ಮದುವೆಯಾದೆ. ಅವರನ್ನು ಮದುವೆಯಾಗಿ, ನನ್ನ ಜೀವನ ಸಾರ್ಥಕವಾಯಿತೆಂದು ನನ್ನ ಭಾವನೆ. ನನ್ನ ದೃಷ್ಟಿಯಲ್ಲಿ ಅವರು ಆದರ್ಶಪತಿ. ಅವರ ಕ್ರಾಂತಿಯ ಹುಚ್ಚೊಂದನ್ನು ಬಿಟ್ಟರೆ ಅವರಲ್ಲಿ ಯಾವ ದುರ್ಗುಣವನ್ನೂ ನಾ ನೋಡಿಲ್ಲ. ನಮ್ಮ ಮಾವನವರು ದೇವರಂತಹ ಮನುಷ್ಯರು" ಎಂದು ಹೇಳಿದಳು.

ಚಂಚಲೆ ತನ್ನ ವಿಚಾರವನ್ನು ಹೇಳುವಾಗ, "ಗೌರೀ, ನನಗೆ ಸಂಪತ್ತಿದೆ; ಸಕಲ ಸೌಕರ್ಯಗಳೂ ಇವೆ. ನನ್ನ ಯಜಮಾನರು ಸದ್ಗೃಹಸ್ಥರು ಮತ್ತು ಜನಾನುರಾಗಿ, ನಮ್ಮತ್ತೆ ತಾಯಿಯಂತೆ ನನ್ನನ್ನು ನೋಡಿಕೊಳ್ತಾರೆ. ಆದರೆ ನನ್ನ ಜೀವನದಲ್ಲಿ ಸುಖವಿಲ್ಲ. ಈ ವಿಚಾರ ನಿನ್ನಲ್ಲಿ ಹೇಳಬಾರದಾಗಿತ್ತು. ಏನೋ ಬಾಯಿ ತಪ್ಪಿ ಹೇಳಿಬಿಟ್ಟೆ ನಿನ್ನಲ್ಲೇ ಇರಲಿ."

"ನನ್ನ ನಿನ್ನ ಸಂಸಾರದ ಗುಟ್ಟನ್ನ ಬೇರೆಯವರಿಗೆ ಹೇಳುವಷ್ಟು ಮೂರ್ಖಳಲ್ಲ ನಾನು. ನಿನಗೆ ಸಂಪತ್ತಿದೆ. ನಿನ್ನ ಅತ್ತೆ ಒಳ್ಳೆಯವರು ಅಂತ ನೀನೆ ಅನೇಕ ಸಾರಿ ಕಾಗದ ಬರೆದಿದ್ದೆ. ನಿನ್ನ ಗಂಡನೂ ಒಳ್ಳೆಯವರೇ. ಆದ್ದರಿಂದ ನೀನು ಸುಖವಾಗಿದ್ದೀಯಾ ಅಂತ ಇದುವರೆಗೆ ನನ್ನ ಕಲ್ಪನೆಯಾಗಿತ್ತು."

"ನಿಜ ಗೌರಿ. ಬಾಕಿ ಎಲ್ಲಾ ಸುಖವಿದೆ, ಆದರೆ ದಾಂಪತ್ಯ ಜೀವನ ಸುಖವಿಲ್ಲ."

"ಅದೇಕೆ ಹೀಗೆ ಹೇಳುತ್ತೀಯಾ? ನಿನ್ನ ಗಂಡ ಕುರೂಪಿಯಲ್ಲ; ಮುದುಕನೂ ಅಲ್ಲ. ಅವಿದ್ಯಾವಂತನೂ ಅಲ್ಲ."

"ಅದು ಸರಿ, ಆದರೆ......."

"ಆದರೆ ನಂಪುಂಸಕರೇನೆ?"

"ಥೂ ನಿನ್ನ, ಹಾಗೇನೂ ಇಲ್ಲ. ನಿನಗೆ ವಿವರಿಸುವುದೇ ಕಷ್ಟ. ಗಂಡನ ಸಂಪತ್ತು ಸದ್ಗುಣಗಳಿಂದಲೇ ದಾಂಪತ್ಯ ಸುಖ ಲಭಿಸುವುದೆಂದು ನೀನು ಭಾವಿಸಿದ್ದರೆ ಅದು ತಪ್ಪು."

"ಹಾಗಾದರೆ ನಿನಗೆ ಬಂದ ಬೇನೆಯೇನು?"

"ನೋಡು ಗೌರಿ, ನಾನು ರಸಿಕಳು; ಸೌಂದರ್ಯೋಪಾಸಕಳು; ಮತ್ತು ವಿಲಾಸ ಪ್ರಿಯಳು. ನೀನು ಅನಾಸಕ್ತಳು ಮತ್ತು ವೈರಾಗ್ಯ ಪ್ರವೃತ್ತಿಯವಳು, ಜೊತೆಗೆ ಸಂಯಮಿ ಎಂದು ತೋರುತ್ತದೆ. ನನಗೆ ವಿಲಾಸಪ್ರಿಯ ನಲ್ಲನ ಜೊತೆಯಲ್ಲಿ ನಲಿಯಬೇಕೆಂಬ ಹಂಬಲ. ಅದ್ಯಾಕೋ ನಮ್ಮವರಿಗೆ ನನ್ನಲ್ಲಿ ಅನುರಾಗ ಕಡಿಮೆ. ಬೇಕೋ ಬೇಡವೋ ಎನ್ನುವ ರೀತಿಯಲ್ಲಿ ನನ್ನೊಡನೆ ಅವರ ವ್ಯವಹಾರ. ಒಂದೇ ಮಾತಿನಲ್ಲಿ ಹೇಳುವುದಾದರೆ ಏನೋ ಮದುವೆಯಾದ ತಪ್ಪಿಗೆ ನಿರ್ವಾಹವಿಲ್ಲದೆ ನನ್ನೊಡನೆ ದಾಂಪತ್ಯ ಜೀವನ ನಡೆಸುವಂತಿದೆ."

"ನಿನ್ನ ಜೊತೆಯಲ್ಲಿ ಮಾತಾಡುವುದಿಲ್ಲವೇನು?"

"ವಿರಸವೂ ಇಲ್ಲ; ಸರಸವೂ ಇಲ್ಲ."

"ಏನಾದರೂ ಮನಸ್ಸಿಗೆ ನೋವಾಗುವಂತೆ ಮಾತಾಡುತ್ತಾರೇನು?"

"ಎಂದೂ ಅವರು ನನ್ನ ಮನಸ್ಸಿಗೆ ನೋವಾಗುವಂತೆ ಮಾತನಾಡಿಲ್ಲ. ನನ್ನೊಡನೆ ಮಾತನಾಡುವಾಗ ಬಹಳ ಸೌಜನ್ಯದಿಂದ ಮಾತನಾಡುತ್ತಾರೆ."

"ಅನಿಲಕುಮಾರನ ವಿಚಾರದಲ್ಲಿ ಅವರ ವರ್ತನೆ ಹೇಗೆ?"

"ಅನಿಲಕುಮಾರ ಎಂದರೆ ಅವರಿಗೆ ಪಂಚಪ್ರಾಣ. ಅದೊಂದು ನನಗೆ ಸಮಾಧಾನ. ಅವನು ಹುಟ್ಟುವ ಮೊದಲು ನನಗೆ ಹುಚ್ಚು ಹಿಡಿದಂತಾಗಿರುತ್ತಿತ್ತು. ಈಗಿರುವುದಕ್ಕಿಂತಲೂ ಹೆಚ್ಚು ಸೊರಗಿ ಹೋಗಿದ್ದೆ. ಅವನು ಹುಟ್ಟಿದ ಮೇಲೆ ನನಗೆ ಒಂದು ವಿಧವಾದ ತೃಪ್ತಿ ದೊರೆತಿದೆ.

"ಚಂಚಲಾ, ಒಂದು ವಿಚಾರ ಹೇಳಿದರೆ ಬೇಜಾರಾಗಬೇಡ."

"ಅದೇನು? ಹೇಳು."

"ನೋಡು ಚಂಚಲಾ, ಒಂದು ವೇಳೆ ನಿನ್ನ ಗಂಡ ವಿಲಾಸಪ್ರಿಯನೂ, ರಸಿಕನೂ, ನಿನ್ನಲ್ಲಿ ವಿಪರೀತ ಅನುರಕ್ತನೂ ಆಗಿದ್ದು, ಅದರ ಜೊತೆಗೆ ಕುಡುಕನೂ, ಜೂಜುಗಾರನೂ, ವಿಷಯಲಂಪಟನೂ ಆಗಿದ್ದಿದ್ದರೆ ಆಗ ನೀನೇನು ಮಾಡುತ್ತಿದ್ದೆ? ಆಗ ನಿನ್ನ ಜೀವನ ನರಕಮಯವಾಗುತ್ತಿತ್ತು. ಇದ್ದುದರಲ್ಲೇ ತೃಪ್ತಿ ಹೊಂದಬೇಕು."

"ಅದೂ ನಿಜ ಅನ್ನು. ನಿನ್ನಂತಹ ಮತ್ತು ಚಂದ್ರಹಾಸರಂತಹ ಆದರ್ಶ ದಂಪತಿಗಳು ಎಷ್ಟು ಜನ ಸಿಗ್ತಾರೆ?"

"ನನ್ನ ದಾಂಪತ್ಯ ಜೀವನ ಸುಖಮಯ. ಆದರೆ ನನಗೂ ಚಂದ್ರಹಾಸರಿಗೂ ಒಂದೇ ವ್ಯತ್ಯಾಸ. ಅವರಿಗೆ ಬೇಕಾಗಿದ್ದು ಕ್ರಾಂತಿ; ನನಗೆ ಬೇಕಾಗಿದ್ದು ಶಾಂತಿ. ಈ ದೇಶದಲ್ಲಿ ಕ್ರಾಂತಿಯಾಗುವುದು ಸುಲಭವಲ್ಲ. ಗೆದ್ದೆತ್ತಿನ ಬಾಲ ಹಿಡಿಯುವ ಜನರೇ ಹೆಚ್ಚು. ಒಂದು ವೇಳೆ ಕ್ರಾಂತಿಯಾದರೂ ಶಂಕರನಂತಹ ಧೂರ್ತರು ಅಧಿಕಾರಕ್ಕೆ ಬರುತ್ತಾರೆ."

"ಅದೂ ನಿಜ ಅನ್ನು. ತ್ಯಾಗಿಗಳು ಸ್ವರಾಜ್ಯ ತಂದರು; ಸ್ವಾರ್ಥಿಗಳು ಅಧಿಕಾರಕ್ಕೆ ಬಂದರು. ಕ್ರಾಂತಿಯಾದರೂ ಹೇಗೆ ಆಗುವುದು. ಚಂದ್ರಹಾಸರಂಥವರು ಮೂಲೆಗೆ ಸೇರುತ್ತಾರೆ, ಶಂಕರನಂಥವರು ಅಧಿಕಾರಕ್ಕೆ ಬರುತ್ತಾರೆ. ಈಗ ಬೇರೆ ಬೇರೆ ಪಾರ್ಟಿಯಲ್ಲಿರುವ ಲಂಚಕೋರರೆಲ್ಲಾ ಕಮ್ಯೂನಿಸ್ಟ್‌ರಾಗುತ್ತಾರೆ. ಅಬ್ಬಾ, ರಾಜಕಾರಣದಲ್ಲಿ ಏನು ಮೋಸ! ಲಂಚಕೋರರೆಲ್ಲಾ, ಮೋಸಗಾರರೆಲ್ಲಾ ಸೋಷಿಯಲಿಸ್ಟರೂ, ಕಮ್ಯೂನಿಸ್ಟರೂ ಆಗಿದ್ದಾರೆ! ನಮ್ಮ ಯಜಮಾನರು ರಾಜಕಾರಣದಿಂದ ದೂರವಿದ್ದಿದ್ದರೆ ವಾಸಿ ಇತ್ತು. ಆದರೆ ನಾನು ಅವರ ಜೊತೆ ಆ ವಿಚಾರ ಮಾತನಾಡುವಂತೆಯೇ ಇಲ್ಲ. ನಮ್ಮ ಅತ್ತೆಯವರು ಆಗಾಗ ಏನಾರೂ ಹೇಳ್ತಾರೆ. ಆದರೆ ಅವರ ಮಾತನ್ನು ನಮ್ಮವರು ಕೇಳುವುದಿಲ್ಲ."

"ನಮ್ಮವರೂ ನಾನು ಹೇಳಿದರೆ ಕೇಳುವುದಿಲ್ಲ. ಬಹಳ ಹೊತ್ತಾಯಿತು, ಮಲಗಿಕೋ' ಎಂದು ಗೌರಿ ನುಡಿದಳು.

ಎರಡು ದಿನಗಳ ನಂತರ ಚಂದ್ರಹಾಸನೂ, ಕಿಶೋರನೂ, ಚಂಚಲೆ, ಗೌರಿಯರೊಡನೆ ಸೌಮ್ಯಾಶ್ರಮಕ್ಕೆ ಪ್ರಯಾಣ ಹೊರಟರು. ಚಂಚಲೆಯ ಕಾರಿನಲ್ಲಿ ಚಂದ್ರಹಾಸ, ಕಿಶೋರ್, ಗೌರಿ, ಚಂಚಲೆ, ನಿರ್ಮಲ ಮತ್ತು ಅನಿಲಕುಮಾರ ಕುಳಿತಿದ್ದರು. ಚಂಚಲೆಯ ಕಾರಿನ ಹಿಂದೆ ಚಂದ್ರಹಾಸನ ಕಾರಿನಲ್ಲಿ ಕ್ರಾಂತಿಕೂಟದ ಸಂರಕ್ಷಕದಳದವರು ಬೆಂಗಾವಲಿಗಾಗಿ ಹೊರಟಿದ್ದರು. ಬೆಳಗಿನ ತಂಗಾಳಿ ಪ್ರಯಾಣಕ್ಕೆ ತುಂಬಾ ಹಿತಕರವಾಗಿತ್ತು. ಬೆಳಿಗ್ಗೆ ಏಳು ಗಂಟೆಗೆ ಸರಿಯಾಗಿ ಅನಿಲಪುರವನ್ನು ಬಿಟ್ಟಿದ್ದರು. ಸೌಮ್ಯಾಶ್ರಮಕ್ಕೆ ಹೋಗುವ ರಸ್ತೆ ಶ್ರೀದೇವಿ ಕಾಡಿನ ಅಂಚಿನಲ್ಲಿ, ಸಿರಿಮಾವತಿ ನದಿಯ ಪಕ್ಕದಲ್ಲಿ ಹಾಯ್ದು ಹೋಗಿತ್ತು. ಕೆಲವು ಕಡೆ ರಸ್ತೆ, ಕಾಡಿನ ಮಧ್ಯದಲ್ಲಿಯೇ ಹೋಗಿತ್ತು. ಕಾಡನ್ನು ದಾಟಿದ ಮೇಲೆ ಸುಮಾರು ಹದಿನೈದು ಮೈಲಿಗಳ ದೂರ ಘಾಟಿಯ ರಸ್ತೆಯಲ್ಲಿ ಹೊಗಬೇಕಾಗಿತ್ತು. ಘಾಟಿಯ ಕೊನೆಯ ಸುತ್ತಿನ ಸಮೀಪ ಸೌಮ್ಯಾಶ್ರಮವಿತ್ತು.

ಪ್ರಾತಃಕಾಲ ಆಹ್ಲಾದಕರವಾಗಿತ್ತು. ತಂಗಾಳಿ ಶೀತಳವಾಗಿದ್ದರೂ ಮೈಕೊರೆಯುವಂತೆ ಇರಲಿಲ್ಲ. ಅನಿಲಕುಮಾರನು ತನ್ನ ಮನೆಗೆ ಹೋಗುತ್ತೇನೆಂದು ತಿಳಿದು "ಅಪ್ಪಾ" "ಅಜ್ಜೀ" ಎಂದು ತೊದಲು ನುಡಿಗಳಲ್ಲಿ ಹೇಳುತ್ತಿದ್ದನು. ಅನಿಲಪುರದಿಂದ ಎಂಟು ಹತ್ತು ಮೈಲಿಗಳ ದೂರದವರೆಗೆ ರಸ್ತೆ ಬಯಲು ಪ್ರದೇಶದಲ್ಲಿ ಸಾಗಿತ್ತು. ಬಯಲು ಪ್ರದೇಶವನ್ನು ದಾಟಿದ ನಂತರ ಕಾಡಿನ ಹಾದಿ ಪ್ರಾರಂಭವಾಯಿತು. ರಸ್ತೆಯ ಇಕ್ಕೆಲದಲ್ಲೂ ಕಾಡು ಕವಿದಿತ್ತು. ಕೆಲವು ಕಡೆ ಗಗನ ಚುಂಬಿತ ವೃಕ್ಷಗಳ ಮಧ್ಯೆ ಹಾದಿ ಹಾಯ್ದು ಹೋಗಿತ್ತು.

ಕೆಲವು ಕಡೆ ರಸ್ತೆ ಸೌಂದರ್ಯ ರಾಶಿಯಲ್ಲಿ ನುಸುಳಿ ಹೋಗುತ್ತಿದ್ದ ಸುರಂಗ ಮಾರ್ಗದಂತಿತ್ತು. ಆ ರಸ್ತೆಯಲ್ಲಿ ಪ್ರಯಾಣ ಮಾಡುವುದು ಕಣ್ಮನಗಳಿಗೆ ಹಬ್ಬವನ್ನುಂಟು ಮಾಡುತ್ತಿತ್ತು. ವಿವಿಧ ಜಾತಿಯ ಕಾಡು ಹೂಗಳು ತಮ್ಮ ಸೌರಭವನ್ನು ತಂಗಾಳಿಯಲ್ಲಿ ತೇಲಿ ಬಿಡುತ್ತಿದ್ದವು. ಹೂಗಳ ಸುಗಂಧವನ್ನು ಹೊತ್ತು ತಂದ ಶೀತಲ ಗಾಳಿ ಚೈತನ್ಯ ಕಾರಿಯಾಗಿತ್ತು. ಮುಂದೆ ಮುಂದೆ ಹೋದಂತೆಲ್ಲಾ ದೃಶ್ಯ ಮನಮೋಹಕವಾಗಿತ್ತು.

ಒಂದು ಕಡೆ ರಸ್ತೆಯು ಕಣಿವೆಯಲ್ಲಿ ಕುಸಿದು ಬಿದ್ದು ಮುಂದೆ ಗುಡ್ಡವನ್ನು ಹತ್ತಿ ಹೋದಂತೆ ಕಾಣುತ್ತಿತ್ತು. ಆ ಕಣಿವೆಯ ಮಧ್ಯೆ, ಸಿರಿಮಾವತಿ ನದಿಯು ಮಂದಗಾಮಿನಿಯಂತೆ ಮೆಲುನಡೆಯಲ್ಲಿ ಹರಿಯುತ್ತಿತ್ತು. ದೂರದಲ್ಲಿ ಕಾಡಿನಾಚೆಗೆ ಕಾಣಿಸುತ್ತಿದೆ ಗುಡ್ಡಗಳ ಶ್ರೇಣಿಗೆ ಹಸಿರು ಹಚ್ಚಡವನ್ನು ಹೊದಿಸಿದಂತಿತ್ತು. ಆ ಗುಡ್ಡದ ಮೇಲೆ ಜಿಂಕೆಗಳ ಹಿಂಡು ನಿರಾತಂಕವಾಗಿ ಮೇಯುತ್ತಿದ್ದುದು ಕಾಣಿಸುತ್ತಿತ್ತು. ಆ ದೃಶ್ಯವನ್ನು ನೋಡಿ, ಚಂಚಲೆ "ಕಾರನ್ನು ಸ್ವಲ್ಪ ನಿಲ್ಲಿಸು ಡ್ರೈವರ್, ಕೆಳಗಿಳಿದು ಆ ದೃಶ್ಯವನ್ನು ಕಣ್ತುಂಬ ನೋಡೋಣ" ಎಂದಳು. ಆಗ ಕಿಶೋರನು "ನಿಲ್ಲಿಸಬೇಡ ಡ್ರೈವರ್ ನಿಧಾನವಾಗಿ ಹೋಗು. ಅಮ್ಮಣ್ಣಿಯವರೇ, ನೀವೆಲ್ಲಿದ್ದೀರೆಂದು ಗೊತ್ತಿದೆಯೇನು?

ಈ ಪ್ರದೇಶ ಕ್ರಾಂತಿಸೇನೆಯ ಹಕ್ಕೆ. ಶಂಕರನ ಸವಾರಿ ಈ ಕಡೆ ಚಿತ್ತೈಸಿದ್ದರೂ ಇರಬಹುದು. ಈ ಕಾಡಿನಲ್ಲಿ ಕ್ರಾಂತಿಸೇನೆಯವರು ಗೆರಿಲ್ಲಾ ಯುದ್ಧಕ್ಕೆ ತರಬೇತಿ ಶಿಬಿರವನ್ನು ಸ್ಥಾಪಿಸಿದ್ದಾರಂತೆ.

"ಸರ್ಕಾರದವರು ಏನೂ ಮಾಡಿಲ್ಲವೇನು" ಎಂದು ಚಂಚಲೆ ಪ್ರಶ್ನಿಸಿದಳು.

"ಪೊಲೀಸಿನವರಿಗೆ ಅಲ್ಲಿ ಹೋಗಲು ಭಯ. ಸೂಪರಿಂಡೆಂಟ್ ಸುಧೀರನ ಕಾಲದಲ್ಲಿ ಆ ಶಿಬಿರವನ್ನು ಪತ್ತೆಹಚ್ಚಲು ಒಂದು ಫೌಜನ್ನು ಕಳಿಸಿದ್ದ. ಆ ಫೌಜು ಕ್ರಾಂತಿಸೇನೆಯವರ ಕೈಗೆ ಸಿಕ್ಕು, ಫೌಜಿನಲ್ಲಿದ್ದ ಎಲ್ಲರೂ ಹತರಾದರು. ಅಲ್ಲಿಂದೀಚೆಗೆ ಆ ಶಿಬಿರವನ್ನು ಪತ್ತೆಹಚ್ಚಲು ಯಾವ ಕಾರ್ಯವೂ ನಡೆದಿಲ್ಲ" ಎಂದು ಕಿಶೋರ್ ನುಡಿದನು.

"ಮಿಲಿಟರಿಯವರನ್ನು ಕಳಿಸಬಹುದಿತ್ತಲ್ಲ?"

"ಈ ರಾಜ್ಯದಲ್ಲಿ ಆರು ತಿಂಗಳಿಗೊಮ್ಮೆ ಮೂರು ತಿಂಗಳಿಗೊಮ್ಮೆ ಮಂತ್ರಿಮಂಡಲಗಳು ಕುಸಿದು ಬೀಳುತ್ತಾ ಇವೆ. ಮಂತ್ರಿಗಳೂ, ಶಾಸಕರೂ ಲಂಚಕೋರರಾಗಿ ಅಧಿಕಾರಕ್ಕಾಗಿ ಬಡಿದಾಡುತ್ತಿರುವುದರಿಂದ ಈ ರೀತಿ ಅರಾಜಕತೆ ಪ್ರಾರಂಭವಾಗಿದೆ. ಹಿಂದಿನ ಗೃಹಮಂತ್ರಿ ಶಂಕರನ ಸ್ನೇಹಿತನಂತೆ. ಆದ್ದರಿಂದ ಕೆಲಕಾಲ ಶಂಕರನು ಮಾಡಿದ್ದೇ ಮಾಟವಾಗಿತ್ತು."

"ಈ ಕಾಡಿನಲ್ಲಿ ಕಾಡುಮೃಗಗಳಿಲ್ಲವೇ?"

"ಕೇವಲ ಇಪ್ಪತ್ತು ವರ್ಷಗಳ ಹಿಂದೆ ಈ ಕಾಡು ವನಸಿರಿಗೆ, ವನ್ಯಜೀವಿಗಳಿಗೆ ಹೆಸರುವಾಸಿಯಾಗಿತ್ತು. ವನದೇವತೆ ವಿವಿಧ ವೇಷಭೂಷಣಗಳಿಂದ ನಲಿಯುತ್ತಿರುವಂತಿತ್ತು. ನಾನು ಚಿಕ್ಕ ಹುಡುಗನಾಗಿದ್ದಾಗ, ಈ ರಸ್ತೆಯಲ್ಲಿ ಬಸ್ಸಿನಲ್ಲಿ ಅನೇಕ ಬಾರಿ ಶ್ರೀದೇವಿ ಘಾಟಿಯ ಸಮೀಪ ಇರುವ ನಮ್ಮ ಚಿಕ್ಕಮ್ಮನ ಊರಿಗೆ ಹೋಗಿಬರುತ್ತಿದ್ದೆ. ಹಿಂಡು ಹಿಂಡಾಗಿ ಕಾಡಾನೆಗಳೂ, ಕಾಡೆಮ್ಮೆಗಳೂ, ಕಾಡುಹಂದಿಗಳೂ, ಜಿಂಕೆಗಳೂ ಅಂದು ಈ ಕಾಡಿನಲ್ಲಿ ಓಡಾಡುತ್ತಿದ್ದವು. ಹಲವು ಬಾರಿ ರಸ್ತೆಗೆ ಅಡ್ಡಲಾಗಿ ಅವು ನಿಂತಿದ್ದ ಪ್ರಸಂಗಗಳೂ ಇದ್ದವು."

"ಈಗ ಆನೆಗಳು ಇಲ್ಲವೇನು?" ಎಂದು ಗೌರಿ ಪ್ರಶ್ನಿಸಿದಳು.

"ಇಲ್ಲದೆ ಏನು? ಆದರೆ ಮೊದಲಿನಷ್ಟು ಇಲ್ಲ. ಒಮ್ಮೊಮ್ಮೆ ನೀರು ಕುಡಿಯಲು ಅವು ನದಿಗೆ ಬರುವುದುಂಟು. ಮುಂದೆ ಸ್ವಲ್ಪದೂರ ಹೋದರೆ ಸಿರಿಮಾವತಿ ನದಿಯಲ್ಲಿ 'ಆನೆಗುಂಡಿ' ಎಂಬ ಮಡುವಿದೆ. ಆ ಮಡುವಿಗೆ ಒಂದೊಂದು ಸಾರಿ ಆನೆಗಳು ಈಗಲೂ ಸಹ ಹೋಗುತ್ತವೆ ಎಂದು ನೋಡಿದವರು ಹೇಳುತ್ತಾರೆ."

"ಹುಲಿಗಳು ಇಲ್ಲವೇನು?" ಎಂದು ಚಂಚಲೆ ಕಿಶೋರನನ್ನು ಪ್ರಶ್ನಿಸಿದಳು.

"ಹಿಂದೆ ಈ ಕಾಡು, ಹುಲಿಗಳಿಗೆ ತೌರು ಮನೆಯಾಗಿತ್ತು. ಕೇವಲ ಹದಿನೈದು ವರ್ಷಗಳ ಹಿಂದೆ ಒಂದು ನರಭಕ್ಷಕ ಹುಲಿ ಈ ಕಾಡಿನಲ್ಲಿ ಸೇರಿಕೊಂಡು ಸುಮಾರು ಇಪ್ಪತ್ತು ಚದರ ಮೈಲಿ ಪ್ರದೇಶದಲ್ಲಿ ಜನರು ಹೆದರಿ ತತ್ತರಿಸುವಂತೆ ಮಾಡಿತ್ತು. ಸುಮಾರು

ಐವತ್ತು ಜನರನ್ನು ತಿಂದುಹಾಕಿತ್ತು. ಕೊನೆಗೊಬ್ಬ ಆಂಗ್ಲೋ-ಇಂಡಿಯನ್ ಬೇಟೆಗಾರ ಅದನ್ನು ಕೊಂದುಹಾಕಿದನು."

"ಈಗ ನರಭಕ್ಷಕ ಹುಲಿಗಳಿಲ್ಲವೇನು?" ಎಂದು ಚಂಚಲೆ ಪ್ರಶ್ನಿಸಿದಳು.

"ಈಗ ಹುಲಿಗಳೂ ಇಲ್ಲ; ನರಭಕ್ಷಕ ಹುಲಿಗಳೂ ಇಲ್ಲ. ಅವುಗಳ ಬದಲು ಶಂಕರನಂತಹ ನರಧ್ವಂಸಕ ನರರಾಕ್ಷಸರು ಈ ಪ್ರದೇಶದಲ್ಲಿ ಹುಟ್ಟಿಕೊಂಡಿದ್ದಾರೆ" ಎಂದು ಚಂದ್ರಹಾಸ ನಗುತ್ತಾ ಹೇಳಿದನು.

"ಏನು ಮನಮೋಹಕ ದೃಶ್ಯವಪ್ಪ! ಎಷ್ಟು ಆನಂದವಾಗುತ್ತದೆ? ಇಲ್ಲೇ ಇರೋಣವೆನಿಸುತ್ತದೆ" ಎಂದು ಚಂಚಲೆ ಹೇಳಿದಳು.

"ಶಂಕರನ ಕ್ರಾಂತಿಸೇನೆಯನ್ನು ಸೇರಿದರೆ ನೀವು ಇಲ್ಲೇ ಶಾಶ್ವತವಾಗಿ ಇರಬಹುದು" ಎಂದು ಚಂದ್ರಹಾಸನು ವಿನೋದವಾಗಿ ನುಡಿದು ನಕ್ಕನು.

"ನಾನು ಅವನ ಕ್ರಾಂತಿಸೇನೆಯನ್ನು ಸೇರಿದರೆ ಅವನನ್ನು ಹೇಗಾದರೂ ಮಾಡಿ ಕೊಂದು ಹಾಕುತ್ತಿದ್ದೆ" ಎಂದು ಚಂಚಲೆ ನಗುತ್ತಾ ನುಡಿದಳು.

"ಅಮ್ಮಣ್ಣಿಯವರೇ, ಶಂಕರನನ್ನು ಕೊಲ್ಲುವುದಷ್ಟು ಸುಲಭವಲ್ಲ. ಬಾಳೆಹಣ್ಣನ್ನು ಮುರಿದು ನುಂಗಿದಂತಲ್ಲಾ. ಅಷ್ಟು ಸರಾಗವಾಗಿದ್ದಿದ್ದರೆ ನಾವು ಕ್ರಾಂತಿಕೂಟದವರು ಈಗಾಗಲೇ ಅವನನ್ನು ಮುಗಿಸುತ್ತಿದ್ದೆವು."

"ಈಗಲೇ ಹೀಗಿದ್ದ ದೃಶ್ಯ ಹತ್ತು ಹದಿನೈದು ವರ್ಷಗಳ ಹಿಂದೆ ಇನ್ನೂ ಮನಮೋಹಕವಾಗಿದ್ದಿರಬೇಕು" ಎಂದು ಗೌರಿ ನುಡಿದಳು.

"ಅಂದಿದ್ದ ಪ್ರಕೃತಿ ಸೌಂದರ್ಯವನ್ನು ಸ್ಮರಿಸಿಕೊಂಡರೆ, ನಾನು ಒಮ್ಮೊಮ್ಮೆ ಪುಳಕಿತನಾಗುತ್ತೇನೆ. ಮುಂಗಾರು ಮಳೆ ಆರಂಭವಾದಾಗ ನಾನು ನೋಡುತ್ತಿದ್ದ ದೃಶ್ಯ ಎಲ್ಲಿಯೋ ಕನಸಿನಲ್ಲಿ ನೋಡಿದಂತೆ ನನಗೆ ಇಂದು ಭಾಸವಾಗುತ್ತದೆ. ಕಾರ್ಮೋಡ ಕವಿದು, ಕೋಲ್ಮಿಂಚು ಸುಳಿದು, ಬರಸಿಡಿಲು ಗುಡುಗಿ, ಜಡಿಮಳೆಯು ಸುರಿದು, ಹಳ್ಳ ಕೊಳ್ಳಗಳು ತುಂಬಿ ತುಳುಕುತ್ತಿದ್ದ ಆ ದೃಶ್ಯವನ್ನು ವರ್ಣಿಸುವುದು ಸಹ ನನ್ನಿಂದ ಸಾಧ್ಯವಿಲ್ಲ" ಎಂದು ಕಿಶೋರ್ ಭಾವುಕನಂತೆ ಬಣ್ಣಿಸಿದನು.

"ಏನಯ್ಯಾ ಕಿಶೋರ್, ಯಾವಾಗ ಕವಿಯಾದೆ? ನನ್ನ ಭಾಷಣಗಳನ್ನು ಇನ್ನು ಮೇಲೆ ನಿನ್ನಿಂದಲೇ ಬರೆಸಬೇಕು" ಎಂದು ಚಂದ್ರಹಾಸ ನಗುತ್ತಾ ತನ್ನ ಸ್ನೇಹಿತನನ್ನು ಪರಿಹಾಸ್ಯ ಮಾಡಿದನು.

ಕಾರು ಸ್ವಲ್ಪದೂರ ಹೋದನಂತರ ಕಿಶೋರನು ರಸ್ತೆಯಕಡೆಗೆ ಕೈ ತೋರಿಸಿ, "ನೋಡಿ ನೋಡಿ, ಆನೆ ಲದ್ದಿ. ಬಹುಶಃ ರಾತ್ರಿ ಹಾಕಿರಬೇಕೆಂದು ತೋರುತ್ತದೆ, ಇನ್ನೂ ಹಸಿಯಾಗಿದೆ" ಎಂದನು. ಗೌರಿ ಮತ್ತು ಚಂಚಲೆಯರು ರಸ್ತೆಯಕಡೆ ನೋಡುತ್ತಿರುವಾಗ, ಚಂದ್ರಹಾಸನು ನಗುತ್ತಾ, "ನೋಡಿ ನೋಡಿ, ಆನೆ ನೋಡೋಕೆ ಅದೃಷ್ಟ ಇಲ್ದೆ ಇದ್ರೂ ಲದ್ದಿನಾದ್ರೂ ನೋಡಿ ತೃಪ್ತಿ ಪಡಿ" ಎಂದು ಅವರಿಬ್ಬರನ್ನು ಲೇವಡಿ ಮಾಡಿದನು.

"ಚಂದ್ರಹಾಸ, ನೀನು ಲೇವಡಿ ಮಾಡ್ತಾ ಇದ್ದೀಯಾ, ಅಲ್ವೇ? ಅವರ ಅದೃಷ್ಟಕ್ಕೆ ಆನೆ ಸಿಕ್ರೂ ಸಿಗಬಹುದು, ಯಾರಿಗೆ ಗೊತ್ತು? ಡ್ರೈವರ್ ಸ್ವಲ್ಪ ನಿಧಾನವಾಗಿ ಹೋಗು. ಇಲ್ಲೇ ಹತ್ರ ಆನೆ ಹಿಂಡು ಇದ್ರೂ ಇರಬಹುದು" ಎಂದು ಕಿಶೋರ್ ಹೇಳಿದನು.

ಕಾರು ಎರಡು ಫರ್ಲಾಂಗ್ ದೂರ ಹೋಗಿರಬಹುದು, ಅಷ್ಟರಲ್ಲಿ ಕಿಶೋರ್, "ಅಲ್ನೋಡಿ ಆನೆ ಹಿಂಡು" ಎಂದು ರಸ್ತೆಯ ಎಡಭಾಗದಲ್ಲಿ ಸುಮಾರು ಅರ್ಧ ಫರ್ಲಾಂಗ್ ದೂರದಲ್ಲಿ ನದಿಯ ಪಕ್ಕದಲ್ಲಿ ಒಂದು ಕಮರಿಯಲ್ಲಿ ಮೇಯುತ್ತಿದ್ದ ಒಂದು ಆನೆಯ ಹಿಂಡನ್ನು ತೋರಿಸಿದನು. ಆನೆಗಳಿದ್ದ ಪ್ರದೇಶ ರಸ್ತೆಗಿಂತ ತಗ್ಗಾಗಿದ್ದುದರಿಂದ, ಅವುಗಳನ್ನು ಸಲೀಸಾಗಿ ನೋಡಬಹುದಾಗಿತ್ತು. ಕಾರಿನ ಶಬ್ದವನ್ನು ಕೇಳಿದ ಸಲಗ ಕಾರಿನ ಕಡೆಗೆ ತನ್ನ ದೃಷ್ಟಿಯನ್ನು ಹರಿಸಿತ್ತು. ಕಾರನ್ನು ನೋಡಿ, ಏನೋ ಅಪಾಯವಿದೆಯೆಂದು ಶಂಕಿಸಿ, ಕಿವಿಗಳನ್ನು ನೆಟ್ಟಗೆ ಮಾಡಿಕೊಂಡು, ತನ್ನ ಬಳಗಕ್ಕೆ ಏನೋ ಸೂಚನೆಯಿತ್ತು, ಕಾರಿನ ಕಡೆಗೆ ನೋಡುತ್ತ, ಹಿಂದುಗಡೆ ದಟ್ಟವಾದ ಕಾಡಿನಕಡೆಗೆ ಹೋಗುತ್ತಿತ್ತು. ಹಿಂಡು ಅದನ್ನು ಹಿಂಬಾಲಿಸುತ್ತಿತ್ತು.

ಹಿಂಡಿನಲ್ಲಿ ಮೂರುನಾಲ್ಕು ಮರಿಗಳೂ ಸೇರಿ ಸುಮಾರು ಇಪ್ಪತ್ತು ಆನೆಗಳಿದ್ದವು. ಚಂಚಲೆ ಅನಿಲಕುಮಾರನನ್ನು ಕುರಿತು, "ಅನಿಲ್ ನೋಡು, ನೋಡು ಆನೆ" ಎಂದು ಆನೆಗಳನ್ನು ಅನಿಲಕುಮಾರನಗೆ ತೋರಿಸುತ್ತಿದ್ದಳು. ಅನಿಲಕುಮಾರನು ಆನಂದಭರಿತನಾಗಿ ಆನೆಗಳ ಕಡೆಗೆ ತನ್ನ ಪುಟ್ಟ ಕೈ ತೋರಿಸುತ್ತಾ "ಆನಾ, ಆನಾ" ಎಂದು ತೊದಲು ಮಾತಿನಲ್ಲಿ ಹೇಳುತ್ತಿದ್ದನು. ನಿರ್ಮಲ ಗೌರಿಯ ಕಡೆಗೆ ತಿರುಗಿ, "ಆಂಟಿ, ಆ ಪುಟ್ಟ ಮರಿಗಳು ನೋಡಿ ಹ್ಯಾಗಿವೆ?" ಎಂದು ಹೇಳುತ್ತಿದ್ದಳು. ಸ್ವಲ್ಪ ಹೊತ್ತಿನಲ್ಲೇ ಆನೆಗಳು ಕಾಡಿನಲ್ಲಿ ಕಣ್ಮರೆಯಾದವು.

ಕಾರು ಮುಂದೆ ಸಾಗುತ್ತಿರುವಾಗ, ಅನಿಲಕುಮಾರನು ಪುನಃ ಆನೆಯನ್ನು ತೋರಿಸಬೇಕೆಂದು ಹಟ ಮಾಡುತ್ತಿದ್ದನು. ಚಂದ್ರಹಾಸನು "ಅನಿಲ್, ನಿನಗೆ ದೊಡ್ಡ ಆನೆ ಬೇಕೋ ಸಣ್ಣ ಆನೆ ಬೇಕೋ?" ಎಂದು ಕೇಳಿದನು. ಅನಿಲಕುಮಾರನು "ನಂಗೆ ಮೂಡು ಬೇಕು" ಎನ್ನುತ್ತಿರುವಾಗ, ಎದುರುಗಡೆಯಿಂದ ಕೆಂಪು ಬಾವುಟವನ್ನು ಹೊತ್ತು ದೊಡ್ಡ ಕಾರೊಂದು ಬಹಳ ವೇಗವಾಗಿ ಚಂಚಲೆಯ ಕಾರಿನ ಪಕ್ಕದಲ್ಲೇ ಹೊರಟುಹೋಯಿತು. ಅದು ಶಂಕರನ ಕಾರೆಂಬುದು ಮುಂದೆ ಕುಳಿತ್ತಿದ್ದ ಕಿಶೋರನಿಗೆ ತಕ್ಷಣ ಗೊತ್ತಾಯಿತು. ಕಾರನ್ನು ಶಂಕರನೇ ಬಿಡುತ್ತಿದ್ದನು. ಅವನ ಪಕ್ಕದಲ್ಲಿ ಇಸ್ಮೇಯಿಲ್ ಕುಳಿತ್ತಿದ್ದನು. ಕಿಶೋರನು ಚಂದ್ರಹಾಸನನ್ನು ಕುರಿತು "ಚಂದ್ರಹಾಸ, ನೋಡಿದೆಯೇನು? ಥಿಂಕ್ ಆಫ್ ದಿ ಡೆವಿಲ್, ದೇರ್ ಹಿ ಈಸ್" ಎಂದನು. ಚಂದ್ರಹಾಸನೂ ಸಹ ಕಾರಿನ ಮೇಲಿದ್ದ ಬಾವುಟವನ್ನು ನೋಡಿ, ಅದು ಶಂಕರನ ಕಾರೆಂಬುದನ್ನು ಗುರುತಿಸಿದ್ದನು. ಆದರೆ ಅದರಲ್ಲಿ ಯಾರಿದ್ದರೆಂಬುದನ್ನು ನೋಡಿರಲಿಲ್ಲ. "ಶಂಕರ ಇದ್ನೇನಯ್ಯ" ಎಂದು ಕಿಶೋರನನ್ನು ಕೇಳಿದನು.

"ಹೌದು ಅವನೇ ಡ್ರೈವ್ ಮಾಡ್ತಾ ಇದ್ದ. ಅವನ ಪಕ್ಕದಲ್ಲಿ ಇಸ್ಮೇಯಿಲ್ ಇದ್ದ."

"ನಾ ನೋಡ್ಲಿಲ್ಲಾ; ನಾ ಅನಿಲ್ ಹತ್ರ ಮಾತಾಡ್ತಾ ಇದ್ದೆ. ನಮ್ಮನ್ನು ನೋಡಿದನೇನಯ್ಯಾ ಕಿಶೋರ್?"

"ಹ್ಯಾಗಪ್ಪಾ ಹೇಳೋದು?"

"ನೋಡಿದ್ದರೆ ಗತಿಯೇನಪ್ಪಾ? ಹೆಂಗಸರು ಬೇರೆ ಜೊತೆಯಲ್ಲಿದ್ದಾರೆ ರೈಫಲ್ ಎಲ್ಲಿದೆ?"

"ರೈಫಲ್ ಹಿಂದೆ ನಮ್ಮ ಕಾರಿನಲ್ಲಿ ಉಳೀತು. ನನ್ನಹತ್ರ ರಿವಾಲ್ವರ್ ಇದೆ."

ಕಿಶೋರ್ ನೀ ಇಂತಹ ಮುಟ್ಠಾಳ ಅಂತ ತಿಳಿದಿರಲಿಲ್ಲಾ. ನಮ್ಮನ್ನ ಅವನೆಲ್ಲಾದ್ರೂ ನೋಡಿ, ಅವನ ಕಾರನ್ನ ವಾಪಾಸು ತಿರುಗಿಸಿಬಿಟ್ರೇನು ಮಾಡ್ತೀಯಾ?"

"ಅವನ ಕಾರು ಹಿಂದೆ ತಿರುಗಿಸುವುದ್ರೊಳಗೆ ಹಿಂದಿನಿಂದ ನಮ್ಮ ಕಾರು ಬರ್ತದೆ."

"ನಮ್ಮ ಕಾರು ಎಲ್ಲಿ ಪತ್ತೇನೆ ಇಲ್ವಲ್ಲಾ?" ಎಲ್ಲಾದ್ರೂ ಬ್ರೇಕ್ ಡೌನ್ ಆಗಿದ್ರೆ? ಯೋಚನೆ ಮಾಡೋ ಅಷ್ಟು ಕಾಲವಿಲ್ಲ. ಜಾಗ್ರತೆ ಹೋಗ್ಬೇಕು. ಚಂಚಲಾ ಅವರ ಡ್ರೈವರಿಗೆ ಈ ರಸ್ತೆ ಅನುಭವವಿಲ್ಲ. ನೀನೇ ಸ್ಟೇರಿಂಗ್ ಹಿಡಿ."

ಕಿಶೋರನು, ಕಾರಿನ ಡ್ರೈವರನ್ನು ಪಕ್ಕಕ್ಕೆ ಕೂರಿಸಿ, ತಾನೇ ಕಾರನ್ನು ಬಿಡಲಾರಂಭಿಸಿದನು. ಎಲ್ಲರೂ ಮೌನವಾಗಿದ್ದರು. ಗೌರಿಗೆ ಹೆದರಿಕೆಯಿಂದ ಮುಖ ಬಿಳುಚಿಕೊಂಡಂತಾಗಿತ್ತು. ಚಂಚಲೆ ಚಿಂತಾಕ್ರಾಂತಳಾಗಿದ್ದಳು. ಶಂಕರನು ತಮ್ಮನ್ನು ಹಿಂಬಾಲಿಸಿಕೊಂಡು ಬಂದರೆ ಏನು ಮಾಡಬೇಕೆಂದು ಎಲ್ಲರೂ ಯೋಚಿಸುತ್ತಿದ್ದರು. ಎಲ್ಲರ ದೃಷ್ಟಿಯೂ ಕಾರಿನ ಹಿಂದುಗಡೆ ಹರಿದಿತ್ತು. ಕಿಶೋರನು ತ್ವರಿತಗತಿಯಲ್ಲಿ ಕಾರನ್ನು ಬಿಡುತ್ತಿದ್ದನು. ಆದರೆ ಘಾಟಿಯ ರಸ್ತೆ ತಿರುವು ಮುರುವುಗಳಿಂದ ಕೂಡಿದ್ದರಿಂದ ಎಷ್ಟು ಪ್ರಯತ್ನ ಮಾಡಿದರೂ ಇಪ್ಪತ್ತು ಅಥವಾ ಮೂವತ್ತು ಮೈಲಿಗಳಿಗಿಂತ ಹೆಚ್ಚು ವೇಗವಾಗಿ ಹೋಗಲು ಸಾಧ್ಯವಾಗಿರಲಿಲ್ಲ. ಹಿಂದೆ ಬರುತ್ತಿದ್ದ ಚಂದ್ರಹಾಸನ ಕಾರಿನ ಸುಳಿವೇ ಇರಲಿಲ್ಲ.

ಈ ಮಧ್ಯೆ, ಘಾಟಿಯ ರಸ್ತೆಯಲ್ಲಿ ಪ್ರಯಾಣ ಮಾಡಿದ ಕಾರಣದಿಂದ, ಅನಿಲಕುಮಾರನು "ಗೊಳ್" ಎಂದು ಒಂದು ರಾಶಿ ವಾಂತಿ ಮಾಡಿದನು. ಗೌರಿ ಮತ್ತು ಚಂಚಲೆಯರು ಉಟ್ಟಿದ್ದ ಸೀರೆಗಳು ವಾಂತಿಮಯವಾದವು. ಅನಿಲಕುಮಾರನ ಅಂಗಿಪೂರ್ತಿ ವಾಂತಿಯಿಂದ ಒದ್ದೆಯಾಗಿ ಹೋಗಿತ್ತು. ನೀರಿನ ಡಬ್ಬ ಕಾರಿನ ಹಿಂದುಗಡೆ ಡಿಕ್ಕಿಯಲ್ಲಿತ್ತು. ಆದರೆ ಕಾರನ್ನು ನಿಲ್ಲಿಸಲು ಸಾಧ್ಯವಿರಲಿಲ್ಲ. ಕರವಸ್ತ್ರದಿಂದ ಅನಿಲಕುಮಾರನ ಬಾಯನ್ನು ಒರೆಸಿದರು. ಕಾರಿನಲ್ಲಿದ್ದ ವೃತ್ತಪತ್ರಿಕೆಗಳಿಂದ ಸೀರೆಗಳಿಗೆ ಹಿಡಿದ ವಾಂತಿಯನ್ನು ಒರೆಸಿಕೊಂಡರು. ಅನಿಲಕುಮಾರನ ಅಂಗಿಗೆ ಹಿಡಿದಿದ್ದ ವಾಂತಿಯನ್ನೂ ಒರೆಸಿದರು. ಅನಿಲಕುಮಾರನು ಅಳಲಾರಂಭಿಸಿದನು. ಅವನನ್ನು ಸುಧಾರಿಸುವುದು ಒಂದು ದೊಡ್ಡ ಸಮಸ್ಯೆಯಾಗಿತ್ತು.

ಈ ಮಧ್ಯೆ ಕಾರು ಒಂದು ತಿರುವನ್ನು ದಾಟುತ್ತಿರುವಾಗ, ಸುಮಾರು ಒಂದು ಮೈಲಿಯ ಹಿಂದೆ, ಇನ್ನೊಂದು ಕಾರು ಒಂದು ತಿರುವಿನಲ್ಲಿ ಬರುತ್ತಿರುವುದು ಕಾಣಿಸಿತು.

ಸ್ವಲ್ಪ ಹೊತ್ತಿನಲ್ಲೇ ಅದು ಇನ್ನೊಂದು ತಿರುವಿನಲ್ಲಿ ಅದೃಶ್ಯವಾಯಿತು. ಹಿಂದೆ ಬರುತ್ತಿದ್ದ ಕಾರು ಶಂಕರನದಾಗಿದ್ದರೆ ಗತಿಯೇನೆಂದು ಎಲ್ಲರೂ ಚಿಂತಿಸುತ್ತಿದ್ದರು. ಗೌರಿಯಂತೂ ಬೆವತುಹೋಗಿದ್ದಳು. ಎಲ್ಲರೆದೆಗಳೂ ಡವಡವ ಎಂದು ಹೊಡೆದುಕೊಳ್ಳುತ್ತಿದ್ದವು. ಹೆಂಗಸರ ಮಾತನ್ನು ಕೇಳಿ, ಆ ಮಾರ್ಗದಲ್ಲಿ ಬಂದದ್ದು ತಪ್ಪಾಯಿತೆಂದು ಚಂದ್ರಹಾಸನೂ, ಕಿಶೋರನೂ ಮನಸ್ಸಿನಲ್ಲೇ ಪಶ್ಚಾತ್ತಾಪಪಡುತ್ತಿದ್ದರು. ಆದರೆ ಹೆಂಗಸರು ಧೈರ್ಯ ಗೆಡಬಾರದೆಂಬ ದೃಷ್ಟಿಯಿಂದ ಅವರಿಬ್ಬರೂ ತಮ್ಮ ಕಳವಳವನ್ನು ಹೊರಗೆ ತೋರ್ಪಡಿಸದೆ ಮೌನವಾಗಿದ್ದರು.

ಒಂದೊಂದು ನಿಮಿಷವೂ ಒಂದೊಂದು ಗಂಟೆಯಂತೆ ಪರಿಣಮಿಸಿತ್ತು. ಎಲ್ಲರೂ ಕಾರಿನ ಹಿಂದುಗಡೆ ತಿರುಗಿತಿರುಗಿ ನೋಡುತ್ತಿದ್ದರು. ಅಕ್ಕಪಕ್ಕದ ದೃಶ್ಯ ಮನೋಹರವಾಗಿತ್ತು. ಆದರೆ ಆ ದೃಶ್ಯವನ್ನು ನೋಡುವ ತಾಳ್ಮೆ ಯಾರಿಗೂ ಇರಲಿಲ್ಲ. ಹೇಗಾದರೂ ವಿಪತ್ತಿನಿಂದ ಪಾರಾದರೆ ಸಾಕೆಂದು ಮುಂದೆ ಸಾಗುತ್ತಿದ್ದರು. ಕಾರು ಮತ್ತೊಂದು ತಿರುವನ್ನು ದಾಟುತ್ತಿರುವಾಗ ಹಿಂದಿನ ತಿರುವಿನಲ್ಲಿ ಚಂದ್ರಹಾಸನ ಕಾರು ಓಡುತ್ತಿರುವುದನ್ನು ನೋಡಿ ಎಲ್ಲರಿಗೂ ಜೀವ ಬಂದಂತಾಗಿತ್ತು. ಆದರೂ ಕಾರನ್ನು ನಿಲ್ಲಿಸುವ ಧೈರ್ಯ ಬರಲಿಲ್ಲ.

ಸ್ವಲ್ಪ ದೂರ ಹೋದ ಬಳಿಕ, ಹಿಂದೆ ಬರುತ್ತಿದ್ದ ಕಾರು ತಮ್ಮದೇ ಎಂದು ದೃಢವಾದ ನಂತರ, ಕಾರಿನ ವೇಗವನ್ನು ಕಡಿಮೆ ಮಾಡಿದರು. ಅಷ್ಟರಲ್ಲಿ ಹಿಂದೆ ಬರುತ್ತಿದ್ದ ಕಾರು ಸಮೀಪಿಸಿತು. ಕಾರನ್ನು ನಿಲ್ಲಿಸಿ, ಚಂದ್ರಹಾಸನೂ, ಕಿಶೋರನೂ ಕೆಳಗಿಳಿದರು. ಹಿಂದಿನ ಕಾರಿನಲ್ಲಿದ್ದವರೂ ಕೆಳಗಿಳಿದರು. ಶಂಕರನು ಚಂದ್ರಹಾಸನ ಕಾರನ್ನು ದಾರಿಯಲ್ಲಿ ಅಡ್ಡ ತಡೆದು ನಿಲ್ಲಿಸಿದ್ದನೆಂದೂ, ಆದರೆ ಕಾರಿನಲ್ಲಿ ನಾಲ್ವರಿದ್ದುದರಿಂದ ಅವನು ಏನನ್ನೂ ಹೇಳದೆ ತೆಪ್ಪಗೆ ಹೊರಟುಹೋದನೆಂದೂ, ಚಂದ್ರಹಾಸನ ಕಾರಿನಲ್ಲಿದ್ದವರು ಹೇಳಿದರು. ಅಂತೂ ಇಂತೂ ಗಂಡಾಂತರದಿಂದ ಪಾರಾದೆವೆಂದು ಗೌರಿಯೂ, ಚಂಚಲೆಯೂ ಸಮಾಧಾನದ ಉಸಿರನ್ನು ಬಿಟ್ಟರು.

ಸ್ವಲ್ಪ ದೂರ ಹೋದ ನಂತರ ಒಂದು ಝರಿಯ ಹತ್ತಿರ ಕಾರುಗಳನ್ನು ನಿಲ್ಲಿಸಿದರು. ಗೌರಿ ಚಂಚಲೆಯರು ವಾಂತಿ ಹಿಡಿದಿದ್ದ ಸೀರೆಗಳನ್ನು ಝರಿಯ ನೀರಿನಲ್ಲಿ ತೊಳೆದುಕೊಂಡರು. ಅನಿಲಕುಮಾರನ ಅಂಗಿಯನ್ನು ತೆಗೆದು ಬೇರೆ ಅಂಗಿಯನ್ನು ತೊಡಿಸಿದರು. ರಸ್ತೆಯ ಬಲಗಡೆಯ ಗುಡ್ಡದಿಂದ ಜಿನುಗಿ ಬರುತ್ತಿದ್ದ ನೀರು ಎತ್ತರದಿಂದ ಒಂದು ಬಂಡೆಯ ಮೇಲೆ ಜಲಪಾತದೋಪಾದಿಯಲ್ಲಿ ಧುಮುಕಿ, ಝರಿಯನ್ನು ನಿರ್ಮಾಣ ಮಾಡಿತ್ತು. ರಸ್ತೆಯ ಎರಡು ಕಡೆಗಳಲ್ಲೂ ಹೆಮ್ಮರಗಳು ಬೆಳೆದು ಹಗಲು ಹೊತ್ತಿನಲ್ಲೇ ಕತ್ತಲು ಕವಿದಂತಾಗಿತ್ತು. ಝರಿಯ ಪಕ್ಕದಲ್ಲಿದ್ದ ಒಂದು ಬಂಡೆಯ ಮೇಲೆ ಎಲ್ಲರೂ ಕುಳಿತು, ಕಾರಿನಲ್ಲಿ ತಂದಿದ್ದ ತಿಂಡಿತಿನಿಸುಗಳನ್ನು ತಿಂದರು. ತಿನಿಸು ತಿಂದು ತೃಪ್ತನಾದ ಅನಿಲಕುಮಾರನಿಗೆ ಆನೆಗಳ ಜ್ಞಾಪಕವಾಗಿ "ಅಮ್ಮಾ ಆನ" ಎಂದು ಆನೆಯನ್ನು ತೋರಿಸಬೇಕೆಂದು ಕೇಳಿದನು. ಆಗ ಚಂದ್ರಹಾಸನು "ನಿಂಗೆ ಎಷ್ಟು ಆನೆ

ಬೇಕು?" ಎಂದು ಕೇಳಿದನು. ಆಗ ಅನಿಲಕುಮಾರನು "ನಂಗೆ ಮೂಡು ಆನ ಬೇಕು" ಎಂದು ಮುದ್ದಾಗಿ ಹೇಳಿದನು. ಎಲ್ಲರೂ ಅವನ ಮುದ್ದು ಮಾತುಗಳಿಂದ ಮುಗ್ಧರಾಗಿ ಅವನನ್ನು ಮಾತನಾಡಿಸುತ್ತಿದ್ದರು. ಗೌರಿ, ಚಂಚಲೆಯರು ಸುತ್ತಮುತ್ತಲ ರಮ್ಯ ದೃಶ್ಯವನ್ನು ನೋಡಿ ತಲ್ಲೀನರಾಗಿ ಕುಳಿತಿದ್ದರು. ಚಂದ್ರಹಾಸನು ಅವರನ್ನು ಕುರಿತು, "ನಿಮಗಿಬ್ಬರಿಗೂ ಈ ಸ್ಥಳವನ್ನು ಬಿಡಲು ಮನಸ್ಸಿಲ್ಲವೆಂದು ತೋರುತ್ತದೆ. ಇಲ್ಲೇ ಇರಿ, ಮೇಲ್ಗಡೆ ಕಾಡಿನಲ್ಲಿ ಕ್ರಾಂತಿಸೇನೆಯ ಶಿಬಿರ ಇದೆ. ಪುನಃ ಶಂಕರ ಬಂದ್ರೂ ಬರಬಹುದು" ಎಂದು ಹೇಳಿದನು. ಶಂಕರನ ಹೆಸರನ್ನು ಕೇಳಿದೊಡನೆ ಬೆಚ್ಚಿ ಬಿದ್ದವರಂತೆ ಗೌರಿ, ಚಂಚಲೆಯರು ಮೇಲಕ್ಕೆದ್ದರು. ಗೌರಿ, ಗಂಡನನ್ನು ಕುರಿತು "ಇಂತಹ ಸ್ಥಳದಲ್ಲಿ ಕಾರನ್ನು ನಿಲ್ಲಿಸಲು ನಿಮಗೆ ಯಾರು ಹೇಳಿದರು? ಏಳೀ, ಹೋಗೋಣ" ಎಂದಳು.

ಅಲ್ಲಿಂದ ಸೌಮ್ಯಾಶ್ರಮ ಹದಿನೈದು ಮೈಲಿಗಳ ದೂರವಿತ್ತು. ದಾರಿಯುದ್ದಕ್ಕೂ ಕ್ರಾಂತಿಸೇನೆಯ ವಿಚಾರದಲ್ಲೇ ಮಾತುಕತೆ ನಡೆದಿತ್ತು. ಚಂದ್ರಹಾಸನು, ಚಂಚಲೆಯ ಕೋರಿಕೆಯ ಮೇರೆಗೆ, ಅದುವರೆಗೆ ಕ್ರಾಂತಿಸೇನೆಯವರು ಕ್ರಾಂತಿಯ ಹೆಸರಿನಲ್ಲಿ, ರಾಜ್ಯದಲ್ಲಿ ನಡೆಸಿದ್ದ ಹಲವು ರಾಕ್ಷಸೀ ಕೃತ್ಯಗಳನ್ನು ಒಂದೊಂದಾಗಿ ವಿವರಿಸುತ್ತಿದ್ದನು. ಅವನು ಹೇಳುತ್ತಿದ್ದಾಗ, ಗೌರಿಯೂ, ಚಂಚಲೆಯೂ ತದೇಕ ಚಿತ್ತರಾಗಿ ಕೇಳುತ್ತಿದ್ದರು. ಕೆಲವನ್ನು ಅವರು ಪತ್ರಿಕೆಗಳ ಮೂಲಕ ಮೊದಲೇ ತಿಳಿದುಕೊಂಡಿದ್ದರು. ಕೆಲವು ಹೊಸ ದುಷ್ಕೃತ್ಯಗಳಾಗಿದ್ದವು. ಕೋಮಲ ಹೃದಯದ ಗೌರಿಗೆ ಚಂದ್ರಹಾಸನು ವಿವರಿಸುತ್ತಿದ್ದ ಭಯಾನಕ ಘಟನೆಗಳನ್ನು ಕೇಳಿ ತಡೆಯಲಾರದಷ್ಟು ಮಾನಸಿಕ ಯಾತನೆಯಾಗಿತ್ತು. ಕ್ಷಾತ್ರಗುಣದ ಚಂಚಲೆ ಕೋಪದಿಂದ ಕಿಡಿಕಿಡಿಯಾಗಿದ್ದಳು.

"ಆ ದುಷ್ಟನ ಹಾವಳಿಯನ್ನು ತಡೆಗಟ್ಟಲು ಯಾವ ಮಾರ್ಗವೂ ಇಲ್ಲವೇ?" ಎಂದು ಚಂಚಲೆ ಚಂದ್ರಹಾಸನನ್ನು ಕೇಳಿದಳು.

"ಅವನನ್ನು ಕೊಲ್ಲುವುದೊಂದೇ ಮಾರ್ಗ, ಇನ್ಯಾವ ಮಾರ್ಗವೂ ಇಲ್ಲ" ಎಂದು ಚಂದ್ರಹಾಸ ಹೇಳಿದನು.

"ಇಂತಹ ಧೂರ್ತರನ್ನು ನಮ್ಮ ದೇಶದ ಜನಗಳು ಹೇಗೆ ಹಿಂಬಾಲಿಸುತ್ತಾರೆ?"

"ಪಾಪ! ಆ ಧೂರ್ತರ ಇತಿಹಾಸ ಜನಗಳಿಗೆ ಹೇಗೆ ಗೊತ್ತಾಗುತ್ತದೆ? ಭ್ರಷ್ಟ ಕಾಂಗ್ರೆಸ್ ರಾಜಕಾರಣಿಗಳನ್ನು ಹಿಂಬಾಲಿಸಿದಂತೆ, ಈ ದುಷ್ಟರನ್ನೂ ಅವರು ಹಿಂಬಾಲಿಸುತ್ತಿದ್ದಾರೆ. ನಮ್ಮ ದೇಶದಲ್ಲಿ ಅಕ್ಷರಸ್ಥರ ಸಂಖ್ಯೆ ನೂರಕ್ಕೆ ಮೂವತ್ತರಷ್ಟು. ಅದರಲ್ಲಿ ವಿದ್ಯಾವಂತರೆಂದು ಹೇಳಬಹುದಾದವರ ಸಂಖ್ಯೆ ನೂರಕ್ಕೆ ಹತ್ತರಷ್ಟು. ಸ್ವತಂತ್ರವಾಗಿ ವಿಚಾರ ಮಾಡತಕ್ಕವರು ನೂರಕ್ಕೆ ಒಬ್ಬರು ಸಿಕ್ಕುವುದೂ ಅಪರೂಪ. ಈ ದೇಶದ ಅಸಂಖ್ಯಾತ ಅವಿದ್ಯಾವಂತರಾದ ಅಜ್ಞಾನಿಗಳಿಗೆ ವಿವಿಧ ರಾಜಕೀಯ ಪಂಥಗಳ ಮುಖಂಡರು ಹೇಳುತ್ತಿರುವುದೇ ವೇದವಾಕ್ಯ. ಅವರಿಗೆ ರಾಜಕೀಯ ಪ್ರಜ್ಞೆ ಬರಬೇಕಾದರೆ ಇನ್ನೂ ಬಹಳ ಕಾಲ ಹಿಡಿಯುತ್ತದೆ.

"ಅವರಿಗೆ ರಾಜಕೀಯ ಪ್ರಜ್ಞೆ ಬರುವುದರೊಳಗೆ, ಈ ದೇಶದಲ್ಲಿ ಏನೇನು ಅನಾಹುತಗಳಾಗುತ್ತವೆಯೋ ದೇವರಿಗೇ ಗೊತ್ತು. ಈ ದೇಶದಲ್ಲಿ ಕ್ರಾಂತಿಕಾರರೆನಿಸಿ ಕೊಂಡವರು ವೈಯಕ್ತಿಕ ವೈಷಮ್ಯದಿಂದ ಅಥವಾ ಹಣಕ್ಕಾಗಿ ನಿರಪರಾಧಿಗಳನ್ನು ಕೊಲ್ಲುವ ಬದಲು, ಜನರನ್ನು ಸುಲಿಗೆ ಮಾಡುತ್ತಿರುವ ಲಂಚಕೋರ ರಾಜಕಾರಣಿಗಳನ್ನೂ, ಲಂಚಕೋರ ಅಧಿಕಾರಿಗಳನ್ನೂ, ಅಕ್ರಮ ಸಂಪಾದನೆಯ ಲಾಭಕೋರರನ್ನೂ ಕೊಂದು ಹಾಕಿದ್ದರೆ ಜನರಿಗೆ ಎಷ್ಟೋ ಉಪಕಾರವಾಗುತ್ತಿತ್ತು" ಎಂದು ಚಂಚಲೆ ನುಡಿದಳು.

ಹೀಗೆ ಮಾತುಕತೆ ನಡೆಯುತ್ತಿರುವಾಗ, ದೂರದಲ್ಲಿ ಗುಡ್ಡದ ಮೇಲೆ ಸೌಮ್ಯಾಶ್ರಮ ಕಾಣಿಸಿತು. ಸೌಮ್ಯಾಶ್ರಮಕ್ಕೆ, ಹೆದ್ದಾರಿಯನ್ನು ಅಗಚಿ, ಸುಮಾರು ಎರಡು ಮೈಲಿಗಳ ದೂರ ಗುಡ್ಡದ ರಸ್ತೆಯಲ್ಲಿ ಹೋಗಬೇಕಾಗಿತ್ತು. ಆ ರಸ್ತೆಯಲ್ಲಿ ಕಾರು ಹೋಗಬಹುದಾಗಿದ್ದರೂ, ಬಹಳ ಕಡಿದಾಗಿತ್ತು. ಸೌಮ್ಯಾಶ್ರಮವು, ಶ್ರೀದೇವಿ ಬೆಟ್ಟದ ಶ್ರೇಣಿಗೆ ಸೇರಿದ್ದ ಕಿಂದರಿ ಗುಡ್ಡದ ಕಿಬ್ಬದಿಯಲ್ಲಿ, ಒಂದು ವಿಶಾಲವಾದ ಬಯಲಿನಲ್ಲಿ ನಿರ್ಮಿಸಲ್ಪಟ್ಟಿತ್ತು. ಮೇಲ್ಗಡೆ ಸುಮಾರು ಒಂದು ಮೈಲಿಯ ದೂರದಲ್ಲಿ ಗುಡ್ಡದ ಮೇಲೆ ಸಿರಿಮಾವತಿ ನದಿಯ ಉಗಮ ಸ್ಥಾನವಿತ್ತು. ಆ ಸ್ಥಳದಲ್ಲಿಯೇ ಒಂದು ಲಕ್ಷ್ಮೀ ದೇವಾಲಯವಿತ್ತು. ದೇವಾಲಯದ ಗರ್ಭಗುಡಿಯಿಂದಲೇ ಜಲ ಸಣ್ಣ ಬುಗ್ಗೆ ಯೋಪಾದಿಯಲ್ಲಿ ಒಡೆದು ಹರಿಯುತ್ತಿತ್ತು. ಅಲ್ಲಿಂದ ಅದು ದೇವಾಲಯದ ಎದುರುಗಡೆ ಇರುವ ಕೊಳದಲ್ಲಿ ಬಿದ್ದು, ಅಲ್ಲಿಂದ ಸಣ್ಣ ತೊರೆಯಾಗಿ, ಸೌಮ್ಯಾಶ್ರಮದ ಪಕ್ಕದಲ್ಲಿ ಹರಿದು ಹೋಗಿತ್ತು. ಆಶ್ರಮದ ಮುಂಭಾಗದ ಕಟ್ಟಡ ಪರ್ಣಕುಟೀರದ ಮಾದರಿಯಲ್ಲಿತ್ತು. ಅದರ ಹಿಂಭಾಗದಲ್ಲಿ ಸಿದ್ಧಾನಂದರ ವಸತಿಗಾಗಿ ಮತ್ತು ಧ್ಯಾನಕ್ಕಾಗಿ ಚಿಕ್ಕದೊಂದು ಸಿಮೆಂಟ್ ಕಾಂಕ್ರೀಟಿನ ಕಟ್ಟಡವಿತ್ತು. ಅಕ್ಕಪಕ್ಕಗಳಲ್ಲಿ ಯಾತ್ರಿಕರ ಮತ್ತು ಆಶ್ರಮವಾಸಿಗಳ ವಸತಿಗಾಗಿ ಕೆಲವು ಕಟ್ಟಡಗಳಿದ್ದವು. ಆಶ್ರಮದ ಮುಂಭಾಗದಲ್ಲಿದ್ದ ಉಪವನವು ಆಶ್ರಮದ ಸುಂದರ ಸನ್ನಿವೇಶಕ್ಕೆ ಕಳಸವನ್ನಿಟ್ಟಂತಿತ್ತು.

ಕಾರುಗಳೆರಡೂ ಆಶ್ರಮದ ಹತ್ತಿರ ಬಂದೊಡನೆ, ಚಂದ್ರಹಾಸನು "ನನಗೆ ಸಿದ್ಧಾನಂದರನ್ನು ನೋಡಬೇಕಾದ ಕೆಲಸವೇನೂ ಇಲ್ಲ; ನಾನು ಕಾರಲ್ಲೇ ಇರುತ್ತೇನೆ; ನೀವು ಹೋಗಿ ಅವರಿಂದ ವರ ಪಡೆದು ಬನ್ನಿ" ಎಂದು ಗೌರಿ, ಚಂಚಲೆಯರಿಗೆ ಮೊದಲಿಸಿ ಹೇಳಿದನು. ಕಿಶೋರನೂ ಸಹ, "ನನಗೂ ಸಿದ್ಧಿ ಮಹಾರಾಜರ ವರಪ್ರಸಾದ ಬೇಕಾಗಿಲ್ಲ ಎಂದು ಹೇಳಿದನು. ಗೌರಿಯು ಸಹ ನಾನು ಹೋಗುವುದಿಲ್ಲ" ಎಂದು ಹೇಳಿ ಕಾರಿನಿಂದ ಇಳಿಯದೆ ಕುಳಿತುಬಿಟ್ಟಳು. ಎಲ್ಲರೂ ಒಬ್ಬರ ಮುಖವನ್ನೊಬ್ಬರು ನೋಡುತ್ತಾ, ಮೌನವಾಗಿ ಕಾರಿನಲ್ಲಿ ಕುಳಿತಿದ್ದರು. ಚಂಚಲೆಗೆ, ಚಂದ್ರಹಾಸನನ್ನೂ, ಕಿಶೋರನನ್ನೂ ಸಿದ್ಧಾನಂದರ ದರ್ಶನಕ್ಕೆ ಒಪ್ಪಿಸುವುದು ಒಂದು ದೊಡ್ಡ ಸಾಹಸ ಕಾರ್ಯವೇ ಆಯಿತು.

ಚಂದ್ರಹಾಸನೂ, ಅವನ ಜೊತೆಯವರೂ ಸಿದ್ಧಾನಂದರ ದರ್ಶನಕ್ಕೆ ಹೋದಾಗ ಬೆಳಿಗ್ಗೆ ಸುಮಾರು ಹನ್ನೊಂದು ಗಂಟೆಯಾಗಿರಬಹುದು. ಸಿದ್ಧಾನಂದರು ಭಕ್ತರಿಗೆ

ದರ್ಶನ ನೀಡತಕ್ಕ ಸಭಾಂಗಣದಲ್ಲಿ, ಗೋಡೆಯ ಪಕ್ಕದಲ್ಲಿ ಒಂದು ದಿಂಬಿಗೊರಗಿ ಕುಳಿತಿದ್ದರು. ಅವರಿಗೆ ಸನ್ಯಾಸಿಯ ವೇಷಭೂಷಣಗಳೊಂದೂ ಇರಲಿಲ್ಲ. ತಲೆಯ ಕೂದಲನ್ನೂ, ಗಡ್ಡ ಮೀಸೆಗಳನ್ನೂ ಚೊಕ್ಕವಾಗಿ ಬೋಳಿಸಿದ್ದರು. ಗೌರವರ್ಣದ ತೇಜೋಮಯವಾದ ಅವರ ಮುಖದಲ್ಲಿ ಮತ್ತು ಥಳಥಳನೆ ಹೊಳೆಯುವ ಕಣ್ಣುಗಳಲ್ಲಿ ಯಾವುದೋ ಒಂದು ಅಲೌಕಿಕ ಶಕ್ತಿ ಅಡಗಿರುವಂತೆ ತೋರುತ್ತಿತ್ತು. ದಿವ್ಯಜ್ಞಾನದ ತೀರ್ಥದಲ್ಲಿ ಮಿಂದು ಬಂದ ಮಹಾಮಹಿರಂತೆ ತೋರುತ್ತಿದ್ದರು. ದಿವ್ಯಪ್ರಭೆಯೊಂದು ಅವರ ಸುತ್ತಲೂ ಆವರಿಸಿರುವಂತೆ ತೋರುತಿತ್ತು.

ಸಭಾಂಗಣದಲ್ಲಿ ಅರವತ್ತು ಎಪ್ಪತ್ತು ಜನಭಕ್ತರಿದ್ದರು. ಅಮೆರಿಕಾ ದೇಶದ ಯುವಕನೊಬ್ಬನು ಸಿದ್ಧಾನಂದರೊಡನೆ ಸಂಭಾಷಣೆ ನಡೆಸುತ್ತಿದ್ದನು. ಚಂದ್ರಹಾಸನೂ, ಅವನ ಸಂಗಡಿಗರೂ ದೂರದಿಂದಲೇ ಸಿದ್ಧಾನಂದರಿಗೆ ಪ್ರಣಾಮಗಳನ್ನು ಸಲ್ಲಿಸಿದರು. ಸಿದ್ಧಾನಂದರು ಆಶೀರ್ವಾದ ರೂಪದಲ್ಲಿ ಬಲಗೈಯನ್ನೆತ್ತಿ ಕುಳಿತುಕೊಳ್ಳಬೇಕೆಂದು ಸಂಜ್ಞೆ ಇತ್ತರು. ಚಂದ್ರಹಾಸನಿಗೂ, ಕಿಶೋರನಿಗೂ ಸನ್ಯಾಸಿಗಳ ವಿಚಾರದಲ್ಲಿ ತಿರಸ್ಕಾರ ಭಾವನೆಯಿತ್ತು. ಸನ್ಯಾಸಿಗಳೆಲ್ಲರೂ ಅರಿಯದ ಮುಗ್ಧ ಜನರನ್ನು ಮೋಸಗೊಳಿಸುವ ವಂಚಕರೆಂದು ಅವರು ತಿಳಿದಿದ್ದರು. ಸಿದ್ಧಾನಂದರನ್ನು ನೋಡಿದ ಮೇಲೆ, ಚಂದ್ರಹಾಸನು "ಈ ಸಾಧು ಕಪಟಿಯಂತೆ ತೋರುವುದಿಲ್ಲ" ಎಂದು ಮನಸ್ಸಿನಲ್ಲಿಯೇ ಅಂದುಕೊಂಡನು.

ಅಮೆರಿಕಾ ದೇಶದ ಯುವಕನು ಆಧ್ಯಾತ್ಮಿಕ ವಿಚಾರಗಳಲ್ಲಿ ತನ್ನ ಸಂದೇಹವನ್ನು ನಿವಾರಿಸಿಕೊಳ್ಳುವ ಸಲುವಾಗಿ, ಒಂದಾದ ಮೇಲೊಂದು ಪ್ರಶ್ನೆಯನ್ನು ಸಿದ್ಧಾನಂದರ ಮುಂದಿಡುತ್ತಿದ್ದನು. ಸಿದ್ಧಾನಂದರು ಐಬಿಲ್ಲದ ಆಂಗ್ಲಭಾಷೆಯಲ್ಲಿ ಶಾಂತಚಿತ್ತರಾಗಿ, ಹಸನ್ಮುಖಿಗಳಾಗಿ ಉತ್ತರ ನೀಡುತ್ತಿದ್ದರು. ಅವರು ಆ ಯುವಕನಿಗೆ ಈ ರೀತಿ ಹೇಳುತ್ತಿದ್ದರು:

"ಸೃಷ್ಟಿ, ಸ್ಥಿತಿ, ಲಯ ಇವುಗಳ ವಿಚಾರದಲ್ಲಾಗಲೀ, ಮಾನವರ ಜನನ ಮರಣಗಳ ವಿಚಾರದಲ್ಲಾಗಲೀ, ಇದುವರೆಗೆ ವಿಜ್ಞಾನ ಮಾನವರ ಸಂದೇಹವನ್ನು ನಿವಾರಿಸಿಲ್ಲ. ದೇವರ ಇರುವಿಕೆ ಅಥವಾ ಇಲ್ಲದಿರುವಿಕೆಗಳನ್ನು ವೈಜ್ಞಾನಿಕ ಪ್ರಯೊಗಗಳಿಂದಾಗಲೀ, ತರ್ಕವಿತರ್ಕಗಳಿಂದಾಗಲೀ ದೃಢಪಡಿಸಲು ಸಾಧ್ಯವಿಲ್ಲ. ದೃಷ್ಟಿಗೆ ಅಗೋಚರವಾದುದೆಲ್ಲವೂ ಶೂನ್ಯವೆಂದು ಹೇಳಲಾಗದು; ಮನಸ್ಸಿಗೆ ನಿಲುಕದಿರುವುದೆಲ್ಲವೂ ಮಿಥ್ಯೆ ಎಂದು ಸಾಧಿಸಲಾಗದು."

ಅಮೆರಿಕಾ ದೇಶದ ಯುವಕನು ಅಂದು ಸಿದ್ಧಾನಂದರಿಗೆ ಹಾಕಿದ್ದ ಪ್ರಶ್ನೆಗಳೇ ಚಂದ್ರಹಾಸನ ಮನಸ್ಸಿನಲ್ಲಿ ಆಗಾಗ ಉದ್ಭವಿಸುತ್ತಿದ್ದ ಪ್ರಶ್ನೆಗಳಾಗಿದ್ದವು. ಸಾಧುಗಳ ಪಾಂಡಿತ್ಯವನ್ನು ಅಳೆಯುವ ದೃಷ್ಟಿಯಿಂದ ಚಂದ್ರಹಾಸನು, ಗೌರಿ ಬೇಡವೆಂದು ಎಷ್ಟು ಹೇಳಿದರೂ ಕೇಳದೆ, ಎದ್ದುನಿಂತು ಸಿದ್ಧಾನಂದರಿಗೆ ಸವಾಲು ಹಾಕತೊಡಗಿದನು.

"ಸಾಕ್ಷಿ ಪ್ರಮಾಣಗಳಿಲ್ಲದೆ, ದೇವರಿದ್ದಾನೆಂದು ಹೇಳಿದರೆ, ಈಗಿನ ಕಾಲದ ಯುವಕರು ಹೇಗೆ ನಂಬುತ್ತಾರೆ? ಕುರುಡು ನಂಬಿಕೆಯ ಕಾಲ ಮುಗಿದು ಹೋಗಿದೆ. ಆಧುನಿಕ

ವೈಜ್ಞಾನಿಕ ಯುಗದಲ್ಲಿ ದೇವರೆಂಬ ವ್ಯಕ್ತಿಗೆ ಸ್ಥಳವೇ ಇಲ್ಲ" ಎಂದು ಗಂಭೀರ ವಾಣಿಯಲ್ಲಿ ಚಂದ್ರಹಾಸನು ಹೇಳಿಯೇ ಬಿಟ್ಟನು.

ಅವನ ಮಾತುಗಳನ್ನು ಕೇಳಿದ ಗೌರಿಯೂ, ಚಂಚಲೆಯೂ ಅವನನ್ನು ತಮ್ಮ ಜೊತೆಯಲ್ಲಿ ಕರೆದುಕೊಂಡು ಬಂದದ್ದೇ ತಪ್ಪೆಂದೂ, ಹೊರಗಡೆ ಬಿಟ್ಟು ಬಂದಿದ್ದರೆ ಮೇಲಾಗಿರುತ್ತಿತ್ತೆಂದೂ ಮನಸ್ಸಿನಲ್ಲಿಯೇ ಅಂದುಕೊಂಡರು. ಗೌರಿಗೆ ಚಂದ್ರಹಾಸನ ಮೇಲೆ ಬಹಳ ಕೋಪ ಬಂದಿತ್ತು. ಆದರೆ ಆ ಸಂದರ್ಭದಲ್ಲಿ ಅವಳೇನೂ ಮಾಡುವಂತಿರಲಿಲ್ಲ. ಸಿದ್ಧಿ ಮಹಾರಾಜರು ಕುಪಿತರಾಗದೆ, ನಗುತ್ತಾ ಚಂದ್ರಹಾಸನನ್ನು ಕುರಿತು, "ಮಗೂ, ನಮ್ಮ ನಮ್ಮ ಅನುಭವವೇ ಸಾಕ್ಷಿ; ಋಷಿಗಳೂ, ವಿಭೂತಿ ಪುರುಷರೂ ಹೇಳಿದ್ದೇ ಪ್ರಮಾಣ" ಎಂದರು.

ಚಂದ್ರಹಾಸನು ಜಗ್ಗದೆ "ಅವೆಲ್ಲಾ ಓಬಿರಾಯನ ಕಾಲದ ಮಾತುಗಳು" ಎಂದು ತಕ್ಷಣ ಹೇಳಿದನು,

"ಹೋಗಲೀ ಬಿಡಪ್ಪಾ, ಅವೆಲ್ಲಾ ಓಬಿರಾಯನ ಕಾಲದ ಮಾತುಗಳು. ಈ ಕಾಲದಲ್ಲಿ ದೇವರಿಲ್ಲವೆಂದು ಸಮರ್ಥಿಸಲು ಯಾವ ಸಾಕ್ಷಿ ಪ್ರಮಾಣಗಳಿವೆಯೆಂಬು ದನ್ನಾದರೂ ಹೇಳು. ನಾನು ತಿಳಿದುಕೊಳ್ಳುತ್ತೇನೆ. ನಾನೇನೂ ಸರ್ವಜ್ಞನಲ್ಲ"

"ದೀನದಲಿತರ ಉದ್ಧಾರಕ್ಕಾಗಿ ಅವತರಿಸಿದ್ದ, ಕ್ರಾಂತಿಪುರುಷ ಕಾರ್ಲ್‌ಮಾರ್ಕ್ಸ್ ದೇವರಿಲ್ಲವೆಂದು ಸಾರಿದ್ದಾನೆ. ಅವನ ನಾಸ್ತಿಕ ಸಿದ್ಧಾಂತವನ್ನು ಜಗತ್ತಿನ ಬಹು ಜನರು ಒಪ್ಪಿದ್ದಾರೆ."

"ಕಾರ್ಲ್‌ಮಾರ್ಕ್ಸ್, ಭಗವಂತನ ಸಾಕ್ಷಾತ್ಕಾರಕ್ಕಾಗಿ, ತಪಸ್ಸುಮಾಡಿದ್ದ ವ್ಯಕ್ತಿಯಲ್ಲ. ಆತನ ಕಾಲದಲ್ಲಿ, ಧರ್ಮಗುರುಗಳೂ, ಆಳರಸರೂ, ಶ್ರೀಮಂತರೂ ಒಟ್ಟಾಗಿ ಬಡಬಗ್ಗರನ್ನು ಸುಲಿಗೆ ಮಾಡುತ್ತಿದ್ದುದರಿಂದ, ಸ್ವಾಭಾವಿಕವಾಗಿ ಕಾರ್ಲ್‌ಮಾರ್ಕ್ಸ್‌ನಿಗೆ ಧರ್ಮದ ವಿಚಾರದಲ್ಲಿ ತಿರಸ್ಕಾರ ಭಾವನೆಯುಂಟಾಗಿತ್ತು. ಆದ್ದರಿಂದಲೇ ಅವನು ನಾಸ್ತಿಕ ವಾದವನ್ನು ಪ್ರತಿಪಾದಿಸಿದ. ಅವನ ವಾದ ಹೊಸದೇನೂ ಅಲ್ಲ. ನಮ್ಮ ದೇಶದ ಚಾರುವಾಕರು ಬಹಳ ಹಿಂದೆಯೇ ಆ ವಾದವನ್ನು ಪ್ರತಿಪಾದಿಸಿದ್ದರು. ಎಲ್ಲಾ ದಾರ್ಶನಿಕ ಸಿದ್ಧಾಂತಗಳಂತೆ ಕಾರ್ಲ್‌ಮಾರ್ಕ್ಸ್‌ನ ಸಿದ್ಧಾಂತವೂ ಒಂದು ವಿಧವಾದ ಊಹೆ. ನನಗೂ ಸ್ವಲ್ಪ ಕಾರ್ಲ್‌ಮಾರ್ಕ್ಸ್‌ನ ಯಥಾರ್ಥವಾದ ಗೊತ್ತಿದೆ."

"ನೈಸರ್ಗಿಕ ನಿಯಮಗಳು, ವಿಶ್ವದ ಮತ್ತು ಮಾನವ ಕುಟುಂಬದ ಆಗುಹೋಗುಗಳನ್ನು, ಪ್ರಗತಿ ಪರಿವರ್ತನೆಗಳನ್ನು ನಿರ್ಧರಿಸುತ್ತವೆಯೆಂಬುದು ಕಾರ್ಲ್‌ಮಾರ್ಕ್ಸ್‌ನ ಸಿದ್ಧಾಂತ. ಅದು ಬರೀ ಊಹೆಯಲ್ಲ."

ನಿಯಾಮಕನೊಬ್ಬನಿಲ್ಲದೆ ನಿಯಮಗಳು ಇರಲಾರವು. ನೈಸರ್ಗಿಕ ನಿಯಮಗಳಿಗೆ ಕಾರಃ ಕರ್ತೃವಾದ ಶಕ್ತಿ ಅಥವಾ ವ್ಯಕ್ತಿಯೇ ದೇವರೆಂಬುದು ಹಿಂದು ಧರ್ಮದ ಮೂಲ ಸಿದ್ಧಾಂತ."

"ಅದು ಕುರುಡು ನಂಬಿಕೆ; ಯಥಾರ್ಥ ಸಿದ್ಧಾಂತವಲ್ಲ."

"ನನ್ನದು ಕುರುಡು ನಂಬಿಕೆಯಾದರೆ ನಿನ್ನದೂ ಯಾಕೆ ಕುರುಡು ನಂಬಿಕೆಯಾಗಿರಬಾರದು?"

"ನನ್ನದು ಕಾರ್ಲ್‌ಮಾರ್ಕ್ಸ್‌ನ ಯಥಾರ್ಥವಾದವನ್ನವಲಂಬಿಸಿದೆ."

"ಹಾಗಾದರೆ ನೈಸರ್ಗಿಕ ನಿಯಮಗಳನ್ನು ಮಾಡಿದವರ್ಯಾರು?"

"ನೈಸರ್ಗಿಕ ನಿಯಮಗಳು ಪ್ರಕೃತಿಜನ್ಯವಾದವು."

"ಪ್ರಕೃತಿಯನ್ನು ಸೃಷ್ಟಿಸಿದವರಾರು? ಅದರ ಆಗುಹೋಗುಗಳನ್ನು ನಿರ್ಧರಿಸುವವರ್ಯಾರು?"

"ಪ್ರಕೃತಿಯನ್ನು ಯಾರೂ ಸೃಷ್ಟಿಸಿಲ್ಲ; ಅದು ಸ್ವಯಂಜನ್ಯವಾದ ಮೂಲವಸ್ತು. ಅದರ ಆಗುಹೋಗುಗಳನ್ನು ಅದೇ ನಿರ್ಧರಿಸುತ್ತದೆ."

"ನೈಸರ್ಗಿಕ ನಿಯಮಗಳು ವಿಶ್ವದ ಆಗುಹೋಗುಗಳನ್ನು ನಿರ್ಧರಿಸುತ್ತವೆಯೆಂದು ಮೊದಲು ಹೇಳಿದೆ. ನಂತರ ನೈಸರ್ಗಿಕ ನಿಯಮಗಳು ಪ್ರಕೃತಿಜನ್ಯವಾದುವೆಂದು ಹೇಳಿದೆ. ಈಗ ಪ್ರಕೃತಿ ಸ್ವಯಂಜನ್ಯವಾದ ಮೂಲವಸ್ತುವೆಂದೂ, ಅದರ ಆಗುಹೋಗುಗಳನ್ನು ಅದೇ ನಿರ್ಧರಿಸುತ್ತದೆಯೆಂದೂ ಹೇಳಿದೆ. ನಿನ್ನ ತರ್ಕದಲ್ಲಿ ಅಸಮಂಜಸ ಇದೆಯಲ್ಲವೇ?"

"ಈಗಿನ ಕಾಲದ ಯುವಕರಿಗೆ ಕಾರ್ಲ್‌ಮಾರ್ಕ್ಸ್ ಹೇಳಿದ್ದೇ ವೇದವಾಕ್ಯ."

"ಮಗೂ, ಇದು ಮೊಂಡು ವಾದವಾಯಿತು. ಒಬ್ಬ ವ್ಯಕ್ತಿ ಎಷ್ಟೇ ಪ್ರಾಜ್ಞನಾದರೂ, ಅವನು ಹೇಳಿದ್ದೆಲ್ಲವೂ ವೇದವಾಕ್ಯವಾಗುವುದಿಲ್ಲ. ಕಾರ್ಲ್‌ಮಾರ್ಕ್ಸ್‌ನು ಹೇಳಿದ್ದು ವೇದವಾಕ್ಯವಾದರೆ, ಆತ್ಮ ಸಾಕ್ಷಾತ್ಕಾರ ಪಡೆದಿದ್ದ ಋಷಿಗಳೂ, ವಿಭೂತಿ ಪುರುಷರೂ ಹೇಳಿರುವುದು ಯಾಕೆ ವೇದವಾಕ್ಯವಾಗಿರಬಾರದು? ಒಂದು ಮಾತು ನಿರ್ವಿವಾದ. ಯಾವುದೋ ಒಂದು ಅಲೌಕಿಕ ಮಹಾಶಕ್ತಿ ಅಥವಾ ಮಹಾವ್ಯಕ್ತಿ ಮಾನವ ಕುಟುಂಬದ ಮತ್ತು ಇಡೀ ವಿಶ್ವದ ಆಗಿಹೋಗುಗಳನ್ನು ನಿರ್ಧರಿಸುತ್ತದೆ. ಆ ಶಕ್ತಿ ಅಥವಾ ವ್ಯಕ್ತಿಯನ್ನು ನೀನು ಪ್ರಕೃತಿಯೆಂದು ಕರೆದರೂ ಒಂದೇ; ದೇವರೆಂದು ಕರೆದರೂ ಒಂದೇ."

ಸಿದ್ಧಾನಂದರ ಮಾತುಗಳಿಗೆ ಪ್ರತಿಯಾಗಿ ಏನು ಹೇಳಬೇಕೆಂಬುದು ಗೊತ್ತಾಗದೆ, ವಾದದಲ್ಲಿ ಸೋತವನಂತೆ, ಚಂದ್ರಹಾಸನು ಸುಮ್ಮನೆ ಕುಳಿತು ಬಿಟ್ಟನು. ಚಂದ್ರಹಾಸನು ಅಭಿಮಾನಕುಂಠಿತನಾಗಿದ್ದನು. ಗೌರಿಯೂ, ಚಂಚಲೆಯೂ, ಒಬ್ಬರ ಮುಖವನ್ನೊಬ್ಬರು ನೋಡುತ್ತಾ, ಒಳಗೊಳಗೇ ನಗುತ್ತಾ ಕುಳಿತಿದ್ದರು. ಚಂದ್ರಹಾಸನು ಅವರಿಬ್ಬರ ಕಡೆಗೆ ನೋಡಿದನು. ಅವರಿಬ್ಬರ ಮುಖಭಾವ, "ನಿಮಗೆ ಹಾಗೆಯೇ ಆಗಬೇಕು" ಎನ್ನುವ ರೀತಿಯಲ್ಲಿತ್ತು. ಕಿಶೋರನೂ ಅಭಿಮಾನಕುಂಠಿತನಾಗಿದ್ದನು. ಈ "ಸನ್ಯಾಸಿ, ಸಾಮಾನ್ಯ ಸನ್ಯಾಸಿಯಲ್ಲ" ಎಂದು ಅವನು ತನ್ನ ಮನಸ್ಸಿನಲ್ಲಿ ಅಂದುಕೊಳ್ಳುತ್ತಿದ್ದನು.

ಗೌರಿಗೂ, ಚಂಚಲೆಗೂ ಸಿದ್ಧಾನಂದರ ಸಮ್ಮುಖದಲ್ಲಿ ಎಂದೂ ಅನುಭವಿಸದಿದ್ದ ಅಪೂರ್ವಶಾಂತಿ ದೊರಕಿದಂತಾಗಿತ್ತು. ಭಕ್ತಾದಿಗಳು ಒಬ್ಬೊಬ್ಬರಾಗಿ ಸಿದ್ಧಾನಂದರ ಕಾಲುಗಳಿಗೆರಗಿ, ಅವರ ಆಶೀರ್ವಾದ ಪಡೆದು ಬರುತ್ತಿದ್ದರು. ಅಮೆರಿಕಾ ದೇಶದ

ಯುವಕನು ಚಂದ್ರಹಾಸನೊಡನೆ ಮಾತನಾಡುತ್ತಾ, "ನಾನೂ ನಿಮ್ಮಂತೆ ವಿಚಾರವಾದಿ. ಆದರೆ ಈ ಸಾಧು ಎಲ್ಲಾ ಸಾಧುಗಳಂತೆ ಅಲ್ಲ. ಇವರು ಹೇಳಿದ್ದನ್ನು ಅಲ್ಲಗಳೆಯುವುದು ಕಷ್ಟ. ನಾನು ಇನ್ನೂ ಇವರನ್ನು ಪರೀಕ್ಷಿಸಬೇಕಾಗಿದೆ. ಇನ್ನೊಂದುವಾರ ಇಲ್ಲೇ ಇರುತ್ತೇನೆ" ಎಂದನು. ಅವರಿಬ್ಬರೂ ಮಾತನಾಡುತ್ತಿರುವಾಗ, ಗೌರಿಯೂ ಚಂಚಲೆಯೂ ಸಿದ್ಧಾನಂದರ ಕಾಲಿಗೆ ಬಿದ್ದು, ಅವರ ಆಶೀರ್ವಾದ ಪಡೆದರು. ಚಂದ್ರಹಾಸನೂ, ಕಿಶೋರನೂ ದೂರದಿಂದಲೇ ಅವರಿಗೆ ನಮಸ್ಕರಿಸಿ ಹೊರಟರು.

ಆಶ್ರಮದಿಂದ ಎಲ್ಲರೂ ಸಿರಿಮಾವತಿ ನದಿಯ ಮೂಲವನ್ನು ನೋಡಲು ಕಾಲ್ನಡಿಗೆಯಲ್ಲಿಯೇ ಹೋದರು. ಲಕ್ಷ್ಮೀದೇವಾಲಯದಲ್ಲಿ ಗೌರಿಯೂ, ಚಂಚಲೆಯೂ ಮಂಗಳಾರತಿಯನ್ನು ಮಾಡಿಸಿದರು. ಸಿರಗೂರಿಗೆ ಹೋಗಲು ಇನ್ನೂ ನಲವತ್ತು ಮೈಲಿಗಳ ದೂರ ಪ್ರಯಾಣ ಮಾಡಬೇಕಾಗಿತ್ತು. ಆದ್ದರಿಂದ ಎಲ್ಲರೂ ಜಾಗ್ರತೆ ಕೆಳಗಿಳಿದು ಕಾರುಗಳಿದ್ದಲ್ಲಿಗೆ ಹೋದರು. ಕಾರಿನಲ್ಲಿ ಕುಳಿತ ನಂತರ ಗೌರಿ ಚಂಚಲೆಯನ್ನು ಕುರಿತು, ವ್ಯಂಗ್ಯವಾಗಿ "ಚಂಚಲಾ, ನಾವೇ ಬುದ್ಧಿವಂತರು ಅಂತ ತಿಳಕೊಳ್ಳೋದು ತಪ್ಪು" ಎಂದು ನುಡಿದಳು.

"ನೀ ಹೇಳಿದ್ದು ಯಾಕೆ ಅಂತಾ ಗೊತ್ತಾಯ್ತು. ನಾ ಮಹಾಬುದ್ಧಿವಂತ ಅಂತ ತಿಳ್ಕೊಂಡಿಲ್ಲ" ಎಂದು ಹೇಳುತ್ತಾ ಚಂದ್ರಹಾಸ ಹೆಂಡತಿಯ ಕಡೆಗೆ ನೋಡಿದನು.

"ನಾ ನನ್ನ ಫ್ರೆಂಡ್ ಹತ್ರ ಮಾತಾಡದ್ರೆ ನಿಮಗೇನಾಯಿತ್ರಿ? ಎಂದು ಗೌರಿ ನಗುತ್ತಾ ಹೇಳಿದಳು.

"ನಾ ಏನ್ ದಡ್ಡ ಅಂತ ಮಾಡಿಯೇನು?"

"ದಡ್ಡರು ಅಂತ ಯಾರು ಹೇಳಿದರು? ಅತೀಬುದ್ಧಿ ಮಾಡೋಕೆ ಹೋಗಿ ಸ್ವಾಮಿಗಳ ಹತ್ತಿರ ಸೋತಿದ್ದು."

"ಯಾರು ಸೋತಿದ್ದು?"

"ಯಾರು, ನೀವು."

"ನಾ ಹೇಳಿದ್ದು ಅವರೊಪ್ಪಲಿಲ್ಲ; ಅವರು ಹೇಳಿದ್ದು ನಾ ಒಪ್ಪಲಿಲ್ಲ ಅಷ್ಟೇ."

"ಅವರು ಹೇಳಿದ್ದಕ್ಕೆ ಜವಾಬು ಹೇಳೋಕೆ ನಿಮ್ಮ ಹತ್ರ ಬಂಡವಾಳ ಇರಲಿಲ್ಲ ಅಂತ ಹೇಳಿ" ಎಂದು ಗೌರಿ ಚಂದ್ರಹಾಸನನ್ನು ಮೂದಲಿಸಿದಳು.

ಹೀಗೆ ಗಂಡ ಹೆಂಡಿರು ಮಾತನಾಡುತ್ತಿರುವಾಗ, ಚಂಚಲೆ ಮಧ್ಯೆ ಪ್ರವೇಶಿಸಿ "ನೀವೇನೆ ಹೇಳಿ ಅವರಲ್ಲಿ ಏನೋ ಒಂದು ಶಕ್ತಿ ಇದೆ. ನನ್ನ ಮನ್ಸಿಗೇನೋ ಬಹಳ ಶಾಂತಿ ಸಿಕ್ಕಿದ ಹಾಗೆ ಆಯ್ತು" ಎಂದಳು.

"ಅವರು ಹೇಳಿದ್ದೆಲ್ಲವನ್ನೂ ನಾವು ಒಪ್ಪಲು ಸಾಧ್ಯವಿಲ್ಲ. ಆದರೆ ಅವರು ಬರೀ ಉದರ ವೈರಾಗ್ಯದ ಕಪಟ ಸನ್ಯಾಸಿಯಲ್ಲ. ಈ ದೇಶದಲ್ಲಿ ಕಪಟಸನ್ಯಾಸಿಗಳೇ ಹೆಚ್ಚು" ಎಂದು ಕಿಶೋರ್ ಹೇಳಿದನು.

ಚಂದ್ರಹಾಸನ ದಾರಿಯುದ್ದಕ್ಕೂ ತನಗೂ, ಸಿದ್ಧಾನಂದರಿಗೂ ನಡೆದ ಸಂಭಾಷಣೆಯನ್ನು ಕುರಿತು ಯೋಚಿಸುತ್ತಿದ್ದನು. ಅವನು ನಾಸ್ತಿಕನಾಗಿದ್ದರೂ, ದಯಾಮಯನಾಗಿದ್ದನು. ಅನುಕಂಪ, ಮಾನವೀಯತೆಗಳು ಅವನಲ್ಲಿ ತುಂಬಿ ತುಳುಕುತ್ತಿದ್ದವು. ಅಸತ್ಯ ಅನ್ಯಾಯಗಳನ್ನೂ, ಹಿಂಸೆ ಕ್ರೌರ್ಯಗಳನ್ನೂ, ಅವನು ಸಹಿಸುತ್ತಿರಲಿಲ್ಲ. ಅಂದು ಅವನ ವಿಚಾರಧಾರೆ ಈ ರೀತಿ ಹರಿದಿತ್ತು.

"ಆ ಸಾಧು ಹೇಳಿದಂತೆ, ಜಗನ್ನಿಯಾಮಕನಾದ ಭಗವಂತನೊಬ್ಬನಿರುವುದು ನಿಜವಾಗಿದ್ದರೆ, ಅಸತ್ಯ ಅನ್ಯಾಯಗಳಿಂದ, ಹಿಂಸೆ ಕ್ರೌರ್ಯಗಳಿಂದ, ಸಾವು ನೋವುಗಳಿಂದ ಕೂಡಿರುವ ನರಕದ ಕುಂಡದಂತಿರುವ ಈ ಜಗತ್ತನ್ನು ಅವನೇಕೆ ಸೃಷ್ಟಿಸಿದ? ಒಮ್ಮೊಮ್ಮೆ ಯೋಚಿಸಿದರೆ, ಮಾನವ ಜೀವನದಲ್ಲಿ ಸುಖಕ್ಕಿಂತ ದುಃಖವೇ ಹೆಚ್ಚೆಂದು ತೋರುತ್ತದೆ. ಒಮ್ಮೊಮ್ಮೆ ಯೋಚಿಸಿದರೆ ಸುಖ ಸಂತುಷ್ಟಿಯೇ ಸೃಷ್ಟಿಯ ಉದ್ದೇಶವಾಗಿರಬೇಕೆಂದು ತೋರುತ್ತದೆ. ಕೆಲವೊಮ್ಮೆ ಯೋಚಿಸಿದರೆ, ಮಾನವರ ಆಗುಹೋಗುಗಳು ಯಾವುದೋ ನಿರ್ದಿಷ್ಟ ನಿಯಮಗಳಿಗನುಗುಣವಾಗಿ ನಡೆಯುವಂತೆ ತೋರುತ್ತದೆ. ಮತ್ತೊಮ್ಮೆ ಯೋಚಿಸಿದರೆ, ಎಲ್ಲವೂ ಅನಿತ್ಯ ಮತ್ತು ಅನಿಶ್ಚಯವೆಂದು ತೋರುತ್ತದೆ. ಯೋಚಿಸಿದಷ್ಟೂ ಮನಸ್ಸು ಬಗ್ಗಡವಾಗುತ್ತದೆ; ಕೊನೆಗೆ ಶೂನ್ಯವಾಗುತ್ತದೆ. ಯೋಚಿಸಿ ಪ್ರಯೋಜನವಿಲ್ಲ. ಮನಸ್ಸಿಗೆ ನಿಲುಕುವುದೆಲ್ಲವೂ, ಕಣ್ಣಿಗೆ ಕಾಣುವುದೆಲ್ಲವೂ ಸತ್ಯ; ಉಳಿದೆಲ್ಲವೂ ಮಿಥ್ಯ. ಆದರೆ ಕಾರ್ಲ್‌ಮಾರ್ಕ್ಸ್‌ನ ಸಿದ್ಧಾಂತದಿಂದ ಮಾನವರು ಅನಾದಿಯಿಂದಲೂ ಬಯಸುತ್ತಿರುವ ದ್ವೇಷ ಅಸೂಯೆಗಳಿಲ್ಲದ, ಹಿಂಸೆ ದಬ್ಬಾಳಿಕೆಗಳಿಲ್ಲದ ಸಮಾಜವನ್ನು ಸ್ಥಾಪಿಸುವುದು ಸಾಧ್ಯವೇ?"

ಇವೇ ಮುಂತಾದ ವಿಚಾರದಲ್ಲಿ ಚಂದ್ರಹಾಸನು ಮಗ್ನನಾಗಿರುವಾಗ, ಕಾರನ್ನು ನಡೆಸುತ್ತಿದ್ದ ಕಿಶೋರನು "ಏನು ಚಂದ್ರಹಾಸ, ಸಾಧುಗಳು ನಿನಗೆ ಮೌನದೀಕ್ಷೆಯನ್ನು ಕೊಟ್ಟಂತೆ ಕಾಣುತ್ತದೆ. ತಪಸ್ಸು ಮಾಡುತ್ತಾ ಇದ್ದೀಯೇನಯ್ಯಾ?" ಎಂದು ಪರಿಹಾಸ್ಯ ಮಾಡಿದನು.

"ಹೌದಯ್ಯಾ, ತಪಸ್ಸು ಮಾಡುತ್ತಿದ್ದೆ. ನೈವೇದ್ಯದ ಹೊತ್ತಾಯಿತ್ತೆಂದು ಹೊಟ್ಟೆ ದೇವರ ಗಂಟೆ ಬಾರಿಸುತ್ತಾ ಇದೆ. ಜಾಗ್ರತೆ ಊಟ ಸಿಕ್ಕಲೆಂದು ತಪಸ್ಸು ಮಾಡುತ್ತಾ ಇದ್ದೇನೆ. ಈಗಲೇ ಎರಡೂವರೆ ಗಂಟೆಯಾಯಿತು. ಇನ್ನೂ ಎಷ್ಟು ದೂರ ಹೋಗ್ಬೇಕಯ್ಯಾ?"

"ಅದೋ ಬಂತು ಸಿರಗೂರು. ಕಾಣಿಸುವುದಿಲ್ಲೇನಯ್ಯಾ?"

ಅದುವರೆಗೆ ನಿದ್ದೆ ಮಾಡುತ್ತಿದ್ದ ಅನಿಲಕುಮಾರನು ಎಚ್ಚೆತ್ತು, ಹಸಿವೆಯಿಂದ ಅಳತೊಡಗಿದನು. ಚಂಚಲೆ "ಅಲ್ಲಿ ನೋಡು ಮನೆ ಬಂತು. ಅಪ್ಪಾ, ಅಜ್ಜೀ ನಿಂತಾರೆ" ಎಂದು ಮಗನನ್ನು ಸಮಾಧಾನ ಪಡಿಸುತ್ತಿದ್ದಳು. ಸ್ವಲ್ಪ ಹೊತ್ತಿನಲ್ಲಿಯೇ, ಗೋಪಾಲನ ಮನೆಯ ಮುಂದಿನ ಅಂಗಳದಲ್ಲಿ ಕಾರುಗಳೆರಡೂ ನಿಂತವು. ಕಾರುಗಳ ಶಬ್ದಗಳನ್ನು ಕೇಳಿ ಗೋಪಾಲನು ಹೊರಗಡೆ ಬಂದು, ಜಗಲಿಯ ಮೇಲೆ ನಿಂತಿದ್ದನು. ಕಾರಿನಿಂದ

ಕೆಳಗಿಳಿದಿದ್ದೇ ತಡ, ಅನಿಲಕುಮಾರನು "ಅಪ್ಪಾ, ಅಪ್ಪಾ" ಎನ್ನುತ್ತಾ ಗೋಪಾಲನಿದ್ದಲ್ಲಿಗೆ ಓಡಿ ಹೋಗುತ್ತಿರುವಾಗ, ಎಡವಿ ದೊಪ್ಪನೆ ಅಂಗಳದಲ್ಲಿ ಬಿದ್ದು ಅಳುತ್ತಿದ್ದನು.

ಗೋಪಾಲನು ಓಡಿ ಬಂದು, ಮಗನನ್ನು ಎತ್ತಿ ಎದೆಗೆ ಒತ್ತಿಕೊಂಡು, ಅವನ ಕೆನ್ನೆಗಳಿಗೆ ಮುತ್ತಿಕ್ಕಿ ಅವನನ್ನು ಸಂತೈಸುತ್ತಿರುವಾಗ, ಒಳಗಡೆಯಿಂದ ಸ್ವರೂಪರಾಣಿ ಹೊರಗೆ ಬಂದಳು. ಅವಳು ಅತಿಥಿಗಳನ್ನು ಸ್ವಾಗತಿಸುತ್ತಿರುವಾಗ, ಅನಿಲಕುಮಾರನು "ಅಜ್ಜೀ, ಅಜ್ಜೀ, ಎಲ್ಡು, ಮೂಡು ಆನ" ಎಂದು ಹಿಗ್ಗಿನಿಂದ ಅಜ್ಜಿಗೆ ಆನೆಗಳ ವಿಚಾರವನ್ನು ತೊದಲು ನುಡಿಗಳಲ್ಲಿ ಹೇಳುತ್ತಿದ್ದನು. ಸ್ವರೂಪರಾಣಿ "ಎಂತಹ ಎಲ್ಡು, ಮೂಡು ಆನಾನೋ?" ಎಂದು ಮೊಮ್ಮಗನನ್ನು ಪ್ರಶ್ನಿಸಿದಳು. ಆಗ ಅನಿಲಕುಮಾರ ಎರಡು ಕೈಗಳನ್ನೂ ಮೇಲಕ್ಕೆತ್ತಿ "ಇಷ್ಟು ಆನ" ಎಂದನು. ಸ್ವರೂಪರಾಣಿಗೆ ಅವನ ಭಾಷೆ ಗೊತ್ತಾಗದೆ, ಸೊಸೆಯನ್ನು ಕುರಿತು "ಚಂಚಲಾ ಏನೇ ಇವ ಹೇಳೋದು? ಎಲ್ಡು, ಮೂಡು ಆನ ಅಂತ ಹೇಳ್ತಾನಲ್ಲಾ" ಎಂದು ಕೇಳಿದಳು. ಚಂಚಲೆ ದಾರಿಯಲ್ಲಿ ಕಾಡಾನೆಗಳನ್ನು ನೋಡಿದ್ದನ್ನು ಅತ್ತೆಗೆ ವಿವರಿಸಿದಳು.

ಗೋಪಾಲನು ಅತಿಥಿಗಳನ್ನು ಸ್ವಾಗತಿಸುತ್ತಾ, ಕಿಶೋರನ ಕಡೆ ನೋಡಿ, "ಇವರ್‍ಯಾರು?" ಎಂದು ಚಂದ್ರಹಾಸನನ್ನು ಕೇಳಿದನು. "ಇವರೇ ನಿನ್ನೆ ನಿಮಗೆ ಫೋನ್ ಮಾಡಿದವರು. ನನ್ನ ಬಾಲ್ಯಮಿತ್ರ, ಕಿಶೋರ್. ನಮ್ಮ ಕ್ರಾಂತಿಕೂಟದ ಜನರಲ್ ಸೆಕ್ರೆಟ್ರಿ? ಎಂದು ಚಂದ್ರಹಾಸ ತನ್ನ ಗೆಳೆಯನ ಪರಿಚಯ ಮಾಡಿಕೊಟ್ಟನು. ಗೋಪಾಲನು ಅನಂತರ ಚಂದ್ರಹಾಸ ಮತ್ತು ಗೌರಿಯ ಕಡೆಗೆ ತಿರುಗಿ, "ನೀವಿಬ್ಬರೂ ಬಂದಿದ್ದು ತುಂಬಾ ಸಂತೋಷ" ಎಂದನು. "ನೀವು ನಮ್ಮನೆಗೆ ಬರದಿದ್ರೂ ನಾವಿಬ್ಬರೂ ನಿಮ್ಮ ಮನೆಗೆ ಬಂದೀವಲ್ಲಾ" ಎಂದು ಗೌರಿ ಗೋಪಾಲನನ್ನು ಹಂಗಿಸಿದಳು. ಚಂಚಲೆ ಸ್ವರೂಪರಾಣಿಗೆ ಅತಿಥಿಗಳ ಪರಿಚಯ ಮಾಡಿಕೊಟ್ಟಳು. ಸ್ವರೂಪರಾಣಿ ಗೌರಿಯನ್ನು ಕುರಿತು "ನೀನು ಬಂದಿದ್ದು ತುಂಬಾ ಸಂತೋಷವಮ್ಮಾ. ನೀವಿಬ್ಬರೂ ಆದರ್ಶ ದಂಪತಿಗಳೆಂದು ಚಂಚಲ ಆಗಾಗ ಹೇಳುತ್ತಿರುತ್ತಾಳೆ" ಎಂದಳು. "ಚಂಚಲಾ ಅನಾವಶ್ಯಕವಾಗಿ ನಮ್ಮನ್ನು ಹೊಗಳುತ್ತಾಳೆ. ಅವಳಿಗೇನು ಕಡಿಮೆಯಾಗಿದೆ. ಬೇಕಾದಷ್ಟು ಸಂಪತ್ತಿದೆ, ನೀವು ಅವಳನ್ನು ಮಗಳಂತೆ ನೋಡಿಕೊಳ್ಳುತ್ತೀರೆಂದೂ, ಗೋಪಾಲ್‌ರವರು ಸರ್ವಗುಣ ಸಂಪನ್ನರೆಂದೂ ಅವಳೇ ಹೇಳುತ್ತಾಳೆ. ನಾವು ಬಡವರು" ಎಂದು ಗೌರಿ ಸ್ವರೂಪರಾಣಿಗೆ ಹೇಳಿದಳು.

ಗೋಪಾಲನು ಆ ಮಾತುಗಳನ್ನು ಕೇಳದವನಂತೆ, ಅನಿಲಕುಮಾರರನ್ನು ಕುರಿತು, ಗೌರಿಯ ಕಡೆಗೆ ಕೈತೋರಿಸಿ, "ಅನಿಲ್, ಈ ಆಂಟಿ ಎಷ್ಟು ತಿಂಡಿ ಕೊಟ್ಟರೋ" ಎಂದು ಕೇಳಿದನು. ಅನಿಲಕುಮಾರನು ಎರಡೂ ಕೈಗಳನ್ನು ಬೊಗಸೆ ಮಾಡಿ "ತುಂಬಾ" ಎಂದು ಹೇಳಿದನು. ಆಗ ಕಿಶೋರನು "ಅದಕ್ಕೇ ಕರ್‍ರ್ರಗೆ ಒಂದು ಕೊಳಗ ವಾಂತಿ ಮಾಡಿದ್ದು, ನಿಮ್ಮ ಮಗ" ಎಂದನು. ಗೋಪಾಲನು ಚಂಚಲೆಯನ್ನು ಕುರಿತು, "ಏನು, ಕರ್‍ರ್ರಗೆ ವಾಂತಿ ಮಾಡಿದ್ನೇನು? ಎಂದು ಕೇಳಿದನು, "ಮತ್ತೇನು? ನಮ್ಮಿಬ್ಬರ ಸೀರೆಯೆಲ್ಲಾ

ವಾಂತಿಮಯ, ಮೊದಲು ಸ್ನಾನ ಮಾಡಬೇಕು. ಬಾರೆ ಹೋಗೋಣ" ಎಂದು ಚಂಚಲೆ, ಗೌರಿಯನ್ನು ಕರೆದುಕೊಂಡು ಒಳಗೆ ಹೋದಳು.

ಗೋಪಾಲನ ಮನೆ, ಗೌರಿಯ ಕಣ್ಣಿಗೆ ಒಂದು ಸಣ್ಣ ಅರಮನೆಯಂತೆ ಕಂಡಿತ್ತು. ಮನೆಯಲ್ಲಿದ್ದ ಆಳುಗಳ ತಂಡಗಳನ್ನು ನೋಡಿ, ಗೌರಿಗೆ ವಿಸ್ಮಯವಾಯಿತು. ಗೌರಿಗೂ, ಚಂದ್ರಹಾಸನಿಗೂ ಒಂದು ಕೊಠಡಿಯನ್ನು ಬಿಟ್ಟು ಕೊಟ್ಟಿದ್ದರು. ಕಿಶೋರನಿಗೆ ಒಂದು ಪ್ರತ್ಯೇಕ ಕೋಣೆಯನ್ನು ಕೊಟ್ಟಿದ್ದರು. ಕ್ರಾಂತಿಕೂಟದ ಸಂರಕ್ಷಣಾ ದಳದವರಿಗೆ ಹೊರಗಡೆ ಒಂದು ಉಪಕಟ್ಟಡವನ್ನು ಬಿಟ್ಟುಕೊಟ್ಟಿದ್ದರು. ಚಂಚಲೆ ಮೊದಲು ಸ್ನಾನ ಮಾಡಿಕೊಂಡು ಬಂದವಳು, ಅತ್ತೆಗೆ ಸೂಕ್ಷ್ಮವಾಗಿ ಕ್ರಾಂತಿಸೇನೆಯವರು ಚಂದ್ರಹಾಸನನ್ನು ಕೊಲ್ಲಲು ಮಾಡಿದ್ದ ಪಿತೂರಿಯ ವಿಚಾರವನ್ನು ಹೇಳಿದ್ದಳಲ್ಲದೆ, ಗೋಪಾಲನಿಗೂ ಶಂಕರನಿಗೂ ಟೆಲಿಫೋನ್ ಮೂಲಕ ನಡೆಯಿತೆಂದು ಚಂದ್ರಹಾಸ ಹೇಳಿದ್ದ ಸಂಭಾಷಣೆಯ ವಿಚಾರವನ್ನೂ ತಿಳಿಸಿದ್ದಳು.

ಎಲ್ಲರೂ ಊಟ ಮಾಡುತ್ತಿದ್ದಾಗ ಸ್ವರೂಪರಾಣಿ ಗೋಪಾಲನನ್ನು ಕುರಿತು "ಗೋಪಾಲಾ, ಕೇಳಿದೇನು? ಕ್ರಾಂತಿಸೇನೆಯವರ ಪಿತೂರಿ ವಿಚಾರಾನ?" ಎಂದು ಮಗನನ್ನು ಪ್ರಶ್ನಿಸಿದಳು.

"ಏನಮ್ಮಾ ಅದು ಪಿತೂರಿ?" ಎಂದು ಗೋಪಾಲ್ ತಾಯಿಯನ್ನು ಪ್ರಶ್ನಿಸಿದನು.

"ಚಂದ್ರಹಾಸನ್ನ ಕೊಲ್ಲಬೇಕೂ ಅಂತ ಮೊನ್ನೆ ಮತ್ತೆ ಒಂದು ಪ್ರಯತ್ನ ನಡೀತಂತೆ. ಅದೃಷ್ಟವಶಾತ್ ಏನೂ ಪ್ರಮಾದ ಆಗಲಿಲ್ಲವಂತೆ" ಎಂದು ಸ್ವರೂಪರಾಣಿ ಹೇಳಿದಳು.

ಗೋಪಾಲನ ಕೋರಿಕೆಯ ಮೇಲೆ, ಚಂದ್ರಹಾಸನು ರಕ್ತಕೇಸರಿ ತನ್ನ ಮನೆಗೆ ಬಂದ ವಿಚಾರವನ್ನೂ, ಅವನು ತನ್ನನ್ನು ಕೊಲ್ಲಲು ಮಾಡಿದ್ದ ಪ್ರಯತ್ನದ ವಿವರಗಳನ್ನೂ ವಿವರಿಸಿದನು. ಚಂದ್ರಹಾಸನು ಗೋಪಾಲನನ್ನು ಕುರಿತು, "ಈಗ ಕೆಲವು ದಿನಗಳ ಹಿಂದೆ ಶಂಕರ ನಿಮಗೆ ಫೋನ್ ಮಾಡಿದ್ನಂತೆ ಹೌದಾ?" ಎಂದು ಕೇಳಿದನು.

"ಹೌದು. ನಿಮಗ್ಯಾರು ಹೇಳಿದರು?"

"ನಮಗೆ ನಮ್ಮ ಗೂಢಚಾರರಿಂದ ವರ್ತಮಾನ. ಶಂಕರ ಫೋನ್‌ನಲ್ಲಿ ತನ್ನ ರಾಜಕಾರಣಕ್ಕೆ ನಿಮ್ಮ ಬೆಂಬಲವನ್ನು ಕೇಳಿದನಂತೆ, ನೀವು ಅವನಿಗೆ ಅಗೌರವದ ರೀತಿಯಲ್ಲಿ ಮಾತನಾಡಿದಿರಂತೆ. ಅದಕ್ಕಾಗಿ ಅವನಿಗೆ ನಿಮ್ಮ ಮೇಲೆ ಅಸಮಾಧಾನವಂತೆ."

"ನಾ ಏನೂ ಅವನಿಗೆ ಅಗೌರವ ರೀತಿಯಲ್ಲಿ ಮಾತನಾಡಲಿಲ್ಲ. ಸುಮಾರು ಒಂದು ತಿಂಗಳ ಹಿಂದೆ ನನಗೆ ಶಂಕರ ಟೆಲಿಫೋನ್ ಮಾಡಿದ್ದ. ಕ್ರಾಂತಿಸೇನೆಯವರೂ, ಆಡಳಿತ ಕಾಂಗ್ರೆಸ್ಸಿನವರೂ ಒಬ್ಬರಿಗೊಬ್ಬರು ಪರಸ್ಪರ ಸಹಕರಿಸಿಕೊಂಡು ಹೋಗಬೇಕೆಂದು ಅವನು ಸೂಚಿಸಿದ. ಹಿಂಸಾಕೃತ್ಯಗಳಲ್ಲಿ ನಂಬಿಕೆ ಇರುವವರೊಡನೆ ಆಡಳಿತ ಕಾಂಗ್ರೆಸ್ ಸಹಕರಿಸಲು ಸಾಧ್ಯವಿಲ್ಲವೆಂದು ಸ್ಪಷ್ಟವಾಗಿ ಹೇಳಿದೆ. ಅಷ್ಟೇ ನಡೆದದ್ದು."

"ಅದಕ್ಕೇ ನಿಮ್ಮೇಲೆ ಶಂಕರನಿಗೆ ಸ್ವಲ್ಪ ವೈಮನಸ್ಸಂತೆ. ನಿಮ್ಮ ಆಡಳಿತ ಕಾಂಗ್ರೆಸ್ ಪ್ರಾಬಲ್ಯ ಹೆಚ್ಚಾಗುತ್ತಾ ಇದೆ ಎಂಬ ಭಯವೂ ಅವನಿಗೆ ಉಂಟಾಗಿರಬೇಕು. ಏನಾದರೂ ಆಗಲಿ, ನೀವು ಅವನ ವಿಚಾರದಲ್ಲಿ ಸ್ವಲ್ಪ ಎಚ್ಚರಿಕೆಯಿಂದಿರೋದು ಮೇಲು."

"ಮಿಸ್ಟರ್ ಚಂದ್ರಹಾಸ, ಶಂಕರನ ಆಟ ನಮ್ಮ ಜಿಲ್ಲೆಯಲ್ಲಿ ನಡಿಯೋದಿಲ್ಲ."

"ಮಿಸ್ಟರ್ ಗೋಪಾಲ್, ನೀವು ತಪ್ಪು ತಿಳಿದಿದ್ದೀರಿ. ಕಾಳೀಪುರದಲ್ಲಿ ಬ್ಯಾಂಕ್ ದರೋಡೆ ಮಾಡ್ದೋರಿಗೆ ನಿಮ್ಮ ಸಿರಗೂರಿಗೆ ಬರೋಕೆ ಆಗೋದಿಲ್ವೇನು?"

ಗೋಪಾಲನೂ, ಚಂದ್ರಹಾಸನೂ ನಡೆಸುತ್ತಿದ್ದ ಸಂಭಾಷಣೆಯನ್ನು ಕೇಳುತ್ತಿದ್ದ ಸ್ವರೂಪರಾಣಿ ಚಂದ್ರಹಾಸನನ್ನು ಕುರಿತು, "ಚಂದ್ರಹಾಸ, ನೀವು ಹೇಳಿದ್ದು ಕೇಳಿದರೆ ನನಗೆ ಭಯ ಆಗ್ತಾ ಇದೆ" ಎಂದಳು.

"ಹಾಗೆ ಅಷ್ಟೊಂದೇನೂ ನೀವು ಭಯಪಡ್ಬೇಕಾದ್ದಿಲ್ಲ. ಸ್ವಲ್ಪ ಎಚ್ಚರಿಕೆಯಿಂದ ಇರ್ಬೇಕು ಅಂತ ಹೇಳ್ದೆ ಅಷ್ಟೇ. ನನ್ನ ವಿಚಾರ ಬೇರೆ. ನನಗೂ, ಶಂಕರನಿಗೂ ವೈಯಕ್ತಿಕ ದ್ವೇಷ. ಗೋಪಾಲ್ ವಿಚಾರದಲ್ಲಿ ಅಂತ ದ್ವೇಷ ಏನೂ ಇಲ್ಲ" ಎಂದು ಚಂದ್ರಹಾಸ ಸ್ವರೂಪರಾಣಿಗೆ ಸಮಾಧಾನ ಮಾಡಿದನು.

"ಒಬ್ಬರನ್ನೊಬ್ಬರು ತಿನ್ನೋ ಕಾಲ ಬಂದಿದೆ. ಕಲಿಯುಗದಾಗ ಏನೇನು ಆಗ್ತದೆ ಅಂತ ಹೇಳಿ, ಪುರಾಣದಾಗೆ ಹೇಳಿದ್ದೆಲ್ಲಾ ಈಗ ನಡೀತಾ ಇದೆ. ಸ್ವರಾಜ್ಯ ಬಂದ್ಮೇಲೆ ರಾಮರಾಜ್ಯ ಬರ್ತದೆ ಅಂತ ಗಾಂಧೀ ಮಹಾತ್ಮರು ಹೇಳ್ತಾ ಇದ್ರು. ಕಾಂಗ್ರೆಸ್‌ನವರು ರಾಮರಾಜ್ಯದ ಬದಲು ರಾವಣನ ರಾಜ್ಯ ತಂದ್ರು" ಎಂದು ಸ್ವರೂಪರಾಣಿ ನಿಟ್ಟುಸಿರು ಬಿಟ್ಟಳು.

"ಅಮ್ಮಾ, ರಾವಣನ ರಾಜ್ಯ ತಂದ ಕಾಂಗ್ರೆಸ್ಸಿನವರೆಲ್ಲಾ 'ಓ' ಕಾಂಗ್ರೆಸ್ಸಿನಾಗ ಉಳಿದು ಹೋದರು. ನಾವು 'ಆ' ಕಾಂಗ್ರೆಸ್ಸಿನೋರು ನಾವು ರಾಮರಾಜ್ಯ ತರ್ತೀವಿ. ನೋಡ್ತಾಯಿರಿ" ಎಂದು ಗೋಪಾಲ್ ನಗುತ್ತಾ ತಾಯಿಗೆ ಹೇಳಿದನು.

"ಹೂನಪ್ಪ, ರಾಮರಾಜ್ಯ ತರ್ತೀರಿ! 'ಆಡೂ ಮಕ್ಕಳ ಸಿರಿ ಅಂಗಳದಾಗ ಕಾಣ್ತದೆ' ಅಂತ ಹೇಳ್ತಾರಲ್ಲ ಹಾಗೆ ನಿಮ್ಮ 'ಆ' ಕಾಂಗ್ರೆಸ್ ಬಂಡವಾಳ ಈಗಲೇ ಗೊತ್ತಾಗ್ತದೆ. ಕಳ್ಳರ ಸಂತೇಲಿದ್ದವರು ಕೆಲವರು ಆ ಕಡೆ ಹೋದರು; ಕೆಲವರು ಈ ಕಡೆ ಬಂದರು. ಅಷ್ಟೇ ವ್ಯತ್ಯಾಸ. ಮೊದಲು ಗಾಂಧೀ ಹೆಸರು ಹೇಳ್ತಾ ಕೊಳ್ಳೇ ಹೊಡೀತಾ ಇದ್ದರು, ಇನ್ಮೇಲೆ ಇಂದಿರಾಗಾಂಧೀ ಹೆಸರು ಹೇಳ್ತಾ ಕೊಳ್ಳೆ ಹೊಡೀತಾರೆ, 'ಓ' ನೂ ಹೊಲಸು, 'ಆ' ನೂ ಹೊಲಸು."

"ಇಲ್ಲಮ್ಮಾ, ನೋಡಿ ನಾವೆಲ್ಲಾ ಸಮಮಾಡ್ತೀವಿ"

"ಸಮ ಮಾಡ್ತೀರೋ ನೆಲಸಮ ಮಾಡ್ತೀರೋ ಯಾರಿಗೆ ಗೊತ್ತು. ಗಂಟು ಕಳ್ಳರೆಲ್ಲಾ ನಿಮ್ಮ ಪಾರ್ಟೀಗೆ ಸೇರಿಕೊಂಡು, ದೊಡ್ಡ ದೊಡ್ಡ ಸೋಷಿಯಲಿಸ್ಟರು ಆಗ್ಯಾರೆ. ಈ ಕಳ್ಳರ ಸಂತೇಲಿ ನಿನ್ನಂತಹ ಪಬ್ಬಿಬ್ಬರು ಏನ್ಮಾಡೋಕೆ ಆಗ್ತದೆ? ನಿಂಗೆ ಈ ಹೊಲಸು ರಾಜಕಾರಣ ಬ್ಯಾಡ ಅಂದರೆ ನೀ ನನ್ನ ಮಾತು ಕೇಳ್ಬೇಕಲ್ಲ? ಅಪ್ಪ

ಮಾಡಿದ ಆಸ್ತೀಲಿ ಈ ಹಾಳು ರಾಜಕೀಯಕ್ಕೆ ಅರ್ಧ ಕಳೆದಾಯಿತು. ಇನ್ನೂ ಕಳಿ" ಎಂದು ಸ್ವರೂಪರಾಣಿ ಮಗನಿಗೆ ಹೇಳುತ್ತಿದ್ದಳು.

"ಹೌದಮ್ಮಾ, ನೀವು ಹೇಳೋದು ನಿಜ. ಆ ಕಳ್ಳರ ಸಂತೆ ಗೋಪಾಲರವರಿಗೆ ಬ್ಯಾಡ. ಅವರನ್ನ ನಮ್ಮ ಕ್ರಾಂತಿಕೂಟಕ್ಕೆ ಸೇರಿಸಿಬಿಡಿ" ಎಂದು ಚಂದ್ರಹಾಸನು ನಗುತ್ತಾ ಸ್ವರೂಪರಾಣಿಗೆ ಹೇಳಿದನು.

"ಚಂದ್ರಹಾಸ, ನಿಮಗೂ ರಾಜಕೀಯ ಬ್ಯಾಡಿತ್ತು. ನಿಮ್ಮಪ್ಪ ಗಾಂಧೀಭಕ್ತರು. ನೀವು ಕಮ್ಯೂನಿಸ್ಟಾಗಿ ಕ್ರಾಂತಿ ಮಾಡೋಕೆ ಅಂತ ಹೊರಟೀರಿ. ಕ್ರಾಂತಿ ಅಂದ್ರೆ ಹೊಡಿಯೋದು, ಬಡಿಯೋದು, ಕಡಿಯೋದು, ಕೊಲ್ಲೋದು, ಲೂಟಿ ಮಾಡೂದು, ಇದ್ದೋರಿಗೂ ಸುಖವಿಲ್ಲ; ಇಲ್ಲದೋರಿಗೂ ಸುಖವಿಲ್ಲ. ಕೆಳಗೆ ಹರಿಯೋ ನೀರು ಕೆಳಗೆ ಹರೀಬೇಕು; ಮ್ಯಾಲೆ ಹರಿಯೋ ನೀರು ಮ್ಯಾಲೆ ಹರೀಬೇಕು. ನೀವು ಕೆಳಗೆ ಹರಿಯೋ ನೀರ ಮ್ಯಾಲೆ ಹರ್ಸೋಕೆ ಹೊರಟೀರಿ. ಆಕಾಶಕ್ಕೆ ಏಣಿ ಹಾಕೋಕ್ಕೆ ಹೊರಟೀರಿ. ಕಷ್ಟಪಟ್ಟು ದುಡೀಬೇಕು ಅಂತ ಯಾರಿಗೂ ಮನಸಿಲ್ಲ. ಎಲ್ಲಾ ಕಳ್ಳ ಹೊಟ್ಟೆ ಹೊರೆಯೋಕೇ ಹೊರಟಾರೆ, ನಿಮ್ಮಂತೋರು ಜನಗಳಿಗೆ ಬುದ್ದೀ ಹೇಳೋದು ಬಿಟ್ಟು, ಹಾರೊ ಮಂಗಕ್ಕೆ ಏಣಿ ಹಾಕಿಕೊಡ್ತೀರಿ. ಪ್ರತಿದಿನ ಒಬ್ಬರನ್ನೊಬ್ಬರು ಕೊಲ್ಲೋದೇ ಆದರೆ ಸುಖ ಎಲ್ಲಿ ಬಂತು? ಶಾಂತಿ ಎಲ್ಲಿ ಬಂತು?"

"ಅಮ್ಮಾ, ನಾವು ಕ್ರಾಂತಿಕೂಟದವರು. ಕೊಲ್ಲುವ ಪಂತಕ್ಕೆ ಸೇರಿದವರಲ್ಲ. ಅನಾವಶ್ಯಕ ರಕ್ತ ಪಾತವಿಲ್ಲದೆ ಹೊಸ ಸಮಾಜ ಕಟ್ಟಬೇಕೂ ಅಂತ ನಮ್ಮ ಧ್ಯೇಯ."

"ನಮ್ಮ ಸಮಾಜ ಏನಾಗಿತ್ತು? ಇಂಗ್ಲಿಷಿನವರ ಕಾಲ್ದಾಗೆ ಸಮಾಜ ಚೆನ್ನಾಗೇ ಇತ್ತು. ನಾವೂ ಸುಖವಾಗೇ ಇದ್ವಿ, ನಿಮ್ಮಂಥವರೇ ಸಮಾಜ ಹದಗೆಡಿಸಿದವರು. ಸ್ವರಾಜ್ಯ ಬಂತಪ್ಪಾ! ಪುಂಡರು, ಪೋಕರಿಗಳು, ಲಂಚಕೋರರು, ಮೋಸಗಾರರು, ಮಂತ್ರಿಗಳಾದರು; ಮೆಂಬರುಗಳಾದರು; ದೇಶ ಈ ಸ್ಥಿತಿಗೆ ತಂದಿಟ್ಟರು. ದಿನ ಬೆಳಗಾದರೆ ಕೊಲೆ, ಲೂಟಿ, ಲಂಚಕ್ಕೆ ಮಿತೀನೇ ಇಲ್ಲ."

"ಅದನ್ನೆಲ್ಲಾ ಸರಿಪಡಿಸಬೇಕೂ ಅಂತಾನೇ ತಾನೇ ನಾವು ಕ್ರಾಂತಿಕೂಟ ಕಟ್ಟಿದ್ದು."

"ಏನು ಸರಿ ಮಾಡ್ತೀರಿ? ಬಂಗಾಳದಲ್ಲಿ, ಕೇರಳದಲ್ಲಿ ನಿಮ್ಮ ಕಮ್ಯೂನಿಸ್ಟರೇ ಅಧಿಕಾರದಲ್ಲಿ ಇದ್ರಲ್ಲ, ಏನು ಮಾಡಿದರು? ಅವರೂ ಕಾಂಗ್ರೆಸ್ಸಿನವರ ಹಾಗೆ ಮಾಡಬಾರದ್ದು ಮಾಡಿದರು. ತಮಗೆ ಆಗದೆ ಇದ್ದವರನ್ನು ಹೊಡೆಸಿದರು, ಕೊಲ್ಲಿಸಿದರು. ದುಷ್ಟ ಶಿಕ್ಷಣ, ಶಿಷ್ಟ ರಕ್ಷಣೆ ಮಾಡೊ ಬದಲು, ಶಿಷ್ಟಶಿಕ್ಷಣ, ದುಷ್ಟರಕ್ಷಣೆ ಮಾಡಿದರು. ನಿಮ್ಮ ಪಾರ್ಟಿ ಅಧಿಕಾರಕ್ಕೆ ಬಂದರೂ ಹಾಗೇ ಆಗೋದು. ನಾನೂ ಸ್ವಲ್ಪ ರಾಜಕಾರಣ ತಿಳ್ಕೊಂಡೀನಿ, ನಾ ಮಂಕುದಿಣ್ಣೆ ಅಂತಾ ತಿಳೀಬ್ಯಾಡಿ."

"ಅಯ್ಯೋ ನಾ ನಿಮ್ಮ ವಿಚಾರದಲ್ಲಿ ಹಾಗೆ ತಿಳಿಯೋಕೆ ಕಾರಣವೇ ಇಲ್ಲ."

"ಮಿ॥ ಚಂದ್ರಹಾಸ್, ನಮ್ಮಮ್ಮನ್ನ ಸುಲಭವಾಗಿ ಮಾತಿನಲ್ಲಿ ಸೋಲಿಸಲಾರ್ರಿ" ಎಂದು ಗೋಪಾಲ್ ನಗುತ್ತಾ ಚಂದ್ರಹಾಸನ ಕಡೆಗೆ ನೋಡಿದನು.

"ಅವರು ನಿಮ್ಮ ಅಮ್ಮ ಅಲ್ವೆ?"

"ನಮ್ಮಮ್ಮ ಗಾಂಧೀಜಿ ಕಾಲ್ದಾಗೆ ಸತ್ಯಾಗ್ರಹ ಮಾಡಿ ಆರು ತಿಂಗಳು ಜೈಲಾಗಿದ್ರು. ನಮ್ಮಪ್ಪ ಎರಡು ವರ್ಷ ಜೈಲಾಗಿದ್ರು" ಎಂದು ಗೋಪಾಲ್ ಹೇಳಿದ.

ಅಷ್ಟು ಹೊತ್ತಿಗೆ ಚಂಚಲೆ "ಏಳಿ, ಕೈ ತೊಳೆಯಿರಿ. ಬಹಳ ಹೊತ್ತಾತು. ಬಹಳ ದಣಿದಿದ್ದೀರಿ. ರೆಸ್ಟ್ ತಗೋಳಿ. ಸಾಯಂಕಾಲ ಬೇಕಾದರೆ ಮಾತಾಡಬಹುದು" ಎಂದು ಹೇಳಿದಳು. ಎಲ್ಲರೂ ಎದ್ದು ಕೈ ಬಾಯಿಗಳನ್ನು ತೊಳೆದುಕೊಂಡು ಅವರವರ ಕೊಠಡಿಗಳಿಗೆ ಹೋದರು.

ಸಾಯಂಕಾಲದ ಹೊತ್ತು, ಗೋಪಾಲನು ಚಂದ್ರಹಾಸನನ್ನೂ, ಕಿಶೋರನನ್ನೂ ತನ್ನ ಮನೆಯ ಹಿಂದುಗಡೆ ಇದ್ದ ತನ್ನ ವ್ಯವಸಾಯದ ಭೂಮಿಯನ್ನು ತೋರಿಸಲಿಕ್ಕಾಗಿ, ಕರೆದುಕೊಂಡು ಹೋದನು. ಮನೆಯ ಹಿಂಭಾಗ ಸುಮಾರು ನೂರು ಎಕರೆ ಭೂಪ್ರದೇಶ ಗೋಪಾಲನಗೆ ಸೇರಿದ್ದಾಗಿತ್ತು. ಅರೆವಾಸಿ ಭೂಮಿ ಅವನ ಗೇಣಿದಾರರ ಸಾಗುವಳಿಯಲ್ಲಿತ್ತು. ಉಳಿದ ಅರೆವಾಸಿ ಭೂಮಿ ಅವನೇ ಸ್ವಂತವಾಗಿ ಸಾಗುವಳಿ ಮಾಡಿಸುತ್ತಿದ್ದನು. ಗೋಪಾಲನು ಅತ್ಯಾಧುನಿಕ ರೀತಿಯಲ್ಲಿ ವ್ಯವಸಾಯ ಮಾಡುತ್ತಿರುವ ಕೃಷಿ ಪಂಡಿತನೆಂದು ಸಿರಗೂರು ಜಿಲ್ಲೆಯಲ್ಲಿ ಹೆಸರುವಾಸಿಯಾಗಿದ್ದನು. ಜಮೀನಿನ ಮಧ್ಯೆ ಇದ್ದ ತೋಟವು ಗೋಪಾಲನ ಸ್ವಂತ ಸಾಗುವಳಿಯಲ್ಲಿತ್ತು.

ಮೂವರೂ ತೋಟಕ್ಕೆ ಹೋಗುವ ಹಾದಿಯನ್ನು ಹಿಡಿದು ಹೋಗುತ್ತಿರುವಾಗ, ಆಗತಾನೆ ಕೆಲಸದಿಂದ ವಾಪಾಸು ಮನೆಗಳಿಗೆ ಹೋಗುತ್ತಿದ್ದ ಕೂಲಿಗಾರರು ಅವರನ್ನು ಕುತೂಹಲದಿಂದ ನೋಡುತ್ತಿದ್ದರು. ಗೋಪಾಲನು ಮೇಸ್ತ್ರಿಯನ್ನು ಕರೆದು ಆದಿನ ನಡೆದ ಕೆಲಸ ಕಾರ್ಯಗಳ ವಿವರಗಳನ್ನು ಕೇಳುತ್ತಿದ್ದನು. ಐದಾರು ಜನರಿಂದ ಕೂಡಿದ್ದ ಒಂದು ತಂಡದ ಕೂಲಿಗಾರರು, ಪ್ರತ್ಯೇಕವಾಗಿ ಒಂದುಕಡೆ ನಿಂತು, ಚಂದ್ರಹಾಸನ ಮತ್ತು ಕಿಶೋರನ ಕಡೆಗೆ ಕೈತೋರಿಸಿ, ಏನೋ ಪರಸ್ಪರ ಪಿಸು ಮಾತುಗಳನ್ನಾಡುತ್ತಿದ್ದರು. ಚಾಣಾಕ್ಷನಾದ ಕಿಶೋರನು ಆ ತಂಡದವರು ಕ್ರಾಂತಿಸೇನೆಗೆ ಸೇರಿದವರೆಂದೂ, ಅವರು ತನ್ನನ್ನೂ, ಚಂದ್ರಹಾಸನನ್ನೂ ಗುರುತಿಸಿರಬೇಕೆಂದೂ ಊಹಿಸಿದ್ದನು.

ಮೂವರೂ ತೋಟದ ಸಮೀಪ ಹೋಗುತ್ತಿದ್ದಾಗ ಚಂದ್ರಹಾಸನು ಎರಡು ಸಾಲಾಗಿ ಕಾಣುತ್ತಿದ್ದ ಮನೆಗಳ ಕಡೆಗೆ ಕೈ ತೋರಿಸಿ "ಅವೇನು ಕಟ್ಟಡಗಳು?"ಎಂದು ಗೋಪಾಲನನ್ನು ಪ್ರಶ್ನಿಸಿದನು.

"ಈ ಕಡೆಯ ಸಾಲಿನಲ್ಲಿರುವ ಮನೆಗಳು ಗೇಣಿದಾರರ ಮನೆಗಳು. ಆ ಕಡೆಯ ಸಾಲಿನಲ್ಲಿರುವ ಮನೆಗಳು ಕೂಲಿಗಾರರ ಮನೆಗಳು."

"ಮನೆಗಳು ಬಹಳ ಸೊಗಸಾಗಿವೆ ಮಿ॥ ಗೋಪಾಲ್. ಎಲೆಕ್ಟ್ರಿಸಿಟಿ ಬೇರೆ ಇದೆ. ನೀವು ಕಟ್ಟಿದ್ದೋ ಅವರೇ ಕಟ್ಟಿಸಿಕೊಂಡಿದ್ದೋ"

"ಹೂ, ಅವರು ಕಟ್ಟಿಸಿಕೊಳ್ತಾರೆ! ನಾನೇ ನನ್ನ ಸ್ವಂತ ಹಣದಿಂದ ಕಟ್ಟಿಸಿಕೊಟ್ಟಿದ್ದು. ಅಲ್ಲಿ ನೋಡಿ, ಅವರಿಗಾಗಿ ಮೂರು ಬಾವಿಗಳನ್ನು ತೋಡಿಸಿದ್ದೇನೆ. ಆ ಕಡೆ ಕೊನೆಯಲ್ಲಿ ಕಾಣುತ್ತಿರುವುದು ನಾನು ಕಟ್ಟಿಸಿಕೊಟ್ಟ ಸ್ಕೂಲ್ ಕಟ್ಟಡ."

"ನೀವೊಬ್ಬ ಆದರ್ಶ ಭೂಮಾಲೀಕರು."

"ಆದರೆ ಏನು ಪ್ರಯೋಜನ? ಅವರು ಈ ಸೌಕರ್ಯಗಳನ್ನು ಉಪಯೋಗಿಸಿ ಕೊಂಡಿದ್ದರೆ ನನಗೆ ತೃಪ್ತಿಯಾಗುತ್ತಿತ್ತು. ಗೇಣಿದಾರರ ಮತ್ತು ಕೂಲಿಗಾರರ ಮಕ್ಕಳು ವಿದ್ಯಾವಂತರಾಬೇಕೆಂಬ ದೃಷ್ಟಿಯಿಂದ ಸ್ಕೂಲನ್ನು ಕಟ್ಟಿಸಿಕೊಟ್ಟೆ; ಆದರೆ ಅವರು ಮಕ್ಕಳನ್ನು ಸ್ಕೂಲಿಗೆ ಕಳಿಸದೆ ಹೋದ್ದರಿಂದ ಸ್ಕೂಲನ್ನು ಮುಚ್ಚಬೇಕಾಗಿ ಬಂತು. ಅನಕ್ಷರಸ್ಥ ವಯಸ್ಕರಿಗೆ ಅಕ್ಷರಾಭ್ಯಾಸ ಮಾಡಿಸಬೇಕೆಂದು ರಾತ್ರಿಯ ಹೊತ್ತು ನಾನೇ ಬಂದು ಅವರಿಗೆ ಅಕ್ಷರಾಭ್ಯಾಸ ಮಾಡಿಸಲು ಪ್ರಯತ್ನಪಟ್ಟೆ. ಒಂದು ವಾರ, ಹಾಗೂ ಹೀಗೂ ಕೆಲವರು ನನ್ನ ಹೆದರಿಕೆಗಾಗಿ ಅಕ್ಷರಾಭ್ಯಾಸಕ್ಕಾಗಿ ಬಂದರು. ಆಮೇಲೆ, ನಾನು ಈ ಕಡೆ ಬರುವುದರೊಳಗಾಗಿ ಅವರು ಆ ಕಡೆ ಸಾರಾಯಿ ಕುಡಿಯಲು ಪೇಟೆಗೆ ಹೋಗುತ್ತಿದ್ದರು. ಅವರನ್ನು ತಿದ್ದಬೇಕೆಂದು ನಾನು ಮಾಡಿದ ಪ್ರಯತ್ನವೆಲ್ಲಾ ನೀರಿನಲ್ಲಿ ಹೊಮ ಮಾಡಿದ ಹಾಗಾಯಿತು. ಕೆಲವರೇನೋ ನೆಮ್ಮದಿಯಿಂದ ಇದ್ದಾರೆ. ಉಳಿದವರೆಲ್ಲಾ ತಮ್ಮ ಸಂಪಾದನೆಯನ್ನೆಲ್ಲಾ ಸಾರಾಯಿ ಅಂಗಡಿಗೆ ಸುರಿಯುತ್ತಾರೆ. ಕುಡುಕರ ಹೆಂಡಿರು ಮಕ್ಕಳ ಬಾಳು ನರಕಮಯ."

"ಬಹುಶಃ ಬಡತನದಿಂದ ನಿರಾಸೆ ಹೊಂದಿ ದುಶ್ಚಟಗಳಿಗೆ ಬೀಳುತ್ತಾರೆಂದು ಕಾಣುತ್ತದೆ."

"ಮಿ॥ ಚಂದ್ರಹಾಸ, ಅದನ್ನು ನಾನು ಒಪ್ಪಲಾರೆ. ನನ್ನ ಗೇಣಿದಾರರು ಕೊಟ್ಟಷ್ಟು ಗೇಣಿಯನ್ನು ನಾನು ತೆಗೆದುಕೊಳ್ಳುತ್ತೇನೆ. ನನ್ನ ಕೂಲಿಗಾರರಿಗೆ ಎಲ್ಲರೂ ಕೊಡುವುದಕ್ಕಿಂತ ಹೆಚ್ಚು ಕೂಲಿಯನ್ನು ನಾನು ಕೊಡುತ್ತೇನೆ. ಗೇಣಿದಾರರಿಗೆ ಅವರವರು ಸಾಗುವಳಿ ಮಾಡುತ್ತಿರುವ ಭೂಮಿಯನ್ನು ಅವರವರಿಗೇ ಮುಫತ್ತಾಗಿ ಕೊಡಬೇಕೆಂದು ತೀರ್ಮಾನ ಮಾಡಿದ್ದೇನೆ. ಚಂಚಲೆಯೂ ಒಪ್ಪಿದ್ದಾಳೆ. ಆದರೆ ಕೈಗೆ ಸಿಕ್ಕಿದ್ದನ್ನು ಮಾರಾಟಮಾಡಿ, ಹೆಂಡ ಕುಡಿಯುವ ಈ ಜನ ನಾನು ಕೊಡುವ ಭೂಮಿಯನ್ನು ಇಟ್ಟುಕೊಳ್ಳುತ್ತಾರೆಯೇ ಎಂಬುದು ನನಗೆ ದೊಡ್ಡ ಸಂಶಯ. ಒಂದೊಂದು ದಿನ ರಾತ್ರಿವೇಳೆ ಕುಡಿದು ಬಂದವರು ಒಬ್ಬರಿಗೊಬ್ಬರು ಹೊಡೆದಾಡಿ ಗುಲ್ಲೆಬ್ಬಿಸುತ್ತಾರೆ. ಅನೇಕ ಸಾರಿ ರಾತ್ರಿವೇಳೆ ಜಗಳ ಪರಿಹಾರಕ್ಕೆ ನಾನೇ ಇಲ್ಲಿಗೆ ಬರಬೇಕಾಗುತ್ತದೆ. ಈ ದೇಶದಲ್ಲಿ ಶ್ರೀಮಂತರಲ್ಲಿ ಕೆಲವರ ದುರಾಸೆಗೆ ಮಿತಿಯೇ ಇಲ್ಲವಾದರೆ, ಬಡವರಲ್ಲಿ ಕೆಲವರಿಗೆ ಮನುಷ್ಯರಾಗಿ ಬದುಕಬೇಕೆಂಬ ಹಂಬಲವೇ ಇಲ್ಲ."

"ಗೋಪಾಲ್, ನೀವು ರಾತ್ರಿಯವೇಳೆ ಇಲ್ಲಿಗೆ ಒಬ್ಬರೇ ಬರುವುದು ಕ್ಷೇಮವಲ್ಲ. ಶಂಕರನ ಗೂಢಚಾರರು ಕೆಲವರು ಇಲ್ಲಿರುವಂತೆ ನನಗೆ ತೋರುತ್ತದೆ" ಎಂದು ಕಿಶೋರ್ ಹೇಳಿದನು.

"ಕಿಶೋರ್, ನಿಮಗೆ ಶಂಕರ ಸಿಂಹಸ್ವಪ್ನವಾಗಿದ್ದಾನೆ. ನಿಮ್ಮ ಕಣ್ಣಿಗೆ ಅವನ ಕಡೆಯವರೇ ಎಲ್ಲೆಲ್ಲೂ ಕಾಣುತ್ತಾರೆ. ಇಲ್ಲಿ ಬೇರೆ ರಾಜಕೀಯ ಪಕ್ಷಗಳ ಪ್ರವೇಶಕ್ಕೆ ಅವಕಾಶವಿಲ್ಲ. ಹಾಗೇನಾದ್ರೂ ಇದ್ರೆ ನಮ್ಮ ಮೇಸ್ತ್ರಿ ನನಗೆ ತಿಳಿಸುತ್ತಿದ್ದ. ಅವನು ಪಕ್ಕಾ ಕಾಂಗ್ರೆಸ್. ನಾನು ನಮ್ಮ ಕೂಲಿಯವರಿಗೆ ಏನು ಕಡಿಮೆ ಮಾಡಿದ್ದೇನೆ?"

"ನಿಮ್ಮ ಕೂಲಿಯವರಿಗೆ ನೀವು ಮಾಡಿರುವುದು ಮುಖ್ಯವಲ್ಲ. ಅದರಿಂದ ಅವರ ಮನಸ್ಸು ಎಷ್ಟು ತೃಪ್ತಿ ಹೊಂದಿದೆ ಎಂಬುದು ಮುಖ್ಯ. ಶಂಕರನ ಕಡೆಯವರು ನಿಮ್ಮ ಮೇಸ್ತ್ರಿಯ ಕಣ್ಣಿಗೂ ಮಣ್ಣೆರಚಬಲ್ಲರು; ನಿಮ್ಮ ಕಣ್ಣಿಗೂ ಮಣ್ಣೆರಚಬಲ್ಲರು. ಕ್ರಾಂತಿಸೇನೆಯವರು ಎಲ್ಲಿದ್ದಾರೆ, ಎಲ್ಲಿಲ್ಲ ಎಂದು ಹೇಳುವುದು ಕಷ್ಟ. ಅಂತೂ ನೀವು ಎಚ್ಚರಿಕೆಯಿಂದಿರುವುದು ಮೇಲು" ಎಂದು ಕಿಶೋರ್ ಗೋಪಾಲನಿಗೆ ಮುನ್ನೆಚ್ಚರಿಕೆ ಇತ್ತನು.

ತೋಟಕ್ಕೆ ಹೋದನಂತರ ಮೂವರೂ ಅಲ್ಲಿ ಹಾಕಿದ್ದ ಶಿಲಾಸನಗಳ ಮೇಲೆ ಕುಳಿತುಕೊಂಡು, ಮಾತುಕತೆಗಳಲ್ಲಿ ತೊಡಗಿದ್ದರು. ಸಾಯಂಕಾಲದ ಹವಾ ಹಿತಕರವಾಗಿತ್ತು. ವಿವಿಧ ಫಲವೃಕ್ಷಗಳಿಂದ ಕೂಡಿದ್ದ ತೋಟವು ನಂದನವನದಂತಿತ್ತು. ಮೊದಲು ಭೂ ಸಮಸ್ಯೆ ಮತ್ತು ಕೂಲಿಗಾರರ ಸಮಸ್ಯೆಗಳ ವಿಚಾರದಲ್ಲಿ ಮಾತುಕತೆ ನಡೆದಿತ್ತು. ಆ ನಂತರ ರಾಜಕಾರಣದ ವಿಚಾರದಲ್ಲಿ ಮಾತುಕತೆ ಆರಂಭವಾಯಿತು. ಚಂದ್ರಹಾಸನನ್ನೂ, ಕಿಶೋರನನ್ನೂ ಆಡಳಿತ ಕಾಂಗ್ರೆಸ್ಸಿಗೆ ಸೇರುವಂತೆ ಮಾಡಬೇಕೆಂಬುದು ಗೋಪಾಲನ ಉದ್ದೇಶವಾಗಿತ್ತು. ಗೋಪಾಲನು ಕ್ರಾಂತಿಕೂಟಕ್ಕೆ ಸೇರುವುದು ಅಸಂಭವ ಎಂದು ತೋರಿದ್ದರೂ, ಚಂದ್ರಹಾಸ ಕಿಶೋರರು ಅವನ ಲಗುಬಿಗುಗಳನ್ನು ಪರೀಕ್ಷಿಸಬೇಕೆಂದು ಯೋಚಿಸುತ್ತಿದ್ದರು. ಮಾತಿನ ಮಧ್ಯೆ ಗೋಪಾಲನು, ಚಂದ್ರಹಾಸ ಮತ್ತು ಕಿಶೋರರನ್ನು ಕುರಿತು, "ನಿಮ್ಮ ಕ್ರಾಂತಿಕೂಟ ಬಹಳ ಸಣ್ಣ ಪಕ್ಷ. ಅದು ಆಡಳಿತ ಕಾಂಗ್ರೆಸ್ಸಿನಲ್ಲಿ ವಿಲೀನವಾದರೆ ಕ್ರಾಂತಿಸೇನೆಯನ್ನು ಹೇಳ ಹೆಸರಿಲ್ಲದಂತೆ ಮಾಡಬಹುದು" ಎಂದನು.

"ಕ್ರಾಂತಿಕೂಟ ಇಲ್ಲದಿದ್ದರೆ, ಈ ಪ್ರದೇಶದ ಜನರು ಬದುಕುವುದೇ ಕಷ್ಟವಾಗಿರುತ್ತಿತ್ತು. ಇಷ್ಟರೊಳಗಾಗಿ ನಿಮ್ಮ ಕಾಂಗ್ರೆಸ್ಸಿನವರೂ ಕೂಡ ಹೆಸರಿಲ್ಲದೆ ಹೋಗುತ್ತಿದ್ದರು. ಮುಳ್ಳನ್ನು ಮುಳ್ಳಿನಿಂದ ತೆಗೆಯಬೇಕೇ ಹೊರತು, ನಿಮ್ಮ ಕಾಂಗ್ರೆಸ್ಸಿನ ಒಣ ವೇದಾಂತದ ಮಾತುಗಳಿಂದ ಕ್ರಾಂತಿಸೇನೆಯ ಹತ್ಯಾಕಾಂಡವನ್ನು ನಿಲ್ಲಿಸಲಾಗುವುದಿಲ್ಲ. ನೀವೆಲ್ಲರೂ ನಮ್ಮ ಕೂಟಕ್ಕೆ ಸೇರಿದರೆ ಕೆಲವು ತಿಂಗಳೊಳಗಾಗಿ ಕ್ರಾಂತಿಸೇನೆಯ ಹೆಸರಿಲ್ಲದಂತೆ ಮಾಡಬಹುದು" ಎಂದು ಚಂದ್ರಹಾಸ ಹೇಳಿದನು.

"ಚೆನ್ನಾಗಿದೆ! ನಾನೇ ನಿಮ್ಮನ್ನು ನಮ್ಮ ಪಾರ್ಟಿಗೆ ಸೇರಿಸಬೇಕೆಂದು ಯೋಚಿಸುತ್ತಿದ್ದರೆ, ನೀವು ನನ್ನನ್ನು ನಿಮ್ಮ ಪಾರ್ಟಿಗೆ ಆಹ್ವಾನಿಸುತ್ತಿದ್ದೀರಿ. ಈ ರಾಜ್ಯದ ಹಿತದೃಷ್ಟಿಯಿಂದ ಮತ್ತು ನಿಮ್ಮ ಹಿತದೃಷ್ಟಿಯಿಂದ ನೀವು ಆಡಳಿತ ಕಾಂಗ್ರೆಸ್ಸಿಗೆ ಸೇರುವುದು ಕ್ಷೇಮ."

"ನಮ್ಮಲ್ಲಿ ಒಂದು ಗಾದೆ ಹೇಳ್ತಾರೆ. 'ಎಲ್ಲಾ ಬಿಟ್ಟು ಮಗ ಭಂಗಿ ನೆಟ್ಟ' ಅಂತ, ಎಲ್ಲಾ ಬಿಟ್ಟು ನಿಮ್ಮ ಪಾರ್ಟಿಗೆ ಸೇರಿದರೆ ಭಂಗಿ ನೆಟ್ಟಂತೆ ಆಗುತ್ತದೆ. ನಿಮ್ಮ ಪಾರ್ಟಿಯಲ್ಲಿ

ನಿಮ್ಮಂತ ನಿಷ್ಠಾವಂತ ಪ್ರಾಮಾಣಿಕ ವ್ಯಕ್ತಿಗಳು ಶೇಕಡ ಇಪ್ಪತ್ತರಷ್ಟು ಸಹ ಇಲ್ಲ. ನಿಮ್ಮ ಪಾರ್ಟಿ ಸಮಯ ಸಾಧಕರ, ಸ್ವಾರ್ಥಸಾಧಕರ ಕೂಟವಾಗಿದೆ. ಸಹಕಾರಿ ಕ್ಷೇತ್ರದಲ್ಲಿ ಕದ್ದು ಮೇಯ್ದು ಕೊಬ್ಬಿರುವವರು, ಶಾಸಕರಾಗಿ ಕಳ್ಳಗಂಟು ಮಾಡಿದವರು, ಮಂತ್ರಿಗಳಾಗಿ ಹಡಗು ನುಂಗಿದವರು, ಮೂರೂ ಬಿಟ್ಟವರು, ಸೋಷಿಯಲಿಸ್ಟ್‌ತತ್ತ್ವ ಹೇಳಿದ್ದೇ ಹೇಳಿದ್ದು! ನಿಮ್ಮ ಮುಖಂಡರನೇಕರಿಗೆ ಸ್ವಕಾರ್ಯ, ರಾಜಕಾರ್ಯಗಳಿಗೆ ಕಳ್ಳ ಸಂಪಾದನೆಯ ಕಳ್ಳ ಶ್ರೀಮಂತರ ಕಳ್ಳ ಕಾಣಿಕೆಯೇ ಬೇಕು."

"ಚಂದ್ರಹಾಸ, ನಮ್ಮ ಪಾರ್ಟಿಗಿಂತ ಉತ್ತಮ ಪಾರ್ಟಿ ಈ ದೇಶದಲ್ಲೆಲ್ಲಿದೆ ತೋರಿಸಿ?"

"ಉತ್ತಮ ಪಾರ್ಟಿ ಇಲ್ಲದಿದ್ದರೆ ನಿಮ್ಮಂತಹ ಉತ್ತಮರೆಲ್ಲಾ ಸೇರಿ ಉತ್ತಮ ಪಾರ್ಟಿಯನ್ನು ಕಟ್ಟಬೇಕು."

"ಅಂದ್ರೆ ನಾನೂ ನಿಮ್ಮಂತೆ ಕಮ್ಯೂನಿಸ್ಟ್ ಆಗಬೇಕು ಅಂತ ನಿಮ್ಮ ಅಭಿಪ್ರಾಯ ಅಲ್ಲವೇ?"

"ಯಾಕೆ ಆಗಬಾರದು ಅಂತ ನಿಮ್ಮನ್ನ ಕೇಳ್ತೀನಿ ಗೋಪಾಲ್."

"ಚಂದ್ರಹಾಸ್, ನೀವು ಬೇಜಾರಾಗದಿದ್ದರೆ ಒಂದೆರಡು ಮಾತು ಹೇಳಬೇಕು ಅಂತ ಇದ್ದೀನೀ."

"ಬೇಜಾರ‍್ಯಾಕೆ; ಒಂದೆರಡು ಬಿಟ್ಟು ಎಂಟ್ಹತ್ತು ಹೇಳಿ."

"ನೀವು ಸತ್ಯವಂತರು, ನಿಮ್ಮ ತಂದೆ ಸಂಪೂರ್ಣ ಅಹಿಂಸಾವಾದಿಗಳು. ಅಂತಹವರ ಮಗನಾಗಿ ನೀವು ಕಮ್ಯೂನಿಸ್ಟಾಗಿದ್ದು ಶೋಚನೀಯ. ಕಮ್ಯೂನಿಸಂ ಎಂದರೆ ರಕ್ತಪಾತ. ರಕ್ತಪಾತವಾದ ಮೇಲೆ ಸರ್ವಾಧಿಕಾರ. ಸರ್ವಾಧಿಕಾರವೆಂದರೆ ಜನಸಾಮಾನ್ಯರ ಗುಲಾಮಗಿರಿ. ಕಮ್ಯೂನಿಸಂ ಬಂದರೆ ಬಂಡವಾಳಗಾರ ವರ್ಗದ ಬದಲು ಆಳುವ ಬುಷ್ವಾಗಳ ಹೊಸವರ್ಗ ಉದಯವಾಗುತ್ತದೆ.

"ನೀವು ಕಾರ್ಲ್‌ಮಾರ್ಕ್ಸ್‌ನ ಸಿದ್ಧಾಂತವನ್ನು ಸರಿಯಾಗಿ ತಿಳಿದುಕೊಂಡಿಲ್ಲವೆಂದು ತೋರುತ್ತದೆ."

"ಚೆನ್ನಾಗಿ ತಿಳಿದುಕೊಂಡಿದ್ದೇನೆ. ಬುದ್ಧ, ಏಸುಕ್ರಿಸ್ತ, ಮಹಾತ್ಮಾಗಾಂಧೀ ಮುಂತಾದ ಮಹಾಪುರುಷರು ಸತ್ಯ, ತ್ಯಾಗ, ಮಾನವೀಯತೆ, ಪ್ರೇಮ, ಅಹಿಂಸೆ ಇವುಗಳ ಆಧಾರದ ಮೇಲೆ ಮಾನವ ಸಮಾಜ ನಿರ್ಮಾಣವಾಗಬೇಕೆಂದು ಬೋಧಿಸಿದರು. ಕಾರ್ಲ್‌ಮಾರ್ಕ್ಸ್ ಕುತಂತ್ರ, ದ್ವೇಷ, ಹಿಂಸೆ, ಕ್ರೌರ್ಯ, ರಕ್ತಪಾತ ಇವುಗಳ ಅಧಾರದ ಮೇಲೆ ಹೊಸ ಸಮಾಜ ನಿರ್ಮಾಣವಾಗಬೇಕೆಂದು ಸಾರಿದನು. ಪ್ರೇಮ, ತ್ಯಾಗ, ಅಹಿಂಸೆಗಳು ಶ್ರೇಷ್ಠವೋ? ದ್ವೇಷ, ಹಿಂಸೆ, ರಕ್ತಪಾತಗಳು ಶ್ರೇಷ್ಠವೋ? ನೀವೇ ಯೋಚಿಸಿ."

"ಕಮ್ಯೂನಿಸ್ಟರು ಹಿಂಸೆಯ ಆರಾಧಕರಲ್ಲ. ಹಿಂಸೆ ರಕ್ತಪಾತಗಳಿಲ್ಲದೆ ಶಾಂತಿಯುತವಾದ ರೀತಿನೀತಿಗಳಿಂದ ಕಮ್ಯೂನಿಸ್ಟ್ ಸಮಾಜವನ್ನು ಸ್ಥಾಪಿಸಲು ಸಾಧ್ಯ ಎಂಬುದನ್ನು ಕಾರ್ಲ್‌ಮಾರ್ಕ್ಸ್ ಹೇಳಿಲ್ಲವೇನು? ಬಂಡವಾಳಗಾರರ ಪ್ರಭುತ್ವವನ್ನು

ಕ್ರಾಂತಿಯಿಂದ ಕೆಳಗುರುಳಿಸಿ, ಬಡವಬಲ್ಲಿದರೆಂಬ ಭೇದವಿಲ್ಲದೆ, ಮೇಲುಕೀಳೆಂಬ ಭೇದವಿಲ್ಲದೆ, ಆಳುವವರು ಆಳಿಸಿಕೊಳ್ಳುವವರು ಎಂಬ ಭೇದವಿಲ್ಲದೆ, ಸರ್ಕಾರದ ಅಂಕೆ ಆತಂಕಗಳಿಲ್ಲದೆ, ಎಲ್ಲರೂ ಸರಿಸಮಾನರಾಗಿ ಸೌಹಾರ್ದದಿಂದ ಬಾಳಲನುಕೂಲ ವಾದ ಸಮಾಜವನ್ನು ಸೃಷ್ಟಿಸುವುದೇ ಕಮ್ಯೂನಿಸಂ ಗುರಿ."

"ಮಿಸ್ಟರ್ ಚಂದ್ರಹಾಸ, ಅಂತಹ ಸಮಾಜ ಜಗತ್ತಿನಲ್ಲಿ ಎಲ್ಲಿದೆ ಹೇಳಿ? ಕೆಲವು ರಾಷ್ಟ್ರಗಳಲ್ಲಿ ಕಮ್ಯೂನಿಸಂ ಹೆಸರಿನಲ್ಲಿ ಏಕೈಕ ವ್ಯಕ್ತಿಗಳ ಸರ್ವಾಧಿಕಾರವಿದ್ದರೆ, ಕೆಲವು ರಾಷ್ಟ್ರಗಳಲ್ಲಿ ಆಳುವ ವರ್ಗದ ಮುಖಂಡರು, ಕಮ್ಯೂನಿಸಂ ಹೆಸರಿನಲ್ಲಿ ಸರ್ವಾಧಿಕಾರ ನಡೆಸುತ್ತಿದ್ದಾರೆ. ಅಧಿಕಾರದಲ್ಲಿರುವ ಕಮ್ಯೂನಿಸ್ಟರು, ತಮ್ಮ ಅಧಿಕಾರವನ್ನು ಉಳಿಸಿಕೊಳ್ಳುವ ಸಲುವಾಗಿ, ತಮಗೆ ವಿರೋಧವಾಗಿರುವವರೆಲ್ಲರನ್ನೂ ಪ್ರತಿಗಾಮಿಗಳೆಂದು ಕರೆದು ಅವರ ರುಂಡಗಳನ್ನು ಚೆಂಡಾಡುತ್ತಾರೆ. ಜನಸಾಮಾನ್ಯರು ಸರ್ವಾಧಿಕಾರಿಗಳ ಗುಲಾಮರಾಗಿದ್ದಾರೆ. ಕೆಲವು ರಾಷ್ಟ್ರಗಳಲ್ಲಿ ಕಾರ್ಲ್‌ಮಾರ್ಕ್ಸ್‌ನ ಭಕ್ತರಾದ ಕಮ್ಯೂನಿಸ್ಟರು ದ್ವೇಷ ಅಸೂಯೆಗಳ, ಕುತಂತ್ರ ಕ್ರೌರ್ಯಗಳ ಚಂಡ ಮಾರುತವನ್ನೆಬ್ಬಿಸಿ, ನೆತ್ತರುಕೋಡಿಯನ್ನು ಹರಿಸುತ್ತಿದ್ದಾರೆ. ಮಾನವ ನಾಗರೀಕತೆ ಈ ಚಂಡ ಮಾರುತಕ್ಕೆ ಸಿಕ್ಕಿ ತಲ್ಲಣಿಸುತ್ತಾ ಇದೆ. ಕಾರ್ಲ್‌ಮಾರ್ಕ್ಸ್‌ನ ಕಲ್ಪನೆಯ ಕಮ್ಯೂನಿಸ್ಟ್ ಸಮಾಜ ಇನ್ನೂ ಬಹುದೂರದ ಕನಸಾಗಿಯೇ ಉಳಿದಿದೆ ಚಂದ್ರಹಾಸ. ನನ್ನ ದೃಷ್ಟಿಯಲ್ಲಿ ಪ್ರಜಾಪ್ರಭುತ್ವವೇ ಶ್ರೇಷ್ಠಮಾರ್ಗ."

"ಹೌದು ಹೌದು. ಪ್ರಜಾಪ್ರಭುತ್ವದ ಹೆಸರಿನಲ್ಲಿ ಬಡಬಗ್ಗರ ಓಟನ್ನು ಕೊಂಡು, ದೇಶಸೇವೆಯ ಹೆಸರಿನಲ್ಲಿ ಸ್ವಾರ್ಥಸಾಧನೆ ಮಾಡುವುದು ಶ್ರೇಷ್ಠಮಾರ್ಗ! ಶಾಸನ ಸಭೆಗಳಲ್ಲಿ ಮಾನ ಮರ್ಯಾದೆ ಬಿಟ್ಟು ಐರಾವಣ ಮೈರಾವಣರಂತೆ ಮೆಟ್ಟು ಪಾಪಾಸು ಗಳಿಂದ ಹೊಡೆದಾಡುವುದು ಶ್ರೇಷ್ಠ ಮಾರ್ಗ! ರಾಜಕಾರಣಕ್ಕಾಗಿ ಒಂದು ಜಾತಿಯನ್ನು ಇನ್ನೊಂದು ಜಾತಿಯ ಮೇಲೆ ಎತ್ತಿಕಟ್ಟುವುದು ಶ್ರೇಷ್ಠ ಮಾರ್ಗ! ಅಲ್ಲವೇ ಗೋಪಾಲ್? ಇಂದು ಈ ದೇಶದಲ್ಲಿ ಪ್ರಜಾಪ್ರಭುತ್ವದ ಹೆಸರಿನಲ್ಲಿ ನಿಮ್ಮ ಕಾಂಗ್ರೆಸ್ ಪಕ್ಷದವರು ಲಂಚದ ಪ್ರಭುತ್ವವನ್ನು ಸ್ಥಾಪಿಸಿದ್ದಾರೆ. ಒಂದುಕಡೆ ಅಧಿಕಾರಿಗಳ ಲೂಟಿ, ಇನ್ನೊಂದು ಕಡೆ ಶಾಸಕರ ಲೂಟಿ, ಮತ್ತೊಂದು ಕಡೆ ಮಂತ್ರಿಗಳ ಲೂಟಿ, ಮಗದೊಂದು ಕಡೆ ಕಳ್ಳ ಸಂಪಾದನೆಯ ಶ್ರೀಮಂತರ ಲೂಟಿ. ಈ ಲೂಟಿಯನ್ನು ಸಹಿಸಿಕೊಂಡು ದೇಶ ಇನ್ನೂ ಉಳಿದಿರುವುದೇ ಸೋಜಿಗ."

"ನಿಮ್ಮ ಎಕ್ಸ್ ಲೀಡರ್ ಶಂಕರ್ ಕಮ್ಯೂನಿಸಂ ಹೆಸರಿನಲ್ಲಿ ಸ್ವಾರ್ಥಸಾಧನೆ ಮಾಡುತ್ತಿರುವಂತೆ, ಅಲ್ಲಲ್ಲಿ ಕೆಲವರು ಪ್ರಜಾಪ್ರಭುತ್ವದ ಹೆಸರಿನಲ್ಲಿ ಸ್ವಾರ್ಥಸಾಧನೆ ಮಾಡುತ್ತಿದ್ದಾರೆ. ಊರಿದ್ದಲೆಲ್ಲಾ ಹೊಲಸು ಇದ್ದೇ ಇರುತ್ತದೆ. ಕಮ್ಯೂನಿಸ್ಟ್ ರಾಷ್ಟ್ರಗಳಲ್ಲಿ ಸ್ವಾರ್ಥಸಾಧಕರೂ, ಸಮಯಸಾಧಕರೂ ಇಲ್ಲವೇನು? ನಮ್ಮ ದೇಶದಲ್ಲಿ ನಿಜವಾದ ಕಮ್ಯೂನಿಸ್ಟರು ಎಷ್ಟು ಜನರಿದ್ದಾರೆ ನೀವೇ ಹೇಳಿ."

“ಶಂಕರನಂಥ ದುಷ್ಟ ನರರಾಕ್ಷಸರನ್ನು ಕಮ್ಯೂನಿಸ್ಟ್‌ರೆಂದು ಕರೆಯಲು ನಾನು ಸಿದ್ಧನಿಲ್ಲ. ಕಮ್ಯೂನಿಸ್ಟ್‌ರಾದವರಿಗೆ ದಯೆ, ಮಾನವೀಯತೆ, ಸತ್ಯಸಂಧತೆ ಮುಂತಾದ ಸದ್ಗುಣಗಳಿರಬೇಕು.”

“ಅಂತಹ ಸದ್ಗುಣವಂತರು ಕಮ್ಯೂನಿಸ್ಟ್‌ರಾಗಲು ಸಾಧ್ಯವೇ ಇಲ್ಲ.”

“ಅದು ನಿಮ್ಮ ತಪ್ಪುಕಲ್ಪನೆ.”

“ನೀವೊಬ್ಬರು ವಾಸ್ತವಿಕತೆಯನ್ನರಿಯದ ಸ್ವಪ್ನಜೀವಿ. ಸ್ಟಾಲಿನ್ ಒಬ್ಬನೇ ಕಮ್ಯೂನಿಸಂ ಹೆಸರಿನಲ್ಲಿ ಹತ್ತು ದಶಲಕ್ಷ ಜನರನ್ನು ಕೊಲ್ಲಿಸಿದನೆಂದು ವದಂತಿ. ಅಧಿಕಾರವನ್ನುಳಿಸಿಕೊಳ್ಳುವ ಸಲುವಾಗಿ ತಮ್ಮ ಸರ್ವಾಧಿಕಾರವನ್ನೆದುರಿಸುವ ಜನರೆಲ್ಲರನ್ನೂ ರಿವಿಜನಿಸ್ಟರೆಂದು ಸಾರಿ ಅವರನ್ನು ಕೊಲ್ಲುವುದು ಕಮ್ಯೂನಿಸ್ಟ್‌ರ ಪದ್ಧತಿ.”

“ಕೆಲವು ಕಡೆಗಳಲ್ಲಿ ಕೊಲೆಗಳಾಗಿರಬಹುದು. ಆದರೆ ಬಂಡವಾಳಗಾರರು ಅದನ್ನು ಉತ್ಪ್ರೇಕ್ಷೆ ಮಾಡುತ್ತಾರೆ, ನಿಮ್ಮಂಥವರು ಅದನ್ನು ನಂಬುತ್ತಾರೆ. ದೇಶದ ಹಿತಕ್ಕೆ ವಿರೋಧವಾಗಿರುವವರನ್ನು ಕೊಲ್ಲಿಸುವುದು ಒಮ್ಮೊಮ್ಮೆ ಅನಿವಾರ್ಯ. ನನಗೆ ಅಧಿಕಾರವಿದ್ದಿದ್ದರೆ ಲಂಚಕೋರ ರಾಜಕಾರಣಿಗಳನ್ನೂ, ಲಂಚಕೋರ ಅಧಿಕಾರಿಗಳನ್ನೂ, ಕಳ್ಳ ಸಂಪಾದನೆಯ ಶ್ರೀಮಂತರನ್ನೂ ನಿಷ್ಕರುಣೆಯಿಂದ ಕೊಲ್ಲಿಸುತ್ತಿದ್ದೆ ಅಥವಾ ಜೈಲಿಗೆ ಹಾಕುತ್ತಿದ್ದೆ. ಶಂಕರನಂತಹ ದುಷ್ಟರನ್ನು ಕೊಲ್ಲುವುದು ಅನಿವಾರ್ಯವಲ್ಲವೇ?”

“ನಾನೂ ಅದನ್ನೇ ಹೇಳುತ್ತಾ ಇದ್ದಿದ್ದು. ತಮ್ಮ ಸರ್ವಾಧಿಕಾರಕ್ಕೆ ವಿರೋಧವಾಗಿರುವವರನ್ನು ದೇಶದ್ರೋಹಿಗಳೆಂದು ಸಾರಿ ಕೊಲ್ಲಿಸುವುದು ಸುಲಭವಲ್ಲವೇ? ಅದನ್ನೇ ಸ್ಟಾಲಿನ್ ಮತ್ತು ಇತರರು ಮಾಡಿದ್ದು. ಕಮ್ಯೂನಿಸ್ಟ್ ಪ್ರಭುತ್ವಗಳ ಒಳಕೋಟೆಯಲ್ಲಿ ಏನಾಗುತ್ತದೆ ಎಂಬುದು ಯಾರಿಗೆ ಗೊತ್ತು? ದೂರದ ಬೆಟ್ಟ ನುಣ್ಣಗೆ.”

“ನಮ್ಮ ದೇಶದಲ್ಲಿ ನಮ್ಮದೇ ಆದ ಮಾರ್ಗದಲ್ಲಿ ರಕ್ತಪಾತವಿಲ್ಲದೆ ಕಾರ್ಲ್‌ಮಾರ್ಕ್ಸ್‌ರ ಸಿದ್ಧಾಂತಗಳನ್ನು ಅನುಷ್ಠಾನಕ್ಕೆ ತರುವುದು ಸಾಧ್ಯವೆಂದು ನನ್ನ ಅಭಿಪ್ರಾಯ. ಆದರೆ ರಕ್ತಪಾತವಿಲ್ಲದಿದ್ದರೂ, ಕೆಲಕಾಲ ಬಲಪ್ರಯೋಗ ಅವಶ್ಯಕವೆಂದು ನನಗನ್ನಿಸುತ್ತದೆ. ಬಲ ಪ್ರಯೊಗವಿಲ್ಲದೆ ಈ ದೇಶದ ಜನರನ್ನು ಸರಿಪಡಿಸಲು ಸಾಧ್ಯವಿಲ್ಲ. ಒಂದು ಕಡೆ ದುಷ್ಟರ ತಂಡವಾದರೆ, ಇನ್ನೊಂದು ಕಡೆ ಭ್ರಷ್ಟರ ತಂಡ. ಒಂದು ಕಡೆ ದುರಾಸೆಯ ಧನಪಿಶಾಚಿಗಳ ಹಾವಳಿಯಾದರೆ, ಇನ್ನೊಂದು ಕಡೆ ಶುದ್ಧ ಸೋಮಾರಿಗಳ ಹಿಂಡು. ಒಂದು ಕಡೆ ಮಹಾ ಮೋಸಗಾರರು; ಇನ್ನೊಂದು ಕಡೆ ಶತ ಮೂರ್ಖರು. ಹೇಳುವುದು ಒಂದು; ಮಾಡುವುದು ಇನ್ನೊಂದು. ಜಾತಿ, ಧರ್ಮ, ಭಾಷೆ ಇವುಗಳ ಹೆಸರಿನಲ್ಲಿ ಸಮಾಜವನ್ನು ವಿಚ್ಛಿದ್ರ ಗೊಳಿಸುವುದೇ ಕೆಲವರ ಉದ್ಯೋಗ. ಕಷ್ಟಪಡದೆ ಮೃಷ್ಟಾನ್ನ ಉಣ್ಣಬೇಕೆಂಬ ಹಂಬಲ ನಮಗೆ ರಕ್ತಗತವಾಗಿ ಬಂದಿರುವ ಜಾಡ್ಯ. ಅಪ್ರಮಾಣಿಕತೆ ನಮಗಂಟಿರುವ ಪಿಡುಗು. ಮಾತೆತ್ತಿದರೆ ಮುಷ್ಕರ, ದೊಂಬಿಗಳು. ಇಲ್ಲದವರ

ಗೋಳಾಟಕ್ಕಿಂತ ಇದ್ದವರ ಆರ್ಭಟವೇ ಹೆಚ್ಚು. ಇಂತಹ ಜನರನ್ನು ಕಮ್ಯೂನಿಸ್ಟ್ ಸರ್ವಾಧಿಕಾರದಿಂದ ತಿದ್ದಲು ಸಾಧ್ಯವೇ ಹೊರತು ಒಣ ಘೋಷಣೆಗಳಿಂದ ಸಾಧ್ಯವಿಲ್ಲ."

"ಜನರು ವಿದ್ಯಾವಂತರಾಗಿ, ಸುಸಂಸ್ಕೃತರಾಗದಿದ್ದರೆ, ಈ ದೇಶದಲ್ಲಿ ಯಾವ ಪದ್ಧತಿಯೂ ಯಶಸ್ವಿಯಾಗಲಾರದು. ಕಮ್ಯೂನಿಸಂ ಜಾರಿಗೆ ಬಂದರೆ, ಈಗ ವಿವಿಧ ಪಕ್ಷಗಳಲ್ಲಿರುವ ದುಷ್ಟರೂ, ಭ್ರಷ್ಟರೂ ಮೊದಲು ಕಮ್ಯೂನಿಸ್ಟರಾಗುತ್ತಾರೆ. ಯಾವುದಕ್ಕೂ ಹೇಸದ ಶಂಕರನಂತಹ ದುಷ್ಟರು ಕಮ್ಯೂನಿಸ್ಟ್ ಪ್ರಭುತ್ವದಲ್ಲಿ ಸರ್ವಾಧಿಕಾರಿಗಳಾದರೆ ಗತಿಯೇನು? ಪ್ರಜಾಪ್ರಭುತ್ವದಲ್ಲಿ ಲಂಚಕೋರರು ಜನರ ಹಣವನ್ನು ಅಪಹರಿಸುತ್ತಿರಬಹುದು; ಕಮ್ಯೂನಿಸ್ಟ್ ಪ್ರಭುತ್ವದಲ್ಲಿ ಶಂಕರನಂತಹವರು ಪ್ರಾಣವನ್ನು ಅಪಹರಿಸುತ್ತಾರೆ."

ಈ ದೇಶದಲ್ಲಿ ಪ್ರಜಾಪ್ರಭುತ್ವದ ಹೆಸರಿನಲ್ಲಿ ಲಂಚಕೋರ ರಾಜಕಾರಣಿಗಳೂ, ಲಂಚಕೋರ ಅಧಿಕಾರಿಗಳೂ, ಲಾಭಕೋರ ವಣಿಕವರ್ಗದವರೂ ಜನರನ್ನು ಏಕಾಏಕಿ ಕೊಲ್ಲದೆ ಅವರ ರಕ್ತವನ್ನು ಹೀರಿ ನಿಧಾನವಾಗಿ ಕೊಲ್ಲುತ್ತಿದ್ದಾರೆ. ನರಕಯಾತನೆ ಕೊಟ್ಟು ನಿಧಾನವಾಗಿ ಕೊಲ್ಲುವುದಕ್ಕಿಂತ ಒಂದೇ ಸಾರಿ ಕೊಲ್ಲುವುದು ಮೇಲಲ್ಲವೆ?"

"ನೀವು ಆಶಾಭಂಗವಾದವರಂತೆ ಮಾತಾಡುತ್ತಿದ್ದೀರಿ."

"ನನಗೆ ಆಸೆಯೇ ಇಲ್ಲ. ಆಸೆ ಇಲ್ಲದಿದ್ದಾಗ ಭಂಗವೆಲ್ಲಿ ಬಂತು? ಸರ್ವಾಧಿಕಾರವಿಲ್ಲದೆ ಈ ದೇಶದ ಸ್ಥಿತಿಗತಿಗಳನ್ನು ಸರಿಪಡಿಸಲಾಗುವುದಿಲ್ಲವೆಂದು ನನ್ನ ಅಭಿಪ್ರಾಯ."

"ಮಿಸ್ಟರ್ ಚಂದ್ರಹಾಸ, ನಿಜವಾದ ಕಮ್ಯೂನಿಸಂ ಎಲ್ಲಿದೆ ಹೇಳಿ? ಕಾರ್ಲ್‌ಮಾರ್ಕ್ಸ್‌ನ ಸಿದ್ಧಾಂತಗಳನ್ನು ಎಲ್ಲಿ ಪರಿಪಾಲನೆ ಮಾಡುತ್ತಿದ್ದಾರೆ ಹೇಳಿ? ಕಾರ್ಲ್‌ಮಾರ್ಕ್ಸ್ ಸಾಮ್ರಾಜ್ಯಶಾಹಿಗಳ ವಸಾಹತು ನೀತಿಯನ್ನೂ, ಯುದ್ಧಗಳನ್ನೂ ಖಂಡಿಸಿದನು. ಈಗ ಪ್ರಬಲ ಕಮ್ಯೂನಿಸ್ಟ್ ರಾಷ್ಟ್ರಗಳು ಸಾಮ್ರಾಜ್ಯಶಾಹಿಗಳಂತೆ ವರ್ತಿಸುತ್ತಿವೆ. ಯುದ್ಧವನ್ನು ಖಂಡಿಸುವ ಬದಲು, ಯುದ್ಧಗಳಿಗೆ ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷ ಪ್ರೋತ್ಸಾಹ ನೀಡುತ್ತಿದ್ದಾರೆ. ಚೀನಾದವರು ನಮ್ಮ ಮೇಲೆ ದಂಡೆತ್ತಿ ಬಂದೇ ಬಂದರು; ನಮ್ಮ ರಾಷ್ಟ್ರದ ಕೆಲವು ಭಾಗಗಳನ್ನು ಕಬಳಿಸಿಯೇ ಬಿಟ್ಟರು."

"ಮಿಸ್ಟರ್ ಗೋಪಾಲ್, ನಿಜವಾದ ಪ್ರಜಾಪ್ರಭುತ್ವ ಯಾವ ರಾಷ್ಟ್ರದಲ್ಲಿದೆ ಹೇಳಿ? ಕೆಲವು ಮುಂದುವರಿದ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಪ್ರಜಾಪ್ರಭುತ್ವ ಸ್ವೇಚ್ಛಾ ಪ್ರವೃತ್ತಿಯ ಹಾದಿಯನ್ನು ಹಿಡಿದಿದೆ. ಸುಖ ಸಂಪತ್ತಿನಿಂದ ಕೊಬ್ಬು ಹೆಚ್ಚಾಗಿ, ಜನರು ಮಾನಸಿಕ ನೆಮ್ಮದಿ ಇಲ್ಲದೆ, ಬಂಡೆದ್ದ ಮೃಗಗಳಂತೆ ನೀತಿ ನಿಯಮಗಳಿಲ್ಲದೆ, ಲಂಗು ಲಗಾಮಿಲ್ಲದೆ ವರ್ತಿಸುತ್ತಿದ್ದಾರೆ. ಕೆಲವು ಕಡೆಗಳಲ್ಲಿ ಹಣಕ್ಕಾಗಿ ಅಥವಾ ರಾಜಕಾರಣಕ್ಕಾಗಿ ಕೊಲೆ, ದರೋಡೆ, ವ್ಯಕ್ತಿಗಳ ಅಪಹರಣ ಇವು ದಿನನಿತ್ಯದ ಕಾರುಬಾರುಗಳು."

ಮಾನವ ಸ್ವಭಾವವನ್ನು ಯಾವ ಇಸಂ ಬಂದರೂ ಬದಲಾಯಿಸಲಾಗದು. ಕೆಲವು ಕಮ್ಯೂನಿಸ್ಟ್ ರಾಷ್ಟ್ರಗಳಲ್ಲಿ, ಜನರು ಸೈದ್ಧಾಂತಿಕ ಉನ್ಮತ್ತರಾಗಿ, ನರರಾಕ್ಷಸರಂತೆ

ದಿನವೂ ಕ್ರಾಂತಿಯ ಹೆಸರಿನಲ್ಲಿ, ನರಮೇಧ ನಡೆಸುವುದಿಲ್ಲವೇನು? ಹಾಗೆಯೇ ಪ್ರಜಾಪ್ರಭುತ್ವದ ರಾಷ್ಟ್ರಗಳಲ್ಲಿ ಅಡ್ಡದಾರಿ ಹಿಡಿಯುವ ಜನರಿದ್ದಾರೆ. ಯಾವ ರಾಜಕೀಯ ಪಂಥದಿಂದಲೂ ಮನುಷ್ಯರಿಗೆ ಶಾಶ್ವತ ಸುಖ, ಶಾಂತಿ ಲಭಿಸುವುದಿಲ್ಲ. ಒಂದೊಂದು ಪದ್ಧತಿಯಲ್ಲೂ, ಸಾಧಕ ಬಾಧಕಗಳು ಇದ್ದೇ ಇರುತ್ತವೆ. ಹೋಗಲಿ ಬಿಡಿ. ನೀವು ಯಾವ ಪಂಥಕ್ಕೆ ಸೇರಿದವರು? ರಷ್ಯಾ ಪಂಥಕ್ಕೋ, ಚೀನೀ ಪಂಥಕ್ಕೋ?"

"ನಾನು ರಷ್ಯಾ ಪಂಥಕ್ಕೂ ಸೇರಿದವನಲ್ಲ; ಚೀನೀ ಪಂಥಕ್ಕೂ ಸೇರಿದವನಲ್ಲ; ರಾಷ್ಟ್ರೀಯ ಪಂಥಕ್ಕೆ ಸೇರಿದವನು. 'ತಾ ಬಲವೋ ಜಗ ಬಲವೋ' ಎನ್ನುವಂತೆ ನಮ್ಮ ರಾಷ್ಟ್ರದ ಭವಿಷ್ಯ ನಮ್ಮ ಶಕ್ತಿ ಸಾಮರ್ಥ್ಯಗಳನ್ನು ಅವಲಂಬಿಸಿದೆಯೇ ಹೊರತು, ಚೀನಾ, ರಷ್ಯಾ ಅಥವಾ ಅಮೆರಿಕಾ ದೇಶಗಳ ಬೆಂಬಲವನ್ನವಲಂಬಿಸಿಲ್ಲ."

ಗೋಪಾಲನೂ, ಚಂದ್ರಹಾಸನೂ ಹೀಗೆ ಸಿದ್ಧಾಂತಗಳ ಘರ್ಷಣೆಯಲ್ಲಿ ತೊಡಗಿ ಮಾತನಾಡುತ್ತಿರುವಾಗ, ಕಿಶೋರನು ಮೇಲಕ್ಕೆದ್ದು, "ನಿಮಗೆ ಕತ್ತಲಾಗಿರುವುದು ಕಾಣಿಸುವುದಿಲ್ಲವೇನು? ನೀವಿಬ್ಬರೂ ರಾಜಕೀಯ ಶಾಸ್ತ್ರದ ಅಧ್ಯಾಪಕರಾಗಲು ಲಾಯಕ್ಕಿದ್ದೀರಿ. ಯಾವುದಾದರೂ ಕಾಲೇಜಿಗೆ ಸೇರಿ. ಏಳಿ ಹೋಗೋಣ ಎಂದು ಹೇಳಿದನು. ಅಲ್ಲಿಗೆ ಮಾತು ಮುಕ್ತಾಯವಾಗಿ, ಮೂವರೂ ಮನೆಯ ಕಡೆಗೆ ಹೊರಟರು. ಮನೆಗೆ ಹೋದ ನಂತರ, ಚಂದ್ರಹಾಸನೂ, ಕಿಶೋರನೂ ಸಿರಗೂರಿನ ಕ್ರಾಂತಿಕೂಟದ ಆಫೀಸಿಗೆ ಹೋಗಿ, ಅಲ್ಲಿ ತಮ್ಮ ಪಕ್ಷದ ಕೆಲಸಗಾರರೊಡನೆ ವಿಚಾರ ವಿನಿಮಯ ಮಾಡಿ, ವಾಪಾಸು ಗೋಪಾಲನ ಮನೆಗೆ ಬಂದು ತಂಗಿದರು.

ಮರುದಿನ, ಚಂಚಲೆ ಗೌರಿಯನ್ನು ಬೀಳ್ಕೊಡುವ ದೃಶ್ಯ ಹೃದಯಸ್ಪರ್ಶಿಯಾಗಿತ್ತು. ಮೂರು ದಿನಗಳ ಹಿಂದೆ ತಂದೆಯನ್ನು ಬಿಟ್ಟು ಬಂದಾಗ ಆಗಿದ್ದ ಅತೀವ ದುಃಖವನ್ನು ಗೌರಿಯನ್ನು ನೋಡಿದ ನಂತರ ಮರೆತಿದ್ದಳು. ಮೂರು ದಿನಗಳ ಕಾಲ ಗೆಳತಿಯರಿಬ್ಬರೂ, ಬಹು ಸಂತೋಷದಿಂದ ಕಾಲಹರಣ ಮಾಡಿದ್ದರು. ಗೌರಿಯನ್ನು ಕಳುಹಿಸಿ ಕೊಡುವಾಗ ಚಂಚಲೆಯ ಮನಸ್ಸಿನಲ್ಲಿ ನಾನಾ ವಿಚಾರಗಳು ಬರುತ್ತಿದ್ದವು. ಗೌರಿಯ ಭವಿಷ್ಯದ ವಿಷಯದಲ್ಲಿ ಅವಳಿಗೆ ಸಾಕಷ್ಟು ಕಳವಳವಿತ್ತು. ಶಂಕರನಿಗೆ ಗೋಪಾಲನ ಮೇಲೆ ಅಸಮಾಧಾನ ಉಂಟಾಗಿದೆ ಎಂಬುದನ್ನು ಚಂದ್ರಹಾಸನಿಂದ ತಿಳಿದು, ಅವಳ ಚಿತ್ತಶಾಂತಿ ಸ್ವಲ್ಪ ಮಟ್ಟಿಗೆ ಕಲಕಿತ್ತು. ಗೌರಿಯನ್ನು ಬೀಳ್ಕೊಡುತ್ತಿರುವಾಗ, ಅವಳನ್ನು ತಬ್ಬಿಕೊಂಡು ಅಳಲಾರಂಭಿಸಿದಳು. ಗೌರಿಯೂ ಅಳತೊಡಗಿದಳು. ಗಂಡಸರಿಗೆ ಅವರಿಬ್ಬರೂ ಅಳುತ್ತಿರುವುದನ್ನು ನೋಡಿ ಅನಾವಶ್ಯಕ ಹಗರಣವೆನಿಸಿತ್ತು. ಪಾಪ! ಆ ಹೆಣ್ಣುಮಕ್ಕಳ ಅಳಲಿನ ಆಳದಲ್ಲಿ ಏನಿತ್ತೆಂಬುದು ಅವರಿಗೆ ಹೇಗೆ ಗೊತ್ತಾಗಬೇಕು? ಚಂದ್ರಹಾಸನು ಹೊರಡುವಾಗ ಗೋಪಾಲನನ್ನು ಕುರಿತು, "ನಿಮಗೇನಾದರೂ ತೊಂದರೆಯಾಗುವ ಸೂಚನೆ ಕಂಡರೆ ಈ ಊರಿನ ನಮ್ಮ ಕೂಟದ ಆಫೀಸಿಗೆ ಹೇಳಿ ಕಳಿಸಿದರೆ ಸಾಕು. ಅವರು ನಿಮಗೆ ಯಾವ ಸಹಾಯವನ್ನಾದರೂ ಮಾಡುತ್ತಾರೆ" ಎಂದು ಹೇಳಿದರು. ಗೋಪಾಲನು ಬಹಳ ಲಘುವಾಗಿ "ಆಗಲಿ ತುಂಬಾ ಥ್ಯಾಂಕ್ಸ್" ಎಂದು ನಗುತ್ತಾ ಹೇಳಿದನು.

ಪುರುಷೋತ್ತಮಬಾಬು ಅವರು ಶ್ರೀಮಂತರಾಗಿರಲಿಲ್ಲ. ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ದೇಶಕ್ಕೋಸ್ಕರ ಬಹಳ ತ್ಯಾಗ ಮಾಡಿದ್ದವರು. ದೇಶಕ್ಕಾಗಿ ಹೋರಾಡುವುದು ಅವರಿಗೆ ಆನಂದದಾಯಕವಾಗಿತ್ತು. ಅವರು ಕಷ್ಟದಲ್ಲೇ ಸುಖವನ್ನು ಕಂಡಿದ್ದವರು ಅಪ್ರತಿಮ ಗಾಂಧೀಭಕ್ತರೆಂಬ ಬಿರುದನ್ನು ಪಡೆದಿದ್ದ ಅವರು ಸಂಪೂರ್ಣ ಅಹಿಂಸಾ ವಾದಿಗಳಾಗಿದ್ದರು. ಮೊದಲಿನಿಂದಲೂ ಸತ್ಯದ ಹಾದಿಯನ್ನು ಹಿಡಿದವರಾಗಿ, ಅಂತಿಮದಲ್ಲಿ ಸತ್ಯಕ್ಕೆ ಜಯ ಲಭಿಸುತ್ತದೆಯೆಂಬ ನಂಬಿಕೆಯನ್ನು ತಾಳಿದ್ದರು. ತಮ್ಮ ಮನೆಗೆ ಬಾಂಬ್ ಹಾಕಿದ ಪ್ರಸಂಗವೂ, ಅದರ ಪರಿಣಾಮವಾಗಿ ತಮ್ಮ ಪತ್ನಿ ದುರ್ಮರಣಕ್ಕೀಡಾದ ಪ್ರಸಂಗವೂ, ಅವರ ಈ ನಂಬಿಕೆಗೆ ಗದಾಪ್ರಹಾರವಾದಂತಾಗಿತ್ತು. ಪತ್ನಿಯ ದುರ್ಮರಣದಿಂದ ದುಖಪೀಡಿತರಾಗಿದ್ದ ಅವರ ಆರೋಗ್ಯ ದಿನೇ ದಿನೇ ಕೆಡಲಾರಂಭಿಸಿತ್ತು. ಹೆಂಡತಿ ಸತ್ತ ದುಃಖ ಒಂದು ಕಡೆಯಾದರೆ, ರಾಜ್ಯದಲ್ಲಿ ರಾಜಕಾರಣದ ಹೆಸರಿನಲ್ಲಿ ನಡೆಯುತ್ತಿದ್ದ ದುರಾಚಾರ ಅನಾಚಾರಗಳಿಂದಲೂ, ಕೊಲೆದರೋಡೆಗಳಿಂದಲೂ, ಅವರ ಮನಸ್ಸು ನೊಂದು ಹೋಗಿತ್ತು. ರಾಕ್ಷಸರಂತೆ ವರ್ತಿಸುತ್ತಿರುವ ಜನರ ಮಧ್ಯೆ ಬಾಳುವುದಕ್ಕಿಂತ ಸಾಯುವುದೇ ಲೇಸೆಂದು ಅವರು ಒಮ್ಮೊಮ್ಮೆ ಯೋಚಿಸುತ್ತಿದ್ದರು. ತಮ್ಮ ಏಕಮಾತ್ರ ಪುತ್ರ ಕಾರ್ಲ್‌ಮಾರ್ಕ್ಸ್‌ನ ಭಕ್ತನಾದುದು ಅವರಿಗೆ ಅಸಮಾಧಾನ ವಾಗಿದ್ದರೂ, ತಮ್ಮ ಮಗನು ಸದ್ಗುಣ ಶಾಲಿಯೆಂಬ ಹೆಮ್ಮೆ ಇತ್ತು. ಮಗನೂ, ಸೊಸೆಯು ಸುಖವಾಗಿ ಬಾಳಬೇಕೆಂಬ ಆಸೆ ಹೊರತು ಇನ್ನಾವ ಆಸೆಯೂ ಅವರಿಗೆ ಉಳಿದಿರಲಿಲ್ಲ. ಮಗ ಮತ್ತು ಸೊಸೆಯ ಶ್ರೇಯಸ್ಸಿಗಾಗಿ ಅವರು ಸದಾ ಭಗವಂತನನ್ನು ಪ್ರಾರ್ಥಿಸುತ್ತಿದ್ದರು.

ಸೌಮ್ಯಾಶ್ರಮಕ್ಕೆ ಹೋಗಿಬಂದ ಮೂರು ತಿಂಗಳ ನಂತರ, ಗೌರಿ ಗರ್ಭವತಿಯಾದ ಸೂಚನೆ ಕಂಡುಬಂದಿತ್ತು. ಡಾಕ್ಟರ ಹತ್ತಿರ ಪರೀಕ್ಷೆ ಮಾಡಿಸಿದ್ದರಲ್ಲಿ, ಗರ್ಭವತಿ ಯಾಗಿರುವುದು ನಿಜವೆಂದು ಗೊತ್ತಾಯಿತು. ಸೊಸೆ ಗರ್ಭಿಣಿಯಾದಳೆಂದು ರೋಗಪೀಡಿತರಾಗಿದ್ದ ಪುರುಷೋತ್ತಮಬಾಬು ಅವರು ಆನಂದಭರಿತರಾಗಿದ್ದರು. ಚಂದ್ರಹಾಸನೂ, ಗೌರಿಯ ತಾಯಿ ಪದ್ಮಾವತಿಯೂ ಹರ್ಷಿತರಾಗಿದ್ದರು. ಆದರೆ ಗೌರಿಗೆ ಮಾತ್ರ ತಾನು ಗರ್ಭವತಿಯಾದೆನೆಂಬ ಸಂತೋಷ ಸ್ವಲ್ಪವೂ ಇರಲಿಲ್ಲ. ಸಂತೋಷಕ್ಕೆ ಬದಲಾಗಿ ಕ್ರಾಂತಿಸೇನೆಯವರ ಉಪಟಳದಿಂದ ದಿನೇ ದಿನೇ ಅವಳಿಗೆ ಕಳವಳ ಹೆಚ್ಚಾಗುತ್ತಿತ್ತು. ಚಂದ್ರಹಾಸನು, ಅವಳು ಗರ್ಭವತಿಯಾದ ಮೇಲೆ, ಅವಳನ್ನು ಮೊದಲಿಗಿಂತಲೂ ಅತಿಶಯವಾಗಿ ಪ್ರೀತಿಸುತ್ತಿದ್ದನು. ಧೈರ್ಯದಿಂದ ಇರಬೇಕೆಂದು ಅವನು ಅವಳಿಗೆ ಎಷ್ಟು ಹೇಳಿದರೂ ಅವಳ ಕಳವಳ ಕಡಿಮೆಯಾಗಿರಲಿಲ್ಲ. ಮುಂಬರಲಿದ್ದ ಅಪಾಯದ ಮುನ್ಸೂಚನೆ ಅವಳಿಗೆ ಹೊಳಿದಿತ್ತೋ ಎನ್ನುವ ರೀತಿಯಲ್ಲಿ, "ಈ ಅಪಾಯಕರ ಸನ್ನಿವೇಶದಲ್ಲಿ ನನಗೊಂದು ಬೇಡದಿದ್ದ ಬಸಿರು" ಎಂದು ಆಗಾಗ ನಿಟ್ಟುಸಿರು ಬಿಡುತ್ತಿದ್ದಳು.

ಗೌರಿಯ ಗರ್ಭಕ್ಕೆ ಆರು ತಿಂಗಳು ತುಂಬಿದ ನಂತರ, ಪದ್ಮಾವತಿ ಅವಳನ್ನು ಹೆರಿಗೆಗೆ ಶ್ರೀಪುರಕ್ಕೆ ಬರಬೇಕೆಂದು ಒತ್ತಾಯ ಪಡಿಸಿದಳು. "ಇಲ್ಲಮ್ಮಾ ಅಲ್ಲಿಗೆ ಬರಲಾರೆ. ಅವರೊಬ್ಬರನ್ನು ಇಲ್ಲಿ ಬಿಟ್ಟು, ನಾನು ಅಲ್ಲಿ ನೆಮ್ಮದಿಯಿಂದ ಇರುವುದಾದರೂ ಹೇಗೆ?" ಎಂದು ಗೌರಿ ತಾಯಿಗೆ ಹೇಳಿದಳು.

"ಗೌರೀ ಇದೇನು ಹುಡುಗಾಟ? ಚೊಚ್ಚಲು ಬಸರಿ, ಆಗಾಗ ಡಾಕ್ಟರ್ ಹತ್ತಿರ ಪರೀಕ್ಷೆ ಮಾಡಿಸಿಕೊಳ್ಳುತ್ತಾ ಇರಬೇಕು. ನಿಮ್ಮ ಈ ಕೊಂಪೆ ಊರಾಗೆ ಡಾಕ್ಟ್ರೂ ಇಲ್ಲ; ಕೊನೆಗೆ ಒಬ್ಬಳು ಸೂಲಗಿತ್ತಿಗೂ ಗತಿಯಿಲ್ಲ. ಏನಾರೂ ಹೆಚ್ಚು ಕಡಿಮೆ ಆದರೆ ಗತಿಯೇನು?

"ಅಮ್ಮಾ, ಈಗೇನು ಅವಸರ? ಈಗ ಆರು ತಿಂಗಳು ಮಾತ್ರ ಆಗಿದೆ. ನನ್ನ ಆರೋಗ್ಯ ಸರಿಯಾಗಿದೆ. ಶ್ರೀಪುರಕ್ಕೆ ಆಗಾಗ ಬಂದು ಡಾಕ್ಟರನ್ನ ನೊಡ್ತೀನಿ. ಎಂಟು ತಿಂಗಳು ತುಂಬಿದ ನಂತರ ಅಲ್ಲಿಗೆ ಬರ್ತೀನಿ."

"ನೀ ಗಂಡನ ಜೊತೀಗೇ ಇರಬೇಕು ಅಂತ ಇಷ್ಟಪಟ್ಟರೆ ನಾ ಈಗ ಒತ್ತಾಯ ಮಾಡೋಲ್ಲ. ಆದರೆ ಎಂಟು ತಿಂಗಳು ತುಂಬಿದ ಕೂಡ್ಲೆ ನೀ ನಮ್ಮನೀಗೆ ಬರೋಕೆ ತಯಾರಾಗಿರಬೇಕು" ಎಂದು ಪದ್ಮಾವತಿ ಮಗಳಿಗೆ ಹೇಳಿದ್ದಳು.

ಪುರುಷೋತ್ತಮಬಾಬುರವರ ಮನೆಯಲ್ಲಿ ಅಡುಗೆಯ ಕೆಲಸವನ್ನು ಅಡುಗೆಯ ಆಳು ನೊಡಿಕೊಳ್ಳುತ್ತಿದ್ದನು. ಆದರೆ ಉಳಿದ ಗೃಹಕೃತ್ಯದ ಕೆಲಸಗಳನ್ನು ಗರ್ಭಿಣಿಯಾದ ಗೌರಿಯೇ ನಿರ್ವಹಿಸಬೇಕಾಗಿತ್ತು. ಖಾಯಿಲೆಯಿಂದ ನರಳುತ್ತಿದ್ದ ಮಾವನ ಶುಶ್ರೂಷೆಯನ್ನೂ ಅವಳೇ ಮಾಡಬೇಕಾಗಿತ್ತು. ಗಂಡನ ಯೋಗಕ್ಷೇಮ, ಊಟೋಪಚಾರಗಳ ವಿಷಯದಲ್ಲಿ ಅವಳೇ ಸ್ವತಃ ಶ್ರದ್ಧೆ ವಹಿಸುತ್ತಿದ್ದಳು. ಬಾಬುರವರನ್ನೂ, ಚಂದ್ರಹಾಸನನ್ನೂ ನೋಡಲು ಮನೆಗೆ ಬಂದವರನ್ನು ಉಪಚರಿಸಬೇಕಾಗಿತ್ತು. ಗರ್ಭಿಣಿಯಾದವಳು ಇಷ್ಟೆಲ್ಲಾ ಕೆಲಸ ಕಾರ್ಯಗಳನ್ನು ಮಾಡುವುದು ಕಷ್ಟವೆಂದು ಮನಗಂಡ ಚಂದ್ರಹಾಸನು ಅವಳ ಸಹಾಯಕ್ಕಾಗಿ ಒಬ್ಬಳು ಹೆಣ್ಣಾಳನ್ನು ನೇಮಿಸಿಕೊಳ್ಳಬೇಕೆಂದು ಯೋಚಿಸುತ್ತಿದ್ದನು.

ಆ ಸಮಯಕ್ಕೆ ಸರಿಯಾಗಿ, ಅವನ ದಾಯಾದಿ ಬಿಂದುಮಾಧವನ ಗೂಢಚಾರರಾಗಿದ್ದ, ಅನಿಲಪುರದ ಮಾದು ಮತ್ತು ನಾಥು ಅವರ ಯೋಗಕ್ಷೇಮವನ್ನು ವಿಚಾರಿಸುವ ನೆಪದಲ್ಲಿ ಅವನ ಮನೆಗೆ ಬಂದಿದ್ದರು. ಚಂದ್ರಹಾಸನು ತನ್ನ ಮನೆ ಕೆಲಸಕ್ಕಾಗಿ ನಂಬಿಕಸ್ಥಳಾದ ಒಬ್ಬ ಹೆಣ್ಣಾಳು ಬೇಕೆಂದೂ, ಯಾರಾದರೂ ನಂಬಿಕಸ್ಥಳಿದ್ದರೆ ತನಗೆ ತಿಳಿಸಬೇಕೆಂದೂ, ಅವರೊಡನೆ ಹೇಳಿದನು. ಆದಷ್ಟು ಜಾಗ್ರತೆ ನಂಬಿಕಸ್ಥಳಾದ ಒಬ್ಬ ಹೆಣ್ಣಾಳನ್ನು ಗೊತ್ತು ಮಾಡಿಕೊಡುವುದಾಗಿ ಚಂದ್ರಹಾಸನಿಗೆ ಭರವಸೆ ನೀಡಿ ಅವರಿಬ್ಬರೂ ಹೊರಟುಹೋದರು. ಮಾಧು ಮತ್ತು ನಾಥು ಕ್ರಾಂತಿಸೇನೆಯ ಗೂಢಚಾರರೆಂಬುದು ಚಂದ್ರಹಾಸನಿಗೆ ತಿಳಿದಿರಲಿಲ್ಲ. ಅವರಿಬ್ಬರೂ ತನ್ನ ಅವಿಚ್ಛಿನ್ನ ಭಕ್ತರೆಂದು ಅವನು ಭಾವಿಸಿದ್ದನು.

ಚಂದ್ರಹಾಸನು ಹೆಣ್ಣಾಳನ್ನು ಗೊತ್ತು ಮಾಡಿಕೊಡಬೇಕೆಂದು ತಮಗೆ ಹೇಳಿದ್ದ ವಿಚಾರವನ್ನು ನಾಥು ಮತ್ತು ಮಾಧೂ ಚಂದ್ರಹಾಸನ ದಾಯಾದಿ ಬಿಂದುಮಾಧವನಿಗೆ ಕೂಡಲೆ ವರದಿ ಮಾಡಿದರು. ಬಿಂದುಮಾಧವನು ಅಂತಹ ಅವಕಾಶಕ್ಕಾಗಿ ಕಾಯುತ್ತಿದ್ದನು. ಅವನು ಕೂಡಲೆ ಆವಿಚಾರವನ್ನು ಶಂಕರನಿಗೆ ವರದಿ ಮಾಡಿದನು. ಶಂಕರನೂ, ಬಿಂದುಮಾಧವನೂ, ನಾಥುವೂ, ಮಾಧುವೂ ಸೇರಿ ಗುಟ್ಟಿನಲ್ಲಿ ಏನು ಮಸಲತ್ತು ಮಾಡಿದ್ದರೆಂಬುದು ಯಾರಿಗೂ ಗೊತ್ತಾಗಲಿಲ್ಲ. ಎಂಟು ದಿನಗಳ ನಂತರ ನಾಥು ಚಂದ್ರಹಾಸನ ಮನೆಗೆ ಹೋಗಿ, "ತಾವು ಒಂದು ಹೆಣ್ಣಾಳು ಬೇಕು ಅಂತ ಹೇಳಿದ್ದಿರಿ. ನಮ್ಮ ತಾಯಿಯ ದೂರದ ಬಳಗದವಳು ರಾಮಿ ಅಂತ ವಿಧವೆ ಒಬ್ಬಳು ಅದ್ಯಾಳೆ. ಬ್ಹಾಳಾ ನಂಬಿಕಸ್ತಳು. ಅವಳು ನಿಮ್ಮನೇಲೆ ಖಾಯಂ ಆಗಿ ಇರ್ತ್ಬೋದು. ಇಲ್ಲೀಗೆ ಎಂಟ್ಹತ್ತು ಮೈಲಿ ದೂರ್ದಾಗೆ, ಅವಳ ಮನೆ. ತಮಗೆ ಬೇಕಾದ್ರೆ ಅವಳನ್ನು ಕೇಳ್ತೀನಿ" ಎಂದನು.

"ಆಗಲಿ, ಅವಳನ್ನು ವಿಚಾರಿಸು" ಎಂದು ಚಂದ್ರಹಾಸ ಹೇಳಿದನು. ಅವನು ಹೊರಟು ಹೋದಮೇಲೆ ಚಂದ್ರಹಾಸನು ಅವನೊಡನೆ ಮಾತನಾಡಿದ ವಿಚಾರವನ್ನು ಗೌರಿಗೆ ತಿಳಿಸಿದನು.

"ಯಾವ ಹುತ್ತದಲ್ಲಿ ಯಾವ ಹಾವಿದೆಯೋ ಯಾರಿಗೆ ಗೊತ್ತು? ಅವಳನ್ನ ನೇಮಕ ಮಾಡಿಕೊಳ್ಳುವ ಮೊದಲು ಅವಳ ಪೂರ್ವೋತ್ತರಗಳನ್ನು ಚೆನ್ನಾಗಿ ತಿಳಿಬೇಕು" ಎಂದು ಗೌರಿ ಹೇಳಿದಳು.

"ನಾಥು ನನ್ನ ಭಕ್ತ. ಅವನ್ನ ನಂಬಬಹುದು" ಎಂದು ಚಂದ್ರಹಾಸ ಹೇಳಿದನು.

ನಾಲ್ಕೈದು ದಿನಗಳ ನಂತರ ನಾಥು, ರಾಮಿ ಎಂಬ ಹೆಣ್ಣಾಳನ್ನು ಚಂದ್ರಹಾಸನ ಮನೆಗೆ ಕರೆತಂದನು. ಅವನಿಗೆ ಸುಮಾರು ಮೂವತ್ತೈದು ವರ್ಷಗಳಾಗಿದ್ದಿರಬಹುದು. ಓದು ಬರೆಹ ಬಾರದಿದ್ದರೂ ಚುರುಕು ಬುದ್ಧಿಯವಳಾಗಿದ್ದಳು. ಶುಭ್ರವಾದ ಸೀರೆ, ರವಿಕೆಗಳನ್ನು ತೊಟ್ಟು ಆರೋಗ್ಯವಾಗಿದ್ದಳು. ಗೌರಿ, ರಾಮಿಯನ್ನು ಒಳಗೆ ಬರಮಾಡಿಕೊಂಡು, ಅವಳ ಪೂರ್ವೋತ್ತರಗಳನ್ನು ವಿಚಾರಿಸಿದಳು. ರಾಮಿ ತಾನೊಬ್ಬ ಕೂಲಿಯವನ ಹೆಂಡತಿಯೆಂದೂ, ತನ್ನ ಗಂಡನು ಐದಾರು ವರ್ಷಗಳ ಹಿಂದೆ ತೀರಿ ಕೊಂಡನೆಂದೂ, ಮಕ್ಕಳೂ ಮರಿಗಳಿಲ್ಲವೆಂದೂ ಹೇಳಿದಳು. ಅವಳು ಮಾತನಾಡುವಾಗ ಒಳ್ಳೆಯ ನಂಬಿಕಸ್ತಳಂತೆ ವರ್ತಿಸುತ್ತಿದ್ದ ರೀತಿನೀತಿಗಳನ್ನು ನೋಡಿ ಮುಗ್ಧಳಾದ ಗೌರಿಗೆ ಅವಳ ವಿಚಾರದಲ್ಲಿ ಸಂಪೂರ್ಣ ನಂಬಿಕೆಯುಂಟಾಯಿತು.

"ನಿಂಗೇನು ಸಂಬಳ ಕೊಡ್ಬೇಕು" ಎಂದು ಗೌರಿ ರಾಮಿಯನ್ನು ಕೇಳಿದಳೂ.

"ನಿಮ್ಮಂಥವರ ಮನೇಲಿ ಇರೋಕೆ ಪುಣ್ಯ ಬೇಕು. ನನ್ನ ಕೆಲ್ಸಾ ನೋಡಿ ನೀವೇ ತಿಳಿದು ಏನು ಕೊಡ್ತೀರೋ ಕೊಡಿ" ಎಂದು ರಾಮಿ ವಿನಯ ಪೂರ್ವಕವಾಗಿ ಹೇಳಿದಳು.

ಅವಳ ಮಾತುಕತೆಗಳಿಂದ ತೃಪ್ತಳಾದ ಗೌರಿ ಅವಳನ್ನು ಕೆಲಸಕ್ಕೆ ನೇಮಿಸಿಕೊಳ್ಳಬಹುದೆಂದು ಚಂದ್ರಹಾಸನಿಗೆ ಸೂಚಿಸಿದಳು. ನಾಥು ಸಹ ಗೌರಿಯನ್ನು

ಕಂಡು ರಾಮಿಯ ವಿಚಾರದಲ್ಲಿ ಅತಿ ಮೆಚ್ಚುಗೆಯ ಮಾತುಗಳನ್ನು ಆಡಿದ್ದನು. ರಾಮಿ, ಚಂದ್ರಹಾಸನ ಮನೆಗೆ ಬಂದ ನಂತರ ಗೌರಿಯ ಕೆಲಸ ಬಹಳ ಹಗುರವಾಗಿತ್ತು. ರಾಮಿ ಎಲ್ಲಾ ಕೆಲಸಕಾರ್ಯಗಳಿಗೂ ತಾನೇ ಮುಂದಾಗುತ್ತಿದ್ದಳು. ಗೌರಿ ಏನಾದರೂ ಮಾಡುತ್ತಿದ್ದರೆ, ರಾಮಿ ಅವಳ ಹತ್ತಿರ ಬಂದು, "ನಾ ಇರಾಗ ನೀವ್ಯಾಕೆ ಈ ಕೆಲ್ಸ ಮಾಡ್ಬೇಕು?" ಎಂದು ಹೇಳುತ್ತಿದ್ದಳು. ಅತ್ಯಂತ ಪ್ರಾಮಾಣಿಕಳಂತೆ ವರ್ತಿಸುತ್ತ, ಅತ್ಯಂತ ವಿಧೇಯಳಂತೆ ನಟಿಸುತ್ತಾ, ಎಲ್ಲಾ ಕೆಲಸ ಕಾರ್ಯಗಳನ್ನು ಶ್ರದ್ಧೆಯಿಂದ ಮಾಡುತ್ತಿದ್ದಳು. ಖಾಯಿಲೆಯಿಂದ ನರಳುತ್ತಿದ್ದ ಪುರುಷೋತ್ತಮಬಾಬು ಅವರ ಶುಶ್ರೂಷೆಯನ್ನೂ ಸಹ ಅವಳು ಮಾಡುತ್ತಿದ್ದಳು.

ರಾಮಿಯ ಕೆಲಸ ಕಾರ್ಯಗಳು ಚಂದ್ರಹಾಸನಿಗೂ ಕೂಡ ಒಪ್ಪಿಗೆಯಾಗಿದ್ದವು. ಕೇವಲ ಹದಿನೈದು-ಇಪ್ಪತ್ತು ದಿನಗಳೊಳಗಾಗಿ ರಾಮಿ ಪುರುಷೋತ್ತಮಬಾಬು ಅವರ ಮನೆಯ ಅಚ್ಚುಮೆಚ್ಚಿನ ಸೇವಕಿಯಾದಳು. ನಾಥು ತನ್ನ ಬಂಧು ಎಂಬ ನೆಪದಿಂದ ರಾಮಿ ನಾಥುವಿನ ಮನೆಗೆ ಆಗಾಗ ಹೋಗಿ ಬರುತ್ತಿದ್ದಳು. ಅವಳು ಆ ರೀತಿ ಹೋಗಿ ಬರುವುದರಲ್ಲಿ ಚಂದ್ರಹಾಸನಿಗಾಗಲೀ, ಗೌರಿಗಾಗಲೀ ಯವ ವಿಧವಾದ ಸಂಶಯವೂ ಹುಟ್ಟಿರಲಿಲ್ಲ. ದಿನಗಳು ಕಳೆದಂತೆಲ್ಲಾ ರಾಮಿ ಮನೆಯವಳಂತೆ ಆತ್ಮೀಯತೆಯಿಂದ ವರ್ತಿಸುತ್ತಿದ್ದಳು. ತನ್ನ ಅದೃಷ್ಟದಿಂದ ತನಗೆ ಅಂತಹ ಒಳ್ಳೆಯ ಸೇವಕಿ ಸಿಕ್ಕಿದ್ದಾಳೆಂದು ಗೌರಿ ಭಾವಿಸಿದ್ದಳು. ಅನಿಲಪುರಕ್ಕೆ ಮಗಳನ್ನು ನೋಡಲು ಆಗಾಗ ಬರುತ್ತಿದ್ದ ಪದ್ಮಾವತಿ, ರಾಮಿಯ ಚಾಕಚಕ್ಯತೆಯನ್ನೂ, ಅಚ್ಚುಕಟ್ಟಿನ ಕೆಲಸವನ್ನೂ ನೋಡಿ, "ನಿನಗೆ ಒಳ್ಳೇ ಸೆಕ್ರೆಟ್ರಿ ಸಿಕ್ಕಿದ್ದಾಳೆ" ಎಂದು ಗೌರಿಗೆ ಒಂದೆರಡು ಬಾರಿ ಹೇಳಿದ್ದಳು.

ಗರ್ಭಿಣಿಯಾದ ಮೇಲೆ, ಗೌರಿಯ ಸ್ವಭಾವದಲ್ಲಿ ಕೆಲವು ಪರಿವರ್ತನೆಗಳಾಗುತ್ತಿದ್ದವು ತಾಯ್ತನದ ಗುಣಗಳು ದಿನೇ ದಿನೇ ಅವಳಲ್ಲಿ ವೃದ್ಧಿಯಾಗುತ್ತಿದ್ದವು. ಅದುವರೆಗೆ ಚಂದ್ರಹಾಸನಲ್ಲಿ ಕೇಂದ್ರೀಕೃತವಾಗಿದ್ದ ಅವಳ ಪ್ರೇಮದ ಬಳ್ಳಿ ಕವಲೊಡೆದು ಒಂದು ಕವಲು ಗರ್ಭದಲ್ಲಿದ್ದ ಕಂದನ ಕಡೆಗೆ ಹರಿದಿತ್ತು. ಮೊದಲೇ ದೈವಭಕ್ತಳಾಗಿದ್ದ ಅವಳ ದೈವಭಕ್ತಿ ಮತ್ತಷ್ಟು ಹೆಚ್ಚಾಗಿತ್ತು. ದಿನಕ್ಕೆ ಒಂದು ಗಂಟೆಯಷ್ಟು ಕಾಲ ದೇವರ ಪೂಜೆಯಲ್ಲಿ ನಿರತಳಾಗಿರುತ್ತಿದ್ದಳು. ಜಗತ್ತಿನ ಜಂಜಾಟದೊಡನೆ ಸೆಣಸಬೇಕಾದರೆ ಶುದ್ಧ ಭಕ್ತಿ ಅವಶ್ಯಕವೆಂದು ಮನಗಂಡಿದ್ದ ಅವಳು ತನಗೆ ಶುದ್ಧ ಭಕ್ತಿಯನ್ನು ನೀಡಬೇಕೆಂದು ಪರಮಾತ್ಮನನ್ನು ಪ್ರಾರ್ಥಿಸುತ್ತಿದ್ದಳು. ಕ್ರಾಂತಿಸೇನೆ ದೆಸೆಯಿಂದ ಚಿಕ್ಕವಯಸ್ಸಿನಲ್ಲಿಯೇ ಕಷ್ಟ ಪರಂಪರೆಗಳಿಗೀಡಾಗಿದ್ದ ಅವಳಿಗಾಗಲೇ ವೈರಾಗ್ಯ ಪ್ರಾಪ್ತಿಯಾಗಿತ್ತು. ಎಷ್ಟು ಕಾಲ ಬಾಳಿದರೂ ಮಾನವ ಜೀವನದಲ್ಲಿ ಶಾಶ್ವತ ಸುಖ ಅಲಭ್ಯವೆಂದು ಅವಳು ಅರಿತಿದ್ದಳು. ಅವಳು ತನಗೋಸ್ಕರ ಪ್ರಾರ್ಥನೆ ಮಾಡುತ್ತಿರಲಿಲ್ಲ. ಶಂಕರನ ದ್ವೇಷ ಜ್ವಾಲೆಗೆ ಈಡಾಗಿದ್ದ ತನ್ನ ಪತಿಯ ಶ್ರೇಯಸ್ಸಿಗಾಗಿ; ಹಾಸಿಗೆ ಹಿಡಿದು ಮಲಗಿದ್ದ ತನ್ನ ಮಾವನ ಆರೋಗ್ಯಕ್ಕಾಗಿ ಮತ್ತು ತನ್ನ ತಮ್ಮ ರವಿಶಂಕರನ ಅಭ್ಯುದಯಕ್ಕಾಗಿ ಭಗವಂತನನ್ನು ಪ್ರಾರ್ಥಿಸುತ್ತಿದ್ದಳು. ಪ್ರತಿದಿನವೂ, ಪುರುಷೋತ್ತಮಬಾಬು ಅವರ ಜೊತೆಯಲ್ಲಿ ಒಂದೆರಡು ಗಂಟೆಗಳ

ಕಾಲವಿದ್ದು ಅವರಿಗಾಗಿ ವೃತ್ತಪತ್ರಿಕೆಗಳನ್ನೂ, ಪುಸ್ತಕಗಳನ್ನೂ ಓದುತ್ತಾ, ವೃದ್ಧಾಪ್ಯ ಮತ್ತು ರೋಗದಿಂದ ನರಳುತ್ತಿದ್ದವರನ್ನು ಸಂತೋಷಪಡಿಸಲು ಶಕ್ತಿ ಮೀರಿ ಶ್ರಮಿಸುತ್ತಿದ್ದಳು.

ರಾಮಿ ತನ್ನ ವಿಧೇಯತೆಯಿಂದಲೂ, ಅಚ್ಚುಕಟ್ಟಾದ ಕೆಲಸ ಕಾರ್ಯಗಳಿಂದಲೂ ಮನೆಯವರೆಲ್ಲರ ವಿಶ್ವಾಸಕ್ಕೆ ಪಾತ್ರಳಾಗಿದ್ದಳು. ಪುರುಷೋತ್ತಮಬಾಬುರವರೂ ಸಹ ರಾಮಿಯ ಶ್ರದ್ಧಾಭಕ್ತಿಗಳನ್ನು ಬಹಳ ಮೆಚ್ಚಿದ್ದರು. ಅವಳ ವರ್ತನೆಯನ್ನು ನೋಡಿದ್ದವರಿಗೆ ಅವಳೊಬ್ಬಳು ಕಪಟ, ಕಳಂಕಗಳನ್ನರಿಯದ ಮುಗ್ಧ ಸ್ವಭಾವದ ಹೆಂಗಸೆಂಬ ಭಾವನೆ ಸ್ವಾಭಾವಿಕವಾಗಿ ಉತ್ಪನ್ನವಾಗುತ್ತಿತ್ತು. ಘಟಸರ್ಪವೊಂದು ರಾಮಿಯ ರೂಪದಲ್ಲಿ ಮನೆಯಲ್ಲಿ ಸೇರಿಕೊಂಡಿದೆ ಎಂಬ ಭಾವನೆ ಯಾರೊಬ್ಬರಿಗೂ ಬಂದಿರಲಿಲ್ಲ. ಗೌರಿಗೆ ಎಂಟು ತಿಂಗಳು ತುಂಬುತ್ತಾ ಬಂದಿತ್ತು. ಎಂಟು ತಿಂಗಳು ತುಂಬಿದ ನಂತರ ತಾನು ಹೆರಿಗೆಗಾಗಿ ಶ್ರೀಪುರಕ್ಕೆ ಬರುವುದಾಗಿ ತನ್ನ ತಾಯಿ ಪದ್ಮಾವತಿಗೆ ಭರವಸೆ ನೀಡಿದ್ದಳು. ಪದ್ಮಾವತಿ, ಗೌರಿಯನ್ನು ನೋಡಲು ಅನಿಲಪುರಕ್ಕೆ ಬಂದಿದ್ದಳು. ಪದ್ಮಾವತಿ ಗೌರಿ ಹಿಂದೆ ಹೇಳಿದ್ದ ಮಾತನ್ನು ಪ್ರಸ್ತಾಪಿಸಿ, "ಗೌರೀ, ನೀನು ಎಂಟು ತಿಂಗಳು ತುಂಬಿದ ನಂತರ ನಮ್ಮನೀಗೆ ಬರ್ತೀನಿ ಅಂತ ಹೇಳಿದ್ದೆ. ಮುಂದಿನ ಭಾನುವಾರ ನಾ ಬರ್ತೀನಿ; ನೀ ಹೊರಡಲು ಸಿದ್ಧಳಾಗಿರಬೇಕು" ಎಂದು ಹೇಳಿದ್ದಳು.

ಗೌರಿಗೆ ಚಂದ್ರಹಾಸನನ್ನು ಬಿಟ್ಟು ಹೋಗಲು ಇಷ್ಟವಿರಲಿಲ್ಲ. ಆದರೆ ಅನಿಲಪುರದಲ್ಲಿ ಆಸ್ಪತ್ರೆಯೂ ಇರಲಿಲ್ಲ; ಕೊನೆಗೊಬ್ಬಳು ಸೂಲಗಿತ್ತಿಯೂ ಇರಲಿಲ್ಲ. ಅಲ್ಲದೆ ಚಂದ್ರಹಾಸನೂ, ಪುರುಷೋತ್ತಮಬಾಬುರವರೂ ಹೆರಿಗೆಗೆ ಶ್ರೀಪುರಕ್ಕೆ ಹೋಗಬೇಕೆಂದು ಅವಳಿಗೆ ಒತ್ತಾಯಪಡಿಸುತ್ತಿದ್ದರು. ಆದ್ದರಿಂದ ನಿರ್ವಾಹವಿಲ್ಲದೆ ಮುಂದಿನ ಭಾನುವಾರ ಶ್ರೀಪುರಕ್ಕೆ ಬರುವುದಾಗಿ ತಾಯಿಗೆ ಹೇಳಿದ್ದಳು. ಗೌರಿಯ ಜೊತೆಯಲ್ಲಿ ಅವಳ ಶುಶ್ರೂಷೆಗಾಗಿ ರಾಮಿಯೂ ಶ್ರೀಪುರಕ್ಕೆ ಹೊಗಬೇಕೆಂದು ಗೌರಿಯ ಇಚ್ಛೆಯಾಗಿತ್ತು. ರಾಮಿಯನ್ನು ವಿಚಾರಿಸಲಾಗಿ ಅವಳು "ನಮ್ಮಮ್ಮೋರು ಇದ್ದಲ್ಲಿ ನಾನೂ ಇರ್ತೀನಿ. ವಲ್ಲೆ ಅಂತ ಹೇಳ್ತೀನೇನು?" ಎಂದು ಹೇಳಿದ್ದಳು.

ಇನ್ನೇನು ಗೌರಿ ಶ್ರೀಪುರಕ್ಕೆ ಹೊರಡಲು ಕೇವಲ ಮೂರು ದಿನಗಳು ಮಾತ್ರ ಉಳಿದಿದ್ದುವು. ಇತ್ತೀಚಿನ ದಿನಗಳಲ್ಲಿ ರಾಮಿ ಪ್ರತಿದಿನವೂ ಸಾಯಂಕಾಲದ ಹೊತ್ತು ನಾಥುವಿನ ಮನೆಗೆ ಹೋಗಿ ಬರುತ್ತಿದ್ದಳು. ರಾಮಿ ದಿನಚರಿಯ ಕೆಲಸ ಕಾರ್ಯಗಳನ್ನು ಯಥಾಪ್ರಕಾರ ತೃಪ್ತಿಕರವಾಗಿ ಮಾಡುತ್ತಿದ್ದರೂ, ಅವಳ ಮುಖದಲ್ಲಿ ಏನೋ ಒಂದು ವಿಧವಾದ ಮಾನಸಿಕ ತಿಕ್ಕಾಟದ ಮತ್ತು ಕಳವಳದ ಕುರುಹು ಎದ್ದು ಕಾಣಿಸುತ್ತಿತ್ತು. ಅದನ್ನು ಗಮನಿಸಿದ ಗೌರಿ ಅವಳನ್ನು ಕುರಿತು "ಯಾಕೇ ರಾಮೀ, ಏನೋ ಒಂದು ಥರಾ ಇದ್ದೀಯಲ್ಲಾ?" ಎಂದು ಕೇಳಿದ್ದಳು.

"ಏನೂ ಇಲ್ಲಮ್ಮಾ. ನಮ್ಮೂರಾಗೆ ನನ್ನ ಚಿಗವ್ವಗೆ ಸಕತ್ ಖಾಯಿಲೆ ಅಂತಾ ನಾಥಣ್ಣ ಹೇಳ್ದ. ಅದಕ್ಕೇ ಬೇಜಾರು" ಎಂದು ರಾಮಿ ಹೇಳಿದ್ದಳು.

ರಾತ್ರಿ ಊಟವಾದ ಮೇಲೆ ಗೌರಿಯೂ, ಚಂದ್ರಹಾಸನೂ ಹಾಲನ್ನು ಕುಡಿಯುವ ಪದ್ಧತಿಯನ್ನಿಟ್ಟುಕೊಂಡಿದ್ದರು. ಅಂದು ರಾತ್ರಿ ಅವರಿಬ್ಬರೂ ಊಟ ಮಾಡಿದ ಮೇಲೆ ಚಂದ್ರಹಾಸನ ಕೊಠಡಿಯಲ್ಲಿ ಕುಳಿತು ಪುಸ್ತಕಗಳನ್ನು ಓದುತ್ತಿದ್ದರು. ರಾತ್ರಿ ಸುಮಾರು ಹತ್ತು ಗಂಟೆಯಾಗಿರಬಹುದು. ರಾಮಿ ಎಂದಿನಂತೆ ಒಂದು ತಟ್ಟೆಯಲ್ಲಿ ಎರಡು ಲೋಟಗಳಲ್ಲಿ ಹಾಲನ್ನು ತಂದಳು. ಅವಳು ವಿಪರೀತ ಗಾಬರಿಗೊಂಡವಳಂತೆ ತೋರುತ್ತಿದ್ದಳು. ಅವಳ ಸ್ಥಿತಿಯನ್ನು ನೋಡಿದ ಗೌರಿ "ಯಾಕೇ, ಬಹಳ ಗಾಬರಿಯಾಗಿದ್ದೀಯಲ್ಲಾ? ನಿನ್ನ ಚಿಕ್ಕಮ್ಮನ ಸಮಾಚಾರ ಏನಾರೂ ಗೊತ್ತಾಯ್ತೇನು?" ಎಂದು ರಾಮಿಯನ್ನು ಕೇಳಿದಳು.

"ಇಲ್ಲಮ್ಮಾ, ನಮ್ಮ ನಾಥಣ್ಣ ಚಿಕ್ಕಮ್ಮನ್ನ ನೋಡೋಕೆ ಅಂತ ಹೋಗಿದ್ದ. ಈಗ ವಾಪಸು ಬಂದಿರ್‍ಬೋದು. ನಾ ನಾಥಣ್ಣನ ಮನೀಗೆ ಹೋಗಿ ಬ್ಯಾಗ ಬತ್ತೀನಿ" ಎಂದು ಹೇಳಿ, ನಡುಗುತ್ತಿದ್ದ ಕೈಯಿಂದ ಗೌರಿ ಕೈಗೆ ಒಂದು ಲೋಟವನ್ನು ಕೊಡಲು ಹೋದಳು.

"ಅಲ್ಲಿ, ಟೀಪಾಯಿ ಮೇಲೆ ಇಟ್ಟಿರು. ಆಮೇಲೆ ಕುಡಿತೀನಿ. ನೀ ನಾಥು ಮನೆಗೆ ಹೋಗಿ ಬಾ" ಎಂದು ಗೌರಿ ಹೇಳಿದಳು.

ರಾಮಿ ಗಡಿಬಿಡಿಯಿಂದ ಒಂದು ಲೋಟವನ್ನು ಚಂದ್ರಹಾಸನ ಮೇಜಿನ ಮೇಲಿಟ್ಟಳು ಇನ್ನೊಂದು ಲೋಟವನ್ನು ಗೌರಿಯ ಮುಂದಿದ್ದ ಟೀಪಾಯಿ ಮೇಲಿಟ್ಟಳು. ಅನಂತರ ಅವಳು, "ಇದು ಸಾಹೇಬರದ್ದು" ಎಂದು ಗೌರಿಯ ಮುಂದಿಟ್ಟಿದ್ದ ಲೋಟವನ್ನು ತೆಗೆದುಕೊಂಡು ಹೋಗಲು ಯತ್ನಿಸುತ್ತಿರುವಾಗ, "ಯಾವುದಾದರೇನು? ಎರಡು ಲೋಟದಾಗೆ ಇದ್ದದ್ದೂ ಹಾಲೇ, ಈ ಲೋಟ ಇಲ್ಲೇ ಇರ್‍ಲಿ ಹೋಗು" ಎಂದು ಗೌರಿ ಅವಳಿಗೆ ಆಜ್ಞಾಪಿಸಿದಳು. ರಾಮಿ ಏನೋ ತಪ್ಪು ಮಾಡಿದವಳಂತೆ ಯೋಚಿಸುತ್ತಾ, ಅಲ್ಲೇ ಸ್ವಲ್ಪ ಹೊತ್ತು ನಿಂತಿದ್ದಳು. ಅದನ್ನು ನೋಡಿದ ಗೌರಿ "ಯಾಕೆ ನಿಂತೀಯೇ ಹೋಗಿ ಬಾ; ರಾತ್ರಿ ಹೊತ್ತಾಯಿತು" ಎಂದು ಎಚ್ಚರಿಸಿದಳು. ರಾಮಿ "ಈಗ ಬತ್ತೀನಿ" ಅಂತ ಗಾಬರಿಯಿಂದ ಹೊರಟು ಹೋದಳು.

ರಾಮಿ ಹೊರಟು ಹೋದ ಸ್ವಲ್ಪ ಹೊತ್ತಿನ ನಂತರ, ಟೀಪಾಯಿ ಮೇಲಿದ್ದ ಹಾಲನ್ನು ಗೌರಿಯೂ, ಟೇಬಲ್ ಮೇಲಿಟ್ಟಿದ್ದ ಹಾಲನ್ನು ಚಂದ್ರಹಾಸನೂ ಕುಡಿದರು. ಹಾಲು ಕುಡಿದು ಸುಮಾರು ಅರ್ಧಗಂಟೆಗೆ ತರುವಾಯ, ಗೌರಿಗೆ ಹೊಟ್ಟೆಯಲ್ಲಿ ಏನೋ ಒಂದು ವಿಧವಾಗಿ ತೊಳಸಿದಂತಾಯಿತು. "ಯಾಕೋ ವಾಂತಿ ಬಂದ ಹಾಗೆ ಆಗ್ತದೆ" ಎಂದು ಗಂಡನಿಗೆ ಹೇಳಿ, ಬಚ್ಚಲು ಮನೆಯ ಕಡೆಗೆ ಹೋದಳು. ಚಂದ್ರಹಾಸ ಅವಳನ್ನು ಹಿಂಬಾಲಿಸಿದನು. ಗೌರಿ ಬಚ್ಚಲು ಮನೆಗೆ ಹೋಗುತ್ತಿದ್ದಂತೆ ಕಣ್ಣಿಗೆ ಕತ್ತಲು ಕವಿದಂತಾಗಿ, ಹೇಗೋ ತಡವರಿಸುತ್ತಾ ಬಚ್ಚಲು ಮನೆಗೆ ಹೋಗಿ, ದಸಕ್ಕೆಂದು ನೆಲದ ಮೇಲೆ ಕುಳಿತುಬಿಟ್ಟಳು. ಹಿಂದುಗಡೆಯಿಂದ ಅಲ್ಲಿಗೆ ಹೋದ ಚಂದ್ರಹಾಸನು, "ಏನು ಗೌರೀ, ಏನಾಗ್ತದೆ?" ಎಂದು ಗಾಬರಿಯಿಂದ ವಿಚಾರಿಸಿದನು.

"ಏನೋ ಒಂದು ಥರಾ ಸಂಕಟ ಆಗ್ತದೆ. ಮೈಯೆಲ್ಲಾ ಉರಿ; ವಾಂತಿ ಬರ್ತದೆ." ಎಂದು ಹೇಳಿ ಕುಳಿತಲ್ಲಿಯೇ ವಾಂತಿ ಮಾಡಿದಳು. ಚಂದ್ರಹಾಸನು ಅವಳ ಬಾಯನ್ನು ತೊಳೆದು, ಅವಳನ್ನು ಎತ್ತಿಕೊಂಡು ಹೋಗಿ ಅವಳ ಮಂಚದ ಮೇಲೆ ಮಲಗಿಸಿದನು. ಮಂಚದ ಮೇಲೆ ಗೌರಿ, "ಅಯ್ಯೋ ಉರೀ, ಸಂಕಟ" ಎಂದು ಒದ್ದಾಡುತ್ತಿದ್ದಳು. ಅಷ್ಟು ಹೊತ್ತಿಗೆ ಮಂಚದ ಮೇಲೆಯೇ ಒಂದು ಸಾರಿ ಭೇದಿಯಾಯಿತು. ಚಂದ್ರಹಾಸನು "ರಾಮೀ, ರಾಮೀ" ಎಂದು ಕೂಗಿದನು. ರಾಮಿಯು ಪತ್ತೆಯೇ ಇರಲಿಲ್ಲ. ಹೊರಗಡೆ ಪಹರೆ ಕಾಯುತ್ತಿದ್ದ ಸಿಪಾಯಿಗಳ ವಿನಃ ಮನೆಯಲ್ಲಿ ಇನ್ನಾರೂ ಸಹಾಯಕರಿರಲಿಲ್ಲ. ಕಿಶೋರನು ಕಾರನ್ನು ತೆಗೆದುಕೊಂಡು ಯಾವುದೋ ಕೆಲಸದ ನಿಮಿತ್ತ ಹತ್ತಿರದ ಹಳ್ಳಿಯೊಂದಕ್ಕೆ ಹೋಗಿದ್ದವನು ಬಂದೆ ಇರಲಿಲ್ಲ. ಚಂದ್ರಹಾಸನು ಗೌರಿಯನ್ನು ಪುನಃ ಬಚ್ಚಲು ಮನೆಗೆ ಎತ್ತಿಕೊಂಡು ಹೋಗಿ, ಅವಳನ್ನು ಸ್ವಚ್ಛಗೊಳಿಸಿ ಸೀರೆಯನ್ನು ಬದಲಾಯಿಸಿ, ವಾಪಸು ನಡುಮನೆಗೆ ಕರೆದುಕೊಂಡು ಬಂದು, ನೆಲದ ಮೇಲೆ ಒಂದು ಹಾಸಿಗೆಯನ್ನು ಹಾಸಿ ಅದರ ಮೇಲೆ ಮಲಗಿಸಿ, ಮಲಗಿದ್ದ ತಂದೆಯನ್ನು ಕರೆತರಲು ಅವರ ಕೊಠಡಿಗೆ ಹೊಗುತ್ತಿರುವಾಗ, ಯಾವುದೋ ಮೋಟಾರು ವಾಹನ ಮನೆ ಮುಂದೆ ಬಂದಂತೆ ಶಬ್ದವಾಯಿತು. ಕಿಶೋರನು ಬಂದನೆಂದು ಭಾವಿಸಿ, ನೋಡಲು ಮುಂದುಗಡೆ ಓಡಿದನು. ಅಷ್ಟು ಹೊತ್ತಿಗೆ ಮೋಟಾರು ವಾಹನ ಹೊರಟು ಹೋಗಿತ್ತು. ಮನೆ ಮುಂದಿದ್ದ ಪಹರೆಯವರು ಆ ಮೋಟಾರು ವಾಹನ ಬಿಂದುಮಾಧವನ ಜೀಪ್ ಎಂದೂ, ಶ್ರೀಪುರದ ಕಡೆಗೆ ಹೋಯಿತೆಂದೂ ಹೇಳಿದರು.

ತಂದೆಯ ಕೋಣೆಗೆ ಹೋಗಿ ಅವರನ್ನು ಮೆತ್ತಗೆ ಗೌರಿ ಮಲಗಿದ್ದ ಸ್ಥಳಕ್ಕೆ ನಡೆಸಿಕೊಂಡು ಬಂದನು. ಅವರಿಬ್ಬರೂ ಅಲ್ಲಿಗೆ ಹೋಗುವುದರೊಳಗಾಗಿ ಗೌರಿ ಇನ್ನೊಂದು ಸಾರಿ ಹಾಸಿಗೆಯ ಮೇಲೆಯೇ ವಾಂತಿ ಮಾಡಿ, "ಅಯ್ಯೋ ಉರೀ ಸಂಕಟ, ಮಾವಾ ನಾ ಸಾಯ್ತೀನಿ" ಎಂದು ಕೂಗುತ್ತಾ ಹೊರಳಾಡುತ್ತಿದ್ದಳು. ಪುರುಷೋತ್ತಮಬಾಬುರವರು ಕಂಗಾಲಾದರು. ಚಂದ್ರಹಾಸನಿಗೆ ಖಾಯಿಲೆ ಕಸಾಲೆಗಳ ಅನುಭವವೇ ಇರಲಿಲ್ಲ. ಅವನಿಗೆ ದಿಕ್ಕು ತೋಚದಂತಾಗಿತ್ತು. ಪುರುಷೋತ್ತಮಬಾಬು ತಕ್ಷಣ ಗೌರಿಯನ್ನು ಶ್ರೀಪುರದ ಆಸ್ಪತ್ರೆಗೆ ಸಾಗಿಸಬೇಕೆಂದು ಮಗನಿಗೆ ಸೂಚಿಸಿದರು. ದುರದೃಷ್ಟವಶಾತ್ ಕಿಶೋರನು ಇನ್ನು ಬಂದಿರಲಿಲ್ಲ. ಚಂದ್ರಹಾಸನು, ಕ್ರಾಂತಿಕೂಟದ ಸಿಪಾಯಿಯೊಬ್ಬನನ್ನು ಕರೆದು, ಬೈಸಿಕಲ್ ಮೇಲೆ ಶ್ರೀಪುರಕ್ಕೆ ಹೋಗಿ ಒಂದು ಟ್ಯಾಕ್ಸಿಯನ್ನು ಮಾಡಿಕೊಂಡು, ತನ್ನ ಮಿತ್ರನಾಗಿದ್ದ ಡಾಕ್ಟರನ್ನು ಕರೆದುಕೊಂಡು ಬರಬೇಕೆಂದು ಆಜ್ಞಾಪಿಸಿದನು. ಸಿಪಾಯಿ ತಕ್ಷಣ ಶ್ರೀಪುರಕ್ಕೆ ಬೈಸಿಕಲ್ ಮೇಲೆ ಹೊರಟನು.

ಗೌರಿಯ ಸ್ಥಿತಿ ನಿಮಿಷ ನಿಮಿಷಕ್ಕೂ ವಿಷಮಿಸುತ್ತಿತ್ತು. ಪುರುಷೋತ್ತಮಬಾಬು ರವರು ವಾಂತಿಯನ್ನು ನಿಲ್ಲಿಸುವುದಕ್ಕಾಗಿ ತಮಗೆ ಗೊತ್ತಿದ್ದ ಮಾತ್ರೆಯನ್ನು ಗೌರಿಯ ಬಾಯಿಗೆ ಹಾಕಿ ನೀರು ಕುಡಿಸಿದರು. ಆದರೆ, ತಕ್ಷಣ ಆ ಮಾತ್ರೆಯ ಸಮೇತ ಮತ್ತೊಮ್ಮೆ ವಾಂತಿ ಮಾಡಿದಳು. ಅನಿಲಪುರದಲ್ಲಿ ಗಿಡಮೂಲಿಕೆಯ ವೈದ್ಯಕ್ಕೆ ಹೆಸರಾಗಿದ್ದ

ಪಂಡಿತನೊಬ್ಬನಿಗೆ ಹೇಳಿ ಕಳುಹಿಸಿದರು. ಗೌರಿಗೆ ಮತ್ತೊಮ್ಮೆ ರಕ್ತಮಿಶ್ರಿತವಾದ ವಾಂತಿಯಾಯಿತು. ಪುರುಷೋತ್ತಮಬಾಬುರವರೂ, ಚಂದ್ರಹಾಸನೂ ದಿಕ್ಕುತೋಚದವರಂತೆ ಆಗಿದ್ದರು. ಅಷ್ಟು ಹೊತ್ತಿಗೆ ಪಂಡಿತನೂ ಬಂದನು; ಕಿಶೋರನೂ ಕಾರಿನಲ್ಲಿ ಬಂದಿಳಿದನು. ಪಂಡಿತನು ಏನೊ ಔಷಧವನ್ನು ಕೊಟ್ಟನು. ಆ ಔಷಧವೂ ವಾಂತಿಯಾಯಿತು. ಅಸ್ತವ್ಯಸ್ತ ಪರಿಸ್ಥಿಯಲ್ಲಿದ್ದ ಗೌರಿಯನ್ನು ಕಾರಿನಲ್ಲಿ ಹಿಂದುಗಡೆ ಮಲಗಿಸಿ ಶ್ರೀಪುರಕ್ಕೆ ಕೊಂಡೊಯ್ದರು.

ಶ್ರೀಪುರವನ್ನು ಸೇರಿದಾಗ ರಾತ್ರಿ ಹನ್ನೆರಡು ಗಂಟೆಯಾಗಿತ್ತು. ಗೌರಿ ದಾರಿಯಲ್ಲಿ ಎರಡು ಸಾರಿ ಭೇದಿಯಾಗಿ ಒಂದು ಸಾರಿ ವಾಂತಿಯಾಗಿ ಪ್ರಜ್ಞಾಶೂನ್ಯಳಾಗಿದ್ದಳು. ಶ್ರೀಪುರದ ದೊಡ್ಡ ಆಸ್ಪತ್ರೆಗೆ ಹೋಗಿ ಮಲಗಿದ್ದ ಡಾಕ್ಟರನ್ನು ಎಚ್ಚರಗೊಳಿಸುವ ಹೊತ್ತಿಗೆ ಹನ್ನೆರಡೂವರೆ ಗಂಟೆಯಾಯಿತು. ಡಾಕ್ಟರು ವಾಂತಿ ನಿಲ್ಲುವುದಕ್ಕೋಸ್ಕರ ಒಂದು ಇಂಜಕ್ಷನ್ ಕೊಟ್ಟು, ಗ್ಲೂಕೋಸ್ ಇಂಜಕ್ಷನ್ ಕೊಡಲು ಸಿದ್ಧತೆ ಮಾಡುತ್ತಿದ್ದಾಗ, ಗೌರಿಯ ಪ್ರಾಣ ಪಕ್ಷಿ ಹಾರಿಹೋಯಿತು. ವಾಂತಿಯನ್ನು ಪರೀಕ್ಷಿಸಿದ ಡಾಕ್ಟರು ಗೌರಿಗೆ ವಿಷಪ್ರಯೋಗವಾಗಿತ್ತೆಂದು ಅಭಿಪ್ರಾಯಪಟ್ಟರು. ಗೌರಿಯನ್ನು ಆಸ್ಪತ್ರೆಗೆ ಸೇರಿಸಿ, ಕಿಶೋರನು ಅವಳ ತಾಯಿ ಪದ್ಮಾವತಿಯನ್ನು ಕರೆತರಲು ಪದ್ಮಾವತಿಯ ಮನೆಗೆ ಹೋಗಿದ್ದನು. ಪದ್ಮಾವತಿಯೂ, ಕಿಶೋರನೂ ಆಸ್ಪತ್ರೆಗೆ ಬರುವ ಹೊತ್ತಿಗಾಗಲೇ ಗೌರಿ ಪರಲೋಕದ ಯಾತ್ರೆಯನ್ನು ಕೈಗೊಂಡಿದ್ದಳು.

ಪದ್ಮಾವತಿ ಮಗಳ ಹೆಣದ ಮೇಲೆ ಬಿದ್ದು ರೋದಿಸುತ್ತಿದ್ದ ದೃಶ್ಯ ಕರುಣಾಜನಕವಾಗಿತ್ತು. ಅನ್ಯ ಜಾತಿಯವನಾದ ಚಂದ್ರಹಾಸನನ್ನು ಮಗಳು ಮದುವೆಯಾಗಿದ್ದರೂ, ಅವರಿಬ್ಬರ ಆದರ್ಶ ದಾಂಪತ್ಯ ಜೀವನವನ್ನು ನೋಡಿ ಅವಳು ಬಹಳ ಸಂತೋಷಪಟ್ಟಿದ್ದಳು. ಮಗಳು ಗರ್ಭಿಣಿಯಾದ ಮೇಲೆ ಅವಳ ಸಂತೋಷಕ್ಕೆ ಪಾರವೇ ಇರಲಿಲ್ಲ. ಒಂದು ತಿಂಗಳ ಹಿಂದೆಯೇ ಮಗಳನ್ನು ಬಲಾತ್ಕರಿಸಿ ಶ್ರೀಪುರಕ್ಕೆ ಕರೆದುಕೊಂಡು ಬಂದಿದ್ದರೆ ಈ ದುರಂತ ಸಂಭವಿಸುತ್ತಿರಲಿಲ್ಲವೆಂದು ಪದ್ಮಾವತಿ ಪಶ್ಚಾತ್ತಾಪದಿಂದ ಮರುಗುತ್ತಿದ್ದಳು. ದುಃಖಾಗ್ನಿಯಿಂದ ಅವಳ ದೇಹ ಸುಡುವಂತಿತ್ತು. ತನ್ನ ಕಣ್ಮುಂದೆ ಮಗಳು ಸಾಯುವುದಕ್ಕಿಂತ ತಾನೇ ಮುಂಚೆ ಸತ್ತಿದ್ದರೆ, ಈ ಘೋರ ದುಃಖ ತನಗೆ ಪ್ರಾಪ್ತಿಯಾಗುತ್ತಿರಲಿಲ್ಲವೆಂದು ಹಲುಬುತ್ತಿದ್ದಳು. ಒಂದು ಕಡೆ ಪದ್ಮಾವತಿ ಹೆಣದ ಮೈಮೇಲೆ ಬಿದ್ದು ರೋದಿಸುತ್ತಿದ್ದರೆ, ಇನ್ನೊಂದು ಕಡೆ ಚಂದ್ರಹಾಸನು ನೆಲದಮೇಲೆ ಬಿದ್ದು ಹುಚ್ಚನಂತೆ ಪ್ರಲಾಪಿಸುತ್ತಿದ್ದನು. ಗೌರಿ ಇಲ್ಲದ ಜಗತ್ತು ಅವನಿಗೆ ಶೂನ್ಯವಾಗಿತ್ತು. ಅಲ್ಲಿದ್ದ ಡಾಕ್ಟರನ್ನು ಕುರಿತು "ನನಗೂ ಸ್ವಲ್ಪ ವಿಷ ಕೊಡಿ ಡಾಕ್ಟರ್" ಎಂದು ಅಂಗಲಾಚಿ ಬೇಡಿಕೊಳ್ಳುತ್ತಿದ್ದನು.

"ಕಿಶೋರ್, ನಾನು ಯಾರಿಗಾಗಿ ಇನ್ನು ಬದುಕಿರಬೇಕು? ನನ್ನನ್ನು ಕೊಲ್ಲುವ ಸಂಚಿಗೆ ಮೊದಲು ನನ್ನಮ್ಮ ಆಹುತಿಯಾದಳು. ಈಗ ಗೌರಿ ಆಹುತಿಯಾದಳು. ಅಪ್ಪ ಇಂದೋ ನಾಳೆಯೋ ಎನ್ನುವ ಸ್ಥಿತಿಯಲ್ಲಿದ್ದಾರೆ. ಇದುವರೆಗೆ ಸಂಭವಿಸಿರುವ ನನ್ನ

ಬಾಳಿನ ಘಟನೆಗಳನ್ನು ಸ್ಮರಿಸಿಕೊಂಡರೆ, ಅನ್ಯಾಯ ಅಸತ್ಯಗಳಿಗೇ ಜಯವೆಂದು ತೋರುತ್ತದೆ. ನಾನು ಬಡಬಗ್ಗರ ಉದ್ಧಾರಕ್ಕೆ ಪಣ ತೊಟ್ಟವನು. ನನ್ನ ಪಾಲಿಗೆ ಸದಾಕಷ್ಟ; ಸದಾ ದುಃಖ; ಸದಾ ಬಡತನ. ಶಂಕರ ಸ್ವಾರ್ಥಸಾಧನೆಗಾಗಿ ಕ್ರಾಂತಿಯ ಪೋಷಾಕನ್ನು ಹಾಕಿದವನು. ಆ ಪಾಪಿ ಸುಖಲೋಲುಪ್ತನಾಗಿ ಮೆರೆಯುತ್ತಿದ್ದಾನೆ. ನಮ್ಮಿಬ್ಬರ ಪೈಪೋಟಿಯಲ್ಲಿ ಇದುವರೆಗೆ ಅವನೇ ಜಯಶೀಲನಾಗಿದ್ದಾನೆ" ಎಂದು ಹೇಳುತ್ತಾ ಚಂದ್ರಹಾಸನು ಆತ್ಮಹತ್ಯಕ್ಕಾಗಿ ಸೊಂಟದಲ್ಲಿದ್ದ ರಿವಾಲ್ವರನ್ನು ತೆಗೆಯುತ್ತಿರುವಾಗ, ಕಿಶೋರನು ಅದನ್ನು ಅವನ ಕೈಯಿಂದ ಕಿತ್ತುಕೊಂಡನು.

"ಚಂದ್ರಹಾಸ, ನಿನ್ನಂತ ಧೀರರು ಕಷ್ಟಕ್ಕೆ ಸಿಕ್ಕಾಗ ವಿವೇಚನಾಶಕ್ತಿಯನ್ನು ಕಳೆದುಕೊಳ್ಳಬಾರದು. ನೀನು ಇದುವರೆಗೆ ಕಷ್ಟಪಟ್ಟಿದ್ದು ಬಡಬಗ್ಗರಿಗಾಗಿ. ಅವರಿಗಾಗಿ ನೀನು ಇನ್ನೂ ಬದುಕಿರಲೇಬೇಕು. ಆ ಪಾಪಿ ಶಂಕರನನ್ನು ಕೊಲ್ಲದೆ, ಹೇಡಿಯಂತೆ ಆತ್ಮಹತ್ಯೆ ಮಾಡಿಕೊಳ್ಳಲು ಹೊರಟಿರುವೆ. ಮನುಷ್ಯರು ಧ್ಯೇಯ ಸಾಧನೆಗಾಗಿ ಬದುಕಿರಬೇಕು. ಮನುಷ್ಯರಿಗೆ ಸಾಯುವುದು ಸುಲಭ; ಬದುಕಿರುವುದು ಕಷ್ಟ" ಎಂದೂ ಕಿಶೋರನು ತನ್ನ ಸ್ನೇಹಿತನನ್ನು ಸಂತೈಸುತ್ತಿದ್ದನು.

ತನ್ನ ಸ್ನೇಹಿತನ ಹಿತವಚನಗಳಿಂದ ಚಂದ್ರಹಾಸನ ದುಃಖ ನಿವಾರಣೆಯಾಗುವಂತಿರಲಿಲ್ಲ. ತಾನು ಮೆಚ್ಚಿ ಮದುವೆಯಾಗಿದ್ದ ಆದರ್ಶ ಪತ್ನಿಯನ್ನು ಕಳೆದುಕೊಂಡಿದ್ದ ದುಃಖ ಅಷ್ಟೊಂದು ಸುಲಭವಾಗಿ ಪರಿಹಾರವಾಗುವಂತಿರಲಿಲ್ಲ. ಒಮ್ಮೊಮ್ಮೆ ದುಃಖ ಪೀಡಿತನಾಗಿ ಗೋಳಿಡುತ್ತಿದ್ದರೆ, ಒಮ್ಮೊಮ್ಮೆ ಶಂಕರನ ಮೇಲಿನ ಸೇಡಿನಿಂದ ಅವನ ರಕ್ತ ಕುದಿಯುತ್ತಿತ್ತು. ಅವನ ಮನೆಯನ್ನು ಕಾಯುತ್ತಿದ್ದ ಪಹರೆಯವರು ಬಿಂದುಮಾಧವನ ಜೀಪು ಅನಿಲಪುರಕ್ಕೆ ಬಂದಿತ್ತೆಂದು ಹೇಳಿದ್ದಾಗಲೇ ಗೌರಿಗೆ ರಾಮಿಯ ಸಹಾಯದಿಂದ ವಿಷಪ್ರಾಶನ ಮಾಡಿಸಿರಬೇಕೆಂದು ಊಹಿಸಿದ್ದನು. ಡಾಕ್ಟರ ಅಭಿಪ್ರಾಯ ಆ ಊಹೆಗೆ ಸಮರ್ಥನೆಯನ್ನು ನೀಡಿತ್ತು ಶಂಕರನೂ, ದಾಯಾದಿ ಬಿಂದುಮಾಧವನೂ ಶರೀಕಾಗಿ ನಾಥು ಮತ್ತು ರಾಮಿಯ ಮೂಲಕ ತನ್ನನ್ನು ಕೊಲ್ಲಬೇಕೆಂದು ಮಾಡಿದ್ದ ಸಂಚಿಗೆ ತನ್ನ ಪತ್ನಿ ಬಲಿಯಾದಳೆಂಬುದು ಚಂದ್ರಹಾಸನಿಗೆ ಮನದಟ್ಟಾಗಿತ್ತು.

ಆಸ್ಪತ್ರೆಯ ಡಾಕ್ಟರು ರಿಪೋರ್ಟ್ ಮಾಡಿದ್ದರ ಮೇಲೆ, ಪೊಲೀಸ್ ಇನ್ಸ್‌ಪೆಕ್ಟರು ಆಸ್ಪತ್ರೆಗೆ ಬಂದು ಚಂದ್ರಹಾಸನನ್ನು ಕುರಿತು, "ನಿಮಗೆ ಯಾರ ಮೇಲಾದರೂ ಅನುಮಾನವಿದೆಯೇ" ಎಂದು ಪ್ರಶ್ನಿಸಿದನು.

"ಬರೀ ಅನುಮಾನವಿಲ್ಲ. ಯಾರೆಂಬುದು ನನಗೆ ಸ್ಪಷ್ಟವಾಗಿ ಗೊತ್ತಾಗಿದೆ. ನಿಮಗೆ ತಾಕತ್ತಿದ್ದರೆ ಕ್ರಾಂತಿಸೇನೆಯ ಶಂಕರನನ್ನೂ, ನಮ್ಮ ದಾಯಾದಿ ಬಿಂದುಮಾಧವನನ್ನೂ, ಬಿಂದುಮಾಧವನ ಸಹಿತ ನಮ್ಮೂರಿನ ನಾಥುವನ್ನೂ, ನಮ್ಮಲ್ಲಿ ಕೆಲಸಕ್ಕಿದ್ದ ರಾಮಿಯನ್ನೂ ದಸ್ತಗಿರಿ ಮಾಡಿ, ಅವರ ಮೇಲೆ ಮೊಕದ್ದಮೆ ಹೂಡಿ. ನಿಮಗೆ ರುಜುವಾತು ಒದಗಿಸುವುದು ನನ್ನ ಜವಾಬ್ದಾರಿ" ಎಂದು ಚಂದ್ರಹಾಸನು ಇನ್ಸ್‌ಪೆಕ್ಟರಿಗೆ ಹೇಳಿದನು.

ಇನ್ಸ್‌ಪೆಕ್ಟರು ಶಂಕರನ ಹೆಸರನ್ನು ಕೇಳಿದ ಮೇಲೆ ಏನೂ ಮಾತನಾಡದೆ "ನೋಡೋಣ" ಎಂದು ಹೇಳಿ ತೆಪ್ಪಗೆ ಹೊರಟುಹೋದರು. ಗೌರಿಯ ದುರ್ಮರಣದ ವಿಚಾರ ಕ್ರಾಂತಿಕೂಟದವರಿಗೆ ಗೊತ್ತಾಗಿ ನೂರಾರು ಸಂಖ್ಯೆಯಲ್ಲಿ ಆಸ್ಪತ್ರೆಯ ಮುಂದೆ ನೆರೆದಿದ್ದರು. ಅವರು ಪೊಲೀಸ್ ಇನ್‌ಪೆಕ್ಟರನ್ನು ನೋಡಿ "ನಿಮಗೆ ಧೈರ್ಯ ಇದ್ದರೆ ಶಂಕರನ ಮೇಲೆ ಕೇಸ್ಹಾಕಿ" ಎಂದು ಅವನನ್ನು ಹೀಯಾಳಿಸಿ ಮಾತನಾಡುತ್ತಿದ್ದರು.

ಬೆಳಗಾಗುತ್ತಲೇ ಗೌರಿಯ ದುರ್ಮರಣದ ವಿಚಾರ ಕಾಳ್ಗಿಚ್ಚಿನಂತೆ ಶ್ರೀಪುರ ನಗರದಲ್ಲಿ ಹರಡಿತ್ತು. ಎಲ್ಲರ ಬಾಯಲ್ಲೂ ಅದೇ ಸುದ್ದಿಯಾಗಿತ್ತು. ಚಂದ್ರಹಾಸನ ಕ್ರಾಂತಿಕೂಟದವರೂ, ಅವನ ಹಿತೈಷಿಗಳೂ, ಆಸ್ಪತ್ರೆಗೆ ಬಂದು ಅವನಿಗೆ ಸಂತಾಪವನ್ನು ಸೂಚಿಸಿ ಅವನನ್ನು ಸಂತೈಸುತ್ತಿದ್ದರು. ಕೃಷ್ಣಕಾಂತನಿಗೂ ಆ ಸುದ್ದಿ ಗೊತ್ತಾಗಿ ಆಸ್ಪತ್ರೆಗೆ ಬಂದಿದ್ದನು. ಗೌರಿ ಚಂದ್ರಹಾಸರ ಮದುವೆಗೆ ಅವನೇ ಸೂತ್ರಧಾರಿಯಾಗಿದ್ದನು. ಅವನಿಗೆ ತಡೆಯಲಾರದಷ್ಟು ದುಃಖವಾಗಿತ್ತು. ದುಃಖವನ್ನು ತಡೆಹಿಡಿದು ಚಂದ್ರಹಾಸನನ್ನೂ ಪದ್ಮಾವತಿಯನ್ನೂ ಸಮಾಧಾನ ಪಡಿಸುತ್ತಿದ್ದನು. ಆಸ್ಪತ್ರೆಯ ಎದುರು ಜನಸಂದಣಿ ಕಿಕ್ಕಿರಿದು ಹೋಗಿತ್ತು. ಶಂಕರನ ಪ್ರೇರಣೆಯಿಂದ ರಾಮಿ, ಗೌರಿಗೆ ವಿಷಮಿಶ್ರಿತ ಹಾಲನ್ನು ಕೊಟ್ಟಳೆಂಬ ಸುದ್ದಿ ಇಡೀ ನಗರದಲ್ಲಿ ಹಬ್ಬಿತ್ತು. ಚಂದ್ರಹಾಸನ ಹಿಂಬಾಲಕರು ರೋಷಾವೇಶಗೊಂಡಿದ್ದರು. ಹೆಣ್ಣಾಳು ರಾಮಿಯ ಮತ್ತು ನಾಥುವಿನ ತಲಾಷೆಗಾಗಿ ಕಿಶೋರನು ಸುಮಾರು ಐವತ್ತು ಅರವತ್ತು ಜನ ಕ್ರಾಂತಿಕೂಟದ ಸಿಪಾಯಿಗಳನ್ನು ಅನಿಲಪುರಕ್ಕೂ, ಇತರ ಕಡೆಗೂ ಅಟ್ಟಿದನು. ಆದರೆ, ರಾಮಿಯೂ, ನಾಥುವೂ ಹಿಂದಿನ ರಾತ್ರಿಯೇ ಬಿಂದುಮಾಧವನ ಜೀಪಿನಲ್ಲಿ ಪರಾರಿಯಾಗಿ ಕ್ರಾಂತಿಸೇನೆಯ ಶಿಬಿರವನ್ನು ಸೇರಿದ್ದರು.

ಅಂದು ಮಧ್ಯಾಹ್ನ ಸಿರಿಮಾವತಿ ನದಿಯ ಮರಳು ದಿಬ್ಬದ ಮೇಲೆ ರುಮಾದೇವಿಯವರನ್ನು ಸುಟ್ಟ ಸ್ಥಳದಲ್ಲಿಯೇ ಗೌರಿಯ ದೇಹವನ್ನು ಸುಟ್ಟರು. ಸಾವಿರಾರು ಜನ ಕ್ರಾಂತಿಕೂಟದವರೂ, ಬಂಧುಬಾಂಧವರೂ ಗೌರಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸಿದರು. ಗೌರಿ ಚಿಕ್ಕ ವಯಸ್ಸಿನವಳಾದರೂ, ಹಲವರ ಪ್ರೀತಿ ಗೌರವಗಳಿಗೆ ಪಾತ್ರಳಾಗಿದ್ದಳು. ಪುರುಷೋತ್ತಮಬಾಬು ಅವರ ಶೋಕಕ್ಕೆ ಮಿತಿಯೇ ಇರಲಿಲ್ಲ. ಅವರಿಗೆ ಗೌರಿ ಮಗಳಂತೆ ಇದ್ದಳು. ಮಗಳಂತೆ ಅವರ ಶುಶ್ರೂಷೆಯನ್ನು ಮಾಡಿದ್ದಳು. ಪುರುಷೋತ್ತಮಬಾಬು ಅವರು ಶೋಕತಪ್ತರಾಗಿ "ಭಗವಂತಾ, ನನಗೇಕೆ ಇಂತಹ ಶಿಕ್ಷೆಯನ್ನು ವಿಧಿಸಿದೆ? ನನ್ನನ್ನೇಕೆ ಇನ್ನೂ ಬದುಕಿಸಿದ್ದೀಯಾ?" ಎಂದು ಸ್ಮಶಾನದಲ್ಲಿ ಗೋಳಿಡುತ್ತಿದ್ದರು. ಚಂದ್ರಹಾಸನು ಓಡಾಡುತ್ತಿದ್ದರೂ, ಮಾತನಾಡುತ್ತಿದ್ದರೂ, ಅರೆ ಪ್ರಜ್ಞೆಯಲ್ಲಿದ್ದವನಂತೆ ವರ್ತಿಸುತ್ತಿದ್ದನು. ಗೌರಿ ಆದರ್ಶ ಪುರುಷನೊಬ್ಬನ ಆದರ್ಶ ಮಡದಿಯಾಗಿ, ಪುರುಷೋತ್ತಮ ಬಾಬು ಅವರ ಮೆಚ್ಚಿನ ಸೊಸೆಯಾಗಿ, ಕ್ರಾಂತಿಕೂಟದ ರಾಣಿಯಾಗಿ, ಸರ್ವಜನರೂ ಮೆಚ್ಚಿದ್ದ ಸಾಧ್ವೀಮಣಿಯಾಗಿದ್ದಳು. ಅವಳಿಲ್ಲದ ಪುರುಷೋತ್ತಮಬಾಬು ಅವರ ಮನೆ ಮೂರ್ತಿ ಇಲ್ಲದ ಪಾಳು ದೇವಾಲಯದಂತಿತ್ತು. ಅವಳಿಲ್ಲದ ಅನಿಲಪುರ ಪಾಳು ಕೊಂಪೆಯಂತಿತ್ತು.

ಚಂದ್ರಹಾಸನನ್ನು ಕೊಲ್ಲಬೇಕೆಂದು ಶಂಕರನು ಹೂಡಿದ್ದ ಸಂಚಿಗೆ ಗೌರಿ ಆಹುತಿಯಾದಳೆಂದು ರಾಜ್ಯದ ಹಲವು ಕಡೆಗಳಲ್ಲಿ ಜನರು ಆಡಿಕೊಳ್ಳುತ್ತಿದ್ದರೂ, ಶಂಕರನು ಮಾತ್ರ ತನ್ನ ಕ್ರಾಂತಿಸೇನೆಗೂ, ಗೌರಿಯ ದುರ್ಮರಣಕ್ಕೂ ಯಾವ ಸಂಬಂಧವೂ ಇಲ್ಲವೆಂದು ಸಾರುತ್ತಿದ್ದನು. ಈಚೆಗೆ ಚಂಚಲೆಯಲ್ಲಿ ಅನುರಕ್ತನಾಗಿದ್ದ ಚಂದ್ರಹಾಸನೇ ಗೌರಿಗೆ ವಿಷಕೊಟ್ಟು ಸಾಯಿಸಿರಬೇಕೆಂದು ಶಂಕರನು ಪಿಸುಮಾತಿನ ಅಪಪ್ರಚಾರವನ್ನು ಕೈಗೊಂಡಿದ್ದನು. ಚಂದ್ರಹಾಸನಿಗೂ, ಗೋಪಾಲನಿಗೂ ವಿರಸವನ್ನು ತಂದೊಡ್ಡುವ ದೃಷ್ಟಿಯಿಂದಲೂ, ಗೌರಿಯ ಕೊಲೆಗೆ ತಾನು ಕಾರಣನಲ್ಲವೆಂಬುದನ್ನು ಸಮರ್ಥಿಸುವ ಸಲುವಾಗಿಯೂ, ಅವನು ಈ ರೀತಿಯ ಪ್ರಚಾರವನ್ನು ಕೈಗೊಂಡಿದ್ದನು. ಈ ಅಪಪ್ರಚಾರ ಚಂದ್ರಹಾಸನ ಕಿವಿಗೂ ಬಿದ್ದಿತ್ತು; ಗೋಪಾಲನ ಕಿವಿಗೂ ಬಿದ್ದಿತ್ತು. ಶಂಕರನ ಅಪಪ್ರಚಾರದಿಂದ ಅವರಿಬ್ಬರಲ್ಲಿ ವಿರಸವುಂಟಾಗುವ ಬದಲು ಮೈತ್ರಿ ಮತ್ತಷ್ಟು ಹೆಚ್ಚಾಗಿತ್ತು. ಈ ಅಪಪ್ರಚಾರವನ್ನು ಕೇಳಿ ಚಂದ್ರಹಾಸನು ಕೋಪದಿಂದ ಕಿಡಿಕಿಡಿಯಾದನು. ಹೆಂಡತಿಯ ಮರಣದಿಂದ ಉಂಟಾದ ಶೋಕಕ್ಕಿಂತ, ಶಂಕರನನ್ನು ಕೊಲ್ಲುವುದು ಹೇಗೆಂಬುದೇ ಅವನ ದೊಡ್ಡ ಚಿಂತೆಯಾಗಿತ್ತು. ಶಂಕರನನ್ನು ಕೊಲ್ಲುವುದೇ ಅವನ ಜೀವನದ ಮುಖ್ಯ ಧ್ಯೇಯವೆಂದು ಅವನು ತೀರ್ಮಾನಿಸಿದ್ದನು. ಹಗಲೂ ರಾತ್ರಿಯೂ ಅದನ್ನೇ ಚಿಂತಿಸುತ್ತಿದ್ದನು.

ತನ್ನ ಗೆಳತಿ ಗೌರಿಯ ದುರ್ಮರಣದ ವಿಚಾರವನ್ನು ಕೇಳಿ, ಚಂಚಲೆ ಅತೀವ ದುಃಖಕ್ಕೊಳಗಾಗಿದ್ದಳು. ಗೌರಿ ತಾನು ಗರ್ಭವತಿಯಾಗಿದ್ದೇನೆಂದು ಕೆಲವು ತಿಂಗಳ ಹಿಂದೆ ಕಾಗದ ಬರೆದಿದ್ದಳು. ಅನಂತರ ಇಬ್ಬರೂ ಆಗಾಗ ಪತ್ರ ವ್ಯವಹಾರ ನಡೆಸುತ್ತಿದ್ದರು. ಚಂಚಲೆ ಅವಳನ್ನು ನೋಡಬಯಸಿದ್ದಳು. ಆದರೆ ನಾನಾ ಕಾರಣಗಳಿಂದ ಪ್ರಯಾಣಕ್ಕೆ ಅವಕಾಶ ಲಭಿಸಿರಲಿಲ್ಲವಾದ್ದರಿಂದ, ಹೆರಿಗೆ ಆದನಂತರ ಹೋಗೋಣವೆಂದು ಯೋಚಿಸಿದ್ದಳು. ಗೌರಿಯ ದುರ್ಮರಣದ ಸುದ್ದಿಯನ್ನು ಪತ್ರಿಕೆಗಳಲ್ಲಿ ಓದಿದಾಗ ಚಂಚಲೆಗೆ ಸಿಡಿಲು ಬಡಿದಂತಾಗಿತ್ತು. ಸಾವಿನ ಸುದ್ದಿ ಗೊತ್ತಾದ ದಿನ ಅನ್ನ ನೀರಿಲ್ಲದೆ ಇಡೀ ದಿನ ಹಾಸಿಗೆ ಹಿಡಿದಿದ್ದಳು. ಗೌರಿಯ ಮರಣದಿಂದ ಸ್ವರೂಪರಾಣಿಯೂ, ಗೋಪಾಲನೂ ಬಹಳ ವ್ಯಥೆಪಟ್ಟಿದ್ದರು.

ಗೌರಿ ಸತ್ತ ಎಂಟು ದಿನಗಳ ನಂತರ, ಚಂದ್ರಹಾಸನಿಗೂ, ಪುರುಷೋತ್ತಮ ಬಾಬು ಅವರಿಗೂ ತಮ್ಮ ಸಂತಾಪವನ್ನು ಸಲ್ಲಿಸುವ ಸಲುವಾಗಿ, ಗೋಪಾಲನೂ, ಚಂಚಲೆಯೂ ಅನಿಲಪುರಕ್ಕೆ ಪ್ರಯಾಣ ಕೈಗೊಂಡರು. ದಾರಿಯಲ್ಲಿ ಶ್ರೀಪುರದಲ್ಲಿ ಸ್ವಲ್ಪಹೊತ್ತು ತಂಗಿದ್ದು, ಅಲ್ಲಿ ಪದ್ಮಾವತಿಯ ಮನೆಗೆ ಹೋಗಿ ಅವಳಿಗೆ ತಮ್ಮ ಸಂತಾಪವನ್ನು ಸೂಚಿಸಿ, ಅಲ್ಲಿಂದ ಕೃಷ್ಣಕಾಂತನ ಮನೆಗೆ ಹೋಗಿ, ಅವನನ್ನು ಕರೆದುಕೊಂಡು ಅನಿಲಪುರಕ್ಕೆ ಹೋದರು.

ಅವರು ಅನಿಲಪುರಕ್ಕೆ ಹೋದಾಗ, ಸಾಯಂಕಾಲ ನಾಲ್ಕು ಗಂಟೆಯಾಗಿತ್ತು. ಚಂಚಲೆ ಹಿಂದಿನಸಾರಿ ಅನಿಲಪುರಕ್ಕೆ ಹೋಗಿದ್ದಾಗ, ಅವಳನ್ನು ಗೌರಿ ಆದರ ಪ್ರೇಮಗಳಿಂದ

ಮನೆಯ ಮುಂಭಾಗದಲ್ಲಿ ಬಂದು ಸ್ವಾಗತಿಸಿದ್ದಳು. ಅದನ್ನು ಸ್ಮರಿಸಿಕೊಂಡು, ಚಂಚಲೆ ಅಳುತ್ತಾ ಕಾರಿನಿಂದಿಳಿದಳು. ಮನೆಯ ಮುಂದುಗಡೆ ಕಾವಲು ಕಾಯುತ್ತಿದ್ದ ಕ್ರಾಂತಿಕೂಟದ ಸಿಪಾಯಿಗಳು ಅವರನ್ನು ಒಳಗೆ ಬಿಡಲು ಒಪ್ಪಲಿಲ್ಲ. ಆದ್ದರಿಂದ ಗೋಪಾಲನು ಹೊರಗಡೆಯಿಂದಲೇ ಚಂದ್ರಹಾಸನ ಹೆಸರನ್ನು ಹಿಡಿದು ಕೂಗಿದನು. ಚಂದ್ರಹಾಸನು ಹೊರಗೆ, ಅತಿಥಿಗಳನ್ನು ಸ್ವಾಗತಿಸಿದನು. ಚಂದ್ರಹಾಸನು ಎಷ್ಟೋ ದಿನಗಳ ಕಾಲ ಖಾಯಿಲೆ ಬಿದ್ದು ಎದ್ದವನಂತೆ ಕೃಶವಾಗಿ ಹೋಗಿದ್ದನು. ಗೌರಿ ಸತ್ತಮೇಲೆ ಕ್ಷೌರವನ್ನು ಸಹ ಮಾಡಿಕೊಂಡಿರಲಿಲ್ಲ. ಮಂಕು ಹಿಡಿದವನಂತೆ ಕಾಣಿಸುತ್ತಿದ್ದನು. ಯಾಂತ್ರಿಕವಾಗಿ ಅತಿಥಿಗಳನ್ನು ಸ್ವಾಗತಿಸಿ, ಹಜಾರಕ್ಕೆ ಕರೆದುಕೊಂಡು ಹೋದನು. ಚಂಚಲೆ ಅಳುತ್ತಲೇ ಇದ್ದಳು. ಕೃಷ್ಣಕಾಂತನು ಚಂದ್ರಹಾಸನ ಸ್ಥಿತಿಯನ್ನು ನೋಡಿ ಮನಸ್ಸಿನಲ್ಲಿಯೇ ಮರುಗುತ್ತಿದ್ದನು. ಗೋಪಾಲನು ಸಾಂಪ್ರದಾಯಿಕವಾಗಿ ತನ್ನ ಸಂತಾಪವನ್ನು ವ್ಯಕ್ತಪಡಿಸಿದನು. ಚಂದ್ರಹಾಸನು ಶೋಕಭರಿತನಾಗಿ ಏನು ಮಾತನಾಡಬೇಕೆಂಬುದು ತೋಚದೆ ಕಣ್ಣೀರು ಸುರಿಸುತ್ತಾ ಕುಳಿತಿದ್ದನು. ಕೆಲವು ನಿಮಿಷಗಳ ಕಾಲ ಎಲ್ಲರೂ ಮೌನವಾಗಿ ಕುಳಿತಿದ್ದರು. ನಂತರ ಹಿರಿಯನಾದ ಕೃಷ್ಣಕಾಂತನೇ ಮೊದಲು ಮಾತನ್ನು ಆರಂಭಿಸಿ, "ಚಂದ್ರಹಾಸ, ನೀನು ಬಹಳ ಸೊರಗಿಹೋಗಿದ್ದೀಯಾ. ಆದದ್ದು ಆಗಿಹೋಯಿತು. ಧೈರ್ಯ ತಾಳು. ನೀನು ಹೀಗೆ ಅಳುತ್ತಾ ಕುಳಿತರೆ ಕ್ರಾಂತಿಸೇನೆಯ ಉಪಟಳ ಇನ್ನೂ ಹೆಚ್ಚಾಗುತ್ತದೆ" ಎಂದನು.

ಚಂದ್ರಹಾಸನು ತನ್ನ ದುಃಖವನ್ನು ಶಮನ ಮಾಡಿಕೊಂಡು, ಅತಿಥಿಗಳ ಯೋಗಕ್ಷೇಮವನ್ನು ವಿಚಾರಿಸಿದನು. ಅನಂತರ ಹೆಣ್ಣಾಳು ರಾಮಿ, ಶಂಕರನ ಪಿತೂರಿಗೊಳಗಾಗಿ ತನ್ನ ಮನೆಯನ್ನು ಸೇರಿಕೊಂಡು, ತನ್ನನ್ನು ಕೊಲ್ಲುವ ಉದ್ದೇಶದಿಂದ ಗೌರಿಗೆ ವಿಷಮಿಶ್ರಿತ ಹಾಲನ್ನು ಕೊಟ್ಟ ಸಂಗತಿಯನ್ನು ವಿಶದವಾಗಿ ವಿವರಿಸಿದನು. ಅಲ್ಲದೆ ಬಿಂದುಮಾಧವನೂ ನಾಥುವೂ ಆ ಪಿತೂರಿಯಲ್ಲಿ ಸೇರಿದ್ದರೆಂಬುದನ್ನು ಅತಿಥಿಗಳಿಗೆ ತಿಳಿಸಿದನು.

"ಬಿಂದುಮಾಧವ ಅಂದರೆ ಯಾರು?" ಎಂದು ಚಂಚಲೆ ಪ್ರಶ್ನಿಸಿದಳು.

"ಬಿಂದುಮಾಧವ ನಮ್ಮ ದಾಯಾದಿ."

"ಅವನಿಗೇಕೆ ನಿಮ್ಮಮೇಲೆ ಮತ್ಸರ?"

"ದಾಯಾದಿ ಮಾತ್ಸರ್ಯ; ಒಣ ಹೊಟ್ಟೆಕಿಚ್ಚು. ಅವನು ಕಳ್ಳ ವ್ಯಾಪಾರದಿಂದ ಬೇಕಾದಷ್ಟು ಕಳ್ಳಹಣ ಒಟ್ಟು ಮಾಡಿದ್ದಾನೆ. ತಾನೊಬ್ಬ ರಾಜಕೀಯ ಮುಖಂಡನಾಗಬೇಕೆಂಬ ಉದ್ದೇಶದಿಂದ ಕಮ್ಯೂನಿಸ್ಟಾಗಿ ಶಂಕರನ ಸೇನೆಯನ್ನು ಸೇರಿಕೊಂಡಿದ್ದಾನೆ. ನನ್ನನ್ನು ಅವನು ಬಂಡವಾಳಗಾರರ ಬಾಲಬಡುಕ ಎನ್ನುತ್ತಾನೆ" ಎಂದು ಚಂದ್ರಹಾಸ ನುಡಿದನು.

"ನಮ್ಮ ದೇಶದ ರಾಜಕಾರಣ ಬಹು ವಿಚಿತ್ರ, ಅಕ್ರಮ ಸಂಪಾದನೆಯ ಆಗರ್ಭ ಶ್ರೀಮಂತರೂ, ಯಾವುದಕ್ಕೂ ಹೇಸದ ದುಷ್ಟರೂ, ಸೋಷಿಯಲಿಸ್ಟರೂ, ಕಮ್ಯೂನಿಸ್ಟರೂ

ಆಗಿದ್ದಾರೆ. ಪ್ರಾಮಾಣಿಕವಾಗಿ ಜೀವನ ನಡೆಸುವ ಸಭ್ಯರು ಪ್ರತಿಗಾಮಿಗಳು! ಬಹಳ ಚೆನ್ನಾಗಿದೆ!" ಎಂದು ಚಂಚಲೆ ಹೇಳಿದಳು.

"ಜನ ಮೂರ್ಖರಾದಾಗ ಧೂರ್ತರು ಅವರ ಮುಖಂಡರಾಗುತ್ತಾರೆ. ಶಂಕರ ನನ್ನನ್ನು ಬಂಡವಾಳಗಾರರ ಕುನ್ನಿ, ಬೂರ್ಷ್ವಾ ಎನ್ನುತ್ತಾನೆ."

ಈ ರೀತಿ ಚಂಚಲೆ ಮತ್ತು ಚಂದ್ರಹಾಸ ಮಾತನಾಡುತ್ತಿದ್ದಾಗ, ಕೃಷ್ಣಕಾಂತನು ಪುರುಷೋತ್ತಮಬಾಬು ಅವರನ್ನು ನೋಡಬೇಕೆಂದು ಸೂಚಿಸಿದನು. ಅನಂತರ ಎಲ್ಲರೂ ಸೇರಿ ಬಾಬು ಅವರು ಮಲಗಿದ್ದ ಕೊಠಡಿಗೆ ಹೋದರು. ಬಾಬು ಅವರು ಹಾಸಿಗೆ ಹಿಡಿದು ಮಲಗಿದ್ದರು. ಗೌರಿಯ ಮರಣದಿಂದ ಅವರ ಮನಸ್ಸೂ, ದೇಹವೂ ಜರ್ಜರಿತವಾಗಿ ಹೋಗಿದ್ದವು. ಅತಿಥಿಗಳನ್ನು ನೋಡಿದೊಡನೆ "ಬನ್ನಿ ಕುಳಿತುಕೊಳ್ಳಿ" ಎಂದು ಕೊಠಡಿಯಲ್ಲಿದ್ದ ಕುರ್ಚಿಗಳ ಕಡೆಗೆ ಕೈ ತೋರಿಸಿದರು. ಕೃಷ್ಣಕಾಂತನು "ತಮ್ಮ ಆರೋಗ್ಯ ಹೇಗಿದೆ?" ಎಂದು ಬಾಬು ಅವರನ್ನು ಕೇಳಿದನು.

"ಕೃಷ್ಣ, ಬದುಕಲು ಮನಸ್ಸಿಲ್ಲಾ; ಸಾವು ಬರುವುದಿಲ್ಲ. ಸಾವು ಸಾಯಬೇಕೆನ್ನುವವರ ಹತ್ತಿರ ಸುಳಿಯುವುದೇ ಇಲ್ಲ; ಇನ್ನೂ ಬದುಕಿರಬೇಕೆನ್ನುವವರನ್ನು ಬಹುಬೇಗ ಕೊಂಡೊಯ್ಯುತ್ತದೆ. ಯಾವ ಸೌಭಾಗ್ಯಕ್ಕಾಗಿ ನಾನು ಬದುಕಿರಬೇಕಾಗಿದೆ ಹೇಳು."

"ಚಂದ್ರಹಾಸನಿಗಾಗಿ ತಾವು ಬದುಕಿರಬೇಕು."

"ಅವನ ಹಣೆಯಲ್ಲಿ ಏನು ಬರೆದಿದೆಯೋ ದೇವರಿಗೇ ಗೊತ್ತು. ನನ್ನ ಮಗ ಒಳ್ಳೆಯವನು. ಒಳ್ಳೆಯವರ ಮೇಲೆ ದೇವರ ಒಲುಮೆ ಇದೆಯೆಂದು ಹೇಳುತ್ತಾರೆ. ಅದು ನಿಜವಾಗಿದ್ದರೆ ಆ ದೇವನು ಅವನನ್ನು ಕಾಪಾಡುತ್ತಾನೆ."

"ಜನರಿಗೆ ಮಾರ್ಗದರ್ಶನ ನೀಡುವ ಸಲುವಾಗಿಯಾದರೂ ತಾವು ಬದುಕಿರಬೇಕು" ಎಂದು ಗೋಪಾಲ್ ನುಡಿದನು.

"ಗೋಪಾಲ್, ನನ್ನಂತಹವರು ಮಾರ್ಗದರ್ಶನ ನೀಡುವ ಕಾಲ ಮುಗಿದು ಹೋಗಿದೆ. ಇದು ದುಷ್ಟರ ಮತ್ತು ಭ್ರಷ್ಟರ ಯುಗ. ದುಷ್ಟರು ಕ್ರಾಂತಿಯ ಸೋಗಿನಲ್ಲಿ ಮಾನವಿಯತೆಗೆ ತಿಲಾಂಜಲಿಯನ್ನು ಕೊಟ್ಟಿದ್ದಾರೆ. ಭ್ರಷ್ಟರು ಪ್ರಜಾಪ್ರಭುತ್ವದ ಹೆಸರಿನಲ್ಲಿ ಸತ್ಯಕ್ಕೆ ತಿಲಾಂಜಲಿಯನ್ನು ಕೊಟ್ಟಿದ್ದಾರೆ ಜನರೂ ಕೆಟ್ಟು ಹೋಗಿದ್ದಾರೆ. ಕೆಲವರು ದುಷ್ಟರ ಕೈಗೊಂಬೆಗಳಾಗಿದ್ದಾರೆ; ಕೆಲವರು ಭ್ರಷ್ಟರ ಕೈಗೊಂಬೆಗಳಾಗಿದ್ದಾರೆ. ಇಂತಹವರ ಮಧ್ಯೆ ಬದುಕಿರುವುದಕ್ಕಿಂತ ಸಾಯುವುದೇ ಮೇಲು. ಸತ್ಯಕ್ಕೆ ಅಂತಿಮವಾಗಿ ಜಯ ಲಭಿಸುತ್ತದೆ ಎಂದು ಸಕಲ ಧರ್ಮಗಳೂ ಸಾರುತ್ತಿವೆ. ಅದು ನನ್ನ ಪಾಲಿಗೆ ಸುಳ್ಳಾಯಿತು. ದೇವರೂ ಸಹ ನನ್ನನ್ನು ಕೈಬಿಟ್ಟಿದ್ದಾನೆ. ನಾನು ಸಾಯಲೇಬೇಕು ಗೋಪಾಲ್. ಜಾಗ್ರತೆ ಸಾಯಬೇಕೆಂದು ಭಗವಂತನಲ್ಲಿ ಮೊರೆಯಿಡುತ್ತೇನೆ" ಎಂದು ಆವೇಶಭರಿತರಾಗಿ, ಪುರುಷೋತ್ತಮಬಾಬುರವರು ಮಾತನಾಡಿ, ಬಳಲಿಕೆಯಿಂದ ಸ್ವಲ್ಪ ಹೊತ್ತು ಹಾಗೆಯೇ ಕಣ್ಮುಚ್ಚಿ ನಿದ್ರಿಸುತ್ತಿರುವವಂತೆ ಮಲಗಿದ್ದರು, ಹತ್ತು ನಿಮಿಷಗಳ ನಂತರ ಪುನಃ ಕಣ್ತೆರೆದು, ಕೃಷ್ಣಕಾಂತನ ವಕೀಲಿವೃತ್ತಿ ಹೇಗೆ ನಡೆದಿದೆ ಎಂಬುದನ್ನು ವಿಚಾರಿಸಿದರು. ಅನಂತರ

ಗೋಪಾಲನ ಕಡೆಗೆ ತಿರುಗಿ "ನಿಮ್ಮ ಇಂದಿರಾಗಾಂಧಿಯವರ ಕಾಂಗ್ರೆಸ್ ಯಾವ ಜಾಡನ್ನು ಹಿಡಿದಿದೆ?" ಎಂದು ಪ್ರಶ್ನಿಸಿದರು.

"ಹಳೆಯ ಜಾಡನ್ನು ಬಿಟ್ಟು ಹೊಸ ಹಾದಿಯನ್ನು ಹಿಡಿದಿದ್ದೇವೆ" ಎಂದು ಗೋಪಾಲ್ ನುಡಿದನು.

"ಗೋಪಾಲ್, ನನಗೆ ನೀವು ಹೊಸ ಹಾದಿಯನ್ನು ಹಿಡಿಯುತ್ತೀರೆಂಬ ಭರವಸೆ ಸ್ವಲ್ಪವೂ ಇಲ್ಲ. ನಿಮ್ಮ ಪಾರ್ಟಿಯಲ್ಲಿ ನಿನ್ನಂತಹ ಸಭ್ಯರಿಗಿಂತ ಸಮಯ ಸಾಧಕರೇ ಹೆಚ್ಚು. ಆ ಸಮಯಸಾಧಕರು ದುರಭ್ಯಾಸದ ಹಳೆಯ ಜಾಡನ್ನು ಬಿಟ್ಟು ಹೊಸ ಹಾದಿಯನ್ನು ಹಿಡಿಯಲು ಹೇಗೆ ಸಾಧ್ಯ? ಈ ದೇಶದಲ್ಲಿ ರಾಜಕಾರಣ ದೊಂಬರಾಟ ಇದು ಹಾಗೆ" ಎಂದು ಹೇಳಿ ಮತ್ತೆ ಬಳಕೆಯಿಂದ ಬಾಬು ಅವರು ಕಣ್ಮುಚ್ಚಿದರು.

"ನೀವು ಹೆಚ್ಚು ಮಾತನಾಡಬೇಡಿ; ಆಯಾಸ ಹೆಚ್ಚಾಗುತ್ತದೆ. ನಾನು ಹೊರಡುತ್ತೇನೆ. ಗೋಪಾಲ ಮತ್ತು ಚಂಚಲಾ ಇಲ್ಲೇ ಈ ದಿನ ಇರುತ್ತಾರೆ. ನಾನು ಮುಂದಿನವಾರ ಬರುತ್ತೇನೆ" ಎಂದು ಕೃಷ್ಣಕಾಂತ್ ಹೇಳಿದನು.

"ಕೃಷ್ಣ, ನೀನು ಇಂದು ಇಲ್ಲೇ ಇರಬೇಕು. ನೀನು ಮುಂದಿನವಾರ ಬರುವವರೆಗೆ ನಾನು ಬದುಕಿರುತ್ತೇನೆಯೋ ಇಲ್ಲವೋ, ಯಾರಿಗೆ ಗೊತ್ತು" ಎಂದು ಬಾಬು ಅವರ ಕೃಷ್ಣಕಾಂತನ ಕಡೆಗೆ ವಾತ್ಸಲ್ಯ ಪೂರ್ವಕವಾಗಿ ನೋಡಿದರು.

"ಆಗಲಿ, ತಮ್ಮ ಅಪ್ಪಣೆಯಂತೆ ಇಂದು ಇಲ್ಲೇ ಇರುತ್ತೇನೆ" ಎಂದು ಕೃಷ್ಣಕಾಂತ್ ಹೇಳಿದನು.

ರಾತ್ರಿ ಎಂಟುಗಂಟೆಯ ಸಮಯ. ನಡುಮನೆಯಲ್ಲಿ ಚಂದ್ರಹಾಸನು ಅತಿಥಿಗಳೊಡನೆ ಮಾತನಾಡುತ್ತಿದ್ದನು. ಅಡುಗೆಯವನು ಊಟಕ್ಕೆ ಸಿದ್ಧವಾಗಿದೆಯೆಂದೂ, ಊಟಕ್ಕೆ ಏಳಬೇಕೆಂದೂ ಚಂದ್ರಹಾಸನಿಗೆ ಹೇಳಿದನು. ಎಲ್ಲರೂ ಊಟಕ್ಕೆ ಏಳಬೇಕೆಂದಿರುವಾಗ, ಪುರುಷೋತ್ತಮಬಾಬುರವರು ತಮ್ಮ ಕೊಠಡಿಯಿಂದ, 'ಚಂದ್ರಾ' ಎಂದು ಕರೆದರು. ಚಂದ್ರಹಾಸನು ತಂದೆಯ ಕೋಣೆಗೆ ಹೋಗಿ, "ಯಾಕಪ್ಪಾ ಕರೆದದ್ದು" ಎಂದು ಕೇಳಿದನು.

"ನಾನು ದೇವರಕೋಣೆಗೆ ಹೋಗಿ ಬಹಳ ದಿನಗಳಾದವು. ಇಂದು ಹೋಗಬೇಕೆಂದು ಮನಸ್ಸಾಗಿದೆ. ಸ್ವಲ್ಪ ಕರ್ಕೊಂಡು ಹೋಗ್ತೀಯಾ"

"ಏನಪ್ಪಾ, ನೀವು ಹೇಳೋದು? ತುಂಬಾ ನಿಶ್ಶಕ್ತಿಯಿದೆ. ದೇವರು ಇದುವರೆಗೆ ಕೊಟ್ಟಿರುವ ವರಪ್ರಸಾದ ಸಾಕು."

"ಹಾಗೆ ಹೇಳಬೇಡಪ್ಪಾ. ನಮಗೊದಗಿದ ಸುಖ ಕಷ್ಟಗಳ ಆಧಾರದ ಮೇಲೆ ದೇವರನ್ನು ಅಳೆಯಬಾರದು. ನಿನಗೆ ಆಧ್ಯಾತ್ಮಿಕ ವಿಚಾರಗಳು ತಿಳಿಯುವುದಿಲ್ಲ. ಮೆಲ್ಲಗೆ ನನ್ನನ್ನು ಕರೆದುಕೊಂಡು ಹೋಗು."

"ಹಾಗಾದರೆ ಎತ್ತಿಕೊಂಡು ಹೋಗುತ್ತೇನೆ, ಬನ್ನಿ."

"ಬೇಡ, ಮೆಲ್ಲಗೆ ನಡೆದುಕೊಂಡು ಬರುತ್ತೇನೆ. ನೀನು ನನ್ನ ಕೈ ಹಿಡಿದುಕೊಂಡರೆ ಸಾಕು" ಎಂದು ಬಾಬು ಅವರು ಮಗನಿಗೆ ಹೇಳಿದರು.

ತಂದೆಯ ಮಾತನ್ನು ಕೇಳಿ ಚಂದ್ರಹಾಸನಿಗೆ ಆಶ್ಚರ್ಯವಾಯಿತು. ಗೌರಿ ಸತ್ತಮೇಲೆ ಬಾಬುರವರು ತಮ್ಮ ಕೊಠಡಿಯನ್ನು ಬಿಟ್ಟು ಹೊರಗಡೆ ಬಂದಿರಲೇ ಇಲ್ಲ. ಮಲಮೂತ್ರ ವಿಜರ್ಸನೆಗೆ ಏಳುವುದು ಸಹ ಅವರಿಗೆ ಕಷ್ಟವಾಗಿತ್ತು. ಯಾರಾದರು ಅವರನ್ನು ಹಿಡಿದೆತ್ತಿ ಪಕ್ಕದ ಕಕ್ಕಸು ಕೋಣೆಗೆ ಮೆತ್ತಗೆ ಕರೆದುಕೊಂಡು ಹೋಗಬೇಕಾಗಿತ್ತು. ಬಾಬು ಅವರು ಮಂಚದಿಂದ ಚಂದ್ರಹಾಸನ ಸಹಾಯವಿಲ್ಲದೆ ಅವರಾಗಿಯೇ ಎದ್ದುನಿಂತರು. ಚಂದ್ರಹಾಸನು ಅವರ ಒಂದು ಕೈಯನ್ನು ಮಾತ್ರ ಹಿಡಿದುಕೊಂಡನು. ಅವರು ಹೆಚ್ಚು ಶ್ರಮವಿಲ್ಲದೆ ದೇವರಕೋಣೆಗೆ ನಡೆದುಕೊಂಡು ಹೋದರು. ದೇವರಕೋಣೆಗೆ ಹೋದನಂತರ "ನಿಮಗೆಲ್ಲಾ ಊಟವಾಯಿತೆ?" ಎಂದು ಮಗನನ್ನು ಕೇಳಿದರು.

"ಇಲ್ಲ, ಆಗಿಲ್ಲ, ಈಗ ಊಟಕ್ಕೆ ಹೋಗ್ತೀವಿ" ಎಂದು ಚಂದ್ರಹಾಸ ಹೇಳಿದನು.

"ಹಾಗಾದರೆ ನೀನು ಹೋಗು. ನೀವೆಲ್ಲಾ ಊಟ ಮಾಡುವವರೆಗೆ ನಾನು ಇಲ್ಲೇ ಧ್ಯಾನ ಮಾಡುತ್ತಾ ಇರುತ್ತೇನೆ" ಎಂದರು.

ಚಂದ್ರಹಾಸನು ಒಂದು ಒರಗು ದಿಂಬನ್ನು ತಂದುಕೊಟ್ಟನು. ಬಾಬು ಅವರು ದಿಂಬಿಗೊರಗಿ ಕುಳಿತುಕೊಂಡು, "ನೀನು ಹೋಗು. ಕದವನ್ನು ಎಳೆದುಕೊಂಡು ಹೋಗು. ದೇವರು ನಿನ್ನನ್ನು ಕಾಪಾಡಲಿ" ಎಂದರು. ಚಂದ್ರಹಾಸನು ತಂದೆಯ ಅಪೇಕ್ಷೆಯಂತೆ ಕದವನ್ನು ಮುಚ್ಚಿಕೊಂಡನು. "ಅಪ್ಪನ ಆರೋಗ್ಯ ಸುಧಾರಿಸುತ್ತಾ ಇದೆ" ಎಂದು ಮನಸ್ಸಿನಲ್ಲಿಯೇ ಅಂದುಕೊಂಡು, ಅತಿಥಿಗಳಿದ್ದಲ್ಲಿಗೆ ಹೋಗಿ, ಅವರನ್ನು ಊಟದ ಮನೆಗೆ ಕರೆದುಕೊಂಡು ಹೋದನು. ಊಟ ಮಾಡುತ್ತಿರುವಾಗ, ಗೋಪಾಲನೂ, ಚಂದ್ರಹಾಸನೂ ಪ್ರಚಲಿತ ರಾಜಕಾರಣದ ವಿಚಾರವಾಗಿ ಮಾತನಾಡುತ್ತಿದ್ದರು. ಚಂಚಲೆಯೂ, ಕೃಷ್ಣಕಾಂತನೂ ಗೃಹಕೃತ್ಯಕ್ಕೆ ಸಂಬಂಧಪಟ್ಟ ವಿಚಾರಗಳನ್ನು ಕುರಿತು ಮೆತ್ತಗೆ ಮಾತನ್ನಾಡುತ್ತಿದ್ದರು. ಮಾತುಕತೆಗಳ ಮಧ್ಯೆ ಚಂಚಲೆಗೆ ಪದೇ ಪದೇ ಗೌರಿಯ ನೆನಪಾಗುತ್ತಿತ್ತು. ಊಟದ ಮನೆಯಲ್ಲಿದ್ದ ಸಮಸ್ತ ವಸ್ತುಗಳೂ ಅವಳಿಗೆ ಗೌರಿಯ ನೆನಪನ್ನು ತಂದುಕೊಂಡುತ್ತಿದ್ದವು. ಹಿಂದೆ ಬಂದಿದ್ದಾಗ ಗೌರಿ ತನ್ನೊಡನೆ ಮಾತನಾಡಿದ್ದ ವಿಷಯಗಳನ್ನು ಸ್ಮರಿಸಿಕೊಂಡು ಮರುಗಿ ನಿಟ್ಟುಸಿರು ಬಿಡುತ್ತಿದ್ದಳು.

ಊಟವಾದ ಮೇಲೆ, ಚಂದ್ರಹಾಸನು ಅತಿಥಿಗಳನ್ನು ನಡುಮನೆಯಲ್ಲಿ ಕುಳ್ಳಿರಿಸಿ, ತಂದೆಯನ್ನು ದೇವರಕೋಣೆಯಿಂದ ಅವರ ಕೊಠಡಿಗೆ ಕರೆದುಕೊಂಡು ಹೋಗುವ ಉದ್ದೇಶದಿಂದ ದೇವರ ಕೋಣೆಗೆ ಹೋದನು. ಪುರುಷೋತ್ತಮ ಬಾಬುರವರು ಮುಖ ಅಡಿಯಾಗಿ ಎರಡು ಕೈಗಳನ್ನು ಮುಂದೆ ಚಾಚಿ, ದೇವರಿಗೆ ಅಡ್ಡ ಬಿದ್ದಿರುವಂತೆ, ನೆಲದ ಮೇಲೆ ಬಿದ್ದಿದ್ದರು. ತಂದೆ ದೇವರಿಗೆ ನಮಸ್ಕರಿಸುತ್ತಿರಬಹುದೆಂಬ ಭಾವನೆಯಿಂದ, ಚಂದ್ರಹಾಸನು ಸ್ವಲ್ಪಹೊತ್ತು ಅವರ ಕಡೆಗೆ ನೋಡುತ್ತಾ ನಿಂತಿದ್ದನು. ಬಾಬು ಅವರು ಮೇಲಕ್ಕೇಳಲೇ ಇಲ್ಲ. 'ಅಪ್ಪಾ' ಎಂದು ಕೂಗಿದನು. ಪ್ರತ್ಯುತ್ತರವಿರಲಿಲ್ಲ. ಹತ್ತಿರ ಹೋಗಿ

ಬಗ್ಗಿ ನೋಡಿದನು. ಹಿಡಿದೆತ್ತಿ ಕುಳ್ಳಿರಿಸಲು ಪ್ರಯತ್ನಿಸಿದನು. ದೇಹ ಸೆಟೆದು ಕೊಂಡಿರುವಂತೆ ತೋರಿತು. "ಅಯ್ಯೋ ಅಪ್ಪಾ, ನನ್ನನ್ನು ಬಿಟ್ಟು ಹೋದಿರಾ" ಎಂದು ಗೋಳಾಡುತ್ತಾ, "ಕೃಷ್ಣಕಾಂತ್ ಜಾಗ್ರತೆ ಬನ್ನಿ" ಎಂದು ಕೂಗಿದನು.

ಚಂದ್ರಹಾಸನ ಕೂಗನ್ನು ಕೇಳಿದ ಮೂವರು ಅತಿಥಿಗಳೂ, ದೇವರಕೋಣೆಗೆ ಓಡಿದರು. ಚಂದ್ರಹಾಸನು ತಂದೆಯ ಹೆಣದ ಪಕ್ಕದಲ್ಲಿ ಕುಳಿತು ಅಳುತ್ತಿದ್ದನು. ಕೃಷ್ಣಕಾಂತನು ನಾಡಿಯನ್ನು ಹಿಡಿದು ನೋಡಿದನು. ನಾಡಿ ನಿಂತುಹೋಗಿತ್ತು; ದೇಹ ತಣ್ಣಗಾಗಿತ್ತು. ಪ್ರಾಣ ಹೋಗಿದೆ ಎಂದು ಸ್ಪಷ್ಟವಾಯಿತು. ಎಲ್ಲರೂ ಸೇರಿ ದೇಹವನ್ನು ಹಿಡಿದೆತ್ತಿ ಕೈ ಕಾಲುಗಳನ್ನು ನೆಟ್ಟಗೆ ಮಾಡಿ, ಅಂಗಾತಲಾಗಿ ನಡುಮನೆಯಲ್ಲಿ ಒಂದು ಹಾಸಿಗೆಯ ಮೇಲೆ ಮಲಗಿಸಿದರು.

"ಕೃಷ್ಣಕಾಂತರೇ, ನನ್ನ ಬಾಳಿನ ದುರಂತ ನಾಟಕದಲ್ಲಿ ಮೂರನೇ ಅಂಕ ಮುಗಿಯಿತು. ಕೊನೆಯ ಅಂಕ ಒಂದು ಉಳಿದಿದೆ. ಅದು ಜಾಗ್ರತೆ ಮುಗಿದರೆ ಕ್ಷೇಮ. ನಾನು ದೇವರಕೋಣೆಯಲ್ಲಿ ಅವರನ್ನು ಬಿಟ್ಟು ಬರುತ್ತಿರುವಾಗ "ದೇವರು ನಿನ್ನನ್ನು ಕಾಪಾಡಲಿ" ಎಂದು ಹರಸಿದರು. ಅವರು ಸ್ವಾಭಾವಿಕವಾಗಿ ಹಾಗೆಂದರು ಎಂದು ಭಾವಿಸಿದ್ದೆ. ಅದು ಅವರ ಕೊನೆಯ ಆಶೀರ್ವಾದವೆಂದು ನನಗೆ ಗೊತ್ತಾಗಲಿಲ್ಲ. ದುಃಖ ಪರಂಪರೆಯಿಂದ ನನ್ನ ಹೃದಯ ಕಲ್ಲಾಗಿ ಹೋಗಿದೆ. ನನಗೆ ಇನ್ನೇನಾಗಬೇಕು? ಶಂಕರನನ್ನ ಕೊಲ್ಲುವುದು ಅಥವಾ ಅವನಿಂದ ನಾನು ಕೊಲೆಯಾಗುವುದು ಮಾತ್ರ ಉಳಿದಿದೆ" ಎಂದು ಚಂದ್ರಹಾಸನು ದುಃಖಿಸುತ್ತಿದ್ದನು.

ಗೋಪಾಲನೂ, ಕೃಷ್ಣಕಾಂತನೂ ಚಂದ್ರಹಾಸನನ್ನು ಸಂತೈಸುತ್ತಿದ್ದರು. ಚಂಚಲೆ ಗೌರಿಯನ್ನು ಸ್ಮರಿಸಿಕೊಂಡು ವ್ಯಥೆಪಡುತ್ತಿದ್ದಳು. ಅದರ ಜೊತೆಗೆ ಬಾಬು ಅವರ ಅನಿರೀಕ್ಷಿತ ಮರಣ ಅವಳಿಗೆ ಮತ್ತಷ್ಟು ವ್ಯಾಕುಲವನ್ನುಂಟುಮಾಡಿತ್ತು. ಚಂದ್ರಹಾಸನಿಗೆ ಒಂದರ ಮೇಲೊಂದರಂತೆ ಪದೇ ಪದೇ ಬರುತ್ತಿದ್ದ ವಿಪತ್ತುಗಳನ್ನು ನೋಡಿ ಅವಳಿಗೆ ಅವನ ಮೇಲೆ ಬಹಳ ಅನುಕಂಪ ಉಂಟಾಗಿತ್ತು. ಹೆಂಗರುಳಿನ ದುಃಖ ಅನುಕಂಪಗಳು ಕಣ್ಣೀರಿನ ರೂಪದಲ್ಲಿ ಹೊರಹೊಮ್ಮಿ ಬರುತ್ತಿದ್ದವು. ಕೃಷ್ಣಕಾಂತನಿಗೆ ಪುರುಷೋತ್ತಮಬಾಬು ಅವರು ಗುರುವಿನೋಪಾದಿಯಲ್ಲಿದ್ದರು. ಅವರು ಅವನಿಗೆ ಸಹಾಯಕರಾಗಿ ಮಾರ್ಗದರ್ಶಕ ರಾಗಿದ್ದರು. ಅವರ ಸಹಾಯದಿಂದಲೇ ಅವನು ವಕೀಲನಾಗಿ ಪ್ರವರ್ಧಮಾನಕ್ಕೆ ಬಂದಿದ್ದನು. ಅವರ ನೆರವಿನಿಂದಲೇ ಚಂಚಲೆಗೆ ಮದುವೆಯಾಗಿತ್ತು. ಅವನು ಅದನ್ನೆಲ್ಲಾ ಸ್ಮರಿಸಿಕೊಂಡು ದುಃಖಪಡುತ್ತಿದ್ದನು.

"ಪೂಜ್ಯ ಗುರುವೇ, ನನ್ನನ್ನು ಬಿಟ್ಟು ಹೋದಿರಾ? ನನಗೆ ತಂದೆಯೋಪಾದಿ ಯಲ್ಲಿದ್ದಿರಿ. "ನೀನು ಮುಂದಿನವಾರ ಬರುವವರೆಗೆ ನಾನು ಬದುಕಿರುತ್ತೇನೋ ಇಲ್ಲವೋ" ಎಂದು ಸಾಯಂಕಾಲ ನೀವು ನನಗೆ ಹೇಳಿದ್ದರ ತಾತ್ಪರ್ಯ ಈಗ ಗೊತ್ತಾಯಿತು. ಸತ್ಯಸಂಧರಾಗಿದ್ದ ನಿಮಗೆ ಸಾವಿನ ಸುಳಿವು ಮುಂಚೆಯೇ ಗೊತ್ತಾಗಿ, ಆ ರೀತಿ ಹೇಳಿದ್ದಿರಿ. ಚಂದ್ರಹಾಸ, ನೀನು ತಬ್ಬಲಿಯಾದೆ ಮಗೂ, ಧೈರ್ಯವನ್ನು ತಾಳು.

ಏನಿದು ವಿಧಿ ವಿಲಾಸ! ಹತ್ತು ದಿನಗಳ ಹಿಂದೆ ಹೆಂಡತಿಯನ್ನು ಕಳೆದುಕೊಂಡೆ. ಈಗ ತಂದೆಯನ್ನು ಕಳೆದುಕೊಂಡೆ" ಎಂದು ಕೃಷ್ಣಕಾಂತನು ದುಃಖಿಸುತ್ತಿದ್ದನು.

ಗೋಪಾಲನು ಮಾತನಾಡದಿದ್ದರೂ, ಮನಸ್ಸಿನಲ್ಲಿಯೇ ದುಃಖಿಸುತ್ತಿದ್ದನು. ಅವನಿಗೆ ಬಾಬು ಅವರ ಮೇಲೆ ಅಪರಿಮಿತ ಗೌರವ. ಅಂತಹ ಶ್ರೇಷ್ಠ ವ್ಯಕ್ತಿಗಳು ಜಗತ್ತಿನಲ್ಲಿ ಹುಟ್ಟುವುದು ಅಪರೂಪವೆಂದು ಅವನು ಭಾವಿಸಿದ್ದನು. ಸಾವಿನ ಸುದ್ದಿ ಗೊತ್ತಾಗಿ ಸ್ವಲ್ಪ ಹೊತ್ತಿನಲ್ಲಿಯೇ ಊರಿನವರೆಲ್ಲರೂ ಸೇರಿದರು. ಗೋಪಾಲನು ಆಪ್ತರಿಗೂ ನೆಂಟರಿಷ್ಟರಿಗೂ ಸಾವಿನ ಸುದ್ದಿಯನ್ನು ಮುಟ್ಟಿಸುವ ಕಾರ್ಯದಲ್ಲಿ ನಿರತರಾಗಿದ್ದನು. ಆ ರಾತ್ರಿ ಯಾರಿಗೂ ನಿದ್ದೆಯೇ ಇರಲಿಲ್ಲ. ಮರುದಿನ ಮಧ್ಯಾಹ್ನ ರುಮಾದೇವಿ ಯವರನ್ನೂ, ಗೌರಿಯನ್ನೂ ಸುಟ್ಟಿದ್ದ ರುದ್ರಭೂಮಿಯಲ್ಲಿಯೇ ಬಾಬು ಅವರ ದೇಹವನ್ನು ಸುಡಲಾಯ್ತು. ಅವರ ಅಂತ್ಯದರ್ಶನಕ್ಕಾಗಿ ಸೇರಿದ್ದ ನೂರಾರು ಜನ ಅವರ ಭಕ್ತರು, "ದೇವರಂತಹ ಮನುಷ್ಯರು ದೇವರ ಸಾನಿಧ್ಯವನ್ನು ಸೇರಿದರು" ಎಂದು ಹೇಳುತ್ತಿದ್ದರು.

ಚಂದ್ರಹಾಸನಿಗೆ ಜಗತ್ತು ಸಂಪೂರ್ಣ ಶೂನ್ಯವಾದಂತಾಗಿತ್ತು. ಮನುಷ್ಯರಿಗೆ ಅಲ್ಪಸ್ವಲ್ಪ ದುಃಖ ಪ್ರಾಪ್ತಿಯಾದಾಗ ಅವರು ಅಧೈರ್ಯವಂತರಾಗಿ ಶೋಕಿಸುತ್ತಾರೆ. ಸರ್ವಸ್ವವನ್ನು ಕಳೆದುಕೊಂಡು ಮಿತಿ ಮೀರಿದ ಪ್ರಮಾಣದಲ್ಲಿ ದುಃಖ ಪ್ರಾಪ್ತಿಯಾದಾಗ ಒಂದು ವಿಧವಾದ ಯಮಧೈರ್ಯ ಬರುತ್ತದೆ. ತನಗೆ ಪ್ರಿಯರಾಗಿದ್ದವರನ್ನೆಲ್ಲಾ ಕಳೆದುಕೊಂಡ, ಸಂಸಾರದ ಬಂಧನದಿಂದ ವಿಮುಕ್ತನಾಗಿದ್ದ ಚಂದ್ರಹಾಸನಿಗೆ ಅಂತಹ ಯಮಧೈರ್ಯ ಬಂದಿತ್ತು. ಬಡಬಗ್ಗರ ಹಿತಕ್ಕಾಗಿ ಕ್ರಾಂತಿಯ ಹಾದಿಯನ್ನು ಹಿಡಿದಿದ್ದನು. ಮೊದಮೊದಲು ತಂದೆತಾಯಿಗಳ ಮನಸ್ಸನ್ನು ನೋಯಿಸಬಾರದೆಂಬ ಉದ್ದೇಶದಿಂದ ಮಿತಿಮೀರಿದ ಸಾಹಸಕ್ಕೆ ಹೋಗುತ್ತಿರಲಿಲ್ಲ. ಗೌರಿಯನ್ನು ಮದುವೆಯಾದ ನಂತರ ಅವಳ ಪ್ರೇಮಕ್ಕೆ ಕಟ್ಟುಬಿದ್ದು ಅವಳನ್ನು ತೃಪ್ತಿಪಡಿಸುವ ಸಲುವಾಗಿ ಕೆಲವು ಸಾರಿ ಹೇಡಿಯಂತೆ ವರ್ತಿಸುತ್ತಿದ್ದನು. ತಂದೆತಾಯಿಗಳನ್ನೂ, ಹೆಂಡತಿಯನ್ನೂ ಕಳೆದುಕೊಂಡಿದ್ದ ಅವನಿಗೆ ತಾನು ಹಿಡಿದಿದ್ದ ಹಾದಿಯಲ್ಲಿ ತನ್ನಿಚ್ಛೆ ಬಂದಂತೆ ಮುಂದೆ ಸಾಗಲು ಯಾರ ಅಡ್ಡಿ ಆತಂಕಗಳೂ ಉಳಿದಿರಲಿಲ್ಲ.

ಶವ ಸಂಸ್ಕಾರಕ್ಕೆ ಬಂದಿದ್ದ ಜನರೂ, ಗೋಪಾಲ ಚಂಚಲೆಯರೂ ಹೊರಟುಹೋದ ಮೇಲೆ, ರಾತ್ರಿ ಏಕಾಂಗಿಯಾಗಿ ತನ್ನ ಕೊಠಡಿಯಲ್ಲಿ ಕುಳಿತು, ತನ್ನ ಜೀವನದಲ್ಲಿ ಸಂಭವಿಸಿದ್ದ ಘಟನೆಗಳನ್ನು ಕುರಿತು ಚಂದ್ರಹಾಸ ಯೋಚಿಸುತ್ತಿದ್ದನು.

"ಏನಿದು ಜಗತ್ತು! ನಾನು ಚಿಕ್ಕವನಾಗಿದ್ದಾಗ ಜಗತ್ತು ಸುಖಮಯವಾಗಿತ್ತು; ಆನಂದದಾಯಕವಾಗಿತ್ತು. ನನ್ನ ತಂದೆತಾಯಿಗಳು ಎಷ್ಟು ಮುದ್ದಿನಿಂದ ನನ್ನನ್ನು ಸಾಕಿದ್ದರು! ಎಂತಹ ಪ್ರೇಮ ಅವರದ್ದು! ನಾನು ಓದುತ್ತಿರುವಾಗ ಎಂತಹ ಭವ್ಯವಾದ ಕನಸನ್ನು ಕಟ್ಟಿದ್ದೆ! ಆಗ ಎಲ್ಲವೂ ಆದರ್ಶಮಯವಾಗಿತ್ತು. ಮಾನವರ ಬಾಳು ಸುಖದ ಸುಪ್ಪತ್ತಿಗೆ ಎಂದು ತಿಳಿದಿದ್ದೆ. ಮಾನವರು ದಾನವರಂತೆ ವರ್ತಿಸುತ್ತಾರೆಂಬ ಕಲ್ಪನೆ ಅಂದು ನನಗೆ ಕನಸಿನಲ್ಲೂ ಬಂದಿರಲಿಲ್ಲ. ರಾಜಕಾರಣದ ಹೆಸರಿನಲ್ಲಿ ಎಷ್ಟು ಮೋಸ! ಎಷ್ಟು ಕ್ರೌರ್ಯ!

ಎಷ್ಟು ಹಿಂಸೆ! ಗೌರಿಯನ್ನು ಮೆಚ್ಚಿ ಮದುವೆಯಾದೆ. ಅವಳಂತಹ ಆದರ್ಶ ಪತ್ನಿಯನ್ನು ಪಡೆದ ನಾನೇ ಧನ್ಯನೆಂದು ಭಾವಿಸಿದ್ದೆ. ಎಂತಹ ಅಸದೃಶ ಪ್ರೇಮ ಅವಳದ್ದು! ಅಮ್ಮ ಕಣ್ಮರೆಯಾದರು; ಗೌರಿ ಕಣ್ಮರೆಯಾದಳು; ಅಪ್ಪ ಕಣ್ಮರೆಯಾದರು. ಅವರೆಲ್ಲರ ಪ್ರೇಮ ಅವರೊಡನೆ ಕಣ್ಮರೆಯಾಯಿತು. ನನ್ನ ಭವಿಷ್ಯ ನನ್ನ ಕೈಯಲ್ಲಿದೆಯೆಂದು ಅಹಂಕಾರದಿಂದ ವಿಜೃಂಭಿಸುತ್ತಿದ್ದೆ. ಅದು ನಿಜವಲ್ಲವೆಂದು ಈಗ ಗೊತ್ತಾಗಿದೆ. ಇಷ್ಟು ಚಿಕ್ಕವಯಸ್ಸಿನಲ್ಲಿಯೇ ಎಷ್ಟು ಗಂಡಾಂತರ! ಎಷ್ಟು ದುಃಖ! ಬಾಳು ನಶ್ವರವೆಂಬ ಭಾವನೆ ನನಗೆ ಉಂಟಾಗಿದೆ. 'ನೈಸರ್ಗಿಕ ನಿಯಮಗಳ ನಿಯಾಮಕನೇ ಭಗವಂತ' ಎಂದು ಸಿದ್ಧಾನಂದರು ಹೇಳಿದ್ದು ನಿಜವಿರಬಹುದೋ ಏನೋ ಯಾರಿಗೆ ಗೊತ್ತು?"

ಚಂದ್ರಹಾಸನು ಹೀಗೆಯೇ ಯೋಚಿಸುತ್ತಾ ಎಷ್ಟು ಹೊತ್ತು ಕಳೆದನೋ ಅವನಿಗೇ ಕಲ್ಪನೆಯಿರಲಿಲ್ಲ. ಏಕಾಏಕಿ, ಎದ್ದು ಕತ್ತಲೆಯಲ್ಲಿ ದೇವರಕೋಣೆಗೆ ಹೋದನು. ಅವನ ತಂದೆತಾಯಿಗಳು ಎಷ್ಟೋ ಸಾರಿ ಪ್ರಾರ್ಥನೆ ಮಾಡಬೇಕೆಂದು ಅವನಿಗೆ ಹೇಳಿದ್ದರು. ಅವನು ಯಾವಾಗಲೂ ದೇವರಕೋಣೆಗೆ ಪ್ರಾರ್ಥನೆಗಾಗಿ ಕಾಲಿಟ್ಟಿರಲಿಲ್ಲ. ಆ ರಾತ್ರಿ ದೇವರ ಕೋಣೆಗೆ ಹೋದವನು ತಂದೆ ಧ್ಯಾನಕ್ಕಾಗಿ ಕುಳಿತಿದ್ದ ಸ್ಥಳದಲ್ಲಿ ಕುಳಿತು "ದೇವರೇ ಕೊಡು. ನನಗೆ ಧೈರ್ಯ ಶಾಂತಿಗಳನ್ನು ಕೊಡು" ಎಂದು ಪ್ರಾರ್ಥಿಸಿದನು. ಅವನು ಪ್ರಾರ್ಥನೆ ಮಾಡುತ್ತಿದ್ದಾಗ, ತಾನು ಮಾಡುತ್ತಿದ್ದ ಕೆಲಸ ತಾನು ನಂಬಿದ್ದ ನಾಸ್ತಿಕ ಸಿದ್ಧಾಂತಕ್ಕೆ ವಿರೋಧವೆಂಬ ಕಲ್ಪನೆ ಅವನ ಮನಸ್ಸಿಗೆ ಬಂದಿರಲಿಲ್ಲ. ದೇವರ ಕೋಣೆಯಿಂದ ತನ್ನ ಕೊಠಡಿಗೆ ಹೋದ ನಂತರ, ಏನೋ ತಪ್ಪು ಮಾಡಿದವನಂತೆ ತನ್ನ ಮನೋ ದೌರ್ಬಲ್ಯಕ್ಕಾಗಿ ತನ್ನನ್ನೇ ಹಳಿಯುತ್ತಿದ್ದನು.

"ನನಗೇನಾಗಿದೆ ಇಂದು? ಛೇ! ಎಂತಹ ಹೇಡಿ ನಾನು! ಹೇಡಿತನದಿಂದ ದೇವರ ಮೊರೆ ಹೊಕ್ಕೆ. ಜಗತ್ತಿನಲ್ಲಿ ಕಷ್ಟಕಾರ್ಪಣ್ಯಗಳನ್ನು ಎದುರಿಸಲಾರದ ಹೇಡಿಗಳು ಮಾತ್ರ ದೇವರ ಮೊರೆ ಹೋಗುತ್ತಾರೆ. ಈಸಬೇಕು, ಇದ್ದು ಜೈಸಬೇಕು. ಇಲ್ಲವೇ ಧೀರನಂತೆ ಹೋರಾಡಿ ಮಡಿಯಬೇಕು. ಮಾನವ ಕಲ್ಯಾಣಕ್ಕಾಗಿ ಉಳಿಯಬೇಕು ; ಇಲ್ಲವೇ ಅಳಿಯಬೇಕು. ಮೊದಲು ದುಷ್ಟನಾದ ಶಂಕರನ ಕೊಲೆಯಾಗಬೇಕು. ದೇವರಿದ್ದಾನೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಅವನಿದ್ದರೆ ನನ್ನ ಸತ್ಕಾರ್ಯಕ್ಕೆ ಅವನು ಬೆಂಬಲ ನೀಡಲಿ" ಎಂದು ಮನಸ್ಸಿನಲ್ಲಿಯೇ ಹೇಳುತ್ತಾ ಚಂದ್ರಹಾಸನು ನಿದ್ದೆಹೋದನು.

೧೧

ಚಂಚಲೆಗೆ ಮದುವೆ ಆಗಿ ಗಂಡನ ಮನೆಯನ್ನು ಸೇರಿದ ಮೇಲೆ, ಕಮಲ ತನ್ನ ವರ್ತನೆಯನ್ನು ಬದಲಾಯಿಸಬಹುದೆಂದು ಕೃಷ್ಣಕಾಂತ ಭಾವಿಸಿದ್ದನು. ಅವನ ನಿರೀಕ್ಷೆಗೆ ವಿರೋಧವಾಗಿ ಕಮಲ ಯಥಾಪ್ರಕಾರ ತನ್ನ ಹಟಮಾರಿತನ, ಉದ್ಧಟತನಗಳನ್ನು ಬೆಳೆಸಿಕೊಂಡೇ ಹೋಗುತ್ತಿದ್ದಳು. ಮಗಳು ಮದುವೆಯಾಗಿ ಗಂಡನ ಮನೆಯಲ್ಲಿ ಸುಖವಾಗಿ ಬಾಳುತ್ತಿದ್ದುದು ಅವನ ಮನಸ್ಸಿಗೆ ನೆಮ್ಮದಿಯನ್ನುಂಟುಮಾಡಿದ್ದರೂ,

ಹೆಂಡತಿಯ ಉದ್ಧಟತನದಿಂದಲೂ, ಉಪಟಳಗಳಿಂದಲೂ ಅವನ ಮನಸ್ಸಿಗೆ ಶಾಂತಿಯೇ ಇರಲಿಲ್ಲ. ಕಮಲೆಯನ್ನು ದಾರಿಗೆ ತರಲು ಅವನು ಅನುಸರಿಸಿದ್ದ ಎಲ್ಲಾ ವಿಧಾನಗಳೂ ನಿಷ್ಫಲವಾಗಿದ್ದವು. ಕಮಲ ಅವನ ಏಳಿಗೆಯನ್ನು ಹಾರೈಸುವುದರ ಬದಲು ಕೇಡನ್ನು ಹಾರೈಸುತ್ತಿದ್ದಳು. ಅವಳ ದೃಷ್ಟಿಯಲ್ಲಿ ಕೃಷ್ಣಕಾಂತನು ಕೆಲಸಕ್ಕೆ ಬಾರದ ದಡ್ಡನಾಗಿದ್ದನು. ಮನೆಯ ಖರ್ಚಿಗೆ ಅವಳು ಕೇಳಿದಷ್ಟು ಹಣಕೊಟ್ಟು, ಅವಳ ಅಬ್ಬರ ಉಬ್ಬರಗಳನ್ನು ಸಹಿಸಿಕೊಂಡು ಅವನು ತೆಪ್ಪಗಿದ್ದರೆ ಅವಳೂ ತೆಪ್ಪಗಿರುತ್ತಿದ್ದಳು. ಎಂದಾದರೂ ಅವಳ ದುರಹಂಕಾರ ಆರ್ಭಟಗಳನ್ನು ಸಹಿಸದೆ, ಅವನು ಏನಾದರೂ ಸ್ವಲ್ಪ ಹೇಳಿದರೆ ಸಾಕು, "ಮಂಗನ ಕೈಯ್ಯಾಗೆ ಮಾಣಿಕ್ಯ ಕೊಟ್ಟಹಾಗೆ, ನಮ್ಮಪ್ಪ ಈ ಕಾಡು ಮೃಗದ ಕೈಗೆ ನನ್ನ ಕೊಟ್ಟ" ಎಂದು ಹೇಳುತ್ತಿದ್ದಳು. ಏನಾದರೂ ಬುದ್ಧಿವಾದದ ಮಾತನ್ನು ಅವನು ಹೇಳಿದರೆ ಹರಕು ಮುರುಕು ಇಂಗ್ಲಿಷಿನಲ್ಲಿ "ಐ ನೋ ವಾಟ್ ಯು ಆರ್. ಡೊಂಟ್ ಟೀಚ್ ಮಿ. ಗೆಟ್‌ಔಟ್" ಎನ್ನುತ್ತಿದ್ದಳು.

ಕೃಷ್ಣಕಾಂತನು ಪ್ರಾಮಾಣಿಕ ವಕೀಲನೆಂದು ಹೆಸರು ಪಡೆದಿದ್ದನು. ಅಂತೆಯೇ ದಕ್ಷನೆಂದೂ ಹೆಸರು ಪಡೆದಿದ್ದನು. ಆದರೆ ಇತ್ತೀಚಿನ ವರ್ಷಗಳಲ್ಲಿ ಇತರ ವೃತ್ತಿಗಳಲ್ಲಿ ತಲೆದೋರಿದ್ದ ಅಹಿತ ಪೈಪೋಟಿ ವಕೀಲಿ ವೃತ್ತಿಯನ್ನೂ ಬಿಟ್ಟಿರಲಿಲ್ಲ. ವಕೀಲರ ಸಂಖ್ಯೆ ಹೆಚ್ಚಾದಂತೆಲ್ಲಾ, ಅಹಿತ ಪೈಪೋಟಿ ಹೆಚ್ಚು ಹೆಚ್ಚು ಬೆಳೆಯಲಾರಂಭಿಸಿತ್ತು. ಕೆಲವರು ವಕೀಲರು ವಕೀಲಿ ವೃತ್ತಿಯ ಘನತೆ ಗಾಂಭೀರ್ಯಗಳಿಗೆ, ತತ್ತ್ವ ನಿಷ್ಠೆಗಳಿಗೆ ತಿಲಾಂಜಲಿಯನ್ನಿತ್ತು. ಹೇಗಾದರೂ ಮಾಡಿ, ಏನಾದರೂ ಮಾಡಿ, ಹಣ ಗಳಿಸಬೇಕೆಂಬ ಆಸೆಯಿಂದ ಅಡ್ಡದಾರಿಯನ್ನು ಹಿಡಿದಿದ್ದರು. ಅವರಲ್ಲಿ ಕೆಲವರು ಕಕ್ಷಿಗಾರರನ್ನು ತಮ್ಮ ಕಡೆಗೆ ಬರಮಾಡಿಕೊಳ್ಳಲು ಕಮಿಷನ್ ಏಜೆಂಟರುಗಳನ್ನು ನೇಮಕ ಮಾಡಿಕೊಂಡಿದ್ದರು. ಕೆಲವರು ಕೇಸನ್ನು ಗೆಲ್ಲುವ ಸಲುವಾಗಿ ಕೆಲವು ಕಡೆ ತೆರಿಗೆ ಮತ್ತು ರೆವಿನ್ಯೂ ಅಧಿಕಾರಿಗಳನ್ನೂ, ಕೆಲವು ಕಡೆ ನ್ಯಾಯಾಧೀಶರನ್ನೂ ಸಹ ಲಂಚದಿಂದ ಸರಿಮಾಡಿಕೊಂಡಿದ್ದರು. ಕೆಲವರು ಇನ್ನೂ ಕೆಳಮಟ್ಟದ ಅಸಹ್ಯಕರ ಮಾರ್ಗಗಳನ್ನು ಹಿಡಿದಿದ್ದರು. ಕೆಲವರು ಎರಡೂ ಕಡೆ ಕೈಯೊಡ್ಡುತ್ತಿದ್ದರು. ಕೆಲವರು ನಿಷ್ಕರುಣೆಯಿಂದ ಕಕ್ಷಿಗಾರರ ರಕ್ತವನ್ನೇ ಹೀರುತ್ತಿದ್ದರು. ಈ ರೀತಿ ಅಡ್ಡದಾರಿ ಹಿಡಿದವರ ಜೊತೆಯಲ್ಲಿ ಕೃಷ್ಣಕಾಂತನಂತಹ ಸಭ್ಯನೂ, ದಯಾಶೀಲನೂ, ಪ್ರಾಮಾಣಿಕನೂ ಆಗಿದ್ದ ವಕೀಲನು ಪೈಪೋಟಿ ನಡೆಸುವುದು ಸುಲಭವಾಗಿರಲಿಲ್ಲ. ಜೊತೆಗೆ ಅವನ ಆರೋಗ್ಯವೂ ಅಷ್ಟು ಸರಿಯಾಗಿರಲಿಲ್ಲ.

ಈ ಎಲ್ಲಾ ಕಾರಣಗಳ ದೆಸೆಯಿಂದ ಅವರ ವರಮಾನವೂ ಈಚೆಗೆ ಕಡಿಮೆಯಾಗುತ್ತಾ ಬಂದಿತ್ತು. ಆದರೂ ಕಷ್ಟಪಟ್ಟು ಸಂಸಾರ ನಿರ್ವಹಣೆಗೆ ಬೇಕಾಗುವಷ್ಟು ಹಣವನ್ನು ಸಂಪಾದಿಸುತ್ತಿದ್ದನು. ಕಮಲೆಗೆ ಅವನು ಪ್ರಾಮಾಣಿಕ ವಕೀಲನೆಂಬ ಅಭಿಮಾನವೂ ಇರಲಿಲ್ಲ; ಅವನು ಕಷ್ಟಪಟ್ಟು ದುಡಿಯುತ್ತಾನೆಂಬ ಸಹಾನುಭೂತಿಯೂ ಇರಲಿಲ್ಲ; ಆರೋಗ್ಯ ಕೆಟ್ಟಿದೆ ಎಂಬ ಸಂಕಟವೂ ಇರಲಿಲ್ಲ. ಯಾವಾಗಲಾದರೊಮ್ಮೆ,

ಹೆಂಡತಿಯೊಡನೆ ತನ್ನ ಕಷ್ಟವನ್ನು ಹೇಳಿಕೊಂಡಾಗ, "ಭಾರೀ, ನೀವೊಬ್ಬರೇ ಕಷ್ಟಪಟ್ಟು ಹೆಂಡ್ತೀ ಮಕ್ಕಳನ್ನ ಸಾಕೋದು. ಜಗತ್ತಿನಲ್ಲಿ ಇನ್ಯಾರೂ ಮಾಡ್ದೆ ಇದ್ದ ಕೆಲಸ!" ಎನ್ನುತ್ತಿದ್ದಳು. ದಿನವೆಲ್ಲಾ ದುಡಿದು ಹಣ್ಣಾಗಿ, ರಾತ್ರಿ ಮನೆಗೆ ಬಂದರೆ ಹೆಂಡತಿ ಎನಿಸಿಕೊಂಡಿದ್ದವಳು ಗಂಡನಿಗೆ ಉಪಚರಿಸುವುದಿರಲಿ, ಎರಡು ಒಳ್ಳೆಯ ಮಾತುಗಳನ್ನೂ ಸಹ ಆಡುತ್ತಿರಲಿಲ್ಲ.

ಹೆಂಡತಿಯ ವರ್ತನೆಯಿಂದ ಕೃಷ್ಣಕಾಂತನಿಗೆ ಜೀವನವೇ ಬೇಡವೆನಿಸುತ್ತಿತ್ತು. ಎಷ್ಟೋ ಸಾರಿ ತಾನು ಸತ್ತರೆ ವಾಸಿ ಎಂದು ಯೋಚಿಸುತ್ತಿದ್ದನು. "ನಾನು ಯಾತಕ್ಕೋಸ್ಕರ ಇಷ್ಟೆಲ್ಲಾ ಕಷ್ಟಪಟ್ಟು ಇವಳ ಜೊತೆ ಬಾಳಬೇಕು" ಎಂದು ಒಮ್ಮೊಮ್ಮೆ ತನ್ನನ್ನು ತಾನೇ ಪ್ರಶ್ನಿಸಿಕೊಳ್ಳುತ್ತಿದ್ದನು. ಅವನ ಅಂತರಾಳದಲ್ಲಿ ಅಡಗಿದ್ದ ಸಾಯಬೇಕೆನ್ನುವ ಹಂಬಲವನ್ನು ಈಡೇರಿಸುವ ಸಲುವಾಗಿಯೋ ಎನ್ನುವಂತೆ ಅವನ ಆರೋಗ್ಯ ದಿನೇ ದಿನೇ ಕೆಡಲಾರಂಭಿಸಿತು. ಪುರುಷೋತ್ತಮಬಾಬು ಅವರು ತೀರಿಕೊಂಡ ಮೇಲೆ ಅವನ ಆರೋಗ್ಯ ಮತ್ತಷ್ಟು ಕೆಟ್ಟಿತ್ತು. ಅವನ ಗುಮಾಸ್ತ ಶಾಮಸುಂದರನು ಅವನ ಕೆಲಸವನ್ನು ಹಗುರಮಾಡಲು ಕೈಲಾದಷ್ಟು ಪ್ರಯತ್ನಿಸುತ್ತಿದ್ದನು. ಶಾಮಸುಂದರನಿಗೆ ಕೃಷ್ಣಕಾಂತನ ಸಂಸಾರದ ಗುಟ್ಟು ಗೊತ್ತಿತ್ತು. ನಿಷ್ಠಾವಂತನೂ, ಸ್ವಾಮಿಭಕ್ತನೂ ಆಗಿದ್ದ ಶಾಮಸುಂದರನು ಕೃಷ್ಣಕಾಂತನ ಸ್ಥಿತಿಯನ್ನು ನೋಡಿ ಮರುಗುತ್ತಿದ್ದನು. ಶಾಮಸುಂದರನು ಹುಡುಗನಾಗಿದ್ದಾಗ ಕೃಷ್ಣಕಾಂತನ ಆಫೀಸಿನಲ್ಲಿ ಗುಮಾಸ್ತನಾಗಿ ಸೇರಿದ್ದನು. ಕೃಷ್ಣಕಾಂತನ ಜೀವನದ ಏರಿಳಿತಗಳ ಸಿಹಿಕಹಿಗಳನ್ನು ಅವನೂ ಅನುಭವಿಸಿದ್ದನು. ಶಾಮಸುಂದರನನ್ನು ಕಂಡರೆ ಕಮಲೆಗೆ ಆಗುತ್ತಿರಲಿಲ್ಲ. ಏಕೆಂದರೆ, ಅವನು ಕೃಷ್ಣಕಾಂತನು ಭಕ್ತನಾಗಿದ್ದನು. ಕೃಷ್ಣಕಾಂತನಿಗೆ ಬೇಕಾದವರೆಲ್ಲಾ ಕಮಲೆಗೆ ಬೇಡದವರಾಗಿದ್ದರು.

ಕೃಷ್ಣಕಾಂತನ ಆರೋಗ್ಯವು ದಿನೇ ದಿನೇ ಕೆಡುತ್ತಿರುವುದನ್ನು ಗಮನಿಸಿದ ಶಾಮಸುಂದರನು, "ತಾವು ಸ್ವಲ್ಪದಿನ ರೆಸ್ಟ್‌ತಗೋಬೆಕು ಸಾರ್. ಕೇಸ್ ನಾ ನೊಡ್ಕೊಳ್ತೀನಿ" ಎಂದು ಒಂದು ದಿನ ಹೇಳಿದ್ದಾಗ, ಕೃಷ್ಣಕಾಂತನು "ಶಾಮ್, ನನಗೆ ಒಂದೇ ಸಾರಿ ರೆಸ್ಟ್ ಸಿಕ್ಕೋದು, ಅದು ಸತ್ತಮೇಲೆ" ಎಂದು ಹೇಳಿದ್ದನು. ಇದನ್ನು ಕೇಳಿ ಶಾಮಸುಂದರನಿಗೆ ಬಹಳ ವ್ಯಥೆಯಾಗಿತ್ತು. ಕೆಲವು ವಕೀಲರು ಮಾಡಿದಂತೆ, ಕಕ್ಷಿಗಾರರ ಗೋಣು ಮುರಿದು ಸಂಪಾದನೆ ಮಾಡಿದ್ದರೆ, ಕೃಷ್ಣಕಾಂತನು ಆಗರ್ಭ ಶ್ರೀಮಂತನಾಗಿರಬಹುದಾಗಿತ್ತೆಂದು ಶಾಮಸುಂದರ ತಿಳಿದಿದ್ದನು. ಶ್ರೀಪುರದಲ್ಲೇ ಕೆಲವು ವಕೀಲರು ನಿಷ್ಕರುಣೆಯಿಂದ ಕಕ್ಷಿಗಾರರ ರಕ್ತವನ್ನು ಹೀರಿ ಸುಖದ ಸುಪ್ಪತ್ತಿಗೆಯಲ್ಲಿ ತೇಲಾಡುತ್ತಿರುವುದನ್ನು ಶಾಮಸುಂದರನು ಪ್ರತಿದಿನವೂ ನೋಡುತ್ತಿದ್ದನು. "ಅಂತಹವರಿಗೆ ಯಾವ ಬೇನೆಯೂ ಇಲ್ಲ. ಒಳ್ಳೇತನಕ್ಕೆ ಕೊನೆಗೆ ನಮ್ಮ ಸಾಹೇಬರ ಗತೀನೆ" ಎಂದು ಅವನು ಮನಸ್ಸಿನಲ್ಲೇ ಕೊರಗುತ್ತಿದ್ದನು.

ಒಂದು ದಿನ ಮಧ್ಯಾಹ್ನ ಕೃಷ್ಣಕಾಂತನು ಶ್ರೀಪುರದ ಡಿಸ್ಟ್ರಿಕ್ಟ್ ಜಡ್ಜರ ಕೋರ್ಟಿನಲ್ಲಿ, ಒಂದು ದೊಡ್ಡ ಮೊಕದ್ದಮೆಯಲ್ಲಿ ವಾದ ಮಾಡುತ್ತಿರುವಾಗ, ಇದ್ದಕ್ಕಿದ್ದ ಹಾಗೆ ಕಣ್ಣಿಗೆ ಕತ್ತಲು ಕವಿದಂತಾಗಿ, ಕೆಳಗೆ ಕುಸಿದು ಬಿದ್ದು ಪ್ರಜ್ಞಾಹೀನನಾದನು. ಕೋರ್ಟಿನಲ್ಲಿದ್ದ

ಅವನ ಸ್ನೇಹಿತರು ತಕ್ಷಣ ಅವನನ್ನು ಶ್ರೀಪುರದ ದೊಡ್ಡ ಆಸ್ಪತ್ರೆಗೆ ಸೇರಿಸಿದನು. ಆ ಸಮಯದಲ್ಲಿ ಶಾಮಸುಂದರ ಬೇರೊಂದು ಕೋರ್ಟಿಗೆ ಹೋಗಿದ್ದನು. ವಿಷಯ ಗೊತ್ತಾದ ನಂತರ ಅವನು ಆಸ್ಪತ್ರೆಗೆ ಧಾವಿಸಿದನು. ವೈದ್ಯರು ಚಿಕಿತ್ಸೆ ನಡೆಸುತ್ತಿದ್ದರು. ಕೃಷ್ಣಕಾಂತನಿಗೆ ಪ್ರಜ್ಞೆ ಇನ್ನೂ ಬಂದಿರಲಿಲ್ಲ. ಕಮಲೆಯನ್ನು ಕರೆದುಕೊಂಡು ಬರುವ ಉದ್ದೇಶದಿಂದ ಅವನೊಂದು ಟ್ಯಾಕ್ಸಿಯನ್ನು ಮಾಡಿಕೊಂಡು ಕೃಷ್ಣಕಾಂತನ ಮನೆಗೆ ಹೋದನು.

"ವಕೀಲ್ ಸಾಹೇಬರಿಗೆ ಹಾರ್ಟ್ ಅಟ್ಯಾಕ್ ಆಗ್ಯದೆ; ಆಸ್ಪತ್ರೇಲಿದ್ದಾರೆ. ಬನ್ನಿ, ಟ್ಯಾಕ್ಸಿ ತಂದೀನಿ" ಎಂದು ಬೇಗುದಿಗೊಳ್ಳುತ್ತಾ ಒಂದೇ ಉಸಿರಿನಲ್ಲಿ ಕಮಲೆಗೆ ಹೇಳಿದನು.

"ಯಾರು ನಿಂಗೆ ಹೇಳಿದ್ರು ಹಾರ್ಟ್ ಅಟ್ಯಾಕ್ ಅಂತ? ಇದುವರೀಗೆ ಇಲ್ದೇ ಇದ್ದ ಹಾರ್ಟ್ ಅಟ್ಯಾಕ್ ಈಗೆಲ್ಲಿಂದ ಬಂತಪ್ಪ?" ಎಂದು ಕಮಲ ಹೇಳಿದಳು.

"ಏನೋ ಅಮ್ಮಾ, ಡಾಕ್ಟರ್ ಹಾಗಂತ ಹೇಳ್ದ್ರು. ನಂಗೇನು ಗೊತ್ತು? ನೀವು ಬರ್ತೀರಿ ತಾನೆ? ನಾ ಆಸ್ಪತ್ರೇಗೆ ಹೋಗ್ಬೇಕು. ಏನಾದರೂ ಔಷಧಿ ಬೇಕು ಅಂತ ಡಾಕ್ಟರ್ ಹೇಳಿದ್ರೆ ನಾ ತಂದು ಕೊಡಬೇಕಾಗ್ತದೆ."

"ನಾ ಡ್ರೆಸ್ಸ್ ಮಾಡಿಲ್ಲ, ಇಷ್ಟು ಅರ್ಜೆಂಟಾಗಿ ಹ್ಯಾಗೆ ಬರ್ಲಿ? ನೀ ಹಾಗೇ ನಿರಂಜನ ಸಾಹೇಬರ ಆಫೀಸಿಗೆ ಹೋಗಿ, ನಾ ಹೇಳೀನಿ ಅಂತ ಅರ್ಜೆಂಟಾಗಿ ಕಾರು ಕಳಿಸ್ಬೇಕು ಅಂತ ಹೇಳು."

"ಆಗಲಿ ಅಮ್ಮಾ ಹೇಳ್ತೀನಿ" ಎಂದು ಶಾಮಸುಂದರನು ಹೇಳಿ, ಟ್ಯಾಕ್ಸಿಯಲ್ಲಿ ನೇರವಾಗಿ ನಿರಂಜನನ ಆಫೀಸಿನ ಕಡೆಗೆ ಹೊರಟನು. ದಾರಿಯಲ್ಲಿ ಹೋಗುತ್ತಿರುವಾಗ "ಗಂಡ ಆಸ್ಪತ್ರೇಲಿ ಸಾಯ್ತಾ ಬಿದ್ದಾರೆ, ಇವಳು ಶೃಂಗಾರ ಮಾಡ್ಕೊಂಡು ದೊಡ್ಡಕಾರಾಗೆ ಬರ್ಬೇಕು! ಟ್ಯಾಕ್ಸೀಲಿ ಬಂದ್ರೆ ಇವಳ ಸ್ಟೇಟಸ್ಸಿಗೆ ಬಹಳಾ ಕಡಿಮೆ!" ಎಂದು ಶಾಮಸುಂದರ ಮನಸ್ಸಿನಲ್ಲಿಯೇ ಅಂದುಕೊಂಡನು.

ಶಾಮಸುಂದರನು ನಿರಂಜನನ ಆಫೀಸಿಗೆ ಹೋಗಿ, ಹೊರಗಡೆ ನಿಂತಿದ್ದ ದ್ವಾರಪಾಲಕನನ್ನು ಕುರಿತು, "ವಕೀಲ್ ಕೃಷ್ಣಕಾಂತರಿಗೆ ಖಾಯಿಲೆ ಜಾಸ್ತಿ ಆಗಿದೆ. ನಿಮ್ಮ ಸಾಹೇಬರಿಗೆ ತಿಳಿಸಬೇಕು. ಸ್ವಲ್ಪ ಒಳಗೆ ಬಿಡಪ್ಪಾ" ಎಂದು ಹೇಳಿದನು.

"ನಮ್ಮ ಸಾಹೇಬ್ರು ಶ್ರೀದೇವಿ ಮೋಟಾರು ಸರ್ವಿಸ್ ಸಾಹುಕಾರರ ಜೊತೆ ಮಾತಾಡ್ತಾ ಇದ್ದಾರೆ. ಯಾರನ್ನೂ ಬಿಡಬ್ಯಾಡ ಅಂತ ತಾಕೀತು ಮಾಡ್ಯಾರೆ. ಸ್ವಲ್ಪ ಕಾದಿರಿ, ಅವರು ಹೋಗಲಿ."

ಶಾಮಸುಂದರನ ಜೀವ ಆಸ್ಪತ್ರೆಯಲ್ಲಿತ್ತು. ಕಾಯುವಷ್ಟು ತಾಳ್ಮೆ ಅವನಿಗಿರಲಿಲ್ಲ. ದ್ವಾರಪಾಲಕನ ಕೈಗೆ ಎರಡು ರೂಪಾಯಿಗಳನ್ನು ಕೊಟ್ಟು, "ಅಯ್ಯಾ ಪುಣ್ಯಾತ್ಮಾ, ವಕೀಲ್ ಕೃಷ್ಣಕಾಂತರಿಗೆ ಸಖತ್ ಖಾಯಿಲೆ. ಅವರ ಹೆಂಡ್ತಿ ಕಾರು ಕಳಿಸ್ಬೇಕು ಅಂತ ಅವರ ಗುಮಾಸ್ತನನ್ನು ಕಳೆಸ್ಯಾರೆ ಅಂತ ನಿಮ್ಮ ಸಾಹೇಬರಿಗೆ ಸ್ವಲ್ಪ ಹೇಳಪ್ಪಾ" ಎಂದು ವಿನಂತಿ ಮಾಡಿಕೊಂಡನು. ದ್ವಾರಪಾಲಕನು ಒಳಗಡೆ ಹೋದನು. ಶ್ರೀದೇವಿ ಮೋಟಾರ್

ಸರ್ವಿಸ್ ಮಾಲೀಕನು ತನ್ನ ಬ್ರೀಫ್‌ಕೇಸಿನಿಂದ ನೋಟಿನ ಕಂತೆಯನ್ನು ತೆಗೆದು ನಿರಂಜನನ ಕೈಗೆ ಕೊಡುತ್ತಿರುವ ಸಮಯಕ್ಕೆ ಸರಿಯಾಗಿ ದ್ವಾರಪಾಲಕನು ಒಳಗೆ ಹೋಗಿದ್ದನು. ದ್ವಾರಪಾಲಕನನ್ನು ನೋಡಿದೊಡನೆ ನಿರಂಜನನು ಕೋಪದಿಂದ ಕಿಡಿಕಿಡಿಯಾದನು.

"ಏ ಸುವರ್, ನಿಂಗೆ ಎಷ್ಟು ಸಾರಿ ಹೇಳ್ಬೇಕೋ? ಯಾರ ಹತ್ರ ಆದ್ರೂ ಮಾತಾಡ್ತಾ ಇರುವಾಗ ನೀ ಡಿಸ್ಟರ್ಬ್ ಮಾಡಬಾರದು ಅಂತ. ಗೆಟ್ ಔಟ್ ಫೂಲ್" ಎಂದು ದ್ವಾರಪಾಲಕನನ್ನು ಗದರಿಸಿದನು.

"ವಕೀಲ್ ಕೃಷ್ಣಕಾಂತರಿಗೆ ಖಾಯಿಲೆ ಜಾಸ್ತಿಯಂತೆ. ತಮ್ಮ ಕಾರು ಕಳಿಸ್ಬೇಕು ಅಂತ ಅವರ ಗುಮಾಸ್ತರ ಹತ್ತಿರ ಹೇಳಿ ಕಳಿಸ್ಯಾರೆ" ಎಂದು ದ್ವಾರಪಾಲಕ ಹೇಳಿದನು.

"ಕೃಷ್ಣಕಾಂತರಿಗೆ ಖಾಯಿಲೆ ಜಾಸ್ತಿ ಆದರೆ ನಾ ಏನು ಮಾಡ್ಬೇಕು? ನಾ ಯೇನು ಡಾಕ್ಟರೇನು? ಕಾರು ಕಳಿಸ್ಬೇಕು ಅಂತ ಯಾರು ಹೇಳಿದ್ರಂತೆ?"

"ಅವರ ಹೆಂಡ್ತಿ ಹೇಳಿ ಕಳಿಸ್ಯಾರೆ ಅಂತ ಅವರ ಗುಮಾಸ್ತರು ಹೇಳಿದ್ರು, ಗುಮಾಸ್ತರು ಹೊರಗಡೆ ಇದಾರೆ."

"ಗುಮಾಸ್ತನನ್ನ ನೋಡೋಕೆ ನಂಗೆ ಪುರುಸೊತ್ತಿಲ್ಲ, ನಮ್ಮ ಡ್ರೈವರಿಗೆ ಕಾರನ್ನ ಕಮಲ ಅವರ ಮನೀಗೆ ತಗೊಂಡು ಹೋಗ್ಬೇಕು ಅಂತ ಹೇಳಿ ಬಾ" ಎಂದನು.

ಹೊರಗಡೆ ನಿಂತಿದ್ದ ಶಾಮಸುಂದರನು ಈ ಸಂಭಾಷಣೆಯನ್ನು ಕೇಳಿದನು. "ಈ ಪಾಪಿ ಎಷ್ಟು ಅಂತ ಬೊಗಳ್ತಾನೆ" ಎಂದು ಮನಸ್ಸಿನಲ್ಲೇ ಶಪಿಸುತ್ತಾ, ದ್ವಾರಪಾಲಕನಿಗೆ ಹೇಳದೆ ಕೇಳದೆ ಟ್ಯಾಕ್ಸಿಯನ್ನು ಹತ್ತಿ ಆಸ್ಪತ್ರೆಗೆ ಹೋದನು.

ಆಸ್ಪತ್ರೆಯಲ್ಲಿ ಕೃಷ್ಣಕಾಂತನ ಸ್ಥಿತಿ ಉತ್ತಮವಾಗುತ್ತಾ ಇದೆಯೆಂದು ಡಾಕ್ಟರಿಂದ ಗೊತ್ತಾದ ಮೇಲೆ ಶಾಮಸುಂದರನು ಪೋಸ್ಟಾಫೀಸಿಗೆ ಹೋಗಿ ಸಿರಗೂರು ಗೋಪಾಲನಿಗೆ ಟೆಲಿಫೋನ್ ಮೂಲಕ ಕೃಷ್ಣಕಾಂತನು ಹೃದಯ ವೇದನೆಯಿಂದ ಆಸ್ಪತ್ರೆಗೆ ಸೇರಿರುವ ವಿಚಾರವನ್ನು ತಿಳಿಸಿದನು. ಪೋಸ್ಟಾಫೀಸಿನಿಂದ ಪುನಃ ಆಸ್ಪತ್ರೆಗೆ ಹೋದನು. ರೋಗಿಯನ್ನು ಯಾರೂ ನೋಡಬಾರದೆಂದು ಡಾಕ್ಟರು ಕಟ್ಟಾಜ್ಞೆ ಮಾಡಿ, ವಾರ್ಡಿನ ಮುಂದುಗಡೆ "ರೋಗಿಯನ್ನು ಯಾರೂ ನೋಡಬಾರದು" ಎಂದು ಬೋರ್ಡ್ ಬರೆಸಿ ಹಾಕಿಸಿದ್ದರು. ಶಾಮಸುಂದರನು ಡಾಕ್ಟರನ್ನು ಅಂಗಲಾಚಿ ಬೇಡಿ, ಅವರ ಅನುಮತಿಯನ್ನು ಪಡೆದು, ದೂರದಲ್ಲೇ ನಿಂತು ತನ್ನ ಧಣಿಯ ಮುಖವನ್ನು ನೋಡಿ ಹೊರಗಡೆ ಬಂದು ನಿಂತುಕೊಂಡಿದ್ದನು.

ಕೃಷ್ಣಕಾಂತನು ಆಸ್ಪತ್ರೆಗೆ ಸೇರಿರುವ ಸಮಾಚಾರ ತಿಳಿದು ಅವನ ಸ್ನೇಹಿತರನೇಕರು ಆಸ್ಪತ್ರೆಗೆ ಹೋಗಿ ರೋಗಿಯನ್ನು ನೋಡಲಾಗದೆ ತಮ್ಮ ಅನುತಾಪವನ್ನು ಶಾಮಸುಂದರನಿಗೆ ತಿಳಿಸಿ ಹಿಂದಿರುಗುತ್ತಿದ್ದರು. ಸಾಯಂಕಾಲ ಸುಮಾರು ಐದುಗಂಟೆ ಹೊತ್ತಿಗೆ ನಿರಂಜನನ ಕಾರಿನಲ್ಲಿ ಕಮಲ ಠೀವಿಯಿಂದ ಆಸ್ಪತ್ರೆಯ ಮುಂದೆ ಬಂದಿಳಿದಳು. ಅವಳು ಕೃಷ್ಣಕಾಂತನ ವಾರ್ಡಿನ ಬಾಗಿಲಿಗೆ ತಗಲು ಹಾಕಿದ್ದ ಬೋರ್ಡನ್ನು ನೋಡಿ

ವಾಪಾಸು ಬಂದು, ಅಲ್ಲೇ ಸಮೀಪದಲ್ಲಿ ನಿಂತಿದ್ದ ಶಾಮಸುಂದರನನ್ನು ನೋಡಿ, "ಈಗ ಹ್ಯಾಗಿದ್ದಾರಂತೋ?" ಎಂದು ಕೇಳಿದಳು. "ಈಗ ಸ್ವಲ್ಪ ವಾಸಿ ಅಂತ ಈಗ ತಾನೇ ಡಾಕ್ಟರ್ ಹೇಳಿದ್ರು" ಎಂದು ಶಾಮಸುಂದರ ಹೇಳಿದನು.

ಅರ್ಧ ಗಂಟೆ ವಾರ್ಡಿನ ಮುಂದೆ ಹೊರಗಡೆ ಹಾಕಿದ್ದ ಬೆಂಚಿನ ಮೇಲೆ ಕಮಲ ಕುಳಿತಿದ್ದಳು. ನಂತರ ಶಾಮಸುಂದರನನ್ನು ಕರೆದು "ನಾ ಹೋಗ್ತೀನಪ್ಪಾ, ನಾ ಇಲ್ಲೇನು ಮಾಡ್ಲಿ? ಒಳಗೆ ಹೋಗ್ಬಾರ್ದು ಅಂತ ಬೋರ್ಡ್ ಹಾಕ್ಯಾರೆ ಮನೆಯಿಂದ ಏನಾರೂ ಊಟ ಕಳಿಸ್ಬೇಕೇನು?" ಎಂದು ಶಾಮಸುಂದರನನ್ನು ಕೇಳಿದಳು. "ಊಟ ಕೊಡ್ಬಾರದು ಅಂತ ಡಾಕ್ಟರ್ ಹೇಳಿದ್ದಾರೆ. ಇಲ್ಲೇ ಸ್ವಲ್ಪ ಲಿಕ್ವಿಡ್ ಡಯಟ್ ಕೊಡೋಕೆ ಏರ್ಪಾಟು ಮಾಡೀನಿ" ಎಂದು ಶಾಮಸುಂದರ ಹೇಳಿದನು. ಸ್ವಲ್ಪ ಹೊತ್ತಿನ ನಂತರ ನಿರಂಜನನೂ ಅಲ್ಲಿಗೆ ಬಂದನು. ಬೆಂಚಿನ ಮೇಲೆ ಅವನು ಕಮಲೆಯ ಜೊತೆಯಲ್ಲಿ ಸ್ವಲ್ಪ ಹೊತ್ತು ಕುಳಿತು ಏನೋ ಮಾತನಾಡುತ್ತಿದ್ದನು. ನಂತರ ಇಬ್ಬರೂ ಸೇರಿ ಹೊರಟು ಹೋದರು.

ಮರುದಿನ ಬೆಳಿಗ್ಗೆ ಸುಮಾರು ಎಂಟು ಗಂಟೆ ಹೊತ್ತಿಗೆ ಗೋಪಾಲನೂ, ಚಂಚಲೆಯೂ ಸಿರಗೂರಿನಿಂದ ಬಂದವರು ನೇರವಾಗಿ ಆಸ್ಪತ್ರೆಗೆ ಹೋದರು. ಕೃಷ್ಣಕಾಂತನ ಸ್ಥಿತಿ ಉತ್ತಮವಾಗಿತ್ತು. ವಾರ್ಡಿನಲ್ಲಿದ್ದ ದಾದಿಯ ಅನುಮತಿ ಪಡೆದು ಅವರಿಬ್ಬರೂ ವಾರ್ಡಿನೊಳಗೆ ಹೋದರು. ಚಂಚಲೆಯನ್ನು ನೋಡಿದ ಕೂಡಲೆ ಕೃಷ್ಣಕಾಂತನಿಗೆ ಸ್ವರ್ಗವೇ ಬಂದಂತಾಗಿತ್ತು. ಮಗಳ ಕೈಯ್ಯನ್ನು ಹಿಡಿದುಕೊಂಡು ಗೋಪಾಲನ ಕಡೆಗೆ ವಾತ್ಸಲ್ಯ ಪೂರ್ವಕವಾಗಿ ನೋಡಿದನು. ಅವನಿಗೆ ಮಾತನಾಡಬಾರದೆಂದು ಡಾಕ್ಟರು ಕಟ್ಟಾಜ್ಞೆ ಮಾಡಿದ್ದರೂ, "ಅನಿಲ ಕುಮಾರ" ಎಂದು ಮೊಮ್ಮಗನ ಹೆಸರೆತ್ತಿದನು. ತಕ್ಷಣ ದಾದಿ ಮಾತನಾಡಬಾರದೆಂದು ಎಚ್ಚರಿಸಿದಳು. ಚಂಚಲೆ ತನ್ನ ಕೈಗಳಿಂದ ತಂದೆಯ ಹಣೆಯನ್ನು ಸವರುತ್ತಾ, ಕಣ್ಣೀರು ಸುರಿಸಲಾರಂಭಿಸಿದಳು. ಕೃಷ್ಣಕಾಂತನ ಕಣ್ಣುಗಳಲ್ಲಿ ಹನಿ ತುಂಬಿ ಬರುತ್ತಿತ್ತು. ಗೋಪಾಲನು ಅಳಬಾರದೆಂದು ಹೆಂಡತಿಗೆ ಗದರಿಸಿದನು. ಚಂಚಲೆ ತಾನು ಸಿರಗೂರಿನಿಂದ ತಂದಿದ್ದ ಹಣ್ಣುಗಳಿಂದ ರಸ ಮಾಡಿ ತಂದೆಗೆ ಕುಡಿಸಿದಳು. ಮಗಳ ಕೈಯಿಂದ ಹಣ್ಣಿನ ರಸವನ್ನು ಸೇವಿಸಿದ ಕೃಷ್ಣಕಾಂತನಿಗೆ ಏನೋ ಒಂದು ವಿಧವಾದ ತೃಪ್ತಿಯಾದಂತಾಗಿತ್ತು.

ಅಷ್ಟು ಹೊತ್ತಿಗೆ ಡಾಕ್ಟರು ಅಲ್ಲಿಗೆ ಬಂದರು. ಅವರ ಹಿಂದೆಯೇ ಚಂದ್ರಹಾಸನೂ, ಕಿಶೋರನೂ, ಪದ್ಮಾವತಿಯೂ ಬಂದರು. ಚಂದ್ರಹಾಸನು ಡಾಕ್ಟರಿಗೆ ಗೋಪಾಲನನ್ನೂ, ಚಂಚಲೆಯನ್ನೂ ಪರಿಚಯ ಮಾಡಿಕೊಟ್ಟನು. ಡಾಕ್ಟರು ರೋಗಿಯನ್ನು ಪರೀಕ್ಷಿಸಿದ ನಂತರ, ಹತ್ತಿರದ ಬಂಧುಗಳ ವಿನಃ ಇನ್ಯಾರನ್ನೂ ಒಳಗೆ ಬಿಡಬಾರದೆಂದೂ, ರೋಗಿಯನ್ನು ಯಾರೂ ಮಾತನಾಡಿಸಬಾರದೆಂದೂ, ಹೇಳಿ ಹೊರಟು ಹೋದರು. ಗೋಪಾಲನೂ, ಚಂಚಲೆಯೂ ಅವರನ್ನು ಹಿಂಬಾಲಿಸಿ ಹೊರಗಡೆ ಹೋದರು. ಹೊರಗಡೆ ಹೋದ ಮೇಲೆ ರೋಗದ ಸ್ವರೂಪವನ್ನೂ, ರೋಗಿಯ ವಾಸ್ತವಿಕ ಸ್ಥಿತಿಯನ್ನೂ ತಿಳಿಸಬೇಕಾಗಿ ಚಂಚಲೆ ಡಾಕ್ಟರನ್ನು ಪ್ರಾರ್ಥಿಸಿದಳು. ಡಾಕ್ಟರು ಸದ್ಯಕ್ಕೆ ರೋಗಿ ಅಪಾಯದಿಂದ

ಪಾರಾಗಿರುವುದಾಗಿಯೂ, ಆದರೆ ಒಂದೆರಡು ತಿಂಗಳ ಸಂಪೂರ್ಣ ವಿಶ್ರಾಂತಿ ಅವಶ್ಯಕವೆಂದೂ ಹೇಳಿದರು. ಚಂಚಲೆ ರೋಗಿಯನ್ನು ಸಿರಗೂರಿಗೆ ಕರೆದುಕೊಂಡು ಹೋಗಲು ಅನುಮತಿಯನ್ನು ಕೇಳಿದಳು. ಡಾಕ್ಟರು ಪುನಃ ಹೃದಯವೇದನೆ ಮರುಕಳಿಸದಿದ್ದರೆ ಹದಿನೈದು ದಿನಗಳ ನಂತರ ರೈಲಿನಲ್ಲಿ ಕರೆದುಕೊಂಡು ಹೋಗಬಹುದೆಂದು ಹೇಳಿದರು.

ಚಂಚಲೆಯೂ, ಗೋಪಾಲನೂ, ಡಾಕ್ಟರೊಡನೆ ಮಾತನಾಡುತ್ತಾ ನಿಂತಿರುವಾಗ, ಕಮಲ ಮನೆಯಿಂದ ಅಲ್ಲಿಗೆ ಬಂದಳು. ಗೋಪಾಲನನ್ನು ಕುರಿತು "ಯಾವಾಗ ಬಂದಿರಿ?" ಎಂದು ಕೇಳಿದಳು. ಗೋಪಾಲನು "ಸ್ವಲ್ಪ ಹೊತ್ತಾಯಿತು" ಎಂದನು. ಕಮಲ ಚಂಚಲೆಯ ಕಡೆಗೆ ತಿರುಗಿ ಸಹ ನೋಡದೆ, ಗಂಡನನ್ನು ನೋಡಲು ವಾರ್ಡಿನ ಒಳಗೆ ಹೋಗುತ್ತಿರುವಾಗ "ಡಾಕ್ಟರೇ, ಇವರು ನಮ್ಮ ಅತ್ತೆಯವರು" ಎಂದು ಕಮಲೆಯ ಪರಿಚಯ ಮಾಡಿಕೊಟ್ಟನು. ಕಮಲ ಡಾಕ್ಟರಿಗೆ ನಮಸ್ಕರಿಸಿ, ಅವರೊಡನೆ ಏನೂ ಮಾತನಾಡದೆ ವಾರ್ಡಿನೊಳಗೆ ನುಗ್ಗಿದಳು. ಅವಳು ಹೋದ ನಂತರ, ಡಾಕ್ಟರ್ ಚಂಚಲೆಯ ಕಡೆಗೆ ತಿರುಗಿ "ನಿಮ್ಮ ತಾಯಿಗೆ ನಿಮ್ಮಷ್ಟೇ ವಯಸ್ಸಾಗಿರುವಂತೆ ಕಾಣುತ್ತದೆ. ಅವರಿಗೆ ವಯಸ್ಸಾಗಿರುವುದು ಗೊತ್ತೇ ಆಗುವುದಿಲ್ಲ" ಎಂದರು. "ಅವರು ನನ್ನ ಮಲತಾಯಿ" ಎಂದು ಚಂಚಲ ಡಾಕ್ಟರಿಗೆ ಹೇಳಿದಳು.

ಕಮಲ ವಾರ್ಡಿನೊಳಗೆ ಹೋದವಳು ಗಂಡ ಮಲಗಿದ್ದ ಮಂಚದ ಹತ್ತಿರ ನಿಂತುಕೊಂಡು "ಈಗ ಹೇಗಿದೆ?" ಎಂದು ಔಪಚಾರಿಕವಾಗಿ ಕೇಳಿದಳು.

"ಹೀಗೇ ಇದ್ದೀನಿ; ಸಾಯಬೇಕೆಂದು ನನ್ನ ಮನಸ್ಸು. ಆದರೆ ಸಾವು ಬರಲೊಲ್ಲದು" ಎಂದು ಹೇಳಿದನು.

ಯಾವಾಗಲೂ ವ್ಯಂಗ್ಯವಾದ ಕೊಂಕು ಮಾತೇ! ಹಾರ್ಟ್ ಶುದ್ಧಿ ಇದ್ದಿದ್ದರೆ ಹಾರ್ಟ್ ಅಟ್ಯಾಕ್ ಯಾಕೆ ಬರುತ್ತಿತ್ತು?"

"ಹೃದಯ ಶುದ್ಧಿ ಇಲ್ಲದವನ ಸಹವಾಸ ನಿನಗೆ ಬೇಡವೆಂದೇ ನಾನು ಸಾಯಬೇಕೆಂದು ಆಶಿಸುತ್ತಿರುವುದು. ನಾನೇನೂ ವ್ಯಂಗ್ಯವಾಗಿ ಹೇಳಲಿಲ್ಲ. ಮನಸ್ಸಿನಲ್ಲಿದ್ದುದನ್ನು ಮನ ಬಿಚ್ಚಿ ಹೇಳಿದ್ದೇನೆ."

"ಯಾರು ಸತ್ತರೂ ಜಗತ್ತೇನೂ ತಲೆ ಕೆಳಗಾಗೋದಿಲ್ಲಾ."

"ಯಾರು ಸತ್ತರೂ ಜಗತ್ತು ತಲೆಕೆಳಗಾಗೋದಿಲ್ಲಾ. ಆದ್ರೆ, ನಂಗೆ ಒಂದೇ ಆಸೆ. ಪುನರ್ಜನ್ಮ ಇರೋದು ನಿಜವಾದ್ರೆ ನೀ ಹುಟ್ಟಿದ ದೇಶದಲ್ಲಿ ನಾ ಹುಟ್ಟಬಾರದು ಅಂತ"

ಗಂಡ ಹೆಂಡಿರು ಹೀಗೆ ಮಾತನಾಡುತ್ತಿರುವಾಗ, ದಾದಿ ಹೊರಗೆ ಹೋಗಿದ್ದವಳು ಒಳಗೆ ಬಂದು ಕಮಲೆಯನ್ನು ಕುರಿತು, "ಅಮ್ಮಾ ನೀವ್ಯಾರೋ ನಂಗೊತ್ತಿಲ್ಲ. ನೀವು ದಯವಿಟ್ಟು ರೋಗಿ ಹತ್ತಿರ ಮಾತಾಡ್ಬೇಡಿ. ದಯವಿಟ್ಟು ಹೊರಗಡೆ ಹೋಗಿ" ಎಂದು ವಿನಂತಿ ಮಾಡಿಕೊಂಡಳು.

"ನೀವು ರೋಗಿಗೂ ಅದೇ ಬುದ್ಧಿವಾದ ಹೇಳಿ"

"ನೀವ್ಯಾರು?"

"ನಾ ಅವರ ಹೆಂಡ್ತಿ. ನಾನು ಅವರ ಆರೋಗ್ಯ ವಿಚಾರಿಸ್ಬೇಕು ಅಂತ ಬಂದ್ರೆ ಮನಸ್ಸಿಗೆ ಚುಚ್ಚು ಹಾಗೆ ಮಾತಾಡ್ತಾರೆ."

"ಅಮ್ಮಾ, ರೋಗಿ ನಮ್ಮ ಮನಸ್ಸಿಗೆ ಚುಚ್ಚೊ ಹಾಗೆ ಮಾತಾಡಿದ್ರೂ ತಾಳ್ಮೆಯಿಂದ ಕೇಳ್ಬೇಕು. ನಮಗೆ, ನರ್ಸ್ ಕೆಲಸ ಮಾಡೋರಿಗೆ ಇಲ್ಲಿ ಈ ಆಸ್ಪತ್ರೇಲಿ, ಕೆಲವು ರೋಗಿಗಳು ಬೈತಾರೆ, ಬಾಯಿಗೆ ಬಂದ ಹಾಗೆ ಅಂತಾರೆ ನಾವು ಅವರ ಮೇಲೆ ಸಿಟ್ಟು ಮಾಡ್ಕೊಂಡು ಅವರ ಶುಶ್ರೂಷೆ ಮಾಡ್ದೆ ಇದ್ರೆ ಏನಾಗ್ತದೆ ನೀವೇ ಹೇಳಿ? ನೀವು ಹೆಂಡ್ತಿ, ನಿಮಗೆ ದಾದಿಯರಿಗಿಂತ ಹೆಚ್ಚು ತಾಳ್ಮೆ ಇರ್ಬೇಕು."

"ತಾಳ್ಮೆಗೂ ಒಂದು ಮಿತಿ ಇದೆ" ಎಂದು ಗುಡುಗುಡಿಸುತ್ತಾ ಕಮಲ ವಾರ್ಡಿನಿಂದ ಹೊರಗೆ ಹೋದಳು.

ಆಸ್ಪತ್ರೆಯ ಮುಂಭಾಗದಲ್ಲಿ ಚಂಚಲೆಯೂ, ಗೋಪಾಲನೂ, ಚಂದ್ರಹಾಸನೂ, ಕಿಶೋರನೂ, ಪದ್ಮಾವತಿಯೂ ಪರಸ್ಪರ ಮಾತನಾಡುತ್ತಾ ನಿಂತಿದ್ದರು. ಅಲ್ಲೇ ಪಕ್ಕದಲ್ಲಿ ನಿರಂಜನನ ಕಾರು ನಿಂತಿತ್ತು. ಕಮಲ ಆ ಕಾರಿನಲ್ಲೇ ಆಸ್ಪತ್ರೆಗೆ ಬಂದಿದ್ದ ಳೆಂಬ ವಿಚಾರ ಅವರ್ಯಾರಿಗೂ ಗೊತ್ತಿರಲಿಲ್ಲ. ಅವರು ಮಾತನಾಡುತ್ತಿರುವಾಗ, ಕಮಲ ಅವರನ್ನು ನೋಡಿದ್ದರೂ ನೋಡದೆ ಇದ್ದವಳಂತೆ, ಕಾರಿನಲ್ಲಿ ಕುಳಿತುಕೊಂಡು ಹೊರಟೇ ಬಿಟ್ಟಳು. ಇದನ್ನು ನೋಡಿದ ಚಂದ್ರಹಾಸನಿಗೂ, ಕಿಶೋರನಿಗೆ ಬಹಳ ಆಶ್ಚರ್ಯವಾಯಿತು. ಸ್ವಾಭಾವಿಕವಾಗಿ ಕಮಲ ಚಂಚಲೆಯನ್ನೂ, ಗೋಪಾಲನನ್ನೂ ತನ್ನ ಮನೆಗೆ ಆಹ್ವಾನಿಸ ಬೇಕಾಗಿತ್ತು. ಆಹ್ವಾನಿಸುವುದಿರಲಿ, ಅವರನ್ನು ಮಾತನಾಡಿಸದೆ ಹೊರಟು ಹೋಗಿದ್ದಳು.

ಚಂಚಲೆಯೂ ಮತ್ತು ಗೋಪಾಲನೂ ಎಲ್ಲಿರಬೇಕೆಂಬುದು ಒಂದು ಸಮಸ್ಯೆಯಾಗಿ ಪರಿಣಮಿಸಿತು. ತಾವಿಬ್ಬರೂ ಹೊಟೇಲಿನಲ್ಲಿ ಇರುವುದಾಗಿ ತಿಳಿಸಿದರು. ಚಂದ್ರಹಾಸನು ಅವರಿಬ್ಬರೂ ತನ್ನ ಮನೆಗೆ ಬರಬೇಕೆಂದು ಆಹ್ವಾನಿಸಿದನು. ಅನಿಲಪುರಕ್ಕೆ ಹೋಗುವುದು ಸೂಕ್ತವಲ್ಲವೆಂದು ಚಂಚಲೆಯ ಅಭಿಪ್ರಾಯವಾಗಿತ್ತು. ಅನಿಲಪುರಕ್ಕೆ ಹೋಗಿ ತಂಗಿದ್ದರೆ ಶಂಕರನ ವಕ್ರದೃಷ್ಟಿ ಗೋಪಾಲನ ಮೇಲೆ ಬೀಳಬಹುದೆಂದು ಅವಳಿಗೆ ಭಯವಾಗಿತ್ತು. ಆದ್ದರಿಂದ ಅನಿಲಪುರಕ್ಕೆ ಹೋಗಲು ಚಂಚಲೆ ಒಪ್ಪಲಿಲ್ಲ. ಪದ್ಮಾವತಿ ತನ್ನ ಮನೆಯಲ್ಲಿರ ಬಹುದೆಂದು ಇಬ್ಬರನ್ನೂ ಆಹ್ವಾನಿಸಿದ್ದಳು. ಸಂಕೋಚ ಪ್ರವೃತ್ತಿಯ ಗೋಪಾಲನಿಗೆ ಆ ಸಲಹೆ ಹಿಡಿಸಲಿಲ್ಲ. ರೋಗಿಯ ಸ್ಥಿತಿ ಉತ್ತಮವಾಗಿರುವುದರಿಂದ ತಾನು ಸಿರಗೂರಿಗೆ ವಾಪಸು ಹೋಗುವುದಾಗಿಯೂ, ಪದ್ಮಾವತಿಯ ಮನೆ ಆಸ್ಪತ್ರೆಗೆ ಸಮೀಪವಿದ್ದುದ ರಿಂದ ಚಂಚಲೆ ಪದ್ಮಾವತಿಯ ಮನೆಯಲ್ಲಿರಬಹುದೆಂದೂ ಅವನು ಸೂಚಿಸಿದನು. ಆ ಸಲಹೆಗೆ ಚಂಚಲೆ ಒಪ್ಪಿದಳು. ಸಾಯಂಕಾಲ ಗೋಪಾಲನು ಸಿರಗೂರಿಗೆ ಹೊರಟು ಹೋದನು.

ಚಂಚಲೆ ಹಗಲೆಲ್ಲಾ ತಂದೆಯ ಜೊತೆಯಲ್ಲಿ ಆಸ್ಪತ್ರೆಯಲ್ಲಿದ್ದು, ತಂದೆಯ ಶುಶ್ರೂಷೆ ಮಾಡುತ್ತಿದ್ದಳು. ರಾತ್ರಿಯ ಹೊತ್ತು ಮಾತ್ರ ಪದ್ಮಾವತಿಯ ಮನೆಯಲ್ಲಿರುತ್ತಿದ್ದಳು.

ಡಾಕ್ಟರ ಚಿಕಿತ್ಸೆಯಿಂದಲೂ, ಮಗಳ ಆರೈಕೆಯಿಂದಲೂ, ಬಂಧು ಬಾಂಧವರು ಮತ್ತು ಹಿತೈಷಿಗಳು ಆಸ್ಪತ್ರೆಗೆ ಬಂದು ವಿಚಾರಿಸುತ್ತಿದ್ದುದರಿಂದಲೂ, ಕೃಷ್ಣಕಾಂತನ ಆರೋಗ್ಯ ಕೇವಲ ಎಂಟು ದಿನಗಳಲ್ಲಿ ಬಹಳ ಮಟ್ಟಿಗೆ ಸುಧಾರಿಸಿತು. ಆದರೆ ಕೃಷ್ಣಕಾಂತನಿಗೆ ತಾನು ಇನ್ನು ಮುಂದೆ ಮೊದಲಿನಂತೆ ಕಷ್ಟಪಟ್ಟು ಕೆಲಸ ಮಾಡುವುದು ಸಾಧ್ಯವಿಲ್ಲವೆಂದು ಭಯ ಪ್ರಾಪ್ತಿಯಾಗಿತ್ತು. ಜೊತೆಗೆ ಡಾಕ್ಟರ ಹೇಳಿಕೆಯ ಪ್ರಕಾರ ಇನ್ನೂ ಒಂದೆರಡು ತಿಂಗಳ ಕಾಲ ವಿರಾಮದಿಂದಿದ್ದರೆ ಬರುತ್ತಿದ್ದ ವರಮಾನಕ್ಕೂ ವಿರಾಮ ದೊರಕುತ್ತದೆ ಎಂದು ಚಿಂತಿಸುತ್ತಿದ್ದನು. ಚಂಚಲೆಗೆ ತಂದೆಯ ಹಣಕಾಸಿನ ಸ್ಥಿತಿ ಸಂಪೂರ್ಣವಾಗಿ ಗೊತ್ತಿತ್ತು. ಅವಳು ಸಿರಗೂರಿನಿಂದ ಹೊರಡುವಾಗಲೇ ಗಂಡನಿಂದ ತಂದೆಯ ಹೆಸರಿಗೆ ಒಂದು ಸಾವಿರ ರೂಪಾಯಿಗಳ ಬ್ಯಾಂಕ್ ಚೆಕ್ಕನ್ನು ತಂದಿದ್ದಳು. ಎಂಟು ದಿನಗಳ ನಂತರ, ಆ ಚೆಕ್ಕನ್ನು ಅವಳು ತಂದೆಗೆ ಕೊಡಲು ಹೋದಾಗ ಕೃಷ್ಣಕಾಂತನು ಅದನ್ನು ತೆಗೆದುಕೊಳ್ಳಲು ನಿರಾಕರಿಸಿದನು.

"ಚಂಚಲಾ, ನಾನು ಇದುವರೆಗೆ ನನ್ನ ಜೀವನಕ್ಕಾಗಿ ಇನ್ನೊಬ್ಬರನ್ನು ಆಶ್ರಯಿಸಿದವನಲ್ಲ. ಯಾರ ಹಂಗೂ ನನಗೆ ಬೇಕಾಗಿಲ್ಲ. ನಿನ್ನ ಚಿಕ್ಕಮ್ಮ ಕಮಲಾ ತಂದೆ ನನಗೆ ಕೊಟ್ಟಿದ್ದ ಹತ್ತು ಸಾವಿರ ರೂಪಾಯಿಗಳ ವರದಕ್ಷಿಣೆಯನ್ನೂ ಸಹ ಅವಳಿಗೆ ವಾಪಸು ಕೊಟ್ಟ ಸಮಾಚಾರ ನಿನಗೆ ಗೊತ್ತಿದೆ" ಎಂದು ಕೃಷ್ಣಕಾಂತ್ ಹೇಳಿದನು.

"ಅಪ್ಪಾಜೀ, ನಾನು ಪರಕೀಯಳೇನು? ಇದು ನನ್ನ ಪ್ರೇಮದ ಕಾಣಿಕೆ. ನೀವು ತೆಗೆದುಕೊಳ್ಳದಿದ್ದರೆ ನನ್ನ ಮನಸ್ಸಿಗೆ ಬಹಳ ನೋವಾಗುತ್ತದೆ" ಎಂದು ಚಂಚಲೆ ತನ್ನ ತಂದೆಗೆ ಹೇಳಿದಳು. ಕೃಷ್ಣಕಾಂತನು ಮಗಳ ಮನಸ್ಸನ್ನು ನೋಯಿಸಬಾರದೆಂದು ಆ ಚೆಕ್ಕನ್ನು ತೆಗೆದುಕೊಂಡನು.

ಕಮಲ ಪ್ರತಿದಿನವೂ ತೋರುಗಾಣಿಕೆಗಾಗಿ ಆಸ್ಪತ್ರೆಗೆ ಬಂದು, ಗಂಡನ ಬಳಿ ಕೆಲವು ನಿಮಿಷಗಳ ಕಾಲ ಮೌನವಾಗಿ ನಿಂತು, ಹೊರಟು ಹೋಗುತ್ತಿದ್ದಳು. ಅವಳೂ ಮಾತನಾಡುತ್ತಿರಲಿಲ್ಲ; ಅವನೂ ಮಾತನಾಡುತ್ತಿರಲಿಲ್ಲ. ಒಂದು ದಿನವಾದರೂ ಅವಳು ಚಂಚಲೆಯೊಡನೆ ಒಂದು ಮಾತನ್ನೂ ಸಹ ಆಡಿರಲಿಲ್ಲ. ಕೃಷ್ಣಕಾಂತನ ಮಗ ಗಂಗಾಧರನು ಪ್ರತಿದಿನವೂ ಸಾಯಂಕಾಲ ಸ್ಕೂಲಿನಿಂದ ಆಸ್ಪತ್ರೆಗೆ ಬಂದು ತಂದೆಯೊಡನೆ ಮಾತನಾಡಿ ಹೋಗುತ್ತಿದ್ದನು. ಅಡಿಗೆಯ ನಾರಾಯಣನೂ ಕೂಡ ಪ್ರತಿದಿನ ಸಾಯಂಕಾಲ ಬಂದು ತನ್ನ ಧಣಿಯನ್ನು ನೋಡಿ ತನ್ನ ಗೌರವವನ್ನು ಅರ್ಪಿಸಿ ಹೋಗುತ್ತಿದ್ದನು. ಒಂದು ದಿನ ಸಾಯಂಕಾಲ ಅವನು ಆಸ್ಪತ್ರೆಗೆ ಬಂದಾಗ ಕಮಲ ವಾರ್ಡಿನಲ್ಲಿದ್ದಳು. ಅವನನ್ನು ನೋಡಿದ ಕೂಡಲೆ ಅವಳು ರೇಗಿ ಹೋದಳು.

"ನಿಂಗೆನೋ ಕೆಲ್ಸ ಇಲ್ಲಿ? ನೀ ಯಾರನ್ನ ಕೇಳಿ ಇಲ್ಲಿಗೆ ಬಂದೆ? ಇವರು, ನಿನ್ನ ಅಟ್ಟಕ್ಕೇರಿಸಿ ಕೊಬ್ಬಿಸಿ ಇಟ್ಟ್ಯಾರೆ. ನಿನ್ನ ಕೊಬ್ಬು ಇಳಸ್ತೀನಿ" ಎಂದು ಗಂಡನ ಎದುರಿನಲ್ಲೇ ನಾರಾಯಣನನ್ನು ಬೈದಳು. ಕೃಷ್ಣಕಾಂತನು ಮಾತನಾಡಿದರೆ ಜಗಳವಾಗುತ್ತದೆಯೆಂಬ

ದೃಷ್ಟಿಯಿಂದ ಸುಮ್ಮನೆ ಇದ್ದನು. ನಾರಾಯಣನು ಅಲ್ಲಿ ನಿಲ್ಲದೆ ಖಿನ್ನನಾಗಿ ಮನೆಗೆ ಹೊರಟು ಹೋದನು.

ಕೃಷ್ಣಕಾಂತನಿಗೆ ಶುಶ್ರೂಷೆ ಮಾಡುತ್ತಿದ್ದ ದಾದಿ ಸೂಕ್ಷ್ಮಮತಿಯವಳು. ಅವಳು ಕೆಲವೇ ದಿನಗಳಲ್ಲಿ ಕಮಲೆಯ ತೂಕ ಬಣ್ಣಗಳನ್ನು ಒರೆಹಚ್ಚಿ ತೂಗಿ ನೋಡಿದ್ದಳು. ಕಮಲ ಆಸ್ಪತ್ರೆಗೆ ಬಂದೊಡನೆ, ಆ ದಾದಿ ವ್ಯಂಗ್ಯವಾಗಿ, "ದಯಮಾಡಿ ಬನ್ನಿ, ಕುಳಿತುಕೊಳ್ಳಿ" ಎಂದು ಕುರ್ಚಿಯನ್ನು ಕೊಡುತ್ತಿದ್ದಳು. ಕಮಲ ಅವಳ ಕಡೆಗೆ ತಿರುಗಿ ನೋಡದೆ, "ಥ್ಯಾಂಕ್ಸ್" ಎಂದು ಹೇಳಿ ಸ್ವಲ್ಪ ಹೊತ್ತು ನಿಂತಿದ್ದು ಹೊರಟು ಹೋಗುತ್ತಿದ್ದಳು. ಅವಳು ಹೋದೊಡನೆ ದಾದಿ ಚಂಚಲೆಯ ಕಡೆಗೆ ನೋಡಿ ನಗುತ್ತಿದ್ದಳು. ಅವಳು ಏಕೆ ನಗುತ್ತಾಳೆಂಬುದು ಚಂಚಲೆಗೆ ಗೊತ್ತಾಗಿತ್ತು. ಆದರೆ ತನ್ನ ತೌರುಮನೆಯ ಹುಳುಕು ದಾದಿಗೆ ಗೊತ್ತಾಗಬಾರದೆಂಬ ಉದ್ದೇಶದಿಂದ, ಅವಳೊಡನೆ ತನ್ನ ಮಲತಾಯಿಯ ವಿಚಾರದಲ್ಲಿ ಒಂದು ಮಾತನ್ನೂ ಆಡುತ್ತಿರಲಿಲ್ಲ.

ಹದಿನೈದು ದಿನಗಳಲ್ಲಿ ಕೃಷ್ಣಕಾಂತನ ಆರೋಗ್ಯ ಬಹಳ ಸುಧಾರಿಸಿತ್ತು. ಡಾಕ್ಟರ ಅನುಮತಿಯಿಂದ ಅವನು ಆಸ್ಪತ್ರೆಯ ಆವರಣದಲ್ಲಿ ಓಡಾಡುತ್ತಿದ್ದನು. ಇನ್ನು ಎರಡು ಮೂರು ದಿನಗಳಲ್ಲಿ ಸಿರಗೂರಿಗೆ ರೈಲಿನಲ್ಲಿ ಪ್ರಯಾಣ ಮಾಡಬಹು ದೆಂದು ಡಾಕ್ಟರು ಹೇಳಿದ್ದರು. ಸಿರಗೂರಿಗೆ ಹೊರಡಲು ಎರಡು ದಿನಗಳಿರುವಾಗ ಒಂದು ದಿನ ಬೆಳಿಗ್ಗೆ ಕಮಲ ಆಸ್ಪತ್ರೆಗೆ ಬಂದಿದ್ದಳು. ಕೃಷ್ಣಕಾಂತನು ಒಳಗಡೆ ಸ್ನಾನ ಮಾಡುತ್ತಿದ್ದನು. ಚಂಚಲೆ ಪದ್ಮಾವತಿಯ ಮನೆಯಿಂದ ಇನ್ನೂ ಬಂದಿರಲಿಲ್ಲ. ವಾರ್ಡಿನಲ್ಲಿದ್ದ ದಾದಿ ಕಮಲೆಯನ್ನು ಕುರಿತು "ದಯಮಾಡಿ ಕುಳಿತುಕೊಳ್ಳಿ" ಎಂದು ಕುರ್ಚಿಯ ಕಡೆಗೆ ಕೈ ತೋರಿಸಿದಳು. ಆ ತುಂಟ ದಾದಿ ಕಮಲೆಯನ್ನು ಲೇವಡಿ ಮಾಡಬೇಕೆಂದು ಮನಸ್ಸಾಗಿತ್ತು.

"ಯಜಮಾನರು ಹುಷಾರಾಗಿದ್ದಾರೆ. ಯಾವಾಗ ಮನೀಗೆ ಕರಕೊಂಡು ಹೋಗ್ತೀರಿ?" ಎಂದು ದಾದಿ ಕಮಲೆಯನ್ನು ಕೇಳಿದಳು.

"ಯಾವಾಗ ಬರ್ತಾರೆ ಅಂತ ಅವರನ್ನೇ ಕೇಳಿ ನೀವು" ಎಂದು ಕಮಲೆ ಹೇಳಿದಳು.

"ನಿಮ್ಮ ಚಂಚಲಾ ಅವರು ಬಹಳ ಶ್ರೀಮಂತರೇನಮ್ಮಾ?"

"ಅವಳ ಶ್ರೀಮಂತಿಕೆ ಅವಳ ಮನೇಲೆ ಇರ್ತದೆ, ನಮಗೇನು ಬರ್ತದೆ?"

"ನಿಮಗೂ ಬಂತಲ್ಲಾ ಮೊನ್ನೆ ಸಾವಿರ ರೂಪಾಯಿ."

"ನನಗೆಲ್ಲಿ ಬಂತು?"

"ಮೊನ್ನೆ ಚಂಚಲಾ ನಿಮ್ಮ ಯಜಮಾನರಿಗೆ ಒಂದು ಸಾವಿರ ರೂಪಾಯಿ ಚೆಕ್ಕೊಟ್ರು. ನಿಮಗೂ ಬಂದಹಾಗೆ ಆಯ್ತಲ್ಲಾ" ಎಂದು ದಾದಿ ಹೇಳುತ್ತಿರುವಾಗ, ಚಂಚಲೆ ಬಂದಳು. ಮಾತುಕತೆ ಅಲ್ಲಿಗೇ ಮುಕ್ತಾಯವಾಯಿತು.

ಚಂಚಲೆ ಬಂದನಂತರ ಕಮಲ ಸದ್ದಿಲ್ಲದೆ ಹೊರಗಡೆ ಹೋಗಿ, ಬೆಂಚಿನ ಮೇಲೆ ಕುಳಿತುಕೊಂಡಳು. ಅವಳು ಅಲ್ಲಿ ಕುಳಿತಿದ್ದಾಗ, ಗುಮಾಸ್ತ ಶಾಮಸುಂದರನು ಕೃಷ್ಣಕಾಂತ ನನ್ನು ನೋಡುವ ಸಲುವಾಗಿ ವಾರ್ಡಿಗೆ ಹೋಗುತ್ತಿದ್ದನು. ಕಮಲ ಅವನನ್ನು ಕರೆದು,

"ಏನೋ ಶಾಮ್, ನಿಮ್ಮ ಸಾಹೇಬರು ನಾಡಿದ್ದು ಸಿರಗೂರಿಗೆ ಹೋಗ್ತಾರಂತೆ, ಹೌದೇನೋ?" ಎಂದು ಕೇಳಿದಳು.

"ನಂಗೇನು ಗೊತ್ತು ತಾಯಿ? ಅವರನ್ನೇ ಕೇಳಿ."

"ಅದಿರಲಿ, ಮನೆ ಖರ್ಚಿಗೆ ದುಡ್ಡಿಲ್ಲ. ನಿಮ್ಮ ಸಾಹೇಬರಿಂದ ಮುನ್ನೂರು ರೂಪಾಯಿ ತಂದುಕೊಡು."

"ನಿನ್ನೆ ಅಲ್ಲ ಮೊನ್ನೆ ಒಂದುನೂರು ರೂಪಾಯಿ ಕೊಟ್ಟೇನಲ್ಲಮ್ಮಾ? ಸಾಹೇಬರು ಮಲಗಿದ ಮೇಲೆ ಆದಾಯ ಏನೂ ಇಲ್ಲೇ ಇಲ್ಲ."

"ಏನೋ, ನಿನ್ನ ಕೈಯಿಂದ ಕೊಡೋ ಹಾಗೆ ಮಾತಾಡ್ತಾ ಇದೀಯಲ್ಲಾ. ನೀ ಯಾರು? ನನ್ನ ಖರ್ಚುವೆಚ್ಚ ಪ್ರಶ್ನೆ ಮಾಡೋಕೆ?"

"ನಾ ಬಡ ಗುಮಾಸ್ತ. ನಿಮ್ಮ ಖರ್ಚುವೆಚ್ಚ ಪ್ರಶ್ನೆ ಮಾಡೋಕೆ ನಾ ಯಾರು? ಯಜಮಾನ್ರು ಹಾಸಿಗೆ ಹಿಡಿದಮೇಲೆ ಸಂಪಾದ್ನೆ ಏನೂ ಇಲ್ಲ, ನನ್ನಹತ್ರ ದುಡ್ಡಿಲ್ಲ ಅಂತ ಹೇಳ್ದೆ. ತಪ್ಪಾದ್ರೆ ಕ್ಷಮಿಸಿ."

"ಮೊನ್ನೆ ಒಂದು ಸಾವಿರ ರೂಪಾಯಿ ಚೆಕ್ಕು ಕ್ಯಾಷ್ ಮಾಡಿಸಿದೆಯಂತೆ?"

"ಎಂಥ ಒಂದು ಸಾವಿರ ರೂಪಾಯಿ? ಆಫೀಸ್ ಖರ್ಚಿಗೇ ಕಾಸಿಲ್ಲಾ. ಸಾವಿರ ರೂಪಾಯಿ ಎಲ್ಲಿ ಬಂತು?"

"ಸುಳ್ಯಾಕೆ ಹೇಳ್ತಿಯಾ?"

"ಸುಳ್ಳೆಲ್ಲಿ ಬಂತಮ್ಮಾ? ನಿಮ್ಮಹತ್ರ ಯೆಂದೂ ಸುಳ್ಳು ಹೇಳ್ದೋನಲ್ಲ. ಬಡಪಾಯಿ ನನ್ನ ಮ್ಯಾಲೇಕೆ ಕೋಪ. ನಿಮ್ಮ ಯಜಮಾನ್ರನ್ನೇ ಕೇಳಿ" ಎಂದು ಶಾಮಸುಂದರ ಹೇಳಿ ಹೊರಟುಹೋದನು.

ಸಿರಗೂರಿಗೆ ಹೊರಡುವ ಹಿಂದಿನ ದಿನ ಕಮಲ ಆಸ್ಪತ್ರೆಗೆ ಬಂದಿದ್ದಾಗ, ಕೃಷ್ಣಕಾಂತನು ಅವಳನ್ನು ಕುರಿತು, "ನಾನು ನಾಳೆ ಸಿರಗೂರಿಗೆ ಹೋಗ್ತೀನಿ. ಡಾಕ್ಟರು ಒಂದು ತಿಂಗಳು ರೆಸ್ಟ್ ಬೇಕು ಅಂತ ಹೇಳ್ತಾರೆ. ನಾ ವಾಪಸು ಬರೋದು ಒಂದು ತಿಂಗಳಾಗ್ತದೆ" ಎಂದು ಹೇಳಿದನು.

"ನೀವೇನೋ ಮಗಳ ಮನೇಲಿ ಸುಖವಾಗಿರ್ತೀರಿ. ನನ್ನ, ನನ್ನ ಮಕ್ಕಳ ಗತಿ ಏನು?"

"ನನ್ನಿಂದ ನಿನಗೇನು ಆಗ್ಬೇಕಾಗಿದಿಯೇ? ನಾ ಹ್ಯಾಂಗಿದ್ದರೂ ನಿಂಗೆ ಬ್ಯಾಡ್ದೆ ಇರೋನು. ನಾ ಎಲ್ಲಿದ್ರೆ ನಿಂಗೇನಂತೆ?"

"ನಮ್ಮ ಜೀವನ ನಡೆಯೋದು ಹೇಗೆ?"

"ನಿನ್ನ ಹತ್ರ ಕಡ್ಮೆ ಕಡ್ಮೆ ಅಂದ್ರೆ, ಇಪ್ಪತ್ತು ಮೂವತ್ತು ಸಾವಿರ ರೂಪಾಯಿ ಗಂಟಾದ್ರೂ ಇದೆ. ನಾ ಕಾಸಿಲ್ಲದ ದಾಸಯ್ಯ. ಹದಿನೈದು ದಿನದಿಂದ ಮೂರು ಕಾಸಿನ ಸಂಪಾದ್ನೆ ಇಲ್ಲ. ನಾ ಖಾಯಿಲೆ ಬಿದ್ದ ಮೇಲೆ ಶಾಮ್ ನಿಂಗೆ ಮೂರುನೂರು ರೂಪಾಯಿ ಕೊಟ್ಟಾನಂತೆ, ನಾ ಎಲ್ಲಿಂದ ತರ್ಲಿ?"

"ಹೂಂ, ನಾನು ಆಪದ್ಧನ ಅಂತ ಇಟ್ಕೊಂಡು ನನ್ನ ದುಡ್ನಾಗೆ ನಿಮ್ಮ ಸಂಸಾರ ನಡಸ್ತೀನೀ! ನಾಳೆ ನಾ ಭಿಕ್ಷೆ ಬೇಡ್ತೀನಿ."

"ನಿನ್ನ ದುಡ್ಡೆಲ್ಲಿತ್ತು? ಅದೂ ನನ್ನ ದುಡ್ಡೇ. ನಾ ಕೊಟ್ಟ ಹಣದಾಗೆ ಪುಟ್ಟ ಗಂಟು ಮಾಡಿದ್ದು."

"ಕೊಟ್ಟು ಹೊರಿಸೀರಿ? ನಾಚಿಕೆ ಆಗೋದಿಲ್ಲೇನು ಹೇಳೋಕೆ? ಕೊಟ್ರೆ ಕೊಡಿ. ಬಿಟ್ರೆ ಬಿಡಿ, ನಾನೂ, ಮಕ್ಕಳೂ ದೇಶಾಂತರ ಹೋಗ್ತೀವಿ. ಇಲ್ದೆ ಹೋದ್ರೆ ಅವರಿಗೂ ವಿಷಕೊಟ್ಟು, ನಾನೂ ವಿಷ ತಗೊಂಡು ಸಾಯ್ತೀನಿ."

ಅವರಿಬ್ಬರ ಮಾತನ್ನು ಕೇಳುತ್ತಿದ್ದ ಚಂಚಲೆ "ಅಪ್ಪಾಜೀ, ಯಾರಾದ್ರೂ ಕೇಳಿದ್ರೆ, ಏನು ಹೇಳ್ತಾರೆ? ನೀವು ಸುಮ್ನಿರಿ, ನರ್ಸ್ ಬರೋ ಹೊತ್ತಾಯ್ತು. ನೀವು ಹೋಗಿ ಚಿಕ್ಕಮ್ಮಾ. ಆಮೇಲೆ ಅಪ್ಪಾಜೀ ವಾಪಸು ಬರೋವರೀಗೆ ಬೇಕಾಗೂ ಹಣಾನ ಶಾಮ್ ತಂದು ಕೊಡ್ತಾನೆ. ನಾ ಅವನೀಗೆ ಹೇಳ್ತೀನಿ."

"ಸಾಕೇ ನಿನ್ನ ಉಪದೇಶ, ನಿನ್ನಿಂದ ಇಷ್ಟೆಲ್ಲಾ ಆದದ್ದು. ನೀನು, ನಿನ್ನಪ್ಪಾನೂ ಸುಖವಾಗಿರಿ, ನಾನೂ ನನ್ಮಕ್ಕಳೂ ಹಾಳಾಗಿ ಹೋಗ್ತೀವಿ. ನಿನ್ನ ಅಪ್ಪನ್ನ ಕೈಹಿಡಿದಿದ್ದಕ್ಕೆ ಇವರ ಗುಮಾಸ್ತನ ಹತ್ತಿರ ಭಿಕ್ಷೆ ಬೇಡ್ಕೊಂಡು ಬದುಕಬೇಕು" ಎಂದು ಕಮಲ ಆರ್ಭಟಿಸುತ್ತಾ ಹೊರಟು ಹೋದಳು.

"ಅಪ್ಪಾಜೀ, ನೀವು ಮಾತ್ರ ಮನ್ಸಿಗೆ ಹಚ್ಚಿಕೊಳ್ಳಬಾರ್ದು. ಮನ್ಸಿಗೆ ಬೇಸರವಾದರೆ ಬ್ಲಡ್‌ಪ್ರೆಷರ್ ಜಾಸ್ತಿ ಆಗ್ತದೆ. ಚಿಕ್ಕಮ್ಮನ ಸ್ವಭಾವ ಇಂದು ನೋಡ್ತಿದ್ದೀರೇನು?"

"ಬೇಸರವೇನೂ ಇಲ್ಲಾ, ನಾನೊಬ್ಬ ಜಗಳಗಂಟಿ ಮೂರ್ಖಳನ್ನ ಮದುವೆ ಆದೆ ಅಂತ ಪಶ್ಚಾತ್ತಾಪ. ಅವಳ ಹತ್ತಿರ ಮಾತಾಡಿದರೆ ಜಗಳ. ಅದಕ್ಕೇ ನಾ ಮಾತೇ ಆಡೋದಿಲ್ಲ.

"ಹೋಗ್ಲಿ ಬಿಡಿ, ಶಾಮನ ಹತ್ತಿರ ನಾಲ್ಕು ನೂರು ರೂಪಾಯಿ ಕಳ್ಸಿಕೊಡಿ."

"ಕಳಿಸಿ ಕೊಡಬಹುದು. ಆದರೆ ಹದಿನೈದು ದಿವಸಕ್ಕೆ ಮತ್ತೆ ಕೇಳ್ತಾಳೆ. ನಾ ಎಲ್ಲಿಂದ ತರ್ಲಿ?"

"ಏನಾದ್ರೂ ಮಾಡ್ಲಿ. ಶಾಮನ ಹತ್ತಿರ ಇಂದೇ ನಾಲ್ಕನೂರು ರೂಪಾಯಿ ಕಳ್ಸಿ. ನೀವು ಮಾತ್ರ ಮನ್ಸಿಗೆ ಹಚ್ಚಿಗೊಳ್ಳಬೇಡಿ."

"ಏನ್ ಮಾಡೋದು ಹೇಳು? ಆ ಸಣ್ಣ ಮಕ್ಕಳಿಗೋಸ್ಕರ ಸುಮ್ನೆ ಅನುಭವಿಸ್ಬೇಕು. ಇಲ್ಲವಾದ್ರೆ ಅವಳಿಗೆ ಎಂದೋ ಬುದ್ಧೀ ಕಲಿಸ್ತಿದ್ದೆ."

"ಚಿಕ್ಕಮ್ಮಗೆ ಎಂದೂ ಬುದ್ಧಿ ಬರೋದಿಲ್ಲ."

"ನೋಡ್ತಾ ಇರು. ನಾ ಸತ್ತ ಮೇಲೆ ಅವಳಿಗೆ ಚೆನ್ನಾಗಿ ಬುದ್ಧಿ ಬರ್ತದೆ."

"ಸಾಯೋ ವಿಚಾರ ಈಗ್ಯಾಕೆ ಯೋಚನೆ ಮಾಡ್ತೀರಿ? ನಾಳೆ ಬೆಳಿಗ್ಗೆ ರೈಲಾಗೆ ಸೀಟು ಶಾಮ್ ರಿಸರ್ವ್ ಮಾಡಿಸಿದ್ದಾನೇನು?"

"ಮಾಡ್ಸಿ ಟಿಕೆಟ್ಟು ತಂದಾನೆ. ನಾಳೆ ಬೆಳಿಗ್ಗೆ ಹೊರಡೋಣ."

ಮರುದಿನ ಬೆಳಿಗ್ಗೆ ತಂದೆ ಮಗಳಿಬ್ಬರೂ ಆಸ್ಪತ್ರೆಯಿಂದ ಟ್ಯಾಕ್ಸಿಯಲ್ಲಿ ಪದ್ಮಾವತಿಯ ಮನೆಗೆ ಹೋಗಿ ಅವಳಿಗೆ ವಂದನೆಯನ್ನರ್ಪಿಸಿ, ರೈಲ್ವೇ ಸ್ಟೇಷನ್ನಿಗೆ ಹೋದರು. ಕಿಶೋರನು ಅವರಿಗಾಗಿ ರೈಲ್ವೇ ಸ್ಟೇಷನ್ನಿನಲ್ಲಿ ಕಾದಿದ್ದನು. ಅವರನ್ನು ರೈಲು ಹತ್ತಿಸಿ ಅವರ ಸಹಾಯಕ್ಕಾಗಿ ಕ್ರಾಂತಿಕೂಟದ ಇಬ್ಬರು ಸಿಪಾಯಿಗಳನ್ನು ಅವರ ಜೊತೆಯಲ್ಲಿ ಕಳುಹಿಸಿಕೊಟ್ಟನು.

೧೨

ಚಂಚಲೆಗೆ ಮದುವೆ ಆಗಿ ಅವಳು ಗಂಡನ ಮನೆಗೆ ಹೋದ ಮೇಲೆ, ಕೃಷ್ಣಕಾಂತನು ಸಮಸ್ತ ಕೆಲಸಗಳಿಗೂ ನಾರಾಯಣನನ್ನೇ ಅವಲಂಬಿಸಿದ್ದನು. ಕೃಷ್ಣಕಾಂತನು ಮನೆಯಲ್ಲಿಲ್ಲದ ವೇಳೆಯಲ್ಲಿ, ಅವನ ಬಂಧುಗಳು ಮನೆಗೆ ಬಂದಾಗ, ಕಮಲ ಅವರನ್ನು ಮಾತನಾಡಿಸುತ್ತಲೇ ಇರಲಿಲ್ಲ. ಅದನ್ನು ನೋಡಲಾರದೆ. ನಾರಾಯಣನು ಅವರಿಗೆ ಟೀ ಅಥವಾ ಕಾಫಿ ಕೊಟ್ಟು ಕಳುಹಿಸಿಕೊಡುತ್ತಿದ್ದನು. ಅಂತಹ ಸಂದರ್ಭಗಳಲ್ಲಿ ಕಮಲ, "ನೀನೇ ಏನೋ ಈ ಮನೆ ಯಜಮಾನ?" ಎಂದು ಕೂಗುತ್ತಿದ್ದಳು.

"ನನ್ಮೇಲೇಕೆ ಕೋಪ ಮಾಡ್ತೀರಿ ತಾಯಿ? ಸಾಹೇಬರು, ತಮ್ಮ ನೆಂಟರಿಷ್ಟರು ಬಂದರೆ ಹಾಗೇ ಕಳಿಸ್ಬೇಡಾ ಅಂತ ನಂಗೆ ತಾಕೀತು ಮಾಡ್ಯಾರೆ. ನಾಯೇನ್ ಮಾಡ್ಲಿ?" ಎಂದು ಉಪಾಯವಾಗಿ ನಾರಾಯಣನು ತಪ್ಪಿಸಿಕೊಳ್ಳುತ್ತಿದ್ದನು. ಕಮಲ ತನ್ನ ಬಂಧುಗಳು ಬಂದಾಗ ವರ್ತಿಸುತ್ತಿದ್ದ ರೀತಿಯೇ ಬೇರೆ; ಕೃಷ್ಣಕಾಂತನ ಬಂಧುಗಳ ಬಂದಾಗ ವರ್ತಿಸುತ್ತಿದ್ದ ರೀತಿಯೇ ಬೇರೆ. ತನ್ನ ಬಂಧುಗಳ ಬಂದಾಗ ಮಿತಿಮೀರಿದ ಸಂಭ್ರಮದಿಂದ ಅವರಿಗೆ ಷೋಡಶೋಪಚಾರಗಳನ್ನು ಮಾಡುತ್ತಿದ್ದಳು. ಗಂಡನ ಬಳಗದವರು ಬಂದಾಗ ಬೇಕೋ ಬೇಡವೋ ಎನ್ನುವ ರೀತಿಯಲ್ಲಿ ಉಪಚಾರ ಮಾಡುತ್ತಿದ್ದಳು. ಕೃಷ್ಣಕಾಂತನ ಬಂಧುಗಳ ಪೈಕಿ ಕೆಲವರು ಬಡವರಾಗಿದ್ದರು. ಆ ಬಡ ಬಂಧುಗಳು ಮನೆಗೆ ಬಂದಾಗ ಅವಳು ಅವರನ್ನು ಮಾತನಾಡಿಸುತ್ತಲೇ ಇರಲಿಲ್ಲ. ಅಂತಹ ಸಂದರ್ಭಗಳಲ್ಲಿ, ಕೃಷ್ಣಕಾಂತನು ನಾರಾಯಣನನ್ನು ಪ್ರತ್ಯೇಕ ಕರೆದು, ಬಂದ ಅತಿಥಿಗಳಿಗೆ ಊಟ ಉಪಹಾರಗಳ ವ್ಯವಸ್ಥೆ ಮಾಡಿಸುತ್ತಿದ್ದನು. ಇದನ್ನು ನೋಡಿ ಸಹಿಸದೆ, ಕಮಲ "ಸಾಮಾನಿಗೆ ದುಡ್ಡು ಕೊಡಿ ಅಂದ್ರೆ ಚೌಕಾಸಿ ಮಾಡ್ತೀರಿ. ದಾರೀಲಿ ಹೋಗೋರಿಗೆಲ್ಲಾ ಊಟ ಹಾಕಿಸ್ತೀರಿ" ಎಂದು ಹೇಳುತ್ತಿದ್ದಳು. ಒಂದೊಂದು ಸಾರಿ ಅವಳು ಹೇಳುತ್ತಿದ್ದ ಮಾತುಗಳು ಹೊರಗಡೆ ಕುಳಿತಿದ್ದ ಅತಿಥಿಗಳಿಗೂ ಕೇಳುತ್ತಿತ್ತು.

ಕಮಲೆಗೆ ನಾನಾ ಕಾರಣಗಳಿಂದ ನಾರಾಯಣನ ಮೇಲೆ ದ್ವೇಷ ಬೆಳೆದಿತ್ತು. ನಾರಾಯಣನು ಚಂಚಲೆಯ ಮತ್ತು ಕೃಷ್ಣಕಾಂತನ ಪಕ್ಷಪಾತಿಯೆಂದು ಅವಳು ಭಾವಿಸಿದ್ದಳು. ಅವನು ತನ್ನ ಮೆಲೆ ಕೃಷ್ಣಕಾಂತನಿಗೆ ಚಾಡಿ ಹೇಳುತ್ತಾನೆಂಬ ಸಂಶಯವೂ ಇತ್ತು. ನಾರಾಯಣ ತನ್ನ ಮಾತನ್ನು ಕೇಳದೆ ಗಂಡನ ಮಾತನ್ನು ಕೇಳುತ್ತಾನೆಂಬ ಆಕ್ರೋಶವೂ ಇತ್ತು. ನಾರಾಯಣನನ್ನು ಓಡಿಸಿ, ತನ್ನ ಮಾತನ್ನು ಕೇಳುವ ಅಡಿಗೆಯವನನ್ನು

ನೇಮಕ ಮಾಡಿಕೊಂಡರೆ, ಕೃಷ್ಣಕಾಂತನಿಗೆ ಬುದ್ಧಿ ಕಲಿಸುವುದು ಸುಲಭವೆಂದು, ಬಹಳ ಹಿಂದೆಯೇ ಯೋಚಿಸಿದ್ದಳು. ಎಲ್ಲಕ್ಕಿಂತ ಮಿಗಿಲಾಗಿ ನಿರಂಜನನು ಆಗಾಗ ತನ್ನ ಮನೆಗೆ ಬರುತ್ತಿರುವ ವಿಚಾರವನ್ನು ನಾರಾಯಣನು ಕೃಷ್ಣಕಾಂತನಿಗೆ ವರದಿ ಮಾಡುತ್ತಾನೆಂಬ ಪ್ರಬಲ ಸಂಶಯ ಅವಳಿಗುಂಟಾಗಿತ್ತು. ನಾರಾಯಣನನ್ನು ಕಳುಹಿಸಿ ಬೇರೊಬ್ಬ ಅಡಿಗೆಯವನನ್ನು ಗೊತ್ತು ಮಾಡಬೇಕೆಂದು ಅನೇಕ ಸಾರಿ ಆಗ್ರಹ ಪೂರ್ವಕವಾಗಿ ಕೃಷ್ಣಕಾಂತನಿಗೆ ಹೇಳಿದ್ದಳು. ಕೃಷ್ಣಕಾಂತನು "ಆಗಲಿ, ನೋಡೋಣ" ಎಂದು ಉದಾಸೀನದ ಜವಾಬನ್ನು ಕೊಡುತ್ತಿದ್ದನು. ಕೃಷ್ಣಕಾಂತನ ಕಷ್ಟವನ್ನು ನೋಡಲಾರದೆ ಅವನಿಗೋಸ್ಕರ ನಾರಾಯಣನು ಅವಳಾಡುತ್ತಿದ್ದ ಕಠೋರ ವಾಕ್ಯಗಳನ್ನೂ, ಕಿರುಕುಳಗಳನ್ನೂ ಸಹಿಸಿಕೊಂಡು ತೆಪ್ಪಗಿರುತ್ತಿದ್ದನು.

ಕೃಷ್ಣಕಾಂತನು ಆಸ್ಪತ್ರೆಯನ್ನು ಸೇರಿದ ನಂತರ ನಾರಾಯಣನ ಪಾಡು ನಾಯಿಯ ಪಾಡಾಗಿತ್ತು. ಕಮಲ ಮಾತುಮಾತಿಗೆ "ನೀ ಮನೆ ಬಿಟ್ಟು ತೊಲಗು. ನಿನಗೆಲ್ಲಿಂದ ದಿನಕ್ಕೆ ಒಂದು ಕೊಳಗ ಕೂಳು ಹಾಕ್ಲಿ" ಎಂದು ಹೇಳುತ್ತಿದ್ದಳು. ಕೃಷ್ಣಕಾಂತನು ಆಸ್ಪತ್ರೆಯಲ್ಲಿರುವಾಗ, ಮನೆಯನ್ನು ಬಿಟ್ಟು ಹೋಗಬಾರದೆಂದು ನಾರಾಯಣನು ಅವಳ ಮಾತುಗಳನ್ನು ಸಹಿಸಿಕೊಂಡಿದ್ದನು. ಕೃಷ್ಣಕಾಂತನು ಸಿರಗೂರಿಗೆ ಹೊರಡುವ ಹಿಂದಿನ ಸಾಯಂಕಾಲ, ನಾರಾಯಣನು ಆಸ್ಪತ್ರೆಗೆ ಹೋಗಿ, ತನ್ನ ಧಣಿಗೆ ತನ್ನ ಗೌರವವನ್ನು ಸಲ್ಲಿಸಿ ವಾಪಸು ಬರುವಾಗ ಕಣ್ಣೀರು ಸುರಿಸುತ್ತಾ ಬಂದಿದ್ದನು. ಆಸ್ಪತ್ರೆಗೆ ಹೋಗುವ ಮುನ್ನ ತನಗೆ ಕಮಲ ಕೊಡುತ್ತಿದ್ದ ಹಿಂಸೆಯನ್ನು ಕೃಷ್ಣಕಾಂತನಿಗೆ ತಿಳಿಸಬೇಕೆಂದು ಮನಸ್ಸು ಮಾಡಿ, ಆಸ್ಪತ್ರೆಗೆ ಹೋಗಿದ್ದನು. ಆದರೆ ಆಸ್ಪತ್ರೆಗೆ ಹೋದನಂತರ, ಹೃದಯ ರೋಗದಿಂದ ಆಗತಾನೇ ಚೇತರಿಸಿಕೊಳ್ಳುತ್ತಿದ್ದ ಧಣಿಯ ಮನಸ್ಸನ್ನು ನೋಯಿಸಬಾರದೆಂಬ ಉದ್ದೇಶದಿಂದ ತನ್ನ ಮನಸ್ಸನ್ನು ಬದಲಾಯಿಸಿ, ತನ್ನ ದುಃಖವನ್ನು ತಾನೇ ನುಂಗಿಕೊಂಡು, ಅಳುತ್ತಾ ವಾಪಸು ಹೋಗಿದ್ದನು.

ನಾರಾಯಣನು ಕೃಷ್ಣಕಾಂತನ ಹುಟ್ಟು ಊರಾದ ಒಂದು ಹಳ್ಳಿಗೆ ಸೇರಿದ್ದವನು. ಅವನು ಚಿಕ್ಕವನಾಗಿದ್ದಾಗಲೇ ಅವನ ತಂದೆತಾಯಿಗಳು ತೀರಿಹೋಗಿದ್ದರು. ತಬ್ಬಲಿಯಾಗಿದ್ದ ಹುಡುಗನನ್ನು ಕೃಷ್ಣಕಾಂತನು ಮನೆಗೆ ಕರೆದುಕೊಂಡು ಬಂದು ಮಗನಂತೆ ಸಾಕಿದ್ದನು. ಕೃಷ್ಣಕಾಂತನ ಮನೆಯೇ ಅವನ ಮನೆಯಾಗಿತ್ತು; ಕೃಷ್ಣಕಾಂತನೇ ಅವನ ತಂದೆಯಾಗಿದ್ದನು. ಕೃಷ್ಣಕಾಂತನ ಮೊದಲನೆಯ ಹೆಂಡತಿ ತಾರ ಅವನಿಗೆ ಅಕ್ಷರಾಭ್ಯಾಸ ಮಾಡಿಸಿ, ಓದುವುದನ್ನೂ, ಬರೆಯುವುದನ್ನೂ, ಕಲಿಸಿಕೊಟ್ಟಿದ್ದಳು. ನಾರಾಯಣನು ಅವಳಿಂದ ಕಲಿತ ವಿದ್ಯೆಯನ್ನು ತನ್ನ ಸ್ವಂತ ಶ್ರಮದಿಂದ ವೃದ್ಧಿಪಡಿಸಿಕೊಂಡು, ಪುಸ್ತಕಗಳನ್ನೂ ವೃತ್ತಪತ್ರಿಕೆಗಳನ್ನೂ ಚೆನ್ನಾಗಿ ಓದುವ ಶಕ್ತಿಯನ್ನು ಸಂಪಾದಿಸಿಕೊಂಡಿದ್ದನು. ನಾರಾಯಣನು ಬಾಣಸಿಗನಾದರೂ, ಸುಸಂಸ್ಕೃತನಾಗಿದ್ದನು. ಕೃಷ್ಣಕಾಂತನ ರೀತಿನೀತಿಗಳು ಅವನ ಮನಸ್ಸಿನ ಮೇಲೆ ವಿಶೇಷ ಪರಿಣಾಮವನ್ನುಂಟುಮಾಡಿದ್ದವು. ಅವನ ದೃಷ್ಟಿಯಲ್ಲಿ ಕೃಷ್ಣಕಾಂತನು ಒಬ್ಬ ಶ್ರೇಷ್ಠ ವ್ಯಕ್ತಿಯಾಗಿದ್ದನು; ಕಮಲ ಒಂದು ಅನಾಗರಿಕ ಪಶುವಾಗಿದ್ದಳು.

ಕಮಲೆಯ ದೃಷ್ಟಿಯಲ್ಲಿ ನಾರಾಯಣನು ದಿಕ್ಕಿಲ್ಲದ ನಾಯಿಯಾಗಿದ್ದನು; ಕೃಷ್ಣಕಾಂತನು ಕೆಲಸಕ್ಕೆ ಬಾರದ ಬೆಪ್ಪನಾಗಿದ್ದನು.

ಕೃಷ್ಣಕಾಂತನು ಸಿರಗೂರಿಗೆ ಹೊರಟುಹೋದ ದಿವಸ, ಸಂಜೆಯ ಹೊತ್ತು, ನಿರಂಜನನು ಕಮಲೆಯ ಮನೆಗೆ ಬಂದಿದ್ದನು. ಕಮಲ ನಾರಾಯಣನನ್ನು ಕರೆದು, ನಿರಂಜನನಿಗೆ ಒಂದು ಲೋಟ ಟೀ ತರಬೇಕೆಂದು ಆಜ್ಞಾಪಿಸಿದಳು. ನಾರಾಯಣನು ಟೀ ತಯಾರಿಸಲು ಅಡಿಗೆ ಮನೆಯ ಕಡೆಗೆ ಹೋದನು.

"ನಾನಾಗಿದ್ದರೆ ಇಂತಹ ಧಿಮಾಕಿನ ಬಡ್ಡೀಮಗನ್ನ ಒಂದು ಗಳಿಗೆಯೂ ಮನೇಲಿ ಇಟ್ಟು ಕೊಳ್ಳುತ್ತಿರಲಿಲ್ಲ. ನೀವು ಹ್ಯಾಗೆ ಇಟ್ಟುಕೊಂಡಿದ್ದೀರೋ ನನಗೆ ಗೊತ್ತಾಗ್ತಾ ಇಲ್ಲ" ಎಂದು ನಿರಂಜನನು ಕಮಲೆಗೆ ಹೇಳಿದನು.

"ಏನ್ ಮಾಡ್ಲಿ" ಅವರಿಗೆ ಇವನು ಅಚ್ಚುಮೆಚ್ಚು. ಅವರು ಸಿರಗೂರಿನಿಂದ ಬರೋದ್ರೊಳಗೆ ಏನಾರೂ ಮಾಡ್ಬೇಕು ಅಂತ ಮಾಡೀನಿ" ಎಂದು ಕಮಲ ಹೇಳಿ ಸುಮ್ಮನಾದಳು.

ಮರುದಿನ ಶನಿವಾರವಾಗಿತ್ತು. ಗಂಗಾಧರನೂ, ಊರ್ಮಿಳೆಯೂ ಬೆಳಿಗ್ಗೆ ಎಂಟು ಗಂಟೆಗೆ ಸ್ಕೂಲಿಗೆ ಹೋಗಬೇಕಾಗಿತ್ತು. ಅವರಿಗೆ ತಿಂಡಿಯನ್ನು ಸಿದ್ಧಪಡಿಸುವ ಸಲುವಾಗಿ ನಾರಾಯಣನನು ಬೆಳಿಗ್ಗೆ ಆರುಗಂಟೆಗೆ ಎದ್ದು, ಅಡುಗೆಯ ಮನೆಯ ಕಡೆಗೆ ಹೋದನು. ಅವನು ಹೋಗುವುದರೊಳಗಾಗಿ, ಕಮಲ ಅಡುಗೆಯ ಮನೆಯಲ್ಲಿ ತಿಂಡಿಯನ್ನು ಸಿದ್ಧಗೊಳಿಸುವ ಕಾರ್ಯದಲ್ಲಿ ತೊಡಗಿದ್ದಳು. ಅವಳು ಆ ದಿನ ಮುಂಚಿತವಾಗಿ ಎದ್ದಿರುವುದೇ ವಿಶೇಷ ಸಂಗತಿಯಾಗಿತ್ತು. ಹಾಗೂ ಅಡುಗೆಯ ಕೆಲಸದಲ್ಲಿ ತೊಡಗಿದ್ದುದು ಇನ್ನೂ ವಿಶೇಷ ಸಂಗತಿಯಾಗಿತ್ತು. ಅವಳು ಸಾಮಾನ್ಯವಾಗಿ ಏಳು ಗಂಟೆಗೆ ಮುಂಚಿತವಾಗಿ ಹಾಸಿಗೆ ಬಿಟ್ಟು ಏಳುತ್ತಲೇ ಇರಲಿಲ್ಲ. ಅವಳು ಮಲಗುತ್ತಿದ್ದ ಕೊಠಡಿಗೆ ನಾರಾಯಣನು ಪ್ರತಿದಿನವೂ ಬೆಡ್‌ಕಾಫಿಯನ್ನು ತೆಗೆದುಕೊಂಡು ಹೋಗಿ ಕೊಡಬೇಕಾಗಿತ್ತು. ಅವಳು ಅಡುಗೆಯ ಮನೆಯಲ್ಲಿದ್ದುದನ್ನು ನೋಡಿದ ನಾರಾಯಣನ ಮನಸ್ಸು ಆ ದಿನ ಯಾವುದೋ ಒಂದು ಘಟನೆ ನಡೆಯಬಹುದೆಂದು ಹೇಳುತ್ತಿತ್ತು. ಅವನು ಅಡುಗೆಯ ಮನೆಯೊಳಗೆ ಕಾಲಿಟ್ಟಿದ್ದೇ ತಡ, ಕಮಲ ರಾಕ್ಷಸಿಯಂತೆ ಕಿರಿಚುತ್ತಾ "ನೀ ಒಳಗೆ ಕಾಲಿಡಬಾರದು, ಇಷ್ಟು ವರ್ಷ ನಿನ್ನ ಸಂಗಡ ಜಗಳವಾಡಿದ್ದೇ ಸಾಕು" ಎಂದು ಹೇಳಿ, ನಾರಾಯಣನು ಒಳಕ್ಕೆ ಬಾರದಂತೆ ತಡೆದಳು.

ನಾರಾಯಣನು ಮರು ಮಾತಾಡದೆ, ಮನೆಯ ಹಿಂಭಾಗದ ಉಪಕಟ್ಟಡದಲ್ಲಿದ್ದ ತನ್ನ ಕೊಠಡಿಗೆ ಹೋಗಿ ಯೋಚಿಸುತ್ತಾ, ಕುಳಿತಿದ್ದನು. ಅವನಿಗೆ ಕಮಲೆಯ ಕಿರುಕುಳ ಸಾಕಾಗಿ ಹೋಗಿತ್ತು. ಅವನು ಕೆಲಸವನ್ನು ಬಿಟ್ಟು ಹೋಗಲು ಸಿದ್ಧನಾಗಿದ್ದನು. ಆದರೆ ಚಿಕ್ಕಂದಿನಿಂದ ತಂದೆಯೋಪಾದಿಯಲ್ಲಿ ತನ್ನನ್ನು ಕಾಪಾಡಿದ್ದ ಕೃಷ್ಣಕಾಂತನನ್ನು ಬಿಟ್ಟು ಹೋಗುವುದು ದುಃಖಕರವಾಗಿತ್ತು. ತಾನು ಮನೆ ಬಿಟ್ಟು ಹೋದರೆ ಕೃಷ್ಣಕಾಂತನ ಯೋಗಕ್ಷೇಮವನ್ನು ನೋಡಿಕೊಳ್ಳುವವರು ಯಾರೂ ಇಲ್ಲವೆಂಬ ಯೋಚನೆ ಅವನನ್ನು

ವಿಶೇಷವಾಗಿ ಬಾಧಿಸುತ್ತಿತ್ತು. ಹೀಗೆ ಯೋಚಿಸುತ್ತಾ ಕುಳಿತಿರುವಾಗ, "ನಾರಾಯಣಾ, ಬೇಗ ತಿಂಡಿ ಕೊಡು, ಸ್ಕೂಲಿಗೆ ಹೊತ್ತಾಯಿತು" ಎಂದು ಗಂಗಾಧರನು ಕೂಗಿದನು. ಅದನ್ನು ಕೇಳಿದ ಕಮಲ "ಅವನ್ನ ಕರೀಬೇಡ. ಬಾ, ತಿಂಡಿ ನಾನು ಕೊಡ್ತೀನಿ" ಎಂದಳು. ಗಂಗಾಧರನು ಸ್ಕೂಲಿಗೆ ಹೋಗುವ ತವಕದಲ್ಲಿದ್ದುದರಿಂದ ನಾರಾಯಣನನ್ನು ಕರೆಯಬಾರದೆಂದು ತಾಯಿ ಹೇಳಿದ ಮಾತಿಗೆ ಹೆಚ್ಚು ಗಮನ ಕೊಡದೆ ಅವಸರವಾಗಿ ತಿಂಡಿಯನ್ನು ತಿಂದು ಸ್ಕೂಲಿಗೆ ಹೋದನು.

ಕಮಲ ಮನೆ ಕೆಲಸದ ಹೆಣ್ಣಾಳಿಗೆ ಎಂದೂ ತಿಂಡಿ ಅಥವಾ ಟೀ ಕಾಫಿಗಳನ್ನು ಕೊಟ್ಟವಳಲ್ಲ. ಆ ದಿನ ಹೆಣ್ಣಾಳಿಗೂ ಕಾಫಿ ತಿಂಡಿಗಳನ್ನು ಕೊಟ್ಟು, ತಾನೂ ತಿಂಡಿಯನ್ನು ತಿಂದಳು. ಆ ನಂತರ ಹೆಣ್ಣಾಳಿನ ಸಹಾಯದಿಂದ ಮಧ್ಯಾಹ್ನದ ಊಟಕ್ಕೆ ಅಡಿಗೆಯನ್ನು ಮಾಡುತ್ತಿದ್ದಳು. ನಾರಾಯಣನಿಗೆ ತಿಂಡಿಯನ್ನು ಕೊಡುವುದಿರಲಿ, ಅವನನ್ನು ಮಾತನಾಡಿಸಲೂ ಇಲ್ಲ. ನಾರಾಯಣನು ಹತ್ತಿರಲ್ಲಿದ್ದ ಹೋಟೆಲಿಗೆ ಹೋಗಿ ತಿಂಡಿಯನ್ನು ಮುಗಿಸಿ, ತನ್ನ ಕೊಠಡಿಯಲ್ಲಿ ಯಾವುದೋ ಪುಸ್ತಕವನ್ನು ಓದುತ್ತಿದ್ದನು.

ಮಧ್ಯಾಹ್ನವಾಯಿತು. ಗಂಗಾಧರನೂ, ಊರ್ಮಿಳೆಯೂ ಸ್ಕೂಲಿನಿಂದ ಬಂದರು. ಗಂಗಾಧರನು ಎಂದಿನಂತೆ "ನಾರಾಯಣಾ, ಊಟಕ್ಕೆ ಬಡಿಸೋ ಹಸಿವಾಗ್ತಿದೆ" ಎಂದು ಕೂಗಿದನು. ನಾರಾಯಣನು ಏನು ಮಾಡಬೇಕೆಂಬುದು ಗೊತ್ತಾಗದೆ, ಸ್ವಲ್ಪಕಾಲ ಸುಮ್ಮನಿದ್ದು, ನಂತರ "ನೋಡೋಣ ಏನಾಗ್ತದೆ" ಎಂದು ಮನಸ್ಸಿನಲ್ಲೇ ಅಂದುಕೊಂಡು ಅಡುಗೆಯ ಮನೆಯೊಳಗೆ ಹೋಗಿ, ಮಕ್ಕಳಿಬ್ಬರಿಗೂ ಬಡಿಸುವ ಸಲುವಾಗಿ ತಟ್ಟೆಗಳನ್ನು ತೊಳೆಯುತ್ತಿದ್ದನು. ಅಷ್ಟರಲ್ಲಿ ಕಮಲ ಅವಳ ಕೊಠಡಿಯಿಂದ ಶೂರ್ಪನಖಿಯಂತೆ ರೌದ್ರಾವತಾರ ತಾಳಿ, ಅಡುಗೆಯ ಮನೆಗೆ ಬಂದು, "ನಿಂಗೆ ಬೆಳಿಗ್ಗೇನೆ ಹೇಳೀನಿ. ಅಡಿಗಿ ಮನೀಗೆ ಕಾಲಿಡಬೇಡ ಅಂತ. ಹೋಗ್ತಿಯೋ ಇಲ್ಲೋ? ಎಂದು ಆರ್ಭಟಿಸಿದಳು.

ಅಷ್ಟರಲ್ಲಿ ಗಂಗಾಧರನು ಅಲ್ಲಿಗೆ ಬಂದವನು "ಯಾಕಮ್ಮಾ ಅವನ್ನ ಗದರಿಸ್ತೀಯಾ? ಅವ ಏನ್ ಮಾಡ್ದ?" ಎಂದು ಕೇಳಿದನು, "ಅದೆಲ್ಲಾ ಪಾರ್‌ಪತ್ಯೆ ನಿಂಗ್ಯಾಕೆ? ಹಸಿವಾಗಿದ್ರೆ ಬಾ ಊಟ ಮಾಡು, ಬಡಿಸ್ತೀನಿ" ಎಂದು ದರ್ಪದಿಂದ ಕಮಲ ನುಡಿದಳು.

ನಾರಾಯಣನು ಗಂಗಾಧರನ ಕಡೆಗೆ ವಾತ್ಸಲ್ಯ ಪೂರ್ವಕವಾಗಿ ನೋಡುತ್ತಾ, ಅಡುಗೆಯ ಮನೆಯಿಂದ ಹೊರಟು ಚಿಂತಾಕ್ರಾಂತನಾಗಿ ತನ್ನ ಕೊಠಡಿಯನ್ನು ಸೇರಿದನು. ಮುಂದೇನು ಮಾಡಬೇಕೆಂಬುದು ಒಂದು ಸಂದಿಗ್ಧದ ಪರಿಸ್ಥಿತಿಯಾಗಿತ್ತು. ಕೃಷ್ಣಕಾಂತನಿಗೆ ಹೇಳದೆ ಹೋಗುವುದು ಸರಿಯೆನಿಸಲಿಲ್ಲ. ಆದರೆ ಅಲ್ಲಿರುವುದು ಸಾಧ್ಯವಿರಲಿಲ್ಲ. ಆಗಲೇ ಮಧ್ಯಾಹ್ನದ ಊಟದ ಹೊತ್ತಾಗಿತ್ತು. ಕಮಲ ಊಟವನ್ನು ನೀಡುತ್ತಾಳೆಂಬ ಭರವಸೆಯಿರಲಿಲ್ಲ. ಆದರೂ ಮುಂದೇನು ಮಾಡುತ್ತಾಳೆಂಬುದನ್ನು ಕಾದು ನೋಡಬೇಕೆಂದು ತನ್ನ ಕೊಠಡಿಯಲ್ಲಿ ಕುಳಿತೇಬಿಟ್ಟನು.

ಗಂಗಾಧರನು ಹೈಸ್ಕೂಲಿನ ಮೊದಲನೆಯ ತರಗತಿಯಲ್ಲಿ ಓದುತ್ತಿದ್ದನು. ಆದ್ದರಿಂದ ಸ್ವಲ್ಪಮಟ್ಟಿಗೆ ವಿವೇಚನಾಶಕ್ತಿ ಅವನಲ್ಲಿ ಬೆಳೆದಿತ್ತು. ತನ್ನ ತಾಯಿ ತಂದೆಯರ ವರ್ತನೆಯನ್ನು

ಸೂಕ್ಷ್ಮವಾಗಿ ಅವಲೋಕಿಸುತ್ತಾ ಬಂದಿದ್ದನು. ತನ್ನ ತಾಯಿ, ತನ್ನ ತಂದೆಯ ವಿಚಾರದಲ್ಲಿ ಅನುಸರಿಸುತ್ತಿದ್ದ ವರ್ತನೆಯನ್ನು ಅವನೊಪ್ಪುತ್ತಿರಲಿಲ್ಲ. ತಂದೆ ಒಳ್ಳೆಯವನೆಂದೂ, ತಾಯಿ ಜಗಳಗಂಟಿಯೆಂದೂ ಅವನ ಅಭಿಪ್ರಾಯವಾಗಿತ್ತು. ಆದರೆ ತಾಯಿಯ ವರ್ತನೆಯನ್ನು ಖಂಡಿಸುವ ಧೈರ್ಯವಿರಲಿಲ್ಲ. ಆದ್ದರಿಂದ ಸುಮ್ಮನಿರುತ್ತಿದ್ದನು. ನಾರಾಯಣನು ಒಳ್ಳೆಯವನೆಂಬುದು ಗಂಗಾಧರನ ಅಭಿಪ್ರಾಯವಾಗಿತ್ತು. ಅನಾವಶ್ಯಕವಾಗಿ ತನ್ನ ತಾಯಿ ನಾರಾಯಣನಿಗೆ ಹಿಂಸೆ ಕೊಡುತ್ತಿದ್ದಾಳೆಂಬುದುನ್ನು ಎಂದೋ ಮನಗಂಡಿದ್ದನು. ಆದರೆ ಆ ಹಿಂಸೆಯನ್ನು ನಿಲ್ಲಿಸಲು ಅವನು ಅಸಮರ್ಥನಾಗಿದ್ದನು. ಸಿಟ್ಟು ಬಂದಾಗ, ಕಮಲ ಗಂಗಾಧರನನ್ನು ಎಷ್ಟೋ ಸಾರಿ ನಿಷ್ಕಾರಣವಾಗಿ ಹೊಡದಿದ್ದುದನ್ನು ಅವನು ಮರೆತಿರಲಿಲ್ಲ. ಊರ್ಮಿಳೆ ಮಾತ್ರ ಹಾಗಲ್ಲ. ಕೃಷ್ಣಕಾಂತನು ಕೆಟ್ಟವನೆಂಬ ಭಾವನೆ ಊರ್ಮಿಳೆಯ ಮನಸ್ಸಿನಲ್ಲಿ ಬಲವಾಗಿ ಬೇರೂರುವಂತೆ ಕಮಲ ಮಾಡಿದ್ದಳು. ಊರ್ಮಿಳೆ ತಂದೆಯಿಂದ ಸದಾ ದೂರವಿರುತ್ತಿದ್ದಳು. ನಾರಾಯಣನನ್ನು ಕಂಡರೆ ಊರ್ಮಿಳೆಗೆ ತಿರಸ್ಕಾರ ಭಾವನೆಯಿತ್ತು.

ಗಂಗಾಧರನು ಊಟವಾದ ಕೂಡಲೆ ನಾರಾಯಣನ ಕೊಠಡಿಗೆ ಓಡಿದನು. ಗಂಗಾಧರನನ್ನು ನೋಡಿದೊಡನೆ, ಅವನನ್ನು ತಬ್ಬಿಕೊಂಡು, ನಾರಾಯಣನು ಅಳಲಾರಂಭಿಸಿದನು. ಗಂಗಾಧರನೂ ಅತ್ತನು. ಗಂಗಾಧರನಿಗೆ ನಾರಾಯಣನ ಮೇಲೆ ಅಪರಿಮಿತ ವಿಶ್ವಾಸ; ನಾರಾಯಣನಿಗೆ ಗಂಗಾಧರನ ಮೇಲೆ ಅಪರಿಮಿತ ವಾತ್ಸಲ್ಯ. ಗಂಗಾಧರನು ಚಿಕ್ಕ ಮಗುವಾಗಿದ್ದಾಗ ನಾರಾಯಣನು ಅವನನ್ನು ಎತ್ತಿ ಆಡಿಸಿದವನು. ಅವನಿಗೆ ಸ್ಕೂಲಿಗೆ ಹೋಗುವ ವಯಸ್ಸು ಬಂದಾಗ ನಾರಾಯಣನು ಅವನನ್ನು ಸ್ಕೂಲಿಗೆ ಕರೆದುಕೊಂಡು ಹೋಗಿ ನಂತರ ವಾಪಸು ಕರೆದುಕೊಂಡು ಬರುತ್ತಿದ್ದನು. ಎಷ್ಟೋ ಸಾರಿ ತನ್ನ ಕೈಯಿಂದ ದುಡ್ಡು ಕೊಟ್ಟು, ಬಿಸ್ಕತ್ತು, ಚಾಕ್ಲೇಟ್‌ಗಳನ್ನು ಕೊಡಿಸಿದ್ದನು. ತನ್ನ ಹೆಗಲ ಮೇಲೆ ಕುಳ್ಳಿರಿಸಿಕೊಂಡು ಕೇಕೆ ಹಾಕುತ್ತಾ ಓಡಿ ಅವನನ್ನು ನಲಿಸಿದ್ದನು.

ಗೋಲಿಗಳನ್ನು ಕೊಂಡುಕೊಂಡು ಬಂದು ಗೋಲಿಯಾಡುವ ವಿಧಾನವನ್ನು ಹೇಳಿಕೊಟ್ಟಿದ್ದನು. ಗಾಳಿಪಟವನ್ನು ಮಾಡಿ ಅದನ್ನು ಹಾರಿಸುವ ವಿಧಾನವನ್ನು ಹೇಳಿಕೊಟ್ಟಿದ್ದನು. ಸ್ಕೂಲಿನಿಂದ ಬರುವಾಗ ಬುಗುರಿ, ಬೆಲೂನ್ ಮುಂತಾದ ಆಟದ ಸಾಮಾನುಗಳನ್ನು ಕೊಡಿಸುತ್ತಿದ್ದನು. ಸ್ವಲ್ಪ ದೊಡ್ಡವನಾದ ಮೇಲೆ ಅವನನ್ನು ತನ್ನ ಕೊಠಡಿಯಲ್ಲಿ ಕುಳ್ಳಿರಿಸಿಕೊಂಡು ಸ್ವಾರಸ್ಯವಾದ ಕಥೆಗಳನ್ನು ಹೇಳುತ್ತಿದ್ದನು. ಈ ಎಲ್ಲಾ ಕಾರಣಗಳಿಂದ ಅವರಿಬ್ಬರ ನಡುವೆ ಪರಸ್ಪರ ಆತ್ಮೀಯತೆ ಬೆಳೆದಿತ್ತು.

"ಊಟ ಮಾಡ್ದ್ಯಾ ನಾರಾಯಣಾ" ಎಂದು ಗಂಗಾಧರ ಪ್ರಶ್ನಿಸಿದನು.

"ಇಲ್ಲಪ್ಪಾ, ಊಟ ಎಲ್ಲಿ ಬಂತು" ನಿಮ್ಮಮ್ಮ ಅಡುಗೆಮನೀಗೆ ನನ್ನ ಸೇರಿಸೋದೇಯಿಲ್ಲ. ನೀನೆ ನೋಡ್ದೆಯಲ್ಲ ಈಗ?"

"ನಾ ಊಟ ತಂದು ಕೊಡ್ಲಾ."

"ಎಲ್ಲಿಂದು ತಂದು ಕೊಡ್ತೀಯಪ್ಪಾ?"

"ಅಡುಗೆ ಮನೆಯಿಂದ."

"ಬ್ಯಾಡಪ್ಪಾ, ನಿನ್ನಮ್ಮ ಸುಮ್ನೆ ಬಿಡ್ತಾರಾ? ನಿನ್ನ ಚಮಡ ಸುಲ್ದುಬಿಟ್ತಾರು."

"ಬೆಳಿಗ್ಗೆ ತಿಂಡಿ ಕೊಟ್ರಾ?"

"ಇಲ್ಲಪ್ಪಾ."

"ಮತ್ತೇ"

"ಹೋಟ್ಲೀಗೆ ಹೋಗಿ ತಿಂಡಿ ತಿಂದು ಬಂದೆ."

"ಈಗ ಹೋಟ್ಲೀಗೆ ಹೋಗಿ ಊಟ ಮಾಡಿ ಬಾ. ಆಮ್ಯಾಲೆ ಅಮ್ಮನ ಸಿಟ್ಟು ಇಳೀಬಹುದು. ನನ್ನ ಹತ್ತಿರ ಅಪ್ಪ ಮೊನ್ನೆ ಕೊಟ್ಟ ದುಡ್ಡು ಇದೆ. ತಗೋ ಎರಡು ರೂಪಾಯಿ.

ಗಂಗಾಧರನ ಔದಾರ್ಯಕ್ಕೆ ಮೆಚ್ಚಿದ ನಾರಾಯಣನು, "ಬ್ಯಾಡಪಾ ಗಂಗಾಧರಾ, ನನ್ನ ಹತ್ರ ದುಡ್ಡು ಅದೆ" ಎಂದು ಹೇಳಿ ಗಂಗಾಧರನ ಮುಂಗುರುಳನ್ನು ತನ್ನ ಕೈಯಿಂದ ಸವರಿದನು.

ಗಂಗಾಧರನು ನಾರಾಯಣನೊಡನೆ ಸಲಿಗೆಯಿಂದಿರುವುದನ್ನು ಕಮಲ ಎಂದೂ ಸಹಿಸುತ್ತಿರಲಿಲ್ಲ. "ಆಳುಗಳ ಜೊತೆ ನಿಂಗೆ ಎಂಥಾ ಸಲಿಗೆ? ಅವನ ಜೊತೆ ಸೇರಬೇಡ? ಎಂದು ಹಿಂದೆ ಹಲವು ಬಾರಿ ಗಂಗಾಧರನಿಗೆ ಗದರಿಸಿದ್ದಳು. ಆದರೆ ಗಂಗಾಧರನು ಅವಳಿಗೆ ಗೊತ್ತಾಗದಂತೆ ನಾರಾಯಣನ ಕೊಠಡಿಗೆ ಹೋಗುತ್ತಿದ್ದನು. ಅಂದು ಊಟವಾದ ತಕ್ಷಣ ಗಂಗಾಧರನು ನಾರಾಯಣನ ಕೊಠಡಿಯ ಕಡೆಗೆ ಓಡುತ್ತಿದ್ದುದನ್ನು ಕಮಲ ನೋಡಿದ್ದಳು. ಅವನು ತಕ್ಷಣ ವಾಪಸು ಬಾರದಿದ್ದುದರಿಂದ ಕೋಪಗೊಂಡು, ಅವಳು ನಾರಾಯಣನ ಕೊಠಡಿಯ ಬಳಿಗೆ ಹೋಗಿ, ಹೊರಗಡೆ ಕದ್ದು ನಿಂತು, ಅವರಿಬ್ಬರೂ ಮಾತನಾಡುತ್ತಿದ್ದುದನ್ನು ಕೇಳುತ್ತಿದ್ದಳು. ತನ್ನ ಮಗನು ತನಗಾಗದ ಕೀಳುಮಟ್ಟದ ಒಬ್ಬ ಆಳಿನ ಜೊತೆಯಲ್ಲಿ ನಡೆಸುತ್ತಿದ್ದ ಸಂಭಾಷಣೆಯನ್ನು ಕೇಳಿ ಕಮಲ ಕಿಡಿಕಿಡಿಯಾದಳು. ಅವಳ ತಾಳ್ಮೆ ಮೀರಿ ಹೋಗಿತ್ತು. ಕೊಠಡಿಯೊಳಗೆ ನುಗ್ಗಿ ಗಂಗಾಧರನ ಕಿವಿಯನ್ನು ಹಿಡಿದು, ಕಪಾಲಕ್ಕೆ ಒಂದೇಟನ್ನು ಕೊಟ್ಟು "ಈ ಹಲ್ಕಾ ಸೂಳೇಮಗನ ಜೊತೇಗೆ ಸೇರಬ್ಯಾಡ ಅಂತ ಎಷ್ಟು ಸಾರಿ ನಿಂಗೆ ಹೇಳ್ಬೇಕು? ಇವ ಏನ್ ನಿನ್ನ ಅಣ್ಣನೋ, ತಮ್ಮನೋ? ಹೋಗು" ಎಂದು ಗಂಗಾಧರನನ್ನು ಹೊರಗೆ ತಳ್ಳಿದಳು.

"ನೀ ಹೊರಟುಹೋಗು. ನಿಂಗೆ ನಮ್ಮಲ್ಲಿ ಕೆಲಸ ಇಲ್ಲ. ನಿಂಗೇನಾದರೂ ಸಂಬಳ ಬಾಕಿ ಸಲ್ಲೂದಿದ್ದರೆ ನಿಮ್ಮ ಸಾಹೇಬರು ಸಿರಗೂರಿನಿಂದ ಬಂದಮ್ಯಾಲೆ ಬಂದು ಲೆಕ್ಕಮಾಡಿಸಿ ತಕ್ಕೊಂಡು ಹೋಗು. ಚಾಡಿ ಮಲ್ಲ. ಚಾಡಿ ಚುಚ್ಚಿ ಚುಚ್ಚಿ ಸಾಹೇಬರ ಮನಸ್ಸು ಕೆಡಿಸಾತು. ಈಗ ಮಗನಿಗೆ ದುರ್ಬೋಧನೆ ಮಾಡೋಕೆ ಸುರು ಮಾಡೀಯಾ ಇಂದೇ ಹೋಗಬೇಕು" ಎಂದು ನಾರಾಯಣನನ್ನು ಕುರಿತು ಘರ್ಜಿಸಿದಳು.

ಅವಳ ಮಾತನ್ನು ಕೇಳಿ ನಾರಾಯಣನಿಗೆ ಬಹಳ ದುಃಖವಾಗಿತ್ತು. ಅವಳ ಒಂದೊಂದು ಮಾತುಗಳೂ ಅವನ ಹೃದಯವನ್ನು ಚುಚ್ಚುತ್ತಿದ್ದವು. ಮನೆಯನ್ನು ಬಿಟ್ಟು ಎಲ್ಲಿಗೆ ಹೋಗಬೇಕೆಂದು ಅವನಿಗೆ ತೋಚಲಿಲ್ಲ. ಹಿಂದೆ ಅವನು ಮನಸ್ಸು ಮಾಡಿದ್ದರೆ ಶ್ರೀಪುರದಲ್ಲಿ ಯಾವುದಾದರೂ ಆಫೀಸಿನಲ್ಲಿ ಅಥವಾ ಕಾರ್ಖಾನೆಯಲ್ಲಿ ಕೆಲಸಕ್ಕೆ ಸೇರಬಹುದಾಗಿತ್ತು. ಆದರೆ ಕೃಷ್ಣಕಾಂತನ ಸೇವೆಯನ್ನು ಬಿಡಲಾರದೆ ಅಡುಗೆಯ ಕೆಲಸಕ್ಕೆ ಅಂಟಿಕೊಂಡಿದ್ದನು. ಹೃದಯ ರೋಗವಿದ್ದವರು ಬಹಳ ಕಾಲ ಬದುಕುವುದಿಲ್ಲವೆಂಬುದನ್ನು ನಾರಾಯಣನು ಕೇಳಿದ್ದನು. ಕೃಷ್ಣಕಾಂತನು ಬಹಳ ಕಾಲ ಬದುಕುವುದಿಲ್ಲವೆಂದು ಅವನ ಭಾವನೆಯಾಗಿತ್ತು. ಅವನು ಸಾಯುವವರೆಗೆ ಅವನ ಸೇವೆಯನ್ನು ಮಾಡಬೇಕೆಂದು ನಾರಾಯಣನು ಯೋಚಿಸಿದ್ದನು. ಕಮಲ "ಈಗಲೇ ಹೊರಡು" ಎಂದು ಕಟ್ಟಪ್ಪಣೆ ಮಾಡಿ ಅಲ್ಲೇ ನಿಂತಿದ್ದಳು. ಕೃಷ್ಣಕಾಂತನಿಗೂ, ತನಗೂ ಒದಗಿದ್ದ ದುಃಸ್ಥಿತಿಯನ್ನು ನೆನೆದು ದುಃಖ ಪೀಡಿತನಾಗಿ ಬಳ ಬಳನೇ ಅಳತೊಡಗಿದನು.

ಅವನು ಅಳುತ್ತಿರುವುದನ್ನು ನೋಡುತ್ತಿದ್ದ ಕಮಲೆ "ಯಾಕೆ ಅಳ್ತೀಯಾ? ಯಾರಾದ್ರೂ ಸತ್ತರೇನೊ? ನೀ ಅತ್ತರೆ ನಾ ಏನ್ ಜಗ್ಗೂದಿಲ್ಲ" ಎಂದು ಹೇಳಿದಳು.

"ತಾಯೀ, ನಾ ಯಾರಿಗೂ ದ್ರೋಹ ಮಾಡಿಲ್ಲ. ನಂಗೇನು ನಿಮ್ಮನೇಲಿ ಉಂಬ್ಳಿ ಕೊಟ್ಟಿಲ್ಲ. ನಮ್ಮ ಸಾಹೇಬರಿಗಾಗಿ ನಿಮ್ಮ ಹತ್ರ ಹೊಡ್ಸ್ಕೊಂಡು, ಬೈಸ್ಕೊಂಡು ಕಾಲ ಕಳ್ದೆ. ನಾ ಯಾರಿಗಾದ್ರೂ ವಂಚನೆ ಮಾಡಿದ್ದರೆ ದೇವರು ನಂಗೆ ಶಿಕ್ಷೆ ಕೊಡ್ತಾನೆ. ನಮ್ಮ ಸಾಹೇಬರು ದೇವರಂತಹ ಮನುಷ್ಯರು. ಅವರಿಗೆ ನೀವು ವಂಚನೆ ಮಾಡಿದ್ರೆ ದೇವರು ನಿಮಗೆ ಶಿಕ್ಷೆ ಕೊಡ್ತಾನೆ. ನಾ ಹೊಗ್ತೀನಿ" ಎಂದು ಹೇಳಿ ನಾರಾಯಣನು ಟ್ರಂಕಿಗೆ ತನ್ನ ಬಟ್ಟೆಬರೆಗಳನ್ನೆಲ್ಲಾ ತುರುಕಿ, ಟ್ರಂಕನ್ನು ತೆಗೆದುಕೊಂಡು ಹೊರಟೇಬಿಟ್ಟನು. ಅಳುತ್ತಾ ರಸ್ತೆಯವರೆಗೆ ಹೋದವನು, ಗಂಗಾಧರನನ್ನು ಜ್ಞಾಪಿಸಿಕೊಂಡು ಅವನನ್ನು ಕೂಗಿದನು. ಗಂಗಾಧರನು ಬಂದೊಡನೆ ಅವನ ಕೆನ್ನೆಯನ್ನು ನೇವರಿಸಿ ಗಂಗಾಧರ, "ದೇವ್ರು ನಿನ್ನ ಸುಖವಾಗಿ ಇಡ್ಲಪ್ಪಾ ನಾ ಹೋಗ್ತೀನಿ. ಸಾಹೇಬರು ಬಂದಮ್ಯಾಲೆ ಹೇಳು" ಎಂದು ಮುಂದು ಸಾಗಿದನು. ಗಂಗಾಧರನು ಅಳುತ್ತಾ "ಎಲ್ಲೀಗೆ ಹೋಗ್ತೀಯೋ ನಾರಾಯಣಾ?" ಎಂದು ಪ್ರಶ್ನಿಸಿದನು.

"ನಮ್ಮೂರಿಗೆ ಹೋಗ್ತೀನಪ್ಪಾ"

"ಮತ್ತೆ ನಮ್ಮನೀಗೆ ಬರೂದಿಲ್ಲೇನೋ?"

"ಇನ್ನೆಲ್ಲಿ ಬರೂದು? ನಿಮ್ಮಮ್ಮ ನಾ ಬ್ಯಾಡ ಅಂತ ಹೇಳ್ದ ಮ್ಯಾಲೆ ನಾ ಹ್ಯಾಗೆ ಬರಲಿ? ಸಾಹೇಬರು ಊರಿಗೆ ಬಂದಮ್ಯಾಲೆ ಸುಮ್ನೆನೋಡ್ಕೊಂಡು ಹೋಗೂಕೆ ಬರ್ತೀನಿ."

ನಾರಾಯಣನು ಅಳುತ್ತಾ ಹೋಗುತ್ತಿರುವಾಗ, ಗಂಗಾಧರನ ಕರುಳು ಕಿತ್ತು ಬರುವಂತಾಗಿತ್ತು. ಅಳುತ್ತಾ ರಸ್ತೆಯಲ್ಲಿ ನಿಂತಿದ್ದನು. ಇದನ್ನು ನೋಡುತ್ತಿದ್ದ ಕಮಲ "ನೀನೂ ಅವನ ಜೊತೆಗೇ ಹೋಗು. ನಿಂಗೇನಾರೂ ಬೇಕೋ ಒಳಗೆ ಬರ್ತೀಯೊ"

ಎಂದು ಗದರಿಸಿದಳು. ಗಂಗಾಧರನು ಸದ್ದಿಲ್ಲದೆ ಕಣ್ಣೀರನ್ನು ಒರೆಸಿಕೊಂಡು ಒಳಗೆ ಹೋದನು. "ನೀನು ಮಾಡಿದ್ದು ತಪ್ಪು" ಎಂದು ತಾಯಿಗೆ ಹೇಳಬೇಕೆಂದು ಎರಡು ಮೂರು ಸಾರಿ ಮನಸ್ಸು ಮಾಡಿದ್ದನು. ಆದರೆ ಗುದ್ದು ಬೀಳುತ್ತದೆಯೆಂಬುದನ್ನು ತಿಳಿದು ಸುಮ್ಮನಾದನು.

೧೩

ಸಿರಗೂರಿಗೆ ಹೋದ ಮೇಲೆ, ಕೃಷ್ಣಕಾಂತನು ಸಂಸಾರದ ಜಂಜಾಟವನ್ನೂ, ವಕೀಲಿ ಕೆಲಸದ ಅವಿಶ್ರಾಂತಿ ಒದ್ದಾಟವನ್ನೂ, ತಾತ್ಕಾಲಿಕವಾಗಿ ಮರೆತು ನೆಮ್ಮದಿಯಿಂದಿದ್ದನು. ಗೋಪಾಲನು ಸಿರಗೂರಿನ ಹೆಸರಾದ ವೈದ್ಯರೊಬ್ಬರನ್ನು ಮಾವನ ಚಿಕಿತ್ಸೆಗೆ ನೇಮಿಸಿದ್ದನು. ಚಿಕಿತ್ಸೆಗಿಂತಲೂ ಗೋಪಾಲನ ಮನೆಯ ವಾತಾವರಣ ಹಿತಕರವಾಗಿತ್ತು. ಮಗಳ ಮಮತೆಯ ಶುಶ್ರೂಷೆ, ಬೀಗಿತ್ತಿಯ ವಿನಯಪೂರ್ವಕ ಉಪಚಾರ, ಅಳಿಯನ ಆದರದ ವರ್ತನೆ, ಮೊಮ್ಮಗನ ತೊದಲ ಮುದ್ದು ನುಡಿ, ಇವೇ ಮುಂತಾದುವುಗಳು ಕೃಷ್ಣಕಾಂತನಿಗೆ ನವಚೈತನ್ಯವನ್ನು ನೀಡಿದ್ದವು. ಗೋಪಾಲನ ಮನೆಯಲ್ಲಿ ಅವನಿಗೆ ಯಾವ ಕೊರತೆಯೂ ಇರಲಿಲ್ಲ. ಸಿರಗೂರಿಗೆ ಬಂದ ಹದಿನೈದು ದಿನಗಳೊಳಗಾಗಿ ಅವನು ಆಯಾಸವಿಲ್ಲದೆ ಮೂರು ಮೈಲಿಗಳ ದೂರ ನಡೆಯುವಂತಾಗಿದ್ದನು.

ತಂದೆಯ ಆಗಮನದಿಂದ ಚಂಚಲೆ ಆನಂದಭರಿತಳಾಗಿದ್ದಳು. ಅನಿಲಕುಮಾರನು ಹುಟ್ಟುವ ಮೊದಲು ಅನಾಮಿಕ ಕಾಗದದ ದೆಸೆಯಿಂದ, ಗೋಪಾಲನು ಅವಳ ವಿಚಾರದಲ್ಲಿ ಅಸಡ್ಡೆಯಿಂದ ವರ್ತಿಸುತ್ತಿದ್ದುದು ನಿಜ. ಆದರೆ ಕ್ರಮೇಣ ಅವನ ವರ್ತನೆ ಅವಳ ವಿಚಾರದಲ್ಲಿ ಬದಲಾವಣೆ ಹೊಂದುತ್ತಾ ಬಂದಿತ್ತು. ಆ ರೀತಿಯಾಗಲು ಚಂಚಲೆ ಒಂದು ಪಾಲು ಕಾರಣವಾಗಿದ್ದರೆ, ಅನಿಲಕುಮಾರನು ಎರಡು ಪಾಲು ಕಾರಣವಾಗಿದ್ದನು. ಗಂಡನು ತಾತ್ಸಾರ ಭಾವನೆಯಿಂದ ತನ್ನನ್ನು ಕಾಣುತ್ತಿದ್ದರೂ, ಬುದ್ಧಿವಂತಳಾಗಿದ್ದ ಅವಳು ಮುಯ್ಯಿಗೆ ಮುಯ್ಯಿ ತೀರಿಸಿಕೊಳ್ಳುವ ಗೋಜಿಗೆ ಹೋಗದೆ, ಗಂಡನಿಗೆ ಎಲ್ಲಾ ವಿಚಾರಗಳಲ್ಲೂ ಅನುವರ್ತಳಾಗಿ ಅವನ ಅನುರಾಗವನ್ನು ಸಂಪಾದಿಸಲು ಸದಾ ಶ್ರಮಿಸುತ್ತಿದ್ದಳು. ಶಂಕರನನ್ನು ಮದುವೆಯಾಗಬೇಕೆಂಬ ಸದುದ್ದೇಶದಿಂದ, ಯೌವ್ವನ ಭರದಲ್ಲಿ ಪೂರ್ವಾಪರ ವಿವೇಚನೆಯಿಲ್ಲದೆ ಅವನೊಡನೆ ಅಕ್ರಮ ಸಂಭೋಗ ನಡೆಸಿದ್ದಕ್ಕಾಗಿ ಪಶ್ಚಾತ್ತಾಪ ಪಡುತ್ತಿದ್ದಳು. ಅವಳ ವರ್ತನೆಯನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಿದ್ದ ಗೋಪಾಲನಿಗೆ ಕ್ರಮೇಣ ತನ್ನ ಹೆಂಡತಿ ಕೆಟ್ಟವಳಲ್ಲವೆಂಬ ಭಾವನೆಯುಂಟಾಗಿತ್ತು.

ಅನಿಲಕುಮಾರನ ಮೇಲೆ ಅವರೀರ್ವರಿಗೂ ಇದ್ದ ಅಪರಿಮಿತ ಪ್ರೇಮ, ಅವರೀರ್ವರ ಪರಸ್ಪರ ಪ್ರೇಮವನ್ನು ವೃದ್ಧಿಪಡಿಸಲು ಸಹಾಯಕವಾಗಿತ್ತು. ಮಕ್ಕಳ ಮೇಲಿನ ವ್ಯಾಮೋಹದ ಅಂಟು ಸಂಸಾರದ ನಂಟು ಒಡೆಯದಂತೆ ಮಾಡುತ್ತದೆ. ಈ ಕಾರಣದಿಂದ ಈಚೆಗೆ ಚಂಚಲೆಯ ಸಂಸಾರ ಸುಖಮಯವಾಗಿತ್ತು. ತಂದೆ ತನ್ನ

ಜೊತೆಯಲ್ಲಿಯೇ ಸಿರಗೂರಿನಲ್ಲಿದ್ದರೆ ಚೆನ್ನಾಗಿರುತ್ತಿತ್ತೆಂದು ಚಂಚಲೆ ಹಲವು ಬಾರಿ ಯೋಚಿಸಿದ್ದಳು. ಒಂದು ದಿನ ರಾತ್ರಿ ಊಟವಾದ ಬಳಿಕ, ತಂದೆಯ ಹಾಸಿಗೆಯನ್ನು ಸರಿಪಡಿಸುತ್ತಿದ್ದಾಗ, ಚಂಚಲೆ ತಂದೆಯನ್ನು ಕುರಿತು "ಅಪ್ಪಾಜೀ, ನಿಮಗೆ ಸಾಕಷ್ಟು ವಯಸ್ಸಾಗಿದೆ. ನೀವಿನ್ನು ಹಿಂದಿನಂತೆ ಶ್ರಮಪಟ್ಟು ಕೆಲಸ ಮಾಡಲು ಸಾಧ್ಯವಿಲ್ಲ. ಜೊತೆಗೆ ಆರೋಗ್ಯವೂ ಸರಿಯಿಲ್ಲ. ನೀವ್ಯಾಕೆ ನಮ್ಮ ಜೊತೆ ಇದ್ದು ಬಿಡಬಾರದು?" ಎಂದು ಕೇಳಿದಳು.

"ಅಳಿಯನ ಮನೆ ಕೂಳು ತಿಂದು ಬಾಳುವ ಮೂಳ ನಾನಲ್ಲ ಮಗಳೇ" ಎಂದು ಕೃಷ್ಣಕಾಂತನು ಮಗಳಿಗೆ ಹೇಳಿದನು.

"ಅಳಿಯನ ಮನೆಯಲ್ಲಿ ಬ್ಯಾಡ ಅಪ್ಪಾಜೀ, ಮಗಳ ಮನೆಯಲ್ಲಿರಿ. ನೂರಾರು ಜನ ತಿಂದುಂಡು ಹೋಗುವ ನಮ್ಮ ಮನೆಯಲ್ಲಿ ನೀವೊಬ್ಬರಿದ್ದರೆ ನಮಗೊಂದು ಹೊರೆಯೆ? ನೀವು ಆ ರೀತಿ ಭಾವಿಸಬಾರದು."

"ನನ್ನ ಉದ್ಯೋಗವನ್ನು ಬಿಟ್ಟರೆ ನಿನ್ನ ತಮ್ಮ, ತಂಗಿ ಇವರ ಗತಿ ಏನಮ್ಮಾ? ಅವರಿಗಾಗಿ ನಾನು ವಕೀಲಿವೃತ್ತಿಗೆ ಅಂಟಿಕೊಂಡಿದ್ದೇನೆ."

"ನೀವು ಪುನಃ ಊರಿಗೆ ಹೋಗಿ ಕೆಲಸ ಆರಂಭಿಸಿದರೆ ಪುನಃ ಹಾರ್ಟ್ ಅಟ್ಯಾಕ್ ಆದರೆ ಗತಿ ಏನು ಅಪ್ಪಾಜೀ?"

"ನನಗೆ ಒಂದು ಸಮಾಧಾನ ಚಂಚಲಾ"

"ಅದೇನು ಅಪ್ಪಾಜೀ."

"ಹಾರ್ಟ್ ಟ್ರಬಲ್ ಇದ್ದವರು ಬಹಳ ಕಾಲದವರೆಗೆ ನರಳದೆ, ಯಾರ ಆಶ್ರಯಕ್ಕೂ ಒಳಗಾಗದೆ ಸಾಯುವ ಸಂಭವ ಹೆಚ್ಚು. ರೋಗಗ್ರಸ್ತನಾಗಿ ನರಳಿ ಸಾಯುವುದಕ್ಕಿಂತ, ಮುಪ್ಪಾಗಿ ಸೊರಗಿ ಸಾಯುವುದಕ್ಕಿಂತ, ಸೋಮಾರಿಯಾಗಿ ವ್ಯರ್ಥವಾಗಿ ಬಾಳುವುದಕ್ಕಿಂತ, ಪರಾಶ್ರಯದಲ್ಲಿ ಬದುಕಿರುವುದಕ್ಕಿಂತ ಕರ್ತವ್ಯಶೀಲನಾಗಿ ದುಡಿಯುತ್ತಾ ಸಾಯುವುದು ಲೇಸು."

"ಸಾಯುವವರೆಗಾದರೂ ಸುಖವಾಗಿರಬೇಕಲ್ಲಾ. ವಿಶ್ರಾಂತಿ ಇಲ್ಲದಿದ್ದರೆ ಹೇಗೆ?"

"ದೇಹಕ್ಕೆ ವಿಶ್ರಾಂತಿ ದೊರೆತ ಮಾತ್ರಕ್ಕೆ ಮನಸ್ಸಿಗೆ ವಿಶ್ರಾಂತಿ ದೊರೆಯುತ್ತದೆಯೆಂದು ನಿನಗ್ಯಾರು ಹೇಳಿದರು ಚಂಚಲಾ? ಹಾಳು ಮನಸ್ಸು ಏನಾದರೂ ಚಿಂತಿಸುತ್ತಲೇ ಇರುತ್ತದೆ; ಏನಾದರೂ ಬಯಸುತ್ತಲೇ ಇರುತ್ತದೆ. ಮನಸ್ಸಿನ ದುಗುಡ ದುಮ್ಮಾನಗಳಿಗೆ ದುಡಿಮೆಯೇ ಮದ್ದು. ಕರ್ಮ ನಿರತನಾಗಿ ಸತ್ತರೆ, ಸತ್ತವರಿಗೂ ತೊಂದರೆಯಿಲ್ಲ; ಇದುವರಿಗೂ ತೊಂದರೆಯಿಲ್ಲ."

"ಅಪ್ಪಾಜೀ, ನಾನು ನಿಮ್ಮ ಜೊತೆಯಲ್ಲಿ ಇಲ್ಲದಿದ್ದಾಗ ನಿಮಗೆ ಏನಾದರೂ ಆದರೆ ಗತಿಯೇನು?"

"ಚಂಚಲಾ, ಎಂದಾದರೊಂದು ದಿನ ಒಬ್ಬರನ್ನೊಬ್ಬರು ಅಗಲಬೇಕು. ಮಗೂ ಆ ಪ್ರಸಂಗಕ್ಕೆ ನಾವು ಸದಾ ಸಿದ್ಧರಿರಬೇಕು. ನನಗೆ ಬಹುಕಾಲ ಬದುಕಬೇಕೆಂಬ

ಹಂಬಲವಿಲ್ಲ. ಎಷ್ಟು ಕಾಲ ಬದುಕಿದ್ದರೂ ಇದೇ ರೀತಿಯ ಜೀವನದ ಹೋರಾಟ, ಮನೆಯಲ್ಲಿ ನಿನ್ನ ಚಿಕ್ಕಮ್ಮನ ಕೂಗಾಟ; ಕೋರ್ಟುಗಳಲ್ಲಿ ಜಡ್ಜಿಗಳ ಆರ್ಭಟ; ಹಣಕ್ಕಾಗಿ ಪರದಾಟ; ಜೀವನಕ್ಕಾಗಿ ಒದ್ದಾಟ. ಇನ್ನೆಷ್ಟು ಕಾಲ ಬಾಳಿದರೂ ಇಷ್ಟೇ ತಾನೇ?"

"ನೀವೇನು ಹೇಳುವುದು ಅಪ್ಪಾಜೀ, ಜಗತ್ತಿನಲ್ಲಿ ಎಲ್ಲರೂ ಜೀವನಕ್ಕಾಗಿ ಹೋರಾಟ ಮಾಡುತ್ತಾರೆ. ಎಲ್ಲರ ಮನೆಯ ದೋಸೆಯೂ ತೂತೇ. ಎಲ್ಲಾ ಸಂಸಾರಗಳಲ್ಲಿಯೂ ಒಂದಲ್ಲ ಒಂದು ರೀತಿಯ ವಿರಸವಿದ್ದದ್ದೇ. ನೂರಕ್ಕೆ ಹತ್ತು ಆದರ್ಶ ಸಂಸಾರಗಳಿದ್ದರೆ ಹೆಚ್ಚು. ನಿಮ್ಮದೇನು ಸ್ಪೆಷಲ್ ಕೇಸಲ್ಲ. ಚಿಕ್ಕಮ್ಮನ ಸ್ವಭಾವವೇ ಹೀಗೆ. ಅವರ ಸ್ವಭಾವವನ್ನು ನೀವು ಇನ್ನು ಬದಲಾಯಿಸಲಾರಿರಿ. ನಿಮಗೋಸ್ಕರ ಅಲ್ಲದಿದ್ದರೂ ನನಗೋಸ್ಕರ ನೀವು ಬದುಕಿರಬೇಕು. ಜೀವನದಲ್ಲಿ ಜಿಗುಪ್ಸೆಗೊಂಡರೆ ಹೇಗೆ?"

"ಸಾಯಬೇಕೆಂಬ ಸಂಕಲ್ಪದಿಂದ ನಾನು ಹಾಗೆ ಹೇಳಲಿಲ್ಲ. ನೀನು ಹೇಳಿದ್ದಕ್ಕೆ ನಾನು ಹಾಗೆ ಹೇಳಿದೆ."

"ಅದಿರಲಿ ಅಪ್ಪಾಜೀ, ವಕೀಲೀ ವೃತ್ತಿ ಶ್ರೇಷ್ಠವಾದ ಸ್ವತಂತ್ರ ವೃತ್ತಿಯೆಂದು ಹೇಳುತ್ತಾರೆ. ನ್ಯಾಯಾಲಯ ದೇವಾಲಯಕ್ಕೆ ಸಮಾನ ಅಂತ ಹೇಳ್ತಾರೆ. ವಕೀಲರು ಯಾರಿಗೂ ಅಡಿಯಾಳಲ್ಲ ಅಂತ ಹೇಳ್ತಾರೆ. ನೀವು ಈಗ ತಾನೆ ಕೋರ್ಟಿನಲ್ಲಿ ಜಡ್ಜರ ಆರ್ಭಟ ಅಂತ ಹೇಳಿದಿರಿ. ಅದೆಂತಹ ಆರ್ಭಟ?

"ನೀನು ಹೇಳಿದ್ದೂ ಸರಿ; ನಾನು ಹೇಳಿದ್ದೂ ಸರಿ. ಕೆಲವು ಜಡ್ಜರು ನ್ಯಾಯದ ಅಧಿದೇವತೆಗಳಂತೆ ವರ್ತಿಸುತ್ತಾರೆ. ಆದರೆ ಕೆಲವರು ಅಲ್ಪರಿಗೆ ಐಶ್ವರ್ಯ ಬಂದರೆ ಅರ್ಧ ರಾತ್ರಿಯಲ್ಲಿ ಕೊಡೆ ಹಿಡಿದಂತೆ ದುರಹಂಕಾರದಿಂದ ಆರ್ಭಟಿಸುತ್ತಾರೆ. ಕೆಲವರು ಸಚ್ಚರಿತ್ರರು; ಕೆಲವರು ಗಬ್ಬು ಇತಿಹಾಸದವರು. ಸರ್ಕಾರದ ಇತರೆ ಇಲಾಖೆಗಳಿಗಿಂತ ಸದ್ಯ ನ್ಯಾಯಾಲಯಗಳು ಎಷ್ಟೋ ಮೇಲು. ಆದರೆ ಈಚೆಗೆ ಲಂಚ ಶಿಫಾರಸುಗಳು ಕೆಲವು ಕಡೆ ನ್ಯಾಯಾಲಯಗಳಿಗೂ ಕಾಲಿಟ್ಟಿವೆ."

ಚಂಚಲೆಯೂ ಕೃಷ್ಣಕಾಂತನೂ ಈ ರೀತಿ ಮಾತುಕತೆ ನಡೆಸುತ್ತಿರುವಾಗ, ಅನಿಲ ಕುಮಾರನು ಅಲ್ಲಿಗೆ ಬಂದು "ತಾತಾ, ತಾತ ಉಂದು ಕತೆ ಹೇಳು ತಾತ" ಎಂದು ಕೃಷ್ಣಕಾಂತನ ಕೈ ಹಿಡಿದುಕೊಂಡನು.

"ಗಂಟೆ ಹತ್ತಾಯಿತು. ನೀ ನಿದ್ದೆ ಮಾಡೋದು ಬಿಟ್ಟು ಕತೆ ಹೇಳು ಅಂತೀಯಲ್ಲಾ ಅನಿಲ್"

"ತಾತಾ, ನಿನ್ನೆ ಗುಬ್ಬಚ್ಚಿ ಕಾಗೆ ಕತೆ ಹೇಳ್ದಿಯಲ್ಲ ಅದು ಹೇಳು ತಾತಾ" ಎಂದು ಅನಿಲಕುಮಾರ ಹೇಳುತ್ತಿರುವಾಗ ಗೋಪಾಲನು ಅಲ್ಲಿಗೆ ಬಂದು, "ಅನಿಲ್ ನಿದ್ದೆ ಮಾಡಾನ ಬಾ" ಎಂದು ಕರೆದನು. ಆಗ ಅನಿಲಕುಮಾರನು "ತಾತಾ ಕತೆ ಹೇಳ್ತಾರೆ" ಎಂದು ಹೇಳಿದನು. "ನಿಮ್ಮಪ್ಪ ಕತೆ ಹೇಳ್ತಾರೆ ಹೋಗು" ಎಂದು ಕೃಷ್ಣಕಾಂತನು ಮೊಮ್ಮಗನನ್ನು ಪುಸಲಾಯಿಸಿ ತಂದೆಯ ಜೊತೆಗೆ ಕಳುಹಿಸಿಕೊಟ್ಟನು.

ಕೃಷ್ಣಕಾಂತನು ಸಿರಗೂರಿಗೆ ಬಂದು ಇಪ್ಪತ್ತು ದಿನಗಳಾಗಿದ್ದವು. ಅವನ ಇಡೀ ಜೀವಮಾನದಲ್ಲಿ ಇಷ್ಟೊಂದು ದೀರ್ಘಕಾಲ ವಿಶ್ರಾಂತಿಯನ್ನು ಯಾವಾಗಲೂ ಪಡೆದಿರಲಿಲ್ಲ. ತಾರ ಸತ್ತ ಬಳಿಕ ಯಾವಾಗಲೂ ಇಷ್ಟೊಂದು ಮಾನಸಿಕ ಶಾಂತಿ ಲಭಿಸಿರಲಿಲ್ಲ. ತಾನೊಂದು ಹೊಸ ಜಗತ್ತಿನಲ್ಲಿರುವಂತೆ ಅವನಿಗೆ ಭಾಸವಾಗುತ್ತಿತ್ತು. ಕಮಲೆಯ ಕಿರುಕುಳವಿರಲಿಲ್ಲ. ಕಕ್ಷಿಗಾರರ ಕಾಟವಿರಲಿಲ್ಲ. ಕೋರ್ಟು ವ್ಯವಹಾರಗಳ ಗಡಿ ಬಿಡಿ ಇರಲಿಲ್ಲ. ಕೆಲಸಕಾರ್ಯಗಳ ಒತ್ತಡವಿಲ್ಲದೆ, ಯಾರ ಆತಂಕವೂ ಇಲ್ಲದೆ, ವಿರಾಮವಾಗಿ ಅವನಿಚ್ಛೆಯಂತೆ ಅವನ ದಿನಚರಿ ಸಾಗುತ್ತಿತ್ತು. ಗೋಪಾಲನ ಮನೆ ಸಿರಗೂರು ಪಟ್ಟಣದಲ್ಲಿದ್ದರೂ, ಸುತ್ತಮುತ್ತಲಿನ ಪ್ರದೇಶದಲ್ಲಿ ಹಳ್ಳಿಯ ವಾತಾವರಣವಿತ್ತು. ಸಾಯಂಕಾಲ ಸ್ವರೂಪರಾಣಿ, ಚಂಚಲೆ ಮತ್ತು ಅನಿಲಕುಮಾರ ಇವರುಗಳ ಜೊತೆಯಲ್ಲಿ ತೋಟಕ್ಕೆ ಹೋಗಿ ಬರುತ್ತಿದ್ದನು. ಒಮ್ಮೊಮ್ಮೆ ಅವರುಗಳ ಜೊತೆಯುಲ್ಲಿ ಸಿನಿಮಾಕ್ಕೆ ಹೋಗಿಬರುತ್ತಿದ್ದನು. ಒಮ್ಮೊಮ್ಮೆ ಬೆಳಗಿನ ಹೊತ್ತು ಚಂಚಲ ಸಾಕಿದ್ದ ಎಲ್ಸಾ ಮತ್ತು ರೂಬಿ ಎಂಬ ಎರಡು ಆಲ್ಸೇಷನ್ ನಾಯಿಗಳ ಸಮೇತ ಹೊಲದ ಬಯಲಿನಲ್ಲಿ ಓಡಾಡಿ ಬರುತ್ತಿದ್ದನು.

ಒಂದು ತಿಂಗಳ ವಿಶ್ರಾಂತಿಯ ಅವಧಿ ಮುಗಿದ ಮೇಲೆ ಕೃಷ್ಣಕಾಂತನು ಊರಿಗೆ ಹೋಗುವ ವಿಚಾರವನ್ನು ಮಗಳೊಡನೆ ಪ್ರಸ್ತಾಪಿಸಿದನು. ಚಂಚಲೆ ಇನ್ನೂ ಹದಿನೈದು ದಿನಗಳ ಕಾಲ ಸಿರಗೂರಲ್ಲೇ ಇರಬೇಕೆಂದು ತಂದೆಯನ್ನು ಒತ್ತಾಯಪಡಿಸಿದಳು. ಆದರೆ ಕೃಷ್ಣಕಾಂತನು ಮಗಳ ಮಾತನ್ನು ಒಪ್ಪುವಂತಿರಲಿಲ್ಲ. ಆಗಲೇ ಶಾಮಸುಂದರನು ಕೋರ್ಟುಗಳಲ್ಲಿ ಕೇಸುಗಳಿಗೆ ಅಡ್‌ಜರ್ನ್‌ಮೆಂಟ್ ಸಿಕ್ಕುವುದು ಕಷ್ಟವೆಂದೂ, ಆರೋಗ್ಯ ಸುಧಾರಿಸಿದ್ದರೆ ಶ್ರೀಪುರಕ್ಕೆ ಬಂದರೆ ವಾಸಿ ಎಂದೂ, ಎರಡು ಕಾಗದಗಳನ್ನು ಬರೆದಿದ್ದನು. ವಕೀಲನಾದವನು ಬಹಳ ಕಾಲ ಊರನ್ನು ಬಿಟ್ಟು ಪರ ಊರಿಗೆ ಹೋದರೆ, ಕಕ್ಷಿಗಾರರು ಅಂತಹ ವಕೀಲನನ್ನು ನಂಬುವುದಿಲ್ಲವೆಂದೂ, ಆದ್ದರಿಂದ ಉದ್ಯೋಗದ ದೃಷ್ಟಿಯಿಂದ ಜಾಗ್ರತೆ ಊರಿಗೆ ಹೋಗುವುದು ಅನಿವಾರ್ಯವೆಂದೂ, ಮಗಳಿಗೆ ಮನದಟ್ಟು ಮಾಡಿದ ಮೇಲೆ, ಅವಳು ನಿರ್ವಾಹವಿಲ್ಲದೆ ಒಪ್ಪಿಕೊಂಡಳು.

ಒಂದು ತಿಂಗಳಕಾಲ ಮಗಳ ಮನೆಯಲ್ಲಿ ಸುಖವಾಗಿ ಕಾಲ ಕಳೆದ ಕೃಷ್ಣಕಾಂತನಿಗೆ ಮಗಳನ್ನೂ, ಮೊಮ್ಮಗನನ್ನೂ ಬಿಟ್ಟುಹೋಗುವುದು ಸುಲಭವಾಗಿರಲಿಲ್ಲ. ಮುಂದೆ ಅವರನ್ನು ನೋಡುತ್ತೇನೋ ಇಲ್ಲವೋ ಎಂಬ ಸಂಶಯವೂ ಅವನಿಗುಂಟಾಗಿತ್ತು. ಚಂಚಲೆಗೆ ತಂದೆಯನ್ನು ಕಳುಹಿಸಿಕೊಡುವುದು ದುಃಖಕರವಾಗಿತ್ತು. ಊರಿಗೆ ಹೋದ ನಂತರ ಹೃದಯ ಕ್ರಿಯೆ ನಿಂತು ಸತ್ತರೆ, ತಕ್ಷಣ ಸಾಯುವ ಸಮಯದಲ್ಲಿ ತಾನಿರುವುದಿಲ್ಲವೆಂಬ ಕೊರಗು ಅವಳನ್ನು ಬಾಧಿಸುತ್ತಿತ್ತು. ಆದರೆ ಇಬ್ಬರೂ ತನ್ನ ಮನಸ್ಸಿನ ವ್ಯಾಕುಲವನ್ನು ತೋರ್ಪಡಿಸದೆ ಧೈರ್ಯವನ್ನು ಪ್ರದರ್ಶಿಸುತ್ತಿದ್ದರು. ಶ್ರೀಪುರಕ್ಕೆ ಹೊರಡುವ ಹಿಂದಿನ ರಾತ್ರಿ ಕೃಷ್ಣಕಾಂತನು ಮಗಳೊಡನೆ ಬಹಳ ಹೊತ್ತು ಮಾತನಾಡಿದನು.

"ಚಂಚಲಾ, ನನ್ನ ಆರೋಗ್ಯ ಬಹಳ ಸುಧಾರಿಸಿದೆ. ಐದಾರು ವರ್ಷಗಳಿಂದೀಚೆಗೆ ನಾನು ಯಾವಾಗಲೂ ಇಷ್ಟೊಂದು ಆರೋಗ್ಯವಂತನಾಗಿರಲಿಲ್ಲ. ಇನ್ನೂ ಕೆಲವು ವರ್ಷಗಳ ಕಾಲ ನಾನು ಬದುಕಿರುತ್ತೇನೆಂಬ ಭರವಸೆಯಿದೆ. ಆದರೆ ಸಾವು ಹೇಳಿಕೇಳಿ ಬರುವುದಿಲ್ಲ. ಅಕಸ್ಮಾತ್ ನಾನೇನಾದರೂ ಸತ್ತರೆ ಗಂಗಾಧನರ ಮತ್ತು ಊರ್ಮಿಳೆಯ ಪೋಷಣೆ ಮತ್ತೆ ವಿದ್ಯಾಬುದ್ಧಿಗಳ ಹೊಣೆ ನಿನ್ನದು. ಕಮಲಾ ಕೆಟ್ಟವಳು ನಿಜ. ಆದರೆ ಅವರಿಬ್ಬರೂ ನಿನ್ನ ಒಡ ಹುಟ್ಟಿದವರೆಂಬುದನ್ನು ಮರೆಯಬೇಡ" ಎಂದು ಮಗಳಿಗೆ ಹೇಳಿದನು.

"ಅಪ್ಪಾಜೀ, ಕೆಟ್ಟದ್ದನ್ನು ಯಾಕೆ ಯೋಚಿಸಬೇಕು? ಅಂತಹ ಕಾಲ ಬರಬಾರದೆಂದು ಸದಾ ನಾನು ಪ್ರಾರ್ಥಿಸುತ್ತೇನೆ. ಮಕ್ಕಳ ವಿಚಾರದಲ್ಲಿ ನಿಮಗ್ಯಾವ ಚಿಂತೆಯೂ ಬೇಡ. ನಮಗೇನೂ ದೇವರು ಕಡಿಮೆ ಮಾಡಿಲ್ಲ. ನೀವು ನಿಶ್ಚಿಂತೆಯಿಂದಿರಿ" ಎಂದು ಚಂಚಲೆ ತಂದೆಗೆ ಸಮಾಧಾನ ಮಾಡಿದಳು.

ಮರುದಿನ ಬೆಳಿಗ್ಗೆ, ಕೃಷ್ಣಕಾಂತನು ಊರಿಗೆ ಹೊರಡುವಾಗ ಬೀಳ್ಕೊಡುವ ಪ್ರಸಂಗ ಎಲ್ಲರ ಮನಸ್ಸಿಗೂ ಯಾತನೆಯನ್ನುಂಟುಮಾಡಿತ್ತು. ಚಂಚಲೆ ತಂದೆಯ ಕಾಲಿಗೆ ಬಿದ್ದು ನಮಸ್ಕರಿಸಿದಳು. ಕೃಷ್ಣಕಾಂತನು ಮಗಳನ್ನು ವಾತ್ಸಲ್ಯ ಪೂರ್ವಕವಾಗಿ ಆಶೀರ್ವದಿಸಿ ಆಲಿಂಗಿಸಿದನು. ಒಂದು ಕಡೆ ಚಂಚಲೆ ಕಣ್ಣೀರಿಡುತ್ತಿದ್ದಳು. ಇನ್ನೊಂದು ಕಡೆ ಅನಿಲಕುಮಾರು "ತಾತಾ ಹೋಗಬ್ಯಾಡ, ಇಲ್ಲೇ ಇರು" ಎಂದು ತಾತನ ಕೈ ಹಿಡಿದುಕೊಂಡನು. ಕೃಷ್ಣಕಾಂತನ ಕಣ್ಣುಗಳಲ್ಲಿ ಹನಿ ತುಂಬಿ ಬಂದಿತ್ತು. ಇದನ್ನು ನೋಡುತ್ತಿದ್ದ ಸ್ವರೂಪರಾಣಿ, "ಎರಡನೇ ಹೆಂಡ್ತಿ ಮದುವೆಯಾದವರು ಮೊದಲ್ನೇ ಹೆಂಡತಿ ಮಗಳನ್ನು ಇಷ್ಟು ಪ್ರೀತಿಯಿಂದ ನೋಡೋದು ಬಹಳ ಅಪರೂಪ" ಎಂದು ಕೃಷ್ಣಕಾಂತನ ಕಡೆಗೆ ನೋಡುತ್ತಾ ನುಡಿದಳು. ಕೃಷ್ಣಕಾಂತನು, "ನಮ್ಮ ಮನೆಯವಳಿಗೆ ಅದೇ ದೊಡ್ಡ ಅಪರಾಧ. ನನ್ನ ಕಷ್ಟ ನಿಮಗೆಲ್ಲಾ ಗೊತ್ತಿದ್ದದ್ದೇ. ಏನಾದ್ರೇನು? ನನ್ನ ಪ್ರಾರಬ್ಧ" ಎಂದು ನಿಟ್ಟುಸಿರುಬಿಟ್ಟನು. ಮಗಳನ್ನೂ, ಮೊಮ್ಮಗನನ್ನೂ ಸಮಾಧಾನ ಪಡಿಸುವುದೇ ಕೃಷ್ಣಕಾಂತನಿಗೆ ಒಂದು ಸಮಸ್ಯೆಯಾಗಿತ್ತು. ಗೋಪಾಲನು ಚಂಚಲೆಗೆ ಅಳಬಾರದೆಂದು ಗದರಿಸಿ, ಅನಿಲಕುಮಾರನಿಗೆ ರೈಲು ತೋರಿಸುವುದಾಗಿ ಆಸೆ ತೋರಿಸಿ, ಎಲ್ಲರನ್ನೂ ಕಾರಿನಲ್ಲಿ ರೈಲ್ವೆ ಸ್ಟೇಷನ್ನಿಗೆ ಕರೆದೊಯ್ದನು. ಕಾರಿನಲ್ಲಿ ಹೋಗುತ್ತಿರುವಾಗ ಕೃಷ್ಣಕಾಂತನು ಅಳಿಯನನ್ನು ಕುರಿತು "ಗೋಪಾಲ್, ನಿಮ್ಮಿಂದ ನನಗೊಂದು ಉಪಕಾರವಾಗಬೇಕಾಗಿದೆ."

"ಅದೇನು ಹೇಳಿ."

"ನೀವು ನನ್ನ ಮಾತನ್ನು ನಡೆಸಿಕೊಡುವುದಾದರೆ ಹೇಳ್ತೀನಿ. ಇಲ್ಲವಾದರೆ ಹೇಳುವುದಿಲ್ಲ."

"ನಡೆಸಿಕೊಡಲು ಸಾಧ್ಯವಾಗುವ ಎಲ್ಲಾ ಕೆಲಸವನ್ನು ಶಿರಸಾವಹಿಸಿ ನಡೆಸಿಕೊಡುತ್ತೇನೆ."

"ಹಾಗಾದರೆ ನಿಮ್ಮ ಬೆಂಗಾವಲಿಗೆ ನಾಳೆಯಿಂದಲೇ ಇಬ್ಬರು ಘೂರ್ಖಾ ಸಿಪಾಯಿಗಳನ್ನು ಗೊತ್ತು ಮಾಡಿಕೊಳ್ಳಬೇಕು."

"ನಿಮಗೆಲ್ಲಾ ಶಂಕರ ಸಿಂಹಸ್ವಪ್ನವಾಗಿದ್ದಾನೆ."

"ನೀವು ಈ ಊರಲ್ಲಿ ದೂರದಲ್ಲಿದ್ದೀರಿ. ಆತನ ಉಪಟಳದ ಬಿಸಿ ನಿಮಗೆ ತಟ್ಟಿಲ್ಲ. ನಮ್ಮ ಜಿಲ್ಲೆಯಲ್ಲಿ ಬಹಳ ಜನರಿಗೆ ತಟ್ಟಿದೆ. ನಿಮ್ಮ ಸ್ನೇಹಿತ ಚಂದ್ರಹಾಸನಿಗೆ ಆ ದುಷ್ಟ ಏನು ಮಾಡಿದ್ದಾನೆಂಬುದು ನಿಮಗೆ ಗೊತ್ತಿಲ್ಲವೋ?

"ಚಂದ್ರಹಾಸನಿಗೂ ಶಂಕರನಿಗೂ ಬದ್ಧದ್ವೇಷ. ನನ್ಮೇಲೆ ಅವನಿಗೆ ಏನಿದೆ? ಕಾಯಾ ವಾಚಾ ಅಹಿಂಸಾ ವ್ರತವನ್ನೇ ಆಚರಿಸುವವರಿಗೆ ಭಗವಂತನ ರಕ್ಷಾಕವಚವಿರುತ್ತದೆ."

"ಗಾಂಧಿ ಕಾಯಾ ವಾಚಾ ಅಹಿಂಸಾವಾದಿಯಾಗಿರಲಿಲ್ಲವೇನು? ನೀವು ಗಾಂಧಿಗಿಂತ ಹೆಚ್ಚಿನ ದೈವಭಕ್ತರೇನು? ದೇವರಂತಹ ಮನುಷ್ಯನನ್ನು ಗೋಡ್ಸೆ ಕೊಲ್ಲಲಿಲ್ಲವೇನು?"

"ಆಗಲಿ, ನಿಮಗೆ ಮಾತು ಕೊಟ್ಟಿದ್ದೇನೆ. ನಾಳೆಯಿಂದ ಇಬ್ಬರು ಸಿಪಾಯಿಗಳನ್ನು ನೇಮಕ ಮಾಡಿಕೊಳ್ಳುತ್ತೇನೆ."

ಅವನ ಮಾತುಗಳನ್ನು ಕೇಳಿ ಚಂಚಲೆಯೂ, ಸ್ವರೂಪರಾಣಿಯೂ ಆನಂದಭರಿತರಾದರು. ಸ್ವರೂಪರಾಣಿ, ಕೃಷ್ಣಕಾಂತನಿಗೆ ಧನ್ಯವಾದಗಳನ್ನು ಅರ್ಪಿಸಿದಳು. "ಅಪ್ಪಾಜೀ, ನಿಮಗೆ ತುಂಬಾ ಥ್ಯಾಂಕ್ಸ್. ನಾವು ಹೇಳಿದ್ರೆ ಇವರು ಕಿವಿಗೇ ಹಾಕಿಕೊಳ್ಳುತ್ತಿರಲಿಲ್ಲ" ಎಂದು ಚಂಚಲೆ ಹೇಳಿದಳು. ಅಷ್ಟರಲ್ಲಿ ಕಾರು ರೈಲ್ವೇಸ್ಟೇಷನ್ ತಲುಪಿತು. ಅನಿಲಕುಮಾರನು ಆಗತಾನೆ ನಿಲ್ದಾಣಕ್ಕೆ ಬರುತ್ತಿದ್ದ ಶ್ರೀಪುರ ಎಕ್ಸ್‌ಪ್ರೆಸ್ ರೈಲನ್ನು ನೋಡಿ ಅದರ ಕಡೆಗೆ ಕೈ ತೋರಿಸಿ, "ಅಜ್ಜಿ, ತಾತಾ ರೇಲು ಬಂತು" ಎಂದು ಕೇಕೇ ಹಾಕಿದನು. ನಿಲ್ದಾಣಕ್ಕೆ ಹೋದಾಗ, ಶ್ರೀಪುರ ಎಕ್ಸ್‌ಪ್ರೆಸ್ ಸಜ್ಜಾಗಿ ನಿಂತಿತ್ತು. ಕೃಷ್ಣಕಾಂತನು ಅನಿಲಕುಮಾರನನ್ನು ಎತ್ತಿಕೊಂಡು, ಅವನ ಕೆನ್ನೆಗೆ ಮುತ್ತುಕೊಟ್ಟು, ಚಂಚಲೆಗೆ ಧೈರ್ಯ ಹೇಳಿ, ಗೋಪಾಲ ಮತ್ತು ಸ್ವರೂಪರಾಣಿಯರಿಗೆ ಧನ್ಯವಾದಗಳನ್ನರ್ಪಿಸಿ ರೈಲನ್ನು ಹತ್ತಿದನು.

ರೈಲು ಚಲಿಸಲಾರಂಭಿಸಿದೊಡನೆ, ಚಂಚಲೆ ಒಂದು ಲಕೋಟೆಯನ್ನು ತಂದೆಯ ಕೈಗೆ ಕೊಟ್ಟು "ಅಪ್ಪಾಜೀ ಈಗ ಒಡೀಬೇಡಿ, ಏನೋ ಗುಟ್ಟು, ಆಮೇಲೆ ಒಡೆಯಿರಿ. ನಿಮ್ಮ ಆರೋಗ್ಯ ಎಚ್ಚರಿಕೆ. ನಾಳೇನೇ ಕಾಗ್ದ ಬರೆಯಬೇಕು" ಎಂದಳು. ರೈಲು ಹೊರಟೇ ಬಿಟ್ಟಿತು. ರೈಲು ಹೊರಟುಹೋದ ನಂತರ ಅನಿಲಕುಮಾರನು "ರೇಲು ತಾತನ್ನ ಹೊತ್ತುಕೊಂಡು ಹೋತು" ಎಂದು ಕೂಗಿದನು. ಅದನ್ನು ಕೇಳಿ ಅಲ್ಲಿದ್ದವರೆಲ್ಲರೂ ನಕ್ಕರು.

ರೈಲು ಸ್ವಲ್ಪದೂರ ಹೋದಮೇಲೆ ಕೃಷ್ಣಕಾಂತನು ಕುತೂಹಲದಿಂದ ಮಗಳು ಕೊಟ್ಟಿದ್ದ ಲಕೋಟೆಯನ್ನು ಒಡೆದನು. ಲಕೋಟೆಯ ಒಳಗೆ ಎರಡು ಸಾವಿರ ರೂಪಾಯಿಗಳ ನೋಟುಗಳೂ, ಒಂದು ಕಾಗದವೂ ಇತ್ತು. ಕಾಗದದ ಒಕ್ಕಣೆ ಈ ರೀತಿ ಇತ್ತು.

"ಪೂಜ್ಯ ಅಪ್ಪಾಜಿಯವರಿಗೆ,

ನಿಮ್ಮ ಖರ್ಚಿಗೋಸ್ಕರ ಎರಡು ಸಾವಿರ ರೂಪಾಯಿಗಳನ್ನು ಇದರ ಲಗ್ತು ಇಟ್ಟಿದ್ದೇನೆ. ಹಣವನ್ನು ನಿಮ್ಮ ಕೈಗೆ ನೇರವಾಗಿ ಕೊಟ್ಟಿದ್ದರೆ, ನೀವು ಖಂಡಿತಾ ತೆಗೆದುಕೊಳ್ಳುತ್ತಿರಲಿಲ್ಲವೆಂದು ನನಗೆ ಗೊತ್ತಿತ್ತು. ಆದ್ದರಿಂದ ರೈಲು ಹೊರಡುವ ಹೊತ್ತಿಗೆ ಸರಿಯಾಗಿ ಕಾದು ನಿಮ್ಮ ಕೈ ಸೇರುವಂತೆ ಮಾಡಿದ್ದೇನೆ. ನಿಮ್ಮ ಪ್ರೀತಿಯ ಮಗಳು ಪ್ರೀತಿ ಪೂರ್ವಕವಾಗಿ ಕೊಟ್ಟ ಕಾಣಿಕೆ ಎಂದು ಭಾವಿಸಿ ಈ ಹಣವನ್ನು ಸ್ವೀಕರಿಸಿ. ನಿಮ್ಮ ಆರೋಗ್ಯ ಸಂಪೂರ್ಣ ಸುಧಾರಿಸುವವರೆಗೆ ನಿಮಗೆ ಹಣದ ತಾಪತ್ರಯವಿರಬಾರದೆಂಬ ದೃಷ್ಟಿಯಿಂದ ನಾವು ಮೂವರೂ ಸೇರಿ ಮಾತಾಡಿ ಇದನ್ನು ನಿಮಗೆ ಕೊಟ್ಟಿದ್ದೇವೆ. ನನಗೆ ಹಗಲಿರುಳೂ ನಿಮ್ಮ ಚಿಂತೆಯೇ ಆಗಿದೆ.

ಇತಿ, ನಿಮ್ಮ ಪ್ರೀತಿಯ ಮಗಳು,

ಚಂಚಲಾ"

ಕಾಗದವನ್ನು ಓದಿ ತನ್ನ ಮಗಳ ಬುದ್ಧಿವಂತಿಕೆಯನ್ನೂ, ಅವಳ ಗಂಡನ ಮತ್ತು ಅತ್ತೆಯ ಔದಾರ್ಯವನ್ನೂ ಕೃಷ್ಣಕಾಂತನು ಮೆಚ್ಚಿದನು. "ಎಷ್ಟು ಹತ್ತಿರದ ಬಂಧುಗಳಾದರೂ ಹಂಗು ಹಂಗೇ. ಆದರೆ ಈಗೇನು ಮಾಡುವುದಕ್ಕೆ ಸಾಧ್ಯ" ಎಂದು ಮನಸ್ಸಿನಲ್ಲಿಯೇ ಅಂದುಕೊಂಡು, ಲಕೋಟೆಯನ್ನು ಜೇಬಿನಲ್ಲಿಟ್ಟುಕೊಂಡನು.

ಕೃಷ್ಣಕಾಂತನು ಮಗಳ ಮನೆಯಿಂದ ತನ್ನ ಮನೆಗೆ ಹೋದಾಗ, ನಂದನವನದಿಂದ ಮರುಭೂಮಿಗೆ ಕಾಲಿಟ್ಟಂತಾಗಿತ್ತು. ಕಮಲ ಹೊರಗಡೆ ಬಂದು, ಔಪಚಾರಿಕವಾಗಿ "ಈಗ ಹೇಗಿದ್ದೀರಿ?" ಎಂದು ಕೇಳಿದಳು. ಅವಳ ಮಾತಿನಲ್ಲಿ ಮಮತೆಯೂ ಇರಲಿಲ್ಲ; ಮಾಧುರ್ಯವೂ ಇರಲಿಲ್ಲ. "ಚೆನ್ನಾಗಿದ್ದೀನಿ" ಎಂದು ಕೃಷ್ಣಕಾಂತನು ಹೇಳಿದನು. ತಂದೆಯ ಆಗಮನದಿಂದ ಗಂಗಾಧರನು ಆನಂದಭರಿತನಾಗಿದ್ದನು. ತಂದೆಯ ಹತ್ತಿರ ಓಡಿ ಹೋಗಿ ಹಸನ್ಮುಖವಾಗಿ "ಅಪ್ಪಾ, ನಿನ್ನ ಖಾಯಿಲೆ ಪೂರ್ತಿಯಾಗಿ ವಾಸಿ ಆಯ್ತಾ?" ಎಂದು ಪ್ರೇಮಪೂರ್ವಕವಾಗಿ ತಂದೆಯನ್ನು ಪ್ರಶ್ನಿಸಿದನು. ಕೃಷ್ಣಕಾಂತನು ಅವನ ಕೆನ್ನೆಯನ್ನು ಸವರುತ್ತ "ವಾಸಿಯಾಗಿದೆ ಮಗೂ. ತಗೋ ನಿನ್ನ ಅಕ್ಕ ನಿಂಗೆ, ಊರ್ಮಿಳೆಗೆ ತಿಂಡಿ ಕಳ್ಸಿದ್ದಾಳೆ" ಎಂದು ತಾನು ತಂದಿದ್ದ ಕಾಗದದ ಪೆಟ್ಟಿಗೆಯನ್ನು ಅವನ ಕೈಗೆ ಕೊಟ್ಟನು. ಕೃಷ್ಣಕಾಂತನು ಊರ್ಮಿಳೆಯನ್ನು ತನ್ನ ಬಳಿಗೆ ಕರೆದನು. ಅವಳು ಬರಲಿಲ್ಲ. ಗಂಗಾಧರನು ತಂದೆಯ ಸಾಮಾನುಗಳನ್ನು ಅವನ ಕೊಠಡಿಗೆ ತೆಗೆದುಕೊಂಡು ಹೋಗಲು ಯತ್ನಿಸುತ್ತಿರುವಾಗ, ಕೃಷ್ಣಕಾಂತನು "ನಿನ್ನ ಕೈಯಾಗೆ ಆಗೋದಿಲ್ಲ. ನಾರಾಯಣನ್ನ ಕರಿ" ಎಂದು ಗಂಗಾಧರನಿಗೆ ಹೇಳಿದನು. ಏನು ಹೇಳಬೇಕೆಂಬುದು ಗೊತ್ತಾಗದೆ ಗಂಗಾಧರನು ತಾಯಿಯ ಕಡೆ ನೋಡಿದನು.

"ನಾರಾಯಣನ ಧಿಮಾಕು ಸಹಿಸೋಕೆ ಸಾಧ್ಯವಾಗಲಿಲ್ಲ. ಅವನ್ನ ಕಳಿಸಿ ಬೇರೆ ಒಬ್ಬನ್ನ ಗೊತ್ಮಾಡೀನಿ. ಇವ ಭಾರಿ ಒಳ್ಳೆಯವ. ಏ ರಂಗಾ, ಬಾರೋ, ಈ ಸಾಮಾನೆಲ್ಲಾ ಅವರ ರೂಮಾಗೆ ಇಡು" ಎಂದು ಕಮಲೆ ಹೊಸ ಅಡಿಗೆಯವನಿಗೆ ಆಜ್ಞಾಪಿಸಿದಳು.

ತಾನಿಲ್ಲದ ವೇಳೆ ನಾರಾಯಣನನ್ನು ಕಳುಹಿಸಿದ ಸಮಾಚಾರ ಕೇಳಿ ಕೃಷ್ಣಕಾಂತನಿಗೆ ಬಹಳ ವ್ಯಸನವಾಯಿತು. ಆದರೆ ಆ ಕಾರಣದಿಂದ ಮನೆಗೆ ಬಂದೊಡನೆ ಹೆಂಡತಿಯೊಡನೆ ಜಗಳವಾಡಲು ಅವನು ಸಿದ್ಧನಿರಲಿಲ್ಲ. ತನ್ನ ಅಸಮಾಧಾನವನ್ನು ತಾನೇ ನುಂಗಿದನು. ಬಹಳ ಕಾಲ ಮಗನಂತೆ ಮನೆಯಲ್ಲಿದ್ದ ನಾರಾಯಣನು ಹೊರಟು ಹೋಗಿದ್ದು ಅವನ ಮನಸ್ಸಿಗೆ ಬಹಳ ಯಾತನೆಯನ್ನುಂಟುಮಾಡಿತ್ತು. ಅವನ ಬಲಗೈ ಮುರಿದು ಹೋದಂತಾಗಿತ್ತು. ನಾರಾಯಣನ ವಿಚಾರವನ್ನೇ ಚಿಂತಿಸುತ್ತಾ ಕುರ್ಚಿಯ ಮೇಲೆ ಕುಳಿತಿದ್ದನು. ಅಷ್ಟು ಹೊತ್ತಿಗೆ, ಗಂಗಾಧರನು ತಂದೆಯ ಕೊಠಡಿಗೆ ಹೋಗಿ ಗುಮಾಸ್ತ ಶಾಮಸುಂದರನೂ, ಕೆಲವು ಕಕ್ಷಿಗಾರರೂ ಬಂದಿದ್ದಾರೆಂದು ತಿಳಿಸಿದ್ದಲ್ಲದೆ, ತನ್ನ ತಾಯಿ ನಿಷ್ಕಾರಣವಾಗಿ ನಾರಾಯಣನನ್ನು ಓಡಿಸಿದಳೆಂದು ಕಿವಿಮಾತಿನಲ್ಲಿ ತಂದೆಗೆ ಹೇಳಿ ಓಡಿಹೋದನು.

ಕೃಷ್ಣಕಾಂತನು ತಾನು ಬರುವ ವಿಚಾರವನ್ನು ಮೊದಲೇ ಶಾಮಸುಂದರನಿಗೆ ಬರೆದಿದ್ದನು. ಕೃಷ್ಣಕಾಂತನು ಆಫೀಸ್ ಕೋಣೆಗೆ ಹೋದೊಡನೆ ಶಾಮಸುಂದರನು ಭಕ್ತಿಯಿಂದ ಮೇಲಕ್ಕೆದ್ದು ತನ್ನ ಪ್ರಣಾಮಗಳನ್ನು ಸಲ್ಲಿಸಿ, ಯೋಗಕ್ಷೇಮವನ್ನು ವಿಚಾರಿಸಿದನು. ತನ್ನ ದಣಿಯ ಆರೋಗ್ಯ ಖಾಯಿಲೆ ಬೀಳುವುದಕ್ಕೆ ಮುನ್ನ ಇದ್ದ ಸ್ಥಿತಿಗಿಂತಲೂ ಉತ್ತಮವಾಗಿದ್ದುದನ್ನು ನೋಡಿ ಶಾಮಸುಂದರನು ಸಂತೋಷಪಟ್ಟನು. ಅಲ್ಲಿದ್ದ ಕಕ್ಷಿಗಾರರು ತಮ್ಮ ಮೊಕದ್ದಮೆಗಳು ಮರುದಿನ ಅಂತಿಮ ವಿಚಾರಣೆಗೆ ಬರಲಿವೆಯೆಂದೂ, ಪುನಃ ಅಡ್‌ಜರ್ನ್‌ಮೆಂಟ್ ಸಿಕ್ಕುವುದಿಲ್ಲವೆಂದೂ ಹೇಳಿದರು. ಕೃಷ್ಣಕಾಂತನು "ಆಗಲಿ ನಾಳೆ ನಡೆಸೋಣ; ನೀವು ನಾಳೆ ಬೆಳಿಗ್ಗೆ ಬನ್ನಿ" ಎಂದು ಹೇಳಿ ಅವರನ್ನು ಕಳುಹಿಸಿಕೊಟ್ಟನು. ಕಕ್ಷಿಗಾರರು ಹೋದಮೇಲೆ, ತನ್ನ ಕೇಸುಗಳ ಸ್ಥಿತಿಗತಿಗಳ ವಿಚಾರದಲ್ಲಿ ಕೃಷ್ಣಕಾಂತನು ಶಾಮಸುಂದರನೊಡನೆ ವಿಚಾರ ವಿನಿಮಯ ಮಾಡಿದನು. ಶಾಮಸುಂದರನು ಯಾವ ಕೇಸೂ ಗೈರುಹಾಜರಿಯ ದೆಸೆಯಿಂದ ವಜಾ ಆಗಿಲ್ಲವೆಂದೂ, ಜರೂರಾಗಿ ತೀರ್ಮಾನವಾಗಬೇಕಾಗಿದ್ದ ಕೆಲವು ಕೇಸುಗಳನ್ನು ಕೃಷ್ಣಕಾಂತನ ಸ್ನೇಹಿತರು, ಅವನ ಪರವಾಗಿ ಶ್ರದ್ಧೆಯಿಂದ ಯಶಸ್ವಿಯಾಗಿ ನಡೆಸಿದರೆಂದೂ ಹೇಳಿದನು. ಇದನ್ನು ಕೇಳಿ ಕೃಷ್ಣಕಾಂತನಿಗೆ ಸಂತೋಷವಾಯಿತು. ಅವರಿಬ್ಬರೂ ನಾರಾಯಣನು ಹೋದುದಕ್ಕಾಗಿ ವ್ಯಥೆಪಟ್ಟರು.

"ಶಾಮ್, ನಾರಾಯಣನು ನನ್ನ ಮಗನಂತೆ ಇದ್ದ. ಅವನ ಊರಿನವರು ಯಾರಾದರೂ ಸಿಕ್ಕಿದರೆ ಅವನನ್ನು ಇಲ್ಲಿಗೆ ಬರಮಾಡು. ನಮ್ಮ ಗೋಪಾಲನಿಗೆ ಹೇಳಿ ಸಿರಗೂರಿನಲ್ಲಿ ಅವನಿಗೊಂದು ಕೆಲಸ ಕೊಡಿಸುತ್ತೇನೆ" ಎಂದು ಕೃಷ್ಣಕಾಂತ ಹೇಳಿದನು. ತನ್ನ ಧಣಿ ಕೃಷ್ಣಕಾಂತನು, ಆಳಾಗಿದ್ದ ಒಬ್ಬ ವ್ಯಕ್ತಿಯ ಮೇಲೆ ಅಷ್ಟೊಂದು ಕನಿಕರ ಇಟ್ಟಿದ್ದನ್ನು ನೋಡಿ ಶಾಮಸುಂದರನಿಗೆ ಆಶ್ಚರ್ಯವಾಯಿತು.

ಗಾಣಕ್ಕೆ ಕಟ್ಟುವ ಎತ್ತು ಪುನಃ ಗಾಣದ ನೊಗಕ್ಕೆ ಗೋಣು ಕೊಟ್ಟಂತೆ, ಮಾರನೆಯ ದಿನದಿಂದಲೇ ಕೃಷ್ಣಕಾಂತನು ಫಿರ್ಯಾದಿ ಅಪರಾಧಿಗಳ, ವಾದಿ ಪ್ರತಿವಾದಿಯರ,

ವಿವಾದಗಳ ಹೊರೆಯನ್ನು ಹೊರಲಾರಂಭಿಸಿದನು. ಅವನು ಯುವಕನಾಗಿದ್ದಾಗ ಅವನಿಗೆ ವಕೀಲಿ ವೃತ್ತಿಯಲ್ಲಿ ಉತ್ಸಾಹವಿತ್ತು. ಪ್ರತಿಭಾವಂತ ವಕೀಲನಾಗಬೇಕೆಂಬುವ ಆಕಾಂಕ್ಷೆ ಇತ್ತು. ಅವನ ಸಾಮರ್ಥ್ಯವನ್ನೂ, ಜಾಣತನವನ್ನೂ, ವಾಗ್ಝರಿಯನ್ನೂ ನೋಡಿ ಜನರು ಮೆಚ್ಚುಗೆಯಿಂದ ತಲೆ ತೂಗುತ್ತಿದ್ದರು. ಇಂದು ಆಕಾಂಕ್ಷೆಯೂ ಇರಲಿಲ್ಲ; ಉತ್ಸಾಹವೂ ಇರಲಿಲ್ಲ. ಹಣಕ್ಕಾಗಿ, ಕರ್ತವ್ಯ ನಿರ್ವಹಣೆ ದೃಷ್ಟಿಯಿಂದ ಹೆಣಗಾಡುತ್ತಿದ್ದನು.

ಊರಿಗೆ ಬಂದನಂತರ, ಹಿಂದೆ ಅವನ ಅನಾರೋಗ್ಯದ ನಿಮಿತ್ತ, ಮುಂದೆ ಹಾಕಲ್ಪಟ್ಟಿದ್ದ ಕೇಸುಗಳೆಲ್ಲವೂ ಶ್ರೀಪುರದ ವಿವಿಧ ಕೋರ್ಟುಗಳಲ್ಲಿ ವಿಚಾರಣೆಗೆ ಬಂದಿದ್ದವು. ತ್ವರಿತವಾಗಿ ಕೇಸುಗಳನ್ನು ತೀರ್ಮಾನ ಮಾಡಬೇಕೆನ್ನುವ ಹೈಕೋರ್ಟಿನ ಆದೇಶಕ್ಕನುಗುಣವಾಗಿ, ಕೆಳಕೋರ್ಟುಗಳು ಶೀಘ್ರಗಾಮಿಗಳಾಗಿದ್ದವು. ತ್ವರಿತವಾಗಿ ತೀರ್ಮಾನ ಮಾಡುವ ಭರದಲ್ಲಿ ಕೆಲವು ಕೋರ್ಟುಗಳಲ್ಲಿ ವಕೀಲರ ಗೈರುಹಾಜರಿಯ ನೆಪದಲ್ಲಿ ಸುಲಭವಾಗಿ ಶ್ರಮವಿಲ್ಲದೆ ಕೇಸುಗಳನ್ನು ವಜಾ ಮಾಡುತ್ತಿದ್ದರು. ಆದ್ದರಿಂದ ಕೃಷ್ಣಕಾಂತನಿಗೆ ಎಡೆಬಿಡದ ಕೆಲಸವಾಗಿತ್ತು. ಒಂದು ಕೋರ್ಟಿನಿಂದ ಇನ್ನೊಂದು ಕೋರ್ಟಿಗೆ ಅವನಿಗೆ ಓಡಾಡುವುದೇ ಸಾಕಾಗುತ್ತಿತ್ತು. ದೇಹಶ್ರಮದ ಜೊತೆಗೆ ಮಾನಸಿಕ ಬಳಲಿಕೆ ಹೆಚ್ಚಾಗುತ್ತಿತ್ತು.

ಬಳಲಿಕೆಯ ದೆಸೆಯಿಂದ, ಒಮ್ಮೊಮ್ಮೆ ಈಗ ತಾನೆ ಚೇತರಿಸಿಕೊಳ್ಳುತ್ತಾ ಇದ್ದೇನೆ. ದಯವಿಟ್ಟು ಮುಂದಿನವಾರ ಕೇಸನ್ನು ತೆಗೆದುಕೊಳ್ಳಿ" ಎಂದು ಅವನು ಪ್ರಾರ್ಥಿಸಿದರೆ, ಕೆಲವರು ನ್ಯಾಯಾಧಿಪತಿಗಳು "ಮಿಸ್ಟರ್ ಕೃಷ್ಣಕಾಂತ್, ನಿಮಗೆ ಕೇಸನ್ನು ನಡೆಸಲು ಸಾಧ್ಯವಿಲ್ಲದಿದ್ದರೆ ನೀವು ಬೇರೆ ಏರ್ಪಾಡು ಮಾಡ್ಬೇಕು. ಅಡ್ಜರ್ನಮೆಂಟ್ ಸಾಧ್ಯವಿಲ್ಲ" ಎಂದು ದರ್ಪದಿಂದ ನಿಷ್ಠುರವಾಗಿ ಹೇಳುತ್ತಿದ್ದರು.

"ಜೀವನದಲ್ಲಿ ಕಷ್ಟ ಕಾರ್ಪಣ್ಯಗಳನ್ನು ಅನುಭವಿಸದ ವ್ಯಕ್ತಿಗಳಿಗೆ ಅಧಿಕಾರ ಸಿಕ್ಕಿದರೆ ಹೀಗೇ ಆಗುವುದು" ಎಂದು ಮನಸ್ಸಿನಲ್ಲೇ ಗೊಣಗುತ್ತಾ ಕೃಷ್ಣಕಾಂತನು ಕೇಸುಗಳನ್ನು ನಡೆಸುತ್ತಿದ್ದನು.

ದಿನವೂ ಹತ್ತು ಹನ್ನೆರಡು ಗಂಟೆಗಳ ಕಾಲ ಅವನು ಕೆಲಸ ಮಾಡಬೇಕಾಗಿತ್ತು. ಹಗಲೆಲ್ಲಾ ದುಡಿದು ರಾತ್ರಿ ಮನೆಗೆ ಹೋದರೆ, ತೋಳನ ಗವಿಗೆ ಹೋದಂತಾಗುತ್ತಿತ್ತು. ಕಮಲೆಗೆ ಗಂಡ ಶಕ್ತಿಮೀರಿ ದುಡಿಯುತ್ತಾನೆಂಬ ಕನಿಕರವೂ ಇರಲಿಲ್ಲ; ಅವನ ಆರೋಗ್ಯ ಕೆಡಬಹುದೆಂಬ ಯೋಚನೆಯೂ ಇರಲಿಲ್ಲ. ಉರಿಮುಖ ಮಾಡಿಕೊಂಡು, ಶತ್ರುವನ್ನು ನೋಡುವಂತೆ ಅವನನ್ನು ಕಾಣುತ್ತಿದ್ದಳು. ಸಿರಗೂರಿನಿಂದ ಬಂದ ಮೂರು ತಿಂಗಳೊಳಗಾಗಿ ಅವನ ಆರೋಗ್ಯ ತಕ್ಕಷ್ಟು ಕೆಟ್ಟುಹೋಗಿತ್ತು. ತನ್ನ ಅವಸಾನ ಕಾಲ ಸಮೀಪಿಸುತ್ತಾ ಇದೆ ಎಂದು ಅವನ ಮನಸ್ಸು ಹೇಳುತ್ತಿತ್ತು. ಅವನ ಸ್ನೇಹಿತರೂ, ಹಿತೈಷಿಗಳೂ ಐದಾರು ತಿಂಗಳ ಕಾಲ ವಿಶ್ರಾಂತಿ ಪಡೆಯಬೇಕೆಂದು ಅವನಿಗೆ ಸಲಹೆ ಮಾಡುತ್ತಿದ್ದರು. ಪಾಪ! ಅವರಿಗೆ ಅವನ ಬಂಡವಾಳ ಹೇಗೆ ಗೊತ್ತಾಗಬೇಕು! ದುಡಿಮೆ

ಇಲ್ಲದೆ ಮೂರು ತಿಂಗಳ ಕಾಲ ಸಹ ದೂಡುವುದು ಅವನಿಗೆ ಕಷ್ಟ ಎಂಬುದನ್ನು ಅವರು ತಿಳಿದಿರಲಿಲ್ಲ.

ದುಡಿಯುತ್ತಲೇ ಸಾಯಬೇಕೆಂದು ಕೃಷ್ಣಕಾಂತನು ನಿರ್ಧರಿಸಿದನು. ನಾನಾ ಕಾರಣಗಳ ದೆಸೆಯಿಂದ ಅವನಿಗೆ ಬಾಳು ಬೇಡವಾಗಿ, ಜೀವ ಭಾರವಾಗಿತ್ತು. ಸಾಯಲು ಮಾನಸಿಕವಾಗಿ ಸಿದ್ಧತೆ ಮಾಡಿಕೊಳ್ಳುತ್ತಿದ್ದನು. ಕೃಷ್ಣಕಾಂತನು ಆರ್ಥಿಕ ದೃಷ್ಟಿಯಿಂದ ಮಧ್ಯಮ ದರ್ಜೆಗೆ ಸೇರಿದ್ದರೂ, ನೈತಿಕ ದೃಷ್ಟಿಯಿಂದ ಶ್ರೇಷ್ಠದರ್ಜೆಗೆ ಸೇರಿದವನಾಗಿದ್ದನು. ಯಾರಿಗೂ ಅಪಕಾರ ಮಾಡಿರಲಿಲ್ಲ; ಯಾರಿಗೂ ಮೋಸ ಮಾಡಿರಲಿಲ್ಲ. ದುರಾಸೆಯಿಂದ ಕಕ್ಷಿಗಾರರನ್ನು ಸುಲಿಗೆ ಮಾಡಿದವನಲ್ಲ. ಆದ್ದರಿಂದ ಸಾಯುವ ಮುನ್ನ ಪಶ್ಚಾತ್ತಾಪದ ಅಳಲನ್ನು ಅನುಭವಿಸಬೇಕಾದ ಪ್ರಮೇಯವೇ ಅವನಿಗಿರಲಿಲ್ಲ. ತನ್ನ ಇಬ್ಬರು ಮಕ್ಕಳನ್ನು ಅನಾಥರನ್ನಾಗಿ ಬಿಟ್ಟು ಸಾಯುತ್ತೇನೆಂಬ ಒಂದೇ ಚಿಂತೆ ವಿನಃ ಇನ್ನಾವ ಚಿಂತೆಯೂ ಅವನಿಗಿರಲಿಲ್ಲ. ಆದರೂ ಚಂಚಲೆ ಆ ಮಕ್ಕಳನ್ನು ಕೈಬಿಡಲಾರಳೆಂಬ ಭರವಸೆ ಅವನಿಗಿತ್ತು.

ಒಂದು ದಿನ, ಕೃಷ್ಣಕಾಂತನು ಶ್ರೀಪುರದ ಎರಡನೇ ಸಿವಿಲ್ ಜಡ್ಜರ ಕೋರ್ಟಿನಲ್ಲಿ ಮಧ್ಯಾಹ್ನದ ಹೊತ್ತು ವಾದ ಮಾಡುತ್ತಿರುವಾಗ, ಇದ್ದಕ್ಕಿದ್ದ ಹಾಗೆ ಹೃದಯಕ್ರಿಯೆ ನಿಂತು ಕೆಳಗುರುಳಿದನು. ಕೋರ್ಟಿನಲ್ಲಿದ್ದ ವಕೀಲರೂ, ಇತರರೂ ಸೇರಿ ಅವನನ್ನು ಆಸ್ಪತ್ರೆಗೆ ಸಾಗಿಸಿದರು. ಆಸ್ಪತ್ರೆಯನ್ನು ಮುಟ್ಟುವುದರೊಳಗಾಗಿ ಅವನ ಜೀವನ ಪರಲೋಕವನ್ನು ಸೇರಿತ್ತು. ಶಾಮಸುಂದರನು ಅಳುತ್ತಾ ಹೋಗಿ ಗೋಪಾಲನಿಗೆ ಫೋನ್ ಮಾಡಿ, ಸಾವಿನ ಸಂಗತಿಯನ್ನು ತಿಳಿಸಿದನು. ಕೃಷ್ಣಕಾಂತನ ಸ್ನೇಹಿತರು ಅವನ ಶವವನ್ನು ಅವನ ಮನೆಗೆ ಸಾಗಿಸಿದರು.

ಕಮಲ ಏಕಾಏಕಿ ಗಂಡನ ಹೆಣವನ್ನು ನೋಡಿ ದಿಗ್ಭ್ರಮೆಗೊಂಡಳು. ಶೋಕ ತಪ್ತಳಾದಳೆನ್ನುವುದಕ್ಕಿಂತ ತಲ್ಲಣಿಸಿ ಹೋಗಿದ್ದಳು. ಗಂಡನ ಹೆಣದ ಪಕ್ಕದಲ್ಲಿ ಕಲ್ಲಿನಂತೆ ಕುಳಿತಿದ್ದಳು. ಅವಳಿಗೆ ಅಲ್ಲಿಯವರೆಗೆ ತನ್ನ ಸ್ಥಾನಮಾನಗಳ ಅಥವಾ ಭವಿಷ್ಯದ ಅರಿವಾಗಿರಲಿಲ್ಲ. ಗಂಡ ಸತ್ತರೆ ತನ್ನ ಮತ್ತು ಮಕ್ಕಳ ಭವಿಷ್ಯವೇನಾಗುತ್ತದೆ ಎಂಬುದನ್ನು ಅವಳು ಚಿಂತಿಸಿರಲಿಲ್ಲ. ಗಂಡ ಬದುಕಿರುವಾಗ ಅವಳು ಅವನನ್ನು ವೈರಿಯಂತೆ ಕಾಣುತ್ತಿದ್ದಳು. ಅಂದು ಆ ವೈರಿ ಹತನಾಗಿ ಅವಳ ಕಣ್ಮುಂದೆ ಹೆಣವಾಗಿ ಬಿದ್ದಿದ್ದನು. ಅಂದು ಮೊಟ್ಟ ಮೊದಲು, ಗಂಡನ ಶವದ ಪಕ್ಕದಲ್ಲಿ ತನ್ನ ಭವಿಷ್ಯವನ್ನು ಕುರಿತು ಚಿಂತಿಸತೊಡಗಿದ್ದಳು. ಗಂಗಾಧರನು ತಂದೆಯ ಹೆಣದ ಮೇಲೆ ಬಿದ್ದು "ಅಪ್ಪಾ" ಎಂದು ರೋಧಿಸುತ್ತಿದ್ದನು. ಶಾಮಸುಂದರನು ಇನ್ನೊಂದು ಕಡೆ ಕುಳಿತು ಶೋಕಿಸುತ್ತಿದ್ದನು. ಅವನ ಸ್ವಾಮಿನಿಷ್ಠೆಗೆ ಮೆಚ್ಚಿ, ವಿಧಿ ನಾರಾಯಣನನ್ನು ಅದೇ ದಿನ ಶ್ರೀಪುರಕ್ಕೆ ಎಳೆದುಕೊಂಡು ಬಂದಿತ್ತೋ ಎನ್ನುವ ಹಾಗೆ ಆ ದಿನ ನಾರಾಯಣನು ತನ್ನ ಭಾವಮೈದುನನ್ನು ನೋಡುವ ಸಲುವಾಗಿ ಶ್ರೀಪುರಕ್ಕೆ ಬಂದಿದ್ದನು. ಅವನೂ ಬಿಕ್ಕಿ ಬಿಕ್ಕಿ ಅಳುತ್ತಿದ್ದನು. ಅವರೆಲ್ಲರೂ ಅಳುತ್ತಿರುವುದನ್ನು ನೋಡಿ, ಊರ್ಮಿಳೆ ಗಾಬರಿಗೊಂಡು ಹೆದರಿಕೆಯಿಂದ ಅಳುತ್ತಿದ್ದಳು.

ಕೃಷ್ಣಕಾಂತನ ಮರಣ ವಾರ್ತೆಯನ್ನು ತಿಳಿದು ಶ್ರೀಪುರದ ಇಡೀ ವಕೀಲ ವೃಂದವೇ ಅವನ ಮನೆ ಮುಂದೆ ಸೇರಿತ್ತು. ಜೊತೆಗೆ ಇತರೆ ಜನರೂ ತಂಡೋಪತಂಡವಾಗಿ ಅವನ ಅಂತಿಮ ದರ್ಶನಕ್ಕೆ ಬರುತ್ತಿದ್ದರು. ಚಂದ್ರಹಾಸನೂ, ಕಿಶೋರನೂ, ನೂರು ಜನ ಕ್ರಾಂತಿಕೂಟದ ಸ್ವಯಂ ಸೇವಕರೊಡನೆ ಅಲ್ಲಿಗೆ ಬಂದಿದ್ದರು. ಪದ್ಮಾವತಿಯೂ ಬಂದಿದ್ದಳು. ರಾತ್ರಿ ಎಂಟು ಘಂಟೆಯ ಹೊತ್ತಿಗೆ ಚಂಚಲೆಯೂ ಗೋಪಾಲನೂ ಬಂದರು. ಚಂಚಲೆ ತಂದೆಯ ಪಾರ್ಥಿವ ಶರೀರದ ಮೇಲೆ ಬಿದ್ದು ಮಗುವಿನಂತೆ ಅಳುತ್ತಿದ್ದಳು. ಪದ್ಮಾವತಿಯು ಅವಳನ್ನು ಸಂತೈಸುತ್ತಿದ್ದಳು. ಗೋಪಾಲನೂ, ಚಂದ್ರಹಾಸನೂ ದೂರದ ಊರುಗಳಲ್ಲಿದ್ದ ಬಂಧುಗಳಿಗೆ ವರ್ತಮಾನ ಕಳಿಸುವ ಏರ್ಪಾಡಿನಲ್ಲಿದ್ದರು. ಕಿಶೋರನು ಅಂತಿಮ ದರ್ಶನಕ್ಕೆ ಬರುತ್ತಿದ್ದವರನ್ನು ವಿಚಾರಿಸಿಕೊಳ್ಳುತ್ತಿದ್ದನು. ಒಂದು ಸ್ವಾರಸ್ಯಕರವಾದ ಸಂಗತಿಯೆಂದರೆ ಅತ್ಯಂತ ಆತ್ಮೀಯನಂತೆ ವರ್ತಿಸುತ್ತಾ, ಮೂರು ದಿನಗಳಿಗೊಮ್ಮೆ ಕೃಷ್ಣಕಾಂತನ ಮನೆಗೆ ಬರುತ್ತಿದ್ದ ನಿರಂಜನನು, ಆರು ಗಂಟೆಯ ಹೊತ್ತಿಗೆ ಬಂದು, ಔಪಚಾರಿಕವಾಗಿ ಕಮಲೆಗೆ ಸಂತಾಪವನ್ನು ಸೂಚಿಸಿ, ಕ್ಲಬ್ಬಿಗೆ ಹೋದವನು ಪುನಃ ಮುಖ ತೋರಿಸಲಿಲ್ಲ. ಮೊದಲಿನಿಂದಲೂ ಕಮಲೆಯ ದೃಷ್ಟಿಯಲ್ಲಿ ಕೃಷ್ಣಕಾಂತನು ಕೆಲಸಕ್ಕೆ ಬಾರದ ಒಬ್ಬ ಮುಠ್ಠಾಳನಾಗಿದ್ದನು. ತನ್ನ ಗಂಡನು ಜನಾನುರಾಗವನ್ನು ಸಂಪಾದಿಸಿದ್ದ ಗಣ್ಯವ್ಯಕ್ತಿ ಎಂಬ ಭಾವನೆ ಅವಳಿಗೆಂದೂ ಬಂದಿರಲಿಲ್ಲ. ಆ ದಿನ ಅವನ ಅಂತಿಮ ದರ್ಶನಕ್ಕೆ ಬರುತ್ತಿದ್ದ ಜನಸ್ತೋಮವನ್ನು ನೋಡಿ, ಅವಳಿಗೆ ಆಶ್ಚರ್ಯವಾಗಿತ್ತು.

ಮರುದಿನ ಬೆಳಿಗ್ಗೆ, ಹತ್ತು ಗಂಟೆಯ ಹೊತ್ತಿಗೆ ಕೃಷ್ಣಕಾಂತನ ಅಂತ್ಯ ಸಂಸ್ಕಾರ ನಡೆಯಿತು. ಅಂತ್ಯ ಸಂಸ್ಕಾರಕ್ಕೆ ಬಂದಿದ್ದ ಬಂಧುಗಳನೇಕರು ಸ್ಮಶಾನದಿಂದಲೇ ತಮ್ಮ ತಮ್ಮ ಊರುಗಳಿಗೆ ಹೊರಟು ಹೋದರು. ನಿರಂಜನನು ಸ್ಮಶಾನದಲ್ಲಿ ಪ್ರೇಕ್ಷಕನಂತೆ ದೂರದಲ್ಲಿ ನಿಂತಿದ್ದನು. ಶವಸಂಸ್ಕಾರ ಮುಗಿದ ನಂತರ ಅವನೂ ಎಲ್ಲರಂತೆ ಹೊರಟು ಹೋದನು. ಕಮಲೆಯನ್ನು ಮಾತನಾಡಿಸಲೂ ಇಲ್ಲ. ಶ್ರೀಪುರದ ಜನರೂ ತಮ್ಮ ತಮ್ಮ ಮನೆಗಳಿಗೆ ಹೋದರು. ಹತ್ತಿರದ ಬಂಧುಗಳು ಮಾತ್ರ ಕೃಷ್ಣಕಾಂತನ ಮನೆಗೆ ಬಂದಿದ್ದರು. ಮನೆಗೆ ಬಂದಿದ್ದ ಬಂಧುಗಳಿಗೆ ಗೋಪಾಲನು ಊಟದ ವ್ಯವಸ್ಥೆಯನ್ನು ಮಾಡಿದ್ದನು. ಕಮಲೆಯ ಅಣ್ಣನೂ ಅವಳ ಅಕ್ಕತಂಗಿಯರೂ, ಅವರ ಗಂಡಂದಿರೂ ಬಂದಿದ್ದರು. ಊಟವಾದ ನಂತರ, ಬಂಧುಗಳು ಒಬ್ಬೊಬ್ಬರಾಗಿ ತಮ್ಮ ತಮ್ಮ ಊರಿಗೆ ಹೊರಡಲನುವಾಗುತ್ತಿದ್ದರು. ಕಮಲೆಯ ಅಣ್ಣನು ಕಮಲೆಯ ಬಳಿಗೆ ಹೋಗಿ "ಮನೇಲಿ ನಿನ್ನ ಅತ್ತಿಗೆಗೆ ಹುಶಾರಿಲ್ಲ, ನಾ ಊರಿಗೆ ಇಂದೇ ಹೋಗ್ಬೇಕಾಗಿದೆ" ಎಂದು ಹೇಳಿದನು.

"ಏನಣ್ಣಾ, ನೀನೂ ಇಂದೇ ಹೋಗಬೇಕೆ? ನಿನ್ನ ಹತ್ತಿರ ಮಾತಾಡಬೇಕಾಗಿತ್ತು. ನನ್ನ ಗತಿ ಹೀಗಾತಲ್ಲಾ, ಮುಂದೇನ್ಮಾಡ್ಲಿ?" ಎಂದು ಕಮಲ ಅಳುತ್ತಾ ದೈನ್ಯದಿಂದ ನುಡಿದಳು.

"ಏನ್ಮಾಡೋದಮ್ಮಾ? ವಿಧಿ ಸಂಕಲ್ಪ; ದೇವರು ನಿನಗೀಕಷ್ಟ ಕೊಡ್ಬಾರದಾಗಿತ್ತು."

"ಹೋದೋರಂತೂ ಹೋದ್ರು. ಇದ್ದೋರಗತಿಯೇನಣ್ಣಾ? ನಾ ಜೀವನಾ ಯಾವ ರೀತಿ ಮಾಡೋದು, ಈ ಸಣ್ಣ ಮಕ್ಕಳನ್ನು ಕಟ್ಟಿಕೊಂಡು. ಏನಾರೂ ಆಸ್ತಿಪಾಸ್ತಿ ಬಿಟ್ಟು ಹೋಗ್ಯಾರೇನು?"

"ಗೋಪಾಲನ ಹತ್ತಿರ ಮಾತಾಡಮ್ಮಾ, ಅವನು, ಏನು ಹೇಳ್ತಾನೆ ನೋಡೋಣ. ಸ್ವಂತ ಮನೆ ಹೇಗಿದ್ದರೂ ಇದೆ. ಅದನ್ನು ಬಾಡಿಗೆಗೆ ಕೊಟ್ರೆ ತಿಂಗಳಿಗೆ ಇನ್ನೂರೈವತ್ತು ರೂಪಾಯಿ ಬಾಡಿಗೆ ಬರಬಹುದು. ಇನ್ನು ನಿರ್ವಾಹ ಇಲ್ದೆ ಇದ್ರೆ ನೀ ಬಂದು ನಮ್ಮನೇಲಿ ಇರಬಹುದು. ಮನೇಲಿ ಹುಟ್ಟಿದ ಮಗಳು ಮನೀಗೆ ಬರ್ತೀನಿ ಅಂತ ಹೇಳಿದ್ರೆ ಬೇಡಾಂತ ಹೇಳೋಕಾಗ್ತದೇನು?"

"ಅಣ್ಣಾ! ನೀ ಬ್ಹಾಳಾ ಸುಲಭ್ಹಾಗೆ ಹೇಳ್ತಿಯಲ್ಲಾ! ಮಕ್ಕಳೀಗೆ ಎಜುಕೇಶನ್ ಬೇಡವೇನು?"

"ಮಕ್ಕಳನ್ನು ಸಿರಗೂರಾಗೆ ಗೋಪಾಲನ ಮನೇಲಿ ಬಿಟ್ರಾತು."

"ಮಾತೆತ್ತಿದ್ರೆ ಗೋಪಾಲನ ಕಡೆ ಕೈ ತೋರಿಸ್ತೀಯಲ್ಲಣ್ಣಾ; ಗೋಪಾಲನ ಕೈಕಾಲು ಕಟ್ಟೋ ಹಾಗಿದ್ದಿದ್ರೆ ನಿನ್ನ ಹತ್ರ ಯಾಕೆ ಮಾತಾಡಬೇಕಾಗಿತ್ತು? ನೀನು ನನ್ನ ಅಣ್ಣ ಅಲ್ವೇನು? ಹಾಗಾದ್ರೆ ನಿನ್ನ ಜವಾಬ್ದಾರಿ ಸ್ವಲ್ಪಾನೂ ಇಲ್ವೇ?

"ನನ್ನ ಜವಾಬ್ದಾರಿ ಇಲ್ಲ ಅಂತ ಹೇಳಿದ್ನೇನು? ನೀ ನಮ್ಮ ಮನೇಲೇ ಬಂದಿರು ಅಂತ ಹೇಳ್ದೆ. ನಮ್ಮೂರಾಗೆ ಹೈಸ್ಕೂಲಿದ್ದಿದ್ರೆ ನಿನ್ನ ಮಕ್ಕಳನ್ನ ನಮ್ಮನೇಲೇ ಇಟ್ಟುಕೊಳ್ಳುತ್ತಿದ್ದೆ.

"ಹಾಗಾದರೆ ನಿಂದು ಇಷ್ಟೇ ಜವಾಬ್ದಾರಿ! ಈಗ್ಯಾಕೆ ಮಾತು. ನೀ ಹೊರಟು ನಿಂತೀಯ. ಆಮ್ಯಾಲೆ ಮಾತಾಡ್ತೀನಿ. ತಿಥಿ ಯಾವಾಗ ಇಟ್ಟುಕೊಳ್ಳೋದು. ಅದಕ್ಕಾದ್ರೂ ಬರುತ್ತಿಯೋ ಇಲ್ಲವೋ?"

"ನಾ ಬರೋದಿಲ್ಲಾಂತ ಹೇಳಿದ್ನೇನು? ಪುರೋಹಿತರನ್ನ, ಗೋಪಾಲನ್ನ ಕೇಳಿ ದಿನ ಗೊತ್ಮಾಡಿ ಬರೆದರೆ ಬರ್ತೀನಿ. ತಗೋ ನನ್ನ ಹತ್ರ ಇನ್ನೂರು ರೂಪಾಯಿ ಮಾತ್ರ ಇದೆ" ಎಂದು ಹೇಳುತ್ತಾ ಕಮಲೆಯ ಕೈಗೆ ಅವಳ ಅಣ್ಣ ಇನ್ನೂರು ರೂಪಾಯಿಗಳನ್ನು ಕೊಟ್ಟನು.

"ನಿನ್ ದುಡ್ಡು ನಿನ್ನ ಹತ್ರಾನೇ ಇರ್ಲಿ" ಎಂದು ಕಮಲ ತನ್ನ ಅಣ್ಣನಿಗೆ ಹೇಳಬೇಕೆಂದು ಯೋಚಿಸಿದಳು. ಆದರೆ ಆ ಸಂದರ್ಭದಲ್ಲಿ ಆ ರೀತಿ ಹೇಳುವುದು ಯುಕ್ತವಲ್ಲವೆಂದು ಭಾವಿಸಿ, ಅವನು ಕೊಟ್ಟ ಇನ್ನೂರು ರೂಪಾಯಿಗಳನ್ನು ತೆಗೆದುಕೊಂಡಳು. ಉಳಿದ ಬಂಧುಗಳೂ ಒಬ್ಬೊಬ್ಬರಾಗಿ ಹೊರಟು ಹೋದರು. ಕೊನೆಗೆ ಉಳಿದವರು ಚಂಚಲೆ, ಗೋಪಾಲ ಮತ್ತು ಕಮಲೆಯ ಅಕ್ಕ ಶಾಂತ, ಚಂದ್ರಹಾಸನೂ, ಕಿಶೋರನೂ ಗೋಪಾಲನ ಅಪೇಕ್ಷೆಯ ಮೇರೆಗೆ, ಕೃಷ್ಣಕಾಂತನ ಮನೆಯಲ್ಲಿಯೇ ಉಳಿದುಕೊಂಡಿದ್ದರು. ಗಂಡನು ಬದುಕಿದ್ದಾಗ ಕಮಲ ಒಮ್ಮೊಮ್ಮೆ ಗಂಡನನ್ನು ಕುರಿತು "ನಾ ಯೇನು ನಿಮ್ಮನ್ನೇ ನಂಬಿಕೊಂಡು ಹುಟ್ಟಿಲ್ಲ. ನೀವು ಕೈ ಬಿಟ್ರೂ ನನ್ನ ಒಡಹುಟ್ಟಿದೋರು ನನ್ನ ಕೈ ಬಿಡೋದಿಲ್ಲ" ಎಂದು ಹೇಳುತ್ತಿದ್ದಳು.

ಅವಳ ಅಣ್ಣ, ಅವಳ ತಂದೆಯ ಒಬ್ಬನೇ ಮಗನಾಗಿ, ವಿಷ್ಣುಪುರದ ಸಾಹುಕಾರನ ಸರ್ವ ಆಸ್ತಿಯ ಒಡೆಯನಾಗಿದ್ದನು. ಕಾನೂನು ಪ್ರಕಾರ ಅವನ ಸಹೋದರಿಯರಿಗೆ ಅವನ ತಂದೆಯ ಹಿಸ್ಸೆಯಲ್ಲಿ ಹಕ್ಕಿದ್ದಾಗ್ಯೂ ಕೂಡ ಅವರ ಭಾಗದ ಹಿಸ್ಸೆಯನ್ನು ಕೊಡದೆ ಎಲ್ಲವನ್ನೂ ತಾನೇ ಅನುಭವಿಸುತ್ತಿದ್ದನು. ಅವನು ಮನಸ್ಸು ಮಾಡಿದ್ದರೆ, ಕಮಲೆಗೆ ಪ್ರತಿ ತಿಂಗಳೂ ಐನೂರು ರೂಪಾಯಿಗಳ ಜೀವನಾಂಶವನ್ನು ಕೊಡಬಹುದಾಗಿತ್ತು. ಈ ರೀತಿ ಇದ್ದಾಗ್ಯೂ, ಅವಳ ಅಣ್ಣನು ಜಾರಿಕೆಯ ಮಾತನ್ನಾಡಿ, ಇನ್ನೂರು ರೂಪಾಯಿಯನ್ನು ಕೊಟ್ಟು ಹೊರಟುಹೋಗಿದ್ದನು. ತನ್ನ ಹೆಂಡತಿಯೊಡನೆ ಕಮಲ ಒಂದೇ ಮನೆಯಲ್ಲಿರುವುದು ಸಾಧ್ಯವಿಲ್ಲವೆಂಬ ಸಂಗತಿ ಅವಳ ಅಣ್ಣನಿಗೆ ಗೊತ್ತಿತ್ತು. ಆದ್ದರಿಂದ ತನ್ನ ಅಣ್ಣ ತನ್ನ ಮನೆಯಲ್ಲಿ ಬಂದಿರಬಹುದೆಂದು ಹೇಳಿದ್ದ ಮಾತು ಕೇವಲ ಔಪಚಾರಿಕವಾಗಿತ್ತೆಂದು ಕಮಲೆಗೆ ಗೊತ್ತಾಗಿತ್ತು.

ಅವಳ ಅಕ್ಕತಂಗಿಯರ ಗಂಡಂದಿರು ತಮ್ಮ ಹೊಣೆ ಏನೂ ಇಲ್ಲವೆಂಬಂತೆ ಔಪಚಾರಿಕವಾಗಿ ಸಂತಾಪ ಸೂಚಿಸಿ ಹೊರಟು ಹೋಗಿದ್ದರು. ಯಾರು ಕೈ ಬಿಟ್ಟರೂ ನಿರಂಜನನು ತನ್ನ ಕೈ ಬಿಡುವುದಿಲ್ಲವೆಂದು ಕಮಲ ನಂಬಿದ್ದಳು. ನಿರಂಜನನು ಸುಖದ ಕಾಲದ ಸಖನೇ ಹೊರತು ಆಪತ್ಕಾಲದ ಬಂಧುವಾಗಿರಲಿಲ್ಲವೆಂಬುದು ಅವಳಿಗೆ ಇನ್ನೂ ಗೊತ್ತಾಗಿರಲಿಲ್ಲ. ನಿರಂಜನನು, ಹತ್ತಿರ ಹೋದರೆ ಕಮಲೆಯ ಸಂಸಾರ ನಿರ್ವಹಣೆಯ ಹೊಣೆ ಎಲ್ಲಿ ಕಚ್ಚಿಕೊಳ್ಳುತ್ತದೋ ಎಂಬ ಭಯದಿಂದ, ಉದ್ದೇಶ ಪೂರ್ವಕವಾಗಿಯೇ ದೂರವಾಗಿದ್ದನು. ಅಲ್ಲದೆ ಆದಷ್ಟು ಜಾಗ್ರತೆ ಬೇರೊಂದು ಜಿಲ್ಲೆಗೆ ವರ್ಗ ಮಾಡಿಸಿಕೊಳ್ಳಬೇಕೆಂದು ಯೋಚಿಸುತ್ತಿದ್ದನು.

ಆ ರಾತ್ರಿ, ಕಮಲೆಯೂ ಅವಳ ಅಕ್ಕನೂ ಅವಳ ಭವಿಷ್ಯದ ವಿಚಾರದಲ್ಲಿ ದೀರ್ಘವಾಗಿ ಯೋಚಿಸಿದರು. ಆದರೆ ಅವರಿಗೆ ಯಾವ ಮಾರ್ಗವೂ ಹೊಳೆಯಲಿಲ್ಲ. ಕಮಲೆಗೆ ಯೋಚನೆಯಿಂದ ಬಹಳ ಹೊತ್ತು ನಿದ್ದೆಯೇ ಬರಲಿಲ್ಲ. ಬಹಳ ಹೊತ್ತಿನ ನಂತರ ನಿದ್ದೆ ಹೋದಳು. ನಿದ್ದೆಯಲ್ಲಿ ಅವಳಿಗೊಂದು ಕನಸಾಗಿತ್ತು. ಕನಸಿನಲ್ಲಿ, ಚಂಚಲೆ ಘೋರ ರೂಪವನ್ನು ತಾಳಿ, ತಲೆಕೂದಲನ್ನು ಕೆದರಿಕೊಂಡು, "ಏ ಪಾಪೀ ನಿನ್ನ ಪಾಪಕ್ಕೆ ತಕ್ಕ ಪ್ರತಿಫಲ ನಿನಗೆ ಸಿಕ್ಕಿದೆ ಅನುಭವಿಸು; ನಮ್ಮಪ್ಪನಿಗೆ ಕೊಡಬಾರದ ಕಷ್ಟವನ್ನು ಕೊಟ್ಟೆ; ನನ್ನ ಬಳಿ ಬರಬೇಡ ಶನಿ ತೊಲಗಾಚೆ" ಎಂದು ಕೂಗುತ್ತಿದ್ದಳು. ಆ ಘೋರ ರೂಪವನ್ನು ನೋಡಿ, ಕಮಲ ಗಡಗಡ ನಡುಗುತ್ತಾ ಎಚ್ಚರಗೊಂಡಳು. ಪುನಃ ನಿದ್ದೆ ಮಾಡಬೇಕೆಂದು ಅವಳು ಪ್ರಯತ್ನಿಸುತ್ತಿರುವಾಗ, ಪಕ್ಕದಲ್ಲಿ ಮಲಗಿದ್ದ ಗಂಗಾಧರನು ನಿದ್ದೆಯಲ್ಲಿ "ಚಂಚಲಕ್ಕಾ ಅಲ್ಲಿ ನೋಡಿ, ಆಕಾಶದಾಗೆ ಅಪ್ಪ ಅಮ್ಮನ ಕಡೆಗೆ ನೋಡ್ತಾ ನಗ್ತಾ ಇದ್ದಾರೆ" ಎಂದು ನುಡಿದನು.

ಕಮಲೆಗೆ ಜಗತ್ತೆಲ್ಲವೂ ತನ್ನನ್ನೇ ಶಪಿಸುತ್ತಿರುವಂತೆ ತೋರುತ್ತಿತ್ತು. ಕೃಷ್ಣಕಾಂತನ ಮತ್ತು ತನ್ನ ವೈವಾಹಿಕ ಜೀವನದಲ್ಲಿ ತಾನು ನಿರ್ವಹಿಸಿದ್ದ ಪಾತ್ರವನ್ನು ಒಂದೊಂದಾಗಿ ಸ್ಮರಿಸಿಕೊಂಡಳು. ಹೆಜ್ಜೆಹೆಜ್ಜೆಗೂ ತಪ್ಪು ತನ್ನದೆಂಬುದನ್ನು ಮನಗಾಣುತ್ತಿದ್ದಳು. ಪಶ್ಚಾತ್ತಾಪದ

ಬೇಗೆ ಅವಳನ್ನು ದಹಿಸತೊಡಗಿತ್ತು. ಆದರೆ ಕಾಲ ಮೀರಿ ಹೋಗಿತ್ತು. ಅವಳ ಪಶ್ಚಾತ್ತಾಪವನ್ನು ಅಂಗೀಕರಿಸಿ, ಅವಳನ್ನು ಕ್ಷಮಿಸುವ ವ್ಯಕ್ತಿ, ಅವಳ ಕಿರುಕುಳಗಳಿಂದ ಪಾರಾಗಿ, ಪರಲೋಕವನ್ನು ಸೇರಿ ಕಣ್ಮರೆಯಾಗಿದ್ದನು. ದುಗುಡದಿಂದ ಮನಸ್ಸು ಭಾರವಾಗಿ ನಿದ್ದೆ ಹೋದಳು.

ಮನುಷ್ಯರು ಸುಖ, ಸಂಪತ್ತು, ಅಧಿಕಾರಗಳಿಂದ ನಲಿಯುತ್ತಿರುವಾಗ, ತಾವೇ ಜಗದೊಡೆಯರಂತೆ ಮೆರೆಯುತ್ತಾರೆ. ಬಡತನ, ಕಷ್ಟಗಳಲ್ಲಿ ತೊಳಲುತ್ತಿರುವಾಗ ನಿಸ್ಸಹಾಯಕ ಕೀಟಗಳಂತಾಗುತ್ತಾರೆ. ಕೇವಲ ಎರಡು ದಿನಗಳ ಹಿಂದೆ, ಅಟ್ಟಹಾಸ ಆಟಾಟೋಪಗಳಿಂದ ಮೆರೆಯುತ್ತಿದ್ದ ಕಮಲ, ಗಂಡ ಸತ್ತ ಬಳಿಕ ನಿಸ್ಸಹಾಯಕ ಕೀಟದಂತಾಗಿದ್ದಳು. ಬೆಳಿಗ್ಗೆ ಅವಳು ಎದ್ದಾಗ, ಗೋಪಾಲನೂ, ಚಂಚಲೆಯೂ ಸಿರಗೂರಿಗೆ ಹೊರಡುವ ಸಿದ್ಧತೆಯಲ್ಲಿದ್ದರು. ಎಂದಿನಂತೆ ಅಡುಗೆಯವನು ಕಾಫಿಯನ್ನು ತಂದು ಕಮಲೆಯ ಮುಂದಿಟ್ಟನು. ಅವಳಿಗೆ ಕಾಫಿಯೂ ಬೇಡವಾಗಿತ್ತು; ಬದುಕೂ ಬೇಡವಾಗಿತ್ತು. ಜಗತ್ತು ಅವಳ ಪಾಲಿಗೆ ಶೂನ್ಯವಾಗಿತ್ತು ಚಂಚಲೆಯನ್ನು ಮೊದಲಿನಿಂದಲೂ ಶತ್ರುವಿನಂತೆ ಕಂಡಿದ್ದಳು. ಅವಳ ವಿಚಾರದಲ್ಲಿ ಆಡಬಾರದ ಮಾತುಗಳನ್ನಾಡಿದ್ದಳು. ಅವಳನ್ನು ಬಾಯಿಗೆ ಬಂದಂತೆ ಬೈದು ಹೊಡೆದಿದ್ದಳು. ಚಂಚಲೆ ಅಂದು ಪ್ರಭಾವಶಾಲಿಯಾದ ಆಗರ್ಭ ಶ್ರೀಮಂತನ ಪತ್ನಿಯಾಗಿದ್ದಳು. ತನ್ನ ಸ್ಥಿತಿ ಬೀದಿಯ ಭಿಕಾರಿಯ ಸ್ಥಿತಿಯಂತಿತ್ತು. ಚಂಚಲೆಗೆ ಶರಣಾಗುವುದಕ್ಕಿಂತ ಸಾಯುವುದೇ ಲೇಸೆಂದು ಕಮಲೆಯ ಮನಸ್ಸು ಹೇಳುತ್ತಿತ್ತು.

ಗೋಪಾಲನನ್ನು ನಿಕೃಷ್ಟ ಭಾವನೆಯಿಂದ ಕಾಣುತ್ತಿದ್ದಳು. ಆದರೆ ಮಕ್ಕಳ ಸಲುವಾಗಿ ಚಂಚಲೆಯ ಮತ್ತು ಗೋಪಾಲನ ಸಹಾಯ ಅಗತ್ಯವಾಗಿತ್ತು.

ಚಂಚಲೆ ತನ್ನ ಕೊಠಡಿಯಲ್ಲಿ ತಲೆ ಬಾಚಿಕೊಳ್ಳುತ್ತಿದ್ದಳು. ಕಮಲ ತಲೆ ಕೆದರಿಕೊಂಡು, ಚಂಚಲೆಯ ಕೊಠಡಿಗೆ ಹೋಗಿ, "ಚಂಚಲಾ ನಿನ್ನ ತಮ್ಮ ತಂಗಿಯರ ಸಲುವಾಗಿ ಹಿಂದೆ ಆದದ್ದನ್ನೆಲ್ಲಾ ಮರೆತು ನನ್ನನ್ನು ಕ್ಷಮಿಸಮ್ಮಾ" ಎಂದು ದೈನ್ಯದಿಂದ ನುಡಿದಳು.

"ಚಿಕ್ಕಮ್ಮಾ, ಆದದ್ದು ಆಗಿ ಹೋಯಿತು. ನಿಮ್ಮ ಮೇಲೆ ನನಗೆ ಹಗೆತನವಿಲ್ಲ. ಜಗತ್ತಿನಲ್ಲಿ ತಪ್ಪು ಮಾಡದವರಾರು? ನನ್ನ ತಮ್ಮ ತಂಗಿಯರ ಹೊಣೆ ನಂದು. ಅಪ್ಪ ಸಾಯುವುದಕ್ಕೆ ಮುಂಚೆ ನನಗೆ ಹೇಳಿ ಹೋಗಿದ್ದಾರೆ. ಹುಡುಗರ ಪರೀಕ್ಷೆ ಮುಗಿದ ಮೇಲೆ ನೀವೂ, ಹುಡುಗರೂ ಸಿರಗೂರಿಗೆ ಬಂದು ನಮ್ಮ ಜೊತೆಯಲ್ಲಿರಿ."

"ಚಂಚಲಾ, ನಿಂದು ದೊಡ್ಡ ಮನಸ್ಸು. ಆದರೆ ನಾ ನಿಮ್ಮನೀಗೆ ಬರಲಾರೆ. ನಾ ಮನೆ ಬಾಡಿಗೀಗೆ ಕೊಟ್ಟು ಹಿಂಬದಿ ಔಟ್‌ಹೌಸಾಗೆ ಇರ್ಬೇಕು ಅಂತ ಯೋಚನೆ ಮಾಡ್ತಾ ಇದ್ದೀನಿ. ಊರ್ಮಿಳಾ ನನ್ನ ಜೊತೀಲೆ ಇರ್ಲಿ, ಬೇಕಾದ್ರೆ ಗಂಗಾಧರನ್ನ ಪರೀಕ್ಷೆ ಆದ ಮ್ಯಾಲೆ ಕರಕೊಂಡು ಹೋಗು."

"ನಿಮಿಷ್ಟ ಬಂದ ಹಾಗೆ ಮಾಡಿ, ನೀವು ಏನೂ ಸಂಕೋಚವಿಲ್ಲದೆ ನಮ್ಮನೇಲಿ ಇರಬಹುದು. ಯೋಚನೆ ಮಾಡಿ. ಅಪ್ಪಾಜಿ ವೈಕುಂಠ ಸಮಾರಾಧನೆ ನನ್ನ ಖರ್ಚಾಗೇ

ಆಗಬೇಕು. ಅದಕ್ಕೆಲ್ಲಾ ವ್ಯವಸ್ಥೆ ಮಾಡಬೇಕು ಅಂತ ಶಾಮಸುಂದರನಿಗೆ ಹೇಳೀನಿ. ನಾ ಎರಡುದಿನ ಮುಂಚಿತವಾಗಿ ಇಲ್ಲೀಗೆ ಬರ್ತೀನಿ. ಅಲ್ಲಿಯವರೆಗೆ ನಿಮ್ಮ ಅಕ್ಕನ್ನ ಇಲ್ಲೇ ಇಟ್ಕೊಳ್ಳಿ. ನಿಮ್ಮೊಬ್ಬರಿಗೇ ಬೇಜಾರು ಆಗ್ತದೆ. ನನ್ನಿಂದ ನಿಮಗೇನಾದ್ರೂ ಸಹಾಯ ಬೇಕಾಗಿದ್ರೆ ಬರೀರಿ" ಎಂದು ಮಲತಾಯಿಗೆ ಹೇಳಿ ಹೊರಡಲು ಸಿದ್ಧಳಾದಳು.

ಚಂಚಲೆಯು ಹೊರಡುವ ಮುನ್ನ ಗಂಗಾಧರನನ್ನು ಕರೆದು, ಪರೀಕ್ಷೆ ಮುಗಿದ ನಂತರ ಅವನನ್ನು ಸಿರಗೂರಿಗೆ ಕರೆದುಕೊಂಡು ಹೋಗುವುದಾಗಿಯೂ, ಚೆನ್ನಾಗಿ ಓದಿ ಪರೀಕ್ಷೆಯಲ್ಲಿ ಉತ್ತೀರ್ಣನಾಗಬೇಕೆಂದೂ ಹೇಳಿದಳು. "ಚಂಚಲಕ್ಕಾ, ನಾ ಇಂದೇ ನಿಮ್ಮ ಜೊತೀಗೆ ಬರ್ತೀನಿ, ನಂಗಿಲ್ಲಿ ಇರೋಕೆ ಬೇಜಾರು" ಎಂದು ಗಂಗಾಧರನು ಹೇಳಿದನು.

"ಇಲ್ಲಪ್ಪಾ, ನೀನು ಈಗ ಬರೋಕೆ ಆಗೋದಿಲ್ಲ. ನಿನ್ನ ಪರೀಕ್ಷೆಗೆ ಮೂರು ತಿಂಗಳು ಮಾತ್ರ ಇದೆ. ಈ ಮಧ್ಯ ಕಾಲದಾಗೆ ಸಿರಗೂರು ಸ್ಕೂಲಾಗೆ ನಿನ್ನ ಸೇರ್ಸ್ಕೊಳ್ಳೋದು ಕಷ್ಟ. ಅಲ್ದೆ ಪಾಠನೂ ವ್ಯತ್ಯಾಸ ಆಗ್ತದೆ" ಎಂದು, ಚಂಚಲೆ ಅವನನ್ನು ಸಮಾಧಾನ ಪಡಿಸುತ್ತಿರುವಾಗ, ಗೋಪಾಲನು ಹೊರಗಡೆಯಿಂದ "ಹೊರಡು ಹೊತ್ತಾಯಿತು" ಎಂದು ಕೂಗಿದನು.

ಕಿಶೋರನಿಗೆ ಸಿರಗೂರಿನಲ್ಲಿ ತನ್ನ ಪಕ್ಷದ ಸಂಘಟನೆಯ ಕೆಲಸವಿದ್ದುದರಿಂದ ತಾನೂ ಬರುವುದಾಗಿ ಗೋಪಾಲನಿಗೆ ಹೇಳಿದನು. ಗೋಪಾಲನೂ, ಚಂಚಲೆಯೂ ಹೋಗಿ ಬರುವುದಾಗಿ ಕಮಲೆಗೆ ಹೇಳಿ ಕಾರಿನಲ್ಲಿ ಕುಳಿತರು. ಕಿಶೋರನೂ ಕಾರಿನ ಡ್ರೈವರೂ ಮುಂದುಗಡೆ ಸೀಟಿನಲ್ಲಿ ಕುಳಿತಿದ್ದರೆ, ಚಂಚಲೆಯು ಗೋಪಾಲನೂ ಹಿಂದುಗಡೆಯ ಸೀಟಿನಲ್ಲಿ ಕುಳಿತಿದ್ದರು. ಇನ್ನೇನು ಕಾರು ಹೊರಡುತ್ತಿರುವಾಗ ಗಂಗಾಧರನು "ಚಂಚಲಕ್ಕಾ, ನಾನೂ ಬರ್ತೀನಿ" ಎಂದು ಗಟ್ಟಿಯಾಗಿ ಅಳಲಾರಂಭಿಸಿದನು. ಚಂಚಲೆ ಕಾರಿನಿಂದಿಳಿದು ಹೋಗಿ ಅವನನ್ನು ಕರೆದುಕೊಂಡು ಮನೆಯೊಳಗೆ ಹೋಗಿ, ಅವನ ಪುಡಿ ಖರ್ಚಿಗೆ ಸ್ವಲ್ಪ ಹಣ ಕೊಟ್ಟು, ಪರೀಕ್ಷೆ ಮುಗಿದ ನಂತರ ಖಂಡಿತಾ ಕರೆದುಕೊಂಡು ಹೋಗುವುದಾಗಿ ಭರವಸೆ ಹೇಳಿದ ಮೇಲೆ ಅವನು ಅಳುವುದನ್ನು ನಿಲ್ಲಿಸಿದನು. ಕಾರು ಹೊರಡುತ್ತಿರುವಾಗ ಗಂಗಾಧರನು ಅರ್ಧ ಅಳು, ಅರ್ಧ ನಗು ಮುಖದಿಂದ "ಚಂಚಲಕ್ಕಾ ಹೋಗಿ ಬನ್ನಿ" ಎಂದು ಕ್ಷೀಣಧ್ವನಿಯಲ್ಲಿ ಕೂಗಿದನು.

ಕಾರು ಚಲಿಸಲಾರಂಭಿಸಿದೊಡನೆ ಚಂಚಲೆಗೆ ತನ್ನ ತಂದೆಯ ಜೀವನದ ಅನೇಕ ಘಟನೆಗಳು ನೆನಪಿಗೆ ಬರುತ್ತಲಿದ್ದವು. ತಂದೆ ತನಗಾಗಿ ಅನುಭವಿಸಿದ್ದ ಹಲವು ಕಷ್ಟಗಳನ್ನು ಒಂದೊಂದಾಗಿ ಸ್ಮರಿಸಿಕೊಳ್ಳುತ್ತಿದ್ದಳು. ಅದರ ಪರಿಣಾಮವಾಗಿ ಅವಳಿಗೆ ದುಃಖ ಉಮ್ಮಳಿಸಿ ಬರುತ್ತಿತ್ತು. ಗೋಪಾಲನೂ, ಕಿಶೋರನೂ ಎಷ್ಟು ಸಮಾಧಾನ ಹೇಳಿದರೂ ಬಹಳ ದೂರ ಅಳುತ್ತಲೇ ಇದ್ದಳು. ಕಾರು ಹದಿನೈದು ಇಪ್ಪತ್ತು ಮೈಲಿಗಳ ದೂರ ಹೋದ ನಂತರ ಅವಳು ಅತ್ತು ಅತ್ತು ಸಾಕಾಗಿ, ಗಂಡನ ಮೈಮೇಲೆ ಒರಗಿಕೊಂಡು ಕುಳಿತಿದ್ದಳು. ಅವಳ ಅಳು ನಿಂತ ಮೇಲೆ ಗೋಪಾಲನೂ, ಕಿಶೋರನೂ, ಕಮಲೆಯ

ಮತ್ತು ಅವಳ ಮಕ್ಕಳ ಭವಿಷ್ಯವನ್ನು ಕುರಿತು ಮಾತನಾಡುತ್ತಿದ್ದರು. ಮಾತಿನ ಮಧ್ಯೆ ಕಿಶೋರನೂ "ಗೋಪಾಲ್, ನೀವೂ, ನಿಮ್ಮ ಹೆಂಡತಿಯೂ ಬಹಳ ಉದಾರ ಹೃದಯದವರು. ಕಮಲ, ನಿಮಗೂ ಚಂಚಲಾ ಅವರಿಗೂ ಎಷ್ಟು ನೋಯಿಸಿದ್ದರೆಂಬುದು ನನಗೂ ಗೊತ್ತಿದೆ. ನೀವು ಅದನ್ನೆಲ್ಲಾ ಮರೆತು ಆಕೆಯ ಕಷ್ಟ ಕಾಲದಲ್ಲಿ ಆಕೆಗೆ ಸಹಾಯ ಮಾಡುತ್ತಿರುವುದು ತುಂಬಾ ಶ್ಲಾಘನೀಯ" ಎಂದು ನುಡಿದನು.

"ನಮ್ಮ ಚಿಕ್ಕಮ್ಮನಿಗೆ ಈಗ ಜ್ಞಾನೋದಯವಾದಂತೆ ಕಾಣುತ್ತದೆ. ಬೆಳಿಗ್ಗೆ ನನ್ನ ರೂಮಿಗೆ ಬಂದು ಹಿಂದೆ ನಡೆದದ್ದನ್ನೆಲ್ಲಾ ಮರೆಯಬೇಕೆಂದು ಹೇಳಿದರು. ಅಪ್ಪಾಜಿ ಬದುಕಿದ್ದಾಗ ಚಿಕ್ಕಮ್ಮ ಅವರಿಗೆ ಕೊಟ್ಟ ಕಿರುಕುಳ ಅಷ್ಟಿಷ್ಟಲ್ಲ. ಚಿಕ್ಕಮ್ಮ ಸರಿಯಾಗಿದ್ದಿದ್ದರೆ ಅಪ್ಪಾಜಿ ಇನ್ನೂ ಇಪ್ಪತ್ತು ವರ್ಷಗಳ ಕಾಲ ಬದುಕಿರುತ್ತಿದ್ದರು" ಎಂದು ಚಂಚಲೆ ನಿಟ್ಟುಸಿರು ಬಿಟ್ಟಳು.

"ನಿಮ್ಮಪ್ಪ ಪ್ರಾಮಾಣಿಕರಾಗಿದ್ದದ್ದೇ ತಪ್ಪು. ಅವರು ಮೋಸದಿಂದ ಜನರನ್ನು ಕೊಳ್ಳೆ ಹೊಡೆದು ಶ್ರೀಮಂತರಾಗಿದ್ದಿದ್ದರೆ ನಿಮ್ಮ ಚಿಕ್ಕಮ್ಮ ಅವರನ್ನು ಗೌರವಿಸಿ ಪ್ರೀತಿಸುತ್ತಿದ್ದರು. ಹೆಂಗಸರಿಗೆ ಬೇಕಾಗಿದ್ದು ನಗ, ನಾಣ್ಯ, ಸುಖ, ಸಂಪತ್ತು. ಗಂಡನ ಪ್ರಾಮಾಣಿಕತೆಯಿಂದ ಅವರಿಗೇನು ಪ್ರಯೋಜನ?" ಎಂದು ಗೋಪಾಲ ಸ್ವಲ್ಪ ಕಟುವಾಗಿ ನುಡಿದನು.

"ಇವರು, ಎಲ್ಲಾ ಹೆಂಗಸರಿಗೂ ಒಂದೇ ಬರೆಗೋಲಾಗೆ ಬರೆ ಹಾಕಲು ಹೊರಟಾರೆ" ಎಂದು ಚಂಚಲೆ ಗೊಣಗಿದಳು.

"ಈ ದೇಶದಲ್ಲಿ ಹೆಂಗಸರಿಗೆ ಸಾತ್ವಿಕ ಕೆಚ್ಚಿದ್ದಿದ್ದರೆ ಇಷ್ಟೊಂದು ಭ್ರಷ್ಟಾಚಾರ ಎಲ್ಲಿರುತ್ತಿತ್ತು? ಹಂದಿ ಅಮೇಧ್ಯವನ್ನು ತಿಂದು ಕೊಬ್ಬಿರುವಂತೆ ಕಳ್ಳ ಸಂಪಾದನೆಯಿಂದ ಕೊಬ್ಬಿರುವ ರಾಜಕಾರಣಿಗಳ, ಸರ್ಕಾರಿ ಅಧಿಕಾರಿಗಳ, ವರ್ತಕರ ಹೆಂಡತಿಯರಿಗೆ ಕಿಂಚಿತ್ತಾದರೂ ಸಾತ್ವಿಕ ಕೆಚ್ಚಿದ್ದಿದ್ದರೆ ಅವರ ಗಂಡಂದಿರ ಅನೀತಿಯ ವ್ಯವಹಾರಗಳನ್ನು ಕಿಂಚಿತ್ತಾದರೂ ಪ್ರತಿಭಟಿಸುತ್ತಿದ್ದರು. ಅವರಿಗೆ ಬೇಕಾಗಿದ್ದು ಸುಖಸಂಪತ್ತು. ಗಂಡಂದಿರು ಕೊಳ್ಳೇ ಹೊಡೆದರೂ ಪರವಾಯಿಲ್ಲ! ಲಂಚ ಹೊಡೆದರೂ ಪರವಾಯಿಲ್ಲ! ಮೋಸಮಾಡಿದರೂ ಪರವಾಯಿಲ್ಲ!"

"ಗಂಡಸರೇ ನೀತಿಗೆಟ್ಟು ಬಾಳುತ್ತಿರುವಾಗ ಅವರ ಆಶ್ರಯದಲ್ಲಿ ಬಾಳುವ ಬಡಪಾಯಿ ಹೆಂಗಸರು ಏನು ತಾನೇ ಮಾಡುತ್ತಾರೆ? ಹೆಂಗಸರಲ್ಲಿ ಆದರ್ಶವಂತರಿಲ್ಲವೇನು? ನಿಮ್ಮ ತಾಯಿ ಇಲ್ಲವೇನು? ಗೌರಿಯಿರಲಿಲ್ಲವೇನು? ಬಾಬು ಅವರ ಹೆಂಡ್ತಿ ರುಮಾದೇವಿಯವರಿರಲಿಲ್ಲವೇನು? ಎಲ್ಲರಿಗೂ ಒಂದೇ ಮಂತ್ರ ಅಂತ ಮಾತಾಡಬಾರದು" ಎಂದು ಚಂಚಲೆ ಗಂಡನಿಗೆ ಸವಾಲು ಹಾಕಿದಳು.

ಗಂಡ ಹೆಂಡಿರ ಈ ಸಂವಾದವನ್ನು ಕೇಳುತ್ತಿದ್ದ ಕಿಶೋರನು, ಮಾತನ್ನು ಬೇರೆ ವಿಷಯದ ಕಡೆಗೆ ತಿರುಗಿಸಲೋಸುಗ "ಗೋಪಾಲ್, ಹೆಂಗಸರನ್ನು ವೀಕರ್ ಸೆಕ್ಸ್

ಅಂತ ಹೇಳ್ತಾರೆ. ನಿಮ್ಮತ್ತೆ ಇದು ಸುಳ್ಳೆಂದು ಸಾಬೀತು ಮಾಡಿದ್ದಾರೆ ಅಲ್ಲವೇ?" ಎಂದು ನಗುತ್ತಾ ನುಡಿದನು.

"ನಮ್ಮತ್ತೆಯಂತಹ ಹೆಂಗಸರನ್ನು ಟರ್ಬ್ಯುಲೆಂಟ್ ಸೆಕ್ಸ್ ಎಂದು ಕರೆಯಬೇಕು" ಎಂದು ಗೋಪಾಲನು ನಗುತ್ತಾ ಕೇಳಿದನು.

ನಂತರ ಮಾತು ರಾಜಕೀಯದ ಕಡೆಗೆ ತಿರುಗಿತು. "ಮಿಸ್ಟರ್ ಗೋಪಾಲ್, ಇಂದಿರಾಗಾಂಧಿಯವರು ಲೋಕಸಭೆ ವಿಸರ್ಜನೆ ಮಾಡಿ ಹೊಸದಾಗಿ ಚುನಾವಣೆ ನಡೆಸುತ್ತಾರೆಂದು ವದಂತಿ ಇದೆ. ಅದು ನಿಜವೇನು?" ಎಂದು ಕಿಶೋರ್ ಗೋಪಾಲನನ್ನು ಪ್ರಶ್ನಿಸಿದನು.

"ಹಾಗಂತ ವದಂತಿ ಇದೆ. ಇನ್ನೂ ನಿರ್ದಿಷ್ಟವಾಗಿ ಗೊತ್ತಿಲ್ಲ. ವಿಧಾನಸಭೆಗೂ ಆಗಲೇ ಚುನಾವಣೆ ನಡೆಯುತ್ತದೆಂದು ವರ್ತಮಾನ. ಚುನಾವಣೆ ಆದರೆ ನಮ್ಮ ಕ್ರಾಂತಿಕೂಟದ ಪಾತ್ರವೇನು?"

"ನಾವಿನ್ನೂ ನಿರ್ಧಾರ ಮಾಡಿಲ್ಲ. ವಿಧಾನಸಭೆ ಚುನಾವಣೆ ನಡೆದರೆ, ಕೆಲವು ಕಡೆ ನಮ್ಮ ಉಮೇದುವಾರರನ್ನು ನಿಲ್ಲಿಸಬೇಕೆಂದು ಯೋಚಿಸುತ್ತಾ ಇದ್ದೇವೆ. ನಮ್ಮ ಚಂದ್ರಹಾಸನನ್ನೂ ಶ್ರೀಪುರ ನಗರದ ಒಂದು ಕ್ಷೇತ್ರದಿಂದ ನಿಲ್ಲಿಸಬೇಕು ಅಂತ ನನ್ನ ಮನಸ್ಸು. ಶಂಕರ ಈಗಾಗಲೇ ವಿಧಾನಸಭೆಗೆ ನಿಲ್ಲುವುದಾಗಿ ಸಾರುತ್ತಾ ಇದ್ದಾನೆ. ನೀವೇನಾದ್ರೂ ನಿಲ್ಲುವ ಯೋಚನೆ ಇದೆಯೇ ಮಿಸ್ಟರ್ ಗೋಪಾಲ್?"

"ಕಿಶೋರ್, ನನಗೆ ವೈಯಕ್ತಿಕವಾಗಿ ಚುನಾವಣೆ ಬೇಡ. ಆದರೆ ಚುನಾವಣೆ ನಡೆದರೆ ಸಿರಗೂರು ಕ್ಷೇತ್ರದಿಂದ ಲೋಕಸಭೆಗೆ ನಿಲ್ಲಬೇಕೆಂದು ನಮ್ಮ ಪಕ್ಷದವರು ನನಗೆ ಹೇಳುತ್ತಾ ಇದ್ದಾರೆ. ಇನ್ನೂ ಯೋಚಿಸಬೇಕು. ನಿಮ್ಮ ಪಕ್ಷ ನಮ್ಮ ಪಕ್ಷದೊಡನೆ ವಿಲೀನವಾಗಿದ್ದರೆ ಕ್ರಾಂತಿಸೇನೆಯನ್ನು ಹೆಸರಿಲ್ಲದಂತೆ ಮಾಡಬಹುದಾಗಿತ್ತು."

"ಅದು ಸಾಧ್ಯವಿಲ್ಲದ ಮಾತು. ನೋಡ್ತಾ ನೋಡ್ತಾ ನಿಮ್ಮ ಪಾರ್ಟಿಗೆ ನಾವು ಹ್ಯಾಗೆ ಸೇರುವುದು?"

"ನಮ್ಮ ಪಾರ್ಟಿ ಏನಾಗಿದೆ? ಕಿಶೋರ್"

"ನಾನು ಇತ್ತೀಚೆಗೆ ಕೇಳಿದ ವಿಚಾರಗಳನ್ನು ಯೋಚಿಸಿದರೆ ನಿಮ್ಮ ಪಾರ್ಟಿಯ ವಿಚಾರದಲ್ಲಿ ವಾಕರಿಕೆ ಬರುತ್ತದೆ. ನಿಮ್ಮ ಪಾರ್ಟಿಗೆ ಸೇರಿರುವ ಮುಖಂಡರು ಕೆಲವರು ಮೊದಲಿನಿಂದಲೂ ಕಳ್ಳ ಹಣದ ಕುಬೇರರ ಆಶ್ರಯದಲ್ಲಿ ರಾಜಕಾರಣ ಮಾಡುತ್ತಿದ್ದವರು. ಅವರು ಏಕ್‌ದಂ ನಿಮ್ಮ ಪಾರ್ಟಿಗೆ ಸೇರಿ ಸೋಷಿಯಲಿಸ್ಟರಾಗಿದ್ದಾರೆ. ಈ ರಾಜ್ಯದ ನಿಮ್ಮ ಮುಖಂಡರ ಇತಿಹಾಸವನ್ನು ನೋಡಿ. ಒಬ್ಬ ಮುಖಂಡ ಪಕ್ಕಾ ಫೋರ್‌ಟ್ವೆಂಟಿ. ಮೊದಲು ಅವನಿಗೆ ಬಸ್ಸಿನಲ್ಲಿ ಓಡಾಡಲೂ ಸಹ ಕಾಸಿರಲಿಲ್ಲ. ಅವನು ನಿಮ್ಮ ಪಾರ್ಟಿಗೆ ಸೇರಿ, ಸೋಷಿಯಲಿಸ್ಟ್ ಆದಮೇಲೆ ದೊಡ್ಡ ಬಂಗಲೆಯ ಮಾಲೀಕನಾಗಿ ದೊಡ್ಡ ಕಾರಿನಲ್ಲಿ ಓಡಾಡುತ್ತಾನೆ. ನಿಮ್ಮ ಇನ್ನೊಬ್ಬ ಮುಖಂಡ ಒಂದೇ ವರ್ಷದಲ್ಲಿ ಒಂದು ಕೋಟಿಯ ಒಡೆಯನಾಗಿದ್ದಾನಂತೆ. ಹಣವನ್ನು ಇಡಲು ಸರಿಯಾದ ಸ್ಥಳವಿಲ್ಲದೆ

ಬಂಧು ಬಾಂಧವರ ಹೆಸರಿನಲ್ಲಿ ಆಸ್ತಿ ಮಾಡುತ್ತಿದ್ದಾನಂತೆ. ನಿಮ್ಮ ಇನ್ನೊಬ್ಬ ಮುಖಂಡನಿಗೆ ಷಿವಾಸ್ ರೀಗಲ್, ರಾಯಲ್ ಷಲೂಟ್ ಮುಂತಾದ ವಿದೇಶೀ ವ್ಹಿಸ್ಕಿಯೇ ಬೇಕಂತೆ. ಅವನಿಗೆ ಕುಡಿತಕ್ಕೆ ದಿನಕ್ಕೆ ಐನೂರು ರೂಪಾಯಿ ಬೇಕಂತೆ. ಜೊತೆಗೆ ಪ್ರತಿವಾರ ಒಂದೊಂದು ಹೊಸ ಮಾಲು ಬೇಕಂತೆ. ಅವನಿಗೆ ಅಕ್ರಮ ಸಂಪಾದನೆ ಎಷ್ಟಿರಬೇಕೆಂಬುದನ್ನು ನೀವೇ ಯೋಚಿಸಿ."

"ಕಿಶೋರ್, ನಿಮಗೆ ಯಾರೋ ಕಟ್ಟು ಕತೆಗಳನ್ನು ಹೇಳಿರಬೇಕು."

"ಗೋಪಾಲ್, ಇವು ಕಟ್ಟುಕತೆಯಲ್ಲ. ಜನರು ಹಾದಿಬೀದಿಯಲ್ಲಿ ಆಡುವ ಮಾತು. ನನಗೇನು ನಿಮ್ಮ ಪಾರ್ಟಿಯ ಮೇಲೆ ಹೊಟ್ಟೆಕಿಚ್ಚೇ?"

"ಏನಪ್ಪಾ ನಂಬುವುದೇ ಕಷ್ಟ."

"ಪಾಪ! ನಿಮ್ಮಂತಹ ಸಾತ್ವಿಕರಿಗೆ ಈ ವಿಚಾರ ಹೇಗೆ ಗೊತ್ತಾಗುತ್ತದೆ? ನಿಮ್ಮಂತಹ ಒಳ್ಳೆಯವರಿಗೆ ನಿಮ್ಮ ಪಾರ್ಟಿಯಲ್ಲಿ ಸ್ಥಳವೇ ಇಲ್ಲ. ಅಂತೂ ಬಡಬಗ್ಗರ ಗರೀಬಿ ಹಟಾವೋ ಆಗದಿದ್ದರೂ ನಿಮ್ಮ ಪಾರ್ಟಿಗೆ ಸೇರಿರುವ ಪುಡಾರಿಗಳ ಗರೀಬಿಯಂತೂ ಹಟಾವೋ ಆಗುತ್ತಾ ಇದೆ."

ಅದುವರೆಗೆ ಸುಮ್ಮನೆ ಕುಳಿತ್ತಿದ್ದ ಚಂಚಲೆ "ಈ ಮಾತು ಇನ್ನೊಂದು ಸಾರಿ ಹೇಳಿ ಕಿಶೋರ್, ಇವರು ಅಂತಹವರ ಜೊತೆ ಸೇರ್ಕೊಂಡು ಏನೋ ದೇಶ ಉದ್ಧಾರ ಮಾಡ್ತಾರಂತೆ! ಅದೇನೋ ಫೋರ್‌ಟ್ವೆಂಟಿ ಅಂದ್ರಲ್ಲಾ, ಹಾಗಂದರೇನು?" ಎಂದಳು.

"ಫೋರ್‌ಟ್ವೆಂಟಿ ಅಂದ್ರೆ ಮೋಸಗಾರ ಅಂತ" ಎಂದು ಕಿಶೋರ್ ಅವಳಿಗೆ ತಿಳಿಸಿದನು.

"ನೀವು ಹೇಳೋದು ನಿಜ ಕಿಶೋರ್, ಹಳೇ ಕಾಂಗ್ರೆಸ್ಸಿನಲ್ಲಿದ್ದ ಕೆಲವು ಹಳೇ ಹೆಗ್ಗಣಗಳು ಹೊಸ ಕಾಂಗ್ರೆಸ್ಸಿಗೆ ನುಗ್ಗಿವೆ. ಕೆಲವು ಹಳೇ ಕಾಂಗ್ರೆಸ್ಸಿನಲ್ಲೇ ಉಳಿದುಕೊಂಡಿವೆ. ಭ್ರಷ್ಟಾಚಾರದಲ್ಲಿ ಅವನ್ನು ಇವು ಮೀರಿಸ್ತವೆ, ಇವನ್ನು ಅವು ಮೀರಿಸ್ತವೆ" ಎಂದು ಚಂಚಲೆ ಮುಖ ಗಂಟು ಹಾಕಿಕೊಂಡು ಹೇಳಿದಳು.

"ನೀ ಯಾವಾಗಲೇ ಪಾಲಿಟೀಷಿಯನ್ ಆದದ್ದು?" ಎಂದು ಗೋಪಾಲ್ ಹೆಂಡತಿಯನ್ನು ನಗುತ್ತಾ ಪ್ರಶ್ನಿಸಿದನು.

"ನಿಮ್ಮನ್ನ ಮದುವೆ ಆದಾಗ್ಲೇ. ನೀವು ಚುನಾವಣೇಗೆ ನಿಲ್ತೀನಿ ಅಂತ ನಿಮ್ಮಮ್ಮನೀಗೆ ಹೇಳಿದ್ದೀರೇನು? ಖಂಡಿತಾ ನಿಮಗೆ ಚುನಾವಣೆ ಬ್ಯಾಡ."

"ಹೆಂಗ್ಸರ ಮಾತು ಕೇಳಿ ಕಾರುಬಾರು ಮಾಡೋದು ಅಂದ್ರೆ ಯಾವ ಕೆಲ್ಸಾನೂ ಮಾಡೋಕೇ ಆಗೋದಿಲ್ಲಾ."

"ನಿಮ್ಮ ಇಂದಿರಾಗಾಂಧೀ ಹೆಂಗ್ಸಲ್ಲೇನು? ಅವರು ಹೇಳಿದ ಹಾಗೆ ಬಾಯಿ ಮುಚ್ಕೊಂಡು, ಬಾಲ ಮುದುರಿಕೊಂಡು ಕೇಳ್ತೀರಿ. ಈಗ ಮತ್ತೆ ಹೆಂಗಸರ ಮಾತು ಅಂತ ತಾತ್ಸಾರವಾಗಿ ಹೇಳ್ತಾ ಇದ್ದೀರಿ?"

"ಗೋಪಾಲ್, ನಿಮ್ಮ ಬಾಣಾನ ನಿಮ್ಮ ಹೆಂಡ್ತಿ ನಿಮಗೇ ತಿರುಗಿಸಿಬಿಟ್ರು" ಎಂದು ಕಿಶೋರ್ ತಮಾಷೆ ಮಾಡಿದನು.

ಸ್ವಲ್ಪ ಹೊತ್ತಿನಲ್ಲೇ ಕಾರು ಗೋಪಾಲನ ಮನೆಯ ಮುಂದಿನ ಅಂಗಳದಲ್ಲಿ ನಿಂತಿತು. ಕಾರಿನ ಶಬ್ದವನ್ನು ಕೇಳಿ ಅನಿಲಕುಮಾರನು ಒಳಗಡೆಯಿಂದ ಬಂದು, "ಅಜ್ಜೀ, ಅಮ್ಮ ಅಪ್ಪ ಬಂದ್ರು" ಎಂದು ಅಜ್ಜಿಗೆ ಕೂಗಿ ಹೇಳಿದನು. ಚಂಚಲೆ ಕಾರಿನಿಂದ ಕೆಳಗಿಳಿಯುತ್ತಿದ್ದಂತೆಯೇ ಅವನು ಓಡಿಹೋಗಿ ತಾಯಿಯ ಕೈಯನ್ನು ಹಿಡಿದುಕೊಂಡನು. ಚಂಚಲೆ ಮಗನನ್ನು ಬಾಚಿ ತಬ್ಬಿ ಮೇಲಕ್ಕೆತ್ತಿ ಮುದ್ದಾಡುತ್ತಿರುವಾಗ ಅನಿಲಕುಮಾರನು "ಅಮ್ಮಾ, ತಾತ, ಏನಾಯ್ತು?" ಎಂದು ಪ್ರಶ್ನಿಸಿದನು. ಅವನ ಪ್ರಶ್ನೆಗೆ ಉತ್ತರ ಹೇಳಲಾರದೆ ಚಂಚಲೆ ಅಳಲಾರಂಭಿಸಿದಳು. ಅಷ್ಟು ಹೊತ್ತಿಗೆ ಸ್ವರೂಪರಾಣಿ ಒಳಗಡೆಯಿಂದ ಬಂದವಳು ಕಿಶೋರನನ್ನು ಸ್ವಾಗತಿಸಿ ಸೊಸೆಯನ್ನು ಸಮಾಧಾನ ಪಡಿಸುತ್ತಾ ಒಳಕ್ಕೆ ಕರೆದೊಯ್ದಳು.

ಊಟವಾದ ಮೇಲೆ ಗೋಪಾಲನೂ, ಕಿಶೋರನೂ ಹೊರಗಡೆ ಜಗುಲಿಯ ಮೇಲೆ ಕುಳಿತು ಮಾತನಾಡುತ್ತಿದ್ದಾಗ, ಸ್ವರೂಪರಾಣಿ ಅಲ್ಲಿಗೆ ಬಂದು, ಮಗನನ್ನು ಕುರಿತು "ಏನೋ ಗೋಪಾಲಾ, ಪಾರ್ಲಿಮೆಂಟಿಗೆ ಎಲೆಕ್ಷನ್ನಿಗೆ ನಿಲ್ತೀಯಾ ಅಂತ ವರ್ತಮಾನ. ಹೌದೇನೊ?" ಎಂದು ಪ್ರಶ್ನಿಸಿದಳು.

"ಬಂದದ್ದೇ ತಡಾ ಸೊಸೆ ಕಂಪ್ಲೇಂಟ್ ಕೊಟ್ಟಾಯ್ತು; ಅತ್ತೆ ಎನ್‌ಕ್ವೈರಿಗೆ ಬಂದಾಯ್ತು. ನೋಡಿದಿರಾ ಕಿಶೋರ್?" ಎಂದು ಗೋಪಾಲನು ಕಿಶೋರನ ಕಡೆ ನೋಡಿ ನಕ್ಕನು.

"ಸೊಸೆ ಹೇಳಿದ್ದು ಅಂತ ನಿಂಗ್ಯಾರು ಹೇಳದ್ರೋ. ನಂಗೇನು ಅಷ್ಟೂ ಬುದ್ಧಿ ಇಲ್ಲೇನು? ನಂಗೆ ಸಮಾಚಾರ ಗೊತ್ತಾಗೋದಿಲ್ಲ ಅಂತ ಮಾಡ್ದೀಯೇನು? ಒಂದು ವೇಳೆ ಅವಳು ಹೇಳಿದ್ರೂ ತಪ್ಪೇನು?"

"ತಪ್ಪೂ ಅಂತ ಹೇಳಿದ್ನೇನಮ್ಮಾ! ಇದ್ದ ಸಂಗ್ತಿ ಹೇಳ್ದೆ."

"ನೋಡು ಖಂಡಿತಾ ನಿಂಗೆ ಎಲೆಕ್ಷನ್ ಬೇಡ. ನಾ ಈಗ್ಲೇ ಹೇಳಿರ್ತೀನಿ."

"ಚುನಾವಣೆ ನಡೆದ್ರೆ, ಈ ಕ್ಷೇತ್ರದಿಂದ ನಾನು ಲೋಕಸಭೆಗೆ ನಿಲ್ಬೇಕು ಅಂತ ನಮ್ಮ ಪಾರ್ಟಿಯವರು ಹೇಳ್ತಾರೆ ಅಂತ ಕಿಶೋರ್ ಹತ್ರ ಹೇಳ್ದೆ. ಅಷ್ಟಕ್ಕೇ ಅತ್ತೆ ಸೊಸೆ ಇಬ್ಬರೂ ಹಾರಾಡ್ತೀರಪ್ಪಾ."

"ನಿಮ್ಮ ಪಾರ್ಟಿಯವರು ಹೇಳ್ತಾರೆ, ಅವರಿಗೇನು ಆಗ್ಬೇಕು? ಕಂಡೋರ ಮಕ್ಕಳನ್ನ ಬಾವೀಗೆ ತಳ್ಳೋಕೆ? ಕಷ್ಟ ಇರೋದು ನಮ್ಗೆ. ಪಾರ್ಲಿಮೆಂಟಿನ ಚುನಾವಣೆ ಅಂದ್ರೆ ಸುಲಭಾನೇ. ದುಡ್ಡೆಷ್ಟು ಖರ್ಚು! ಊರೂರಿಗೆ ತಿರ್ಗಬೇಕು. ಸಾಲದ್ದಕ್ಕೆ ದುಷ್ಟರು ಯಾವ ಕಾಲ್ದಾಗೆ ಏನು ಮಾಡ್ತಾರೋ ಅಂತ ಭಯ. ನಿನ್ನಂತಹವರು ಚುನಾವಣೆಗೆ ನಿಲ್ಲೂ ಕಾಲ ಬಹಳ ಹಿಂದೆ ಆಯ್ತು. ಇದು ಪುಂಡರು ಪೋಕರಿಗಳ ಕಾಲ."

"ಅಮ್ಮಾ, ಹಾಗಾದ್ರೆ ಪುಂಡರು ಪೋಕರಿಗಳಿಗೇ ರಾಜಕಾರಣ ಬಿಟ್ಟು ನಮ್ಮಂತಹವರು ಮೂಲೆಗೆ ಸೇರ್ಬೇಕು ಅಂತ ತಾನೇ ನೀವು ಹೇಳೋದು?"

"ಜನರಿಗೆ ಪುಂಡ್ರು ಪೋಕರಿಗಳೇ ಬೇಕಾಗಿದ್ದಾಗ ನೀ ಏನ್ ಮಾಡೋಕೆ ಆಗ್ತದೆ?"

"ಸಜ್ಜನರೆಲ್ಲಾ ಸುಮ್ನೆ ಇದ್ರೆ ಜನ ನಿರ್ವಾಹ ಇಲ್ಲದೆ ದುರ್ಜನರಿಗೇ ಓಟು ಕೊಡ್ತಾರೆ."

"ದುರ್ಜನರನ್ನು ಗೆಲ್ಲಬೇಕಾದ್ರೆ ಸಜ್ಜನರಿಗೆ ಶಕ್ತಿ ಇರ್ಬೇಕು. ನಿಂಗೆ ಶಕ್ತಿನೂ ಇಲ್ಲ; ಯುಕ್ತಿನೂ ಇಲ್ಲ. ಲಂಚ ತಗೊಳ್ಳೋಕೂ ಬರೋದಿಲ್ಲ; ಲಂಚ ಕೊಡೋಕೂ ಬರೋದಿಲ್ಲ ಜನ ಲಂಚ ಕೊಟ್ಟೋರಿಗೆ ಓಟು ಕೊಡ್ತಾರೆ."

"ನಾ ಏನು ಅಷ್ಟು ನಾಲಾಯಕ್ಕು ಅಂತ ತಿಳಿದಿದ್ದೀರೇನು? ನಾ ಲಂಚ ಕೊಡ್ಬೇಕಾಗಿಲ್ಲ. ಈ ಡಿಸ್ಟ್ರಿಕ್ಟಾಗೆ ನನಗಿರೋ ಜನ ಬೆಂಬಲ ಇನ್ಯಾರಿಗೂ ಇಲ್ಲಮ್ಮಾ."

"ಜನಾ ಅಂತೇ ಜನಾ" ಜನ ಅಲ್ಲ, ದನ. ಜನಾ ಸರಿಯಾಗಿದ್ದಿದ್ದರೆ ಈ ದೇಶದ ರೀತೀನೆ ಬ್ಯಾರೆ ಆಗಿರ್ತಿತ್ತು. ಜನ ಆರು ಕೊಟ್ರೆ ಅತ್ತೆಕಡೆ; ಮೂರು ಕೊಟ್ರೆ ಸೊಸೆಕಡೆ. ಗೆದ್ದೆತ್ತಿನ ಬಾಲ ಹಿಡಿಯೋ ಜನ ಕಟ್ಕೊಂಡು ನೀ ಪಾಲಿಟಿಕ್ಸ್ ಮಾಡೋದು! ನೀ ಗೆದ್ದು ಬಂದ್ರೂ ತಿಂಗ್ಳಾನ್‌ಗಟ್ಲೆ ಡೆಲ್ಲೀಲಿರಬೇಕು. ನಿಂಗೆ ತೀರ್ಥ ತಗೊಂಡ್ರೆ ಸೀತ; ಮಂಗಳಾರತಿ ತಗೊಂಡ್ರೆ ಉಷ್ಣ. ನರಪೇತ್ಲ ನಾರಾಯಣ. ನೀ ಊರೂರು ತಿರಗದ್ರೆ ನಿನ್ನ ಆರೋಗ್ಯ ಏನಾಗ್ತದೆ? ಎಂದು ಸ್ವರೂಪರಾಣಿ ಹೇಳುತ್ತಿರುವಾಗ ಒಳಗಡೆಯಿಂದ ಚಂಚಲೆ ಬಂದಳು.

ಗೋಪಾಲನು ಚಂಚಲೆ ಕಡೆಗೆ ನೋಡಿ "ಬಂದ ಬಂದವಳೇ ಚಾಡಿ ಚುಚ್ಚಿ ಮೆತ್ತಗೆ ಒಳಗೆ ಕೂತಿದ್ದೆ" ಎಂದು ನಗುತ್ತಾ ಹೆಂಡತಿಯ ಕಡೆ ನೋಡಿದನು.

"ನೀವು ಹೇಳೋದು ನನಗೆ ಅರ್ಥ ಆಗೋದಿಲ್ಲ. ಅದೇನು?" ಎಂದು ಚಂಚಲೆ ಗಂಡನನ್ನು ಪ್ರಶ್ನಿಸಿದಳು.

"ಪಾಪ! ನಿಂಗೆಲ್ಲಿ ಅರ್ಥ ಆಗ್ತದೆ!" ಎಂದು ಗೋಪಾಲನು ವ್ಯಂಗ್ಯವಾಗಿ ಹೇಳಿದನು.

"ಪಾಪ ಅವಳೇನು ಮಾಡಿದ್ಲು ಅಂತ ಅವಳನ್ನು ಚುಡಾಯಿಸ್ತಿಯೋ ನೀನು? ನಾ ಅವಳಿಂದ ಹೇಳ್ಸಿಕೊಂಡು ನಿಂಗೆ ಹೇಳ್ಬೇಕೇನು? ನಂಗೇನು ಅಷ್ಟು ಬುದ್ಧಿ ಇಲ್ಲೇನು? ನಿಂಗೇನು ಬಹಳ ಸುಲಭ, ನಂಗಿರುವ ನೀನೊಬ್ಬನೇ ಮಗ. ಹಗಲೂ ಇರಳೂ ನಿಂದೇ ಯೋಚನೆ ನಂಗೆ."

"ಅಮ್ಮಾ, ನೀವ್ಯಾಕೆ ಇಷ್ಟೊಂದು ರಾದ್ಧಾಂತ ಎಬ್ಸೀರಿ? ಎಲೆಕ್ಷನ್ ಯಾವಾಗ ನಡೀತದೋ ಇನ್ನೂ ಗೊತ್ತಿಲ್ಲ. ನಡೆದಾಗ ನೋಡೋಣ. ಈಗ ಸದ್ಯ ಸುಮ್ನೆ ಇರಿ. ನಮಕೈಯಾಗೆ ಏನಿದೆ? ಎಲ್ಲಾ ಭಗವಂತನ ಇಚ್ಛೆ."

"ಭಗವಂತ, ನಮ್ಮನ್ನ ನಾವು ರಕ್ಷಣೆ ಮಾಡ್ಕೊಳ್ಳೋಕೆ ಬುದ್ಧಿ ಕೊಟ್ಟಾನೆ. ಆ ಬುದ್ಧಿ ಉಪಯೋಗಿಸಿಕೊಳ್ಳದಿದ್ದರೆ ಭಗವಂತ ಏನ್ಮಾಡ್ತಾನೆ?" ಎಂದು ಸ್ವರೂಪರಾಣಿ ಹೇಳುತ್ತಿರುವಾಗ, ಕಿಶೋರನು ತನಗೆ ಹೊತ್ತಾಯಿತೆಂದು ಹೊರಡಲುದ್ಯುಕ್ತನಾದನು. ಸ್ವರೂಪರಾಣಿ ಟೀ ಮಾಡುವುದಕ್ಕಾಗಿ ಒಳಗೆ ಹೋದಳು. ಅಲ್ಲಿಗೆ ತಾಯಿ ಮಗನ ಸಂಭಾಷಣೆ ಮುಕ್ತಾಯವಾಯಿತು. ಕಿಶೋರನು ಗೋಪಾಲನನ್ನು ಕುರಿತು "ಮಿಸ್ಟರ್ ಗೋಪಾಲ್ ನಿಮ್ಮಿಬ್ಬರ ಡೈಲಾಗ್ ಚೆನ್ನಾಗಿತ್ತು" ಎಂದು ಹೇಳಿದನು. ಟೀ ಆದಮೇಲೆ

ಕಿಶೋರನು ಹೊರಟುಹೋದನು. ಸ್ವರೂಪರಾಣಿಗೆ ಅಂತರಂಗವಾಗಿ ತನ್ನ ಮಗನು ಚಂದ್ರಹಾಸ ಮತ್ತು ಕಿಶೋರ ಇವರುಗಳ ಸಹವಾಸದಲ್ಲಿರುವುದು ಸಮಾಧಾನವಿರಲಿಲ್ಲ.

"ಗೋಪಾಲಾ, ಈ ಚಂದ್ರಹಾಸ, ಈ ಕಿಶೋರ ಇವರ ಸಹವಾಸ ನಿಂಗೆ ಬೇಕಾಗಿರಲಿಲ್ಲ. ಇವರ ಸಂಗ ಎಲ್ಲಿಗೆ ಹೋಗಿ ಎಲ್ಲಿಗೆ ಮುಟ್ಟುತ್ತದೋ? ಇನ್ನಾದರೂ ಅವರಿಂದ ಸ್ವಲ್ಪ ದೂರ ಇರು" ಎಂದು ಸ್ವರೂಪರಾಣಿ ಮಗನಿಗೆ ಮುನ್ನೆಚ್ಚರಿಕೆಯ ಮಾತನ್ನು ಹೇಳಿದಳು.

೧೪

ರಾಜ್ಯದ ರಾಜಕೀಯ ಮತ್ತಷ್ಟು ಹದಗೆಟ್ಟು ಹೋಗಿತ್ತು. ಅರಾಜಕತೆ ಮಿತಿಮೀರಿ ಹೋಗಿತ್ತು. ಅಹಿತ ಪೈಪೋಟಿ ಭಯಾನಕ ರೂಪವನ್ನು ತಾಳಿತ್ತು. ಮನೆಗೆ ಬೆಂಕಿ ಬಿದ್ದು ಉರಿಯುತ್ತಿರುವಾಗ ಕೈಗೆ ಸಿಕ್ಕ ಸಾಮಾನುಗಳನ್ನು ದೋಚುತ್ತಿರುವ ಕಳ್ಳರಂತೆ ಅಧಿಕಾರ ಸ್ಥಾನಗಳಲ್ಲಿದ್ದ ಕಾಂಗ್ರೆಸ್ಸಿಗರು ನಿಶ್ಚಿಂತೆಯಿಂದ ಅಧಿಕಾರ ಲಾಲಸೆಯಲ್ಲಿ ಅಥವಾ ಹಣ ಸಂಪಾದನೆಯಲ್ಲಿ ಮಗ್ನರಾಗಿದ್ದರು. ಜನರಿಗೆ ಕಾನೂನಿನ ರಕ್ಷಣೆಯೇ ಇರಲಿಲ್ಲ. ಉಗ್ರಗಾಮಿ ಪಕ್ಷಗಳು ತೀವ್ರ ಪೈಪೋಟಿಗೊಳಗಾಗಿ, ಒಂದು ಪಕ್ಷದವರು ಇನ್ನೊಂದು ಪಕ್ಷದವರನ್ನು ಕೊಲ್ಲುತ್ತಿದ್ದರು. ಭ್ರಷ್ಟಾಚಾರ, ದುರಾಡಳಿತ, ಬಡತನ, ನಿರುದ್ಯೋಗ, ಅವಶ್ಯಕ ಪದಾರ್ಥಗಳ ಅಭಾವ ಮುಂತಾದವುಗಳ ದೆಸೆಯಿಂದ ಜನರಲ್ಲಿ ದಿನೇ ದಿನೇ ಅತೃಪ್ತಿ ಹೆಚ್ಚಾಗುತ್ತಿತ್ತು. ಪ್ರಜಾಸತ್ತಾತ್ಮಕ ರೀತಿನೀತಿಗಳಿಂದ ಈ ದೇಶವನ್ನು ಸರಿಪಡಿಸುವುದು ಸಾಧ್ಯವಿಲ್ಲವೆಂದು ಅಲ್ಲಲ್ಲಿ ಜನರು ವಾದಿಸುತ್ತಿದ್ದರು. ಈ ಪರಿಸ್ಥಿತಿಯನ್ನುಪಯೋಗಿಸಿ ಕೊಂಡು ಕ್ರಾಂತಿಸೇನೆಯವರು ರಕ್ತಪಾತದಿಂದಲೇ ಬಡಬಗ್ಗರ ಉದ್ಧಾರ ಸಾಧ್ಯವೆಂಬ ಉದ್ಗಾರದಲ್ಲಿ ತೊಡಗಿದ್ದರು.

ರಾಜ್ಯದ ಉಗ್ರಗಾಮಿ ಪಕ್ಷಗಳ ಪೈಕಿ ಕ್ರಾಂತಿಸೇನೆಯೇ ಪ್ರಬಲ ಪಕ್ಷವಾಗಿತ್ತು. ಕ್ರಾಂತಿಸೇನೆಯ ಹುಳುಕು ವಿದ್ಯಾವಂತರನೇಕರಿಗೆ ಗೊತ್ತಾಗಿದ್ದರೂ, ಆ ಹುಳುಕನ್ನರಿಯದ ಅವಿದ್ಯಾವಂತರು ಕ್ರಾಂತಿಸೇನೆಯಿಂದಲೇ ತಮ್ಮ ಮುಕ್ತಿ ಎಂದು ಭಾವಿಸಿದ್ದರು. ಅವರ ದೃಷ್ಟಿಯಲ್ಲಿ ಶಂಕರನು ಆದರ್ಶ ಕ್ರಾಂತಿಪುರುಷನಾಗಿದ್ದನು. ತನಗಾಗದವರನ್ನೂ, ಕ್ರಾಂತಿಸೇನೆಯ ವಿರೋಧಿಗಳನ್ನೂ ಕೊಲ್ಲುವುದು ಅವನ ಕಾರ್ಯಾಚರಣೆಯ ಪ್ರಥಮ ಸೂತ್ರವಾಗಿತ್ತು. ಹಣಕ್ಕಾಗಿ ಶ್ರೀಮಂತರನ್ನು ಕೊಲ್ಲುವುದೂ, ಲೂಟಿ ಮಾಡುವುದೂ, ಅವನ ಎರಡನೆಯ ಸೂತ್ರವಾಗಿತ್ತು. ರಾಜ್ಯದಲ್ಲಿ ಅರಾಜಕತೆಯನ್ನುಂಟುಮಾಡಿ ನೆರೆಹೊರೆಯ ಶತ್ರುರಾಷ್ಟ್ರಗಳ ಸಹಾಯದಿಂದ ರಾಜ್ಯವನ್ನು ಸ್ವತಂತ್ರ ರಾಷ್ಟ್ರವನ್ನಾಗಿ ಸಾರಿ, ಅದರ ಸರ್ವಾಧಿಕಾರಿಯಾಗುವುದು ಅವನ ಅಂತಿಮ ಗುರಿಯಾಗಿತ್ತು. "ನೆತ್ತರ ಪ್ರವಾಹದಲ್ಲೇ ಕ್ರಾಂತಿಯ ದೋಣಿ ಸಾಗಬೇಕು" ಎಂದು ಅವನು ತನ್ನ ಅನುಯಾಯಿಗಳನ್ನು ಹುರಿದುಂಬಿಸುತ್ತಿದ್ದನು.

ಕ್ರಾಂತಿಯ ಸೋಗಿನಲ್ಲಿ ಕ್ರಾಂತಿಸೇನೆಯವರು ನಡೆಸುತ್ತಿದ್ದ ಭಯಾನಕ ರಾಕ್ಷಸೀ ಕೃತ್ಯಗಳಿಂದ ರಾಜ್ಯದ ಕೆಲವು ಕಡೆಗಳಲ್ಲಿ ಜನರು ಹೆದರಿ ಹೀಕರಿಸಿ ಹೋಗಿದ್ದರು. ಕೆಲವು ಊರುಗಳು ಕ್ರಾಂತಿಸೇನೆಯವರ ಪುಂಡಾಟಿಕೆಯಿಂದ ಸ್ಮಶಾನ ಸದೃಶವಾಗಿದ್ದವು. ಜನರು ತಮ್ಮ ಮನೆಗಳನ್ನು ಬಿಟ್ಟು ಹೊರಗಡೆ ಹೋಗಲು ಸಹ ಅಂಜುತ್ತಿದ್ದರು. ಕ್ರಾಂತಿಸೇನೆಯನ್ನು ತ್ಯಜಿಸಿ ಹೋಗಿದ್ದ "ದ್ರೋಹಿ"ಗಳ ವಿಚಾರದಲ್ಲಿ ಶಂಕರನೂ, ಅವನ ಆಪ್ತ ದಳವಾಯಿಗಳೂ ಅತ್ಯಂತ ಕಠಿಣ ನೀತಿಯನ್ನು ಅನುಸರಿಸುತ್ತಿದ್ದರು.

ಕ್ರಾಂತಿಸೇನೆಯ ಅಮಾನುಷ ಕೃತ್ಯಗಳಿಂದ ಸಿದ್ಧಾನಂದರು ಬಹಳ ನೊಂದು ಹೋಗಿದ್ದರು. ಪ್ರತಿದಿನವೂ ಅವರ ಆಶ್ರಮಕ್ಕೆ ಬರುತ್ತಿದ್ದ ನೂರಾರು ಜನ ಭಕ್ತರು ಕ್ರಾಂತಿಸೇನೆಯ ನೂರಾರು ರಾಕ್ಷಸೀ ಕೃತ್ಯಗಳನ್ನು ಅವರಿಗೆ ವರದಿ ಮಾಡುತ್ತಿದ್ದರು. ಆ ಕೃತ್ಯಗಳನ್ನು ಕೇಳಿ ಅವರ ಸಾತ್ವಿಕ ರೋಷ ಕೆರಳಿ ಹೋಗಿತ್ತು. ಕ್ರಾಂತಿಸೇನೆಯ ಉಪಟಳವನ್ನು ನಿಲ್ಲಿಸುವುದು ಸರ್ಕಾರದಿಂದ ಸಾಧ್ಯವಿಲ್ಲವೆಂದು ಅವರು ಮನಗಂಡಿದ್ದರು. ತಾವು ಲೌಕಿಕ ವ್ಯವಹಾರವನ್ನು ತ್ಯಜಿಸಿ ನಿರ್ಲಿಪ್ತರಾಗಿ ಭಗವಂತನ ಧ್ಯಾನದಲ್ಲಿ ನಿರತರಾಗಿದ್ದರೂ ದುರ್ಜನರಿಂದ ಸಜ್ಜನರಿಗಾಗುತ್ತಿದ್ದ ತೊಂದರೆಗಳನ್ನು ನಿವಾರಿಸುವುದು ತಮ್ಮ ಕರ್ತವ್ಯವೆಂದು ಭಾವಿಸಿ, ಪ್ರತಿದಿನವೂ ತಮ್ಮ ಬಳಿಗೆ ಬರುತ್ತಿದ್ದ ಭಕ್ತವೃಂದಕ್ಕೆ ಧರ್ಮ ಸೂಕ್ಷ್ಮವನ್ನು ಬೋಧಿಸುವುದರ ಜೊತೆಗೆ ಕ್ರಾಂತಿಸೇನೆಯ ವಿರುದ್ಧ ಏನಾದರೂ ಸೂಕ್ತ ಕ್ರಮಕೈಗೊಳ್ಳಬೇಕೆಂದು ಬೋಧಿಸುತ್ತಿದ್ದರು. ಶಂಕರನೂ, ಅವನ ಸೇನೆಯವರೂ, ಕ್ರಾಂತಿಯ ಪೋಷಾಕನ್ನು ಹಾಕಿದ ಸ್ವಾರ್ಥಸಾಧಕ ಕೊಲೆಗಡುಕರೆಂದೂ, ಅಂತಹವರಿಗೆ ಬೆಂಬಲ ನೀಡುವುದು ಪಾಪವೆಂದೂ ಹೇಳುತ್ತಿದ್ದರು.

ರಾಜ್ಯದಲ್ಲಿ ಶಂಕರನ ವಿರುದ್ಧ ಗಟ್ಟಿಯಾಗಿ ಮಾತನಾಡಲೂ ಸಹ ಜನರು ಅಂಜುತ್ತಿದ್ದಾಗ, ಸಿದ್ಧಾನಂದರು ಶಂಕರನ ವಿರುದ್ಧ ಒಂದು ದೊಡ್ಡ ಪ್ರಚಾರವನ್ನು ಆರಂಭಿಸಿದ್ದು ಅನೇಕರಿಗೆ ಆಶ್ಚರ್ಯವನ್ನುಂಟು ಮಾಡಿತ್ತು. "ಆ ದುಷ್ಟನ ವಿಚಾರ ಈ ಸಾಧುಗಳಿಗೆ ಬೇಡವಾಗಿತ್ತು" ಎಂದು ಕೆಲವರು ಆಡಿಕೊಳ್ಳುತ್ತಿದ್ದರು. ಒಂದು ದಿನ, ಅವರ ಭಕ್ತರ ಪೈಕಿ ಅಗ್ರಗಣ್ಯರಾದವರು ಕೆಲವರು ಒಟ್ಟಾಗಿ ಅವರಲ್ಲಿಗೆ ಹೋಗಿ, "ಆ ದುಷ್ಟನನ್ನು ಕೆಣಕಿದವರು ಬದುಕಿ ಉಳಿಯುವುದೇ ಕಷ್ಟ. ತಾವು ಸುಮ್ಮನಿದ್ದರೆ ವಾಸಿ" ಎಂದು ಅವರಿಗೆ ಹೇಳಿದರು.

"ಅದಕ್ಕಾಗಿಯೇ ನಾನು ಅವನನ್ನು ಕೆಣಕುತ್ತಿದ್ದೇನೆ. ನಾನು ಜೀವಗಳ್ಳ ಸಾಧುವಲ್ಲ. ನಾನು ಸದಾ ಸಾಯಲು ಸಿದ್ಧನಾಗಿರುವವನು. ನನ್ನಂತಹವರು ಅಂತಹ ದುಷ್ಟನ ವಿರುದ್ಧ ಕ್ರಮ ಕೈಗೊಳ್ಳದಿದ್ದರೆ ಇನ್ನಾರು ಕೈಗೊಳ್ಳುತ್ತಾರೆ?" ಎಂದು ಸಿದ್ಧಿ ಮಹಾರಾಜರು ಆ ಭಕ್ತರಿಗೆ ಹೇಳಿದ್ದರು.

ಸಿದ್ಧಾನಂದರಿಗೆ ಏನೋ ಕೇಡು ಕಾದಿದೆಯೆಂದು ಅವರ ಭಕ್ತರನೇಕರು ತಿಳಿದಿದ್ದರು. ಆದರೆ ಸಿದ್ಧಾನಂದರು, ಪರಿಣಾಮವನ್ನು ಲೆಕ್ಕಿಸದೆ, ಶಂಕರನ ಮೇಲೆ ಪ್ರಬಲ ಪ್ರಚಾರವನ್ನು ಕೈಗೊಂಡಿದ್ದರು. ಈ ವಿಚಾರ ಶಂಕರನಿಗೆ ಗೊತ್ತಾಗಿ, ಅವನು ಬಹಿರಂಗವಾಗಿ ತನ್ನ

ಭಾಷಣಗಳಲ್ಲಿ "ಸಿದ್ಧಿ ಮಹಾರಾಜನೊಬ್ಬ ಕಪಟ ಸನ್ಯಾಸಿ, ಶ್ರೀಮಂತರ ಕೈಬೊಂಬೆ; ಅವನ ಮಾತನ್ನು ಯಾರೂ ಕೇಳಬಾರದು; ಅವನ ಆಶ್ರಮಕ್ಕೆ ಯಾರೂ ಹೋಗಬಾರದು" ಎಂದು ಸಾರುತ್ತಿದ್ದನು. ಸಿದ್ಧಾನಂದರು ಆತ್ಮ ಸಾಕ್ಷಾತ್ಕಾರವನ್ನು ಪಡೆದಿದ್ದ ಮಹಾಯೋಗಿ ಎಂದು ಜನಸಾಮಾನ್ಯರ ನಂಬಿಕೆಯಾಗಿತ್ತು. ಆದ್ದರಿಂದ ಶಂಕರನ ಭಾಷಣಗಳಿಂದ ಆಶ್ರಮಕ್ಕೆ ಹೋಗುವವರ ಸಂಖ್ಯೆಯೂ ಕಡಿಮೆಯಾಗಿರಲಿಲ್ಲ; ಜನರಿಗೆ ಅವರಲ್ಲಿದ್ದ ಗೌರವ ನಂಬಿಕೆಗಳೂ ಕಡಿಮೆಯಾಗಲಿಲ್ಲ. ಬರೀ ಭಾಷಣಗಳಿಂದ ಆ ಸಾಧುವಿನ ಸೊಲ್ಲಡಗಿಸುವುದು ಸುಲಭವಲ್ಲವೆಂದು ಶಂಕರನು ಮನಗಂಡನು. "ಆ ಕಳ್ಳ ಸಾಧುವಿನ ಅಪಪ್ರಚಾರಕ್ಕೆ ಅವನ ಕೊಲೆಯೇ ಸಿದ್ಧೌಷದ" ಎಂದು ಮನಸ್ಸಿನಲ್ಲಿಯೇ ನಿರ್ಧಾರ ಮಾಡಿ, ಭೋಲಾನಾಥ್ ಮತ್ತು ಇಸ್ಮೇಯಿಲ್ ಇವರುಗಳನ್ನು ಬರಮಾಡಿಕೊಂಡು ಅವರೊಡನೆ ಸಮಾಲೋಚನೆ ಮಾಡಿದನು. ಇಸ್ಮೇಯಿಲನು "ಇದೇನು ಮಹಾ ದೊಡ್ಡ ಕೆಲಸ? ನಮಗೆ ಬಿಡಿ" ಎಂದು ಹೇಳಿದನು.

"ನೀವು ತಿಳಿದಿರುವಷ್ಟು ಸುಲಭವಾದ ಕೆಲಸವಲ್ಲ. ನಮ್ಮ ಸೇನೆಯಲ್ಲಿಯೂ ಮೂಢನಂಬಿಕೆಯ ಅವನ ಮೂಢ ಭಕ್ತರು ಕೆಲವರು ಇದ್ದಾರೆಂದು ನನಗೆ ಗೊತ್ತಾಗಿದೆ. ನನ್ನ ನಾಸ್ತಿಕವಾದ ಅವರ ತಲೆಗೆ ಇನ್ನೂ ಅಂಟಿಯೇ ಇಲ್ಲ. ಬಹಳ ಎಚ್ಚರಿಕೆಯಿಂದ ಕಾರ್ಯ ಸಾಧನೆಯಾಗಬೇಕು. ನಮ್ಮ ಸಿಪಾಯಿಗಳಿಗೆ ಎಲ್ಲಿಗೆ ಹೋಗ್ತೀವಿ ಅಂತ ಮುಂಚೆ ಗೊತ್ತಾಗಬಾರದು. 'ಯಾವುದೋ ದೊಡ್ಡ ಷಿಕಾರಿ, ಕೈತುಂಬಾ ಭಕ್ಷೀಸ್ ಸಿಗ್ತದೆ' ಅಂತ ಹೇಳಿ, ರಾತ್ರಿ ಅವರನ್ನು ಕರೆದುಕೊಂಡು ಹೋಗಬೇಕು" ಎಂದು ಶಂಕರನು ಅವರಿಬ್ಬರಿಗೆ ಆಜ್ಞಾಪಿಸಿದನು.

ಮರುದಿನ ರಾತ್ರಿ ಭೋಲಾನಾಥ್, ಇಸ್ಮೇಯಿಲ್ ಇವರ ನೇತೃತ್ವದಲ್ಲಿ ಸುಮಾರು ಇಪ್ಪತ್ತೈದು ಜನ ಕ್ರಾಂತಿಸೇನೆಯವರ ತಂಡ ಜೀಪಿನಲ್ಲಿ ಮತ್ತು ಲಾರಿಯಲ್ಲಿ ಹೊರಟಿತು. ಮುಂದುಗಡೆ ಜೀಪಿನಲ್ಲಿ ಭೋಲಾನಾಥ್ ಮತ್ತು ಇಸ್ಮೇಯಿಲ್ ಕುಳಿತಿದ್ದರು. ಹಿಂದುಗಡೆ ಲಾರಿಯಲ್ಲಿ ಉಳಿದವರು ಹಿಂಬಾಲಿಸಿ ಹೋಗುತ್ತಿದ್ದರು. ಮುಂದಿದ್ದ ಜೀಪಿನ ಡ್ರೈವರ್ ಇಸ್ಮೇಯಿಲನನ್ನು ಕುರಿತು "ಯಾವ ಕಡೆಗೆ" ಎಂದು ಪ್ರಶ್ನಿಸಿದನು.

"ಶ್ರೀದೇವಿ ಘಾಟಿಯ ರಸ್ತೆಯನ್ನು ಹಿಡಿದು, ಹೋಗು. ಇಂದು ದೊಡ್ಡ ಷಿಕಾರಿ, ದೊಡ್ಡ ಭಕ್ಷೀಸ್" ಎಂದು ಇಸ್ಮೇಯಿಲ್ ಅವನಿಗೆ ಹೇಳಿದನು. ಘಾಟಿಯ ಹತ್ತಿರ ಬಂದಾಗ ರಾತ್ರಿ ಸುಮಾರು ಎರಡು ಗಂಟೆಯಾಗಿರಬಹುದು. ಜೀಪಿನ ಡ್ರೈವರ್ ಪುನಃ "ಮುಂದೆಲ್ಲಿಗೆ?" ಎಂದು ಪ್ರಶ್ನಿಸಿದನು. ಇಸ್ಮೇಯಿಲ್ "ನಿನಗ್ಯಾಕೆ? ಹೋಗು, ನಾನು ಹೇಳ್ತೀನಿ" ಎಂದು ಹೇಳಿದನು. ಜೀಪು ಘಾಟಿಯನ್ನು ದಾಟಿದ ನಂತರ "ಆಶ್ರಮದ ಹಾದಿಯಲ್ಲಿ ಹೋಗು" ಎಂದು ಇಸ್ಮೇಯಿಲ್ ಡ್ರೈವರಿಗೆ ಆಜ್ಞಾಪಿಸಿದನು.

"ಅಲ್ಲಿಂದ ಮುಂದೆಲ್ಲಿ? ಮುಂದೆ ರಸ್ತೆಯೇ ಇಲ್ಲವಲ್ಲ" ಎಂದು ಡ್ರೈವರ್ ಹೇಳಿದನು.

"ನಾ ಹೇಳ್ದಲ್ಲಿ ಹೋಗಯ್ಯಾ. ನಿನಗ್ಯಾಕೆ ಪಾರುಪತ್ತೆ?" ಎಂದು ಇಸ್ಮೇಯಿಲ್ ಡ್ರೈವರನನ್ನು ದಬಾಯಿಸಿದನು.

ಡ್ರೈವರಿಗೆ ಇಸ್ಮೇಯಿಲ್‌ನ ಅಹಂಕಾರದ ಮಾತುಗಳಿಂದ ಸ್ವಲ್ಪ ಬೇಜಾರಾಯಿತು. ಸ್ವಲ್ಪ ದೂರ ಹೋದ ನಂತರ ಇಸ್ಮೇಯಿಲನೂ, ಭೋಲನೂ ಏನೋ ಪಿಸುಮಾತಿನಲ್ಲಿ ಸಂಭಾಷಣೆ ನಡೆಸುತ್ತಿದ್ದರು. ಡ್ರೈವರ್ ಕಿವಿಗೊಟ್ಟು ಅದನ್ನು ಕೇಳುತ್ತಿದ್ದನು. ಇಸ್ಮೇಯಿಲನು ಭೋಲಾನಾಥನನ್ನು ಕುರಿತು, "ಆ ಸಾಧು ಹೇಗಿದ್ದಾನೆ? ನಾ ಅವನ್ನ ನೋಡಿಲ್ಲ. ನೀ ನೋಡಿದ್ದೀಯಾ?" ಎಂದು ಕೇಳುತ್ತಿದ್ದನು. "ನಾನೂ ಅವನ್ನ ನೋಡಿಲ್ಲ. ಅಲ್ಲಿದ್ದ ಎಲ್ಲಾ ಸಾಧುಗಳನ್ನೂ ಕೊಂದರೆ ಅವರ ಜೊತೆಯಲ್ಲಿ ಅವನೂ ಸಾಯ್ತಾನೆ" ಎಂದು ಭೋಲಾನಾಥನು ಹೇಳುತ್ತಿದ್ದನು. ಇಸ್ಮೇಯಿಲ್ ಹೇಳಿದ್ದ "ದೊಡ್ಡ ಷಿಕಾರಿ" ಏನೆಂಬುದು ಜೀಪಿನ ಡ್ರೈವರಿಗೆ ಕ್ಷಣ ಮಾತ್ರದಲ್ಲಿ ಹೊಳೆಯಿತು. ಜೀಪನ್ನು ತಕ್ಷಣ ನಿಲ್ಲಿಸಿ, "ಸಿದ್ಧಿ ಮಹಾರಾಜರ ಖೂನಿಗೆ ನೀವು ಹೊರಟಿದ್ದರೆ ನಾನು ನಿಮ್ಮ ಜೊತೆಗೆ ಬರಲಾರೆ, ನಾನು ಇಲ್ಲಿಂದಲೇ ವಾಪಸು" ಎಂದು ಗಡಸು ಧ್ವನಿಯಲ್ಲಿ ಹೇಳಿದನು.

"ಸಿದ್ಧಿಮಹಾರಾಜ ಒಬ್ಬ ಖೋಟಾ ಸಾಧು, ಶ್ರೀಮಂತರ ಬಾಲಬಡುಕ. ನಮ್ಮ ಸೇನೆಯ ಮೇಲೆ ಅಪಪ್ರಚಾರ ಮಾಡ್ತಾ ಇದ್ದಾನೆ" ಎಂದು ಭೋಲಾನಾಥ ಡ್ರೈವರಿಗೆ ಹೇಳಿದನು.

"ಸಿದ್ಧಿಮಹಾರಾಜರು ಬಡಬಗ್ಗರ ದೇವರು. ಅಂತಹವರನ್ನು ಕೊಲ್ಲುವುದು ಪಾಪ" ಎಂದು ಡ್ರೈವರ್ ಹೇಳಿದನು.

"ನಿನ್ನ ಮೇಲೆ ಜನರಲ್ ಶಂಕರ್ ಅವರಿಗೆ ರಿಪೋರ್ಟ್ ಮಾಡಬೇಕಾಗುತ್ತದೆ ಹುಷಾರ್" ಎಂದು ಇಸ್ಮೇಯಿಲ್ ಗದರಿಸಿದನು.

"ರಿಪೋರ್ಟ್ ಮಾಡಿ. ಬೇಕಾದರೆ ನೀವಿಬ್ಬರೂ ಸೇರಿ ನನ್ನ ಈಗಲೇ ಕೊಂದುಬಿಡಿ. ನಾನು ಖಂಡಿತಾ ಈ ಕೆಲಸಕ್ಕೆ ನಿಮ್ಮ ಜೊತೆಗೆ ಶರೀಕಾಗೋದು ಸಾಧ್ಯವೇ ಇಲ್ಲ" ಎಂದು ಜೀಪಿನ ಡ್ರೈವರ್ ಅವರಿಗೆ ಸ್ಪಷ್ಟವಾಗಿ ಹೇಳಿದನು.

ಅಷ್ಟರಲ್ಲಿ ಹಿಂದೆ ಬರುತ್ತಿದ್ದ ಲಾರಿಯೂ ಅಲ್ಲಿಗೆ ಬಂತು. ಲಾರಿಯಲ್ಲಿದ್ದವರು ಕೆಳಗಿಳಿದು, ಜೀಪು ನಿಂತಿರುವ ಕಾರಣವನ್ನು ಕೇಳಿದರು. ಜೀಪಿನ ಡ್ರೈವರ್ ಎಲ್ಲರಿಗೂ ಕೇಳುವಂತೆ "ನಾವು ಹೋಗುತ್ತಿರುವುದು ಸಿದ್ಧಿಮಹಾರಾಜ ಕೊಲೆಗಂತೆ. ನಾನು ಬರುವುದಿಲ್ಲ. ನೀವು ಬೇಕಾದ್ರೆ ಹೋಗಬಹುದು. ಪಾಪ! ಅವರು ದೇವರಂತಹ ಮನುಷ್ಯ" ಎಂದು ಹೇಳಿದನು. ಅವನ ಮಾತುಗಳನ್ನು ಕೇಳಿದ ಲಾರಿಯ ಡ್ರೈವರ್ "ನಾನೂ ಬರೋದಿಲ್ಲ. ಅವರನ್ನು ಕೊಲ್ಲೋದು ನ್ಯಾಯವಲ್ಲ. ಅವರೇನು ಶ್ರೀಮಂತರಲ್ಲ" ಎಂದು ಹೇಳಿದನು. ಡ್ರೈವರುಗಳಿಬ್ಬರ ಮಾತುಗಳನ್ನು ಕೇಳಿದ ಇತರರಲ್ಲಿ ವಾಗ್ವಾದ ಪ್ರಾರಂಭವಾಯಿತು. ಕೆಲವರು ಸಿದ್ಧಿಮಹಾರಾಜರನ್ನು ಪಕ್ಷದ ಹಿತದೃಷ್ಟಿಯಿಂದ ಕೊಲ್ಲುವುದೇ ಸರಿ ಎಂದು ವಾದಿಸತೊಡಗಿದರು. ಕೆಲವರು ಅವರನ್ನು ಕೊಲ್ಲುವುದು ಸರಿಯಲ್ಲವೆಂದು ವಾದಿಸತೊಡಗಿದರು.

ಈ ವಾಗ್ವಾದವನ್ನು ಕೇಳುತ್ತಿದ್ದ ಇಸ್ಮೇಯಿಲ್ ಅಧಿಕಾರವಾಣಿಯಿಂದ, "ಆ ಸಾಧೂನ ಕೊಲ್ಬೇಕು ಅಂತ ಜನರಲ್ ಶಂಕರ್ ಆರ್ಡರ್ ಆಗೈತೆ. ಅವರ ಆರ್ಡರ್ ಮೀರಿದವರಿಗೆ

ಕೋರ್ಟ್ ಮಾರ್ಷಲ್. ಹುಷಾರ್" ಎಂದು ಘರ್ಜಿಸಿದನು ಕಟ್ಟುಮಸ್ತಾದ ಸಿಪಾಯಿಯೊಬ್ಬನು ಮುಂದಕ್ಕೆ ಬಂದು, ಇಸ್ಮೇಯಿಲ್ ಕಡೆಗೆ ತಿರುಗಿ, "ಕೋರ್ಟ್ ಮಾರ್ಷಲ್ ಮಾಡ್ತೀರಾ? ಮಾಡಿ. ಶಿಕ್ಷೆಗೆ ತಯಾರು. ಇಸ್ಮೇಯಿಲ್ ಸಾಹೇಬ್ರೇ ಮುಸಲ್ಮಾನರಿಗೆ ಮಾತ್ರ ದೇವರೂ ಫಕೀರರೂ ಬೇಕು. ನಮಗೆ ಹಿಂದೂಗಳಿಗೆ ದೇವರೂ ಬೇಡ; ಸಾಧುಗಳೂ ಬೇಡ ಅಲ್ಲವೇ?" ಎಂದು ನಿರ್ಭೀತವಾಗಿ ಗಂಭೀರವಾಣಿಯಿಂದ ನುಡಿದನು.

ಅವನ ಮಾತನ್ನು ಕೇಳಿ, ಇಸ್ಮೇಯಿಲ್ ಕಕ್ಕಾವಿಕ್ಕಿಯಾದನು. ಭೋಲಾನಾಥನು ಚಕಿತನಾದನು. ಆ ಮಾತುಗಳನ್ನಾಡಿದ್ದವನು ಜನರಲ್ ಶಂಕರನ ಮೆಚ್ಚಿನ ಸಿಪಾಯಿಗಳಲ್ಲೊಬ್ಬನಾಗಿದ್ದನು. ಅಂದಿನ ತಂಡದಲ್ಲಿದ್ದವರ ಪೈಕಿ ಬಹುಮಂದಿ ಶಂಕರ್ ಹೇಳಿದಂತೆ ಕೇಳುವವರಾಗಿದ್ದರು. ಬಹುಮಂದಿಯ ಅಭಿಪ್ರಾಯಕ್ಕೆ ವಿರುದ್ಧವಾಗಿ ಇಸ್ಮೇಯಿಲನಾಗಲೀ, ಭೋಲಾನಾಥನಾಗಲೀ ಏನೂ ಮಾಡುವಂತಿರಲಿಲ್ಲ. ಅಲ್ಲದೆ ಅಂದಿನ ಪ್ರಸಂಗ ಕ್ರಾಂತಿಸೇನೆಯಲ್ಲಿ ಹಿಂದೂ ಮುಸ್ಲಿಂ ವೈಷಮ್ಯಕ್ಕೆ ಎಡೆಗೊಡುವ ಸೂಚನೆಯೂ ಕಂಡುಬರುತ್ತಿತ್ತು. ಇಸ್ಮೇಯಿಲನೂ, ಭೋಲಾನಾಥನೂ ಪ್ರತ್ಯೇಕವಾಗಿ ಒಂದುಕಡೆ ನಿಂತು ಮಾತನಾಡಿ, ಅಂದಿನ ದಂಡೆಯಾತ್ರೆಯನ್ನು ಮುಂದುವರಿಸುವುದು ಸೂಕ್ತವಲ್ಲವೆಂಬ ತೀರ್ಮಾನಕ್ಕೆ ಬಂದರು. ಬಹುಜನರ ಅಭಿಪ್ರಾಯದಂತೆ ಸೌಮ್ಯಾಶ್ರಮದ ಮೇಲೆ ಧಾಳಿಯನ್ನು ನಡೆಸುವುದಿಲ್ಲವೆಂದು ಸಾರಿದರು. ಅಲ್ಲಿಂದ ಎಲ್ಲರೂ ಹಿಂದಿರುಗಿದರು.

ಮರುದಿನ ಇಸ್ಮೇಯಿಲನೂ, ಭೋಲಾನಾಥನೂ ಶಂಕರನನ್ನು ಕಂಡು, ಹಿಂದಿನ ರಾತ್ರಿಯ ದಂಡಯಾತ್ರೆ ವಿಫಲವಾದುದನ್ನು ಸವಿಸ್ತಾರವಾಗಿ ವರದಿ ಮಾಡಿದರು. ಶಂಕರನಿಗೆ ಒಂದುಕಡೆ ಆಶ್ಚರ್ಯವೂ, ಇನ್ನೊಂದುಕಡೆ ಕೋಪವೂ ಉಂಟಾಗಿತ್ತು. ಅದುವರೆಗೆ ಅವನ ಹಿಂಬಾಲಕರ್ಯಾರೂ ಅವನ ಆಜ್ಞೆಯನ್ನು ಉಲ್ಲಂಘಿಸಿರಲಿಲ್ಲ. ಅವನ ಆಗ್ರಹಕ್ಕೆ ಪಾತ್ರರಾದವರು ಯಾರೂ ಕ್ರಾಂತಿಸೇನೆಯಲ್ಲಿ ಜೀವಂತವಾಗಿ ಉಳಿದಿರಲಿಲ್ಲ. ಹಿಂದಿನ ರಾತ್ರಿ ಅವನ ಆಜ್ಞೆಯನ್ನು ಉಲ್ಲಂಘಿಸಿದ್ದವರು ಅವನ ಅಚ್ಚುಮೆಚ್ಚಿನ ಸಿಪಾಯಿಗಳಾಗಿದ್ದರು. ಹಿಂದೆ ಹಲವು ಬಾರಿ ಅವರು ಅವನ ಆಜ್ಞೆಯ ಪ್ರಕಾರ ಅವನ ಶತ್ರುಗಳನ್ನು ಲೀಲಾಜಾಲವಾಗಿ ಕೊಂದಿದ್ದರು. ಅಂತಹವರನ್ನು ಶಿಕ್ಷೆಗೆ ಗುರಿಪಡಿಸುವುದು ಅವನಿಗೆ ಒಗ್ಗದ ವಿಷಯವಾಗಿತ್ತು. ಅಲ್ಲದೆ ಅವರನ್ನು ಶಿಕ್ಷೆಗೆ ಗುರಿಪಡಿಸಿದರೆ ಕ್ರಾಂತಿಸೇನೆಯಲ್ಲಿ ಜಾತಿ ವೈಷಮ್ಯವುಂಟಾಗಿ, ಒಡಕುಂಟಾಗಬಹುದೆಂಬ ಸಂಶಯವೂ ಅವನಿಗಿತ್ತು. "ಈ ದೇಶದಲ್ಲಿ ಜಾತಿವಾದ ಹೋಗುವುದೂ ಕಷ್ಟ; ನಾಸ್ತಿಕವಾದ ಬರುವುದೂ ಕಷ್ಟ" ಎಂದು ಮನಸ್ಸಿನಲ್ಲಿಯೇ ಅಂದುಕೊಂಡನು. ತನ್ನ ಪಕ್ಷದಲ್ಲಿ ಒಗ್ಗಟನ್ನು ಉಳಿಸಿಕೊಳ್ಳುವ ಸಲುವಾಗಿ ತನ್ನ ಪ್ರತಿಷ್ಠೆಯನ್ನು ಕಾಪಾಡಿಕೊಳ್ಳುವ ಸಲುವಾಗಿ ಸಿದ್ಧಿಮಹಾರಾಜರನ್ನು ಕೊಲ್ಲಲು ಮಾಡಿದ್ದ ಪ್ರಯತ್ನ ತನಗೆ ಸ್ವಲ್ಪವೂ ಗೊತ್ತಿಲ್ಲದವನಂತೆ

ನಟಿಸಲಾರಂಭಿಸಿದನು. ಕೆಲಕಾಲ ಸಿದ್ಧಿಮಹಾರಾಜರ ವಿಚಾರವಾಗಿ ಮಾತನಾಡುವುದನ್ನು ನಿಲ್ಲಿಸಿದನು.

ಶಂಕರನು ಸಿದ್ಧಾನಂದರ ವಿಚಾರದಲ್ಲಿ ಮಾತನಾಡುವುದನ್ನು ನಿಲ್ಲಿಸಿದ್ದರೂ, ಸಿದ್ಧಾನಂದರು ಅವನ ವಿಚಾರದಲ್ಲಿ ಮಾತನಾಡುವುದನ್ನು ನಿಲ್ಲಿಸಲಿಲ್ಲ. ಆದ್ದರಿಂದ ಸಿದ್ಧಾನಂದರನ್ನು ಸುಮ್ಮನೆ ಬಿಡುವುದು ಶಂಕರನಿಗೆ ಅಸಾಧ್ಯವಾಗಿ ಪರಿಣಮಿಸಿತ್ತು. ಸಿದ್ಧಾನಂದರ ಸದ್ದಡಗಿಸಲು ತನ್ನ ಸೇನೆಯವರಿಗೆ ಗೊತ್ತಾಗದಂತೆ ತಾನೇ ಸ್ವತಃ ಕ್ರಮ ಕೈಗೊಳ್ಳಬೇಕೆಂದು ನಿರ್ಧರಿಸಿದನು. "ಅವನನ್ನು ಹೆದರಿಸಿ ಅವನ ಸದ್ದಗಡಗಿಸಬೇಕು. ಅದು ಸಾಧ್ಯವಾಗದಿದ್ದರೆ ಅವನನ್ನು ಕೊಂದು ಸೊಲ್ಲಡಗಿಸಬೇಕು" ಎಂದು ಮನಸ್ಸಿನಲ್ಲೇ ನಿರ್ಧರಿಸಿದನು. ಸಿದ್ಧಿಮಹಾರಾಜರು ಶನಿವಾರ ಯಾರಿಗೂ ದರ್ಶನ ನೀಡುವುದಿಲ್ಲವೆಂದೂ, ಆದಿನ ಆಶ್ರಮದಲ್ಲಿ ಒಬ್ಬಿಬ್ಬರು ಶಿಷ್ಯರ ವಿನಃ ಇನ್ಯಾರೂ ಇರುವುದಿಲ್ಲವೆಂದೂ, ಶಂಕರನಿಗೆ ಗೊತ್ತಾಗಿತ್ತು. ಒಂದು ಶನಿವಾರ ಬೆಳಿಗ್ಗೆ ಸುಮಾರು ಹನ್ನೊಂದು ಗಂಟೆಯ ಹೊತ್ತಿಗೆ, ಎಲ್ಲಿಗೆ ಹೋಗುತ್ತೇನೆಂಬುದನ್ನು ಯಾರಿಗೂ ಹೇಳದೆ, ಏಕಾಂಗಿಯಾಗಿ ಜೀಪಿನಲ್ಲಿ ಹೊರಟನು. ಜೀಪನ್ನು ಸ್ವತಃ ತಾನೇ ನಡೆಸುತ್ತಿದ್ದನು. ಅವನು ಸೌಮ್ಯಾಶ್ರಮವನ್ನು ತಲುಪಿದಾಗ ಮಧ್ಯಾಹ್ನ ಸುಮಾರು ಎರಡು ಗಂಟೆಯಾಗಿರಬಹುದು. ಜೀಪನ್ನು ನಿಲ್ಲಿಸಿ ಆಶ್ರಮಕ್ಕೆ ಹೋದನು.

ಆಶ್ರಮದ ಬಾಗಿಲು ತೆರೆದಿತ್ತು. ಆದರೆ ಮನುಷ್ಯರ ಸಪ್ಪಳ ಎಲ್ಲಿಯೂ ಇರಲಿಲ್ಲ. ಸಭಾಂಗಣವನ್ನು ಹೊಕ್ಕು "ಯಾರೊಳಗೆ? ಎಂದು ಗಟ್ಟಿಯಾಗಿ ಕೂಗಿದನು. ಸಭಾಂಗಣದ ಪಕ್ಕದ ಕೊಠಡಿಯಲ್ಲಿದ್ದ, ಕಾವಿಯನ್ನು ಧರಿಸಿದ್ದ, ಬೋಳ್ಮಂಡೆಯ ಯುವಕನೊಬ್ಬನು ಹೊರಗೆ ಬಂದು, ಸಭಾಂಗಣದ ಮಧ್ಯೆ ಶಂಕರನು ನಿಂತಿರುವುದನ್ನು ನೋಡಿದನು. ಶಂಕರನು ಕ್ರಾಂತಿಸೇನೆಯ ಸಮವಸ್ತ್ರವನ್ನು ತೊಟ್ಟುಕಾಲಿಗೆ ಬೂಟ್ಸ್ ಹಾಕಿಕೊಂಡಿದ್ದನು. ಆಶ್ರಮದ ನಿಯಮದ ಪ್ರಕಾರ ಮೆಟ್ಟು ಅಥವ ಬೂಟ್ಸುಗಳನ್ನು ಹಾಕಿಕೊಂಡು ಸಭಾಂಗಣದೊಳಗೆ ಬರುವುದು ನಿಷೇಧವಾಗಿತ್ತು. ಬೂಟ್ಸ್‌ಕಾಲಿನಲ್ಲಿ ನಿಂತಿದ್ದ ವ್ಯಕ್ತಿಯನ್ನು ನೋಡಿ ಯುವಕನಿಗೆ ಕೋಪ ಬಂದಿತ್ತು. ಕೋಪವನ್ನು ತೋರ್ಪಡಿಸಿಕೊಳ್ಳದೆ ಅವನು "ನೀವ್ಯಾರು? ಏನು ಬಂದಿರಿ?" ಎಂದು ಶಂಕರನನ್ನು ಪ್ರಶ್ನಿಸಿದನು.

"ನಾನು ಜನರಲ್ ಶಂಕರ್. ಸಿದ್ಧಿಮಹಾರಾಜರನ್ನು ಜರೂರಾಗಿ ನೋಡಬೇಕಾಗಿದೆ. ಅದಕ್ಕಾಗಿ ಬಂದೆ. ನೀನ್ಯಾರು?"

"ನಾನು ಮಹಾರಾಜರ ಶಿಷ್ಯ. ನನ್ನ ಹೆಸರು ಸದಾಶಿವ. ಮಹಾರಾಜರನ್ನು ಈ ದಿನ ನೋಡಲು ಸಾಧ್ಯವಿಲ್ಲ. ಇದು ದರ್ಶನದ ದಿನವಲ್ಲ. ಅವರು ಒಳಗಡೆ ಧ್ಯಾನದಲ್ಲಿದ್ದಾರೆ. ನೀವು ನಾಳೆ ಬಂದರೆ ನೋಡಬಹುದು."

"ನಾಳೆ ಸಾಧ್ಯವಿಲ್ಲ. ಈ ದಿನವೇ ನೋಡಬೇಕು."

"ನೀವ್ಯಾರ್ರೀ? ವಿಪರೀತ ಮಾತಾಡ್ತಾ ಇದ್ದೀರಿ. ಸುಮ್ನೇ ಹೋಗಿ, ಗಲಾಟೆ ಮಾಡ್ಬೇಡಿ."

"ನಾಲ್ಗೆ ಹಿಡಿದು ಮಾತ್ನಾಡು. ನೀ ಯಾರ ಹತ್ರ ಮಾತ್ನಾಡ್ತಾ ಇದ್ದೀಯಾ ಗೊತ್ತೇನು?"

"ನೀವ್ಯಾರಾದ್ರೆ ನಂಗೇನು? ನೀವು ನಮ್ಮ ಗುರುಗಳಿಗಿಂತ ದೊಡ್ಡೋರಲ್ಲ."

"ಬಾಯಿಗೆ ಬಂದ ಹಾಗೆ ಹರಟ ಬ್ಯಾಡ. ಜನರಲ್ ಶಂಕರ್ ಬಂದಾರೆ ಅಂತ ನಿಮ್ಮ ಗುರುಗಳಿಗೆ ಹೇಳು ಹೋಗು, ಜಲ್ದಿ."

"ಜನರಲ್ ಶಂಕರ್ ಅಲ್ಲ, ರಾಷ್ಟ್ರಪತಿ ಬಂದ್ರೂ ಇವತ್ತು ನಮ್ಮ ಗುರುಗಳನ್ನು ನೋಡೋಕೆ ಸಾಧ್ಯವಿಲ್ಲ. ಹೋಗಿ ನಾಳೆ ಬನ್ನಿ."

"ನಿನ್ನ ಉದ್ಧಟತನ ಹೆಚ್ಚಾಯ್ತು. ನಿನಗೆ ನಿನ್ನ ಗುರುಗಳ ಹತ್ರ ಮಾತಾಡೋಕೆ ಹೆದರಿಕೆ ಆದ್ರೆ ಅವರೆಲ್ಲಿದ್ದಾರೆ ತೋರ್ಸು, ನಾನೇ ಮಾತಾಡ್ತೀನಿ."

"ಅದು ಸಾಧ್ಯವಿಲ್ಲ. ನೀವು ವೃಥಾ ಗಲಾಟೆ ಮಾಡ್ಬೇಡಿ. ದಯವಿಟ್ಟು ಸುಮ್ನೇ ಹೋಗಿ."

"ನಿಂಗೆ ಒದೆಬೇಕೋ, ಬಾಯಿಮುಚ್ಕೊಂಡು ಅವರೆಲ್ಲಿದ್ದಾರೆ ತೋರಿಸ್ತೀಯೋ...?" ಎಂದು ಶಂಕರ್ ಗರ್ಜಿಸಿ, ಸದಾಶಿವನನ್ನು ಹಿಡಿದುಕೊಳ್ಳಲು ಮುಂದಾಗುತ್ತಿರುವಾಗ, ಸದಾಶಿವನು "ನನ್ನ ಮೈ ಮುಟ್ಟು ನೋಡ್ತೀನಿ" ಎಂದು ಹಿಂದೆ ಸರಿದನು.

ಒಳಗಡೆ ಧ್ಯಾನ ಮಂದಿರದಲ್ಲಿ ಭಾವಸಮಾಧಿಯಲ್ಲಿದ್ದ ಸಿದ್ಧಿಮಹಾರಾಜರಿಗೆ "ಜನರಲ್ ಶಂಕರ್ ಬಂದಿದ್ದಾರೆ ಅಂತ ಹೇಳು" ಎಂದು ಶಂಕರ್ ಹೇಳಿದಾಗಲೇ ಎಚ್ಚರವಾಗಿತ್ತು. ಶಂಕರನು ಬಂದಿದ್ದ ಉದ್ದೇಶ ಅವರ ಅಂತಃಚಕ್ಷುವಿಗೆ ಆಗಲೇ ಹೊಳೆದಿತ್ತು. ಶಂಕರನು ಏನು ಹೇಳುತ್ತಾನೆಂಬುದನ್ನು ತಿಳಿಯುವ ಸಲುವಾಗಿ ಅವರಿಬ್ಬರ ಸಂಭಾಷಣೆಯನ್ನು ಕೇಳುತ್ತಾ ಧ್ಯಾನಮಂದಿರದಲ್ಲಿ ಕುಳಿತಿದ್ದರು. ಸದಾಶಿವನು "ನನ್ನ ಮೈ ಮುಟ್ಟು ನೋಡ್ತೀನಿ" ಎಂದು ಹೇಳುತ್ತಿದ್ದಾಗ, ಸಿದ್ಧಿಮಹಾರಾಜರು ನಿರ್ಭಯ ಮೂರ್ತಿಯಂತೆ ಹೊರಗಡೆ ಬಂದು "ನೀವ್ಯಾರು? ಆ ಬಡಪಾಯಿಯನ್ನೇಕೆ ಹಿಂಸಿಸುತ್ತೀರಿ?" ಎಂದು ಪ್ರಶ್ನಿಸಿದರು.

"ನಾನು ಜನರಲ್ ಶಂಕರ್. ಸಿದ್ಧಿಮಹಾರಾಜರನ್ನು ನೋಡಬೇಕೆಂದು ಬಂದೆ. ಅವನು ತಲೆಹರಟೆ ಮಾಡಿದ. ಅದಕ್ಕೇ ನನಗೆ ಸ್ವಲ್ಪ ಸಿಟ್ಟು ಬಂತು.

"ನನ್ನನ್ನೇ ಜನರು ಸಿದ್ಧಿಮಹಾರಾಜರೆಂದು ಕರೆಯುತ್ತಾರೆ. ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರವೇ? ಜನರಲ್ ಸಾಹೇಬರಿಗೆ ಅವನ ಮೇಲೇಕೆ ಇಷ್ಟು ಕೋಪ?"

"ನಾನು ಯಾರೆಂಬುದನ್ನು ತಿಳಿಸಿದ ಮೇಲೂ ನಿಮ್ಮ ಶಿಷ್ಯ ಎಳ್ಳಷ್ಟೂ ಗೌರವ ಕೊಡದೆ ಬಾಯಿಗೆ ಬಂದಂತೆ ಹರಟಿದ."

"ಪಾಪ ಅವನು ಆಶ್ರಮವನ್ನು ಬಿಟ್ಟು ಹೊರಗಡೆ ಹೋದವನೇ ಅಲ್ಲ. ಅವನಿಗೆ ನಿಮ್ಮ ಮಹಿಮೆ ಹೇಗೆ ಗೊತ್ತಾಗಬೇಕು? ಅವನಿಂದ ನಿಮಗೆ ಅಗೌರವ ಆಗಿದ್ರೆ ಅದನ್ನು ಮರೆತುಬಿಡಿ. ನನ್ನಿಂದ ನಿಮಗೇನಾಗಬೇಕು ತಿಳಿಸಿ."

"ನಿಮ್ಮೊಡನೆ ಜರೂರಾಗಿ ಕೆಲವು ಮಾತ್ನಾಡಬೇಕಾಗಿದೆ."

"ಅಗತ್ಯವಾಗಿ ಆಗಬಹುದು. ಬನ್ನಿ ಹೋಗೋಣ" ಎಂದು, ಸಿದ್ಧಾನಂದರು ಶಂಕರನನ್ನು ತಾವು ಯಾವಾಗಲೂ ವಿಶ್ರಾಂತಿ ಪಡೆಯುವ ತಮ್ಮ ಕೊಠಡಿಗೆ ಕರೆದುಕೊಂಡು ಹೋಗಿ, ಅವನನ್ನು ಒಂದು ಕುರ್ಚಿಯ ಮೇಲೆ ಕುಳ್ಳಿರಿಸಿದರು. ನಂತರ "ಈಗ ಬಂದೆ" ಎಂದು ಶಂಕರನಿಗೆ ಹೇಳಿ, ಹೊರಗಡೆ ಹೋಗಿ ಸದಾಶಿವನ ಕಿವಿಯಲ್ಲಿ ಏನೋ ಹೇಳಿ, ನಂತರ ಶಂಕರನಿಗೆ ಕೇಳಿಸುವಂತೆ "ಅತಿಥಿಗಳಿಗೆ ಸ್ವಲ್ಪ ಷರಬತ್ತು ತಂದ್ಕೊಡಯ್ಯಾ" ಎಂದು ಹೇಳಿದರು. ಪುನಃ ಶಂಕರನು ಕುಳಿತಿದ್ದ ಕೊಠಡಿಗೆ ಹೋಗಿ ಅವನೆದುರು ಒಂದು ಕುರ್ಚಿಯನ್ನೆಳೆದುಕೊಂಡು ಕುಳಿತುಕೊಂಡರು.

"ಏನು, ಇಷ್ಟು ದೂರ ದಯಮಾಡಿಸಿದಿರಿ, ನನ್ನಿಂದ ಏನಾಗಬೇಕು?" ಎಂದು ಸಿದ್ಧಿಮಹಾರಾಜರು ಶಂಕರನನ್ನು ವಿನಯಪೂರ್ವಕವಾಗಿ ಪ್ರಶ್ನಿಸಿದರು.

"ನಿಮ್ಮೊಡನೆ ಕೆಲವು ವಿಚಾರಗಳನ್ನು ಚರ್ಚಿಸಬೇಕಾಗಿತ್ತು. ಅದಕ್ಕೇ ಬಂದೆ" ಎಂದು ಶಂಕರನು ನುಡಿದನು.

"ಅದೇನು ಹೇಳೋಣವಾಗಲಿ."

"ನೀವು ನನ್ನ ಮೇಲೂ, ಕ್ರಾಂತಿಸೇನೆಯ ಮೇಲೂ ಅಪಪ್ರಚಾರ ಮಾಡುತ್ತಿದ್ದೀರೆಂದು ಗೊತ್ತಾಗಿದೆ. ಒಳ್ಳೆಯ ಮಾತಿನಲ್ಲಿ ಅಪಪ್ರಚಾರ ನಿಲ್ಲಿಸ್ತೀರೋ ಅಥವಾ ನಾವು ನಿಮಗೆ ಶಿಕ್ಷೆ ವಿಧಿಸಬೇಕೋ ಎಂಬುದನ್ನು ಇತ್ಯರ್ಥ ಪಡಿಸುವ ಬಗ್ಗೆ ಇಂದು ಇಲ್ಲಿಗೆ ಬಂದಿದ್ದೇನೆ" ಎಂದು ದರ್ಪದಿಂದ ಶಂಕರನು ನುಡಿದನು.

ನಾನು ಸರ್ವಸಂಗ ಪರಿತ್ಯಾಗಿ. ಸರ್ವಸ್ವವನ್ನು ಭಗವಂತನಿಗೆ ಸಮರ್ಪಿಸಿರುವವನು. ಸತ್ಯ ನನ್ನ ಜೀವನದ ಉಸಿರು. ನನ್ನಿಂದ ಅಪಪ್ರಚಾರ ನಡೆದಿದ್ದರೆ ಭಗವಂತನು ವಿಧಿಸುವ ಶಿಕ್ಷೆಗೆ ನಾನು ಸಿದ್ಧನಾಗಿದ್ದೇನೆ.

"ನಾನು ನಿಮ್ಮ ಭಗವಂತನನ್ನು ನಂಬುವುದಿಲ್ಲ. ನನಗೆ ಕುರುಡು ಪುರಾಣ ಬೇಕಾಗಿಲ್ಲ. ನನ್ನ ನೇರವಾದ ಪ್ರಶ್ನೆಗೆ ನೇರವಾದ ಜವಾಬು ಕೊಡಿ."

"ನಾನು ನಿಮ್ಮ ವಿಚಾರದಲ್ಲೇ ಆಗಲಿ ಅಥವಾ ಕ್ರಾಂತಿಸೇನೆಯ ವಿಚಾರದಲ್ಲೇ ಆಗಲಿ ಎಂದೂ ಅಸತ್ಯವನ್ನು ಆಡಿಲ್ಲ. ಇದೇ ನನ್ನ ನೇರವಾದ ಜವಾಬು" ಎಂದು ಸಿದ್ಧಿಮಹಾರಾಜರು ನುಡಿದರು.

ಅಷ್ಟುಹೊತ್ತಿಗೆ, ಸಿದ್ಧಿಮಹಾರಾಜರ ಶಿಷ್ಯ ಸದಾಶಿವನು ಒಂದು ಲೋಟದಲ್ಲಿ ಷರಬತ್ತನ್ನು ತಂದು ಶಂಕರನ ಮುಂದಿಟ್ಟು, ಹೋಗುವಾಗ ಕೊಠಡಿಯ ಬಾಗಿಲನ್ನು ಮುಚ್ಚಿಕೊಂಡು ಹೊರಟು ಹೋದನು. ಶಂಕರನು ಷರಬತ್ತನ್ನು ತೆಗೆದುಕೊಳ್ಳದೆ, ಸಿದ್ಧಾನಂದರ ಕಡೆಗೆ ನೋಡುತ್ತಾ "ನೀವು ನನ್ನನ್ನ ಕೊಲೆಗಡುಕನೆಂದೂ, ದರೋಡೆಕೋರ ನೆಂದೂ ಕರೆಯುತ್ತಿದ್ದೀರೆಂದು ನನಗೆ ಗೊತ್ತಾಗಿದೆ. ಇದು ನಿಜವೆ?" ಎಂದು ಕೋಪದಿಂದ ಪ್ರಶ್ನಿಸಿದನು.

"ನಾನು ಹೇಳಿರುವುದು ನಿಜ. ಈಗಲೂ ಅದನ್ನೇ ಹೇಳುತ್ತೇನೆ. ನಾನು ಹೇಳಿರುವುದು ನಿಜವಲ್ಲವೆಂದು ನೀವು ನನಗೆ ಮನಗಾಣಿಸಿದರೆ ನಾನೂ ನಿಮ್ಮ ಕ್ರಾಂತಿಸೇನೆಯನ್ನು ಸೇರಿ ನಿಮ್ಮ ಹಿಂಬಾಲಕನಾಗುತ್ತೇನೆ."

"ಜಗತ್ತಿನಲ್ಲಿ ಮಹಾಕ್ರಾಂತಿಗಳಿಗೆ ಕಾರಣಕರ್ತರಾಗಿದ್ದ ಮಹಾಪುರುಷರೆಲ್ಲರೂ ಕೊಲೆಗಡುಕರೆಂದೂ, ದರೋಡೆಕೋರರೆಂದೂ ನಿಮ್ಮ ಅಭಿಪ್ರಾಯವೇನು?"

"ಮೊದಲನೆಯದಾಗಿ ಕರುಣೆ, ಮಾನವೀಯತೆ, ಸತ್ಯಸಂಧತೆ ಮುಂತಾದ ಸದ್ಗುಣಗಳಿಲ್ಲದವರು ಮಹಾಪುರುಷರೆನಿಸಿಕೊಳ್ಳಲಾರರು. ಎರಡನೆಯದಾಗಿ ಜಗತ್ತಿನ ಮಹಾಕ್ರಾಂತಿಗಳಿಗೆ ಕಾರಣರಾಗಿದ್ದ ಕ್ರಾಂತಿಪುರುಷರ ಶ್ರೇಣಿಗೆ ನೀವು ಸೇರಿದವರೆಂಬುದು ನನಗಿನ್ನೂ ಗೊತ್ತಾಗಿಲ್ಲ. ಮೂರನೆಯದಾಗಿ ಅಧಿಕಾರ ಲಾಲಸೆಗಾಗಿ, ಸ್ವಾರ್ಥ ಸಾಧನೆಗಾಗಿ ಅಥವಾ ದ್ವೇಷಸಾಧನೆಗಾಗಿ ಕೊಲೆ, ದರೋಡೆಗಳನ್ನು ಮಾಡುವವರು ಕಪಟ ಕ್ರಾಂತಿಕಾರರು."

"ಹಾಗಾದ್ರೆ ನಿಮ್ಮ ಅಭಿಪ್ರಾಯದ ಪ್ರಕಾರ ನಾನು ಕಪಟ ಕ್ರಾಂತಿಕಾರನೇನು?

'ಕಪಟ ಕ್ರಾಂತಿಕಾರನಲ್ಲದೆ ಇನ್ನೇನು? ಸ್ವಂತ ಬೊಕ್ಕಸವನ್ನು ತುಂಬಿಸುವುದಕ್ಕಾಗಿ, ಮೋಜಿನ ಜೀವನ ನಡೆಸುವುದಕ್ಕಾಗಿ ದರೋಡೆ ಮಾಡಿಸುತ್ತಿದ್ದೀರಿ. ಕ್ರಾಂತಿಯ ಸೋಗಿನಲ್ಲಿ ನಿಮಗಾಗದವರನ್ನು ಅಮಾನುಷ ರೀತಿಯಲ್ಲಿ ಕೊಲೆ ಮಾಡಿಸುತ್ತಿದ್ದೀರಿ. ಅಧಿಕಾರ ಲಾಲಸೆಯಿಂದ ಅರಾಜಕತೆಯನ್ನುಂಟು ಮಾಡುತ್ತಿದ್ದೀರಿ. ಶತ್ರು ರಾಷ್ಟ್ರಗಳ ಸಹಾಯದಿಂದ ಈ ರಾಜ್ಯದ ಅಧಿಪತಿಯಾಗಬೇಕೆಂದು ಹವಣಿಸುತ್ತಿದ್ದೀರಿ. ನೀವು ಕಪಟ ಕ್ರಾಂತಿಕಾರ ಮಾತ್ರವಲ್ಲ, ರಾಷ್ಟ್ರದ್ರೋಹಿಯೂ ಹೌದು."

"ನಾನು ಕಪಟ ಕ್ರಾಂತಿಕಾರನಾದರೆ, ನೀನು ಕಪಟ ಸಾಧು. ನಿನ್ನನ್ನು ಈಗಲೇ ಧ್ವಂಸ ಮಾಡುತ್ತೇನೆ" ಎಂದು ಶಂಕರನು ರೋಷದಿಂದ ಹಲ್ಲುಕಡಿಯುತ್ತಾ ಮೇಲಕ್ಕೆದ್ದು ಸೊಂಟದಲ್ಲಿದ್ದ ರಿವಾಲ್ವರನ್ನು ಹಿರಿಯುತ್ತಿದ್ದಾಗ, ಸಿದ್ಧಾನಂದರು ಕಿಡಿಕಾರುತ್ತಿದ್ದ ತೀಕ್ಷ್ಣ ದೃಷ್ಟಿಯಿಂದ ಶಂಕರನನ್ನು ದುರುಗುಟ್ಟಿಕೊಂಡು ನೋಡುತ್ತಾ ಸಿಡಿಲಿನ ವಾಣಿಯಲ್ಲಿ "ಏ, ಮೂರ್ಖಾ ನಿಲ್ಲು. ನೀನೇನು ಮಾಡುತ್ತೀ ಎಂಬುದು ನನಗೆ ಗೊತ್ತು. ನೀನು ಈಗಾಗಲೇ ಈ ಕೋಣೆಯಲ್ಲಿ ಬಂಧಿತನಾಗಿರುವೆ. ನನ್ನನ್ನು ಕೊಂದು ಜೀವಸಹಿತ ನೀನು ಹೋಗಲಾರೆ. ಸದಾಶಿವ, ಹೊರಗಡೆಯಿಂದ ಚಿಲಕವನ್ನು ಭದ್ರವಾಗಿ ಹಾಕಿದ್ದೀಯ ತಾನೇ?" ಎಂದು ಹೇಳಿದರು.

ಸಿದ್ಧಾನಂದರ ಮಾತುಗಳಿಂದ ಶಂಕರನಿಗೆ ಸಿಡಿಲು ಬಡಿದಂತಾಗಿತ್ತು. ಅವರು ಅವನನ್ನೇ ದುರುಗುಟ್ಟಿ ನೋಡುತ್ತಿದ್ದರು. ಅವರ ಕಣ್ಣುಗಳಿಂದ ವಿದ್ಯುತ್ ಪ್ರವಾಹ ಹರಿದು ಅವನ ದೇಹದೊಳಗೆ ಹೊಕ್ಕಂತೆ ಅವನಿಗೆ ಅನುಭವವಾಗುತ್ತಿತ್ತು. ಸಿದ್ಧಾನಂದರ ರೌದ್ರ ದೃಷ್ಟಿಯಿಂದ ಅವನು ಮಂಕುಹಿಡಿದವನಂತಾಗಿದ್ದನು. ಅವನ ಕೈಗಳು ನಡುಗುತ್ತಿದ್ದವು. ಬೆವರು ಧಾರಾಕಾರವಾಗಿ ಸುರಿಯುತ್ತಿತ್ತು. ಹೊರಗಡೆಯಿಂದ ಸದಾಶಿವನು "ಏ ಹೇಡಿ, ನೀನು ನಮ್ಮ ಸೆರೆಯಾಳು. ನಮ್ಮ ಗುರುಗಳಿಗೇನಾದರೂ ಅಪಾಯವಾದರೆ ನಿನ್ನನ್ನು

ಜೀವಸಹಿತ ಸುಟ್ಟು ಹಾಕುತ್ತೇವೆ" ಎಂದು ಘರ್ಜಿಸಿದನು. ಶಂಕರನು ಸಿದ್ಧಾನಂದರ ರೌದ್ರ ನೋಟದ ಸೆರೆಯನ್ನು ತಪ್ಪಿಸಿಕೊಂಡು, ತನ್ನ ದೃಷ್ಟಿಯನ್ನು ಕೊಠಡಿಯಲ್ಲಿ ಎಲ್ಲಾ ಕಡೆಗೂ ಹರಿಸಿದನು. ತಾನು ತಪ್ಪಿಸಿಕೊಂಡು ಹೋಗಲು ಎಲ್ಲಿಯೂ ಮಾರ್ಗ ತೋರಲಿಲ್ಲ. ಸಾವಿರಾರು ಜನರಿಗೆ ಹುಲಿಯಾಗಿದ್ದ ಅವನು ಬೋನಿನಲ್ಲಿ ಸಿಕ್ಕ ಇಲಿಯಂತಾಗಿದ್ದನು. ಎಷ್ಟೋ ಜನರು ಅವನ ಹೆಸರನ್ನು ಕೇಳಿ ನಡುಗುತ್ತಿದ್ದರು. ಅಂದು ಬಡಬೈರಾಗಿಯ ಎದುರು ಅವನು ನಡುಗುವಂತಾಗಿದ್ದನು. ಪುನಃ ಸಿದ್ಧಾನಂದರ ಕಡೆಗೆ ನೋಡಿದನು. ಪುನಃ ಅವರ ರೌದ್ರದೃಷ್ಟಿಯ ಸೆರೆಗೆ ಸಿಲುಕಿದನು. ಅವರ ದೃಷ್ಟಿಯಲ್ಲಿ ಏನೋ ಒಂದು ಅವರ್ಣನೀಯ ಶಕ್ತಿ ಇರುವಂತೆ ಅವನಿಗೆ ಭಾಸವಾಗಿತ್ತು. ಮಂಕು ಬೂದಿಯನ್ನೆರಚಿದ ಮಾಟಗಾರನ ಕೈಗೆ ಸಿಲುಕಿದ್ದ ಹುಲು ಮನುಷ್ಯನಂತೆ ಅವನ ಸ್ಥಿತಿ ಆಗಿತ್ತು. ಸಿದ್ಧಿಮಹಾರಾಜರು ಪವಾಡ ಪುರುಷರೆಂಬುದನ್ನು ಅವನು ಕೇಳಿದ್ದನು. ಈ ದೇಶದಲ್ಲಿರುವ ಎಷ್ಟೋ ಜನ ನಕಲಿ ಸಾಧುಗಳಂತೆ ಅವರೂ ಒಬ್ಬ ನಕಲಿ ಸಾಧುವು ಆಗಿರಬೇಕೆಂದೂ, ಆ ಸುದ್ದಿಯನ್ನು ಕಟ್ಟುಕತೆ ಎಂದೂ ಅಲ್ಲಗಳೆದಿದ್ದನು. ಆದರೆ ಅಂದು ಅವರೆದುರು ಅವನ ಧೈರ್ಯ ಉಡುಗಿ ಹೋದಂತಾಗಿತ್ತು.

ಅವನು ಹಿಡಿದಿದ್ದ ರಿವಾಲ್ವರ್ ಬಲಗೈಯಲ್ಲಿ ಜೋತು ಬಿದ್ದಿತ್ತು. ಅದನ್ನು ನೋಡುತ್ತಿದ್ದ ಸಿದ್ಧಾನಂದರು, "ಕೈಯಲ್ಲಿ ಪಿಸ್ತೂಲು ಹಿಡಿದು ಏಕೆ ಸುಮ್ಮನಿದ್ದೀಯೆ? ನನ್ನನ್ನು ಹೊಡಿ. ನಾನು ಸಾಯಲು ಸಿದ್ಧನಾಗಿರುವವನು" ಎಂದು ವ್ಯಂಗ್ಯವಾಗಿ ನುಡಿದರು. ಶಂಕರನು ಅವರ ಮುಖದ ಕಡೆಗೆ ತನ್ನ ದೃಷ್ಟಿಯನ್ನು ಹೊರಳಿಸಿದನು. ಪುನಃ ಅದೇ ರೌದ್ರ ದೃಷ್ಟಿ; ಪುನಃ ಅದೇ ರೌದ್ರ ದೃಷ್ಟಿಯ ಬಿಗಿಮುಷ್ಟಿಗೆ ಸಿಕ್ಕಿರುವಂತೆ ಭಾವನೆ. ಅವರನ್ನು ನೋಡಲು ಸಹ ಅವನಿಗೆ ಅಂಜಿಕೆಯಾಗುತ್ತಿತ್ತು. ಶಂಕರನಿಗೆ ಏನು ಮಾಡಬೇಕೆಂಬುದು ಹೊಳೆಯದೆ, ನಿಸ್ಸಹಾಯಕನಾಗಿ ಕುರ್ಚಿಯ ಮೇಲೆ ಕುಳಿತು, ತಲೆಯನ್ನು ತಗ್ಗಿಸಿಕೊಂಡು ಯೋಚಿಸಲಾರಂಭಿಸಿದನು. ಆದರೆ ಮಂಕು ಮುಸುಕಿದಂತಾಗಿ ಅವನ ಮನಸ್ಸು ಕೂಡ ಕದಡಿ ಹೋಗಿತ್ತು. ಏನು ಮಾಡಬೇಕೆಂಬುದು ಅವನಿಗೆ ತೋಚಲಿಲ್ಲ.

"ನನ್ನನ್ನು ಹೊಡಿ. ಇಲ್ಲವಾದರೆ ನಿನ್ನ ಆಯುಧವನ್ನು ಕೆಳಗಿಟ್ಟು ಶರಣಾಗತನಾಗಿ ಇಲ್ಲಿಂದ ತೆಪ್ಪಗೆ ಹೊರಟು ಹೋಗು" ಎಂದು ಸಿದ್ಧಾನಂದರು ಘರ್ಜಿಸಿದರು. ಅವರು "ತೆಪ್ಪಗೆ ಹೊರಟು ಹೋಗು" ಎಂದು ಹೇಳಿದ್ದ ಮಾತುಗಳು ಶಂಕರನಿಗೆ ನಿರಾಸೆಯ ಕತ್ತಲಲ್ಲಿ ಕಂಡ ಆಸೆಯ ಕಿರಣಗಳಂತಾಗಿದ್ದವು. ಶಂಕರನು ಎಂದೂ ಆ ರೀತಿ ಅಭಿಮಾನ ಕುಂಠಿತನಾಗಿರಲಿಲ್ಲ; ಎಂದೂ ಆ ರೀತಿಯ ಅವಮಾನಕ್ಕೆ ಗುರಿಯಾಗಿರಲಿಲ್ಲ. ಅಲ್ಲಿಂದ ತೆಪ್ಪಗೆ ಹೋಗುವುದು ಲೇಸೆಂದು ಭಾವಿಸಿ ಬಾರ್ ಮಾಡಿದ್ದ ರಿವಾಲ್ವರನ್ನು ಸಿದ್ಧಾನಂದರ ಮುಂದುಗಡೆ ನೆಲದ ಮೇಲಿಟ್ಟನು. ಸಿದ್ಧಾನಂದರು ಅದನ್ನು ತಮ್ಮ ಕೈಯಲ್ಲಿ ತೆಗೆದುಕೊಂಡರು.

"ನಾನು ನಿನ್ನನ್ನು ಈಗ ಕೊಲ್ಲಬಹುದು. ನೀನು ಅತಿ ದುಷ್ಟ. ಅತಿ ದುಷ್ಟರು ಶತ ಹೇಡಿಗಳು. ನಾನು ನಿನ್ನಂತೆ ಹೇಡಿಯಲ್ಲ. ನಿಶ್ಯಸ್ತ್ರನಾದ ನಿನ್ನನ್ನು ಕೊಲ್ಲುವುದು ಪಾಪ. ನಿನ್ನ ಪಾಪದ ಕೊಡ ಇನ್ನೂ ತುಂಬಿಲ್ಲ. ಸದಾಶಿವ, ಬಾಗಿಲನ್ನು ತೆಗೆ. ಈ ಹೇಡಿಯನ್ನು ಹೊರಗೆ ಬಿಡು" ಎಂದು ಸಿದ್ಧಾನಂದರು ಹೇಳಿದರು. ಅಲ್ಲೇ ಬಾಗಿಲ ಪಕ್ಕದಲ್ಲೇ ನಿಂತಿದ್ದ ಸದಾಶಿವನು ಬಾಗಿಲನ್ನು ತೆಗೆದನು. ಶಂಕರನು ತಿರುಗಿ ನೋಡದೆ, ಏನನ್ನೂ ನುಡಿಯದೆ, ತಲೆ ತಗ್ಗಿಸಿಕೊಂಡು ಜೀಪು ನಿಲ್ಲಿಸಿದ್ದ ಸ್ಥಳಕ್ಕೆ ಹೋಗಿ ಜೀಪನ್ನು ಹತ್ತಿ ವೇಗದಿಂದ ಊರಿನ ಕಡೆ ಸಾಗಿದನು.

ಹೆದ್ದಾರಿಯನ್ನು ತಲುಪಿದ ನಂತರ ಶಂಕರನ ಮನಸ್ಸು ಜಾಗ್ರತಾವಸ್ಥೆಗೆ ಹಿಂತಿರುಗಿ ಬಂದಂತಾಗಿತ್ತು. ಆಶ್ರಮದಲ್ಲಿ ನಡೆದ ಘಟನೆಗಳನ್ನ ಒಂದೊಂದಾಗಿ ಸ್ಮರಿಸಿಕೊಳ್ಳಲು ಯತ್ನಿಸಿದನು. ಕೆಲಸಕ್ಕೆ ಬಾರದ ಒಬ್ಬ ಸಾಧುವಿನ ಕೈಯಲ್ಲಿ ಅವಮಾನಿತನಾದುದಕ್ಕಾಗಿ ಬಹಳ ವ್ಯಥೆಪಟ್ಟನು. "ಆ ಸಾಧು ದುಷ್ಟ ಮಂತ್ರವಾದಿಯಾಗಿರಬೇಕು. ಮಂತ್ರಶಕ್ತಿಯಿಂದ ನನಗೆ ಮಂಕು ಹಿಡಿಯುವಂತೆ ಮಾಡಿಬಿಟ್ಟಿದ್ದ. ನಾನೊಬ್ಬನೇ ಇಲ್ಲಿಗೆ ಬರಬಾರದಾಗಿತ್ತು. ಎಂತಹ ತಪ್ಪು ಮಾಡಿದೆ! ಇರಲಿ, ಇನ್ನೊಮ್ಮೆ ಅವನನ್ನು ಯಮಸದನಕ್ಕೆ ಕಳುಹಿಸುತ್ತೇನೆ" ಎಂದು ಮನಸ್ಸಿನಲ್ಲಿಯೇ ಅಂದುಕೊಂಡು ಅವುಡು ಕಚ್ಚಿದನು.

ದಾರಿಯುದ್ದಕ್ಕೂ ತನಗಾದ ಅವಮಾನಕ್ಕಾಗಿ ತನ್ನನ್ನೇ ಶಪಿಸಿಕೊಳ್ಳುತ್ತಿದ್ದನು. ಅವಮಾನಕ್ಕಿಂತ ತನ್ನ ಅಮೂಲ್ಯವಾದ ರಿವಾಲ್ವರು ಕೈಬಿಟ್ಟು ಹೋಗಿದ್ದು ಅವನಿಗೆ ಬಹಳ ಸಂಕಟವನ್ನುಂಟುಮಾಡಿತ್ತು. ಅದನ್ನು ಚೀನಾದೇಶದ ಗೂಢಚಾರನೊಬ್ಬನು ಕೆಲವು ವರ್ಷಗಳ ಹಿಂದೆ ಅವನಿಗೆ ಕೊಟ್ಟಿದ್ದನು. ಅದರ ಸಹಾಯದಿಂದ ಅವನು ಹಲವು ಗಂಡಾಂತರಗಳಿಂದ ಪಾರಾಗಿದ್ದನು. ಅದರಿಂದ ತನಗಾಗದ ಕೆಲವರನ್ನು ಕೊಂದಿದ್ದನು. ಅದನ್ನು ಕಳೆದುಕೊಂಡಿದ್ದು ಅವನಿಗೆ ಅಪಶಕುನವಾದಂತಾಗಿತ್ತು. ಅಭಿಮಾನ ಕುಂಠಿತನಾಗಿ ಬಹಳ ಸಂಕಟದಿಂದ ಸಾಯಂಕಾಲ ಮನೆಯನ್ನು ಸೇರಿದನು. ತನಗಾದ ಅವಮಾನವನ್ನು ಯಾರಿಗೂ ತಿಳಿಸಲಿಲ್ಲ. ಅವಮಾನವನ್ನು ಮರೆಯುವುದಕ್ಕಾಗಿ ಯಥೇಚ್ಛವಾಗಿ ಕುಡಿದು ಮಲಗಿದನು.

೧೫

ಜಿಲ್ಲಾ ಪರಿಷತ್ತುಗಳಿಗೂ, ಪುರಸಭೆಗಳಿಗೂ ಚುನಾವಣೆಗಳನ್ನು ನಡೆಸಬೇಕೆಂದು ರಾಜ್ಯ ಸರ್ಕಾರ ಆದೇಶವನ್ನು ಹೊರಡಿಸಿತ್ತು. ಈ ಸ್ಥಳೀಯ ಸಂಸ್ಥೆಗಳ ಚುನಾವಣೆಗಳ ಫಲಿತಾಂಶ ಲೋಕಸಭೆಗೆ ಮತ್ತು ಶಾಸನಸಭೆಗೆ ಮುಂದೆ ನಡೆಯಲಿದ್ದ ಚುನಾವಣೆಗಳ ಮೇಲೆ ಮಹತ್ವದ ಪರಿಣಾಮವನ್ನುಂಟುಮಾಡುವ ಸಂಭವವಿದ್ದುದರಿಂದ, ವಿವಿಧ ರಾಜಕೀಯ ಪಕ್ಷಗಳು ಈ ಚುನಾವಣಾ ಕಣಕ್ಕೆ ಇಳಿದಿದ್ದುವು. ಕ್ರಾಂತಿಸೇನೆಯ ಅಧಿಪತಿ ಶಂಕರನು ಮುಂದೆ ನಡೆಯಲಿದ್ದ ಶಾಸನಸಭೆಯ ಚುನಾವಣೆಯಲ್ಲಿ ಗೆದ್ದು, ರಾಜ್ಯದ ಮುಖ್ಯಮಂತ್ರಿಯಾಗಬೇಕೆಂಬ ಹೊಂಗನಸನ್ನು ಕಾಣುತ್ತಿದ್ದನು. ಆದ್ದರಿಂದ ಅವನು

ತನ್ನ ಸರ್ವಶಕ್ತಿಯನ್ನು ವಿನಿಯೋಗಿಸಿ ಜಿಲ್ಲಾ ಪರಿಷತ್ತುಗಳನ್ನೂ, ಪುರಸಭೆಗಳನ್ನೂ ತನ್ನ ವಶಪಡಿಸಿಕೊಳ್ಳಬೇಕೆಂದು ಸಂಕಲ್ಪ ಮಾಡಿದ್ದನು. ಈ ಸಂಕಲ್ಪಕ್ಕೆ ಅನುಗುಣವಾಗಿ ತನ್ನ ಪಕ್ಷದ ಅಭ್ಯರ್ಥಿಗಳನ್ನು ಚುನಾವಣೆಗಳಿಗೆ ನಿಲ್ಲಿಸಲು ಸಿದ್ಧತೆ ನಡೆಸುತ್ತಿದ್ದನು.

ಸರ್ಕಾರದ ಆದೇಶ ಹೊರಬಿದ್ದ ಸ್ವಲ್ಪ ದಿನಗಳಲ್ಲಿಯೇ, ಕ್ರಾಂತಿಸೇನೆಯವರು ಕೋವಿ, ಕತ್ತಿ, ಈಟಿ, ಕೈಬಾಂಬ್ ಮುಂತಾದ ಆಯುಧಗಳ ಸಹಿತ, ರಾಜ್ಯದ ಹಲವು ಕಡೆಗಳಲ್ಲಿ, ಬಲ ಪ್ರದರ್ಶನ ಮಾಡುವುದರ ಜೊತೆಗೆ ಭಯೋತ್ಪಾದನೆಯನ್ನುಂಟು ಮಾಡುತ್ತಿದ್ದರು. ಅವರು ಭಯೋತ್ಪಾದನೆಯಿಂದಲೇ ಮತದಾರರನ್ನು ಹೆದರಿಸಿ ಓಟು ಪಡೆಯಲು ಪ್ರಯತ್ನ ಮಾಡುತ್ತಿರುವಂತೆ ತೋರುತ್ತಿತ್ತು. ಬಲಪ್ರದರ್ಶನ ಮತ್ತು ಭಯೋತ್ಪಾದನೆಯ ಜೊತೆಗೆ ದಿನಕ್ಕೆ ಹದಿನೈದಿಪ್ಪತ್ತು ಜನರಂತೆ ತಮ್ಮ ರಾಜಕೀಯ ವಿರೋಧಿಗಳನ್ನು ಕೊಲ್ಲುತ್ತಿದ್ದರು. ಅವರ ಆರ್ಭಟ. ಉಪಟಳಗಳನ್ನು ನೋಡಿ ಹಲವು ಕಡೆಗಳಲ್ಲಿ ಜನರು ತಲ್ಲಣಿಸಿ ಹೋಗಿದ್ದರು.

ಕೆಲವು ಕಡೆಗಳಲ್ಲಿ ಕ್ರಾಂತಿಸೇನೆಯ ಆರ್ಭಟಕ್ಕೆ ಹೆದರಿ ಕ್ರಾಂತಿಸೇನೆಯ ಅಭ್ಯರ್ಥಿಗಳ ಎದುರು ಬೇರೆಯವರ್ಯಾರೂ ಉಮೇದುವಾರಿಕೆಯ ಅರ್ಜಿಯನ್ನು ಸಲ್ಲಿಸಿರಲಿಲ್ಲ. ಅಂತಹ ಕಡೆಗಳಲ್ಲಿ ಕ್ರಾಂತಿಸೇನೆಯ ಅಭ್ಯರ್ಥಿಗಳ ವಿರುದ್ಧ ಸ್ಪರ್ಧಿಸಿದ್ದ ಇತರ ಪಕ್ಷಗಳ ಅಭ್ಯರ್ಥಿಗಳು ಪ್ರಾಣಭಯದಿಂದ ತಮ್ಮ ಉಮೇದುವಾರಿಕೆಯನ್ನು ವಾಪಸು ತೆಗೆದುಕೊಂಡಿದ್ದರು. ಅಂತಹ ಕಡೆಗಳಲ್ಲಿಯೂ ಸಹ ಕ್ರಾಂತಿಸೇನೆಯ ಉಮೇದುವಾರರು ಅವಿರೋಧವಾಗಿ ಚುನಾಯಿತರಾಗಿದ್ದರು. ರಾಜ್ಯದ ಉಳಿದ ಕಡೆಗಳಲ್ಲಿ ತೀವ್ರ ಸ್ಪರ್ಧೆ ನಡೆದಿತ್ತು. ಕೆಲವು ಪ್ರಜಾಸತ್ತಾತ್ಮಕ ಪಕ್ಷಗಳು ಹಣ, ಹೆಂಡಗಳಿಂದ ಮತದಾರರನ್ನು ತಮ್ಮ ಕಡೆಗೆ ಒಲಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದರೆ, ಕ್ರಾಂತಿಸೇನೆಯವರು ಬಲಾತ್ಕಾರ ಭಯೋತ್ಪಾದನೆಗಳಿಂದ ಮತದಾರರನ್ನು ತಮ್ಮ ಕಡೆಗೆ ಒಲಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಕ್ರಾಂತಿಕೂಟದವರೂ ಸಹ ಅಲ್ಲಲ್ಲಿ ತಮ್ಮ ಉಮೇದುವಾರರನ್ನು ಚುನಾವಣೆಗೆ ನಿಲ್ಲಿಸಿದ್ದರು. ಕಾಂಗ್ರೆಸ್ಸಿನವರೂ ಮತ್ತು ಇತರ ಪಕ್ಷಗಳವರೂ ತಮ್ಮ ತಮ್ಮ ಉಮೇದುವಾರರನ್ನು ನಿಲ್ಲಿಸಿದ್ದರು.

ಕೆಲವು ಕಡೆಗಳಲ್ಲಿ ಕಾಂಗ್ರೆಸ್ಸಿಗೂ ಕ್ರಾಂತಿಸೇನೆಗೂ ತೀವ್ರಸ್ಪರ್ಧೆ ನಡೆದಿದ್ದರೆ, ಕೆಲವು ಕಡೆಗಳಲ್ಲಿ ಕ್ರಾಂತಿಸೇನೆಗೂ ಕ್ರಾಂತಿಕೂಟಕ್ಕೂ ತೀವ್ರಸ್ಪರ್ಧೆ ನಡೆದಿತ್ತು. ಶ್ರೀಪುರ ನಗರದ ನಗರಸಭೆಗೆ ನಡೆಯಬೇಕಾಗಿದ್ದ ಚುನಾವಣೆಯಲ್ಲಿ ಕ್ರಾಂತಿಸೇನೆಗೂ ಕ್ರಾಂತಿಕೂಟಕ್ಕೂ ಭಯಂಕರ ಸೆಣಸಾಟ ಆರಂಭವಾಗಿತ್ತು. ಉಭಯ ಪಕ್ಷಗಳವರೂ ನಗರಸಭೆಯನ್ನು ತಮ್ಮ ವಶಪಡಿಸಿಕೊಳ್ಳಬೇಕೆಂದು ಹವಣಿಸುತ್ತಿದ್ದರು. ಕ್ರಾಂತಿಸೇನೆಯವರು ತಮ್ಮ ಪಕ್ಷದ ಅಭ್ಯರ್ಥಿಗಳ ವಿರುದ್ಧ ಸ್ಪರ್ಧಿಸಿದ್ದ ಪ್ರತಿಸ್ಪರ್ಧಿಗಳನ್ನೂ, ಅವರ ಬೆಂಬಲಿಗರನ್ನೂ ಕೊಲ್ಲುವ ನಿರ್ದಿಷ್ಟ ಯೋಜನೆಯೊಂದನ್ನು ಹಾಕಿಕೊಂಡಿದ್ದರು. ಚುನಾವಣಾ ಪ್ರಚಾರ ನಡೆಯುತ್ತಿರುವಾಗಲೇ ಚಂದ್ರಹಾಸನನ್ನೂ, ಕಿಶೋರನನ್ನೂ ಕೊಲ್ಲಬೇಕೆಂದು ಶಂಕರನು ತನ್ನ ಸೇನೆಯವರಿಗೆ ಆದೇಶ ನೀಡಿದ್ದನು. ಸಾಧ್ಯವಾದರೆ ಚುನಾವಣೆ

ಮುಗಿಯುವುದರೊಳಗಾಗಿ ಶಂಕರನನ್ನು ಹತ ಮಾಡಬೇಕೆಂದು ಕ್ರಾಂತಿಕೂಟದವರು ಹವಣಿಸುತ್ತಿದ್ದರು.

ಶ್ರೀಪುರದ ನಗರಸಭೆಗೆ ನಡೆಯಬೇಕಾಗಿದ್ದ ಚುನಾವಣೆಯ ಸಂಬಂಧ ಒಂದು ದಿನ ಸಾಯಂಕಾಲ ಕ್ರಾಂತಿಸೇನೆಯವರು ಶ್ರೀಪುರದ ಗಾಂಧೀ ಮೈದಾನದಲ್ಲಿ ತಮ್ಮ ಮೊದಲನೆಯ ಪ್ರಚಾರ ಸಭೆಯನ್ನು ಏರ್ಪಡಿಸಿದ್ದರು. ಆ ಸಭೆಯಲ್ಲಿ ಶಂಕರನೇ ಮುಖ್ಯ ಭಾಷಣಕಾರನಾಗಿದ್ದನು. ಹಿಂದಿನ ಸಾರಿ ನಗರಸಭೆಯ ಉಪಾಧ್ಯಕ್ಷನಾಗಿದ್ದ ನಾಗಾರ್ಜುನ ಎಂಬುವನು ಇತ್ತೀಚೆಗೆ ಕ್ರಾಂತಿಸೇನೆಯ ಸದಸ್ಯನಾಗಿ ಚುನಾವಣೆಗೆ ಮತ್ತೇ ಸ್ಪರ್ಧಿಸಿದ್ದನು. ಅವನೇ ಆ ಪ್ರಚಾರ ಸಭೆಯ ಅಧ್ಯಕ್ಷನಾಗಿದ್ದನು. ಶಂಕರನು ಕ್ರಾಂತಿಸೇನೆಯ ಸಮವಸ್ತ್ರವನ್ನು ತೊಟ್ಟು ದಂಡನಾಯಕನೋಪಾದಿಯಲ್ಲಿ ಸಭೆಗೆ ಬಂದಿದ್ದನು. ಕ್ರಾಂತಿಕೂಟದವರು ಸಭೆ ನಡೆಯದಂತೆ ಗಲಭೆ ಮಾಡಬಹುದೆಂಬ ಶಂಕೆಯಿಂದಲೂ, ಶಂಕರನ ರಕ್ಷಣೆಗಾಗಿಯೂ ನೂರಾರು ಶಸ್ತ್ರಸಜ್ಜಿತ ಕ್ರಾಂತಿಸೇನೆಯ ಸಿಪಾಯಿಗಳು ಸಭೆ ನಡೆಯಬೇಕಾಗಿದ್ದ ಗಾಂಧೀ ಮೈದಾನದಲ್ಲಿ ಅಲ್ಲಲ್ಲಿ ಆಯಕಟ್ಟಿನ ಸ್ಥಳಗಳಲ್ಲಿ ನಿಂತಿದ್ದರು. ಕ್ರಾಂತಿಸೇನೆಯ ಸದಸ್ಯರೂ ಹಿತೈಷಿಗಳೂ, ಬೆಂಬಲಿಗರೂ, ಸಾಮಾನ್ಯ ಪ್ರೇಕ್ಷಕರೂ ಸೇರಿ ಎಲ್ಲಾ ಸುಮಾರು ಆರೇಳು ಸಾವಿರ ಜನ ಸಭೆಗೆ ಬಂದಿದ್ದರು.

ಸಭೆಯ ಕಾರ್ಯಕಲಾಪ ಆರಂಭವಾದ ನಂತರ ಸಭಾಧ್ಯಕ್ಷನಾಗಿದ್ದ ನಾಗಾರ್ಜುನನು ಶಂಕರನನ್ನು ಸಭೆಗೆ ಪರಿಚಯ ಮಾಡಿ ಕೊಡುತ್ತಾ "ನಿಮ್ಮ ನೆಚ್ಚಿನ ನಾಯಕ. ಕೆಚ್ಚೆದೆಯ ವೀರ, ದೀನದಲಿತರ ಉದ್ಧಾರಕ್ಕೆ ಜನರಲ್ ಶಂಕರ್ ಈ ಸಭೆಗೆ ಬಂದಿರುವುದು ನಮ್ಮೆಲ್ಲರ ಸುದೈವ. ಅವರು ಈ ರಾಜ್ಯದ ಬಡ ಬಗ್ಗರ ಸೇವೆಗಾಗಿ ಮಾಡಿರುವ ತ್ಯಾಗ ಅಪಾರವಾದುದು. ಅವರು ಇಂದು ಈ ರಾಜ್ಯದ ನಾಯಕರಾಗಿದ್ದಾರೆ. ಇನ್ನು ಕೆಲವೇ ವರ್ಷಗಳಲ್ಲಿ ಅವರು ಇಡೀ ಭಾರತದ ನಾಯಕರಾಗುತ್ತಾರೆ. ಅವರ ಹೆಸರು ಈ ರಾಜ್ಯದಲ್ಲಿ ಮನೆಮಾತಾಗಿದೆ. ಆದ್ದರಿಂದ ದೀರ್ಘ ಪರಿಚಯ ಮಾಡಿಕೊಡಬೇಕಾದ ಅಗತ್ಯವಿರುವುದಿಲ್ಲ. ದಯಮಾಡಿ ತಮ್ಮ ಅಮೋಘವಾದ ಭಾಷಣ ಮಾಡಬೇಕೆಂದು ಅವರನ್ನು ತಮ್ಮೆಲ್ಲರ ಪರವಾಗಿ ಪ್ರಾರ್ಥಿಸಿಕೊಳ್ಳುತ್ತೇನೆ" ಎಂದು ನುಡಿದನು.

ಶಂಕರನು ತನ್ನ ಭಾಷಣವನ್ನು ಆರಂಭಿಸಿ ಮಾತನಾಡತೊಡಗಿದನು. ಅವನ ಭಾಷಣದ ಸಾರಾಂಶ ಈ ರೀತಿ ಇತ್ತು.

"ಕಾಮ್ರೇಡ್ ನಾಗಾರ್ಜುನರವರೇ, ದೀನದಲಿತ ಬಂಧುಗಳೇ,

ದೀನದಲಿತರ ಉದ್ಧಾರಕ್ಕಾಗಿ ಕ್ರಾಂತಿಸೇನೆ ಬಂಡವಾಳಗಾರರ ಮೇಲೆ ಯುದ್ಧವನ್ನು ಸಾರಿದೆ. ಕಾಂಗ್ರೆಸ್ ಪುಡಾರಿಗಳೂ ಶ್ರೀಮಂತರೂ, ಅಧಿಕಾರಿಗಳೂ ಒಟ್ಟಾಗಿ ಸೇರಿ ಬಡಬಗ್ಗರ ರಕ್ತವನ್ನು ಹೀರುತ್ತಿದ್ದಾರೆ. ಶ್ರೀಮಂತರ ಅಭ್ಯುದಯಕ್ಕಾಗಿ, ಶ್ರೀಮಂತರ ಪರವಾಗಿ, ಕೆಲವರು ಶ್ರೀಮಂತರು, ಈ ದೇಶದ ಆಗುಹೋಗುಗಳನ್ನು ನಡೆಸುತ್ತಿದ್ದಾರೆ. ಕ್ರಾಂತಿಯಿಂದ ಈ ಬಂಡವಾಳಗಾರರ ಪ್ರಭುತ್ವವನ್ನು ಉರುಳಿಸಿ, ಜನಸಾಮಾನ್ಯರ

ಪ್ರಭುತ್ವವನ್ನು ಸ್ಥಾಪಿಸುವುದು ಕ್ರಾಂತಿಸೇನೆಯ ಅಂತಿಮ ಗುರಿ. ನಾವು ಬಂಡವಾಳಗಾರರ ವಿರುದ್ಧ ಸಾರಿರುವ ಈ ಧರ್ಮಯುದ್ಧಕ್ಕೆ ತಮ್ಮ ಬೆಂಬಲ ಮತ್ತು ಆಶೀರ್ವಾದ ಅವಶ್ಯಕ. ಬಂಡವಾಳಗಾರರ ಬಲ ಬಡುಕರಾದ 'ಓ' ಮತ್ತು 'ಆ' ಕಾಂಗ್ರೆಸ್ಸಿಗರೂ, ಹುಲಿವೇಷದ ಕತ್ತೆಗಳಂತಿರುವ, ಶ್ರೀಮಂತರ ಕೈಗೊಂಬೆಗಳಾಗಿರುವ, ಕ್ರಾಂತಿಕೂಟದವರೂ ನನ್ನ ಮೇಲೂ, ನಮ್ಮ ಕ್ರಾಂತಿಸೇನೆಯ ಮೇಲೂ, ಇಲ್ಲಸಲ್ಲದ ಅಪಪ್ರಚಾರ ಮಾಡುತ್ತಿದ್ದಾರೆ. ಅವರ ಮಾತಿಗೆ ನೀವು ಕಿವಿಗೊಡಬಾರದು. ಅವರು ನಿಮ್ಮ ಶತ್ರುಗಳು. ಈ ಚುನಾವಣೆಯಲ್ಲಿ ಸ್ಪರ್ಧಿಸಿರುವ ಇತರ ಪಕ್ಷಗಳು ಚಿಲ್ಲರೆ ಪಕ್ಷಗಳು. ಅವುಗಳಿಂದ ಯಾವ ಪುರುಷಾರ್ಥವೂ ಸಾಧನೆಯಾಗುವುದಿಲ್ಲ ನಿಮ್ಮ ಘನವಾದ ಓಟನ್ನು ಕ್ರಾಂತಿಸೇನೆಯ ಉಮೇದುವಾರರಿಗೆ ನೀಡಬೇಕೆಂದು ನಿಮ್ಮನ್ನು ಪ್ರಾರ್ಥಿಸುತ್ತೇನೆ. ಕ್ರಾಂತಿಗೆ ಜಯವಾಗಲಿ."

ಶಂಕರನ ಭಾಷಣವಾದ ನಂತರ, ಅವನ ಹಿಂಬಾಲಕರು ಆಕಾಶ ಮೊಳಗುವಂತೆ "ಜನರಲ್ ಶಂಕರ್‌ರವರಿಗೆ ಜಯವಾಗಲಿ", "ಕ್ರಾಂತಿಸೇನೆಗೆ ಜಯವಾಗಲಿ" ಎಂದು ಕೂಗಿದರು. ಕ್ರಾಂತಿಕೂಟದವರಾಗಲೀ, ಇತರ ಪಕ್ಷದವರಾಗಲೀ ಸಭೆಗೆ ಯಾವ ಅಡ್ಡಿ ಆತಂಕಗಳನ್ನು ಉಂಟುಮಾಡಿರಲಿಲ್ಲವಾದ್ದರಿಂದ ಸಭೆ ಶಾಂತ ರೀತಿಯಲ್ಲಿ ಮುಕ್ತಾಯವಾಯಿತು. ಶಂಕರನ ಭಾಷಣವನ್ನು ಕೇಳಿದ ಕೆಲವರು, "ಎಷ್ಟು ಸಭ್ಯ ಸತ್ಯವಂತನಂತೆ ಇವ ಭಾಷಣ ಬಿಗಿದ. ಇವನಂತಹ ಮೋಸಗಾರರು ಜಗತ್ತಿನಲ್ಲೇ ಇಲ್ಲ" ಎಂದು ಹೇಳುತ್ತಿದ್ದರು. ಆದರೆ ಅವನ ಭಕ್ತರು, "ಇವರಂತಹ ಬಡಬಗ್ಗರ ಹಿತೈಷಿ ಜಗತ್ತಿನಲ್ಲೇ ಇಲ್ಲ" ಎಂದು ಹೇಳುತ್ತಿದ್ದರು.

ಎರಡು ದಿನಗಳ ನಂತರ, ಸಾಯಂಕಾಲದ ಹೊತ್ತು, ಅದೇ ಗಾಂಧೀ ಮೈದಾನದಲ್ಲಿ ಕ್ರಾಂತಿಕೂಟದವರು ಪ್ರಚಾರ ಸಭೆಯನ್ನು ಏರ್ಪಡಿಸಿದ್ದರು. ಆ ಸಭೆಯಲ್ಲಿ ಚಂದ್ರಹಾಸನೇ ಮುಖ್ಯ ಭಾಷಣಕಾರನಾಗಿದ್ದನು. ಸ್ವಾತಂತ್ರ್ಯಕ್ಕೆ ಪೂರ್ವ ಕ್ರಾಂತಿಕಾರಿ ಚಳವಳಿಯಲ್ಲಿ ಭಾಗವಹಿಸಿ ಹಲವು ವರ್ಷಗಳ ಕಾಲ ಕಾರಾಗೃಹವಾಸವನ್ನು ಅನುಭವಿಸಿದ್ದ ವಯೋವೃದ್ಧ ಮತ್ತು ಜ್ಞಾನವೃದ್ಧ ರಮೇಶಚಂದ್ರ ಎನ್ನುವವರು ಆ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಚಂದ್ರಹಾಸನು ಶಂಕರನಂತೆ ಆಡಂಬರದ ಉಡುಪನ್ನು ಧರಿಸಿರಲಿಲ್ಲ. ಸಾಮಾನ್ಯ ಜನರಂತೆ ಪೈಜಾಮ, ಜುಬ್ಬಾಗಳನ್ನು ಧರಿಸಿದ್ದನು. ಕಾಂತಿಯುತವಾದ ಕಣ್ಣುಗಳು, ಅಗಲವಾದ ಲಲಾಟ, ನೀಳವಾದ ನಾಸಿಕ ಇವುಗಳಿಂದ ಕೂಡಿದ್ದ ಗೌರವ ವರ್ಣದ ಅವನು ಸುಂದರ ಪುರುಷನಂತೆ ಕಾಣುತ್ತಿದ್ದನು. ತಲೆಯ ಮೇಲಿನ ಮುಂಗುರುಳು ಅವನ ಸೌಂದರ್ಯಕ್ಕೆ ಸೊಬಗನ್ನು ನೀಡಿತ್ತು. ಅವನು ಶಂಕರನಿಗಿಂತಲೂ ಎತ್ತರವಾಗಿ ಬಲಿಷ್ಠನಾಗಿದ್ದನು. ಅವನು ಪುರುಷೋತ್ತಮಬಾಬುರವರ ಮಗನೆಂದೂ, ಕ್ರಾಂತಿಕೂಟದ ಅಧ್ಯಕ್ಷನೆಂದೂ ಶ್ರೀಪುರ ನಗರದ ಜನರು ಕೇಳಿದ್ದರು. ಆದರೆ ಅನೇಕರು ಅವನನ್ನು ನೋಡಿರಲಿಲ್ಲ. ಅವನನ್ನು ನೋಡುವ ಸಲುವಾಗಿಯೂ, ಅವನ ಭಾಷಣವನ್ನು ಕೇಳುವ ಸಲುವಾಗಿಯೂ ಸಾವಿರಾರು ಜನರು ಸಭೆಗೆ ಬಂದಿದ್ದರು. ಚಂದ್ರಹಾಸನ ಭಾಷಣ ಈ ರೀತಿ ಇತ್ತು.

"ಅಧ್ಯಕ್ಷರೇ, ದೇಶಬಾಂಧವರೇ,

ಸ್ವರಾಜ್ಯ ಬಂದು ಎರಡು ದಶಕಗಳ ಮೇಲಾಯಿತು. ಆದರೂ ನಮ್ಮ ನಾಡು ದಾರಿದ್ರ್ಯದ ಬೀಡಾಗಿಯೇ ಉಳಿದಿದೆ. ಆರ್ಥಿಕ ದೃಷ್ಟಿಯಿಂದ ನಾವು ಗರೀಬರಲ್ಲಿ ಗರೀಬರಾಗಿದ್ದೇವೆ. ಭ್ರಷ್ಟಾಚಾರ ನಮ್ಮ ಜೀವನದ ಹಾಸು ಹೊಕ್ಕಾಗಿದೆ. ದೇಶದ ಮುಕ್ಕಾಲುವಾಸಿ ಜನರು ನಿರಕ್ಷರಕುಕ್ಷಿಗಳಾಗಿ, ಅರೆಹೊಟ್ಟೆ ಅರೆಬಟ್ಟೆಗಳ ಜೀವನ ಸಾಗಿಸುತ್ತಿದ್ದಾರೆ. ಆಡಳಿತ ಲಂಚಮಯವಾಗಿದೆ. ಅರಾಜಕತೆಯ ತಾಂಡವನೃತ್ಯ ಎಲ್ಲೆಲ್ಲೂ ನಡೆಯುತ್ತಾ ಇದೆ. ಎಲ್ಲಾ ಅವಶ್ಯಕ ಪದಾರ್ಥಗಳಿಗೂ ಅಭಾವ. ನಮ್ಮಲ್ಲಿ ಏನೋ ನ್ಯೂನತೆ ಇರಬೇಕು. ಇಲ್ಲವಾದರೆ ಹೀಗಾಗುತ್ತಿರಲಿಲ್ಲ. ನಾವು ಆತ್ಮಶೋಧನೆ ಮಾಡಿಕೊಳ್ಳುವ ಕಾಲ ಸನ್ನಿಹಿತವಾಗಿದೆ. ನಾವು ಶುದ್ಧ ಸೋಮಾರಿಗಳು ಮತ್ತು ಅಪ್ಪಟ ಅಪ್ರಮಾಣಿಕರು. ಕಷ್ಟಪಡದೆ ನಮ್ಮದು, ದುರಾಡಳಿತ, ಭ್ರಷ್ಟಾಚಾರಗಳಿಗೆ ಹೆಸರಾಗಿರುವ ಕಾಂಗ್ರೆಸ್ಸಿನವರು ಹೊಸ ವೇಷವನ್ನು ಹಾಕಿ ಸಮಾಜವಾದದ ಹೊಸ ಉದ್ಗಾರಗಳಲ್ಲಿ ತೊಡಗಿದ್ದಾರೆ. ಕೆಲವೆಡೆಗಳಲ್ಲಿ ಸಮಾಜವಾದದ ಓ ನಾಮುವೇ ಗೊತ್ತಿಲ್ಲದ, ಕಳ್ಳಕಾಕರೂ, ಪುಂಡುಪೋಕರೂ, ಲಂಚಕೋರರೂ, ಲಾಭಕೋರರೂ ತೀವ್ರಗಾಮಿಗಳ ಅಥವಾ ಉಗ್ರಗಾಮಿಗಳ ವೇಷವನ್ನು ಧರಿಸಿರುತ್ತಾರೆ. ಕೆಲವರು ಪ್ರಜಾಪ್ರಭುತ್ವದ ಹೆಸರಿನಲ್ಲಿ ಲೂಟಿ ಮಾಡಿದರೆ, ಕೆಲವರು ಕ್ರಾಂತಿಯ ಹೆಸರಿನಲ್ಲಿ ಲೂಟಿ ಮಾಡುತ್ತಿದ್ದಾರೆ.

'ಈ ಪ್ರದೇಶದಿಂದ ಕೆಲವರು ಉಗ್ರಗಾಮಿಗಳೆನಿಸಿಕೊಂಡವರು ಮಾರ್ಕ್ಸ್‌ನ ಸಿದ್ಧಾಂತಗಳನ್ನು ತಿರುಗು-ಮುರುಗು ಮಾಡಿದ್ದಾರೆ. ಇಂದು ಕಾರ್ಲ್‌ಮಾರ್ಕ್ಸ್ ಏನಾದರೂ ಸಮಾಧಿಯಿಂದ ಎದ್ದು ಬಂದು, ತನ್ನ ಹೆಸರಿನಲ್ಲಿ ಈ ಪ್ರದೇಶದಲ್ಲಿ ನಡೆಯುತ್ತಿರುವ ಅಮಾನುಷ ಕೃತ್ಯಗಳನ್ನು ನೋಡಿದ್ದರೆ, ದುಃಖದಿಂದ ಕಣ್ಣೀರು ಇಡುತ್ತಿದ್ದರು. ಕಾಂಗ್ರೆಸ್ಸಿನ ದುರಾಡಳಿತದಿಂದ ನೊಂದು, ಬೆಂದು, ಬೇಸತ್ತ ಜನರು ವಾಮಪಕ್ಷಗಳಿಂದ ತಮ್ಮ ಉದ್ಧಾರವಾಗುವುದೆಂದು ಭಾವಿಸಿದ್ದರು. ಆದರೆ ಈಗ ಕೆಲವು ವಾಮಪಕ್ಷಗಳು ಅನುಸರಿಸುತ್ತಿರುವ ರೀತಿನೀತಿಗಳನ್ನು ನೋಡಿದರೆ ಜನರಿಗೆ "ಅತ್ತದರಿ ಇತ್ತಪುಲಿ" ಎನ್ನುವಂತಾಗಿದೆ. ಮಿತ್ರರೇ, ನಾನೂ ಸಹ ಈ ದೇಶದಲ್ಲಿ ಕ್ರಾಂತಿ ಆಗಬೇಕೆಂದು ಹೇಳುವವನು. ಸಮಸ್ತ ಕ್ಷೇತ್ರಗಳಲ್ಲೂ ಕ್ರಾಂತಿ ಆಗಬೇಕಾಗಿದೆ. ವೈಚಾರಿಕ ಕ್ರಾಂತಿ. ಸಾಮಾಜಿಕ ಕ್ರಾಂತಿ, ಆರ್ಥಿಕ ಕ್ರಾಂತಿ ರಾಜಕೀಯ ಆಡಳಿತ ಕ್ರಾಂತಿ ಮತ್ತು ಹೀಗೆ ಸರ್ವ ಕ್ಷೇತ್ರಗಳಲ್ಲೂ ಕ್ರಾಂತಿ ಆಗಬೇಕಾಗಿದೆ. ಈಗಿರುವ ಕೆಲವು, ವ್ಯವಸ್ಥೆಗಳನ್ನು ಮೂಲೋತ್ಪಾಟನೆ ಮಾಡಿ ಹೊಸ ಸಮಾಜವನ್ನು ಸೃಷ್ಟಿಸಬೇಕಾಗಿದೆ. ದುಷ್ಟರೂ, ಭ್ರಷ್ಟರೂ, ಲಾಭಕೋರರೂ, ಲಂಚಕೋರರೂ, ಜಾತಿವಾದಿಗಳೂ ಅಂತಹ ಹೊಸ ಸಮಾಜವನ್ನು ಸೃಷ್ಟಿಸಲು ಸಾಧ್ಯವಿಲ್ಲ.

"ನಾವಿಂದು ಪರಮಾಣುಯುಗದಲ್ಲಿದ್ದೇವೆ. ಹಿಂದಿನ ಯುಗದ ರಾಜಕೀಯ ಮತ್ತು ಆರ್ಥಿಕ ಸಿದ್ಧಾಂತಗಳು ಇಂದಿನ ಸಮಸ್ಯೆಗಳಿಗೆ ತೃಪ್ತಿಕರವಾದ ಪರಿಹಾರವನ್ನು ನೀಡಲಾರವು. ಇಂದು ಕೆಲವು ಮುಂದುವರಿದ ಪ್ರಜಾಪ್ರಭುತ್ವದ ರಾಷ್ಟ್ರಗಳಲ್ಲಿ ಉದ್ಭವಿಸಿರುವ

ಕೆಲವು ಆರ್ಥಿಕ ಮತ್ತು ರಾಜಕೀಯ ಸಮಸ್ಯೆಗಳಿಗೆ ಪರಿಹಾರ ಕಾಣದೆ, ದಿಕ್ಕು ತೋಚದಂತಾಗಿರುವುದೇ ಇದಕ್ಕೆ ಸಾಕ್ಷಿ. ಎಲ್ಲಾ ಕಾಲಕ್ಕೂ, ಎಲ್ಲಾ ದೇಶಕ್ಕೂ, ಎಲ್ಲಾ ಸನ್ನಿವೇಶಕ್ಕೂ ಸರಿಹೋಗತಕ್ಕ ರಾಜಕೀಯ ಸಿದ್ಧೌಷಧವನ್ನು ಇದುವರೆಗೆ ಯಾರೂ ಕಂಡು ಹಿಡಿದಿಲ್ಲ. ಕಳೆದ ಒಂದು ಶತಮಾನದಲ್ಲಿ ಇತರ ರಾಷ್ಟ್ರಗಳಲ್ಲಿ ನಡೆದಿರುವ ಕ್ರಾಂತಿಗಳಿಂದ ಆಗಿರುವ ಅನುಕೂಲ ಪ್ರತಿಕೂಲಗಳನ್ನು ವಿಮರ್ಶಿಸಿ, ಅಂಥ ಅನುಕರಣೆ ಇಲ್ಲದೆ, ರಕ್ತಪಾತವಿಲ್ಲದೆ, ನಮ್ಮ ಇತಿಹಾಸ ಸಂಸ್ಕೃತಿಗಳಿಗನುಗುಣವಾಗಿ, ಈಗಿರುವ ಪದ್ಧತಿಯಲ್ಲಿ ಉತ್ತಮವಾಗಿರುವುದನ್ನುಳಿಸಿ ಕೊಂಡು, ನಮ್ಮದೇ ಆದ ಹಾದಿಯಲ್ಲಿ ಕಾರ್ಲ್‌ಮಾರ್ಕ್ಸ್‌ನ ಮೂಲತತ್ತ್ವಗಳನ್ನು ಅನುಷ್ಠಾನಕ್ಕೆ ತರುವುದು ನಮ್ಮ ಕ್ರಾಂತಿಕೂಟದ ಗುರಿ. ಈ ಗುರಿ ಸಾಧನೆಯಾಗಬೇಕಾದರೆ ಹೊಸದೃಷ್ಟಿ, ಹೊಸ ಕಲ್ಪನೆ, ಹೊಸ ಹಾದಿ, ಹೊಸ ಆದರ್ಶ ಅವಶ್ಯಕ"

ಹೀಗೆಂದು ಚಂದ್ರಹಾಸನು ಹೇಳುತ್ತಿದ್ದಾಗ, ಇದ್ದಕ್ಕಿದ್ದಂತೆ ವಿದ್ಯುತ್ ದೀಪಗಳು ನಂದಿ ಹೋದುವು. ತಕ್ಷಣ ಇಪ್ಪತ್ತು ಮೂವತ್ತು ಕೈಬಾಂಬ್‌ಗಳು 'ಢಂ ಢಂ' ಎಂದು ವೇದಿಕೆಯ ಕಡೆಗೆ ಎಸೆಯಲ್ಪಟ್ಟವು. ಸಭೆಯಲ್ಲಿ ಹಾಹಾಕಾರ ಉಂಟಾಯಿತು. ಸಭೆ ನಡೆಯುತ್ತಿದ್ದ ಸ್ಥಳ ಅಂಧಕಾರದಲ್ಲಿ ಮುಳುಗಿ ಹೋಯಿತು. ಸಭಿಕರು ಚೆಲ್ಲಾಪಿಲ್ಲಿಯಾಗಿ ಓಡಿಹೋದರು. ಕತ್ತಲೆಯಲ್ಲಿಯೇ ಕ್ರಾಂತಿಸೇನೆಯವರಿಗೂ, ಕ್ರಾಂತಿಕೂಟದವರಿಗೂ ಹೊಡೆದಾಟ ಪ್ರಾರಂಭವಾಯಿತು. ಕ್ರಾಂತಿಸೇನೆಯ ಕೊಲೆಗಡುಕರು ಚಂದ್ರಹಾಸನನ್ನು ಕೊಲ್ಲುವ ಉದ್ದೇಶದಿಂದ ವೇದಿಕೆಯ ಕಡೆಗೆ ಧಾವಿಸಿದರು. ಆದರೆ ವೇದಿಕೆಯ ಸುತ್ತಲೂ ಕ್ರಾಂತಿಕೂಟದ ರಕ್ಷಣಾ ದಳದವರು ರಕ್ಷಣೆಯ ಭದ್ರಕೋಟೆಯನ್ನು ನಿರ್ಮಿಸಿಕೊಂಡಿದ್ದರಿಂದ ಕ್ರಾಂತಿಸೇನೆಯ ಧೂರ್ತರು ವೇದಿಕೆಗೆ ನುಗ್ಗುವಂತಿರಲಿಲ್ಲ. ಅಷ್ಟರಲ್ಲಿ ಪೊಲೀಸರು ಟಾರ್ಚ್‌ಲೈಟ್ ಸಮೇತ ಅಲ್ಲಿಗೆ ಬಂದು ನಾಲ್ಕೈದು ಬೆದರು ಗುಂಡುಗಳನ್ನು ಹಾರಿಸಿದರು. ಪೊಲೀಸರನ್ನು ನೋಡಿ ಕ್ರಾಂತಿಸೇನೆಯವರು ಪಲಾಯನ ಮಾಡಿದರು.

ಅಧ್ಯಕ್ಷತೆ ವಹಿಸಿದ್ದ ರಮೇಶ್ಚಂದ್ರರವರು ಬಾಂಬ್ ಸಿಡಿತದಿಂದ ಅವರು ಕುಳಿತಿದ್ದ ಕುರ್ಚಿಯ ಬಳಿ ಸತ್ತು ಬಿದ್ದಿದ್ದರು. ಚಂದ್ರಹಾಸನ ತಲೆಗೆ ಮತ್ತು ಮುಖಕ್ಕೆ ಬಾಂಬ್ ತಗಲಿ ರಕ್ತಸ್ರಾವದಿಂದ ಮೂರ್ಛೆ ತಪ್ಪಿ ಕೆಳಕ್ಕೆ ಬಿದ್ದಿದ್ದನು. ವೇದಿಕೆಯ ಮೇಲಿದ್ದ ಇತರ ಹತ್ತು ಹದಿನೈದು ಜನರಿಗೆ ಸಣ್ಣ ಪುಟ್ಟ ಗಾಯಗಳಾಗಿ ನರಳುತ್ತಿದ್ದರು. ಕ್ರಾಂತಿಕೂಟದ ರಕ್ಷಣಾದಳದವರೂ, ಪೊಲೀಸಿನವರೂ ಸೇರಿ ಚಂದ್ರಹಾಸನನ್ನೂ ಇತರ ಗಾಯಾಳುಗಳನ್ನೂ ಆಸ್ಪತ್ರೆಗೆ ಕೊಂಡೊಯ್ದರು. ಚಂದ್ರಹಾಸನನ್ನು ಪರೀಕ್ಷಿಸಿದ ಡಾಕ್ಟರ್‌ರು ಅವನಿಗೆ ಪ್ರಾಣಾಪಾಯವಿಲ್ಲವೆಂದೂ, ಆದರೆ ತಲೆಯಲ್ಲಿ ಬಾಂಬ್ ಚೂರು ಹೊಕ್ಕಿರುವುದರಿಂದ ಆಪರೇಷನ್ ಅಗತ್ಯವೆಂದೂ ಅಭಿಪ್ರಾಯಪಟ್ಟಿದ್ದರು. ರಾತ್ರಿಯೇ ಚಂದ್ರಹಾಸನಿಗೆ ಶಸ್ತ್ರಚಿಕಿತ್ಸೆ ನಡೆದು, ಆತನ ತಲೆಯ ಬಲಭಾಗದಲ್ಲಿ ಹೊಕ್ಕಿದ್ದ ಒಂದು ಕಬ್ಬಿಣದ ಚೂರನ್ನು ತೆಗೆದು ಹಾಕಿದರು. ಆತನ ಮುಖದ ಮೇಲೆಲ್ಲಾ ಗಾಯಗಳಾಗಿ

ಮುಖ ವಿಕಾರವಾಗಿತ್ತು. ಗಾಯಗಳಿಗೆ ಇಲಾಜು ಮಾಡಿದ ಡಾಕ್ಟರು ಗಾಯ ವಾಸಿಯಾದರೂ ಕೆಲವು ಗಾಯಗಳ ಕಲೆ ಶಾಶ್ವತವಾಗಿ ಉಳಿಯಬಹುದೆಂದು ಹೇಳಿದರು. ಚಂದ್ರಹಾಸನನ್ನು ಇಟ್ಟಿದ್ದ ವಾರ್ಡಿನ ಹತ್ತಿರ ಪೊಲೀಸಿನವರು ಅವನ ರಕ್ಷಣೆಗಾಗಿ ಇಬ್ಬರು ರೈಫಲ್ ಹಿಡಿದಿದ್ದ ರಿಸರ್ವ್ ಪೊಲೀಸಿನವರನ್ನು ಕಾವಲಿಗಿರಿಸಿದ್ದರು. ಚಂದ್ರಹಾಸನಿಗೆ ಬೆಳಿಗ್ಗೆ ಪ್ರಜ್ಞೆ ಬಂತು. ಕಿಶೋರನು ಅವನ ಬಳಿಯೇ ಕಾದಿದ್ದನು.

ಚಂದ್ರಹಾಸನಿಗೆ ಪ್ರಜ್ಞೆ ಬಂದುದನ್ನು ಕೇಳಿ, ಕಂಗಾಲಾಗಿದ್ದ ಕ್ರಾಂತಿಕೂಟದವರಿಗೆ ಜೀವಕಳೆ ಬಂದ ಹಾಗೆ ಆಗಿತ್ತು. ಚಂದ್ರಹಾಸನು ಕನಿಷ್ಠ ಪಕ್ಷ ಹದಿನೈದಿಪ್ಪತ್ತು ದಿನಗಳ ಕಾಲ ಆಸ್ಪತ್ರೆಯಲ್ಲಿಯೇ ಇರಬೇಕೆಂದು ಡಾಕ್ಟರು ಅಭಿಪ್ರಾಯಪಟ್ಟಿದ್ದರು. ಆಸ್ಪತ್ರೆಯಲ್ಲಿ ಚಂದ್ರಹಾಸನಿಗೆ ಪ್ರಾಣಾಪಾಯವಾಗದಂತೆ ನೋಡಿಕೊಳ್ಳುವುದು ಕಿಶೋರನಿಗೆ ಒಂದು ದೊಡ್ಡ ಸಮಸ್ಯೆಯಾಗಿತ್ತು. ಅವನ ರಕ್ಷಣೆಯ ವಿಚಾರದಲ್ಲಿ ಪೊಲೀಸರನ್ನೇ ಸಂಪೂರ್ಣ ನಂಬಿರಲು ಸಾಧ್ಯವಿರಲಿಲ್ಲ. ಆದ್ದರಿಂದ ಆಸ್ಪತ್ರೆಯ ಸುತ್ತಲೂ ಕ್ರಾಂತಿಕೂಟದ ರಕ್ಷಣಾದಳದ ಸಿಪಾಯಿಗಳನ್ನು ಛದ್ಮವೇಷದಲ್ಲಿ ಕಾವಲಿರಿಸಿದ್ದನು. ಅವರು ರೋಗಿಗಳನ್ನು ನೋಡಲು ಆಸ್ಪತ್ರೆಗೆ ಬಂದವರಂತೆ ಆಸ್ಪತ್ರೆಯ ಹತ್ತಿರ ಓಡಾಡುತ್ತಾ ಗಸ್ತು ತಿರುಗುತ್ತಿದ್ದರು.

ಶ್ರೀಪುರದಲ್ಲಿ ಕ್ರಾಂತಿಕೂಟದ ಚುನಾವಣಾ ಪ್ರಚಾರ ಸಭೆಯ ಮೇಲೆ ಬಾಂಬ್ ಾಳಿಯಾದ ವಿಚಾರವೂ ರಮೇಶ್ಚಂದ್ರರು ಸತ್ತ ವಿಚಾರವೂ, ಚಂದ್ರಹಾಸನು ಗಾಯಗೊಂಡ ಚಾರವೂ ರಾಜ್ಯದ ಎಲ್ಲಾ ಪತ್ರಿಕೆಗಳಲ್ಲೂ ವರದಿಯಾಗಿತ್ತು. ಗೋಪಾಲನೂ, ಚಂಚಲೆಯೂ ಪತ್ರಿಕೆಗಳನ್ನು ಓದಿ ತುಂಬಾ ವ್ಯಥೆಪಟ್ಟರು. ಅವರಿಬ್ಬರೂ ಚಂದ್ರಹಾಸನನ್ನು ನೋಡಬೇಕೆಂದು ಆಶಿಸುತ್ತಿದ್ದರು. ಆದರೆ ಅಂದು ಶ್ರೀಪುರದಲ್ಲಿದ್ದ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಅಲ್ಲಿಗೆ ಹೋಗುವುದು ಸೂಕ್ತವಲ್ಲವೆಂದು ಸ್ವರೂಪರಾಣಿಯೂ, ಇತರರೂ ಹೇಳಿದ್ದರಿಂದ ಶ್ರೀಪುರಕ್ಕೆ ಹೋಗುವ ಯೊಚನೆಯನ್ನು ಕೈಬಿಡಬೇಕಾಯಿತು. ಗೋಪಾಲನು ಚಂದ್ರಹಾಸನ ಯೋಗಕ್ಷೇಮವನ್ನು ವಿಚಾರಿಸಿ, ಅವನಿಗೆ ಕಾಗದ ಬರೆದಿದ್ದನು. ಆ ಕಾಗದಕ್ಕೆ ಪ್ರತಿಯಾಗಿ ಕಿಶೋರನು, ಚಂದ್ರಹಾಸನು ಗುಣಮುಖನಾಗುತ್ತಿದ್ದಾನೆಂದೂ ಗಾಬರಿ ಪಡಬೇಕಾದ ಪ್ರಮೇಯವಿಲ್ಲವೆಂದೂ ಬರೆದಿದ್ದನು.

ಕ್ರಾಂತಿಸೇನೆಯವರು ಚುನಾವಣೆಯ ಸಂಬಂಧ ಶ್ರೀಪುರದಲ್ಲಿ ಕೈಗೊಂಡ ಕ್ರಮವನ್ನೇ ರಾಜ್ಯದ ಎಲ್ಲಾ ಕಡೆಗಳಲ್ಲಿಯೂ ಕೈಗೊಂಡಿದ್ದರು. ಚುನಾವಣೆಯಲ್ಲಿ ತಮಗೆ ಪ್ರತಿಸ್ಪರ್ಧಿಗಳಾಗಿದ್ದವರನ್ನೂ, ವಿರೋಧವಾಗಿರುವವರನ್ನೂ ಕೊಲ್ಲಲು ನಿರ್ದಿಷ್ಟ ಯೋಜನೆಯನ್ನು ಹಾಕಿಕೊಂಡಿದ್ದರು. ವಿರೋಧ ಪಕ್ಷಗಳವರು ಏರ್ಪಡಿಸುತ್ತಿದ್ದ ಪ್ರಚಾರ ಸಭೆಗಳ ಮೇಲೆ ಹಲ್ಲೆ ನಡೆಸುವುದೂ, ವಿರೋಧ ಪಕ್ಷಗಳ ಉಮೇದುವಾರರನ್ನೂ, ಅವರ ಬೆಂಬಲಿಗರನ್ನೂ ಕೊಲ್ಲುವುದೂ, ಕ್ರಾಂತಿಸೇನೆಯ ಅನುದಿನದ ಕಾರ್ಯಕ್ರಮ ವಾಗಿತ್ತು. ರಾಜ್ಯದಲ್ಲಿ ಪ್ರತಿದಿನವೂ ಇಪ್ಪತ್ತು ಮೂವತ್ತು ರಾಜಕೀಯ ಕೊಲೆಗಳಾಗುತ್ತಿದ್ದವು. ನೂರಾರು ಜನ ನಿರಪರಾಧಿಗಳು ರಾಜಕೀಯದ ದೆಸೆಯಿಂದ ಕ್ರಾಂತಿಸೇನೆಯ ಕೈಯಲ್ಲಿ ಸಿಕ್ಕಿ ಹತರಾದರು.

ಮತದಾರರು ತಮಗೆ ಎಲ್ಲಿ ವಿರೋಧವಾಗಿದ್ದಾರೋ ಅಲ್ಲಿಗೆ ಕ್ರಾಂತಿಸೇನೆಯವರು ಕೋವಿ, ಕತ್ತಿ, ದೊಣ್ಣೆ, ಭರ್ಜಿ, ಸಿಡಿಬಾಂಬ್ ಮುಂತಾದ ಆಯುಧಗಳ ಸಮೇತ ನೂರಾರು ಸಂಖ್ಯೆಯಲ್ಲಿ ನುಗ್ಗಿ, ತಮಗೆ ಓಟು ಕೊಡದಿದ್ದವರನ್ನು ಕೊಲ್ಲಿಸುವುದಾಗಿಯೂ, ಅವರ ಮನೆಗಳಿಗೆ ಬೆಂಕಿ ಹಾಕಿಸುವುದಾಗಿಯೂ ಹೆದರಿಸುತ್ತಿದ್ದರು. ಪಟ್ಟಣಗಳಲ್ಲಿ ಪೊಲೀಸರ ದೆಸೆಯಿಂದ ಅವರ ಹಾವಳಿ ಕಡಿಮೆಯಾಗಿದ್ದರೂ ಹಳ್ಳಿಗಾಡುಗಳಲ್ಲಿ ಅವರ ಹಾವಳಿಯನ್ನು ತಡೆಯುವವರೇ ಇರಲಿಲ್ಲ. ಕ್ರಾಂತಿಸೇನೆಯವರು ತಮ್ಮ ಮೇಲೆ ಎಲ್ಲಿ ಕಣ್ಣಿಡುತ್ತಾರೋ ಎಂಬ ಭಯದಿಂದ ಜನರು ಇತರ ರಾಜಕೀಯ ಪಕ್ಷದವರೊಡನೆ ಮಾತನಾಡುವುದಕ್ಕೂ ಅಂಜುತ್ತಿದ್ದರು.

ಚಂದ್ರಹಾಸನು ಆಸ್ಪತ್ರೆಗೆ ಸೇರಿದ್ದರಿಂದ ಕ್ರಾಂತಿಕೂಟಕ್ಕೆ ಮುಖಸುತ್ತು ಬಂದಂತಾಗಿತ್ತು. ಆದರೂ ಕ್ರಾಂತಿಕೂಟದವರು ಜೀವನದ ಮೇಲೆ ಹಂಗು ತೊರೆದು ಚುನಾವಣಾ ರಂಗಕ್ಕಿಳಿದಿದ್ದರು. ಕ್ರಾಂತಿಸೇನೆಯವರಿಗೂ, ಕ್ರಾಂತಿಕೂಟದವರಿಗೂ ದಿನವೂ ಘರ್ಷಣೆಗಳಾಗುತ್ತಿದ್ದವು. ಅವರನ್ನು ಇವರು ಕೊಲ್ಲುತ್ತಿದ್ದರು; ಇವರನ್ನು ಅವರು ಕೊಲ್ಲುತ್ತಿದ್ದರು. ಕ್ರಾಂತಿಸೇನೆಯ ಹಾವಳಿಗೆ ಹೆದರಿ ಇತರ ಪಕ್ಷಗಳಿಗೆ ಸೇರಿದ್ದ ಕೆಲವು ಉಮೇದುವಾರರು ಪ್ರಚಾರದ ಗೊಡವೆಗೆ ಹೋಗದೆ ಮನೆಯಲ್ಲಿಯೇ ಇರುತ್ತಿದ್ದರು. ಕ್ರಾಂತಿಸೇನೆಯವರು ವಿರೋಧ ಪಕ್ಷದ ಅಭ್ಯರ್ಥಿಗಳ ಚಲನವಲನಗಳನ್ನು ಹೊಂಚುಹಾಕಿ ನೋಡುತ್ತಾ, ಅವರು ಒಬ್ಬಂಟಿಗರಾಗಿ ಸಿಕ್ಕಾಗ, ಅವರ ಮನೆಯ ಹತ್ತಿರವೋ ಅಥವಾ ರಸ್ತೆಯ ಮೇಲೋ ಮೋಸದಿಂದ ಅವರ ಮೇಲೆರಗಿ ಅವರನ್ನು ಕೊಲ್ಲುತ್ತಿದ್ದರು. ಕೆಲವು ಕಡೆಗಳಲ್ಲಿ ಪ್ರಚಾರ ಸಭೆಗಳ ಮೇಲೆ ಬಾಂಬ್ ಎಸೆದು, ಪ್ರಚಾರ ಸಭೆಯನ್ನು ನಡೆಸುತ್ತಿದ್ದ ಉಮೇದುವಾರರನ್ನೂ ಅವರ ಬೆಂಬಲಿಗರನ್ನೂ ಕೊಲ್ಲುತ್ತಿದ್ದರು. ಕುತಂತ್ರ, ಮೋಸ, ಕೊಲೆ, ಭಯೋತ್ಪಾದನೆ ಇವುಗಳಿಂದಲೇ ಚುನಾವಣೆಯಲ್ಲಿ ಗೆಲ್ಲಬೇಕೆಂದು ಕ್ರಾಂತಿಸೇನೆಯವರು ಮನಸ್ಸು ಮಾಡಿದ್ದರು. ಚುನಾವಣೆ ನಡೆಯುವುದರೊಳಗಾಗಿ ರಾಜ್ಯದಲ್ಲಿ ಕ್ರಾಂತಿಕೂಟ, ಕಾಂಗ್ರೆಸ್ ಮುಂತಾದ ಇತರ ಪಕ್ಷಗಳಿಗೆ ಸೇರಿದ್ದ ಸುಮಾರು ಐವತ್ತು ಮಂದಿ ಉಮೇದುವಾರರು ಕ್ರಾಂತಿಸೇನೆಯವರ ಕೈಗೆ ಸಿಕ್ಕಿ ಹತರಾದರು. ಇಷ್ಟೆಲ್ಲಾ ದೌರ್ಜನ್ಯ ಕೃತ್ಯಗಳನ್ನು ಕ್ರಾಂತಿಸೇನೆಯವರು ನಡೆಸುತ್ತಿದ್ದರೂ, ಶಂಕರನು ಮಾತ್ರ ತನ್ನ ಸೇನೆಯವರಿಂದ ಆ ಕೃತ್ಯಗಳು ನಡೆದಿಲ್ಲವೆಂದೇ ಹೇಳುತ್ತಿದ್ದನು.

ಕ್ರಾಂತಿಸೇನೆಯವರ ದುಷ್ಕೃತ್ಯಗಳನ್ನು ಕೇಳಿ, ಚಂದ್ರಹಾಸನು ಕೋಪದಿಂದ ಕಿಡಿಕಿಡಿಯಾದನು. ಕಿಶೋರನನ್ನು ಕರೆದು "ನೀನು ನನ್ನ ಯೋಗಕ್ಷೇಮವನ್ನು ನೋಡಬೇಕಾಗಿಲ್ಲ. ನಮ್ಮ ಪಕ್ಷದ ಯೊಗಕ್ಷೇಮವನ್ನು ನೋಡುವುದು ನಿನ್ನ ಪ್ರಥಮ ಜವಾಬ್ದಾರಿ. ನಾಳೆಯಿಂದಲೇ ನೀನು ಪ್ರಚಾರ ಕಾರ್ಯದಲ್ಲಿ ತೊಡಗಬೇಕು" ಎಂದು ಎಚ್ಚರಿಸಿದನು. ಕಿಶೋರನು ಚಂದ್ರಹಾಸನ ರಕ್ಷಣೆಗೆ ಸೂಕ್ತ ಏರ್ಪಾಟು ಮಾಡಿ, ಪ್ರಚಾರ ಕಾರ್ಯಕ್ಕೆ ಹೊರಟನು. ಅವನ ಮುಂದಾಳುತನ ದೊರಕಿದ ಮೇಲೆ ಕ್ರಾಂತಿಕೂಟದವರಿಗೆ ಹೊಸಸ್ಫೂರ್ತಿ ಬಂದಂತಾಯಿತು. ಪುನಃ ಕ್ರಾಂತಿಕೂಟಕ್ಕೂ ಕ್ರಾಂತಿಸೇನೆಗೂ ಭಯಾನಕ

ಸೆಣಸಾಟ ಆರಂಭವಾಯಿತು. ಶ್ರೀಪುರದ ಹೊರವಲಯದಲ್ಲಿ ಕಿಶೋರನ ಅಧ್ಯಕ್ಷತೆಯಲ್ಲಿ ಕ್ರಾಂತಿಕೂಟದ ಕೆಲಸಗಾರರು ಸಭೆ ಸೇರಿದ್ದಾಗ, ಕ್ರಾಂತಿಸೇನೆಯವರು ಕತ್ತಿ, ದೊಣ್ಣೆ, ಭರ್ಜಿಗಳ ಸಮೇತ ಸಭೆಯ ಮೇಲೆ ಹಲ್ಲೆ ನಡೆಸಿ, ಕೈಗೆ ಸಿಕ್ಕವರನ್ನು ಕೊಲ್ಲಲಾರಂಭಿಸಿದರು. ರೊಚ್ಚಿಗೆದ್ದ ಕ್ರಾಂತಿಕೂಟದವರು ಅವರ ಮೇಲೆ ತಿರುಗಿ ಬಿದ್ದು ಹದಿನಾರು ಜನ ಕ್ರಾಂತಿಸೇನೆಯವರನ್ನು ಕೊಂದರು. ಎಂಟು ಜನರನ್ನು ಗಾಯಗೊಳಿಸಿದರು. ಮರುದಿನ ಕಿಶೋರನು ತನ್ನ ಸಂಗಾತಿಗಳೊಡನೆ ಬೆಳ್ಳಿಘಟ್ಟವೆಂಬ ಊರಿಗೆ ಹೋಗುತ್ತಿದ್ದಾಗ, ಕ್ರಾಂತಿಸೇನೆಯವರು ಅವನ ಕಾರನ್ನು ಗುರುತಿಸಿ, ಅದನ್ನು ಅಡ್ಡಗಟ್ಟಿ ಬಾಂಬಿನ ಮಳೆಯನ್ನೇ ಸುರಿಸಿದರು. ಕಿಶೋರನು ಧೃತಿಗೆಡದೆ ಕಾರನ್ನು ದಾಳಿಗಾರರ ಮಧ್ಯೆ ಹಾರಿಸಿಕೊಂಡು ಹೋಗಿ ತಪ್ಪಿಸಿಕೊಂಡು ಹೋದನು.

ಮರುದಿನ ಬಸಿರಾಳು ಎಂಬಲ್ಲಿ ಮೊದಲೇ ಗೊತ್ತಾಗಿದ್ದಂತೆ, ಕ್ರಾಂತಿಕೂಟದ ಪ್ರಚಾರ ಸಭೆ ನಡೆಯುತ್ತಿದ್ದಾಗ, ಕ್ರಾಂತಿಸೇನೆಯವರು ಏಕಾಏಕಿ ಬಾಂಬುಗಳನ್ನು ಸಭೆಯ ಮೇಲೆ ಎಸೆದು ಓಡಿ ಹೋದರು. ಸಭೆಯಲ್ಲಿದ್ದ ನಲವತ್ತು ಜನರಿಗೆ ಗಾಯಗಳಾಗಿದ್ದವು. ಸಭೆಯಲ್ಲಿದ್ದ ವೀರೇಂದ್ರ ಕುಮಾರ್ ಎಂಬ ಅಭ್ಯರ್ಥಿ ತೀವ್ರ ಘಾಸಿಗೊಂಡು ಆಸ್ಪತ್ರೆಯನ್ನು ಸೇರಿದನು. ಅದೇ ದಿನ ಬನಸಾಗರಿ ಎಂಬ ಗ್ರಾಮದಲ್ಲಿ ಕ್ರಾಂತಿಕೂಟದ ಉಮೇದುವಾರನೊಬ್ಬನು ತನ್ನ ಮನೆಯಲ್ಲಿದ್ದಾಗ, ರಾತ್ರಿಯ ಹೊತ್ತು ಸುಮಾರು ಹದಿನೈದು ಮಂದಿ ಕ್ರಾಂತಿಸೇನೆಯವರು ಬಾಂಬು, ಈಟಿ, ಚಾಕುಗಳ ಸಹಿತ ಅವನ ಮನೆಯೊಳಗೆ ನುಗ್ಗಿ, ಅವನ ಮನೆಯವರ ಎದುರಿಗೇ ಅವನನ್ನು ಕೊಂದು, ಹತ್ತು ನಿಮಿಷಗಳೊಳಗಾಗಿ ಅಲ್ಲಿಂದ ಪರಾರಿಯಾದರು. ಎರಡು ದಿನಗಳ ತರುವಾಯ, ಶ್ರೀಪುರ ನಗರದಲ್ಲಿ ವಸಂತಕುಮಾರ್ ಎನ್ನುವ ಸೋಷಿಯಲಿಸ್ಟ್ ಪಕ್ಷದ ಅಭ್ಯರ್ಥಿ ತನ್ನ ಮನೆಯ ಮುಂದುಗಡೆ ಕಾರನ್ನು ಹತ್ತುತ್ತಿರುವಾಗ ಎಲ್ಲೋ ಅವಿತುಕೊಂಡಿದ್ದ ಕ್ರಾಂತಿಸೇನೆಯವರು ಅವನ ಮೇಲೆರಗಿ ಅವನ ಮೇಲೆ ಬಾಂಬನ್ನು ಎಸೆದು, ಅವನನ್ನು ಚೂರಿಯಿಂದ ತಿವಿದು, ಮಿಂಚಿನ ವೇಗದಲ್ಲಿ ಓಡಿಹೋದರು. ವಸಂತಕುಮಾರನು ಎರಡು ಸಾರಿ ನಗರಸಭೆಯ ಅಧ್ಯಕ್ಷನಾಗಿ ಹತ್ತು ವರ್ಷಗಳ ಕಾಲ ಜನಸೇವೆ ಮಾಡಿದ್ದನು. ಅವನು ಅತ್ಯಂತ ಪ್ರಾಮಾಣಿಕ, ಜನಾನುರಾಗಿ ಮತ್ತು ನಿಷ್ಠಾವಂತ, ಅವನ ಮರಣದಿಂದ ಇಡೀ ಶ್ರೀಪುರ ಶೋಕಸಾಗರದಲ್ಲಿ ಮುಳುಗಿತ್ತು.

ಈ ಘಟನೆಯಾದ ಎರಡು ದಿನಗಳ ನಂತರ, ವಿಜಯಾನಂದನೆಂಬ ಕಾಂಗ್ರೆಸ್ ಅಭ್ಯರ್ಥಿ, ರಾತ್ರಿ ಹನ್ನೊಂದು ಗಂಟೆಯಲ್ಲಿ ಬಸ್ಸಿನಲ್ಲಿ ಶ್ರೀಪುರ ನಗರದಲ್ಲಿ ಬರುತ್ತಿರುವಾಗ, ಕ್ರಾಂತಿಸೇನೆಯ ಧೂರ್ತರು ಬಸ್ಸನ್ನು ನಿಲ್ಲಿಸಿ, ಎಲ್ಲಾ ಪ್ರಯಾಣಿಕರ ಕಣ್ಣೆದುರಿನಲ್ಲಿಯೆ ಅವನನ್ನು ಎಳೆದುಕೊಂಡು ಹೋಗಿ, ಒಂದು ಗಲ್ಲಿಯಲ್ಲಿ ಅವನ ಕತ್ತನ್ನು ಕತ್ತರಿಸಿ ಅವನ ಹೆಣವನ್ನು ಒಳ ಚರಂಡಿಗೆಸೆದು ಹೋಗಿದ್ದರು. ಮರುದಿನ ಅಮರಚಂದ್ರನೆಂಬ ಕ್ರಾಂತಿಕೂಟದ ಅಭ್ಯರ್ಥಿ ಚುನಾವಣಾ ಪ್ರಚಾರವನ್ನು ಮುಗಿಸಿಕೊಂಡು ರಾತ್ರಿ ಕಾರಿನಲ್ಲಿ ತನ್ನ ಮನೆಯ ಮುಂದೆ ಇಳಿದೊಡನೆ, ಎಲ್ಲೋ ಅವಿತುಕೊಂಡಿದ್ದ ಕ್ರಾಂತಿಸೇನೆಯ

ಇಪ್ಪತ್ತು ಮೂವತ್ತು ಜನರು ಅವನ ಮೇಲೆರಗಿ ಅವನನ್ನು ಸಲಾಕೆಗಳಿಂದಲೂ, ಮಚ್ಚು, ಕತ್ತಿಗಳಿಂದಲೂ ಹೊಡೆದು ಸಾಯಿಸಿ ವಾಯುವೇಗದಲ್ಲಿ ಪರಾರಿಯಾದರು.

ಇಷ್ಟೆಲ್ಲಾ ಅನಾಹುತಗಳು ನಡೆದರೂ, ಕ್ರಾಂತಿಕೂಟದವರು ಕಿಶೋರನ ಮುಂದಾಳುತನದಲ್ಲಿ ಚುನಾವಣೆಯ ಪ್ರಚಾರವನ್ನು ಬಹಳ ಯಶಸ್ವಿಯಾಗಿ ನಡೆಸಿದ್ದರು. ಕಿಶೋರನು ಚುನಾವಣಾರಂಗದಲ್ಲಿದ್ದರೂ ಕೂಡ ಅವನ ಮನಸ್ಸು ಆಸ್ಪತ್ರೆಯಲ್ಲೇ ಇರುತ್ತಿತ್ತು. ದಿನಕ್ಕೊಮ್ಮೆ ಅಥವಾ ಎರಡು ದಿನಗಳಿಗೊಮ್ಮೆ ಆಸ್ಪತ್ರೆಗೆ ಹೋಗಿ, ಚಂದ್ರಹಾಸನನ್ನು ನೋಡಿ ಅವನಿಗೆ ವಿದ್ಯಮಾನಗಳನ್ನು ವರದಿ ಮಾಡುತ್ತಿದ್ದನು. ಕಿಶೋರನನ್ನೂ, ಚಂದ್ರಹಾಸನನ್ನೂ ಕೊಲ್ಲಬೇಕೆಂದು ಕ್ರಾಂತಿಸೇನೆಯವರು ಸಂಚು ಮಾಡಿದ್ದರು. ಕಿಶೋರನು ಕ್ರಾಂತಿಸೇನೆಯವರಿಗೆ ತನ್ನ ಸುಳಿವು ಗೊತ್ತಾಗದಂತೆ, ಬೆಳಿಗ್ಗೆ ಒಂದುಕಡೆ ಇದ್ದರೆ, ಮಧ್ಯಾಹ್ನ ಇನ್ನೊಂದು ಕಡೆ ಇರುತ್ತಿದ್ದನು. ಸಾಯಂಕಾಲ ಮತ್ತೊಂದು ಕಡೆ ಇರುತ್ತಿದ್ದನು. ಮಿಂಚಿನ ವೇಗದಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಪ್ರಯಾಣ ಮಾಡುತ್ತಿದ್ದನು. ಆಸ್ಪತ್ರೆಯ ಸುತ್ತಲೂ ಪೊಲೀಸ್ ಕಾವಲಿನ ಜೊತೆಗೆ ಕ್ರಾಂತಿಕೂಟದವರ ಕಾವಲು ಇದ್ದುದರಿಂದ ಚಂದ್ರಹಾಸನನ್ನು ಕೊಲ್ಲುವುದು ಕ್ರಾಂತಿಸೇನೆಯವರಿಗೆ ಸಾಧ್ಯವಾಗಿರಲಿಲ್ಲ.

ಚುನಾವಣೆಯ ದಿನ ಕ್ರಾಂತಿಸೇನೆಯವರ ಕಾನೂನು ಬಾಹಿರ ಕಾರ್ಯಗಳಿಗೆ ಮಿತಿಯೇ ಇರಲಿಲ್ಲ. ಮತಗಟ್ಟೆಗಳ ಸಮೀಪ ಕ್ರಾಂತಿಸೇನೆಯ ಗೂಂಡಾಗಳು ಆಯುಧ ಸಮೇತರಾಗಿ ನಿಂತು ಭಯೋತ್ಪಾದನೆಯನ್ನುಂಟು ಮಾಡುತ್ತಿದ್ದರು. ತಮ್ಮ ಪಕ್ಷಕ್ಕೆ ಬೆಂಬಲ ಸಿಕ್ಕಲಿಲ್ಲವೆಂಬ ಅನುಮಾನದಿಂದ, ರಾಜ್ಯದಲ್ಲಿ ಹತ್ತು ಹದಿನೈದು ಕಡೆಗಳಲ್ಲಿ ಮತಗಟ್ಟೆಗಳಿಗೆ ಬೆಂಕಿ ಹಚ್ಚಿದರು. ನಾಲ್ಕೈದು ಕಡೆಗಳಲ್ಲಿ ಮತಗಳಿದ್ದ ಪೆಟ್ಟಿಗೆಗಳನ್ನು ಅಪಹರಿಸಿಕೊಂಡು ಹೋದರು. ಕೆಲವು ಕಡೆಗಳಲ್ಲಿ ಚುನಾವಣಾಧಿಕಾರಿಗಳ ಮೇಲೆ ಹಲ್ಲೆ ನಡೆಸಿ ಅವರನ್ನು ಗಾಯಗೊಳಿಸಿದ್ದರು.

ಕ್ರಾಂತಿಸೇನೆಯವರು ಇಷ್ಟೆಲ್ಲಾ ಪುಂಡಾಟಿಕೆಗಳನ್ನೂ, ಕೊಲೆಗಳನ್ನೂ ಮಾಡಿದ್ದರೂ ಸಹ, ಚುನಾವಣೆಗಳ ಫಲಿತಾಂಶ ಹೊರಬಿದ್ದಾಗ, ಇಡೀ ರಾಜ್ಯದಲ್ಲಿ ಕ್ರಾಂತಿಸೇನೆಯವರು ಶೇಕಡ ಇಪ್ಪತ್ತೈದರಷ್ಟು ಸ್ಥಾನಗಳನ್ನೂ ಸಹ ಪಡೆದಿರಲಿಲ್ಲ. ಕ್ರಾಂತಿಸೇನೆಯವರು ಶ್ರೀಪುರನಗರ ಮತ್ತು ಶ್ರೀಪುರ ಜಿಲ್ಲೆ ತಮ್ಮ ಭದ್ರಕೋಟೆಗಳೆಂದು ಭಾವಿಸಿದ್ದರು. ಆ ಭದ್ರಕೋಟೆಗಳಲ್ಲಿ ಕ್ರಾಂತಿಸೇನೆಯ ಉಮೇದುವಾರರು ಅವಮಾನಕರವಾದ ರೀತಿಯಲ್ಲಿ ಪರಾಭವ ಹೊಂದಿದ್ದರು. ರಾಜ್ಯದ ಹಲವು ಕಡೆಗಳಲ್ಲಿ ಕ್ರಾಂತಿಸೇನೆಯ ಉಮೇದುವಾರರು ಠೇವಣಿಗಳನ್ನು ಕಳೆದುಕೊಂಡಿದ್ದರು.

ತನ್ನ ಪಕ್ಷ ಈ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಪರಾಭವವನ್ನು ಹೊಂದಿದ್ದು ಶಂಕರನಿಗೆ ಬಹಳ ಆಶ್ಚರ್ಯವಾಗಿತ್ತು. ಅದರಲ್ಲೂ ಶ್ರೀಪುರ ನಗರದಲ್ಲಿ ಮತ್ತು ಶ್ರೀಪುರ ಜಿಲ್ಲೆಯಲ್ಲಿ ಅವನ ಪಕ್ಷದ ಉಮೇದುವಾರರು ಅವಮಾನಕರವಾದ ರೀತಿಯಲ್ಲಿ ಸೋತಿದ್ದು ಅವನಿಗೆ ಖೇದವನ್ನುಂಟುಮಾಡಿತ್ತು. ಮುಂಬರಲಿದ್ದ ಲೋಕಸಭಾ ಮತ್ತು ವಿಧಾನಸಭಾ

ಚುನಾವಣೆಗಳಲ್ಲಿ ತನ್ನ ಸೇನೆಯ ಉಮೇದುವಾರರನ್ನೆಲ್ಲಾ ಗೆಲ್ಲಿಸಿ, ಜಯಭೇರಿಯನ್ನು ಹೊಡೆದು, ರಾಜ್ಯದ ರಾಜಕೀಯವನ್ನು ತನ್ನ ವಶಪಡಿಸಿಕೊಳ್ಳಬೇಕೆಂದು ಅವನು ಆಶಿಸಿದ್ದನು. ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ತನ್ನ ಸೇನೆಗೆ ಪ್ರಾಪ್ತಿಯಾಗಿದ್ದ ಪರಾಜಯದಿಂದ ಅವನ ಆಶಾಗೋಪುರ ಕಳಚಿ ಬಿದ್ದಿತು. ಪರಾಜಯದ ಪರಿಣಾಮವಾಗಿ ಅವನು ರೋಷಾವಿಷ್ಟನಾಗಿದ್ದನು. ಚುನಾವಣೆಯ ಫಲಿತಾಂಶ ಹೊರಬಿದ್ದ ನಂತರ ಸುಮಾರು ಒಂದು ವಾರ ಅವನು ಹುಚ್ಚನಂತೆ ವರ್ತಿಸುತ್ತಿದ್ದನು. ಎಲ್ಲರ ಮೇಲೂ ರೇಗಿರೇಗಿ ಬೀಳುತ್ತಿದ್ದನು. ತನ್ನ ಮತ್ತು ತನ್ನವರ ದೌರ್ಜನ್ಯ ಕೃತ್ಯಗಳ ದೆಸೆಯಿಂದ ಪರಾಜಯ ಪ್ರಾಪ್ತವಾಯಿತೆಂಬುದನ್ನು ಮರೆತು ಇತರ ಪಕ್ಷಗಳು ಹಣ, ಹೆಂಡಗಳ ವಿನಿಯೋಗದಿಂದ ಓಟನ್ನು ಪಡೆದಿದ್ದರಿಂದ ತನ್ನ ಪಕ್ಷಕ್ಕೆ ಸೋಲಾಯಿತೆಂದು ಸಾರುತ್ತಿದ್ದನು. ಅಲ್ಲದೆ ಕಾಂಗ್ರೆಸ್ಸಿನವರೂ, ಕ್ರಾಂತಿಕೂಟದವರೂ ಗುಪ್ತ ಒಡಂಬಡಿಕೆ ಮಾಡಿಕೊಂಡು, ಅನೀತಿ ಅನ್ಯಾಯಗಳಿಂದ ತನ್ನ ಕಡೆಯವರನ್ನು ಸೋಲಿಸಿದರೆಂದು ಅಪಪ್ರಚಾರ ಮಾಡುತ್ತಿದ್ದನು.

೧೬

ಚುನಾವಣೆಗಳಲ್ಲಿ ಆದ ಪರಾಜಯದ ದೆಸೆಯಿಂದ ಶಂಕರನಿಗೆ ಅವನ ವೈರಿಗಳ ಮೇಲಿದ್ದ ದ್ವೇಷದ ವಿಷಜ್ವಾಲೆ ಪ್ರಜ್ವಲಿಸಿ ಉರಿಯಲಾರಂಭಿಸಿತ್ತು. ಒಂದೇ ಸಾರಿ ಅವನು ತನ್ನ ವೈರಿಗಳನ್ನೆಲ್ಲಾ ಹತಮಾಡಬೇಕೆಂದು ಪಣತೊಟ್ಟನು. ಅವನ ಪ್ರಥಮ ವೈರಿಯಾಗಿದ್ದ ಚಂದ್ರಹಾಸನನ್ನು ಕೊಲ್ಲುವುದು ಅವನ ಪ್ರಥಮ ಕರ್ತವ್ಯ ವಾಗಿತ್ತು. ನಾನಾಕಾರಣಗಳ ದೆಸೆಯಿಂದ ಶಂಕರನಿಗೆ ಗೋಪಾಲನ ಮೇಲೆ ದ್ವೇಷ ಬೆಳೆದಿತ್ತು. ಮೊದಲನೆಯದಾಗಿ, ಗೋಪಾಲನು ಅವನ ಸ್ನೇಹಹಸ್ತವನ್ನು ನಿರಾಕರಿಸಿ ದ್ದನು. ಎರಡನೆಯದಾಗಿ, ಗೋಪಾಲನು ತನ್ನ ಬದ್ಧ ವೈರಿಯಾದ ಚಂದ್ರಹಾಸ ನೊಡನೆ ಸ್ನೇಹವನ್ನು ಬೆಳೆಸಿದ್ದನು. ಮೂರನೆಯದಾಗಿ ಚಂದ್ರಹಾಸನೂ, ಗೋಪಾಲನೂ ಗುಪ್ತ ಒಡಂಬಡಿಕೆಯನ್ನು ಮಾಡಿಕೊಂಡು ತನ್ನ ಕ್ರಾಂತಿಸೇನೆಯ ಉಮೇದುವಾರ ರನ್ನು ಸೋಲಿಸಿದರೆಂದು ಅವನು ಭಾವಿಸಿದ್ದನು. ಜೊತೆಗೆ ಚಂಚಲೆಯ ಮೇಲಿನ ವ್ಯಾಮೋಹ ಅವನನ್ನು ಇನ್ನೂ ಬಿಟ್ಟಿರಲಿಲ್ಲ.

ಚಂಚಲೆಯೊಡನೆ ತಾನಾಡಿದ್ದ ರತಿಕ್ರೀಡೆ ಆಗಾಗ ಅವನ ನೆನಪಿಗೆ ಬರುತ್ತಿತ್ತು. ಕಾಂತಿಹೀನನೂ, ನಿರ್ವೀರ್ಯನೂ ಆಗಿದ್ದ ಗೋಪಾಲನಿಂದ ಚಂಚಲೆಗೆ ಸುಖ ಲಭಿಸಿರಲಾರದೆಂದೂ, ಅವಳು ತನ್ನನ್ನೂ ಇನ್ನೂ ಪ್ರೀತಿಸುತ್ತಿರಬಹುದೆಂದೂ ಅವನು ಊಹಿಸಿದ್ದನು. ಗೋಪಾಲನು ಸತ್ತರೆ, ಚಂಚಲೆ ಪುನಃ ತನ್ನವಳಾಗುತ್ತಾಳೆಂಬ ಕನಸನ್ನು ಅವನು ಕಾಣುತ್ತಿದ್ದನು. ಈ ಎಲ್ಲಾ ಕಾರಣಗಳಿಂದ ಚಂದ್ರಹಾಸನನ್ನೂ, ಗೋಪಾಲನನ್ನೂ, ಸಾಧ್ಯವಾದರೆ ಒಂದೇ ದಿನ ಹತ ಮಾಡಬೇಕೆಂದು ತೀರ್ಮಾನಿಸಿದನು. ಆದರೆ ಗೋಪಾಲನಿಗೆ ಮಾತ್ರ ತನ್ನ ಮೇಲೆ ಶಂಕರನು ಅಷ್ಟೊಂದು ದ್ವೇಷ ಇಟ್ಟಿದ್ದಾನೆಂದು ಕನಸಿನಲ್ಲಿಯೂ ಹೊಳೆದಿರಲಿಲ್ಲ.

ಚಂದ್ರಹಾಸನನ್ನೂ, ಗೋಪಾಲನನ್ನೂ ಕೊಲ್ಲುವ ವಿಚಾರದಲ್ಲಿ ಶಂಕರನು ತನ್ನ ಕಿಂಕರರಾದ ಇಸ್ಮೇಯಿಲ್, ದೇಬಿನ್, ಭೋಲಾನಾಥ್ ಇವರುಗಳೊಡನೆ ಆಪ್ತಾಲೋಚನೆ ನಡೆಸಿದನು. ಗೋಪಾಲನನ್ನೂ, ಚಂದ್ರಹಾಸನನ್ನೂ ಒಂದೇ ದಿನ ರಾತ್ರಿ ಕೊಲ್ಲಬೇಕೆಂದು ನಾಲ್ವರೂ ಸೇರಿ ತೀರ್ಮಾನಿಸಿದರು. ಕ್ರಾಂತಿಸೇನೆಯ ಒಂದು ತಂಡ ಭೋಲಾನಾಥನ ಮುಖಂಡತ್ವದಲ್ಲಿ ಶ್ರೀಪುರದ ಆಸ್ಪತ್ರೆಗೆ ನುಗ್ಗಿ ಕಾವಲುಗಾರರನ್ನು ಕೊಂದು, ಚಂದ್ರಹಾಸನ ಕೊಲೆ ಮಾಡಬೇಕೆಂದೂ, ಇನ್ನೊಂದು ತಂಡ ಇಸ್ಮೇಯಿಲ್ ನೇತೃತ್ವದಲ್ಲಿ ಅದೇ ದಿನ ರಾತ್ರಿ ಸಿರಗೂರಿಗೆ ಹೋಗಿ, ಗೋಪಾಲನ ಮನೆಯನ್ನು ನುಗ್ಗಿ ಅವನನ್ನು ಕೊಲೆ ಮಾಡಬೇಕೆಂದೂ ನಿರ್ಣಯ ಮಾಡಿದರು. ಚಂದ್ರಹಾಸನ ರಕ್ಷಣೆಗಾಗಿ ಸರ್ಕಾರದವರು ನಾಲ್ವರು ರಿಸರ್ವ್ ಪೊಲೀಸಿನವರನ್ನು ನೇಮಕ ಮಾಡಿದ್ದರು. ಅವರ ಪೈಕಿ, ಹಗಲು ಇಬ್ಬರು, ರಾತ್ರಿ ಇಬ್ಬರು, ಸರದಿಯ ಪ್ರಕಾರ ಚಂದ್ರಹಾಸನಿದ್ದ ವಾರ್ಡಿನ ಮುಂದೆ ಕಾದಿರುತ್ತಿದ್ದರು. ಕಿಶೋರನು ಆಸ್ಪತ್ರೆಯ ಸುತ್ತಲೂ ಯಾರಿಗೂ ಗೊತ್ತಾಗದಂತೆ ಕ್ರಾಂತಿಕೂಟದ ಶಸ್ತ್ರಸಜ್ಜಿತ ರಕ್ಷಣಾದಳದ ಸಿಪಾಯಿಗಳನ್ನು ಕಾವಲಿರಿಸಿದ್ದನು. ಹಗಲು ಐವತ್ತು ಜನ ಸಿಪಾಯಿಗಳು ಕಾಯುತ್ತಿದ್ದರೆ, ರಾತ್ರಿ ಐವತ್ತು ಜನರು ಕಾಯುತ್ತಿದ್ದರು. ರಾತ್ರಿಯ ಹೊತ್ತು ಆಸ್ಪತ್ರೆಯ ಒಳಗಡೆ ಕಿಶೋರನೂ ಮತ್ತು ಐದಾರು ಜನ ಕ್ರಾಂತಿಕೂಟದ ಸಿಪಾಯಿಗಳೂ ಕಾವಲಿರುತ್ತಿದ್ದರು.

ಕ್ರಾಂತಿಸೇನೆಯವರ ಕಣ್ಣಿಗೆ ಇಬ್ಬರು ರಿಸರ್ವ್ ಪೊಲೀಸಿನವರೂ, ಐದಾರು ಜನ ಕ್ರಾಂತಿಕೂಟದ ಸಿಪಾಯಿಗಳೂ ಮಾತ್ರ ಕಾಣುತ್ತಿದ್ದರು. ಇಬ್ಬರು ರಿಸರ್ವ್ ಪೊಲೀಸಿನವರನ್ನೂ, ಕಿಶೋರನನ್ನೂ, ಉಳಿದ ಐದಾರು ಜನ ಕ್ರಾಂತಿಕೂಟದ ಸಿಪಾಯಿಗಳನ್ನೂ ಎದುರಿಸುವುದು ಬಹಳ ಸುಲಭವೆಂದು ಕ್ರಾಂತಿಸೇನೆಯವರ ಕಲ್ಪನೆಯಾಗಿತ್ತು. ನಡುರಾತ್ರಿ ಮಿಂಚಿನ ವೇಗದಲ್ಲಿ ಆಸ್ಪತ್ರೆಗೆ ನುಗ್ಗಿ ಬಾಂಬುಗಳನ್ನು ತೂರಿ ಗೊಂದಲವೆಬ್ಬಿಸಿ, ಚಂದ್ರಹಾಸನನ್ನು ಕೊಲ್ಲಬೇಕೆಂದು ಹಂಚಿಕೆ ಹೂಡಿದರು. ಮೂರುದಿನಗಳ ನಂತರ, ಒಂದು ಭಾನುವಾರ ರಾತ್ರಿ ಸುಮಾರು ಎರಡು ಗಂಟೆಯ ಸಮಯದಲ್ಲಿ, ಭೋಲಾನಾಥನ ನಾಯಕತ್ವದಲ್ಲಿ ಕ್ರಾಂತಿಸೇನೆಯ ಮೂವತ್ತು ಜನರಿಂದ ಕೂಡಿದ್ದ ದಳ, ಎರಡು ಟ್ರಕ್ಕುಗಳಲ್ಲಿ ಶ್ರೀಪುರದ ದೊಡ್ಡ ಆಸ್ಪತ್ರೆಯ ಹತ್ತಿರ ಹೋಯಿತು. ದೂರದಲ್ಲಿ ಟ್ರಕ್ಕುಗಳನ್ನು ನಿಲ್ಲಿಸಿದರು. ಆಸ್ಪತ್ರೆಯ ಸುತ್ತಲೂ ಅವಿತುಕೊಂಡಿದ್ದ ಕ್ರಾಂತಿಕೂಟದ ರಕ್ಷಣಾದಳದ ಸಿಪಾಯಿಗಳ ಪೈಕಿ ಕೆಲವರು ಟ್ರಕ್ಕುಗಳು ನಿಂತಿದ್ದನ್ನೂ, ಜನರು ಟ್ರಕ್ಕುಗಳಿಂದ ಕೆಳಗಿಳಿಯುತ್ತಿದ್ದುದನ್ನೂ ದೂರದಿಂದ ನೋಡಿದರು. ತಕ್ಷಣ ಒಬ್ಬರಿಂದೊಬ್ಬರಿಗೆ ವರ್ತಮಾನ ಹೋಗಿ, ಐದು ನಿಮಿಷಗಳೊಳಗಾಗಿ ಐವತ್ತು ಜನ ಕ್ರಾಂತಿಕೂಟದ ಸಿಪಾಯಿಗಳು ಎರಡೂ ಕಡೆಗಳಿಂದ ಟ್ರಕ್ಕುಗಳು ನಿಂತ ಸ್ಥಳಕ್ಕೆ ಕತ್ತಲಲ್ಲಿ ಧಾವಿಸಿದರು. ಆಸ್ಪತ್ರೆಯ ಒಳಗಿದ್ದ ಕಿಶೋರನಿಗೆ ವರ್ತಮಾನ ಹೋಗಿ, ಅವನೂ ಕ್ರಾಂತಿಸೇನೆಯ ಧಾಳಿಯನ್ನೆದುರಿಸಲು ಸಿದ್ಧನಾಗಿದ್ದನು. ಕ್ರಾಂತಿಸೇನೆಯವರು ಮೂರು ದಿಕ್ಕಿನಿಂದ ಆಸ್ಪತ್ರೆಯ ಆವರಣದೊಳಗೆ ನುಗ್ಗಲು ಮೂರು ತಂಡಗಳನ್ನು ಮಾಡಿಕೊಂಡು,

ಒಂದೊಂದು ತಂಡವೂ ಒಂದೊಂದು ಕಡೆಯಿಂದ ಆಸ್ಪತ್ರೆಗೆ ಅಭಿಮುಖವಾಗಿ ಹೋಗುತ್ತಿರುವಾಗ, ಕ್ರಾಂತಿಕೂಟದವರು ಹಿಂದುಗಡೆಯಿಂದ ಅವರ ಬೆನ್ನಟ್ಟಿ ಹೋಗಿ ಅವರ ಮೇಲೆ ಕೈ ಬಾಂಬುಗಳನ್ನೆಸೆಯಲಾರಂಭಿಸಿದರು. ಈ ಅನಿರೀಕ್ಷಿತ ದಾಳಿಯಿಂದ ಕ್ರಾಂತಿಸೇನೆಯವರು ತಬ್ಬಿಬ್ಬಾಗಿ ಚಲ್ಲಾಪಿಲ್ಲಿಯಾದರು. ಕೆಲವರು ದಿಕ್ಕಾಪಾಲಾಗಿ ಓಡಿದರು; ಕೆಲವರು ಓಡಿಹೋಗಿ ಟ್ರಕ್ಕುಗಳನ್ನು ಹತ್ತಿದರು. ಹತ್ತು ನಿಮಿಷಗಳೊಳಗಾಗಿ ಟ್ರಕ್ಕುಗಳೂ, ಟ್ರಕ್ಕುಗಳಲ್ಲಿ ಬಂದವರೂ ಕಣ್ಮರೆಯಾದರು. ಅಂತೂ ಭೋಲಾನಾಥನ ದಂಡಯಾತ್ರೆ ನಿಷ್ಫಲವಾಯಿತು. ಆಸ್ಪತ್ರೆಯಲ್ಲಿದ್ದವರಿಗೆ ಕ್ರಾಂತಿಸೇನೆಯವರು ಬಂದಿದ್ದೂ ಗೊತ್ತಾಗಲಿಲ್ಲ; ಹೋದದ್ದೂ ಗೊತ್ತಾಗಲಿಲ್ಲ.

ಅದೇ ಭಾನುವಾರ ರಾತ್ರಿ, ಇಸ್ಮೇಯಿಲನ ನಾಯಕತ್ವದಲ್ಲಿ ಐವತ್ತು ಜನ ಕ್ರಾಂತಿಸೇನೆಯ ಕೊಲೆಗಡುಕರು ಎರಡು ಲಾರಿಗಳಲ್ಲಿ ಸಿರಗೂರಿಗೆ ಹೊರಟರು. ಸಿರಗೂರನ್ನು ಅವರು ಸೇರಿದಾಗ ರಾತ್ರಿ ಎರಡು ಗಂಟೆಯಾಗಿತ್ತು. ಸಿರಗೂರು ಪಟ್ಟಣವು ನಿಶೆಯ ಮಡಿಲಿನಲ್ಲಿ ಮಲಗಿರುವಂತಿತ್ತು. ಅಲ್ಲಲ್ಲಿ ಮಿಣಮಿಣನೆ ಹೊಳೆಯುತ್ತಿದ್ದ ವಿದ್ಯುತ್ ದೀಪಗಳ ವಿನಃ ಇಡೀ ಪಟ್ಟಣದಲ್ಲಿ ಎಲ್ಲೆಲ್ಲೂ ಅಂಧಕಾರ ಕವಿದಿತ್ತು. ಅಲ್ಲಲ್ಲಿ ಬೊಗಳುತ್ತಿದ್ದ ನಾಯಿಗಳ ಶಬ್ದ ವಿನಃ ಇಡೀ ಪಟ್ಟಣವು ನಿಶ್ಯಬ್ಧವಾಗಿ ನಿದ್ದೆ ಮಾಡುತ್ತಿರುವಂತಿತ್ತು. ಹಿಂದೆ ಯಾವಾಗಲೂ ಈ ಪಟ್ಟಣದಲ್ಲಿ ರಾಜಕೀಯ ಕೊಲೆಗಳಾಗಲೀ, ದರೋಡೆಗಳಾಗಲಿ ನಡೆದಿರಲಿಲ್ಲ. ಕ್ರಾಂತಿಸೇನೆಯ ದೌರ್ಜನ್ಯ ಕೃತ್ಯಗಳು ಸಿರಗೂರಿನಲ್ಲಿ ಯಾವಾಗಲೂ ನಡೆದಿರಲಿಲ್ಲ. ಆದ್ದರಿಂದ ಪೊಲೀಸಿನವರು ನಿಶ್ಚಿಂತೆಯಿಂದ ನಿದ್ದೆ ಮಾಡುತ್ತಿದ್ದರು. ಭಾನುವಾರವಾದ್ದರಿಂದ ಕೆಲವು ಉನ್ನತ ಅಧಿಕಾರಿಗಳು ರಾತ್ರಿ ಕ್ಲಬ್ಬಿಗೆ ಹೋಗಿ, ಯಥೇಚ್ಛವಾಗಿ ಕುಡಿದು, ಅರ್ಧ ರಾತ್ರಿಯಲ್ಲಿ ಮನೆಗೆ ಬಂದು ಎಚ್ಚರ ತಪ್ಪಿ ಶವಗಳಂತೆ ಬಿದ್ದಿದ್ದರು.

ಕ್ರಾಂತಿಸೇನೆಯವರು ನಿರಾತಂಕವಾಗಿ ಗೋಪಾಲನ ಮನೆಯ ಸಮೀಪ ಹೋಗಿ, ಲಾರಿಗಳನ್ನು ಸ್ವಲ್ಪ ದೂರದಲ್ಲಿ ನಿಲ್ಲಿಸಿ, ಮೊದಲು ಗೋಪಾಲನ ಮನೆಗೆ ಎಳೆದಿದ್ದ ಟೆಲಿಫೋನ್ ತಂತಿಯನ್ನು ಕತ್ತರಿಸಿ ಹಾಕಿದರು. ಅವರು ರಸ್ತೆಯಲ್ಲಿ ಟೆಲಿಫೋನ್ ತಂತಿಯನ್ನು ಕತ್ತರಿಸುತ್ತಿದ್ದಾಗ ಚಂಚಲೆಯ ಆಲ್ಸೇಷನ್ ನಾಯಿಗಳಾದ ಎಲ್ಸಾ ಮತ್ತು ರೂಬಿ ಮನೆಯ ಕಾಂಪೌಂಡಿನಿಂದ ಬೊಗಳಾರಂಭಿಸಿದವು. 'ಢಂ', 'ಢಂ' ಎಂದು ಎರಡು ಸಾರಿ ಶಬ್ದವಾಯಿತು. ನಾಯಿಗಳ ಸದ್ದಡಗಿ ಹೋಯಿತು. ಚಂಚಲೆ, ಮನೆಯ ಕೆಳಗಡೆ ಕೊಠಡಿಯಲ್ಲಿ ಅನಿಲಕುಮಾರನ ಜೊತೆ ಮಲಗಿದ್ದಳು. ಅದರ ಪಕ್ಕದ ಕೊಠಡಿಯಲ್ಲಿ ಸ್ವರೂಪರಾಣಿ ಮಲಗಿದ್ದಳು. ಗೋಪಾಲನು ಮೇಲ್ಗಡೆ ಮಹಡಿಯ ಮೇಲೆ ಮಲಗಿದ್ದನು. 'ಢಂ' 'ಢಂ' ಎಂಬ ಶಬ್ದ ಕೇಳಿದೊಡನೆ ನಿದ್ದೆ ಮಾಡುತ್ತಿದ್ದ ಚಂಚಲೆ ಬೆಚ್ಚಿ ಬಿದ್ದು ಎದ್ದಳು. ಕ್ರಾಂತಿಸೇನೆ ಅವಳಿಗೆ ಸಿಂಹಸ್ವಪ್ನವಾಗಿತ್ತು. ಕ್ರಾಂತಿಸೇನೆಯವರೇ ಬಂದಿರಬೇಕೆಂದು ಭಾವಿಸಿ, ನಡುಗುತ್ತಾ ಅತ್ತೆ ಮಲಗಿದ್ದ ಕೊಠಡಿಗೆ ಹೋಗಿ ಬಾಗಿಲನ್ನು ತಟ್ಟಿ ಅತ್ತೆಯನ್ನು ಎಬ್ಬಿಸಿದಳು. ಅವಳು ಅತ್ತೆಯನ್ನು ಎಬ್ಬಿಸುತ್ತಿದ್ದಾಗ

ಮನೆಯನ್ನು ಕಾಯುತ್ತಿದ್ದ ಘೂರ್ಖ ಸಿಪಾಯಿ 'ಅಯ್ಯೋ ಸತ್ತೆ' ಎಂದು ಕಿರಿಚಿಕೊಂಡನು. ಮರುಕ್ಷಣದಲ್ಲೇ ಅವನ ಸದ್ದೂ ಅಡಗಿಹೋಯಿತು.

ಮಹಡಿಯ ಮೇಲ್ಗಡೆ ಮಲಗಿದ್ದ ಗೋಪಾಲನಗೆ ಬಂದೂಕಿನ ಶಬ್ದ ಕೇಳಿದೊಡನೆ ಎಚ್ಚರವಾಯಿತು. ಎದ್ದು ಕಿಟಕಿಯಿಂದ ನೋಡಿದನು. ಕತ್ತಲಲ್ಲಿ ನೂರಾರು ಜನರು ಕಾಂಪೌಂಡಿನಲ್ಲಿ ಓಡಾಡುತ್ತಿರುವಂತೆ ಕಾಣಿಸಿತು. ಅಷ್ಟರಲ್ಲಿ ಘೂರ್ಖ ಸಿಪಾಯಿಯ ಆರ್ತನಾದವೂ ಕೇಳಿಸಿತು. ಕ್ರಾಂತಿಸೇನೆಯವರು ತನ್ನ ಮನೆಯನ್ನು ಮುತ್ತಿದ್ದಾರೆಂಬುದು ಅವನಿಗೆ ಖಚಿತವಾಯಿತು. ಕೆಳಗಡೆ ಮಲಗಿದ್ದ ಹೆಂಡತಿ, ಮಗ ಮತ್ತು ತಾಯಿಯ ಗತಿ ಏನಾಗಿದೆಯೋ ಎಂಬ ಕಳವಳದಿಂದ ಟಾರ್ಚ್‌ನ್ನು ಹಿಡಿದುಕೊಂಡು ದೇವರನ್ನು ಸ್ಮರಿಸುತ್ತಾ ಕೆಳಗಿಳಿದು ಬಂದನು. ಅವನು ಕೆಳಗಿಳಿದು ಬರುವುದರೊಳಗಾಗಿ ನಡುಮನೆಯ ಕಿಟಕಿಯ ಕಬ್ಬಿಣದ ಸರಳುಗಳನ್ನು ಬಗ್ಗಿಸಿ ಕೆಲವರು ನಡುಮನೆಯೊಳಗೆ ನುಗ್ಗಿದ್ದರು.

ಗೋಪಾಲನು ಟಾರ್ಚ್ ದೀಪವನ್ನು ಹಿಡಿದು ಮಹಡಿಯ ಮೆಟ್ಟಲಿಳಿದು ಬರುತ್ತಿರುವುದನ್ನು ಆ ಧೂರ್ತರು ನೋಡಿದರು. ಅವನು ಕೆಳಗಿಳಿದ ತಕ್ಷಣ ಹತ್ತು ಹನ್ನೆರಡು ಜನರು ಅವನನ್ನು ಸುತ್ತುವರಿದರು. ಅವರಲ್ಲಿ ಕೆಲವರನ್ನು ಅವನನ್ನು ಹಿಡಿದುಕೊಂಡರು. ಅವನು ಧೃತಿಗೆಡದೆ "ನೀವ್ಯಾರು? ನಿಮಗೇನು ಬೇಕು ಹೇಳಿ. ನಾನೇನು ಅಪರಾಧ ಮಾಡಿದ್ದೇನೆ. ತಿಳಿಸಿ?" ಎಂದು ಪ್ರಶ್ನಿಸಿದನು. ಧೂರ್ತರ ಪೈಕಿ ಒಬ್ಬನು "ನಾವು ಕ್ರಾಂತಿಕಾರರು. ನೀನೊಬ್ಬ ಬಂಡವಾಳಗಾರ. ಬಡವರ ಶತ್ರು" ಎಂದು ಹೇಳುತ್ತಾ, ಕೈಯಲ್ಲಿದ್ದ ಚಾಕುವಿನಿಂದ ಗೋಪಾಲನ ಹೊಟ್ಟೆಗೆ ಇರಿದನು. ಗೋಪಾಲನು "ಅಯ್ಯೋ" ಎಂದು ಕೂಗುತ್ತಾ ಕೆಳಗೆ ಕುಸಿದುಬಿದ್ದನು.

ಆ ಸಮಯಕ್ಕೆ ಸರಿಯಾಗಿ, ಸ್ವರೂಪರಾಣಿಯೂ, ಚಂಚಲೆಯೂ ನಡುಮನೆಗೆ ಓಡಿ ಬಂದರು. ಸ್ವರೂಪರಾಣಿ ಜೀವದ ಮೇಲೆ ಹಂಗು ತೊರೆದು, ಮಗನಿದ್ದೆಡೆಗೆ ನುಗ್ಗಿ ಹೋಗಿ, "ಅವನನ್ನು ಬಿಡಿ, ನನ್ನನ್ನು ಕೊಲ್ಲಿ" ಎನ್ನುತ್ತಾ ಚಾಕುವನ್ನು ಹಿಡಿದವನೆದುರಿಗೆ ಬಂದು ನಿಂತಳು. ಅಷ್ಟರಲ್ಲಿ ಇನ್ನೊಬ್ಬ ಧೂರ್ತನು ಅವಳ ತಲೆಗೆ ಕಬ್ಬಿಣದ ಸಲಾಕೆಯಿಂದ ಬಡಿದನು. ಸ್ವರೂಪರಾಣಿ ಸ್ವಲ್ಪವೂ ಕೂಗದೆ ದೊಪ್ಪನೆ ಮಗನ ಪಕ್ಕದಲ್ಲಿ ಬಿದ್ದಳು. ಚಂಚಲೆ ಅಳುತ್ತಾ, "ನಮ್ಮ ಆಸ್ತಿ ಎಲ್ಲವನ್ನೂ ತೆಗೆದುಕೊಂಡು ಹೋಗಿ. ಅವರನ್ನು ಮಾತ್ರ ಜೀವಸಹಿತ ಬಿಡಿ. ನಿಮ್ಮ ಕಾಲಿಗೆ ಬೀಳುತ್ತೇನೆ" ಎಂದು ದೈನ್ಯದಿಂದ ಕೈಮುಗಿದು ಆ ಧೂರ್ತರನ್ನು ಪ್ರಾರ್ಥಿಸುತ್ತಾ, ಬೀಗದ ಕೈಗೊಂಚಲನ್ನು ನೆಲದಮೇಲೆ ಎಸೆದಳು. ಇಸ್ಮೇಯಿಲ್ ಬೀಗದ ಕೈಗೊಂಚಲನ್ನು ಎತ್ತಿಕೊಂಡನು.

ಅಷ್ಟರಲ್ಲಿ, ಮಲಗಿದ್ದ ಅನಿಲಕುಮಾರನಿಗೆ ಗಲಾಟೆಯಿಂದ ಎಚ್ಚರವಾಗಿ, ತನ್ನ ತಾಯಿ ಕೊಠಡಿಯಲ್ಲಿ ಇಲ್ಲದಿದ್ದುದರಿಂದ ಅವನು ಅಳುತ್ತಾ ತಾಯಿಯನ್ನು ಹುಡುಕಿಕೊಂಡು, ಗಲಾಟೆ ನಡೆಯುತ್ತಿದ್ದ ನಡುಮನೆಗೆ ಬಂದನು. ರಕ್ತದ ಮಡುವಿನಲ್ಲಿ ನರಳುತ್ತಾ ಬಿದ್ದಿದ್ದ ತಂದೆಯನ್ನೂ, ಸುತ್ತಲೂ ರಾಕ್ಷಸರಂತೆ ನಿಂತಿದ್ದ ಆಗಂತುಕರನ್ನೂ ನೋಡಿ, "ಅಪ್ಪಾ" ಎಂದು ಕಿರಿಚಿಕೊಳ್ಳಲಾರಂಭಿಸಿದನು. ಒಬ್ಬ ಧೂರ್ತನು ತನ್ನ ಕೈಯಲ್ಲಿದ್ದ ಖಡ್ಗದಿಂದ,

ಕುರಿಮರಿಯ ತಲೆಯನ್ನು ಕತ್ತರಿಸುವಂತೆ, ತಾಯಿಯ ಕಣ್ಣೆದುರಿನಲ್ಲೇ ಅನಿಲಕುಮಾರ ತಲೆಯನ್ನು "ಚಕ್" ಎಂದು ಕಡಿದನು. ಕಡಿದ ರಭಸಕ್ಕೆ ರುಂಡ ಹತ್ತಿರದಲ್ಲಿದ್ದ ಸೋಫಾದ ಮೇಲೆ ಹೋಗಿ ಬಿತ್ತು.

ಆ ಘೋರ ದೃಶ್ಯವನ್ನು ನೋಡಲಾರದೆ, ಚಂಚಲೆಯು ತನ್ನ ಮಗನನ್ನು ಕಡಿದ ರಾಕ್ಷಸನ ಮುಂದೆ ಹೋಗಿ ರೋದಿಸುತ್ತಾ, ಕತ್ತನ್ನು ಬಗ್ಗಿಸಿ "ನನ್ನನ್ನೂ ಕೊಲ್ಲು ಪುಣ್ಯಾತ್ಮ" ಎಂದು ತಲೆಯನ್ನು ಕೊಟ್ಟಳು. ಆಗ ಇಸ್ಮೇಯಿಲನು ತನ್ನ ಅನುಯಾಯಿಗಳನ್ನು ಕುರಿತು "ಆಕೆ ತಂಟೆಗೆ ಹೋಗ್ಬೇಡಿ. ಅವಳನ್ನ ಕೊಲ್ಬಾರ್ದು ಅಂತ ತಾಕೀತಾಗೈತೆ" ಎಂದು ಹೇಳಿ ಅವಳನ್ನು ಹಿಡಿದುಕೊಂಡು ಬಲಾತ್ಕಾರವಾಗಿ ಅವಳ ರಟ್ಟೆಗೆ ಅಮಲು ಬರುವ ಯಾವುದೋ ಇಂಜೆಕ್ಷನ್ ಕೊಟ್ಟು, ಅವಳನ್ನು ಒಂದು ಕೊಠಡಿಯೊಳಗೆ ತಳ್ಳಿ, ಬಾಗಿಲನ್ನು ಹಾಕಿ, ಹೊರಗಡೆಯಿಂದ ಚಿಲಕ ಹಾಕಿಕೊಂಡನು. ಇರಿತದಿಂದ ಗೋಪಾಲನ ಕರುಳು ಹೊರಗೆ ಬಂದಿತ್ತು. ನೋವು ಮತ್ತು ರಕ್ತಸ್ರಾವದಿಂದ ಅರೆಪ್ರಜ್ಞೆಯಲ್ಲಿದ್ದ ಅವನು ಸ್ವಪ್ನದಲ್ಲಿ ನೊಡುತ್ತಿದ್ದಂತೆ ಆ ಘೋರ ದೃಶ್ಯವನ್ನು ನೋಡುತ್ತಿದ್ದನು. "ಅಯ್ಯೋ ಪರಮಾತ್ಮ" ಎಂದು ಅವನು ಕ್ಷೀಣಸ್ವರದಲ್ಲಿ ಒರಲಿದನು. ಆಗ ಇಸ್ಮೇಯಿಲನು "ನಿನ್ನ ಪರಮಾತ್ಮ ಕ್ರಾಂತಿಕಾಳಿಗೆ ಹೆದರಿ ಓಡಿ ಹೋಗ್ಯಾನೆ. ಸಾಯಿ ಬೋಳೀಮಗನೆ" ಎಂದು ಹೇಳುತ್ತಾ ಪಕ್ಕದಲ್ಲಿದ್ದವನ ಕೈಯಲ್ಲಿದ್ದ ಖಡ್ಗವನ್ನು ತೆಗೆದುಕೊಂಡು ಗೋಪಾಲನು ತಲೆಯನ್ನು ಕತ್ತರಿಸಿದನು.

ಆ ನಂತರ, ಕೊಲೆಗಡುಕರು ಗೋಪಾಲನ ಮನೆಯನ್ನೆಲ್ಲಾ ಶೋಧಿಸಿ, ಕಬ್ಬಿಣದ ಪೆಟ್ಟಿಗೆಯಲ್ಲಿದ್ದ ಆಭರಣಗಳನ್ನೂ, ಬೆಳ್ಳಿಬಂಗಾರಗಳನ್ನೂ, ನಗದು ಹಣವನ್ನೂ ದೋಚಿಕೊಂಡರು. ಗೋಪಾಲನ ಮನೆತನ ಅನೂಚಾನವಾಗಿ ಬೆಳೆದು ಬಂದ ಶ್ರೀಮಂತರ ಮನೆತನವಾಗಿತ್ತು. ಮನೆಯಲ್ಲಿ ಬೆಳ್ಳಿ ಬಂಗಾರಗಳೇ ಸುಮಾರು ಆರು ಅಥವಾ ಏಳು ಮಣಗಳಿದ್ದಿರಬಹುದೆಂದು ಪ್ರತೀತಿ ಇತ್ತು. ಧೂರ್ತರು ಗೋಪಾಲನ ಮನೆಯಿಂದ ಹೊರಡುವಾಗ ಗೋಪಾಲನ ರುಂಡವನ್ನು ತೆಗೆದುಕೊಂಡು ಹೋಗಿ ಸುಮಾರು ಒಂದು ಫರ್ಲಾಂಗ್ ದೂರದಲ್ಲಿ ಝುಂಡಾ ಮೈದಾನದ ಧ್ವಜ ಸ್ತಂಭಕ್ಕೆ ಅದನ್ನು ನೇತುಹಾಕಿದರು. ಗೋಪಾಲನ ರಕ್ತದಲ್ಲಿ ಒಂದು ಕಾಗದದ ಮೇಲೆ "ಕ್ರಾಂತಿ ಚಿರಾಯುವಾಗಲಿ" ಎಂದು ಬರೆದು ಆ ಕಾಗದವನ್ನು ರುಂಡವನ್ನು ನೇತು ಕಟ್ಟಿದ್ದ ಹಗ್ಗಕ್ಕೆ ಸಿಕ್ಕಿಸಿದ್ದರು.

ಮರುದಿನ ಬೆಳಿಗ್ಗೆ ವೃತ್ತ ಪತ್ರಿಕೆಯನ್ನು ಹಂಚುವ ಹುಡುಗನು, ಸೈಕಲ್ ಮೇಲೆ ಝುಂಡಾ ಮೈದಾನದ ಪಕ್ಕದ ರಸ್ತೆಯಲ್ಲಿ ಗೋಪಾಲನ ಮನೆಗೆ ಹೋಗುತ್ತಿರುವಾಗ, ಧ್ವಜಸ್ತಂಭಕ್ಕೆ ನೇತು ಹಾಕಿದ್ದ ಮನುಷ್ಯನ ತಲೆಯನ್ನು ನೋಡಿ ಬೆದರಿ ಅಲ್ಲಿ ನಿಲ್ಲದೆ ಗೋಪಾಲನಿಗೆ ಈ ವಿಚಾರವನ್ನು ತಿಳಿಸಬೇಕೆಂದು ವೇಗದಿಂದ ಗೋಪಾಲನ ಮನೆಯ ಕಡೆಗೆ ಸಾಗಿದನು. ಗೋಪಾಲನ ಮನೆಯ ಕಾಂಪೌಂಡ್ ಗೇಟು ಯಾವಾಗಲೂ ಹಾಕಿರುತ್ತಿತ್ತು. ಆದರೆ ಆ ದಿನ ತೆರೆದಿತ್ತು. ಮನೆಯ ಮುಂಭಾಗದ ಬಾಗಿಲು ಸಹ

ತೆರೆದಿತ್ತು. ಮನೆಯೊಳಗೆ ವಿದ್ಯುತ್ ದೀಪಗಳು ಉರಿಯುತ್ತಿದ್ದವು. ಪತ್ರಿಕೆಯ ಹುಡುಗನು ನಾಲ್ಕೈದು ಸಾರಿ "ಸಾರ್, ಸಾರ್" ಎಂದು ಕೂಗಿದನು. ಮನೆಯೊಳಗಿನಿಂದ ಯಾವ ಪ್ರತಿಧ್ವನಿಯು ಕೇಳಿಸಲಿಲ್ಲ. ಹಾಗೆಯೇ ಕಾಂಪೌಂಡಿನ ಒಳಗಡೆ ಅತ್ತ ಇತ್ತ ತನ್ನ ದೃಷ್ಟಿಯನ್ನು ಬೀರಿದನು. ಪ್ರತಿದಿನವೂ ಅವನು ಪತ್ರಿಕೆಗಳನ್ನು ಕೊಡಲು ಬಂದಾಗ ಬೊಗಳುತ್ತಿದ್ದ ಅಲ್ಸೇಷನ್ ನಾಯಿಗಳು ಸತ್ತು ಬಿದ್ದಿದ್ದವು.

ಅಷ್ಟರಲ್ಲಿ ಗೋಪಾಲನ ಮನೆಯಲ್ಲಿ ಕಸಮುಸುರೆ ಮುಂತಾದ ಕೆಲಸ ಮಾಡುತ್ತಿದ್ದ ಹೆಣ್ಣಾಳು ತನ್ನ ಮನೆಯಿಂದ ಅಲ್ಲಿಗೆ ಬಂದಳು. ಪತ್ರಿಕೆಯ ಹುಡುಗನು ನಾಯಿಗಳು ಸತ್ತು ಬಿದ್ದಿರುವುದನ್ನು ಅವಳಿಗೆ ತೋರಿಸಿ, ತಾನು ಕರೆದಾಗ ಮನೆಯಿಂದ ಯಾವ ಉತ್ತರವೂ ಬರಲಿಲ್ಲವೆಂದು ಹೇಳಿದನು. ಹೆಣ್ಣಾಳು ಮನೆಯೊಳಗೆ ಹೋದಳು. ಅರ್ಧ ನಿಮಿಷದಲ್ಲಿ ಅವಳು ಕೂಗುತ್ತಾ ವಾಪಸು ಓಡಿ ಬಂದು, ಗದ್ಗದ ಧ್ವನಿಯಲ್ಲಿ ತಾನು ನೋಡಿದ ಘೋರ ದೃಶ್ಯವನ್ನು ಪತ್ರಿಕೆಯವನಿಗೆ ವಿವರಿಸಿದಳು. ಝುಂಡಾ ಮೈದಾನದಲ್ಲಿ ತಾನು ನೋಡಿದ್ದ ರುಂಡ ಗೋಪಾಲನದೇ ಆಗಿರಬೇಕೆಂದು ಅವನು ಊಹಿಸಿದನು. ಅವನು ಅಲ್ಲಿ ನಿಲ್ಲದೆ ತ್ವರಿತ ಗತಿಯಲ್ಲಿ ಪೊಲೀಸ್ ಠಾಣೆಗೆ ಹೋಗಿ ಸುದ್ದಿಯನ್ನು ಮುಟ್ಟಿಸಿ, ಅಲ್ಲಿಂದ ಹೋಗಿ ಊರಿನ ಪ್ರಮುಖ ಕಾಂಗ್ರೆಸ್ ಮುಂದಾಳುಗಳಿಗೆ ಗೋಪಾಲನ ಮನೆಯಲ್ಲಿ ಸಾಮೂಹಿಕ ಕೊಲೆಯಾಗಿದೆ ಎಂದು ತಿಳಿಸಿದನು.

ಒಂದು ಗಂಟೆಯೊಳಗಾಗಿ ಗೋಪಾಲನ ಮನೆಯ ಮುಂದೆ ಐದಾರು ಸಾವಿರ ಜನರು ಸೇರಿದ್ದರು. ಎಲ್ಲರಿಗಿಂತಲೂ ಮುಂಚೆ ಬಂದಿದ್ದ ಪೊಲೀಸರೂ, ಕಾಂಗ್ರೆಸ್ ಮುಂದಾಳುಗಳು ಒಳಗೆ ಹೋಗಿ ನೋಡಿದರು. ರುಂಡವಿಲ್ಲದ ಗೋಪಾಲನ ಮುಂಡ ಹೆಪ್ಪುಗಟ್ಟಿದ್ದ ರಕ್ತದ ಮಡುವಿನಲ್ಲಿ ನೆಲದ ಮೇಲೆ ಬಿದ್ದಿತ್ತು. ಅನಿಲಕುಮಾರನ ಮುಂಡ ನೆಲದ ಮೇಲೆ ಒಂದು ಕಡೆ ಬಿದ್ದಿದ್ದರೆ, ಅವನ ರುಂಡ ಸೋಫಾದ ಮೇಲೆ ಬಿದ್ದಿತ್ತು. ಸ್ವರೂಪರಾಣಿಯ ದೇಹ ಗೋಪಾಲನ ಮುಂಡದ ಹತ್ತಿರವೇ ನೆಲದ ಮೇಲೆ ಬಿದ್ದಿತ್ತು. ಅವಳ ದೇಹದ ಮೇಲೆ ಯಾವ ಗಾಯದ ಗುರುತೂ ಇರಲಿಲ್ಲ. ನೋಡಿದವರಿಗೆ ಅವಳು ನಿದ್ದೆ ಮಾಡುತ್ತಿದ್ದವಳಂತೆ ಕಾಣುತ್ತಿದ್ದಳು. ಚಂಚಲೆ ಎಲ್ಲಿಯೂ ಕಾಣಿಸಲಿಲ್ಲ. ಕೊಲೆ ಮಾಡಿದ್ದವರು ಅವಳನ್ನು ಅಪಹರಿಸಿಕೊಂಡು ಹೋಗಿರಬಹುದೆಂದು ಪೊಲೀಸಿನವರೂ, ಕಾಂಗ್ರೆಸ್ ಮುಂದಾಳುಗಳೂ ಊಹಿಸಿದರು. ನಂತರ ಮನೆಯನ್ನು ಶೋಧಿಸುತ್ತಾ, ಒಂದು ಕೊಠಡಿಯಿಂದ ಇನ್ನೊಂದು ಕೊಠಡಿಗೆ ಹೋಗುತ್ತಿರುವಾಗ, ಒಂದು ಕೊಠಡಿಯ ಬಾಗಿಲು ಮುಚ್ಚಲ್ಪಟ್ಟು ಹೊರಗಡೆಯಿಂದ ಅಗಳಿ ಹಾಕಿದ್ದು ಕಾಣಿಸಿತು. ಆ ಕೊಠಡಿಯ ಬಾಗಿಲನ್ನು ತೆಗೆದು, ಒಳಕ್ಕೆ ಹೋಗಿ ನೋಡಿದಾಗ, ಚಂಚಲೆ ಒಂದು ಜಮಖಾನೆಯ ಮೇಲೆ ಅಸ್ತವ್ಯಸ್ತವಾಗಿ ಪ್ರಜ್ಞೆ ಇಲ್ಲದೆ ಬಿದ್ದಿದ್ದಳು. ಕೊಠಡಿಯ ಕಿಟಕಿಗಳೆಲ್ಲವೂ ಮುಚ್ಚಲ್ಪಟ್ಟಿದ್ದವು. ಮೊದಲ ನೋಟಕ್ಕೆ ಅವಳು ಸತ್ತವಳಂತೆ ತೋರುತ್ತಿದ್ದಳು. ಹತ್ತಿರ ಹೋಗಿ ಬಗ್ಗಿ ಪರೀಕ್ಷೆ ಮಾಡಿದಾಗ ಉಸಿರಾಡುವುದು ಕೇಳಿಸಿತು.

ಅವಳನ್ನು ಎತ್ತಿ ಒಂದ ಮಂಚದ ಮೇಲೆ ಮಲಗಿಸಿ ಗಾಳಿ ಬರುವಂತೆ ಕಿಟಕಿಗಳನ್ನೆಲ್ಲಾ ತೆರೆದು, ತಕ್ಷಣ ಡಾಕ್ಟರಿಗೆ ಹೇಳಿ ಕಳುಹಿಸಿದರು.

ಆ ಕರುಣಾಜನಕ ದೃಶ್ಯವನ್ನು ನೋಡಿ ಅಲ್ಲಿ ನೆರೆದಿದ್ದ ಜನರು ಕಂಬನಿಗರೆದರು. ಅನಿಲಕುಮಾರನ ಕಳೇಬರವನ್ನು ನೋಡಿದ ಹೆಂಗಸರು ದುಃಖವನ್ನು ತಡೆಯಲಾರದೆ ಗಟ್ಟಿಯಾಗಿ ಅಳುತ್ತಿದ್ದರು. ಕೆಲವರು ಹೆಂಗಸರು ಆ ದೃಶ್ಯವನ್ನು ನೋಡಿ ಜ್ಞಾನ ತಪ್ಪಿದವರಂತಾಗಿದ್ದರು. ಗೋಪಾಲನು ಜನಾನುರಾಗಿಯಾಗಿ ಅತ್ಯಂತ ಸತ್ಯಸಂಧ ರಾಜಕಾರಣಿ ಎಂದು ಹೆಸರು ಪಡೆದವನಾಗಿದ್ದನು. ಯಾರಿಗೂ ಅಪಕಾರ ಮಾಡಿದವನಲ್ಲ; ಎಷ್ಟೋ ಜನರಿಗೆ ಉಪಕಾರ ಮಾಡಿದ್ದವನು. ಜನರು ತಂಡೋಪತಂಡವಾಗಿ ಬಂದು ಕಣ್ಣೀರು ಸುರಿಸಿ ಗೋಪಾಲನಿಗೆ ಅಂತ್ಯ ಗೌರವವನ್ನು ಸಲ್ಲಿಸುತ್ತಿದ್ದರು. ಜನಸಮೂಹದ ಆಗಮನ ನಿರ್ಗಮನಗಳನ್ನು ನಿಯಂತ್ರಿಸುವುದು ಪೊಲೀಸರಿಗೆ ಒಂದು ದೊಡ್ಡ ಸಮಸ್ಯೆಯಾಗಿತ್ತು. ನೂರಾರು ವರ್ಷಗಳಿಂದ ವೈಭವ ಔದಾರ್ಯಕ್ಕೂ, ಆದರ ಆತಿಥ್ಯಗಳಿಗೂ ಹೆಸರಾಗಿದ್ದ ಗೋಪಾಲನ ಮನೆ ವಂಶಾಭಿವೃದ್ಧಿಯ ಒಂದು ಸಣ್ಣ ಕುಡಿ ಸಹ ಇಲ್ಲದೆ ಭೀಕರ ಸುಡುಗಾಡಿನಂತಾಗಿತ್ತು.

ಡಾಕ್ಟರು ಬಂದು ಚಿಕಿತ್ಸೆಯನ್ನು ಮಾಡಿದ ನಂತರ ಬೆಳಿಗ್ಗೆ ಸುಮಾರು ಹತ್ತು ಗಂಟೆಯ ಹೊತ್ತಿಗೆ ಚಂಚಲೆ ಕಣ್ತೆರೆದು ಸುತ್ತಲೂ ನೋಡಿದಳು. ಏನೋ ಘೋರ ದೃಶ್ಯವನ್ನು ಕಂಡವಳಂತೆ ಹೀಕರಿಸಿ ಕೂಗುತ್ತಾ, ಎರಡು ಕೈಗಳಿಂದಲೂ ತನ್ನ ಕಣ್ಣುಗಳನ್ನು ಮುಚ್ಚಿಕೊಂಡು, ಪುನಃ ಪ್ರಜ್ಞಾ ಶೂನ್ಯಳಾದಳು. ಸ್ವಲ್ಪ ಹೊತ್ತಿನ ನಂತರ ಕನಸು ಕಂಡವಳಂತೆ "ಅನಿಲ್, ಎಲ್ಲಿದ್ದಿಯೋ? ಇಲ್ಲಿ ನೋಡು ನಿನ್ನ ಪುಸ್ಸಿ ಏನ್ ಮಾಡ್ತದೆ ಬಾ" ಎಂದು ನುಡಿದಳು. ಸ್ವಲ್ಪ ಹೊತ್ತಿನ ನಂತರ ನಿದ್ದೆಯಲ್ಲಿಯೇ ಗಂಡನನ್ನು ಕುರಿತು "ಬನ್ನಿ ಅಂದ್ರೆ ಊಟ ತಣ್ಣಗಾಯಿತು. ಯಾವಾಗ್ಲೂ ನಿಮ್ಮ ಈ ಹಾಳು ರಾಜಕೀಯ, ಹೊತ್ತಿಗೆ ಸರಿಯಾಗಿ ಊಟ ಇಲ್ಲ; ಹೊತ್ತಿಗೆ ಸರಿಯಾಗಿ ನಿದ್ದೆ ಇಲ್ಲ" ಎಂದು ಕನವರಿಸಿದಳು. ಈ ಮಾತುಗಳನ್ನು ಕೇಳಿದವರಿಗೆ ಅನುಕಂಪದಿಂದ ಕರುಳು ಕಿವುಚಿದಂತಾಗಿತ್ತು. ಗೋಪಾಲನ ಸೋದರತ್ತೆ ಶಾರದಾಂಬ ಅವಳ ಮಂಚದ ಪಕ್ಕದಲ್ಲಿ ಕುಳಿತು ಕಣ್ಣೀರಿಡುತ್ತಿದ್ದಳು. ಕಾಲು ಗಂಟೆಯ ನಂತರ ಚಂಚಲೆ ಅರೆಪ್ರಜ್ಞೆಯಲ್ಲಿ ಪುನಃ ಕಣ್ಬಿಟ್ಟು ಸುತ್ತಲಿದ್ದವರನ್ನು ನೋಡಿ, "ಇದು ಯಾವ ಊರು? ನೀವೆಲ್ಲ ಎಲ್ಲಿಂದ ಬಂದ್ರಿ?" ಎಂದು ಕೇಳಿದಳು. ಶಾರದಾಂಬ "ನೀನು ನಿಮ್ಮ ಮನೆಯಲ್ಲೇ ಇದ್ದೀಯಮ್ಮಾ" ಎಂದು ಅವಳನ್ನು ತಟ್ಟಿ ನಿದ್ದೆ ಮಾಡಿಸಿದಳು.

ಮಧ್ಯಾಹ್ನ ಹನ್ನೆರಡು ಗಂಟೆಯ ಹೊತ್ತಿಗೆ ಚಂಚಲೆಗೆ ಸಂಪೂರ್ಣ ಪ್ರಜ್ಞೆ ಬಂದಿತ್ತು. ಕಣ್ತೆರೆದು ಕೊಠಡಿಯಲ್ಲಿದ್ದವರನ್ನೆಲ್ಲಾ ಕಕ್ಕಾಬಿಕ್ಕಿಯಾಗಿ ನೋಡಿದಳು. ರಾತ್ರಿ ತಾನು ನೋಡಿದ್ದು ಬರಿಯ ಕನಸೋ ಅಥವಾ ವಾಸ್ತವಿಕವಾಗಿ ನಡೆದ ಸಂಗತಿಯೋ ಎಂಬುದು ಅವಳಿಗಿನ್ನೂ ಸ್ಪಷ್ಟವಾಗಿರಲಿಲ್ಲ. ತಾನು ನೋಡಿದ್ದ ದೃಶ್ಯ ಬರಿಯ ಕನಸಾಗಿದ್ದರೂ ಇರಬಹುದೆಂಬ ಭ್ರಾಂತಿ ಅವಳಲ್ಲಿ ಮೂಡಿತ್ತು. ಅಲ್ಲಿದ್ದವರನ್ನು ಕೇಳಿ ಭ್ರಾಂತಿಯನ್ನು

ನಿವಾರಿಸಿಕೊಳ್ಳುವುದಕ್ಕಿಂತ, ತಾನೇ ಪ್ರತ್ಯಕ್ಷವಾಗಿ ನೋಡಿ ದೃಢಪಡಿಸಿಕೊಳ್ಳಬೇಕೆಂಬ ಇಚ್ಛೆಯಿಂದ ತಟ್ಟನೆ ಮೇಲಕ್ಕೆದ್ದು, ನಡುಮನೆಯ ಕಡೆಗೆ ಹೋಗುತ್ತಾ ನಡೆಯಲಾರಂಭಿಸಿದಳು. ಅಲ್ಲಿದ್ದವರು ತಕ್ಷಣ ಅವಳನ್ನು ಅಡ್ಡಗಟ್ಟಿ ತಡೆದು ಅವಳ ಕೈಹಿಡಿದುಕೊಂಡರು. ಅವಳು ಕೈಯ್ಯನ್ನು ಒದರುತ್ತಾ "ನನ್ನ ಕೈ ಬಿಡಿ, ನಾನು ಅವರನ್ನು ನೋಡಬೇಕು" ಎಂದು ಕೂಗಲಾರಂಭಿಸಿದಳು. "ನೀನು ಆ ಪಾಪದ ದೃಶ್ಯ ನೋಡಬಾರದಮ್ಮ" ಎಂದು ಗೋಪಾಲನ ಅತ್ತೆ ಶಾರದಾಂಬ ಅಳುತ್ತಾ ಹೇಳಿದಳು. ಅವಳ ಮಾತನ್ನು ಕೇಳಿದ ಮೇಲೆ, ಅವಳು ಅಳುತ್ತಿರುವುದನ್ನು ನೋಡಿದ ಮೇಲೆ, ಚಂಚಲೆಗೆ ರಾತ್ರಿ ತಾನು ನೋಡಿದ್ದು ಕನಸಲ್ಲವೆಂಬುದು ಸ್ಪಷ್ಟವಾಯಿತು. ರಾತ್ರಿ ನಡೆದ ಘಟನೆಗಳು ಒಂದೊಂದಾಗಿ ಅವಳಿಗೆ ನೆನಪಿಗೆ ಬರಲಾರಂಭಿಸಿದವು. ಶೋಕದ ಬಡಬಾಗ್ನಿ ಅವಳ ಅಂಗಾಂಗಗಳನ್ನು ದಹಿಸುತ್ತಿತ್ತು. ನೆಲದ ಮೇಲೆ ದೊಪ್ಪನೆ ಬಿದ್ದು ರೋಧಿಸುತ್ತಾ ತಲೆಯನ್ನು ನೆಲಕ್ಕೆ ಅಪ್ಪಳಿಸತೊಡಗಿದಳು. ಅಲ್ಲಿದ್ದವರಿಗೆ ಅವಳನ್ನು ಹಿಡಿಯುವುದೇ ಕಷ್ಟವಾಗಿತ್ತು.

"ಅಯ್ಯೋ ನಾನು ಪಾಪಿ, ನನ್ನ ಗಂಡ ಸತ್ಪುರುಷರಲ್ಲಿ ಮಹಾ ಸತ್ಪುರುಷರು. ನನ್ನ ಅತ್ತೆ ಅತ್ತೆಯಾಗಿರಲಿಲ್ಲ; ನನ್ನ ತಾಯಿಯಾಗಿದ್ದರು. ನನ್ನ ಮುದ್ದು ಮಗೂ, ನನ್ನ ಬಂಗಾರಾ, ಈ ಹಾಳು ಕಣ್ಣುಗಳ ಮುಂದೆಯೇ ನಿನ್ನನ್ನು ಕುರಿ ಕೊಂದಂತೆ ಕೊಂದರಲ್ಲೋ ಪಾಪಿಗಳು? ಅಯ್ಯೋ ದೇವರೇ, ಎಲ್ಲಿಯ ದೇವರು? ನಿರಪರಾಧಿಗಳನ್ನೂ, ಸತ್ಯವಂತರನ್ನೂ ರಕ್ಷಿಸಲಾರದ ದೇವರು ನೀನೆಲ್ಲಿದ್ದೀಯೋ? ನೀನಿರುವುದೇ ಸುಳ್ಳು" ಇವೇ ಮುಂತಾಗಿ ಪ್ರಲಾಪಿಸುತ್ತಾ ನೆಲದ ಮೇಲೆ ಹುಚ್ಚಿಯಂತೆ ಹೊರಳಾಡುತ್ತಿದ್ದಳು. ಅವಳಿಗೆ ತಾನು ಉಟ್ಟಿದ್ದ ಸೀರೆಯ ಮೇಲೂ ಗಮನವಿರಲಿಲ್ಲ. ಕೂಗಿ, ಕೂಗಿ, ಹೊರಳಾಡಿ, ಗೋಳಾಡಿ ಸಾಕಾಗಿ ನಿಶ್ಚೇತಳಾಗಿ, ಮರಗಟ್ಟಿದವಳಂತೆ ಒಂದು ಕಡೆ ಮುದುರಿಕೊಂಡು ಬಿದ್ದಿದ್ದಳು. ಕೊಠಡಿಯಲ್ಲಿದ್ದವರು ಅವಳು ಪುನಃ ನಿದ್ದೆ ಹೋದಳೆಂದು ಭಾವಿಸಿ, ಅವಳ ಕಡೆ ತಮ್ಮ ಗಮನವನ್ನು ಕಡಿಮೆ ಮಾಡಿದ್ದರು. ಆ ವೇಳೆಯಲ್ಲಿ, ಚಂಚಲೆ ಏಕಾಏಕಿ ಮೇಲಕ್ಕೆದ್ದು ರಭಸದಿಂದ ನಡುಮನೆಗೆ ಓಡಿಹೋದಳು. ಅಲ್ಲಿ ಬಿದ್ದಿದ್ದ ಹೆಣಗಳನ್ನು ನೋಡಿ ತಲೆಸುತ್ತಿದಂತಾಗಿ ನೆಲದ ಮೇಲೆ "ಧಡ್" ಎಂದು ಬಿದ್ದು ಬಿಟ್ಟಳು. ಬಿದ್ದ ರಭಸಕ್ಕೆ ತಲೆ ಸೀಳಿ ಹೋದಂತೆ ಶಬ್ದವಾಯಿತು. ಅಪಘಾತಕ್ಕೊಳಗಾಗಿ ಸಾಯುವವರು ಸಾಯುವ ಮುನ್ನ ಲಿಬಿಲಿಬಿ ಒದ್ದಾಡುವಂತೆ ಅವಳ ಕಾಲುಗಳು ಲಿಬಿಲಿಬಿ ಅಲುಗಾಡುತ್ತಿದ್ದವು. ಅಲ್ಲಿದ್ದವರು ಅವಳು ಸತ್ತೇ ಹೋದಳೆಂದು ಭಾವಿಸಿದರು. ನಂತರ ಬಿದ್ದಿದ್ದ ಅವಳನ್ನು ಎತ್ತಿಕೊಂಡು ಹೋಗಿ ಪುನಃ ಕೊಠಡಿಯಲ್ಲಿ ಮಂಚದ ಮೇಲೆ ಮಲಗಿಸಿ ಶೈತ್ಯೋಪಚಾರ ಮಾಡಿದರು. ಸ್ವಲ್ಪ ಹೊತ್ತಿನ ನಂತರ ಪ್ರಜ್ಞೆ ಬಂದು ಕಣ್ತೆರೆದಳು.

"ಪಾಪಿ, ಇಷ್ಟು ಜೋರಾಗಿ ಬಿದ್ದರೂ ನೀನು ಸಾಯಲಿಲ್ಲ. ನೀನು ಇನ್ನೆಷ್ಟು ನರಕಯಾತನೆ ಅನುಭವಿಸಬೇಕೋ?" ಎಂದು ತನ್ನನ್ನೇ ತಾನು ಹಳಿದುಕೊಂಡಳು. ಅವಳನ್ನು ಹಿಡಿದುಕೊಂಡಿದ್ದ ದಾದಿ "ಏನಾದ್ರೂ ಸ್ವಲ್ಪ ಕುಡೀತೀರಾ?" ಎಂದು ಕೇಳಿದಳು.

"ಹೌದು ಕುಡೀಬೇಕು, ಬಾರೀ ದಾಹ, ಬಾರೀದಾಹ" ಎಂದು ಚಂಚಲೆ ಕೂಗಿದಳು.

"ಕುಡೀಲಿಕ್ಕೆ ಏನು ಕೊಡ್ಲಿ?"

"ಶಂಕರನ ರಕ್ತ, ಆ ನೀಚನ ರಕ್ತ ಕುಡಿದರೆ ಮಾತ್ರ ನನ್ನ ದಾಹ ಅಡಗುತ್ತದೆ. ಅದನ್ನು ಕೊಡಲಾಗದಿದ್ದರೆ ಸ್ವಲ್ಪ ವಿಷ ಕೊಡಿ."

"ಹಾಗೆಲ್ಲಾ ನೀವು ಹೇಳ್ಬೇಡಿ ಅಮ್ಮಾ, ಏನಾದ್ರೂ ಸ್ವಲ್ಪ ಕುಡೀರಿ."

"ನನ್ನ ದಯವಿಟ್ಟು ಬಿಡಿ, ನನ್ನ ಮುದ್ದು ಮಗ, ನನ್ನ ಪ್ರೇಮದ ಗಂಡಾ, ನನ್ನ ಮಮತೆಯ ಅತ್ತೆ ನನಗಾಗಿ ಸ್ವರ್ಗದಲ್ಲಿ ಕಾಯುತ್ತಿದ್ದಾರೆ. ನಾ ಹೋಗಬೇಕು" ಎಂದು ಹೇಳುತ್ತಾ ಮೇಲಕ್ಕೆದ್ದಳು.

ಅವಳನ್ನು ಹಿಡಿದು ಬಲಾತ್ಕಾರವಾಗಿ ಮಲಗಿಸಿದರು. ಆದರೆ ಅಲ್ಲಿದ್ದವರಿಗೆ ಅವಳು ಏಳದಂತೆ ತಡೆಗಟ್ಟಲು ಸಾಧ್ಯವಾಯಿತೇ ಹೊರತು, ಅವಳ ದುಃಖವನ್ನಾಗಲೀ ರೋಷವನ್ನಾಗಲೀ ತಡೆಗಟ್ಟಲು ಸಾಧ್ಯವಾಗಲಿಲ್ಲ. ಆವೇಶ ಬಂದವಳಂತೆ ಮಾತನಾಡುತ್ತಿದ್ದಳು.

"ನನ್ನಂತಹ ಆರ್ತರ ಶಾಪಕ್ಕೆ ಶಕ್ತಿ ಇರುವುದಾದರೆ, ಭಗವಂತನೊಬ್ಬನಿರುವುದು ನಿಜವಾದರೆ, ಕ್ರಾಂತಿಯ ಹೆಸರಿನಲ್ಲಿ ನಿರಪರಾಧಿಗಳನ್ನೂ, ಸಜ್ಜನರನ್ನೂ ಕೊಲ್ಲುವ ನರರಾಕ್ಷಸರ ಕುಲನಾಶವಾಗಿ ಹೋಗಲಿ. ಇದ್ದೂ ಇಲ್ಲದಂತಿರುವ ಹೇಡಿ ಸರ್ಕಾರ ನಿರ್ನಾಮವಾಗಲಿ. ರಾಜಕಾರಣದ ಸೋಗಿನಲ್ಲಿ ಮೆರೆಯುತ್ತಿರುವ ದುಷ್ಟರನ್ನೂ, ಭ್ರಷ್ಟರನ್ನೂ ಸಹಿಸುತ್ತಿರುವ ಸಮಾಜ ಹಾಳಾಗಿ ಹೋಗಲಿ" ಎಂದು ಕೂಗಾಡುತ್ತಿದ್ದಳು.

ಗೋಪಾಲನ ಮತ್ತು ಅವನ ಕುಟುಂಬದವರ ಸಾಮೂಹಿಕ ಕೊಲೆಯ ಸುದ್ದಿ ಶ್ರೀಪುರದವರಿಗೆ ಬೆಳಿಗ್ಗೆ ಎಂಟು ಗಂಟೆಗೆ ಗೊತ್ತಾಯಿತು. ಕಿಶೋರನು ಆ ಭೀಕರ ಸುದ್ದಿಯನ್ನು ಆಸ್ಪತ್ರೆಯಲ್ಲಿದ್ದ ಚಂದ್ರಹಾಸನಿಗೆ ತಿಳಿಸಿದನು. ಚಂದ್ರಹಾಸನಿಗೆ ತಡೆಯಲಾರದಷ್ಟು ದುಃಖ ಬಂತು. "ಕಿಶೋರ್ ಇದು ಆ ನೀಚ ಶಂಕರನ ಕೃತ್ಯ. ಗೋಪಾಲ ನಮ್ಮೊಡನೆ ಸ್ನೇಹದಿಂದ ಇದ್ದುದೇ ಅವನ ದುರ್ಮರಣಕ್ಕೆ ಕಾರಣವಾಯಿತು. ನಾನು ಸಿರಗೂರಿಗೆ ಹೋಗಲೇ ಬೇಕು. ಸಿರಗೂರಿಗೆ ಹೋಗಲು ಏರ್ಪಾಡು ಮಾಡು" ಎಂದು ಚಂದ್ರಹಾಸನು ಕಿಶೋರನಿಗೆ ಹೇಳಿದನು. ಕಿಶೋರನೂ, ಚಿಕಿತ್ಸೆ ಮಾಡುತ್ತಿದ್ದ ಡಾಕ್ಟರೂ ಇನ್ನೂ ಗಾಯಗಳು ಸಂಪೂರ್ಣ ವಾಸಿಯಾಗದೆ ಇರುವಾಗ, ಹಾಗೂ ದಾರಿಯಲ್ಲಿ ಕ್ರಾಂತಿಸೇನೆಯವರು ಅಡ್ಡಗಟ್ಟುವ ಸಂಭವವಿರುವಾಗ, ಸಿರಗೂರಿಗೆ ಹೋಗುವುದು ಕ್ಷೇಮವಲ್ಲವೆಂದು ವಾದಿಸಿದರು. ಚಂದ್ರಹಾಸನು ಕೇಳಲಿಲ್ಲ. "ಹೇಡಿಯಂತೆ ಬದುಕಿರುವುದಕ್ಕಿಂತ ಧೀರನಂತೆ ಸಾಯುವುದು ಮೇಲು" ಎಂದು ಹೇಳಿದನು. ಬೆಳಿಗ್ಗೆ ಹನ್ನೊಂದು ಗಂಟೆಯ ಹೊತ್ತಿಗೆ ಚಂದ್ರಹಾಸನೂ, ಕಿಶೋರನೂ, ಮೂರುಜನ

ಕ್ರಾಂತಿಕೂಟದ ಸಿಪಾಯಿಗಳೊಂದಿಗೆ ಕಾರಿನಲ್ಲಿ ಸಿರಗೂರಿಗೆ ಹೊರಟರು. ಅವರು ಸಿರಗೂರನ್ನು ತಲುಪಿದಾಗ ಮಧ್ಯಾಹ್ನ ಒಂದು ಗಂಟೆಯಾಗಿರಬಹುದು.

ಚಂದ್ರಹಾಸನು ನೇರವಾಗಿ ಹೆಣಗಳು ಬಿದ್ದಿದ್ದ ನಡುಮನೆಗೆ ಹೋದನು. ಆ ರೌದ್ರ ದೃಶ್ಯವನ್ನು ನೋಡಿ ಮೈಯೆಲ್ಲಾ ಕಂಪಿಸಿದಂತಾಯಿತು. ಯಾರ ಹತ್ತಿರವೂ ಮಾತನಾಡದೆ ನಡುಮನೆಯಲ್ಲೇ ನೆಲದ ಮೇಲೆ ಕುಳಿತನು. ಚಂದ್ರಹಾಸನು ಧೈರ್ಯಶಾಲಿ. ದುಷ್ಟರನ್ನು ಕೊಲ್ಲಲು ಎಂದೂ ಹಿಂಜರಿದವನಲ್ಲ. ಆತ್ಮರಕ್ಷಣೆಗಾಗಿ ಅದುವರೆಗೆ ಕ್ರಾಂತಿಸೇನೆಯ ಮೂವರು ಕೇಡಿಗಳನ್ನು ಕೊಂದಿದ್ದನು. ಸತ್ಪುರುಷನಾಗಿದ್ದ ಗೋಪಾಲನ, ಅವನ ಎಳೆಯ ಮಗುವಿನ ಮತ್ತು ತಾಯಿಯ ಕಗ್ಗೊಲೆಯಿಂದುಂಟಾದ ಯಾತನೆ ಅವನ ಹೃದಯವನ್ನು ಗರಗಸದಂತೆ ಕೊಯ್ಯುತ್ತಿತ್ತು.

"ಎಂತಹ ಅಮಾನುಷ ಕ್ರೌರ್ಯ! ರಾಕ್ಷಸೀ ಕ್ರೌರ್ಯವು ಕ್ರಾಂತಿಯ ವೇಷವನ್ನು ತಾಳಿದರೆ ಹೀಗೆಯೇ ಆಗುವುದು. ಜಗತ್ತಿನಲ್ಲಿ ಎಷ್ಟು ಜನ ಗೋಪಾಲರಂತಹ ಸತ್ಪುರುಷರೂ, ನಿರಪರಾಧಿಗಳೂ ಕ್ರಾಂತಿಕಾಳಿಗೆ ಬಲಿಯಾಗುತ್ತಾರೋ ಯಾರಿಗೆ ಗೊತ್ತು? ಇದು ಕ್ರಾಂತಿಯಲ್ಲ ರಕ್ತ ಪಿಪಾಸೆ" ಎಂದು ಮನಸ್ಸಿನಲ್ಲೇ ಮರುಗುತ್ತಾ ನಿಟ್ಟುಸಿರು ಬಿಟ್ಟನು.

ಚಂದ್ರಹಾಸನು ಅಲ್ಲಿಂದ ಎದ್ದು ಚಂಚಲೆ ಇದ್ದ ಕೊಠಡಿಗೆ ಹೋದನು. ಚಂಚಲೆ ಮುಖಕ್ಕೆ ಒಂದು ಬಟ್ಟೆಯನ್ನು ಮುಸುಕು ಹಾಕಿಕೊಂಡು ಅಳುತ್ತಿದ್ದಳು. ಚಂದ್ರಹಾಸನು ಅವಳ ಹೆಸರನ್ನು ಹಿಡಿದು ಕೂಗಿ, ತಾನು ಬಂದಿರುವುದಾಗಿ ಹೇಳಿದನು. ಚಂಚಲೆಯು ಬಟ್ಟೆಯನ್ನು ಒಂದು ಪಕ್ಕಕ್ಕೆ ಸರಿಸಿ ಅವನ ಕಡೆಗೆ ದೃಷ್ಟಿಯನ್ನು ಹೊರಳಿಸಿ, ಅವನ ಕೈಯನ್ನು ಹಿಡಿದುಕೊಂಡು, ಗಟ್ಟಿಯಾಗಿ ಅಳತೊಡಗಿದಳು. ಚಂದ್ರಹಾಸನು ಅವಳನ್ನು ಸಂತೈಸಲೆತ್ನಿಸುತ್ತಿದ್ದನು. ಅವನು ಹೇಳುತ್ತಿದ್ದುದನ್ನೆಲ್ಲಾ ಚಂಚಲೆ ಕೇಳುತ್ತಾ ಇದ್ದವಳು, ಕೊನೆಗೆ "ಚಂದ್ರಹಾಸ, ನೀವು ಇಲ್ಲಿಗೆ ಬಂದುದಕ್ಕಾಗಿ ನಾನು ನಿಮಗೆ ಅತ್ಯಂತ ಋಣಿ, ನಿಮ್ಮಿಂದ ನನಗೊಂದು ದೊಡ್ಡ ಉಪಕಾರವಾಗಬೇಕಾಗಿದೆ."

"ಅದೇನು ಹೇಳಿ? ನಿಮಗೋಸ್ಕರ ಏನು ಮಾಡಲೂ ಸಹ ಸಿದ್ಧನಿದ್ದೇನೆ."

"ನನ್ನ ಪತಿಯೊಡನೆ ಸಹಗಮನ ಮಾಡಲು ನೀವು ನನಗೆ ಅವಕಾಶ ಕಲ್ಪಿಸಿಕೊಡಬೇಕು."

"ಸಹಗಮನ ಕಾನೂನಿಗೆ ವಿರುದ್ಧ. ಆತ್ಮಹತ್ಯೆ ಪಾಪ. ದಯವಿಟ್ಟು ಸಹಗಮನದ ಯೋಚನೆಯನ್ನು ಬಿಟ್ಟುಬಿಡಿ."

"ಎಲ್ಲಿಯ ಪಾಪ! ಎಲ್ಲಿಯ ಪುಣ್ಯ! ಎಲ್ಲಿಯ ಕಾನೂನು! ಪಾಪ ಪುಣ್ಯಗಳ ಪರಿಗಣನೆ ಇಲ್ಲದೆ ಕಾನೂನನ್ನು ಉಲ್ಲಂಘಿಸಿ ಮಾಡಬಾರದ ಕೆಲಸ ಮಾಡುವವರು ಸುಖವಾಗಿದ್ದಾರೆ. ಪಾಪಕ್ಕೆ, ಕಾನೂನಿಗೆ, ಅಂಜಿ ನಡೆಯುವವರಿಗೆ ಬಡತನ ಸಂಕಷ್ಟಗಳು. ಚಂದ್ರಹಾಸ, ಸಾಯಲು ಸಿದ್ಧಳಾದವಳಿಗೆ ಪಾಪ, ಕಾನೂನುಗಳ ಹೆದರಿಕೆ ಎಲ್ಲಿ ಬಂತು?"

"ನೀವು ಬದುಕಿರಬೇಕೆಂಬುದು ನಮ್ಮೆಲ್ಲರ ಆಸೆ."

"ಯಾರಿಗೋಸ್ಕರ ಬದುಕಿರಬೇಕು? ಯಾತಕ್ಕೋಸ್ಕರ ಬದುಕಿರಬೇಕು? ನಿರ್ಭಾಗಿನಿಯಾದ ನನಗೆ ಜಗತ್ತಿನಲ್ಲಿ ಇನ್ನೇನು ಉಳಿದಿದೆ ಹೇಳಿ? ನಾನು ಬದುಕಲಾರೆ. ನೀವುಗಳು ಸಹಗಮನಕ್ಕೆ ಅವಕಾಶ ಕೊಡದಿದ್ದರೆ ಬೇರೆ ಮಾರ್ಗದಲ್ಲಿ ಪ್ರಾಣ ಕಳೆದುಕೊಳ್ಳುತ್ತೇನೆ."

"ಚಂಚಲಾರವರೇ, ಸಾಯಲು ನಿಶ್ಚಯಿಸಿರುವವರನ್ನು ಯಾರೂ ಬದುಕಿಸ ಲಾರರು, ನಾನೂ ನಿಮ್ಮಂತೆ ಪ್ರಿಯ ಬಂಧುಗಳೆಲ್ಲರನ್ನೂ ಕಳೆದುಕೊಂಡವನು. ನಾನೂ ದುಃಖದ ಭರದಲ್ಲಿ ನಿಮ್ಮಂತೆ ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ಯೋಚಿಸಿದವನು. ನಿಮಗೆಷ್ಟು ದುಃಖವಾಗಿದೆ ಎಂಬುದು ನನಗೆ ಗೊತ್ತಿದೆ. ಆದರೆ ದುಃಖದ ಭರದಲ್ಲಿ ಯಾವ ತೀರ್ಮಾನವನ್ನೂ ಕೈಗೊಳ್ಳಬಾರದು. ದಯವಿಟ್ಟು ಒಂದು ವಾರ ನಮ್ಮೆಲ್ಲರ ಸಲುವಾಗಿ ಬದುಕಿರಿ. ಆಮೇಲೆ ನಿಧಾನವಾಗಿ ಯೋಚಿಸಿ, ಮುಂದೇನು ಮಾಡಬೇಕೆಂಬುದನ್ನು ನಿರ್ಧರಿಸಿ."

"ಚಂದ್ರಹಾಸ, ಸದ್ಯ ನನ್ನ ಮಗ, ಗಂಡ ಇದ್ದಲ್ಲಿಗಾದರೂ ಹೋಗಲು ನನಗೆ ಅವಕಾಶ ಕೊಡುತ್ತೀರಾ? ಈ ಜನರು ನಡುಮನೆಗೆ ಹೊಗಲೂ ಸಹ ನನ್ನನ್ನು ಬಿಡುವುದಿಲ್ಲ" ಎಂದು ಚಂಚಲೆ ಚಂದ್ರಹಾಸನನ್ನು ಪ್ರಾರ್ಥಿಸಿದಳು.

ಚಂದ್ರಹಾಸನು ಅವಳನ್ನು ಹೆಣಗಳು ಬಿದ್ದಿದ್ದ ಸ್ಥಳಕ್ಕೆ ಕರೆದುಕೊಂಡು ಹೋದನು. ಚಂಚಲೆ ಗಂಡನ ಮತ್ತು ಮಗನ ಹೆಣಗಳ ಮೇಲೆ ಬಿದ್ದು ಹೃದಯ ವಿದ್ರಾವಕ ರೀತಿಯಲ್ಲಿ ಗೋಳಾಡುತ್ತಿದ್ದಳು. "ಪುನರ್ಜನ್ಮವಿರುವುದಾದರೆ ನೀವೇ ನನ್ನ ಪತಿಯಾಗಲಿ, ನನ್ನ ಮುದ್ದು ಕಂದಾ ಮುಂದಿನ ಜನ್ಮದಲ್ಲಿ ನೀನೇ ನನ್ನ ಪುತ್ರನಾಗಿ ಹುಟ್ಟು" ಎಂದು ಹಲುಬುತ್ತಿದ್ದಳು. ಅವಳು ಮನಸ್ವೀ ಗೋಳಾಡಿ ಅತ್ತರೆ ಶೋಕ ಸ್ವಲ್ಪ ಮಟ್ಟಿಗೆ ಶಮನವಾಗುತ್ತದೆ ಎಂದೂ, ಅವಳ ಗೋಳಾಟಕ್ಕೆ ಯಾರೂ ಅಡ್ಡಿಪಡಿಸಬಾರದೆಂದೂ, ಅವಳು ಆತ್ಮಹತ್ಯೆ ಮಾಡಿಕೊಳ್ಳದಂತೆ ಮಾತ್ರ ನೋಡಿಕೊಳ್ಳುತ್ತಿರಬೇಕೆಂದೂ, ಅಲ್ಲಿ ನೆರೆದಿದ್ದ ಬಂಧು ಬಾಂಧವರಿಗೆ ಚಂದ್ರಹಾಸನು ಸೂಚಿಸಿದನು. ಅಷ್ಟು ಹೊತ್ತಿಗೆ ಶ್ರೀಪುರದಿಂದ ಪದ್ಮಾವತಿಯೂ, ಕಮಲೆಯೂ, ಇತರ ಬಂಧುಗಳೂ ಬಂದರು. ಪದ್ಮಾವತಿ ಚಂಚಲೆಯನ್ನು ವಿವಿಧ ರೀತಿಯಲ್ಲಿ ಸಂತೈಸುತ್ತಿದ್ದಳು.

ಈ ಮಧ್ಯೆ ಶವ ಸಂಸ್ಕಾರಕ್ಕೆ ಸಿದ್ಧತೆ ನಡೆಯುತ್ತಿತ್ತು. ಶವಗಳ ವೈದ್ಯ ಪರೀಕ್ಷೆ, ಮಹಜರ್ ಮುಂತಾದ ವಿಧಿಗಳು ಮುಗಿಯುವ ಹೊತ್ತಿಗೆ ಸಂಜೆ ಐದು ಗಂಟೆಯಾಗಿತ್ತು. ಸಂಜೆ ಐದೂವರೆ ಗಂಟೆಯ ಹೊತ್ತಿಗೆ ಹೆಣಗಳನ್ನು ಗೋಪಾಲನ ಜಮೀನಿನ ಪಕ್ಕದಲ್ಲಿದ್ದ ಕುಟುಂಬದ ರುದ್ರಭೂಮಿಗೆ ಕೊಂಡೊಯ್ಯಲಾಯಿತು. ಚಂಚಲೆಯನ್ನು ಕಾರಿನಲ್ಲಿ ಅಲ್ಲಿಗೆ ಕರೆದುಕೊಂಡು ಹೋಗಿದ್ದರು. ಗೋಪಾಲನ ಅಂತ್ಯದರ್ಶನಕ್ಕಾಗಿ ಬಂಧು ಬಾಂಧವರಲ್ಲದೆ ಜಿಲ್ಲೆಯ ಮೂಲೆ ಮೂಲೆಗಳಿಂದ ಜನರು ಬಂದಿದ್ದರು. ಏನಾದರೂ ಗಲಾಟೆಯಾಗಬಹುದೆಂಬ ಶಂಕೆಯಿಂದ ಪೊಲೀಸ್ ಪಡೆ ಕಾವಲಿತ್ತು. ರುದ್ರಭೂಮಿಯ ದೃಶ್ಯ ರೌದ್ರಮಯವಾಗಿ, ಕರುಣಾಜನಕವಾಗಿತ್ತು. ರುಂಡಮುಂಡಗಳು ಬೇರ್ಪಟ್ಟ

ಗೋಪಾಲ ಮತ್ತು ಅನಿಲಕುಮಾರನ ಹೆಣಗಳನ್ನು ಕಣ್ಣಿಂದ ನೋಡಲಿಕ್ಕಾಗುತ್ತಿರಲಿಲ್ಲ. "ಇಂತಹ ಹಸುಗೂಸನ್ನು ಕೊಲ್ಲಲು ಆ ನೀಚರಿಗೆ ಮನಸ್ಸಾದರೂ ಹೇಗೆ ಬಂತು?" ಎಂದು ಕೆಲವರು ಹೇಳುತ್ತಿದ್ದರೆ, "ಗೋಪಾಲನಂತಹ ಒಳ್ಳೆಯ ವ್ಯಕ್ತಿಯನ್ನು ಕೊಲೆ ಮಾಡಿದವರ ಕೈಗೆ ಅಧಿಕಾರ ಸಿಕ್ಕರೆ ಗತಿ ಏನು?" ಎಂದು, ಇನ್ನು ಕೆಲವರು ಹೇಳುತ್ತಿದ್ದರು. ಮತ ಪದ್ಧತಿಯ ಪ್ರಕಾರ ಗೋಪಾಲನನ್ನೂ, ಅವನ ತಾಯಿಯನ್ನು ಸುಡಲು ಚಿತೆಗಳು ಸಿದ್ಧವಾಗಿದ್ದವು. ಅನಿಲಕುಮಾರನು ಅಪ್ರಾಪ್ತ ವಯಸ್ಸಿನ ಬಾಲಕನಾದ್ದರಿಂದ ಅವನನ್ನು ಹೂಳಲು ಗೋರಿ ಸಿದ್ಧವಾಗಿತ್ತು. ಮಗನ ಹೆಣವನ್ನು ಗೋರಿಯೊಳಗಿಟ್ಟಾಗ ಚಂಚಲೆ ಎದೆಯನ್ನು ಬಡಿದುಕೊಳ್ಳುತ್ತಾ "ಅಯ್ಯೋ ಅನಿಲ್, ನನ್ನ ಮುದ್ದು ಕಂದಾ" ಹೋಗ್ತೀಯಾ ಮಗನೇ" ಎಂದು ಕೂಗುತ್ತಿದ್ದಳು. ಆ ದೃಶ್ಯ ಕರುಣಾಜನಕವಾಗಿತ್ತು. ಗಂಡನ ಮತ್ತು ಅತ್ತೆಯ ಹೆಣಗಳನ್ನು ಚಿತೆಗಳ ಮೇಲಿಟ್ಟು ಬೆಂಕಿಯನ್ನು ಹಚ್ಚಿದಾಗ "ನನ್ನೊಬ್ಬಳನ್ನೇ ಬಿಟ್ಟು ನೀವು ಹೋಗುತ್ತೀರಾ?" ಎಂದು ರೋದಿಸುತ್ತಿದ್ದಳು. ಚಿತೆಗಳು ಉರಿಯುತ್ತಿದ್ದಾಗ ಹೇಗಾದರೂ ತಪ್ಪಿಸಿಕೊಂಡು ಗಂಡನ ಚಿತೆಗೆ ಬೀಳಬೇಕೆಂದು ಕೊಸರಾಡಿದಳು. ಆದರೆ ಎರಡು ಮೂರು ಜನ ಹೆಂಗಸರು ಅವಳನ್ನು ಹಿಡಿದುಕೊಂಡಿದ್ದರಿಂದ ತಪ್ಪಿಸಿಕೊಳ್ಳಲಾಗಲಿಲ್ಲ.

ಸಿರಗೂರು ಜಿಲ್ಲೆಯಲ್ಲಿ ಬಹುಜನರು ಗೋಪಾಲನ ಮನೆಯಲ್ಲಿ ನಡೆದ ಕಗ್ಗೊಲೆಗಳಿಗೆ ಕ್ರಾಂತಿಸೇನೆಯವರೇ ಕಾರಣರೆಂದು ನಂಬಿದ್ದರು. ಜನರು ಕ್ರಾಂತಿಸೇನೆಯ ಮೇಲೆ ಕ್ರೋಧದಿಂದ ಕಿಡಿಕಿಡಿಯಾಗಿದ್ದರು. ಪೋಲೀಸರು ಅಪರಾಧಿಗಳನ್ನು ಪತ್ತೆ ಹಚ್ಚುತ್ತಾರೆಂಬ ಭರವಸೆ ಜನರಿಗೆ ಸ್ವಲ್ಪವೂ ಇರಲಿಲ್ಲ. ಪೊಲೀಸಿನವರಿಗೂ ಸಹ ಕ್ರಾಂತಿಸೇನೆಯಿಂದಲೇ ಆ ಸಾಮೂಹಿಕ ಕೊಲೆಗಳು ನಡೆದಿರಬಹುದೆಂದು ಪ್ರಬಲ ಗುಮಾನಿ ಇತ್ತು. ಆದರೆ ಕ್ರಾಂತಿಸೇನೆಯ ಮುಂದಾಳುಗಳ ಮೇಲೆ ಕ್ರಮ ಕೈಗೊಳ್ಳುವ ಬದಲು, ಸಿರಗೂರು ಪೊಲೀಸಿನವರು ಶ್ರೀಪುರಕ್ಕೆ ವರ್ತಮಾನ ಕಳುಹಿಸಿ, ಬೆಳಿಗ್ಗೆ ಹನ್ನೊಂದು ಗಂಟೆಗೆ ಅಲ್ಲಿಂದ ಪೊಲೀಸ್ ನಾಯಿಗಳನ್ನು ತರಿಸಿದ್ದರು. ಆ ನಾಯಿಗಳು ನಡುಮನೆಗೆ ಹೋಗಿ ಹೆಣಗಳನ್ನು ಮೂಸಿನೋಡಿ, ಅಲ್ಲಿಂದ ರಾತ್ರಿ ಕ್ರಾಂತಿಸೇನೆಯವರು ಲಾರಿಗಳನ್ನು ನಿಲ್ಲಿಸಿದ್ದ ಸ್ಥಳಕ್ಕೆ ಹೊದವು. ಅಲ್ಲಿ ನೆಲವನ್ನು ಮೂಸುತ್ತಾ ಸ್ವಲ್ಪ ಹೊತ್ತು ನಿಂತಿದ್ದು ನಂತರ ಲಾರಿಗಳು ವಾಪಸು ಹೋದದಾರಿಯಲ್ಲೆ ಸ್ವಲ್ಪದೂರ ಹೋದವು. ಮುಂದೆ ಮೂರು ದಾರಿಗಳು ಒಂದು ಕಡೆ ಸೇರಿದ್ದ ಸ್ಥಳದಲ್ಲಿ ನಾಯಿಗಳು ಯಾವ ಕಡೆಗೆ ಹೊಗಬೇಕೆಂಬುದು ಗೊತ್ತಾಗದೆ ನೆಲ ಮೂಸುತ್ತಾ ಸುಮ್ಮನೆ ನಿಂತಿದ್ದವು. ಅಲ್ಲಿಂದ ನಾಯಿಗಳನ್ನು ಪುನಃ ಗೋಪಾಲನ ಮನೆಗೆ ಕರೆದುಕೊಂಡು ಬಂದರು. ಗೋಪಾಲನ ಮನೆಯಲ್ಲಿ ಅವು ಚಂಚಲೆ ಮಲಗಿದ್ದ ರೂಮಿಗೆ ಹೋಗಿ ಅಲ್ಲಿದ್ದ ಮನೆಗೆಲಸದ ಹೆಣ್ಣಾಳನ್ನು ಗುರುತಿಸಿದುವು. ನಾಯಿಗಳಿಂದ ಅಪರಾಧಿಗಳ ಪತ್ತೆ ಆಗುವುದು ಸಾಧ್ಯವಿಲ್ಲವೆಂದು ಪೊಲೀಸರಿಗೆ ಸ್ಪಷ್ಟವಾಯಿತು. ಅಪರಾಧಿಗಳನ್ನು ಪತ್ತೆ ಹಚ್ಚಲು ಪೊಲೀಸ್ ನಾಯಿಗಳು ಅನಾವಶ್ಯಕವಾಗಿದ್ದವು. ಅಪರಾಧಕ್ಕೆ ಕಾರಣರಾರೆಂಬುದು ಜನರಿಗೂ

ಗೊತ್ತಿತ್ತು; ಪೊಲೀಸರಿಗೂ ಗೊತ್ತಿತ್ತು. ಆದರೆ ಅಪರಾಧಿಗಳನ್ನು ದಸ್ತಗಿರಿ ಮಾಡುವ ಧೈರ್ಯವು ಪೊಲೀಸರಿಗೆ ಇರಲಿಲ್ಲ; ಅಪರಾಧಿಗಳು ಅವರ ಕೈಗೆ ಸಿಕ್ಕಿ ಬೀಳುವ ಸಂಭವವೂ ಇರಲಿಲ್ಲ.

ಸ್ಮಶಾನದಿಂದ ಮನೆಗೆ ಬಂದ ಮೇಲೆ ಬಂಧುಗಳು ಚಂಚಲೆಗೆ ಬಲಾತ್ಕಾರವಾಗಿ ಸ್ನಾನ ಮಾಡಿಸಿ, ಬಟ್ಟೆಯನ್ನು ಬದಲಾಯಿಸಿ, ಬಲಾತ್ಕಾರವಾಗಿ ಸ್ವಲ್ಪ ಹಣ್ಣಿನ ರಸವನ್ನು ಕುಡಿಸಿ ಮಂಚದ ಮೇಲೆ ಮಲಗಿಸಿದರು. ಅವಳು ಮಲಗಿದ್ದಾಗ, ಹಿಂದಿನ ರಾತ್ರಿಯ ರೌದ್ರ ದೃಶ್ಯ ಪದೇ ಪದೇ ಅವಳ ಸ್ಮರಣೆಗೆ ಬಂದು ಚಳಿ ಜ್ವರ ಬಂದವಳಂತೆ ಗಡಗಡ ನಡುಗುತ್ತಿದ್ದಳು. ಅವಳ ಸ್ಥಿತಿಯನ್ನು ನೋಡಿದವರಿಗೆ ಯಾವ ಗಳಿಗೆಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೋ ಎಂಬ ಭಯವಿತ್ತು. ಆದ್ದರಿಂದ ಕತ್ತಿ, ಚೂರಿ ಮುಂತಾದ ಹರಿತವಾದ ವಸ್ತುಗಳು ಅವಳ ಕೈಗೆ ಸಿಗದಂತೆ ವ್ಯವಸ್ಥೆ ಮಾಡಿದ್ದರು. ರಾತ್ರಿಯ ಹೊತ್ತು ಎಲ್ಲರೂ ಮಲಗಿದ್ದಾಗ ಅವಳು ನೇಣು ಹಾಕಿಕೊಂಡು ಸಾಯಬಹುದೆಂಬ ಭಯವೂ ಇತ್ತು. ಆದ್ದರಿಂದ ರಾತ್ರಿ ಆತ್ಮಹತ್ಯೆಗೆ ಅವಕಾಶವಿಲ್ಲದಂತೆ ಮಾಡುವ ಉದ್ದೇಶ ದಿಂದಲೂ, ಮನಸ್ಸಿಗೆ ಶಾಂತಿ ಲಭಿಸುವಂತೆ ಮಾಡುವ ಉದ್ದೇಶದಿಂದಲೂ, ಡಾಕ್ಟರನ್ನು ಕರೆಸಿ ನಿದ್ದೆ ಬರುವಂತೆ ಇಂಜಕ್ಷನ್ ಕೊಡಿಸಿದರು. ಆದರೂ ಮುನ್ನೆಚ್ಚರಿಕೆಯ ದೃಷ್ಟಿಯಿಂದ, ಬಂಧುಗಳು ಒಬ್ಬರಾದ ಮೇಲೆ ಇನ್ನೊಬ್ಬರಂತೆ ಸರದಿಯ ಪ್ರಕಾರ, ಆ ರಾತ್ರಿ ಅವಳನ್ನು ಕಾಯುತ್ತಿದ್ದರು. ಚಂದ್ರಹಾಸನೂ, ಕಿಶೋರನೂ ಆ ರಾತ್ರಿ ಅಲ್ಲಿಯೇ ಇರಬೇಕೆಂದು ಚಂಚಲೆಯ ಬಂಧುಗಳು ಹಠ ಮಾಡಿದ್ದರಿಂದ ಆ ರಾತ್ರಿ ಅವರಿಬ್ಬರೂ ಗೋಪಾಲನ ಮನೆಯಲ್ಲಿಯೇ ತಂಗಿದ್ದರು.

ಮರುದಿನವೆಲ್ಲಾ ಚಂದ್ರಹಾಸನು ಚಂಚಲೆಯ ಬಳಿಯಲ್ಲಿದ್ದು, ಅವಳ ದುಃಖವನ್ನು ಕಡಿಮೆ ಮಾಡಲು ಮತ್ತು ಅವಳ ಮನಸ್ಸು ಆತ್ಮಹತ್ಯೆಯ ಕಡೆಗೆ ಹರಿಯದಂತೆ ಮಾಡಲು ನಾನಾ ವಿಧವಾಗಿ ಅವಳಿಗೆ ಉಪದೇಶ ಮಾಡುತ್ತಿದ್ದನು. ಆದರೆ ಅವನ ಉಪಶಮನದ ಉಪದೇಶಗಳಿಂದ ಅವಳ ದುಃಖ ಶಮನವಾದಂತೆ ಅವನಿಗೆ ತೋರಲಿಲ್ಲ. ಶಂಕರನ ಮೇಲೆ ರೋಷ ಉಂಟಾಗುವಂತೆ ಮಾಡಿದರೆ, ಅದರಿಂದ ಉಪಯೋಗವಾದೀತೆಂಬ ಭಾವನೆಯಿಂದ ಚಂದ್ರಹಾಸನು ಕೊನೆಯದಾಗಿ ಕೆಲವು ಮಾತುಗಳನ್ನು ಹೇಳತೊಡಗಿದನು.

"ಚಂಚಲಾ ಅವರೇ, ನಿಮ್ಮ ದುಃಖವನ್ನು ಸ್ವಲ್ಪಕಾಲ ಬದಿಗಿಟ್ಟು ದಯವಿಟ್ಟು ನಾನು ಹೇಳುವ ಕೆಲವು ಮಾತುಗಳನ್ನು ಲಾಲಿಸಿ. ಆತ್ಮಹತ್ಯೆಯಿಂದ ಸಾಯುವುದು ಸುಲಭ. ಅದೊಂದು ಪ್ರಶಂಸನೀಯವಾದ ಸಾಹಸದ ಕಾರ್ಯವಲ್ಲ. ನಿನ್ನೆ ನಿಮಗೆ ಹೇಳಿದಂತೆ, ನನ್ನ ಗೌರಿ ಸತ್ತಾಗ ನಾನೂ ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ಯೋಚಿಸಿದ್ದೆ. ಆದರೆ ನನ್ನ ತಾಯಿಯ ಮತ್ತು ಹೆಂಡತಿಯ ಕೊಲೆಗೆ ಕಾರಣನಾದ ಆ ಹೇಡಿ ಶಂಕರನನ್ನು ಮರ್ದನ ಮಾಡದೆ ಸಾಯುವುದು ಹೇಡಿತನವೆಂದು ಭಾವಿಸಿ ಅವನ ಕೊಲೆಗಾಗಿ ನಾನು ಬದುಕಿದ್ದೇನೆ. ನಿಮ್ಮ ಪತಿ, ಪುತ್ರರ ಕೊಲೆಗೆ ಕಾರಣನಾದ ಆ

ದುಷ್ಟನ ಮೇಲೆ ಸೇಡು ತೀರಿಸಿಕೊಳ್ಳದೆ ನೀವು ಸತ್ತರೆ, ನಿಮ್ಮ ಆತ್ಮಕ್ಕೆ ತೃಪ್ತಿ ಲಭಿಸುತ್ತದೆಯೇ? ನೀವೇ ಯೋಚಿಸಿ" ಎಂದು ಚಂದ್ರಹಾಸನು ಚಂಚಲೆಗೆ ಮನವಿ ಮಾಡಿದನು.

"ಚಂದ್ರಹಾಸ, ನೀವು ಗಂಡಸರು, ಸೇಡನ್ನು ತೀರಿಸಿಕೊಳ್ಳಲು ಸಮರ್ಥರು. ಹೆಂಗಸಾದ ನಾನು ಆ ದುಷ್ಟನ ಮೇಲೆ ಹೇಗೆ ಸೇಡನ್ನು ತೀರಿಸಿಕೊಳ್ಳಲು ಸಾಧ್ಯ?"

"ನೀವೆ ಸ್ವತಃ ಆ ದುಷ್ಟನ ಮೇಲೆ ಯುದ್ಧ ಮಾಡಬೇಕಾಗಿಲ್ಲ. ನಿಮಗೆ ವಿದ್ಯೆ ಇದೆ; ಐಶ್ವರ್ಯ ಇದೆ; ಮೇಲಾಗಿ ನಿಮ್ಮ ಯಜಮಾನರ ಬೆಂಬಲಿಗರ ಬೆಂಬಲವಿದೆ. ಶಂಕರನನ್ನು ಕೊಲ್ಲುವ ಬಗ್ಗೆ, ಅವನ ಸೇನೆಯ ಉಪಟಳವನ್ನು ಅಡಗಿಸುವ ಬಗ್ಗೆ, ನಿಮ್ಮ ಕೈಲಾದ ಸಹಾಯ ಸಹಕಾರಗಳನ್ನು ನೀಡಿದರೆ ಅಷ್ಟೇ ಸಾಕು. ಸತ್ತವರ ಆತ್ಮಕ್ಕೆ ಶಾಂತಿ ಲಭಿಸುತ್ತದೆ."

"ಚಂದ್ರಹಾಸ, ಶಂಕರನನ್ನು ಕೊಲ್ಲುವುದಾಗಿ ನೀವು ಬಹಳ ದಿನಗಳಿಂದ ಹೇಳುತ್ತಿದ್ದೀರಿ. ಆದರೆ ಅವನ ಕೈ ಮೇಲಾಗುತ್ತಲೇ ಬಂದಿದೆ. ಅವನನ್ನು ಕೊಲ್ಲುವುದು ಸಾಧ್ಯವಿಲ್ಲವೆಂದು ನನಗನ್ನಿಸುತ್ತದೆ. ಮುಂದಿನ ಸಾರಿ ಚುನಾವಣೆ ನಡೆದಾಗ ಅವನು ಶಾಸಕನಾಗುತ್ತಾನೆ. ಆಮೇಲೆ ಅವನನ್ನು ಯಾರೂ ಏನೂ ಮಾಡಲಾರರು. ಕಲಿಯುಗದಲ್ಲಿ ದುಷ್ಟರಿಗೇ ಜಯವೆಂದು ಹಿಂದಿನವರು ಹೇಳಿದ್ದು ನಿಜವೆಂದು ತೋರುತ್ತದೆ."

"ಚಂಚಲಾರವರೇ, ನಿರಾಸೆ ಮಾನವರ ಶತ್ರು. ನಿರಾಸೆಯಿಂದಿರುವವರು ಜಗತ್ತಿನಲ್ಲಿ ಏನನ್ನೂ ಸಾಧಿಸಲಾರರು. ಇದುವರೆಗೆ ನನಗೆ ಅವನನ್ನು ಕೊಲ್ಲಲು ಸಾಧ್ಯವಾಗಲಿಲ್ಲ. ಆದರೆ ನಾನು ನಿರಾಸೆ ಪಟ್ಟಿಲ್ಲ. ನೀವಂತೂ ಸಾಯಲು ಸಿದ್ಧರಾಗಿರುವವರು; ನಾನೂ ಸಾಯಲು ಸಿದ್ಧನಾಗಿರುವವನು. ಸಾಯುವ ಮುನ್ನ ದುಷ್ಟ ಶಿಕ್ಷಣಕ್ಕಾಗಿ, ಶಿಷ್ಟ ರಕ್ಷಣೆಗಾಗಿ ಹೋರಾಡಿ ಸಾಯೋಣ. ನೀವು ಸಾಯುವ ಯೋಚನೆಯನ್ನು ಬಿಡಿ. ಯಾವ ರೀತಿ ಆ ದುಷ್ಟನ ಮೇಲೆ ಸೇಡು ತೀರಿಸಿಕೊಳ್ಳುವುದು ಸಾಧ್ಯ ಎಂಬುದನ್ನು ಇಂದಿನಿಂದಲೇ ಯೋಚನೆ ಮಾಡಿ" ಎಂದು ಚಂದ್ರಹಾಸ ಕೊನೆಯದಾಗಿ ನುಡಿದನು.

ಚಂದ್ರಹಾಸನ ಮಾತಿಗೆ ಪ್ರತಿಯಾಗಿ ಚಂಚಲೆ ಏನನ್ನೂ ಹೇಳಲಿಲ್ಲ. ತನ್ನ ಮಾತು ಅವಳ ಮನಸ್ಸಿನ ಮೇಲೆ ಸಾಕಷ್ಟು ಪರಿಣಾಮವನ್ನುಂಟು ಮಾಡಿರಬಹುದೆಂದು ಚಂದ್ರಹಾಸನು ಊಹಿಸಿದನು. ಮರುದಿನ ಬೆಳಿಗ್ಗೆ, ಶ್ರೀಪುರಕ್ಕೆ ಹೊರಡಬೇಕೆಂದು ನಿರ್ಧರಿಸಿ, ಆ ದಿನ ಚಂಚಲೆಯ ಆಸ್ತಿಪಾಸ್ತಿಗಳ ವಹಿವಾಟಿನ ವಿಚಾರದಲ್ಲಿ ಸೂಕ್ತ ವ್ಯವಸ್ಥೆ ಮಾಡಿದನು. ಚಂಚಲೆಯ ಅನುಮತಿಯನ್ನು ಪಡೆದು, ಹಿಂದಿನಿಂದಲೂ ಗೋಪಾಲನ ಗುಮಾಸ್ತನಾಗಿದ್ದ ಚಿದಂಬರನು ಚಂಚಲೆಯ ಆಸ್ತಿಗಳಿಗೆ ಮತ್ತು ಹಣಕಾಸುಗಳಿಗೆ ಸಂಬಂಧಪಟ್ಟ ಎಲ್ಲಾ ವ್ಯವಹಾರಗಳನ್ನೂ, ಚಂಚಲೆಯ ಆದೇಶದಂತೆ, ನೋಡಿಕೊಳ್ಳತಕ್ಕದೆಂದು ಗೊತ್ತು ಮಾಡಿದನು. ಗೋಪಾಲನ ಸೋದರತ್ತೆ ಶಾರದಾಂಬ ಕೆಲಕಾಲ ಸಿರಗೂರಿನಲ್ಲಿಯೇ ಚಂಚಲೆಯ ಜೊತೆಯಲ್ಲಿ ಇರತಕ್ಕದೆಂದು ಗೊತ್ತು ಮಾಡಿದನು. ಚಂಚಲೆಯ ಮನೆಯನ್ನು ಕಾಯಲು ಸೂಕ್ತ ವ್ಯವಸ್ಥೆ ಮಾಡುವಂತೆ ಸಿರಗೂರಿನ ಕ್ರಾಂತಿಕೂಟದ ಜಿಲ್ಲಾ ಅಧ್ಯಕ್ಷನಿಗೆ ಸೂಕ್ತ ಆದೇಶ ನೀಡಿದನು. ಮರುದಿನ

ಬೆಳಿಗ್ಗೆ ಶ್ರೀಪುರಕ್ಕೆ ಹೊರಡುವ ಮುನ್ನ ಯಾವಾಗ ಬರ ಹೇಳಿದರೂ ತಾನು ಬರುವುದಾಗಿ ಚಂಚಲೆಗೆ ವಚನವಿತ್ತು ಪ್ರಯಾಣ ಬೆಳೆಸಿದನು.

ಚಂದ್ರಹಾಸನು ಹೊರಟು ಹೋದಮೇಲೆ, ಚಂಚಲೆಯ ಮನಸ್ಸು ನಿರಾಶೆಯ ಕಾರ್ಗತ್ತಲಲ್ಲಿ ಮುಳುಗಿಹೋಗಿತ್ತು. ಅವಳು ಏಕಾಂಗಿಯಾಗಿದ್ದಾಗಲೆಲ್ಲಾ ಕಗ್ಗೊಲೆಗಳ ಭೀಕರ ದೃಶ್ಯ ಅವಳ ಸುತ್ತಲೂ ಸುಳಿಯುತ್ತಿರುವಂತೆ ಅವಳಿಗೆ ಭಾಸವಾಗುತ್ತಿತ್ತು. ಅವಳ ಜೀವ ಅವಳಿಗೆ ಹೊರೆಯಾಗಿರುವಂತೆ ತೋರುತ್ತಿತ್ತು. "ಯಾಕಾಗಿ ಬದುಕಿರಬೇಕು? ಯಾರಿಗಾಗಿ ಬದುಕಿರಬೇಕು?" ಎಂಬ ಪ್ರಶ್ನೆಗಳು ಪದೇ ಪದೇ ಅವಳ ಮನಸ್ಸಿನಲ್ಲಿ ಉದ್ಭವಿಸುತ್ತಿದ್ದವು. ಅವಳ ಸ್ವಭಾವದಲ್ಲೂ ಸಹ ಕೆಲವು ಪರಿವರ್ತನೆಗಳಾಗುತ್ತಿರುವಂತೆ ಅವಳಿಗೆ ತೋರುತ್ತಿತ್ತು. ಕೇವಲ ಕೆಲವು ದಿನಗಳ ಹಿಂದೆ ಕೋಮಲ ಹೃದಯವಳಾಗಿದ್ದ ಅವಳು ಕಲ್ಲೆದೆಯವಳಾಗುತ್ತಾ ಬಂದಿದ್ದಳು. ತಡೆಯಲಾರದ ದುಃಖದಿಂದ ಅವಳ ಹೃದಯ ಬೆಂದು ಬೆಟ್ಟಾಗಿ ಹೋಗಿತ್ತು. ಹಿಂದೆ ಅಸಾಧಾರಣ ದೈವಭಕ್ತಳಾಗಿದ್ದಳು. ಆ ಘೋರ ದುರ್ಘಟನೆಯಾದಂದಿನಿಂದ ಅವಳ ದೈವಭಕ್ತಿ ನಾಶವಾಗಿತ್ತು. "ಸತ್ಯಸಂಧನೂ, ದೈವಭಕ್ತನೂ ಆಗಿದ್ದ ನನ್ನ ಗಂಡನನ್ನೂ, ನಿರಪರಾಧಿಯಾದ ನನ್ನ ಮುದ್ದು ಮಗನನ್ನೂ ರಕ್ಷಿಸಲಾರದ ಆ ಜಡ ದೇವರಿಂದ ನನಗೇನಾಗಬೇಕಾಗಿದೆ?" ಎಂದು ಮನಸ್ಸಿನಲ್ಲಿಯೇ ಅಂದುಕೊಳ್ಳುತ್ತಿದ್ದಳು.

ಚಂಚಲೆ ಅವಳ ಗಂಡನ ಸಮಸ್ತ ಆಸ್ತಿಗಳಿಗೆ ಉತ್ತರಾಧಿಕಾರಿಯಾಗಿದ್ದಳು. ಗೋಪಾಲನಿಗೆ ಹೇರಳವಾದ ಜಮೀನಲ್ಲದೆ ಸಿರಗೂರು ನಗರದಲ್ಲಿ ಒಂಭತ್ತು ಮನೆಗಳಿದ್ದವು. ಬ್ಯಾಂಕಿನಲ್ಲಿ ಹಣವಿತ್ತು. ಸುಮಾರು ಎರಡು ಲಕ್ಷ ರೂಪಾಯಿಗಳವರೆಗೆ ಜೀವವಿಮೆ ಮಾಡಿಸಿದ್ದನು. ಆದ್ದರಿಂದ ಚಂಚಲೆ ರಾಣಿಯಂತೆ ವೈಭವಯುತವಾಗಿ ಅಟ್ಟಹಾಸದ ಮೋಜಿನ ಜೀವನವನ್ನು ನಡೆಸಲು ಎಲ್ಲಾ ವಿಧವಾದ ಅನುಕೂಲಗಳೂ ಇದ್ದವು. ಜೊತೆಗೆ ಇನ್ನೂ ಯೌವ್ವನವಿತ್ತು; ರೂಪ ಲಾವಣ್ಯಗಳಿದ್ದವು. ಆದರೆ ಅವಳಿಗೆ ಐಹಿಕ ಸುಖ ಬೇಕಾಗಿರಲಿಲ್ಲ. ಅವಳ ಮನಸ್ಸು ಇಹದ ಜಾಡನ್ನು ಬಿಟ್ಟು ಪರದ ಜಾಡನ್ನು ಹಿಡಿದಿತ್ತು. ಇಹಲೋಕದ ಬಾಳು ದುಃಖಕರವೆಂದೂ, ನಶ್ವರವೆಂದೂ ಅವಳಿಗೆ ಅನುಭವದಿಂದ ವೇದ್ಯವಾಗಿತ್ತು. ಆದರೆ ಪರದಲ್ಲೇನಡಗಿದೆ ಎಂಬುದು ಅವಳಿಗೆ ಗೊತ್ತಿಲ್ಲದ ಸಂಗತಿಯಾಗಿತ್ತು. ಇಹಪರಗಳ ವಿಚಾರದಲ್ಲಿ ಅವಳ ಮನಸ್ಸು ನಾನಾ ವಿಧವಾದ ತರ್ಕವಿತರ್ಕಗಳಲ್ಲಿ ತಲ್ಲೀನವಾಗುತ್ತಿತ್ತು. ಆದರೆ, ಆ ತರ್ಕವಿತರ್ಕಗಳಿಂದ ಅವಳ ಮನಸ್ಸಿಗೆ ಶಾಂತಿ ಲಭಿಸುವ ಬದಲು ಮತ್ತಷ್ಟು ಬಗ್ಗಡವಾಗುತ್ತಿತ್ತು. ಮನಸ್ಸಿನ ದುಗುಡವನ್ನು ಮರೆಯುವುದಕ್ಕಾಗಿ ಪುಸ್ತಕಗಳನ್ನು ಓದುತ್ತಿದ್ದಳು. ಆದರೆ ಪುಸ್ತಕಗಳಿಂದಲೂ ಅವಳಿಗೆ ಶಾಂತಿ ಲಭಿಸಿರಲಿಲ್ಲ. ಗೋಪಾಲನು ಸತ್ತು ನಾಲ್ಕು ದಿನಗಳಾದ ಮೇಲೆ, ಒಂದು ಸಂಜೆ ಅವಳು ಹಾಗೆಯೇ ಯೋಚಿಸುತ್ತಿರುವಾಗ, ಸೌಮ್ಯಾಶ್ರಮದ ಸಿದ್ಧಾನಂದರ ನೆನಪಾಯಿತು. ತನ್ನ ಮನಸ್ಸಿನ ಕ್ಷೋಭೆಗೆ ಸಿದ್ಧಾನಂದರು ಏನಾದರೂ ಪರಿಹಾರವನ್ನು

ಸೂಚಿಸಬಹುದೆಂಬ ಆಸೆಯಿಂದ ಆದಷ್ಟು ಬೇಗ ಸೌಮ್ಯಾಶ್ರಮಕ್ಕೆ ಹೋಗಿ ಬರಬೇಕೆಂದು ನಿರ್ಧರಿಸಿದಳು.

ಗೋಪಾಲ ಸತ್ತು ಒಂದು ವಾರವಾಗಿರಬಹುದು. ಟಪಾಲು ಮೂಲಕ ಶ್ರೀಪುರದಿಂದ ಒಂದು ಕಾಗದ ಚಂಚಲೆಗೆ ಬಂದಿತ್ತು. ಚಂದ್ರಹಾಸನಿಂದಲೋ ಅಥವಾ ಕಿಶೋರನಿಂದಲೋ ಅಥವಾ ತನ್ನ ತಮ್ಮ ಗಂಗಾಧರನಿಂದಲೋ ಆ ಕಾಗದ ಬಂದಿರಬಹುದೆಂದು ಭಾವಿಸಿ, ಕಾಗದವನ್ನು ಒಡೆದು ಓದಿದಳು. ಕಾಗದದ ಒಕ್ಕಣೆ ಈ ಕೆಳಗೆ ಕಂಡಂತ್ತಿತ್ತು:

"ಪ್ರಿಯ ಗೆಳತಿ ಚಂಚಲೆಗೆ,

ನಿನ್ನ ಪತಿ, ಪುತ್ರ ಮತ್ತು ಅತ್ತೆ ಇವರುಗಳ ಸಾಮೂಹಿಕ ಕೊಲೆಯಾದ ದುರಂತ ವಾರ್ತೆಯನ್ನು ಪತ್ರಿಕೆಯಲ್ಲಿ ಓದಿ ಬಹಳ ದುಃಖವಾಯಿತು. ಯಾರೋ ದುರಾತ್ಮರು ಹಣಕ್ಕೋಸ್ಕರ ಇಂತಹ ದುಷ್ಕೃತ್ಯವನ್ನು ಮಾಡಿರಬೇಕೆಂದು ನನ್ನ ಭಾವನೆ. ನನ್ನ ಹೃತ್ಪೂರ್ವಕ ಸಂತಾಪಗಳನ್ನು ದಯವಿಟ್ಟು ಸ್ವೀಕರಿಸು.

ಇತಿ,

ನಿನ್ನ ಪ್ರೀತಿಯ ಗೆಳತಿ

ವಿಮಲ"

ಈ ಕಾಗದವನ್ನು ಶಂಕರನೇ ಬರೆದಿದ್ದನೆಂಬುದು ಚಂಚಲೆಗೆ ಸ್ಪಷ್ಟವಾಯಿತು. ಹಿಂದೆ ಇದೇ ರೀತಿ ಕೃತಕ ಹೆಸರಿನಲ್ಲಿ ಅವನು ಅವಳಿಗೆ ಪ್ರಣಯ ಪತ್ರಗಳನ್ನು ಬರೆಯುತ್ತಿದ್ದನು. ಆ ಕಾಗದವನ್ನು ನೋಡಿ ಕೋಪದಿಂದ ಕಿಡಿಕಿಡಿಯಾದಳು. ಇಂತಹ ನೀಚ ರಾಕ್ಷಸನು ಜಗತ್ತಿನಲ್ಲಿಯೇ ಇಲ್ಲವೆಂದು ತೀರ್ಮಾನಿಸಿದಳು. ಆ ಕಾಗದವನ್ನು ಸುಟ್ಟು ಹಾಕಬೇಕೆಂದು ಯೋಚಿಸಿದಳು. ಆದರೆ ಮುಂದೆ ಆ ಕಾಗದ ಯಾತಕ್ಕಾದರೂ ಬೇಕಾಗಬಹುದೆಂಬ ದೃಷ್ಟಿಯಿಂದ ಅದನ್ನು ಜೋಪಾನವಾಗಿ ತನ್ನ ಪೆಟ್ಟಿಗೆಯಲ್ಲಿಟ್ಟಳು.

ಹನ್ನೊಂದನೇ ದಿನದ ಸೂತಕ ಮುಗಿಯಿತು. ಮರುದಿನ ಬೆಳಿಗ್ಗೆ ಚಂಚಲೆ ಕಾರಿನಲ್ಲಿ ಸೌಮ್ಯಾಶ್ರಮಕ್ಕೆ ಹೊರಟಳು. ಅವಳ ಜೊತೆಯಲ್ಲಿ ಗುಮಾಸ್ತ ಚಿದಂಬರನನ್ನು ಕರೆದುಕೊಂಡಿದ್ದಳು. ಅವಳ ಡ್ರೈವರ್ ಕಾರು ನಡೆಸುತ್ತಿದ್ದನು. ಸಿರಗೂರಿನಿಂದ ಸೌಮ್ಯಾಶ್ರಮಕ್ಕೆ ನಲವತ್ತು ಮೈಲಿಗಳ ದೂರವಿತ್ತು. ರಸ್ತೆ ಸುಮಾರು ಇಪ್ಪತ್ತೈದು ಮೈಲಿಗಳ ದೂರದವರಗೆ ಬಯಲು ಪ್ರದೇಶದಲ್ಲಿ ಹಾಯ್ದು ಹೋಗಿತ್ತು. ಆ ನಂತರ ಶ್ರೀದೇವಿ ಘಾಟಿಯಲ್ಲಿ ಹೋಗಬೇಕಾಗಿತ್ತು. ಚಂಚಲೆಯ ಮನಸ್ಸಿನಲ್ಲಿ ಹಿಂದಿನ ಸಾರಿ ಅನಿಲಪುರದಿಂದ ಸೌಮ್ಯಾಶ್ರಮಕ್ಕೆ ಹೋಗಿದ್ದ ನೆನಪು ಬಂತು. ಅಂದು ಅವಳ ಮುದ್ದು ಮಗ ಅನಿಲಕುಮಾರನು ಅವಳ ಜೊತೆಯಲ್ಲಿದ್ದು ತನ್ನ ತೊದಲು ನುಡಿಗಳಿಂದ ಎಲ್ಲರ ಮನಸ್ಸನ್ನು ತಣಿಸುತ್ತಿದ್ದನು. ಹಿಂದಿನ ಪ್ರಯಾಣದಲ್ಲಿ ಅವಳ ಒಲುಮೆಯ ಗೆಳತಿ ಗೌರಿ ಅವಳ ಜೊತೆಯಲ್ಲಿದ್ದಳು. ಚಟುವಟಿಕೆಯ ಚಿಲುಮೆಯಂತಿದ್ದ ಕಿಶೋರನು ಹಾಸ್ಯದ ಚಟಾಕಿಗಳನ್ನು ಹಾರಿಸುತ್ತಿದ್ದನು. ಅಂದು ತನ್ನ ಗಂಡನ, ಮಗನ ಮತ್ತು

ತಂದೆಯ ಶ್ರೇಯಸ್ಸಿನ ಸಲುವಾಗಿ ಸೌಮ್ಯಾಶ್ರಮಕ್ಕೆ ಹೋಗಿದ್ದಳು. ಈ ಪ್ರಯಾಣದಲ್ಲಿ ಅವಳ ಜೊತೆಯಲ್ಲಿ ನಲಿದು ನಲಿಸುವ ಪುತ್ರನೂ ಇರಲಿಲ್ಲ; ನಕ್ಕು, ನಗಿಸುವ ಕಿಶೋರನೂ ಇರಲಿಲ್ಲ; ಅವಳ ಒಲುಮೆಯ ಗೆಳತಿ ಗೌರಿಯೂ ಇರಲಿಲ್ಲ. ಆ ಸಾರಿ ಯಾರ ಶ್ರೇಯೋಭಿವೃದ್ಧಿಯ ಸಲುವಾಗಿ ಅವಳು ಆಶ್ರಮಕ್ಕೆ ಹೋಗಿದ್ದಳೋ, ಯಾರಿಗಾಗಿ ಹಗಲಿರುಳೂ ಅವಳು ಪರಮಾತ್ಮನನ್ನು ಪ್ರಾರ್ಥಿಸುತ್ತಿದ್ದಳೋ, ಅವರೆಲ್ಲರೂ ಕಣ್ಮರೆಯಾಗಿದ್ದರು. "ನಾನು ಯಾವ ಸೌಭಾಗ್ಯಕ್ಕಾಗಿ ಇಂದು ಆಶ್ರಮದ ಯಾತ್ರೆಯನ್ನು ಕೈಗೊಂಡಿದ್ದೇನೆ?" ಎಂದು ತನ್ನನ್ನೇ ತಾನು ಪ್ರಶ್ನಿಸಿಕೊಳ್ಳುತ್ತಿದ್ದಳು.

ಚಿಂತಾಮಗ್ನಳಾಗಿದ್ದ ಅವಳಿಗೆ ದಾರಿ ಸಾಗಿದ್ದೇ ಗೊತ್ತಾಗಲಿಲ್ಲ. ಕಾರು ಶ್ರೀದೇವಿ ಘಾಟಿಯನ್ನು ಸಮೀಪಿಸುತ್ತಿದ್ದಾಗ ಸುತ್ತಮುತ್ತಲ ಪ್ರಕೃತಿ ಸೌಂದರ್ಯ ಅವಳ ಮನಸ್ಸನ್ನು ಸೆಳೆಯಿತು. ನಿಸರ್ಗರಮಣಿ ತನ್ನ ಆವಾಸಕ್ಕೆ ಅವಳನ್ನು ಕೈ ಬೀಸಿ ಕರೆಯುತ್ತಿರುವಳೋ ಎಂಬಂತೆ ತೋರುತ್ತಿತ್ತು. ಹಿಂದಿನ ಬಾರಿ ಆ ಮನಮೋಹಕ ಸೌಂದರ್ಯವನ್ನು ನೋಡಿ ಅವಳು ಪುಳಕಿತಳಾಗಿದ್ದಳು. ಅದೇ ಸೌಂದರ್ಯ ಇಂದೂ ಅಚ್ಚಳಿಯದಂತಿತ್ತು. ಆದರೆ ಹಿಂದೆ ಅವಳಲ್ಲಿದ್ದ ಸೌಂದರ್ಯೋಪಾಸಕ ಶಕ್ತಿ ಇಂದು ಇಂಗಿ ಹೋಗಿತ್ತು. ಚಿತ್ತಕ್ಷೋಭೆಯಿಂದ ಅವಳಲ್ಲಿದ್ದ ಭಾವುಕರಸ ಬತ್ತಿ ಹೋಗಿತ್ತು. ಘಾಟಿಯ ಹತ್ತಿರ ಹೋದಾಗ, ಅವಳಿಗೆ ಹಿಂದಿನ ಸಾರಿ ದಾರಿಯಲ್ಲಿ ಶಂಕರನ ಕಾರು ಸಿಕ್ಕಿದ್ದು ನೆನಪಾಯಿತು. ಅವನ ಮೇಲೆ ರೋಷಾವೇಶಗೊಂಡು "ನಾನೇ ಅವನನ್ನು ಕೊಲ್ಲಲು ಸಾಧ್ಯವಾಗು ವಂತಿದ್ದರೆ, ನನಗಿಂತ ಧನ್ಯರು ಇನ್ಯಾರೂ ಇರಲಾರರು" ಎಂದುಕೊಂಡಳು.

ಸೌಮ್ಯಾಶ್ರಮವನ್ನು ತಲುಪಿದಾಗ ಬೆಳಿಗ್ಗೆ ಹನ್ನೊಂದು ಗಂಟೆಯಾಗಿರಬಹುದು, ದಿವಂಗತ ಸಿರಗೂರು ಗೋಪಾಲನ ಪತ್ನಿ ಸಿದ್ಧಾನಂದರ ದರ್ಶನಕ್ಕೆ ಬಂದಿದ್ದಾರೆಂದು ಚಿದಂಬರನು ಆಶ್ರಮದ ವ್ಯವಸ್ಥಾಪಕರಿಗೆ ತಿಳಿಸಿದನು. ಗೋಪಾಲನ ಕೊಲೆಯ ವಿಚಾರವನ್ನು ಸಿದ್ಧಾನಂದರೂ, ಅವರ ಶಿಷ್ಯರೂ, ಪತ್ರಿಕೆಗಳಿಂದಲೂ ಆಶ್ರಮಕ್ಕೆ ಬರುತ್ತಿದ್ದ ಭಕ್ತರಿಂದಲೂ ತಿಳಿದುಕೊಂಡಿದ್ದರು. ಸಿರಗೂರು ಗೋಪಾಲನು ಅತ್ಯಂತ ಸತ್ಯಸಂಧ ರಾಜಕಾರಣಿ ಎಂಬ ವಿಚಾರ ಸಿದ್ಧಾನಂದರಿಗೆ ಮೊದಲಿನಿಂದಲೂ ಗೊತ್ತಿತ್ತು. ಅಂತಹ ಸತ್ಪುರುಷ ಮತ್ತು ಅವನ ಎಳೆಗೂಸಿನ ಕಗ್ಗೊಲೆ ಅವರ ಹೃದಯದ ಅಂತರಾಳವನ್ನು ಕಲಕಿತ್ತು. ಶಂಕರನ ಕಡೆಯವರಿಂದಲೇ ಈ ಹೀನಕೃತ್ಯ ನಡೆದಿದೆ ಎಂದು ಅವರ ನೂರಾರು ಜನ ಭಕ್ತರು ಅವರಿಗೆ ಹೇಳಿದುದನ್ನು ಅವರು ಸಂಪೂರ್ಣ ನಂಬಿದ್ದರು. ಸಿದ್ಧಾನಂದರು ರಾಗದ್ವೇಷಗಳನ್ನು ಗೆದ್ದಿದ್ದ ತಪಸ್ವಿಗಳಾಗಿದ್ದರೂ, ಗೋಪಾಲನ ಅವನ ತಾಯಿ ಮತ್ತು ಮಗನ ದುರ್ಮರಣದಿಂದ ಬಹಳ ಸಂಕಟಪಟ್ಟಿದ್ದರು. ಅವರು ಮೊದಲು ತಾಪಸ ಸಾಂಪ್ರದಾಯಕ್ಕನುಗುಣವಾಗಿ ಆತ್ಮ ಸಾಕ್ಷಾತ್ಕಾರಕ್ಕಾಗಿ, ಜಗದ ಸಮಸ್ತ ಜೀವಿಗಳ ಶ್ರೇಯಸ್ಸಿಗಾಗಿ, ತಪಸ್ಸು ಮಾಡುತ್ತಿದ್ದರು. ಗೋಪಾಲನ ಕೊಲೆಯಾದ ನಂತರ, ದುಷ್ಟ ಶಿಕ್ಷಣ ಶಿಷ್ಟ ಪರಿಪಾಲನೆಗಾಗಿ ತಪಸ್ಸು ಮಾಡುತ್ತಿದ್ದರು. "ಪೂರ್ವ ಕಾಲದ ಋಷಿಗಳ

ತಪಸ್ಸಿನ ಶಕ್ತಿ ನನಗಿದಿದ್ದರೆ ಆ ನೀಚ ಶಂಕರನನ್ನು ಸುಟ್ಟು ಬಿಡುತ್ತಿದ್ದೆ" ಎಂದು ಭಾವೋದ್ರೇಕದಿಂದ ಕೆಲವು ಬಾರಿ ಅವರ ಶಿಷ್ಯರೊಂದಿಗೆ ಮಾತನಾಡುತ್ತಾ ಹೇಳಿದ್ದರು.

ನೆರೆದಿದ್ದ ಭಕ್ತರೆಲ್ಲರಿಗೂ ದರ್ಶನವಿತ್ತ ನಂತರ ಚಂಚಲೆಯನ್ನು ತಮ್ಮ ವಿಶ್ರಾಂತಿಯ ಕೊಠಡಿಗೆ ಬರಮಾಡಿಕೊಂಡರು. ಚಂಚಲೆ ಅವರ ಪಾದಕ್ಕೆರಗಿ ಮಗುವಿನಂತೆ ಅಳತೊಡಗಿದಳು. ಸಿದ್ಧಾನಂದರು ಮನಸ್ಸು ನೊಂದವರಾಗಿ "ಮಗಳೇ ಅಳಬೇಡ. ನಿನಗೆ ಈ ಗತಿ ಪ್ರಾಪ್ತಿಯಾಗಬಾರದಿತ್ತು. ಭಗವಂತನು ನಿನಗೆ ಒಳ್ಳೆಯದನ್ನು ಮಾಡಲಿ. ಏಳಮ್ಮಾ" ಎಂದರು.

"ಪೂಜ್ಯರೇ ಆಗಬಾರದ್ದೆಲ್ಲಾ ಆಗಿಹೋಗಿದೆ. ಒಳ್ಳೆಯದಾಗುವುದು ಇನ್ನೇನೂ ಉಳಿದಿಲ್ಲ. ಅಂದೇ ಸಾಯಬೇಕೆಂದು ನಿರ್ಧರಿಸಿದ್ದೆ. ಆದರೆ ಕೆಲವರು ನನ್ನ ಸಂಕಲ್ಪಕ್ಕೆ ಅಡ್ಡಿ ಬಂದಿದ್ದರಿಂದ ಇನ್ನೂ ಬದುಕಿದ್ದೇನೆ. ದುಃಖದ ಬೇಗೆಯಲ್ಲಿ ಬೆಂದು ಸಾಕಾಗಿ ಹೋಗಿದೆ. ಇಹಲೋಕದ ಆಸೆ ನನಗಿಲ್ಲ. ಪಾರಮಾರ್ಥಿಕ ವಿಚಾರದಲ್ಲಿ ನನಗೆ ಬೆಳಕನ್ನು ತೋರಿಸಿ, ನನಗೆ ಶಾಂತಿ ಲಭಿಸುವಂತೆ ಮಾಡುತ್ತೀರೆಂಬ ಭರವಸೆಯಿಂದ ನಾನಿಂದು ತಮ್ಮ ಸನ್ನಿಧಿಗೆ ಬಂದಿದ್ದೇನೆ. ನನ್ನ ಮಾನಸಿಕ ಸ್ಥಿತಿ ಹೀಗೆಯೇ ಮುಂದುವರಿಯುವುದಾದರೆ ನಾನು ಬದುಕಿರುವುದಕ್ಕಿಂತಲೂ ಸಾಯುವುದೇ ಮೇಲು."

"ಮಗಳೇ, ನಾನೇನೂ ಅವತಾರ ಪುರುಷನಲ್ಲ. ಅಲ್ಪಸ್ವಲ್ಪ ಸಾಧನೆಯಿಂದ, ಅಲ್ಪಸ್ವಲ್ಪ ಬೆಳಕು ಕಂಡಿದ್ದೇನೆ. ನೀನಿಲ್ಲಿಗೆ ಬಂದುದು ಒಳ್ಳೆಯದಾಯಿತು. ಭಗವಂತನನ್ನು ಅನನ್ಯ ಭಕ್ತಿಯಿಂದ ಪ್ರಾರ್ಥಿಸು. ಅವನ ಅನುಗ್ರಹದಿಂದ ನಿನಗೆ ಶಾಂತಿ ಲಭಿಸುತ್ತದೆ."

"ನಾನು ಆ ಭಗವಂತನನ್ನು ಅಂದೇ ಕೈಬಿಟ್ಟಿದ್ದೇನೆ. ಸಜ್ಜನರನ್ನೂ, ನಿರಪರಾಧಿಗಳನ್ನೂ, ದುರ್ಜನರ ಕೈಯಿಂದ ರಕ್ಷಿಸಲಾರದ ಆ ಜಡ ಭಗವಂತನಿಂದೇನು ಪ್ರಯೋಜನ?"

"ನಿನ್ನ ಮನಸ್ಸಿನಲ್ಲೇನಿದೆ ಎಂಬುದನ್ನು ನಾನು ಗ್ರಹಿಸಬಲ್ಲೆ. ಮಾನವನಿಗಿಂತ ಮಿಗಿಲಾದ ಜಗನ್ನಿಯಾಮಕ ಶಕ್ತಿ ಇದೆ. ಆ ಶಕ್ತಿಯೇ ಜಗತ್ತಿನ ಆಗುಹೋಗುಗಳನ್ನೂ, ಮಾನವರ ಆಗುಹೋಗುಗಳನ್ನೂ ನಿರ್ಧರಿಸುತ್ತದೆ. ಜಗನ್ನಿಯಾಮಕನೊಬ್ಬ ನಿದ್ದಾನೆಂದು ತಿಳಿದಾಗ ಮಾತ್ರ ಮನಸ್ಸಿಗೆ ಶಾಂತಿ ಲಭಿಸುತ್ತದೆ. ಆ ಜಗನ್ನಿಯಾಮಕನ ನಿಯಮಗಳನ್ನು ಯಾರೂ ಮೀರಲಾರರು."

"ನಾನು ನಿಮ್ಮಂತೆ ಜ್ಞಾನಿಯಲ್ಲ. ಏನೂ ಅರಿಯದವಳು. ದುರ್ಜನರಿಂದ ಸಜ್ಜನರು ಹತರಾಗುವುದೇ ಆ ಜಗನ್ನಿಯಾಮಕನ ನಿಯಮವಾದರೆ ಆ ಜಗನ್ನಿಯಾಮಕ ನಿಗೆ ನ್ಯಾಯಾನ್ಯಾಯಗಳ ಪರಿಜ್ಞಾನವೇ ಇಲ್ಲವೆಂದು ಹೇಳಬೇಕಾಗುತ್ತದೆ."

"ಮಾನವರ ನ್ಯಾಯಾನ್ಯಾಯ ನಿಬಂಧನೆಗಳಿಂದ ಸೃಷ್ಟಿಕರ್ತನು ಬದ್ಧನಲ್ಲ. ಆದರೆ ಸೃಷ್ಟಿಕರ್ತನ ನಿಯಮಗಳಿಗೆ ಜಗದ ಜೀವಿಗಳೆಲ್ಲರೂ ಬದ್ಧರು. ಜಗತ್ತು ಗೊತ್ತುಗುರಿ ಇಲ್ಲದ, ಕಾಲನಿಯಮಗಳಿಲ್ಲದ, ಕಾರಣ ಕಾರುಣ್ಯಗಳಿಲ್ಲದ ಹುಚ್ಚಾಟದ ರಂಪದ ರಂಗವಲ್ಲ, ಹೊರನೋಟಕ್ಕೆ ತೋರುವ ಅವ್ಯವಸ್ಥೆಯ ಹಿಂಬದಿಯಲ್ಲಿ ವ್ಯವಸ್ಥೆ ಅಡಗಿದೆ; ಅಶಾಶ್ವತದ ಹಿಂಬದಿಯಲ್ಲಿ ಶಾಶ್ವತ ಅಡಗಿದೆ."

"ತಾವು ಹೇಳುವುದು ಸಾಮಾನ್ಯ ಜನರಿಗೆ ಅರ್ಥವಾಗದ ಮಾತು."

"ಮಗಳೇ, ರೇಡಿಯೋದಲ್ಲಿ ಬರತಕ್ಕ ಸಮಾಚಾರ ಮತ್ತು ಸಂಗೀತಗಳನ್ನು ಕೇಳಬೇಕಾದರೆ ರೇಡಿಯೋ ಟ್ಯೂನ್ ಮಾಡತಕ್ಕ ವಿಧಾನ ಗೊತ್ತಿರಬೇಕು. ಹಾಗೆಯೇ ಅಧ್ಯಾತ್ಮಿಕ ರೇಡಿಯೋವನ್ನು ಟ್ಯೂನ್ ಮಾಡತಕ್ಕ ಶಕ್ತಿಯನ್ನು ಸಾಧನೆಯಿಂದ ಪಡೆದಾಗ ಮಾತ್ರ ನಾನು ಹೇಳಿದ್ದು ಅರ್ಥವಾಗುತ್ತದೆ. ನೀನು ಸೃಷ್ಟಿ ವೈಚಿತ್ರ್ಯವನ್ನು ನಿಧಾನವಾಗಿ ಯೋಚಿಸಿದರೆ, ಸೃಷ್ಟಿಗೆ ಕಾರಣ ಕರ್ತನಾದ ಶಕ್ತಿ ಅಥವಾ ವ್ಯಕ್ತಿ ಮಾನವರಿಗಿಂತಲೂ ಅತಿ ಬುದ್ಧಿಶಾಲಿಯಾಗಿರಬೇಕೆಂದು ನಿನಗೆ ತೋಚುತ್ತದೆ."

"ಹಾಗಾದರೆ ದುರ್ಜನರ ದುಷ್ಕೃತ್ಯಗಳಿಗೆ ಶಿಕ್ಷೆಯೇ ಇಲ್ಲವೆಂದಾಯಿತು."

"ನಾನು ಹಾಗೆ ಹೇಳಲಿಲ್ಲ. ದುರ್ಜನರ ದುಷ್ಕೃತ್ಯಗಳಿಗೆ ಒಂದಲ್ಲ ಒಂದು ದಿನ, ಇಂದಲ್ಲ ನಾಳೆ, ಈ ಜನ್ಮದಲ್ಲಿ ಅಥವಾ ಇನ್ನೊಂದು ಜನ್ಮದಲ್ಲಿ ಶಿಕ್ಷೆ ಆಗಿಯೇ ಆಗುತ್ತದೆ. ಜನರು ಮಾನವ ನಿರ್ಮಿತ ಕಾನೂನುಗಳನ್ನು ಉಲ್ಲಂಘಿಸಿ ತಪ್ಪಿಸಿಕೊಳ್ಳಬಹುದು. ಆದರೆ ದೈವ ನಿರ್ಮಿತ ಕಾನೂನನ್ನು ಉಲ್ಲಂಘಿಸಿ ತಪ್ಪಿಸಿಕೊಳ್ಳಲಾಗುವುದಿಲ್ಲ. ಸಜ್ಜನರು ಅಮರರಲ್ಲ. ಸಜ್ಜನರೂ ಸಾಯುತ್ತಾರೆ. ದುರ್ಜನರೂ ಸಾಯುತ್ತಾರೆ. ನಿನ್ನ ಗಂಡನ ಮಾತಿರಲಿ, ಸಾಕ್ರಿಟೀಸ್, ಏಸುಕ್ರಿಸ್ತ, ಮಹಾತ್ಮಗಾಂಧೀ ಇವರುಗಳು ದುರ್ಜನರ ಕೈಯಿಂದ ಸಾಯಲಿಲ್ಲವೇನು? ಸಜ್ಜನರ ದುರ್ಮರಣ ದುರ್ಜನರ ನಾಶಕ್ಕೆ ನಾಂದಿ. ಪಾಪಿ ಶಂಕರನಿಗೂ ಶಿಕ್ಷೆ ಕಾದಿದೆ."

"ಪೂಜ್ಯರೇ, ಆ ಪಾಪಿಗೆ ಶಿಕ್ಷೆಯಾಗುವುದನ್ನು ನೋಡಿ ಸಾಯಬೇಕೆಂಬುದು ನನ್ನ ಅಂತಿಮ ಬಯಕೆ."

"ಮಗಳೇ, ನಿನ್ನ ಬಯಕೆ ಈಡೇರುತ್ತದೆಂದು ನನ್ನ ಮನಸ್ಸು ಹೇಳುತ್ತಾ ಇದೆ. ಈಗ ಸುಮಾರು ಮೂರು ತಿಂಗಳ ಹಿಂದೆ ಅವನನ್ನು ನಾನೇ ಸುಲಭವಾಗಿ ಕೊಲ್ಲಬಹುದಾಗಿತ್ತು. ಕೊಲ್ಲುವುದು ಸನ್ಯಾಸಿಗಳಿಗೆ ಸಲ್ಲದೆಂದು ಅವನನ್ನು ಕೊಲ್ಲದೆ ಬಿಟ್ಟೆ."

"ಪೂಜ್ಯರೇ, ಆ ಧೂರ್ತ ಹೇಗೆ ತಮ್ಮ ಕೈಯಲ್ಲಿ ಸಿಕ್ಕಿ ಬಿದ್ದಿದ್ದ?"

"ಅದೊಂದು ಸ್ವಾರಸ್ಯವಾದ ಕತೆ. ಅವನು ನನ್ನನ್ನು ಕೊಲ್ಲಬೇಕೆಂಬ ದುರುದ್ದೇಶದಿಂದ ನನ್ನೊಡನೆ ಏನೋ ಮಾತನಾಡಲು ಬಂದವನಂತೆ ನಟಿಸಿ ಇಲ್ಲಿಗೆ ಬಂದಿದ್ದ. ನನಗೆ ಅವನ ದುರುದ್ದೇಶ ಗೊತ್ತಾಯಿತು. ಮಾತನಾಡುವ ಸಲುವಾಗಿ ಅವನನ್ನು ಇದೇ ಕೊಠಡಿಗೆ ಕರೆದುಕೊಂಡು ಬಂದು, ನಾನು ಅವನೊಡನೆ ಮಾತನಾಡುತ್ತಿದ್ದಾಗ, ನನ್ನ ಶಿಷ್ಯ ಅವನಿಗೆ ಗೊತ್ತಾಗದಂತೆ ಈ ಕೊಠಡಿಯ ಬಾಗಿಲನ್ನು ಎಳೆದುಕೊಂಡು, ಹೊರಗಡೆಯಿಂದ ಅಗಳಿ ಹಾಕಿದನು. ತಾನು ಈ ಕೋಟೆಯಲ್ಲಿ ಸೆರೆಯಾಳೆಂಬುದನ್ನು ತಿಳಿಯದೆ, ನನ್ನನ್ನು ಕೊಲ್ಲುವುದಕ್ಕಾಗಿ ಅವನು ರಿವಾಲ್ವಾರನ್ನು ತೆಗೆಯುತ್ತಿದ್ದ. ನಾನು ಅವನ ಕಡೆ ನೋಡುತ್ತಾ ಗರ್ಜಿಸಿ, ಅವನು ಬಂಧಿಯಾಗಿರುವುದನ್ನು ಅವನಿಗೆ ತಿಳಿಸಿದೆ. ಹೊರಗಡೆಯಿಂದ ನನ್ನ ಶಿಷ್ಯ ಅದೇ ರೀತಿ ಹೇಳಿ ಗರ್ಜಿಸಿದ. ಶಂಕರ ಮಂತ್ರಮುಗ್ಧನಾದವನಂತೆ ಶರಣಾಗತನಾಗಿ ರಿವಾಲ್ವಾರನ್ನು ನನಗೆ ಒಪ್ಪಿಸಿ ಹೊರಟು ಹೋದ."

"ಪೂಜ್ಯರೇ, ಆ ರಿವಾಲ್ವಾರು ಏನಾಯಿತು?"

"ಅದು ನನ್ನ ಬಳಿ ಇದೆ. ಅದನ್ನು ಏನು ಮಾಡಬೇಕೆಂದು ಇನ್ನೂ ಯೋಚಿಸಿಲ್ಲ."

"ಅದನ್ನು ನನಗೆ ಕೊಡುತ್ತೀರಾ?"

"ಅದನ್ನು ತೆಗೆದುಕೊಂಡು ನೀನೇನು ಮಾಡುತ್ತೀಯಾ ಮಗಳೇ?"

"ನನ್ನ ಆತ್ಮರಕ್ಷಣೆಗಾಗಿ ಇಟ್ಟು ಕೊಂಡಿರುತ್ತೇನೆ."

"ಆಗಲಿ, ಅದು ನನಗೇಕೆ? ನಿನಗೆ ಆತ್ಮರಕ್ಷಣೆಗೆ ಬೇಕಾಗಬಹುದು. ಆದರೆ ಒಂದು ಮಾತು. ನಾನು ಕೊಟ್ಟೆನೆಂದು ಯಾರಿಗೂ ಹೇಳಬಾರದು."

"ಖಂಡಿತಾ ಯಾರಿಗೂ ಹೇಳುವುದಿಲ್ಲಾ."

"ಹಾಗಾದರೆ ತಗೋ" ಎಂದು ಹೇಳಿ ಕವಾಟದಲ್ಲಿದ್ದ ರಿವಾಲ್ವಾರನ್ನೂ ಆರು ತೋಟಾಗಳನ್ನೂ ಸಿದ್ಧಾನಂದರು ಚಂಚಲೆಯ ಕೈಗೆ ಕೊಟ್ಟರು. ಚಂಚಲೆ ಅವುಗಳನ್ನು ತನ್ನ ಕೈಚೀಲದಲ್ಲಿಟ್ಟುಕೊಂಡು ಅವರ ಪಾದಕ್ಕೆ ಬಿದ್ದು, ಅವರಿಗೆ ಧನ್ಯವಾದಗಳನ್ನರ್ಪಿಸಿದಳು.

"ಮಗಳೇ, ನಿನಗೆ ಜಯವಾಗಲಿ. ಭಕ್ತಿಯಿಂದ ಭಗವಂತನನ್ನು ಪ್ರಾರ್ಥಿಸಿದರೆ ಪ್ರಾರ್ಥನೆ ಈಡೇರುತ್ತದೆ" ಎಂದು ಸಿದ್ಧಾನಂದರು ಅವಳನ್ನು ಹರಸಿ ಕಳುಹಿಸಿ ಕೊಟ್ಟರು.

ಚಂಚಲೆ ಆಶ್ರಮದಿಂದ ಹಿಂದಿರುಗಿ ಊರಿಗೆ ಪ್ರಯಾಣ ಮಾಡುತ್ತಿರುವಾಗ, ಸಿದ್ಧಾನಂದರು ಹೇಳಿದ್ದ ಮಾತುಗಳನ್ನು ಮೆಲುಕು ಹಾಕುತ್ತಿದ್ದಳು. ಆಧ್ಯಾತ್ಮಿಕ ವಿಚಾರದಲ್ಲಿ ಅವರು ಹೇಳಿದ್ದ ಮಾತುಗಳಿಂದ ಸಂಪೂರ್ಣ ತೃಪ್ತಿಯಾಗದಿದ್ದರೂ, ಅವರ ಸಾನ್ನಿಧ್ಯದಲ್ಲಿ ಅವಳಿಗೆ ಒಂದು ಬಗೆಯ ಅವರ್ಣನೀಯ ಶಾಂತಿ ದೊರಕಿತ್ತು. ಶಂಕರನು ಸಿದ್ಧಾನಂದರ ಕೈದಿಯಾಗಿ, ಅವನ ರಿವಲ್ವಾರನ್ನು ಅವರಿಗೆ ಒಪ್ಪಿಸಿ, ಹೊರಟು ಹೋಗಿದ್ದನೆಂದು ಇನ್ಯಾರಾದರೂ ಹೇಳಿದ್ದರೆ ಚಂಚಲೆ ಅದನ್ನು ಖಂಡಿತಾ ನಂಬುತ್ತಿರಲಿಲ್ಲ. ಆದರೆ ಆ ಮಾತು ಸಿದ್ಧಾನಂದರ ಬಾಯಿಂದಲೇ ಬಂದಿತ್ತು. ಜೊತೆಗೆ ಅವನಿಂದ ವಶಪಡಿಸಿಕೊಂಡ ರಿವಾಲ್ವಾರನ್ನು ಸಿದ್ಧಾನಂದರೇ ಅವಳಿಗೆ ಕೊಟ್ಟಿದ್ದರು. ಆದ್ದರಿಂದ ಜನರು ಹೇಳುತ್ತಿರುವಂತೆ ಸಿದ್ಧಾನಂದರಲ್ಲಿ ಏನೋ ಪವಾಡ ಶಕ್ತಿ ಇರಬಹುದೆಂದು ಅವಳಿಗನ್ನಿಸಿತ್ತು. ಅವರು "ಮಗಳೇ, ನಿನಗೆ ಜಯವಾಗಲಿ" ಎಂದು ಹೇಳಿದ್ದ ಮಾತುಗಳು ಪದೇಪದೇ ಅವಳ ಕಿವಿಗೆ ಕೇಳಿಸಿದಂತಾಗುತ್ತಿತ್ತು. ಆ ಮಾತುಗಳನ್ನು ಯಾವ ಉದ್ದೇಶದಿಂದ ಅವರು ಹೇಳಿದ್ದರೆಂಬುದನ್ನು ಪದೇ ಪದೇ ಚಿಂತನೆ ಮಾಡುತ್ತಿದ್ದಳು. ತನ್ನ ಮತ್ತು ತನ್ನ ಕುಟುಂಬದ ಸರ್ವನಾಶಕ್ಕೆ ಕಾರಣನಾಗಿದ್ದ ಆ ದುಷ್ಟ ಶಂಕರನ ರಿವಾಲ್ವಾರ್ ಸಿದ್ಧಾನಂದರ ಮುಖಾಂತರ ತನ್ನ ಕೈ ಸೇರುತ್ತದೆಂದು ಚಂಚಲೆ ಕನಸಿನಲ್ಲಿಯೂ ಯೋಚಿಸಿರಲಿಲ್ಲ. ಇದರ ಹಿನ್ನೆಲೆಯಲ್ಲಿ ಯಾವುದೋ ವಿಧಿ ಸಂಕಲ್ಪವಿರಬಹುದೆಂದು ಅವಳು ಭಾವಿಸಲು ಕಾರಣವಿತ್ತು.

ಮನೆಗೆ ಬಂದ ನಂತರ, ರಿವಲ್ವಾರ್ ವಿಚಾರವನ್ನು ಯಾರಿಗೂ ಹೇಳದೆ, ಅದನ್ನೂ ಅದರ ತೋಟಾಗಳನ್ನು ತಾನು ಮಲಗುವ ಕೋಣೆಯಲ್ಲಿ ಗಾಡ್ರೇಜ್ ಬೀರುವಿನಲ್ಲಿಟ್ಟಳು.

ಆ ದಿನವೇ ಶಂಕರನ ಸಂತಾಪಸೂಚಕ ಪತ್ರಕ್ಕೆ ಜವಾಬನ್ನು ಬರೆದಳು. ಆ ಜವಾಬು ಈ ರೀತಿ ಇತ್ತು:

"ಶ್ರೀ ಶಂಕರ್‌ರವರಿಗೆ,

ತಾವು ನನ್ನನ್ನು ಮರೆಯದೆ ವಿಶ್ವಾಸವಿಟ್ಟು ಕಳುಹಿಸಿದ ಸಂತಾಪ ಸೂಚಕ ಪತ್ರಕ್ಕಾಗಿ ತಮಗೆ ಬಹಳ ಋಣಿಯಾಗಿದ್ದೇನೆ. ಕೊಲೆಗಡುಕರನ್ನು ಪೋಲೀಸಿನವರು ಇನ್ನೂ ಪತ್ತೆಮಾಡಿಲ್ಲ. ಅವರನ್ನು ಪತ್ತೆಮಾಡುವ ವಿಚಾರದಲ್ಲಿ ನಿಮ್ಮ ಸಹಾಯ ಬಹಳ ಅಗತ್ಯವಿದೆ. ಮೃತರ ಅಂತಿಮ ತಿಥಿ ಕರ್ಮಗಳು ಮುಗಿದ ನಂತರ ನಿಮಗೆ ಆ ವಿಚಾರದಲ್ಲಿ ಪುನಃ ಬರೆಯುತ್ತೇನೆ. ನಿಮ್ಮ ವಿಶ್ವಾಸ ಏಕರೀತಿಯಲ್ಲಿರಲಿ.

ಇತಿ,

ಚಂಚಲಾ."

ಆಶ್ರಮದಿಂದ ಬಂದ ಮೇಲೆ ಅವಳ ಸ್ವಭಾವದಲ್ಲಿ ಮತ್ತಷ್ಟು ಮಾರ್ಪಾಡಾಗಿತ್ತು. ಅವಳಲ್ಲಿದ್ದ ಸಹೃದಯತೆ, ಕನಿಕರ ಇವುಗಳ ಬದಲು ಕಾಠಿಣ್ಯತೆ ಮತ್ತು ಸೇಡು ಅವಳಲ್ಲಿ ಮನೆ ಮಾಡಿದ್ದವು. ಅವಳ ಪುಕ್ಕಲು ಸ್ವಭಾವ ಮಾಯವಾಗಿ, ಅದರ ಬದಲು ಧೈರ್ಯ ಸ್ಥೈರ್ಯಗಳು ಬಂದಿದ್ದವು. ಆಸೆಪಾಸೆಗಳಿಗೆ ಅಂಟಿಕೊಂಡಿರುವವರಿಗೆ ಅಳುಕು ಅಂಜಿಕೆಗಳಿರುತ್ತವೆ. ಆಸೆಯನ್ನು ತೊರೆದವರಿಗೆ ಅಂಜಿಕೆ ಎಲ್ಲಿ ಬಂತು? ಆದರೆ ಚಂಚಲೆ ಸಿದ್ಧಾನಂದರ ದಯೆಯಿಂದಲೇ ತನಗೆ ಧೈರ್ಯ, ಸ್ಥೈರ್ಯ ಮುಂತಾದ ಗುಣಗಳು ಬಂದಿವೆ ಎಂದು ಭಾವಿಸುತ್ತಿದ್ದಳು. ರಿವಾಲ್ವಾರು ಸಿಕ್ಕಿದ ನಂತರ ಶಂಕರನನ್ನು ಅದೇ ರಿವಾಲ್ವಾರಿನಿಂದ ಕೊಲ್ಲಬೇಕೆಂದು ನಿರ್ಧರಿಸಿ, ಮೇಲೆ ಹೇಳಿದಂತೆ ಅವನಿಗೆ ಜವಾಬು ಬರೆದಿದ್ದಳು. ಆದರೆ ಅವಳಿಗೆ ರಿವಾಲ್ವಾರ್ ಹಾರಿಸುವ ವಿಧಾನ ಗೊತ್ತಿರಲಿಲ್ಲ. ಅಲ್ಲದೆ ಶಂಕರನನ್ನು ಹೊಡೆಯಲು ಅವಕಾಶ ಸಿಕ್ಕುವುದು ಅಷ್ಟು ಸುಲಭವಲ್ಲವೆಂದು ಅವಳು ತಿಳಿದಿದ್ದಳು. ವಿದ್ಯಾರ್ಥಿನಿಯಾಗಿದ್ದಾಗ ಅವಳಿಗೆ ಸೈನಿಕ ಶಿಕ್ಷಣ ಆಗಿತ್ತು. ಆಗ ಅವಳು ಬಂದೂಕು ಹಾರಿಸುವುದನ್ನು ಕಲಿತಿದ್ದಳು. ಆದರೆ ರಿವಾಲ್ವಾರನ್ನು ಅವಳು ದೂರದಿಂದಲೇ ನೋಡಿದ್ದಳೇ ಹೊರತು ಅದನ್ನು ಉಪಯೋಗಿಸುವ ಬಗೆ ಹೇಗೆಂಬುದನ್ನು ಅವಳು ತಿಳಿದಿರಲಿಲ್ಲ. ಜೊತೆಗೆ ಲೈಸೆನ್ಸ್ ಇಲ್ಲದ ರಿವಾಲ್ವಾರಿಗೆ ತೋಟಾಗಳನ್ನು ಕೊಂಡುಕೊಳ್ಳುವುದು ಸಹ ಕಷ್ಟವಿತ್ತು. ಚಂದ್ರಹಾಸನ ಹತ್ತಿರ ರಿವಾಲ್ವಾರುಗಳಿವೆ ಎಂಬುದನ್ನು ಅವಳು ಕೇಳಿದ್ದಳು. ರಿವಾಲ್ವಾರ್ ಹಾರಿಸುವುದನ್ನು ಕಲಿಯುವುದಕ್ಕೂ, ತೋಟಾಗಳನ್ನು ಸಂಪಾದಿಸುವುದಕ್ಕೂ ಚಂದ್ರಹಾಸನನ್ನು ಆಶ್ರಯಿಸಬೇಕೆಂದು ನಿರ್ಧರಿಸಿದಳು.

ಈ ಮಧ್ಯೆ ಇನ್ನೊಂದು ಅನಿರೀಕ್ಷಿತ ಘಟನೆ ನಡೆಯಿತು. ಗೋಪಾಲನು ಮತ್ತು ಅವನ ಕುಟುಂಬದವರ ಸಾಮೂಹಿಕ ಕೊಲೆಗೆ ಕ್ರಾಂತಿಸೇನೆಯವರೇ ಕಾರಣರೆಂದು ಜನ ಜನಿತವಾಗಿದ್ದರೂ ಕೂಡಾ ಶಂಕರನು ಆ ಕೃತ್ಯ ತನ್ನ ಸೇನೆಯವರಿಂದ ನಡೆದಿಲ್ಲವೆಂದೂ, ಯಾರೋ ಢಕಾಯಿತರು ಹಣಕ್ಕಾಗಿ ಆ ಕೃತ್ಯವನ್ನು ಮಾಡಿರಬೇಕೆಂದೂ,

ಬಹಿರಂಗವಾಗಿ ಸಾಧಿಸುತ್ತಿದ್ದನು. ಒಳಗಿಂದೊಳಗೆ ಚಂದ್ರಹಾಸನು ಚಂಚಲೆಯ ಮೇಲಿನ ವ್ಯಾಮೋಹದಿಂದ ಆ ಕೊಲೆಗಳನ್ನು ಮಾಡಿಸಿದ್ದರೂ ಮಾಡಿಸಿರಬಹುದೆಂದು ಅವರಿವರ ಹತ್ತಿರ ಪಿಸುಮಾತಿನಲ್ಲಿ ಹೇಳುತ್ತಿದ್ದನು. ಗೋಪಾಲನು ಸತ್ತು ಇಪ್ಪತ್ತು ದಿನಗಳಾಗಿತ್ತು. ಒಂದು ದಿನ ಬೆಳಿಗ್ಗೆ ಏಳು ಗಂಟೆಯ ಹೊತ್ತಿಗೆ ಚಂಚಲೆಗೆ ಶ್ರೀಪುರದಿಂದ ಒಂದು ಟ್ರಂಕ್ ಟೆಲಿಫೋನ್ ಕರೆ ಬಂದಿತ್ತು. ಚಂಚಲೆ ತನ್ನ ತಮ್ಮನಿಗೋ, ತಂಗಿಗೋ ಅಥವಾ ಚಿಕ್ಕಮ್ಮನಿಗೋ ಏನಾದರೂ ಖಾಯಿಲೆ ಆಗಿದೆಯೋ ಎಂದು ಗಾಬರಿಯಿಂದ "ಹಲೋ ಯಾರು ಮಾತ್ನಾಡೋದು?" ಎಂದು ಕೇಳಿದಳು.

"ಯಾರು ಹೇಳಿ ನೋಡೋಣ?" ಎಂದು ಇನ್ನೊಂದು ಕಡೆಯಿಂದ ಗಂಡು ಧ್ವನಿಯಲ್ಲಿ ಉತ್ತರ ಬಂತು.

"ಯಾರು ಗೊತ್ತಾಗಲಿಲ್ಲವಲ್ಲಾ?" ಎಂದು ಚಂಚಲೆ ಹೇಳಿದಳು.

"ಅಷ್ಟು ಬೇಗ ನನ್ನನ್ನು ಮರೆತಿರಾ? ನಾನು ನಿಮ್ಮ ಪ್ರಿಯ ಗೆಳತಿ ವಿಮಲ" ಎಂದು ಆ ಕಡೆಯಿಂದ ಉತ್ತರ ಬಂತು.

ಟೆಲಿಫೋನ್‌ನಲ್ಲಿ ಮಾತನಾಡುತ್ತಿರುವವನು ಶಂಕರನೆಂಬುದನ್ನು ಗ್ರಹಿಸಲು ಚಂಚಲೆಗೆ ಬಹಳ ಹೊತ್ತು ಬೇಕಾಗಲಿಲ್ಲ. ಅವಳಿಗೆ ಖೇದ, ಕ್ರೋಧ, ಆಶ್ಚರ್ಯ ಇವುಗಳು ಏಕ ಕಾಲದಲ್ಲಿ ಉಂಟಾದುವು, ಅವನೊಡನೆ ಹೇಗೆ ಮಾತನಾಡಬೇಕೆಂಬುದನ್ನು ಕ್ಷಣ ಮಾತ್ರದಲ್ಲಿ ನಿರ್ಧರಿಸಿ, ಉದ್ವೇಗವನ್ನು ಬದಿಗೊತ್ತಿ, "ಮಿಸ್ಟರ್ ಶಂಕರ್, ಇಷ್ಟು ಕಾಲದ ನಂತರ ಇಂದಾದರೂ ನನ್ನ ನೆನಪಾಯಿತಲ್ಲಾ" ಎಂದು ಹೇಳಿದಳು.

"ನಿಮ್ಮನ್ನು ಮರೆಯಲು ಸಾಧ್ಯವೇ? ನಾನು ಕಾಗದ ಬರೆದಿದ್ದೆನಲ್ಲಾ, ಅದಕ್ಕೆ ಜವಾಬನ್ನೂ ನೀವು ಬರೆದಿದ್ದೀರಿ. ನಿಮ್ಮೊಡನೆ ಇಷ್ಟು ಕಾಲ ಮಾತನಾಡದಿದ್ದ ಕಾರಣ ನಿಮಗೆ ಗೊತ್ತೇ ಇದೆ. ನಿಮಗೆ ಮತ್ತೊಮ್ಮೆ ನನ್ನ ಹೃತ್ಪೂರ್ವಕ ಸಂತಾಪಗಳು. ನಿಮಗೆ ಇಂತಹ ದುಃಖ ಸಂಭವಿಸಬಾರದಾಗಿತ್ತು. ನಿಮ್ಮ ಯಜಮಾನರು ಅಜಾತಶತ್ರುಗಳಾಗಿದ್ದರು ಅವರು ಶ್ರೀಮಂತರೆಂಬುದು ಎಲ್ಲರಿಗೂ ಗೊತ್ತಿತ್ತು. ಯಾರೋ ದರೋಡೆಕೋರರು ಹಣಕ್ಕಾಗಿ ಮಾಡಿದ ಕೆಲಸ."

"ನನ್ನ ದುರಾದೃಷ್ಟ ನನ್ನ ಬಂಧುಗಳೆಲ್ಲರೂ ಕೈ ಬಿಟ್ಟು ಹೋದರು. ನಾನು ಏಕಾಂಗಿಯಾಗಿ ಬಾಳನ್ನು ಕಳೆಯಬೇಕಾಗಿದೆ."

"ನಾನೂ ಒಬ್ಬ ನಿಮ್ಮ ಬಂಧು ಎಂಬುದನ್ನು ನೀವು ಮರೆತಂತೆ ತೋರುತ್ತದೆ."

"ನಾನು ಮರೆತಿಲ್ಲ; ನೀವು ಮರೆತಿದ್ದೀರಿ."

"ನಾನು ಖಂಡಿತಾ ಮರೆತಿಲ್ಲ. ನನ್ನಿಂದ ಏನಾಗಬೇಕೆಂಬುದನ್ನು ತಿಳಿಸಿದರೆ ನಾನು ನಿಮ್ಮ ಸಹಾಯಕ್ಕೆ ಸದಾ ಸಿದ್ಧ."

"ನಿಮ್ಮಿಂದ ನನಗೆ ಸಹಾಯ ಬೇಕಾಗಿದೆ. ಮೊದಲು ನನ್ನ ಗಂಡನನ್ನೂ, ಮಗನನ್ನೂ, ಅತ್ತೆಯನ್ನೂ ಕೊಂದ ಪಾಪಿಗಳನ್ನು ಪತ್ತೆ ಹಚ್ಚಿ ಅವರಿಗೆ ಶಿಕ್ಷೆಯಾಗುವಂತೆ ಮಾಡಬೇಕು.

ಆ ಕೆಲಸ ನಿಮ್ಮಿಂದ ಮಾತ್ರ ಸಾಧ್ಯ; ಪೊಲೀಸಿನವರಿಂದ ಸಾಧ್ಯವಿಲ್ಲ. ನನ್ನ ಭವಿಷ್ಯದ ವಿಚಾರದಲ್ಲೂ ಒಂದು ತೀರ್ಮಾನಕ್ಕೆ ಬರಬೇಕಾಗಿದೆ. ನಿಮ್ಮೊಡನೆ ಮಾತನಾಡಬೇಕಾಗಿದೆ."

"ನಾನೇ ನಿಮ್ಮ ಮನೆಗೆ ಇನ್ನೆರಡು ಮೂರು ದಿನಗಳಲ್ಲಿ ಬರುತ್ತೇನೆ."

"ನೀವು ಇಲ್ಲಿಗೆ ಬಂದರೆ ಅನಾವಶ್ಯಕ ಊಹಾಪೋಹಗಳಿಗೆ ಆಸ್ಪದವಾಗುತ್ತದೆ."

"ಹಾಗಾದರೆ?"

"ನಾವು ಮೊಟ್ಟ ಮೊದಲು ಸೇರಿದ್ದ ಸ್ಥಳದಲ್ಲೇ ಸೇರಿದರೆ ಉತ್ತಮ."

"ಕೋಟೆಯಲ್ಲಿ?"

"ಹೌದು, ಕೋಟೆಯಲ್ಲಿ"

"ಯಾವಾಗ ಅಪ್ಪಣೆ ಕೊಟ್ಟರೆ, ಅಲ್ಲಿ ನೀವು ಹೇಳಿದ ದಿನ ಕಾದಿರುತ್ತೇನೆ."

"ಸ್ವಲ್ಪ ತಾಳಿ ನನ್ನ ಡೈರಿ ನೋಡಿ ಹೇಳುತ್ತೇನೆ."

"ಆಗಲಿ."

"ಇಂದು ಎರಡನೇ ತಾರೀಖು. ಹನ್ನೆರಡನೇ ತಾರೀಖು ನಮ್ಮ ಯಜಮಾನರ ತಿಂಗಳ ತಿಥಿ ಇದೆ. ಇಪ್ಪತ್ತಾರನೇ ತಾರೀಖು ಸಾಯಂಕಾಲ ಏಳು ಗಂಟೆಗೆ ನಾನು ಕೋಟೆಗೆ ಬರುತ್ತೇನೆ. ನೀವು ನನಗೋಸ್ಕರ ದಯವಿಟ್ಟು ಕಾದಿರಬೇಕು. ನೀವು ಬರುವುದು ತಡವಾದರೆ ನನಗೆ ಭಯವಾಗುತ್ತದೆ. ನಾನೊಬ್ಬಳೇ ಕಾರಿನಲ್ಲಿ ಬರುತ್ತೇನೆ. ನೀವು ಒಬ್ಬರೇ ಬರಬೇಕು.

"ಏನು ಕಾರ್ ಡ್ರೈವಿಂಗ್ ಕಲ್ತೀರೇನು?"

"ಡ್ರೈವಿಂಗ್ ಕಲ್ತು ಎಷ್ಟೋ ವರ್ಷ ಆಯ್ತು."

"ಪರವಾಗಿಲ್ಲ. ನಾನು ಖಂಡಿತಾ ನಿಮಗಾಗಿ ಆ ದಿನ ಕಾದಿರುತ್ತೇನೆ."

"ನಾನು ಖಂಡಿತಾ ಬರುತ್ತೇನೆ. ನಾನು ನನ್ನ ಚಿಕ್ಕಮ್ಮನ ಮನೆಗೆ ಹೋಗುವ ನೆಪದಲ್ಲಿ ಬರುತ್ತೇನೆ. ನನಗೆ ಇನ್ನೇನೂ ಕೆಲಸವಿಲ್ಲ. ಪದ್ಮಾವತಿಯವರನ್ನು ಸ್ವಲ್ಪ ನೋಡಬೇಕು. ನಮ್ಮಪ್ಪ ಆಸ್ಪತ್ರೇಲಿದ್ದಾಗ ನಾನವರ ಮನೆಯಲ್ಲಿದ್ದೆ. ನಿಮಗೆ ಆ ದಿನ ಕೋಟೆಗೆ ಬರಲು ಏನಾದರೂ ತೊಂದರೆ ಇದ್ದರೆ ಫೋನ್ ಮಾಡಬೇಕು ಅಥವಾ ಮೂರು ದಿನ ಮುಂಚೆ ಬರೀಬೇಕು."

"ಹಾಗೆಯೇ ಆಗಲಿ, ಆದರೆ ನಾವಿಬ್ಬರೂ ಸೇರುವ ವಿಚಾರ ಚಂದ್ರಹಾಸನಿಗೆ ಗೊತ್ತಾಗಬಾರದು."

"ನಾನೇನು ಅಷ್ಟು ಮೂರ್ಖಳೆಂದು ತಿಳಿದಿದ್ದೀರೇನು? ಅವನು ನಿಮ್ಮ ವೈರಿ ಎಂಬುದು ನನಗೆ ಗೊತ್ತಿದೆ."

"ಅವನು ನಿಮ್ಮ ಮನೆಗೆ ಆಗಾಗ ಬರುತ್ತಾ ಇದ್ದಾನೆಂದು ಕೇಳಿದ್ದೆ. ನೀವೂ ಅವನ ಮನೆಗೆ ಹೋಗಿದ್ದೀರೆಂದು ಕೇಳಿದ್ದೆ. ಅದಕ್ಕೇ ನಾನು ಆ ರೀತಿ ಹೇಳಿದ್ದು."

"ಆತನ ಹೆಂಡತಿ ಗೌರಿ ನನ್ನ ಬಾಲ್ಯ ಸ್ನೇಹಿತೆ; ಚಂದ್ರಹಾಸನೂ, ನಮ್ಮ ಯಜಮಾನರೂ ಸ್ನೇಹಿತರು. ಗೌರಿ ಬದುಕಿದ್ದಾಗ, ಒಂದು ಸಾರಿ ಅವನ ಮನೆಗೆ

ಹೋಗಿದ್ದೆ. ಅವನೂ, ಅವಳೂ ನಮ್ಮ ಮನೆಗೆ ಬಂದಿದ್ದರು. ಗೌರಿ ಸತ್ತ ಸಂದರ್ಭದಲ್ಲಿ ನಾನು ಅವರ ಮನೆಗೆ ಒಂದು ಸಾರಿ ಹೋಗಿದ್ದೆ. ನಮ್ಮ ಯಜಮಾನರು ಸತ್ತದಿನ ನಮ್ಮ ಮನೆಗೆ ಚಂದ್ರಹಾಸ ಬಂದಿದ್ದ. ತಿಂಗಳ ತಿಥಿಗೆ ಬಂದರೂ ಬರಬಹುದು. ಒಂದು ವೇಳೆ ಬಂದರೂ ಅವನನ್ನು ಎಲ್ಲಿಡಬೇಕೆಂಬುದು ನನಗೆ ಗೊತ್ತು. ಆ ಬಗ್ಗೆ ನಿಮಗೆ ಸಂಶಯ ಬೇಡ."

"ನಿಮ್ಮ ವಿಚಾರದಲ್ಲಿ ನಾನು ಸಂಶಯ ಪಡಲಿಲ್ಲ. ಅವನಿಗೆ ಯಾವ ರೀತಿಯಲ್ಲೂ ಗೊತ್ತಾಗಬಾರದೆಂದು ಹೇಳಿದೆ."

"ನನ್ನ ನಿಮ್ಮ ಗುಟ್ಟನ್ನು ಇನ್ನೊಬ್ಬರಿಗೆ ಹೇಳಲು ನನಗೇನು ಹುಚ್ಚು ಹಿಡಿದಿದೆಯೇನು?"

"ಥ್ಯಾಂಕ್ಸ್, ಬರ್ತೀನಿ."

"ನಿಮಗೂ ತುಂಬಾ ಥ್ಯಾಂಕ್ಸ್" ಎಂದು ಹೇಳಿ ಚಂಚಲೆ ರಿಸೀವರನ್ನು ಕೆಳಗಿಟ್ಟಳು.

ಚಂಚಲೆಯ ಮುಖದಲ್ಲಿ ಬೆವರು ಧಾರಾಕಾರವಾಗಿ ಹರಿಯುತ್ತಿತ್ತು. ಅವಳ ಮುಖ ಉಗ್ರರೂಪವನ್ನು ತಾಳಿತ್ತು. ಸುಸ್ತಾಗಿ ಸೋಫಾದ ಮೇಲೆ ಕುಳಿತುಕೊಂಡಳು.

"ಇಂದಿನ ಪಾತ್ರವನ್ನೇನೋ ಸರಿಯಾಗಿ ಅಭಿನಯಿಸಿದೆ. ಮುಂದಿನ ಪಾತ್ರವನ್ನು ಸರಿಯಾಗಿ ಅಭಿನಯಿಸಲು ಸಮಯ ಸನ್ನಿವೇಶಗಳು ಸರಿಯಾಗಿ ದೊರಕಬೇಕು; ಧೈರ್ಯವಿರಬೇಕು. ಇಷ್ಟು ಬೇಗ ಬೇಟೆ ಬಲೆಗೆ ಬೀಳುತ್ತದೆಂದು ನಾನು ತಿಳಿದಿರಲಿಲ್ಲ" ಎಂದು ಮನಸ್ಸಿನಲ್ಲಿಯೇ ಅಂದುಕೊಂಡಳು.

ಸೃಷ್ಟಿಕರ್ತನ ನಿಯಮವನ್ನು ಉಲ್ಲಂಘಿಸಿದವರು ಒಂದಲ್ಲ ಒಂದು ವಿಧದಲ್ಲಿ, ಒಂದಲ್ಲ ಒಂದು ದಿನ ಶಿಕ್ಷೆಗೆ ಗುರಿಯಾಗುತ್ತಾರೆಂದು ಸಿದ್ಧಾನಂದರು ಹೇಳಿದ್ದ ಮಾತುಗಳು ಅವಳ ನೆನಪಿಗೆ ಬಂದುವು. ಬಂದಿದ್ದ ಅವಕಾಶಗಳನ್ನು ಹೇಗೆ ಉಪಯೋಗಿಸಿ ಕೊಳ್ಳಬೇಕೆಂಬುದೇ ಅವಳ ಮುಂದಿದ್ದ ದೊಡ್ಡ ಪ್ರಶ್ನೆಯಾಗಿತ್ತು. ಆ ದಿನವೇ ತಿಂಗಳ ತಿಥಿಗೆ ಖಂಡಿತಾ ಬರಬೇಕೆಂದೂ, ಅಗತ್ಯವಾಗಿ ಮಾತನಾಡುವ ಪ್ರಸಂಗ ಬಿದ್ದಿದೆಯೆಂದೂ, ಬರುವಾಗ ಕಮಲೆಯನ್ನೂ, ಮಕ್ಕಳನ್ನೂ ಕರೆದುಕೊಂಡು ಬರಬೇಕೆಂದೂ, ಚಂದ್ರಹಾಸನಿಗೆ ಪತ್ರ ಬರೆದು, ಜರೂರು ಬಟವಾಡೆ ಸ್ಟಾಂಪನ್ನು ಹಚ್ಚಿ ಆ ದಿನವೇ ಟಪಾಲಿಗೆ ಕಳಿಸಿದಳು.

೧೭

ಸ್ವರ್ಗಸ್ಥರಾದವರ ತಿಂಗಳ ತಿಥಿಗೆ ಚಂದ್ರಹಾಸನು, ಕಮಲೆಯನ್ನು ಕರೆದುಕೊಂಡು, ತನ್ನ ಪರಿವಾರ ಸಮೇತ ಸಿರಗೂರಿಗೆ ಬಂದಿದ್ದನು. ತಿಥಿಗೆ ಹತ್ತಿರದ ಬಂಧುಗಳೂ, ಗೋಪಾಲನ ಆಪ್ತ ಸ್ನೇಹಿತರೂ ಮಾತ್ರ ಆಹ್ವಾನಿಸಲ್ಪಟ್ಟಿದ್ದರು. ತಿಥಿಗೆ ಸಂಬಂಧಪಟ್ಟ ದೇವರ ಕಾರ್ಯ ಮುಗಿದ ಮೇಲೆ, ಮಧ್ಯಾಹ್ನ ಸುಮಾರು ಎರಡು ಗಂಟೆಯ ಹೊತ್ತಿಗೆ ಎಲ್ಲರಿಗೂ ಭೋಜನವಾಯಿತು. ಊಟವಾದ ಮೇಲೆ ಚಂದ್ರಹಾಸನು ಸಿರಗೂರಿನ ತನ್ನ ಪಕ್ಷದ ಆಫೀಸಿಗೆ ಹೋದನು. ಬಂದಿದ್ದ ಅತಿಥಿಗಳನೇಕರು ಅವರವರ

ಮನೆಗೆ ಹೊರಟು ಹೋದರು. ಕ್ರಾಂತಿಕೂಟದ ಆಫೀಸಿಗೆ ಹೋಗಿದ್ದ ಚಂದ್ರಹಾಸನು ಅವನ ಪಕ್ಷದ ಕಾರ್ಯಕರ್ತರೊಡನೆ ಮತ್ತು ಜಿಲ್ಲಾ ಅಧ್ಯಕ್ಷರೊಡನೆ ಮಾತುಕತೆ ನಡೆಸಿ, ನಾಲ್ಕು ಗಂಟೆಯ ಹೊತ್ತಿಗೆ ಶ್ರೀಪುರಕ್ಕೆ ಹೊರಡಬೇಕೆಂದು ಯೋಚಿಸಿದ್ದನು. ಕ್ರಾಂತಿಕೂಟದ ಆಫೀಸಿನಲ್ಲಿ ಮಾತುಕತೆಯಾದ ನಂತರ, ಚಂಚಲೆಗೆ ಹೇಳಿ ಹೋಗಬೇಕೆಂಬ ಉದ್ದೇಶದಿಂದ, ಸಾಯಂಕಾಲ ನಾಲ್ಕು ಗಂಟೆಯ ಹೊತ್ತಿಗೆ, ಚಂದ್ರಹಾಸನು ಚಂಚಲೆಯ ಮನೆಗೆ ಬಂದನು. ಅವನು ಅವಳ ಮನೆಗೆ ಬಂದಾಗ, ಚಂಚಲೆ ಅಂಗಳದಲ್ಲಿ ನಿಂತಿದ್ದಳು. ಅವಳ ಮುಂದೆ ಸ್ವಲ್ಪ ದೂರದಲ್ಲಿ ಅವಳ ಜಮೀನಿನ ಕೆಲಸಕಾರ್ಯಗಳ ಮೇಲ್ವಿಚಾರಣೆ ನೋಡುತ್ತಿದ್ದ ಮೇಸ್ತ್ರಿಯೂ, ಇಪ್ಪತ್ತು ಮೂವತ್ತು ಜನ ಕೂಲಿಗಾರರೂ ನಿಂತಿದ್ದರು. ಆ ಕೂಲಿಗಾರರಲ್ಲಿ ಕೆಲವರು ಹಿಂದಿನ ರಾತ್ರಿ ಮಿತಿಮೀರಿ ಕುಡಿದು, ಹೊಡೆದಾಡಿದ ಪರಿಣಾಮವಾಗಿ ಒಬ್ಬ ಕೂಲಿಯವನಿಗೆ ತೀವ್ರ ಘಾಸಿಯಾಗಿತ್ತು. ಘಾಸಿಗೊಂಡವನ ಹೆಂಡತಿ, ಚಂಚಲೆಗೆ ದೂರು ಹೇಳಿದ್ದರಿಂದ ಚಂಚಲೆ ಹೊಡೆದಾಡಿದವರನ್ನು ಕರೆಸಿ, ಅವಳ ಮನೆ ಅಂಗಳದಲ್ಲಿ ವಿಚಾರಣೆ ನಡೆಸುತ್ತಿದ್ದಳು.

ಚಂದ್ರಹಾಸನು ತಾನು ಬಂದುದನ್ನು ತೋರ್ಪಡಿಸಿದೆ ಸ್ವಲ್ಪ ದೂರದಲ್ಲಿ ನಿಂತು, ಅವಳು ನಡೆಸುತ್ತಿದ್ದ ವಿಚಾರಣೆಯನ್ನು ನೋಡುತ್ತಿದ್ದನು. ಅವನು ಕಂಡಂತೆ ಚಂಚಲೆ ಮೊದಲು ಮೃದು ಸ್ವಭಾವದವಳಾಗಿದ್ದಳು. ಅಳಕು ಮತ್ತು ಲಜ್ಜೆ ಅವಳ ನಡೆ ನುಡಿಗಳಲ್ಲಿ ಎದ್ದು ಕಾಣುತ್ತಿದ್ದವು. ಆದರೆ ಅಂದು ಅವಳು ವಿಚಾರಣೆ ನಡೆಸುತ್ತಿದ್ದಾಗ, ಅವಳ ಸ್ವಭಾವದಲ್ಲಿ ಕಾಠಿಣ್ಯತೆ, ಧೈರ್ಯ, ಸ್ಥೈರ್ಯಗಳು ಕಾಣುತ್ತಿದ್ದವು. ಅವಳ ನೋಟದಲ್ಲಿ ದಿಟ್ಟತನವಿತ್ತು. ಅವಳ ನುಡಿಯಲ್ಲಿ ಗಾಂಭೀರ್ಯವಿತ್ತು. ಕೇವಲ ಒಂದು ತಿಂಗಳ ಅಲ್ಪಾವಧಿಯಲ್ಲಿ ಅವಳಲ್ಲಿ ಆಗಿದ್ದ ಬದಲಾವಣೆಗಳನ್ನು ನೋಡಿ ಚಂದ್ರಹಾಸನಿಗೆ ಆಶ್ಚರ್ಯವಾಯಿತು. ದುರಂತ ಪ್ರಸಂಗದ ಗೌರಿಯ ಗುಣರೂಪಗಳ ವ್ಯತ್ಯಾಸವನ್ನು ತುಲನ ಮಾಡುತ್ತಿದ್ದನು. ಗೌರಿಗೆ ರೂಪಲಾವಣ್ಯಗಳಿದ್ದವು. ಗೌರಿ ಅವನನ್ನು ಸದಾ ಆರಾಧಿಸುತ್ತಿದ್ದಳು. ಅವನಿಗೋಸ್ಕರ ಸದಾ ಕೊರಗುತ್ತಿದ್ದಳು. ಅವನು ಅವಳನ್ನು ಪ್ರೀತಿಸುವುದು ಮಾತ್ರವಲ್ಲ, ಗೌರವಿಸುತ್ತಿದ್ದನು. ಆದರೆ ಗೌರಿ ಅಂಜುಬುರುಕಿ. ಅವಳಲ್ಲಿ ಚಂಚಲೆಗಿದ್ದ ಮನಮೋಹಕ ಸೌಂದರ್ಯವಿರಲಿಲ್ಲ.

ಚಂಚಲೆ ದುಃಖದಿಂದ ಕೃಶಳಾಗಿ, ದುಃಖದ ಛಾಯೆ ಇನ್ನೂ ಅವಳ ಮುಖದಲ್ಲಿದ್ದರೂ ಸಹ ಅವಳಲ್ಲಿ ಇತ್ತೀಚೆಗೆ ಆಗಿದ್ದ ಬದಲಾವಣೆಗಳು ಅವಳ ಸೌಂದರ್ಯಕ್ಕೆ ಮತ್ತಷ್ಟು ಮೆರಗನ್ನು ಕೊಟ್ಟಿದ್ದವು. ಚಂದ್ರಹಾಸನು ಅವಳನ್ನೇ ದಿಟ್ಟಿಸಿ ನೋಡುತ್ತಿರುವಾಗ, ಅವಳು ಅವನನ್ನು ನೋಡಿದಳು. ಅವಳು ಅವನ ಕಡೆಗೆ ಮುಗುಳ್ನಗೆ ಬೀರಿದಳು. ಅವಳ ಮುಗುಳ್ನಗೆ ಸ್ವಾಭಾವಿಕವಾಗಿತ್ತು. ಆದರೆ ಚಂದ್ರಹಾಸನಿಗೆ ಅದು ತನ್ನ ಕಡೆಗೆ ಬಿಟ್ಟ ಮನ್ಮಥನ ಕಿರುಬಾಣದಂತಿತ್ತು. ಅವನಿಗರಿವಿಲ್ಲದೆಯೇ ಅವನ ಮನಸ್ಸಿನಲ್ಲಾದ ವಿಕಾರಕ್ಕಾಗಿ ತುಂಬಾ ಆಶ್ಚರ್ಯಪಟ್ಟನು. ಚಂಚಲೆ ವಿಚಾರಣೆಯನ್ನು ಮುಗಿಸಿ, ತಪ್ಪಿತಸ್ಥರಿಗೆ ಏನು ಮಾಡಬೇಕೆಂಬು ದನ್ನು ಮೇಸ್ತ್ರಿಗೆ ತಿಳಿಸಿ, ಚಂದ್ರಹಾಸನು

ನಿಂತಲ್ಲಿಗೆ ಬಂದು, "ಯಾಕೆ ಅಂಗಳದಲ್ಲಿ ನಿಂತಿದ್ದೀರಿ? ಒಳಗೆ ಹೋಗಿ ಕುಳಿತುಕೊಳ್ಳಬಹುದಾಗಿತ್ತಲ್ಲ" ಎಂದು ಹೇಳಿದಳು.

"ಏನೋ ಪೊಲೀಸ್ ಆಫೀಸರ ಹಾಗೆ ತನಿಖೆ ನಡೆಸುತ್ತಾ ಇದ್ರಿ, ನಾನು ನೋಡುತ್ತಾ ನಿಂತಿದ್ದೆ" ಎಂದನು.

"ತನಿಖೆ ಎಲ್ಲಿ ಬಂತು? ದಿನವೂ ಈ ಆಳುಗಳು ಮಿತಿ ಮೀರಿ ಕುಡಿದು, ಏನಾದರೂ ಗದ್ದಲ ಮಾಡ್ತಾನೇ ಇರ್ತಾರೆ. ಅವರವರೇ ಹೊಡೆದುಕೊಳ್ಳುತ್ತಾರೆ. ಇಲ್ಲವಾದರೆ, ಹೆಂಡಿರು ಮಕ್ಕಳನ್ನು ಜಪ್ತಾರೆ. ನೆನ್ನೆ ಒಬ್ಬನ್ನ ಹೊಡೆದು ಕೈ ಮುರಿದು ಹಾಕಿದ್ದಾರೆ. ಅದಕ್ಕೇ ಅವರನ್ನೆಲ್ಲಾ ಕರೆಸಿದ್ದೆ. ಎಷ್ಟು ಸಂಬಳ ಕೊಟ್ರೂ ಇವರಿಗೆ ಕುಡಿಯೋಕೆ ಸಾಕಾಗೋಲ್ಲಾ; ಹೆಂಡಿರು ಮಕ್ಕಳಿಗೆ ಉಪವಾಸ, ವನವಾಸ, ಯಾವ ಸರ್ಕಾರ ಬಂದ್ರೂ ಇವರ ಸ್ಥಿತಿ ಸುಧಾರಣೆ ಆಗೋದು ಕಷ್ಟ. ಜನ ಸರಿಯಾಗದೆ, ಜನ ಜೀವನ ಹೇಗೆ ಸುಧಾರಿಸುತ್ತದೆ?"

"ಅವರಿಗೆ ವಿದ್ಯೆ ಇಲ್ಲ; ಸಂಸ್ಕೃತಿ ಇಲ್ಲ. ಅದಕ್ಕೇ ಅವರು ಹಾಗಿರೋದು."

"ನೀವು ರಾಜಕಾರಣಿಗಳು, ಜನರಿಗೆ ವಿವೇಕ ಹೇಳೋ ಬದಲು, ಅವರ ದುಷ್ಟತನಕ್ಕೆ, ಕೆಟ್ಟ ಚಾಳಿಗೆ ಪ್ರೋತ್ಸಾಹ ಕೊಡ್ತಾ ಇದ್ದೀರಿ, ಇನ್ನೊಂದು ವಿಚಾರ ನಿಮಗೆ ಹೇಳೋದು ಮರೆತಿದ್ದೆ. ಆ ದಿನ ನಮ್ಮ ಆಳುಗಳೇ ಕೆಲವರು ಕ್ರಾಂತಿಸೇನೆಯವರಿಗೆ ನಮ್ಮನೆಗೆ ನುಗ್ಗೋಕೆ ಸಹಾಯ ಮಾಡಿದರು ಅಂತ ವರ್ತಮಾನ. ಅವರು ಆ ದಿನದಿಂದ ನಾಪತ್ತೆಯಾಗಿದ್ದಾರೆ."

"ನಿಮ್ಮ ಆಳುಗಳ ಪೈಕಿ ಕೆಲವರು ಕ್ರಾಂತಿಸೇನೆಗೆ ಸೇರಿದವರು ಅಂತ ಹೇಳಿ ನಾನೂ ಕಿಶೋರ್ ಹೋದ ಸಾರಿ ಬಂದಾಗಲೇ ನಿಮ್ಮ ಯಜಮಾನರಿಗೆ ಸೂಕ್ಷ್ಮವಾಗಿ ಹೇಳಿದ್ದೆವು. ಅವರು ಆಗ ನಮ್ಮ ಮಾತಿಗೆ ಗಮನ ಕೊಡಲಿಲ್ಲ. ಏನೋ ಜರೂರು ಮಾತಾಡ್ಬೇಕು ಅಂತ ಹೇಳಿ ಕಾಗದ ಬರೆದಿದ್ದೀರಿ. ಅದೇನು ದಯವಿಟ್ಟು ಹೇಳಿ, ನಾನಿವತ್ತೇ ಊರಿಗೆ ಹೋಗಬೇಕು."

"ಇವತ್ತು ಹೋಗ್ಬೇಕು! ಅದು ಸಾಧ್ಯವೇ ಇಲ್ಲ. ನೀವು ಇವತ್ತು, ನಾಳೆ, ನಾಡಿದ್ದು ಇಲ್ಲಿ ಇರಲೇ ಬೇಕು."

"ಅದು ಸಾಧ್ಯವಿಲ್ಲ. ಇವತ್ತು ಬೇಕಾದ್ರೆ ಇರಬಲ್ಲೆ; ನಾಳೆ ಹೋಗ್ಲೇಬೇಕು."

"ಈಗ ನನ್ನ ಜೊತೆಗೆ ಬನ್ನಿ. ನನ್ನ ಜೊತೆ ಮಾತಾಡಿದ ಮೇಲೆ, ಯಾವಾಗ ಹೋಗೋದು ಅಂತ ನಿರ್ಧರಿಸೋಣ" ಎಂದು ಚಂಚಲೆ ಹೇಳಿದಳು.

ಚಂಚಲೆ, ಚಂದ್ರಹಾಸನನ್ನು ಕರೆದುಕೊಂಡು, ತನ್ನ ಶಯನ ಕೋಣೆಯ ಕಡೆಗೆ ಹೋಗುತ್ತಿದ್ದಳು. ಚಂದ್ರಹಾಸ ಅವಳನ್ನು ಹಿಂಬಾಲಿಸಿ ಹೋಗುತ್ತಿರುವಾಗ, ಅವನ ತಲೆಯಲ್ಲಿ ನಾನಾ ಊಹಾಪೋಹಗಳು ತೇಲಾಡುತ್ತಿದ್ದವು. ಶಯನ ಕೋಣೆಗೆ ಅವನನ್ನು ಕರೆದುಕೊಂಡು ಹೋಗಿ, ಒಂದು ಸೋಫಾದ ಮೇಲೆ ಕುಳ್ಳಿರಿಸಿದಳು. ಶಯ್ಯಾಗೃಹವು ಅತ್ಯಾಧುನಿಕ ರೀತಿಯಲ್ಲಿ ಸಜ್ಜುಗೊಳಿಸಲ್ಪಟ್ಟಿತ್ತು. ಬೀಟೆಯ ಮರದಿಂದ ಮಾಡಿದ

ಮಂಚ, ಮಂಚದ ಮೇಲಿದ್ದ ಹಾಸಿಗೆ, ಅದರ ಮೇಲೆ ಹರಡಿದ್ದ ನೀಲಿಬಣ್ಣದ ಶುಭ್ರವಾದ ಬಟ್ಟೆ, ಕೆಳಗಡೆ ಹಾಕಿದ್ದ ಜಮಖಾನೆ, ಮುಂತಾದುವುಗಳು, ಚಂದ್ರಹಾಸನ ಗಮನವನ್ನು ಸೆಳೆದಿದ್ದವು. ಶಯ್ಯಾಗೃಹದ ಅಲಂಕಾರವೂ, ಅಲ್ಲಿದ್ದ ಬೆಲೆಬಾಳುವ ಸಾಮಾನುಗಳೂ, ಕಮ್ಯುನಿಸ್ಟ್ ಚಂದ್ರಹಾಸನ ಕೈಗೆ ಸಿರಿವಂತಿಕೆಯ ಅಟ್ಟಹಾಸದ ಪ್ರತೀಕಗಳಂತೆ ಕಾಣುತ್ತಿದ್ದುವು. ಮಂಚದ ಸಮೀಪದಲ್ಲಿದ್ದ ಮೇಜಿನ ಮೇಲೆ ಗೋಪಾಲನ, ಸ್ವರೂಪರಾಣಿಯ ಮತ್ತು ಅನಿಲಕುಮಾರನ ಫೋಟೋಗಳಿದ್ದವು. ಆ ಫೋಟೋಗಳನ್ನು ನೋಡಿ ಅವನ ಮನಸ್ಸಿಗೆ ವ್ಯಾಕುಲವುಂಟಾಗಿತ್ತು. ಇನ್ನೊಂದು ಸಣ್ಣ ಮೇಜಿನ ಮೇಲೆ ಚಂಚಲೆಯ ತಾಯಿ ತಾರ ಮತ್ತು ತಂದೆ ಕೃಷ್ಣಕಾಂತನ ಫೋಟೋಗಳಿದ್ದವು.

ಚಂಚಲೆ ಅವನನ್ನು ಸೋಫಾದಲ್ಲಿ ಕುಳ್ಳಿರಿಸಿದ ನಂತರ ಗಾಡ್ರೇಜ್‌ಬೀರುವಿನ ಬೀಗವನ್ನು ತೆಗೆದು, ತನ್ನ ಕೈಚೀಲವನ್ನು ಹೊರಗೆ ತೆಗೆದಳು. ನಂತರ ಶಯನ ಗೃಹದ ಬಾಗಿಲನ್ನು ಹಾಕಿಕೊಂಡಳು. ಇದನ್ನು ನೋಡಿ ಚಂದ್ರಹಾಸನಗೆ ಆಶ್ಚರ್ಯವಾದುದರ ಜೊತೆಗೆ ಅವನ ಚಿತ್ತ ಸ್ವಲ್ಪಮಟ್ಟಿಗೆ ಅಸ್ತವ್ಯಸ್ಥವಾಯಿತು. ಮಾತನಾಡಬೇಕಾಗಿದ್ದರೆ ಶಯ್ಯಾಗೃಹಕ್ಕೆ ತನ್ನನ್ನು ಕರೆತರುವ ಅವಶ್ಯಕತೆ ಇರಲಿಲ್ಲವೆಂದೂ, ಅದರಲ್ಲೂ ಕೊಠಡಿಯ ಬಾಗಿಲನ್ನು ಹಾಕುವ ಅವಶ್ಯಕತೆ ಇರಲೇ ಇಲ್ಲವೆಂದೂ ಚಂದ್ರಹಾಸನು ಯೋಚಿಸುತ್ತಿದ್ದನು. ಅವಳು ಮುಂದೇನು ಮಾಡುತ್ತಾಳೆಂಬುದನ್ನು ನೋಡಲು ತವಕ ಪಡುತ್ತಿದ್ದನು.

ಅವಳು ಬಾಗಿಲನ್ನು ಹಾಕಿ ಒಳಗಡೆಯಿಂದ ಅಗಳಿಯನ್ನು ಭದ್ರಪಡಿಸಿದಳು. ನಂತರ ಒಂದು ಕುರ್ಚಿಯನ್ನೆಳೆದುಕೊಂಡು ಅವನ ಮುಂದೆ ಕುಳಿತಳು. ಅವಳು ಬಾಗಿಲನ್ನು ಭದ್ರ ಮಾಡಿದ ಕೂಡಲೆ, ಸ್ವಲ್ಪ ಹೊತ್ತಿನ ಹಿಂದೆ ಅಂಗಳದಲ್ಲಿದ್ದಾಗ, ಅವನ ಮನಸ್ಸಿನಲ್ಲಿ ಅಸ್ಪಷ್ಟವಾಗಿದ್ದ ಕಾಮ ವಿಕಾರ ವಿದ್ಯುತ್ ಪ್ರವಾಹದೋಪಾದಿಯಲ್ಲಿ ಇಡೀ ದೇಹವನ್ನು ವ್ಯಾಪಿಸಿದಂತಾಗಿತ್ತು. ಗೌರಿ ಜೀವಂತಳಾಗಿದ್ದಾಗ ಮತ್ತು ಆ ನಂತರ ಚಂದ್ರಹಾಸನು ಚಂಚಲೆಯನ್ನು ಎಷ್ಟೋ ಬಾರಿ ನೋಡಿದ್ದನು. ಹಿಂದೆ ಯಾವಾಗಲೂ ಅವಳನ್ನು ನೋಡಿದ್ದಾಗ ಅವನ ಮನಸ್ಸಿನಲ್ಲಿ ಆ ರೀತಿಯ ವಿಕಾರವಾಗಿರಲಿಲ್ಲ. ಅವನೆದುರು ಕುರ್ಚಿಯ ಮೇಲೆ ಕುಳಿತಿದ್ದ ಅವಳು ಅವನ ಕಣ್ಣಿಗೆ ಮೆಚ್ಚಿದ ಮೋಹಿನಿಯಂತೆ ಕಂಡಳು. ಗಂಡು ಕಾಮವಿಕಾರಕ್ಕೊಳಗಾದಾಗ ಹೆಣ್ಣಿನ ದಾಸನಂತೆ ವರ್ತಿಸುತ್ತಾನೆಂಬ ಅನುಭವ ಮೊಟ್ಟ ಮೊದಲು ಅವನಿಗಾಗಿತ್ತು. ಅವನ ಶರೀರ ಕಂಪಿಸುತ್ತಿತ್ತು; ತುಟಿಗಳು ಒಣಗಿ ಹೋಗಿದ್ದವು.

ಪುರುಷಸಿಂಹನಾಗಿದ್ದ ಅವನು ಕಾಮ ಪೀಡಿತನಾಗಿ ಅವಳ ದಾಸಾನು ದಾಸನೋಪಾದಿಯಲ್ಲಿ ಕುಳಿತಿದ್ದನು. ಮನಸ್ಸನ್ನು ಸ್ಥಿಮಿತಕ್ಕೆ ತರಲು ಪ್ರಯತ್ನಿಸುತ್ತಾ, "ಏನು ಸಮಾಚಾರ" ಎಂದು ಅವಳನ್ನು ಪ್ರಶ್ನಿಸಿದನು.

"ನಿಮ್ಮಿಂದ ನನಗೊಂದು ದೊಡ್ಡ ಸಹಾಯವಾಗಬೇಕು" ಎಂದು ಚಂಚಲೆ ಹೇಳಿದಳು.

"ಅದೇನು ಹೇಳಿ? ನಿಮಗಾಗಿ ನಾನು ಯಾವ ಕೆಲಸವನ್ನಾದರೂ ಮಾಡಲು ಸಿದ್ಧನಿದ್ದೇನೆ."

"ನನ್ನ ಆತ್ಮರಕ್ಷಣೆಗಾಗಿ ಲೈಸೆನ್ಸ್ ಇಲ್ಲದ ಒಂದು ರಿವಾಲ್ವಾರನ್ನು ಸಂಪಾದಿಸಿದ್ದೇನೆ. ನೀವು ಎರಡು ದಿನ ಇಲ್ಲೇ ಇದ್ದು ರಿವಾಲ್ವಾರ್ ಹಾರಿಸುವುದನ್ನು ಕಲಿಸಬೇಕು" ಎಂದು ಗಾಂಭೀರ್ಯದಿಂದ ಚಂಚಲೆ ಹೇಳಿದಳು. ಅವಳ ಮಾತಿನಲ್ಲಾಗಲೀ, ಮುಖದಲ್ಲಾಗಲೀ ಪ್ರಣಯ ಚೇಷ್ಟೆಯ ಸೋಂಕು ಸ್ವಲ್ಪವೂ ಇರಲಿಲ್ಲ.

ಈ ಮಾತುಗಳನ್ನು ಕೇಳಿದೊಡನೆ, ಚಂದ್ರಹಾಸನ ಮನಸ್ಸಿಗೆ ಹಿಡಿದಿದ್ದ ವಿಕಾರ ಮೆಲ್ಲಮೆಲ್ಲಗೆ ಇಳಿಯತೊಡಗಿತು. "ಈ ಸಣ್ಣ ವಿಷಯಕ್ಕೆ ಈ ಪುಣ್ಯಾತ್ಗಿತ್ತಿ ನನ್ನನ್ನು ಇವಳ ಬೆಡ್‌ರೂಮಿಗೆ ಕರೆತರಬೇಕಾಗಿತ್ತೇ?" ಎಂದು ಮನಸ್ಸಿನಲ್ಲೇ ಅಂದುಕೊಂಡು, "ಎಲ್ಲಿದೆ ರಿವಾಲ್ವಾರ್, ನೋಡೋಣ" ಎಂದನು. ಚಂಚಲೆ ತನ್ನ ಕೈಚೀಲದಲ್ಲಿದ್ದ ರಿವಾಲ್ವಾರನ್ನು ತೆಗೆದು ಅವನ ಕೈಗೆ ಕೊಟ್ಟಳು. ಚಂದ್ರಹಾಸನು ಅದನ್ನು ಪರೀಕ್ಷಿಸಿದನು. ಅದು ಚೀನಾದೇಶದಲ್ಲಿ ತಯಾರಾಗಿದ್ದ ರಿವಾಲ್ವಾರ್ ಆಗಿತ್ತು. ಅದು ಬಹಳ ಬಲಿಷ್ಠವಾದ ಮತ್ತು ಅಮೂಲ್ಯವಾದ ಆಯುಧವೆಂದು ಅಭಿಪ್ರಾಯಪಟ್ಟು, "ನಿಮಗೆ ಇದು ಯಾರು ಕೊಟ್ಟರು?" ಎಂದು ಅವಳನ್ನು ಪ್ರಶ್ನಿಸಿದನು.

"ಅದನ್ನು ಮಾತ್ರ ದಯವಿಟ್ಟು ಕೇಳಬೇಡಿ. ಕೊಟ್ಟವರಿಗೆ ಅವರ ಹೆಸರನ್ನು ಹೇಳುವುದಿಲ್ಲವೆಂದು ಮಾತು ಕೊಟ್ಟಿದ್ದೇನೆ. ನನಗೆ ನೂರು ತೋಟಾಗಳೂ ಸಹ ಬೇಕು."

"ಹೋಗಲಿ ಬಿಡಿ. ಇದಕ್ಕೆ ಆಗುವ ತೋಟಾಗಳು ನೂರು ನನ್ನಲ್ಲಿಲ್ಲ. ನನ್ನ ಜೇಪಿನಲ್ಲಿ ಇಪ್ಪತ್ತು ಮೂವತ್ತು ಸಿಕ್ಕಬಹುದು. ಹೆಚ್ಚು ಬೇಕಾದರೆ ಕಳ್ಳಪೇಟೆಯಲ್ಲಿ ಸಂಪಾದಿಸಬೇಕು. ಇದನ್ನು ಕಲಿಯುವುದು ಬ್ರಹ್ಮವಿದ್ಯೆಯೇನೂ ಅಲ್ಲ. ಏನೋ ದೊಡ್ಡ ಷಿಕಾರಿಗೆ ತಯಾರಾಗುವಂತೆ ಕಾಣುತ್ತದೆ."

"ದೊಡ್ಡ ಷಿಕಾರಿ ನಿಜ. ಆದರೆ ಮಿಗ ಆಯಕಟ್ಟಿನ ಸ್ಥಳದಲ್ಲಿ ಸಿಕ್ಕಬೇಕಲ್ಲ. ಷಿಕಾರಿಗೆ ನಿಮ್ಮ ಸಹಾಯ ಅಗತ್ಯ. ಇಲ್ಲಿಯವರೆಗೆ ನಿಮಿತ್ತ ಸರಿಯಾಗಿ ಆಗಿದೆ. ಆಯಕಟ್ಟಿನ ಸ್ಥಳ ಪತ್ತೆಯಾದ ಕೂಡಲೆ ನಿಮಗೆ ತಿಳಿಸುತ್ತೇನೆ."

"ಷಿಕಾರಿಗೆ ನನ್ನ ಸಂಪೂರ್ಣ ಸಹಾಯವಿದೆ. ಅದಿರಲಿ ನೀವು ರಿವಾಲ್ವಾರ್ ಹಾರಿಸುವುದನ್ನು ಕಲಿಯವುದೆಲ್ಲಿ? ಅಡಿಗೆ ಮನೆಯಲ್ಲಿಯೋ ಅಥವಾ ನಿಮ್ಮ ಮನೆ ಅಂಗಳದಲ್ಲೊ?" ಎಂದು ಚಂದ್ರಹಾಸ ನಗುತ್ತಾ ಅವಳನ್ನು ಪ್ರಶ್ನಿಸಿದನು.

"ಎಲ್ಲಿಯಾದರೂ ಪೋಲೀಸಿನವರ ಮತ್ತು ಕ್ರಾಂತಿಸೇನೆಯವರ ಸುಳಿವಿಲ್ಲದ ಗೌಪ್ಯ ಸ್ಥಳಕ್ಕೆ ಹೋಗಬೇಕು."

"ಈ ಪ್ರದೇಶದ ಪರಿಚಯ ನನಗಿಲ್ಲ. ಎಲ್ಲಿಯಾದರೂ ಕಾಡು ಪ್ರದೇಶಕ್ಕೆ ಹೋಗಬೇಕು."

"ಶ್ರೀಪುರ ಜಿಲ್ಲೆಯಲಿದ್ದಂತೆ, ಈ ಜಿಲ್ಲೆಯಲ್ಲಿ ಹತ್ತಿರ ಯಾವ ಕಾಡೂ ಇಲ್ಲ. ಇಲ್ಲಿಗೆ ಸುಮಾರು ಇಪ್ಪತ್ತು ಮೈಲಿಗಳ ದೂರದಲ್ಲಿ ಕುರುಚಲು ಮರಗಳಿರುವ ಒಂದು ಗುಡ್ಡವಿದೆ. ರಿವಾಲ್ವಾರ್ ಪ್ರಾಕ್ಟೀಸಿಗೆ ಅದು ಸರಿಯಾದ ಸ್ಥಳ. ಅಲ್ಲಿಗೆ ನಾನೊಮ್ಮೆ ಹೋಗಿದ್ದೆ. ಅಲ್ಲಿಗೆ ಬೆಳಿಗ್ಗೆ ಮುಂಚಿತವಾಗಿ ಹೋಗೋಣ. ನಾವು ಹೋಗುವ ವಿಚಾರ ಯಾರಿಗೂ ಗೊತ್ತಾಗಬಾರದು. ನಾನು ಸೌಮ್ಯಾಶ್ರಮಕ್ಕೆ ಹೋದಂತಿರಬೇಕು; ನೀವು ನಿಮ್ಮ ಜೀಪಿನಲ್ಲಿ ನಿಮ್ಮ ಕ್ರಾಂತಿಕೂಟ ಆಫೀಸಿಗೆ ಹೋಗಿ ಇಲ್ಲಿ ಇದ್ದಂತೆ ತೋರ್ಪಡಿಸಬೇಕು."

"ಗೊತ್ತಾಗದಂತೆ ಹೋಗುವುದು ಹೇಗೆ?" ಎಂದು ಚಂದ್ರಹಾಸ ಪ್ರಶ್ನಿಸಿದನು.

"ಬೆಳಿಗ್ಗೆ ಬಹಳ ಮುಂಚಿತವಾಗಿ ಹೊರಡಬೇಕು. ನಮ್ಮ ಕಾರಿನಲ್ಲೇ ಹೋಗೋಣ ನಾನೇ ಡ್ರೈವ್ ಮಾಡ್ತೇನೆ. ನೀವು ಹಿಂದುಗಡೆಯ ಸೀಟಿನಲ್ಲಿ ಮುಸುಕು ಹಾಕಿಕೊಂಡು ಮಲಗಿರಬೇಕು. ನಿಮ್ಮ ಜೀಪು ಪೇಟೆಯಲ್ಲಿರುವ ಕ್ರಾಂತಿಕೂಟದ ಆಫೀಸಿನ ಮುಂದೆ ನಿಂತಿರಬೇಕು. ಯಾರಾದರೂ ಕೇಳಿದರೆ ನೀವು ಒಳಗಡೆ ಆಫೀಸಿನಲ್ಲಿದ್ದೀರೆಂದು ನಿಮ್ಮ ಕಡೆಯವರು ಹೇಳಬೇಕು. ನಿಮ್ಮ ಬಂದೂಕು ನಿಮ್ಮ ಜೊತೆ ಇದ್ದರೆ ವಾಸಿ."

"ಚಂಚಲಾರವರೇ, ನೀವು ಮಾಸ್ಟರ್ ಟ್ಯಾಕ್ಟೀಷನ್, ತಂತ್ರದಲ್ಲಿ ನನ್ನನ್ನೂ ಮೀರಿಸುತ್ತೀರಿ."

"ಅದನ್ನು ಅಂತಿಮದಲ್ಲಿ ಹೇಳಬೇಕು; ಈಗಲ್ಲ. ನೀವು ನಾಳೆ ಬೆಳಿಗ್ಗೆ ಐದೂವರೆ ಗಂಟೆಗೆ ರೆಡಿಯಾಗಿರಬೇಕು" ಎಂದು ಚಂಚಲೆ ಹೇಳಿದಳು.

ರಾತ್ರಿ ಊಟವಾದ ಮೇಲೆ ಚಂಚಲೆ ಅವನಿದ್ದ ಕೊಠಡಿಗೆ ಹೋದಳು. ಅವನಿಗೆ ಕುಡಿಯುವ ನೀರು ಬೇಕೋ? ಅಥವಾ ಇನ್ನೊಂದು ಹೊದಿಕೆ ಬೇಕೋ? ಎಂಬುದನ್ನು ಕೇಳುವ ಸಲುವಾಗಿ ಅವಳು ಅವನಿದ್ದ ಕೊಠಡಿಗೆ ಹೋಗಿದ್ದಳು. ಆದರೆ, ಚಂದ್ರಹಾಸನ ಮೇಲೆ ಆಗಿದ್ದ ಪರಿಣಾಮ ವಿಪರೀತವಾಗಿತ್ತು. ಮತ್ತೊಮ್ಮೆ ಮದನನ ಪ್ರಹಾರಕ್ಕೆ ಸಿಲುಕಿದಂತೆ ಆಗಿತ್ತು. ರಾತ್ರಿ ಬಹಳ ಹೊತ್ತು ಅವನಿಗೆ ನಿದ್ದೆಯೇ ಹತ್ತಲಿಲ್ಲ. ತನ್ನಗುಂಟಾಗಿದ್ದ ಕಾಮ ವಿಕಾರವನ್ನು ಕುರಿತು ಯೋಚಿಸುತ್ತಾ, ತನ್ನ ದೌರ್ಬಲ್ಯಕ್ಕಾಗಿ ತನ್ನನ್ನೇ ಹಳಿದುಕೊಳ್ಳುತ್ತಿದ್ದನು. ತಂದೆ ಪುರುಷೋತ್ತಮಬಾಬು ಅವರು, ಬ್ರಹ್ಮಚರ್ಯೆಯಿಂದ ತೇಜಸ್ಸು, ಓಜಸ್ಸು, ಸ್ಮರಣಶಕ್ತಿ, ಮನಸ್ಥೈರ್ಯಗಳು ವೃದ್ಧಿಯಾಗುತ್ತವೆ ಎಂದು ಆಗಾಗ ಹೇಳುತ್ತಿದ್ದುದು ಅವನ ನೆನಪಿಗೆ ಬಂದಿತು.

ಗೌರಿ ಸತ್ತ ನಂತರ, ಅವನ ಸ್ನೇಹಿತರು ಕೆಲವರು ಅವನಿಗೆ ಪುನಃ ಮದುವೆ ಮಾಡಿಕೊಳ್ಳಬೇಕೆಂದು ಸಲಹೆ ಮಾಡಿದ್ದರು. ಆಗ ಅವನು "ಗೌರಿಯಂತಹ ಆದರ್ಶ ಪತ್ನಿ ನನಗೆ ಈ ಜನ್ಮದಲ್ಲಿ ಮತ್ತೆ ಸಿಕ್ಕಲಾರಳು. ನನಗೆ ಮದುವೆ ಬೇಡ" ಎಂದು ಹೇಳಿದ್ದನು. ಬ್ರಹ್ಮಚಾರಿಯಾಗಿ ತನ್ನ ಉಳಿದ ಆಯಸ್ಸನ್ನು ದೇಶಸೇವೆಯಲ್ಲಿ ಕಳೆಯಬೇಕೆಂದು ಅವನು ನಿರ್ಧರಿಸಿದ್ದನು. ಗೌರಿ ಸತ್ತು ಇನ್ನೂ ಎರಡು ವರ್ಷಗಳೂ ಆಗಿರಲಿಲ್ಲ. ಅಷ್ಟರೊಳಗಾಗಿ ಗೌರಿಯ ಗೆಳತಿ ಚಂಚಲೆಯ ಮೇಲೆ ತನಗೆ ಅನುರಾಗ

ಉಂಟಾದುದಕ್ಕಾಗಿ ಅವನಿಗೆ ಆಶ್ಚರ್ಯವಾಗಿತ್ತು. ಚಂಚಲೆಯ ಮೋಹಜಾಲಕ್ಕೆ ಸಿಕ್ಕಿ ಬಿದ್ದುದಕ್ಕೆ ಕಾರಣವನ್ನು ಕಂಡುಹಿಡಿಯಲೆತ್ನಿಸುತ್ತಿದ್ದನು. ಪ್ರೇಮದ ಮತ್ತು ಕಾಮದ ಮೂಲಗಳನ್ನು ತಿಳಿದುಕೊಳ್ಳಲು ತನ್ನ ಮನಸ್ಸನ್ನು ತಾನೇ ಶೋಧಿಸುತ್ತಿದ್ದನು.

"ಇಂದ್ರಿಯ ಪಿಪಾಸೆ ಕಾಮ ಪ್ರಚೋದನೆಯ ಪ್ರೇರಕ ಶಕ್ತಿ. ಆದರೆ ಎಲ್ಲಾ ಹೆಂಗಸರನ್ನೂ ನೋಡಿದರೆ ಕಾಮ ಪ್ರಚೋದನೆಯಾಗದೆ, ಮೆಚ್ಚಿದವಳನ್ನು ನೋಡಿದಾಗ ಮಾತ್ರ ಕಾಮೋದ್ರೇಕವಾಗಲು ಕಾರಣವೇನು? ಆತ್ಮಗಳ ಪರಸ್ಪರ ಆಕರ್ಷಣೆಯೋ? ಅಥವಾ ಸೌಂದರ್ಯದ ಸೆಳೆತವೋ? ಅಥವಾ ಗುಣ ಸ್ವಭಾವಗಳ ಪರಸ್ಪರ ಹೊಂದಾಣಿಕೆಯೋ? ಹೇಳುವುದೇ ಕಷ್ಟವಾಗಿದೆ. ಕಾಮರಹಿತ ಪ್ರೇಮಕ್ಕೂ, ಕಾಮಪ್ರೇರಿತ ಪ್ರೇಮಕ್ಕೂ ಎಷ್ಟು ಅಜಗಜಾಂತರ ವ್ಯತ್ಯಾಸ! ಕಾಮದ ವಿಚಾರದಲ್ಲಿ ಉಪದೇಶ ಹೇಳುವುದು ಬಹಳ ಸುಲಭ. ಆದರೆ ಅನುಕೂಲವಾದ ಸಮಯ ಸನ್ನಿವೇಶ ಸಿಕ್ಕರೆ ಉಪದೇಶ ಹೇಳುವವರೂ ಜಾರಿ ಬೀಳುತ್ತಾರೆಂಬುದಕ್ಕೆ ಇಂದು ನನಗಾದ ಅನುಭವವೇ ಸಾಕ್ಷಿ. ಸಾಮಾನ್ಯ ಹೆಂಗಸೊಬ್ಬಳ ಮೋಹಪಾಶಕ್ಕೆ ಇಷ್ಟು ಸುಲಭವಾಗಿ ಸಿಕ್ಕುವ ನನ್ನಿಂದ ಯಾವ ಮಹತ್ಕಾರ್ಯ ಸಾಧ್ಯ?" ಎಂಬುದಾಗಿ ಚಂದ್ರಹಾಸನು ತರ್ಕಿಸುತ್ತಿದ್ದನು. ಬಹಳ ಹೊತ್ತಿನ ನಂತರ ಅವನಿಗೆ ನಿದ್ದೆ ಬಂತು. ನಿದ್ದೆಯಲ್ಲಿ ತಾನೂ, ಚಂಚಲೆಯೂ ಯಾವುದೋ ಕಾಡಿನಲ್ಲಿ ವಿಹರಿಸುತ್ತಿರುವಂತೆ ಅವನಿಗೆ ಕನಸಾಗಿತ್ತು.

ಬೆಳಿಗ್ಗೆ ಐದೂವರೆ ಗಂಟೆಗೆ ಸರಿಯಾಗಿ ಚಂಚಲೆ ಕಾಫಿಯನ್ನು ತೆಗೆದುಕೊಂಡು ಬಂದು, ಚಂದ್ರಹಾಸನು ಮಲಗಿದ್ದ ಕೊಠಡಿಯ ಬಾಗಿಲನ್ನು ತಟ್ಟಿದಳು. ಚಂದ್ರಹಾಸನು ಬಾಗಿಲನ್ನು ತೆಗೆದನು. ಚಂಚಲೆ ಒಳಗೆ ಬಂದವಳು ಕಾಫಿಯನ್ನು ಮೇಜಿನ ಮೇಲಿಟ್ಟು, ಮಂದಸ್ಮಿತಳಾಗಿ "ರಾತ್ರಿ ಸರಿಯಾಗಿ ನಿದ್ದೆ ಬಂದಿತ್ತೇ?" ಎಂದು ಪ್ರಶ್ನಿಸಿದಳು. ಅವಳ ಪ್ರಶ್ನೆ ಅವನನ್ನು ಕುಚೋದ್ಯ ಮಾಡುವಂತಿತ್ತು. ರಾತ್ರಿ ನಿದ್ದೆ ಬಾರದೆ ಹೊರಳಾಡುತ್ತಿದ್ದುದನ್ನು ತಿಳಿದುಕೊಂಡವಳಂತೆ ಅವಳು ಅವನನ್ನು ಪ್ರಶ್ನಿಸಿದ್ದಳು. ಆದರೆ ಅವಳ ಮುಖಚರ್ಯೆ ಸ್ವಾಭಾವಿಕವಾಗಿತ್ತು. ಅವಳ ಮುಖದಲ್ಲಿ ಕಾಮ ವಿಕಾರದ ಕುರುಹು ಸ್ವಲ್ಪವೂ ಅವನಿಗೆ ತೋರಲಿಲ್ಲ. ಅವನು "ನಿದ್ದೆ ಮಾಡಿದೆ" ಎಂದನು. ಕಾಫಿಯನ್ನು ಕುಡಿದ ನಂತರ ಚಂದ್ರಹಾಸನು ಪ್ರಯಾಣಕ್ಕೆ ಸಿದ್ಧನಾದನು.

ಐದೂಮುಕ್ಕಾಲು ಗಂಟೆಗೆ ಸರಿಯಾಗಿ ಇಬ್ಬರೂ ಚಂಚಲೆಯ ಕಾರಿನಲ್ಲಿ ಹೊರಟರು. ಚಂಚಲೆ ತನ್ನ ಜೊತೆಯಲ್ಲಿ ತಿನಿಸನ್ನೂ, ಹಣ್ಣುಗಳನ್ನೂ ತೆಗೆದುಕೊಂಡಿದ್ದಳು. ಚಂದ್ರಹಾಸನು ಬಂದೂಕನ್ನು ತೆಗೆದುಕೊಂಡಿದ್ದನು. ಚಂಚಲೆ ಕಾರನ್ನು ನಡೆಸುತ್ತಿದ್ದಳು. ಅವಳ ಸಲಹೆ ಪ್ರಕಾರ ಚಂದ್ರಹಾಸನು ಹಿಂಬದಿಯ ಸೀಟಿನಲ್ಲಿ ಮುಸುಕು ಹಾಕಿಕೊಂಡು ಮಲಗಿದ್ದನು. ಮನೆಯ ಕಾಪೌಂಡು ದಾಟಿದೊಡನೆ, ಮನೆಯ ಸುತ್ತಲೂ ಐವತ್ತು ಅರವತ್ತು ಜನರು ನಿಂತಿರುವುದು ಚಂಚಲೆಗೆ ಕಾಣಿಸಿತು. ಅವಳು ಗಾಬರಿಯಾದಳು. ಕ್ರಾಂತಿಸೇನೆಯವರು ಮತ್ತೆ ಬಂದರೆಂದು ಭ್ರಮಿಸಿ, ಕಾರನ್ನು ನಿಲ್ಲಿಸಿ, "ಮಿಸ್ಟರ್ ಚಂದ್ರಹಾಸ್, ಮನೆಯ ಸುತ್ತಲೂ ಐವತ್ತು ಅರವತ್ತು ಜನ ನಿಂತಿದ್ದಾರೆ, ಕ್ರಾಂತಿ ಸೇನೆಯವರೇ"

ಎಂದು ಉದ್ವಿಗ್ನ ಧ್ವನಿಯಲ್ಲಿ ಕೇಳಿದಳು. ಮಲಗಿದ್ದ ಚಂದ್ರಹಾಸನು ಗಹಗಹಿಸಿ ನಗುತ್ತಾ "ಅವರು ಶತ್ರುಗಳಲ್ಲ; ಮಿತ್ರರು. ನನ್ನ ಕಾವಲಿಗಾಗಿ ನಮ್ಮ ಕೂಟದ ಸಿರಗೂರು ಕೇಂದ್ರದವರು ಅವರನ್ನು ಕಳುಹಿಸಿದ್ದಾರೆ. ರಾತ್ರಿಯೆಲ್ಲಾ ಅವರು ನಿಮ್ಮ ಮನೆಯ ಸುತ್ತಲೂ ಪಹರೆ ಕಾಯುತ್ತಿದ್ದರು. ಹೆದರಬೇಡಿ ಹೋಗಿ" ಎಂದನು.

ಕಾರು ಊರೊಳಗೆ ಹೋಗದೆ, ಊರ ಹೊರವಲಯದ ರಸ್ತೆಯಲ್ಲಿ ಹೋಗಿ, ಹೆದ್ದಾರಿಯನ್ನು ಬಿಟ್ಟು ಜಿಲ್ಲಾ ಪರಿಷತ್ ರಸ್ತೆಯನ್ನು ಹಿಡಿದು ಮುಂದೆ ಸಾಗಿತ್ತು. ಚಂಚಲೆ ಕಾರನ್ನು ನಡೆಸುತ್ತಿದ್ದ ವಿಧಾನವನ್ನು ನೋಡಿ ಚಂದ್ರಹಾಸನು ಮೆಚ್ಚಿದನು. ಒಂದೂವರೆ ಗಂಟೆಯೊಳಗಾಗಿ ಅವರು ಹೋಗಬೇಕಾಗಿದ್ದ ಗುಡ್ಡದ ಸಮೀಪ ಹೋದರು. ಕಾರನ್ನು ಗುಡ್ಡದ ಕೆಳಬದಿಯಲ್ಲಿ ನಿಲ್ಲಿಸಿ, ಗುಡ್ಡಕ್ಕೆ ಹೋಗುವ ಕಾಲು ದಾರಿಯನ್ನು ಹಿಡಿದು ಕಾಲು ನಡಿಗೆಯಲ್ಲಿ ಗುಡ್ಡವನ್ನು ಹತ್ತಲಾರಂಭಿಸಿದರು. ಬೆಳಗಿನ ತಂಗಾಳಿ ಹಿತಕರವಾಗಿ ಬೀಸುತ್ತಿತ್ತು. ಕಾಡು ಹೂಗಳ ಕೆಂಪು ಮನೋರಂಜಕವಾಗಿತ್ತು. ಸೂರ್ಯದೇವನು ಆಗ ತಾನೆ ಎದ್ದು, ಗುಡ್ಡವನ್ನೇರುತ್ತಿರುವ ಅವರ ಜೊತೆಯಲ್ಲಿ ಪೈಪೋಟಿ ಮಾಡುತ್ತಾ, ಆಕಾಶವನ್ನು ಏರುತ್ತಿದ್ದವನೋ ಎಂಬಂತೆ ತೋರುತ್ತಿದ್ದನು. ಗಿಡಮರಗಳ ಮತ್ತು ಪೊದೆಗಳ ರೆಂಬೆಗಳು ದಾರಿಯ ಇಕ್ಕೆಲದಲ್ಲೂ ಕವಿದುಕೊಂಡಿದ್ದರಿಂದ ಅವರೀರ್ವರೂ ಕೆಲವು ಕಡೆಗಳಲ್ಲಿ ತೆವಳಿಕೊಂಡು ಮುಂದೆ ಸಾಗಬೇಕಾಗಿತ್ತು.

ಒಂದು ಕಡೆ ಚಂಚಲೆಯ ಸೀರೆ ಒಂದು ಮುಳ್ಳಿನ ಕೊನೆಗೆ ಸಿಕ್ಕಿಕೊಂಡು, ಅವಳು ಮುಳ್ಳನ್ನು ಬಿಡಿಸಲಾರದೆ ಕೊಸರಾಡುತ್ತಿದ್ದಳು. ಅದನ್ನು ನೋಡಿದ ಚಂದ್ರಹಾಸನು ಅವಳ ಸಹಾಯಕ್ಕೆ ಹೊಗಿ ಸೀರೆಗೆ ಸಿಕ್ಕಿದ್ದ ಮುಳ್ಳುಗಳನ್ನು ಉಪಾಯದಿಂದ ಬಿಡಿಸಿದನು. ಮುಳ್ಳನ್ನು ಬಿಡಿಸುತ್ತಿರುವಾಗ ಅವನು ಅವಳ ಮುಖವನ್ನು ನೋಡಿದನು. ನಸು ನಾಚಿಕೆಯಿಂದ ಅವಳ ಮುಖ ನಸುಗೆಂಪಾಯಿತು. ಗಂಡನ ಜೊತೆಯಲ್ಲಿಯೇ ಸತ್ತು ಹೊಯಿತೆಂದು ಅವಳು ಭಾವಿಸಿದ್ದ ಕಾಮ ಮತ್ತೆ ತನ್ನ ಬಳಿಸಾರುತ್ತಿರುವಂತೆ ಅವಳಿಗೆ ಭಾಸವಾಯಿತು. ಚಿತ್ತ ವಿಕಾರವನ್ನು ಹೋಗಲಾಡಿಸುವ ಸಲುವಾಗಿ ತನ್ನ ಗಂಡ ಮತ್ತು ಮಗನ ಕೊಲೆಯ ವಿಚಾರವನ್ನು ಮಾತನಾಡತೊಡಗಿದಳು. ಚಂದ್ರಹಾಸನಿಗೂ ಅದೇ ಬೇಕಾಗಿತ್ತು. ಅವನ ಮನಸ್ಸು ಕೂಡಾ ಅದೇ ಅವಸ್ಥೆಯಲ್ಲಿತ್ತು. ಮಾತನಾಡುತ್ತಾ ಗುಡ್ಡವನ್ನು ಹತ್ತಿದರು.

ಗುಡ್ಡದ ಆಚೆಯ ಕಡೆ ಮರಗಿಡಗಳಿಂದ ಕವಿದಿದ್ದ ಒಂದು ಪ್ರಶಸ್ತವಾದ ಸ್ಥಳವನ್ನಾರಿಸಿದರು. ಆ ಸ್ಥಳದಲ್ಲಿ ರಿವಾಲ್ವಾರ್ ಉಪಯೋಗದ ಅಭ್ಯಾಸ ಆರಂಭವಾಯಿತು. ಮೊದಲು ರಿವಾಲ್ವಾರ್ ಹಿಡಿಯುವುದನ್ನೂ, ಅದರ ಬಿಲ್ಲನ್ನು ಮೀಟುವುದನ್ನೂ, ಗುರಿ ಇಡುವ ವಿಧಾನವನ್ನೂ, ಚಂದ್ರಹಾಸನು ಅವಳಿಗೆ ಹೇಳಿಕೊಟ್ಟನು. ಈ ರೀತಿ ಹೇಳಿ ಕೊಡುತ್ತಿರುವಾಗ ಅವಳ ಕೈ ಅವನ ಕೈಗೆ ತಾಗಿತು. ಅವಳ ಮೈ ಅವನ ಮೈಯನ್ನು ತಾಗಿತು. ಚಂದ್ರಹಾಸನ ಮೈಯಲ್ಲಿ ವಿದ್ಯುತ್ ಲಹರಿ ಹರಿದಂತಾಯಿತು. ಕಾಮನೆಬ್ಬಿಸಿದ ಬಿರುಗಾಳಿಯಲ್ಲಿ ಕೊಚ್ಚಿ ಹೋಗುತ್ತಿರುವವನಂತೆ ಅವನ ಸ್ಥಿತಿಯಾಗಿತ್ತು. ಚಂಚಲೆ

ಇನ್ನೊಂದು ಪ್ರಬಲವಾದ ಉದ್ವೇಗಕ್ಕೆ ಒಳಗಾಗಿದ್ದರೂ, ತಾನು ಮನ್ಮಥನ ಸಾನಿಧ್ಯದಲ್ಲಿದ್ದೇನೆಂಬ ಅರಿವು ಅವಳಿಗಾಗಿತ್ತು. ಇಬ್ಬರೂ ತಮ್ಮ ಉದ್ರೇಕವನ್ನು ಅದುಮಿಡಲು ಪ್ರಯತ್ನಿಸುತ್ತಿದ್ದರು. ಇಬ್ಬರೂ ಘೋಲಾಯಮಾನ ಸ್ಥಿತಿಯಲ್ಲಿದ್ದರು. ಅಂತಹ ಪರಿಸ್ಥಿತಿಯಲ್ಲಿ ಗಂಡು ಹೆಣ್ಣುಗಳಿಬ್ಬರೇ ಇರುವುದು ಎಷ್ಟು ಕಷ್ಟವೆಂಬುದು ಅಂದು ಅವರಿಬ್ಬರಿಗೂ ಅರಿವಾಗಿತ್ತು.

ಅವನು ವಿಧುರನಾಗಿದ್ದನು; ಅವಳು ವಿಧವೆಯಾಗಿದ್ದಳು. ಅವರೀರ್ವರೂ ಮದುವೆಯಾಗಲು ಯಾವ ಅಡ್ಡಿಯೂ ಇರಲಿಲ್ಲ. ಆದರೆ ಇಬ್ಬರಿಗೂ ದಾಂಪತ್ಯ ಜೀವನ ಬೇಕಾಗಿರಲಿಲ್ಲ. ಅವನು ದಾಂಪತ್ಯ ಜೀವನ ಕ್ರಾಂತಿಯ ಕೆಲಸಕ್ಕೆ ಅಡ್ಡಿ ಎಂದು ತಿಳಿದಿದ್ದರೆ, ಅವಳು ಈರ್ವರು ಪುರುಷರೊಡನೆ ಬೆರೆತು, ಬಾಳಿ ಸಿಹಿ ಕಹಿಗಳನ್ನು ಅನುಭವಿಸಿ, ಕಾಮ ಪಿಪಾಸೆಗೆ ಬಲಿಯಾದರೆ ಸುಖಕ್ಕಿಂತ ಕಷ್ಟವೇ ಹೆಚ್ಚೆಂಬ ತೀರ್ಮಾನಕ್ಕೆ ಬಂದಿದ್ದಳು. ಆದರೆ ಇಬ್ಬರೂ ಇಂದ್ರಿಯ ಚಾಪಲ್ಯದಿಂದ ಮುಕ್ತರಾಗಿರಲಿಲ್ಲ. ಆದ್ದರಿಂದ ಈರ್ವರಲ್ಲಿಯೂ ಬುದ್ಧಿ ಒಂದು ಕಡೆ ಎಳೆದರೆ ಇಂದ್ರಿಯಗಳು ಇನ್ನೊಂದು ಕಡೆ ಎಳೆಯುತ್ತಿದ್ದವು.

ಒಂದು ಕಡೆ ಇಬ್ಬರ ಮನಸ್ಸಿನಲ್ಲಿಯೂ ದ್ವಂದ್ವ ಯುದ್ಧ ನಡೆದಿದ್ದರೆ, ಇನ್ನೊಂದು ಕಡೆ ರಿವಾಲ್ವಾರ್ ಅಭ್ಯಾಸ ನಡೆದಿತ್ತು. ಚಂಚಲೆ ಮೊದಲು ದೊಡ್ಡ ಮರಕ್ಕೆ ಗುರಿ ಇಟ್ಟು ಹೊಡೆದಳು. ನಂತರ ಗಿಡಗಳಿಗೆ ಗುರಿ ಇಟ್ಟು ಹೊಡೆದಳು. ನಂತರ ರೆಂಬೆಗಳಿಗೆ ಗುರಿ ಇಟ್ಟು ಹೊಡೆದಳು. ಒಟ್ಟು ಇಪ್ಪತ್ತು ಗುಂಡು ಹಾರಿಸಿದ್ದರಲ್ಲಿ ಎಂಟು ಮಾತ್ರ ಗುರಿ ತಪ್ಪಿ ಹೋಗಿದ್ದವು. ಉಳಿದವು ಗುರಿಗೆ ಸರಿಯಾಗಿ ತಗಲಿದ್ದವು. ಬಹುಶಃ ಮಾನಸಿಕ ಹೊಯ್ದಾಟವಿಲ್ಲದಿದ್ದರೆ ನೂರಕ್ಕೆ ನೂರು ಗುರಿಗೆ ಸರಿಯಾಗಿ ತಗಲುತ್ತಿದ್ದವೆಂದು ಚಂಚಲೆಯ ಅಭಿಪ್ರಾಯವಾಗಿತ್ತು. ಇನ್ನೂ ಕೆಲವು ಸಾರಿ ಪ್ರಯತ್ನ ಮಾಡಲು ಚಂಚಲೆ ಸಿದ್ಧಳಿದ್ದಳು. ಆದರೆ ತೋಟಾಗಳು ಮುಗಿದು ಹೋಗಿದ್ದವು. ಆದ್ದರಿಂದ ಅಭ್ಯಾಸ ಅಲ್ಲಿಗೇ ನಿಂತುಹೋಯಿತು.

ಎಲ್ಲಿಯಾದರೂ ಕಳ್ಳಪೇಟೆಯಲ್ಲಿ ತೋಟಾಗಳನ್ನು ಕೊಂಡು ಬಂದು ಮರುದಿನ ಪುನಃ ಅಲ್ಲಿಗೆ ಬರಬೇಕೆಂದು ಚಂಚಲೆ ಚಂದ್ರಹಾಸನಿಗೆ ಸೂಚಿಸಿದಳು. ಆದರೆ ಚಂದ್ರಹಾಸನು ಜರೂರಾಗಿ ಶ್ರೀಪುರಕ್ಕೆ ಹೋಗಬೇಕಾಗಿತ್ತು. ಅಲ್ಲದೆ ಚಂಚಲೆಯ ಮೋಹಪಾಶಕ್ಕೆ ಸಿಕ್ಕಿ ಮತ್ತೊಂದು ದಿನ ಪರಿತಪಿಸಲು ಅವನು ಸಿದ್ಧನಿರಲಿಲ್ಲ. ಆದಷ್ಟು ಜಾಗ್ರತೆ ಅವಳಿಂದ ದೂರ ಸರಿಯಬೇಕೆಂದು ಯೋಚಿಸಿದ್ದನು.

"ನಾನು ಹೇಳಿಕೊಡುವುದು ಇನ್ನೇನೂ ಉಳಿದಿಲ್ಲ. ನೀವು ಈಗಾಗಲೇ ಎಕ್ಸ್‌ಪರ್ಟ್ ಷಾಟ್ ಆಗಿದ್ದೀರಿ. ಇನ್ನು ಮೇಲೆ ನೀವೇ ಅಭ್ಯಾಸ ಮಾಡಬಹುದು. ನಾನು ಊರಿಗೆ ಹೋಗುವ ಮುನ್ನ ಇನ್ನಷ್ಟು ತೋಟಾ, ಸಿರಗೂರು ಪೇಟೆಯಲ್ಲಿ ಸಂಪಾದಿಸಿ ತಂದುಕೊಡುತ್ತೇನೆ. ನಾನು ಈ ದಿನ ಊರಿಗೆ ಹೋಗಲೇಬೇಕು. ಕ್ರಾಂತಿಸೇನೆಯವರ ಹಾವಳಿ ಶ್ರೀಪುರದಲ್ಲಿ ವಿಪರೀತವಾಗಿದೆ. ಅಲ್ಲದೆ ನಾವಿಬ್ಬರೇ ಹೀಗೆ ಕಾರಿನಲ್ಲಿ

ಓಡಾಡುವುದನ್ನು ಜನ ನೋಡಿದರೆ ಏನಾದರೂ ಕಥೆ ಕಟ್ಟುತ್ತಾರೆ" ಎಂದು ಚಂದ್ರಹಾಸ ಹೇಳಿ ಚಂಚಲೆಯ ಮುಖದ ಕಡೆಗೆ ನೋಡಿದನು.

ಚಂಚಲೆಯ ಮುಖ ಸ್ವಲ್ಪ ಕಪ್ಪೇರಿದಂತೆ ತೋರಿತು. ಅವಳು ನೆಲದ ಕಡೆಗೆ ನೋಡುತ್ತಾ "ಅದೂ ನಿಜಾ ಅನ್ನಿ. ನಿಮಗೆ ತುಂಬಾ ಶ್ರಮಕೊಟ್ಟೆ" ಎಂದು ಹೇಳಿದಳು. ಉದ್ವೇಗದ ಒತ್ತಡದಿಂದ ಮುಂದೇನೂ ಮಾತನಾಡಲಾರದೆ ಅವಳು ಸಂಕೋಚದಿಂದ ಸ್ವಲ್ಪ ಕಾಲ ಸುಮ್ಮನಿದ್ದಳು. ಸನ್ನಿವೇಶ ಇಬ್ಬರಿಗೂ ಅಸಹನೀಯವಾಗಿತ್ತು. ಆಗ ಇಬ್ಬರೂ ಮೌನವಾಗಿ ನಿಂತಿದ್ದರು. ಈ ಅಸಹನೀಯ ಸನ್ನಿವೇಶವನ್ನು ಕೊನೆಗಾಣಿಸಲು ಇಬ್ಬರೂ ಯೋಚಿಸುತ್ತಿದ್ದಾಗ, ಚಂಚಲೆಯೇ ಮೊದಲು ಮೌನವನ್ನು ಕೊನೆಗಾಣಿಸಿ, "ಕ್ರಾಂತಿಸೇನೆಯ ರಕ್ತ ಪಿಶಾಚಿಗಳು ಈಚೆಗೆ ಎಷ್ಟು ಜನರನ್ನು ಕೊಂದರು?" ಎಂದು ಪ್ರಶ್ನಿಸಿದಳು. "ಅದನ್ನು ಹೇಳಬೇಕಾದ್ರೆ ಒಂದು ದಿನವಾದರೂ ಸಾಲದು. ಬನ್ನಿ ಹೋಗೋಣ. ಗುಡ್ಡವನ್ನು ಇಳಿದ ನಂತರ ನಿಧಾನವಾಗಿ ಹೇಳುತ್ತೇನೆ. ಕಳೆದ ಒಂದು ತಿಂಗಳಲ್ಲಿ ಈ ರಾಜ್ಯದಲ್ಲಿ ಒಟ್ಟು ನೂರಾಮೂವತ್ತು ಜನರನ್ನು ಕೊಲೆ ಮಾಡಿದ್ದಾರೆ" ಎಂದನು.

ಇಬ್ಬರೂ ಗುಡ್ಡವನ್ನಿಳಿದು ಹೋಗುತ್ತಿದ್ದರು. ಚಂದ್ರಹಾಸ ಮೌನವಾಗಿ ಮುಂದೆ ಹೋಗುತ್ತಿದ್ದರೆ, ಚಂಚಲೆ ಅವನ ಹಿಂದೆ ಮೌನವಾಗಿ ಹೋಗುತ್ತಿದ್ದಳು. ಗುಡ್ಡದ ಕಿಬ್ಬದಿಯಲ್ಲಿ ಅವರು ಕೆಳಗಿಳಿಯುತ್ತಿರುವಾಗ, ಚಂಚಲೆಯ ಬಣ್ಣಬಣ್ಣದ ಸೀರೆಯನ್ನೂ, ಚಂದ್ರಹಾಸನ ಕೈಯಲ್ಲಿದ್ದ ಬಂದೂಕನ್ನು ನೋಡಿ ಅಲ್ಲಿ ಮೇಯುತ್ತಿದ್ದ ಮೇಕೆಗಳ ಹಿಂಡು ಚೆಲ್ಲಾಪಿಲ್ಲಿಯಾಗಿ, ದಿಕ್ಕಾಪಾಲಾಗಿ ಓಡಿ ಹೋದವು. ಆಗ ತಾನೆ ಮರಿ ಹಾಕಿದ್ದ ಒಂದು ಮೇಕೆಯೂ ಸಹ ತನ್ನ ಎರಡು ಪುಟ್ಟ ಮರಿಗಳನ್ನು ಬಿಟ್ಟು ಹೆದರಿ ಹಿಂಡಿನ ಜೊತೆಯಲ್ಲಿ ಓಡಿ ಹೋಯಿತು. ಮರಿಗಳ ಹತ್ತಿರ ತಾಯಿ ಇಲ್ಲದೆ ಇದ್ದುದನ್ನು ನೋಡಿದ್ದ ಒಂದು ಗುಳ್ಳೆ ನರಿ ಒಂದು ಮರಿಯನ್ನು ಕಚ್ಚಿಕೊಂಡು ಓಡಿ ಹೋಗುತ್ತಿತ್ತು. ಇದನ್ನು ನೋಡಿದ ತಾಯಿ ಮೇಕೆ ತಿರುಗಿ ಮರಿ ಇದ್ದ ಕಡೆಗೆ ಓಡಿ ಬರುತ್ತಿತ್ತು.

ಗುಳ್ಳೆನರಿ ಮೇಕೆಯ ಮರಿಯನ್ನು ಕಚ್ಚಿಕೊಂಡು ಹೋಗುತ್ತಿರುವುದನ್ನು ನೋಡಿದ ಚಂಚಲೆಗೆ ತನ್ನ ಮಗನ ಕೊಲೆಯ ನೆನಪಾಗಿ ಕರುಳು ಕಿವಿಚಿದಂತಾಗಿತ್ತು. ಮರಿಯನ್ನು ಕಚ್ಚಿಕೊಂಡು ಓಡುತ್ತಿದ್ದ ನರಿಯನ್ನು ಹಿಂಬಾಲಿಸಿ ಮೇಕೆ ಓಡುತ್ತಿತ್ತು. ಇದನ್ನು ನೋಡುತ್ತಿದ್ದ ಚಂದ್ರಹಾಸನು ಓಡಿ ಹೋಗುತ್ತಿದ್ದ ನರಿಗೆ ಗುರಿ ಇಟ್ಟು ತನ್ನ ಬಂದೂಕಿನಿಂದ ಹೊಡೆದನು. 'ಢಾಂ' ಎಂದು ಆ ಪ್ರದೇಶ ಮೊಳಗುವಂತೆ ಶಬ್ದವಾಯಿತು. ಆ ಶಬ್ದಕ್ಕೆ ಹೆದರಿ, ಮೇಕೆ ಹಿಂದಿರುಗಿ ಇನ್ನೊಂದು ಮರಿ ಇದ್ದ ಕಡೆಗೆ ಓಡಿ ಹೋಗುತ್ತಿತ್ತು. ಓಡಿಹೋಗುತ್ತಿದ್ದ ನರಿಗೆ ಹೊಡೆದ ಗುಂಡು ತಪ್ಪಿ ಹೋಗಿರಬಹುದೆಂಬ ಭಾವನೆಯಿಂದ, ಚಂಚಲೆ "ನಿಮ್ಮ ಗುಂಡು ಆ ಕಡೆ ಹೋಯಿತು : ನರಿ ಈ ಕಡೆ ಹೋಯಿತು" ಎಂದು ಚಂದ್ರಹಾಸನನ್ನು ಪರಿಹಾಸ್ಯ ಮಾಡಿದಳು.

"ನನ್ನ ಗುಂಡು ಹಾಗೆಲ್ಲಾ ತಪ್ಪುವುದಿಲ್ಲ. ನರಿ ಸತ್ತು ಬಿದ್ದಿದೆ. ಬೇಕಾದರೆ, ಬನ್ನಿ ನೋಡೋಣ" ಎಂದು ಗುಂಡನ್ನು ಹಾರಿಸಿದ್ದ ಕಡೆಗೆ ಅವಳನ್ನು ಕರೆದುಕೊಂಡು

ಹೋದನು. ನರಿ ಸತ್ತು ಬಿದ್ದಿತ್ತು. ನರಿಯ ಹಲ್ಲಿನಿಂದ ಗಾಯಗೊಂಡಿದ್ದ ಮೇಕೆಯ ಮರಿ ನೆಲದ ಮೇಲೆ ಬಿದ್ದು ಒದ್ದಾಡುತ್ತಿತ್ತು. ಚಂದ್ರಹಾಸನು ಅದನ್ನು ತೆಗೆದುಕೊಂಡು ಹೋಗಿ ಇನ್ನೊಂದು ಮರಿಯ ಜೊತೆಯಲ್ಲಿ ಬಿಟ್ಟು, ದೂರದಲ್ಲಿ ಆಡುತ್ತಿದ್ದ ಮೇಕೆಯ ಹಿಂಡನ್ನು ಕಾಯಲು ಬಂದಿದ್ದ ಹುಡುಗರನ್ನು ಕೂಗಿ ಕರೆದು ಅವರ ಸುಫರ್ದು ಮರಿಗಳನ್ನು ವಹಿಸಿದನು. ಆ ನಂತರ ಇಬ್ಬರೂ ಕಾರನ್ನು ನಿಲ್ಲಿಸಿದ್ದ ಸ್ಥಳಕ್ಕೆ ಹೊರಟರು.

"ನೀವು ಇಷ್ಟೊಂದು ಸಮರ್ಥ ಈಡುಗಾರರೆಂದು ನನಗೆ ಕಲ್ಪನೆಯೇ ಇರಲಿಲ್ಲ. ಓಡಿ ಹೋಗುತ್ತಿರುವ ಪ್ರಾಣಿಗಳನ್ನು ಹೊಡೆಯುವುದು ಸುಲಭವಲ್ಲ" ಎಂದು ಚಂಚಲೆ ಹೇಳಿದಳು.

"ಅದೇನು ಮಹಾ ಕಷ್ಟ. ಷಿಕಾರಿ ಮಾಡುವವರು ಓಡಿಹೋಗುವ ಮೃಗಗಳನ್ನು ನನಗಿಂತಲೂ ಲೀಲಾಜಾಲವಾಗಿ ಹೊಡೆಯುತ್ತಾರೆ."

"ನೀವು ಇಷ್ಟು ಗಟ್ಟಿಗರಾಗಿದ್ದರೂ, ಶಂಕರನು ಇನ್ನೂ ಬದುಕಿದ್ದಾನಲ್ಲಾ?"

"ಅವನು ಹೇಡಿ. ನನ್ನ ಕಣ್ಣಿಗೆ ಸಿಕ್ಕಿದ್ದರೆ ಎಂದೋ ಅವನನ್ನು ತೀರಿಸಿಬಿಡುತ್ತಿದ್ದೆ. ಅವನು ಜೀವಗಳ್ಳ. ಕೊಲೆ, ದರೋಡೆಗಳಿಗೆ ತಾನು ಮುಂದೆ ಹೊಗದೆ ಢಕಾಯಿತರನ್ನು ಮುಂದೆ ಬಿಡುತ್ತಾನೆ. ಅವನ ಕ್ರಾಂತಿಸೇನೆಯವರು ಮೋಸ, ಕೃತ್ರಿಮಗಳಿಂದಲೇ ಜನರನ್ನು ಕೊಲ್ಲುತ್ತಾರೆ. ರಾಜಾರೋಷವಾಗಿ ಶತ್ರುಗಳನ್ನು ಎದುರಿಸುವ ಸಾಮರ್ಥ್ಯ ಅವರಿಗಿಲ್ಲ. ಅವರೂ ಕ್ರಾಂತಿಕಾರರು!"

"ಅವನ ಸೆನೆಯಲ್ಲಿ ಢಕಾಯಿತರೆಷ್ಟು ಜನರಿದ್ದಾರೆ?"

"ಒಟ್ಟು ಮೂರು ಜನರಿದ್ದರು ಭೋಲಾನಾಥ್, ಇಸ್ಮೇಯಿಲ್, ದೇಭಿನ್, ಹದಿನೈದು ದಿನಗಳ ಹಿಂದೆ ನಮ್ಮವರು ಇಸ್ಮೇಯಿಲನನ್ನು ಮುಗಿಸಿದರು. ಇನ್ನಿಬ್ಬರು ಉಳಿದಿದ್ದಾರೆ."

"ಏನು! ಇಸ್ಮೇಯಿಲ್ ಹೋದನೆ! ನಿಜವೇ ನೀವು ಹೇಳುವುದು?"

"ನಿಜ."

"ನನ್ನ ಹೊಟ್ಟೆ ತಣ್ಣಗಾಯಿತು. ಆ ಕೇಡಿಯೇ ನಮ್ಮ ಮನೆಗೆ ಬಂದಿದ್ದವನು."

"ನಿಮಗೆ ಹೇಗೆ ಗೊತ್ತು?"

"ಅವನ ಜೊತೆಯಲ್ಲಿ ಬಂದಿದ್ದವರ ಮಾತುಗಳಿಂದಲೇ ಗೊತ್ತಾಗುತ್ತಿತ್ತು. ಅವನೇ ಆ ಗ್ಯಾಂಗಿನ ಲೀಡರ್, ನನಗೆ ಇಂಜಕ್ಷನ್ ಕೊಟ್ಟವನೂ ಅವನೇ. ಅವನು ಸತ್ತದ್ದು ಹೇಗೆ?"

"ಅದೊಂದು ರೋಮಾಂಚಕ ಪ್ರಸಂಗ. ನಾನು ಆಸ್ಪತ್ರೆಯಲ್ಲಿದ್ದಾಗ" ಕಿಶೋರ್ ನನ್ನನ್ನು ನೋಡಲು ಆಗಾಗ ಆಸ್ಪತ್ರೆಗೆ ಬರುತ್ತಿದ್ದ. ಅವನನ್ನು ದಾರಿಯಲ್ಲಿ ಅಡ್ಡಗಟ್ಟಿ ಕೊಲ್ಲಬೇಕೆಂದು ಇಸ್ಮೇಯಿಲ್ ಪ್ಲಾನ್ ಮಾಡಿದ್ದ. ಕ್ರಾಂತಿಸೇನೆಯವರು ದೊಡ್ಡ ದೊಡ್ಡ ನಗರಗಳಲ್ಲಿ ತಮ್ಮ ಶತ್ರುಗಳನ್ನು ಕೊಲ್ಲಬೇಕೆಂದು ಹಂಚಿಕೆ ಹೂಡಿದಾಗ ಕೆಲವರು ಕೊಲೆಗಡುಕರು ಶತ್ರುವಿಗೆ ತಿಳಿಯದಂತೆ ಹಿಂದುಗಡೆಯಿಂದ ಹಿಂಬಾಲಿಸಿ ಹೋಗುತ್ತಾರೆ. ಕೆಲವರು ಮುಂದುಗಡೆ ಸ್ವಲ್ಪ ದೂರದಲ್ಲಿ ಬಾಂಬ್ ಎಸೆಯುತ್ತಾರೆ. ರಸ್ತೆಯಲ್ಲಿ ಹೋಗುವ

ಶತ್ರುವಿನ ಮತ್ತು ಇತರ ಜನರ ಗಮನ ಬಾಂಬ್ ಸಿಡಿದ ಸ್ಥಳದ ಕಡೆಗೆ ಹರಿಯುತ್ತದೆ. ಆ ಸಮಯವನ್ನು ಸಾಧಿಸಿ ಹಿಂದುಗಡೆ ಬರುತ್ತಿರುವವರು ಶತ್ರುವಿನ ಮೇಲೆರಗಿ ಅವನನ್ನು ಕೊಂದು ಪರಾರಿಯಾಗುತ್ತಾರೆ. ಅವರ ಈ ಹಿಕ್ಮತ್ ನಮ್ಮವರಿಗೆ ಗೊತ್ತಿತ್ತು. ಒಂದು ದಿನ ಸಾಯಂಕಾಲ ಎಂಟು ಗಂಟೆಯ ಸಮಯದಲ್ಲಿ ಕಿಶೋರನು ಆಸ್ಪತ್ರೆಯಿಂದ ತನ್ನ ಮನೆಗೆ, ಶ್ರೀಪುರದ ನೆಹರೂ ರಸ್ತೆಯಲ್ಲಿ, ಆರುಜನ ಕ್ರಾಂತಿಕೂಟದ ಸಿಪಾಯಿಗಳ ಜೊತೆಯಲ್ಲಿ ಹೋಗುತ್ತಿದ್ದಾಗ, ಸುಮಾರು ಮೂವತ್ತು ಗಜ ದೂರದಲ್ಲಿ ಒಂದು ಬಾಂಬ್ ಸಿಡಿದ ಶಬ್ದವಾಯಿತು. ನಮ್ಮವರು ಮುಂದೆ ನೋಡುವ ಬದಲು ತಕ್ಷಣ ಹಿಂದಿರುಗಿ ನೋಡಿದರು. ಇಸ್ಮೇಯಿಲನೂ, ಅವನ ಸಂಗಾತಿಗಳೂ ಹಿಂದುಗಡೆಯಿಂದ ಮೆತ್ತಗೆ ಹೊಂಚು ಹಾಕುತ್ತಾ ಬರುತ್ತಿದ್ದರು. ಅವರು ನಮ್ಮವರ ಮೇಲೆ ಬೀಳುವ ಮುಂಚೆಯೇ ನಮ್ಮವರು ಅವರ ಮೇಲೆರಗಿ ಗುಂಡು ಹಾರಿಸಿದರು. ಸಣ್ಣ ಕಾಳಗವೇ ನಡೆಯಿತು. ಆ ಕಾಳಗದಲ್ಲಿ ಇಸ್ಮೇಯಿಲನೂ, ಅವನ ಕಡೆ ಇಬ್ಬರೂ ಸತ್ತು ಬಿದ್ದರು. ನಮ್ಮವರ ಪೈಕಿ ಮೂವರಿಗೆ ಗಾಯವಾಯಿತು. ಪೊಲೀಸರು ಆ ಸ್ಥಳಕ್ಕೆ ಬರುವುದರೊಳಗಾಗಿ ನಮ್ಮವರು ಪರಾರಿಯಾದರು."

"ಸತ್ತವರ ಪೈಕಿ ಇಸ್ಮೇಯಿಲ್ ಒಬ್ಬನೆಂದು ನಿಮಗೆ ಹೇಗೆ ಖಚಿತವಾಗಿ ಗೊತ್ತು?"

"ನಿಮಗೆ ಇನ್ನೂ ಅನುಮಾನವೇ? ಅವನ ಸಾವಿನಿಂದ ಶಂಕರನು ಧೃತಿಗೆಟ್ಟಿದ್ದನೆಂದೂ, ಇಸ್ಮೇಯಿಲನಿಗೆ ಶ್ರದ್ಧಾಂಜಲಿನ್ನರ್ಪಿಸುವುದಕ್ಕಾಗಿ ಕ್ರಾಂತಿಸೇನೆಯವರು ಒಂದು ಸಂತಾಪ ಸಭೆಯನ್ನು ಕರೆದಿದ್ದರೆಂದೂ ನಮ್ಮ ಗೂಢಚಾರರು ನಮಗೆ ತಿಳಿಸಿದರು."

"ಈ ಸುದ್ದಿಯನ್ನು ಕೇಳಿ ನನಗೆ ಅಮೃತಪಾನ ಮಾಡಿದಷ್ಟು ತೃಪ್ತಿಯಾಯಿತು. ಇನ್ನು ನಾನು ಸಾಯುವುದರೊಳಗೆ ಶಂಕರನ ಸಾವನ್ನು ನೋಡಿ ಸತ್ತರೆ ನನಗೆ ಮುಕ್ತಿ ದೊರಕಿದಂತೆ ಆಗುತ್ತದೆ."

"ಚಂಚಲಾವರೆ, ನಿಮ್ಮ ಹತ್ರ ಈಗ ರಿವಾಲ್ವಾರ್ ಇದೆ. ನೀವೂ ಈಗ ಈಡುಗಾರರಾಗಿದ್ದೀರಿ. ಏನೋ ನಿಮಿತ್ತ ಸರಿಯಾಗಿದೆ ಎಂದು ನಿನ್ನೆ ಹೇಳಿದಿರಿ. ನೀವು ಏನೋ ಪ್ಲಾನ್ ಹಾಕಿದ್ದಾಗೆ ತೋರುತ್ತದೆ."

"ನಿರ್ದಿಷ್ಟ ಪ್ಲಾನ್ ಏನೂ ಇಲ್ಲ. ನನ್ನ ಮನಸ್ಸಿನಲ್ಲಿ ಎರಡು ಮಾರ್ಗಗಳು ಹೊಳೆದಿವೆ. ಇನ್ನೂ ಯೋಚನೆ ಮಾಡುತ್ತಾ ಇದ್ದೀನಿ. ರಿವಾಲ್ವಾರ್ ಅನಿರೀಕ್ಷಿತವಾಗಿ ಸಿಕ್ಕಿದ್ದ ಸಂದರ್ಭವನ್ನೂ, ಅನಂತರ ಸಂಭವಿಸಿದ್ದ ಕೆಲವು ಘಟನೆಗಳನ್ನೂ ನೋಡಿದರೆ ಅವುಗಳ ಹಿನ್ನೆಲೆಯಲ್ಲಿ ಏನೋ ವಿಧಿ ಸಂಕಲ್ಪವಿದೆ ಎಂದು ನನಗನ್ನಿಸುತ್ತದೆ. ನಾನೂ ಒಂದು ವ್ಯೂಹವನ್ನು ರಚಿಸಲು ಕ್ರಮಕೈಗೊಂಡಿದ್ದೇನೆ. ಈ ತಿಂಗಳು ತಾರೀಖು ಇಪ್ಪತ್ತಾರರ ಹೊತ್ತಿಗೆ ಆ ವ್ಯೂಹ ಒಂದು ಘಟ್ಟಕ್ಕೆ ಬರಬಹುದೆಂದು ನಿರೀಕ್ಷಿಸಿದ್ದೇನೆ. ಇಪ್ಪತ್ತಾರನೇ ತಾರೀಖು ನಾನು ನನ್ನ ಚಿಕ್ಕಮ್ಮನನ್ನೂ, ನನ್ನ ತಮ್ಮ ತಂಗಿಯರನ್ನು ನೋಡಲು ಶ್ರೀಪುರಕ್ಕೆ ಬರುವವಳಿದ್ದೇನೆ. ಆ ದಿನ ನಾನೂ, ನೀವೂ ಎಲ್ಲಿಯಾದರೂ ಯಾರಿಗೂ ಗೊತ್ತಾಗದಂತೆ ಗುಪ್ತವಾಗಿ ಒಂದುಕಡೆ ಸೇರಬೇಕು."

"ಎಲ್ಲಿ ಸೇರೋಣ?"

"ಪದ್ಮಾವತಿಯವರ ಮನೆ ಆದರೆ ವಾಸಿ. ನಾನು ಆ ದಿನ ಮಧ್ಯಾಹ್ನ ಮೂರು ಗಂಟೆಗೆ ಸರಿಯಾಗಿ ಪದ್ಮಾವತಿಯವರ ಮನೆಗೆ ಬರುತ್ತೇನೆ. ಯಾರಿಗೂ ಗೊತ್ತಾಗದಂತೆ ಪದ್ಮಾವತಿಯವರ ಮನೆಯಲ್ಲಿ ನೀವು ನನಗೋಸ್ಕರ ಕಾದಿರಬೇಕು. ನಾನು ಬರುವ ವಿಚಾರ ಯಾರಿಗೂ ತಿಳಿಸಬಾರದು. ನಾನು ಪದ್ಮಾವತಿಯವರನ್ನು ನೋಡುವ ನೆಪದಲ್ಲಿ ಅಲ್ಲಿಗೆ ಬರುತ್ತೇನೆ. ಆ ದಿನ ನಮ್ಮಿಬ್ಬರ ಮತ್ತು ಶಂಕರನ ಭವಿಷ್ಯವನ್ನು ನಿರ್ಧರಿಸತಕ್ಕ ಒಂದು ತೀರ್ಮಾನ ತೆಗೆದುಕೊಳ್ಳಬೇಕಾಗಿದೆ. ನನ್ನ ಅಂದಾಜಿನ ಪ್ರಕಾರ ನನ್ನ ಪ್ಲಾನ್ ಯಶಸ್ವಿಯಾದರೆ ನೀವೂ, ನಿಮ್ಮ ಕೂಟದವರೂ ಆ ದಿನ ಒಂದು ಸಣ್ಣ ಹೋರಾಟಕ್ಕೆ ಸಿದ್ಧರಾಗಿರಬೇಕಾಗುತ್ತದೆ. ಇಪ್ಪತ್ತೈದು ಅಥವಾ ಮೂವತ್ತು ಮೈಲಿಯ ಪ್ರಯಾಣಕ್ಕೂ ಸಿದ್ಧರಾಗಿರಬೇಕಾಗುತ್ತದೆ. ನಾನು ಬರಲು ಅನಾನುಕೂಲವಾದರೆ ನಿಮಗೆ ಮುಂಚಿತವಾಗಿ ಬರೆಯುತ್ತೇನೆ."

"ಅದಕ್ಕೇ ನಿಮ್ಮನ್ನು ಮಾಸ್ಟರ್ ಟ್ಯಾಕ್ಟೀಷನ್ ಅಂತ ಕರೆದದ್ದು. ಏನೋ ಪ್ಲಾನ್ ಹಾಕ್ತಾ ಇದ್ದೀರಿ. ಆಗಲಿ ಆ ದಿನ ತಪ್ಪದೆ ಪದ್ಮಾವತಿಯವರ ಮನೆಯಲ್ಲಿ ಕಾದಿರುತ್ತೇನೆ" ಎಂದು ಚಂದ್ರಹಾಸನು ಹೇಳಿದನು.

ನಂತರ ಇಬ್ಬರೂ ಕಾರಿದ್ದಲ್ಲಿಗೆ ಹೋಗಿ ಸಿರಗೂರಿಗೆ ಹೊರಟರು. ದಾರಿಯಲ್ಲಿ ಯಥಾಪ್ರಕಾರ ಚಂದ್ರಹಾಸನು ಹಿಂದಿನ ಸೀಟಿನಲ್ಲಿ ಮುಸುಕು ಹಾಕಿಕೊಂಡು ಮಲಗಿದ್ದನು ಮಧ್ಯಾಹ್ನ ಚಂಚಲೆಯ ಮನೆಗೆ ಹೋದಾಗ ಒಂದು ಗಂಟೆಯಾಗಿತ್ತು. ಊಟವಾದ ಬಳಿಕ ಚಂದ್ರಹಾಸನು ಸ್ಥಳೀಯ ಕ್ರಾಂತಿಕೂಟದವರ ಸಹಾಯದಿಂದ ಚಂಚಲೆಗೆ ಬೇಕಾಗಿದ್ದ ರಿವಾಲ್ವಾರ್ ತೋಟಾಗಳನ್ನು ತರಿಸಿಕೊಟ್ಟು, ಚಂಚಲೆಯ ರಕ್ಷಣೆಗೆ ಸೂಕ್ತ ವ್ಯವಸ್ಥೆ ಮಾಡಿ ಶ್ರೀಪುರಕ್ಕೆ ಪ್ರಯಾಣ ಬೆಳೆಸಿದನು.

೧೮

ಇಸ್ಮೇಯಿಲನ ಮರಣದಿಂದ ಶಂಕರನು ಕೋಪದಿಂದ ರೌದ್ರಾವತಾರವನ್ನು ತಾಳಿದ್ದನು. ರಕ್ತಕೇಸರಿಯ ಕೊಲೆಯಾದ ಮೇಲೆ, ಇಸ್ಮೇಯಿಲನು ಶಂಕರನ ಬಲಗೈಯಂತಿದ್ದನು. ಕೊಲೆ ದರೋಡೆಗಳಿಗೆ ಪೂರ್ವಭಾವಿ ಸಿದ್ಧತೆ ಮಾಡುವುದರಲ್ಲಿ ಇಸ್ಮೇಯಿಲ್ ನಿಪುಣನಾಗಿದ್ದನು. ಸೌಮ್ಯಾಶ್ರಮದ ದಂಡಯಾತ್ರೆಯಲ್ಲಿ ವಿನಃ ಉಳಿದ ಸಂದರ್ಭಗಳಲ್ಲಿ ಅವನು ಸೋಲನ್ನೇ ಕಂಡವನಲ್ಲ. ಅವನ ಕೊಲೆಯಿಂದ ಶಂಕರನ ಬಲಗೈ ಮುರಿದಂತಾಗಿತ್ತು. ಚುನಾವಣೆಯಲ್ಲಾದ ಪರಾಭವದ ಜೊತೆಗೆ ಇಸ್ಮೇಯಿಲನ ಕೊಲೆಯಾಗಿದ್ದುದು ಶಂಕರನಿಗೆ ಹುಣ್ಣಿನ ಮೇಲೆ ಬರೆ ಎಳೆದಂತಾಗಿತ್ತು. ತನ್ನ ಬದ್ಧ ವೈರಿ ಚಂದ್ರಹಾಸನು ಇನ್ನೂ ಬದುಕಿದ್ದುದು ಸಹಿಸಲಾರದ ಕುತ್ತಾಗಿತ್ತು. ಅವನನ್ನು ಹತ್ಯೆ ಮಾಡಲು ಅಂತಿಮ ಪ್ರಯತ್ನಕ್ಕೆ ಸರ್ವ ಸಿದ್ಧತೆ ಮಾಡಿಕೊಳ್ಳುತ್ತಿದ್ದನು. ಜೊತೆಗೆ ರಾಜ್ಯದಲ್ಲಿ ಅರಾಜಕತೆಯನ್ನು ವ್ಯಾಪಕವಾಗಿ ಹಬ್ಬಿಸುವ ಉದ್ದೇಶದಿಂದ ವಿಧ್ವಂಸಕ

ಕೃತ್ಯಗಳನ್ನು ದ್ವಿಗುಣಗೊಳಿಸಿದ್ದನು. ಕಳ್ಳಕಾಕರೂ, ಪುಂಡು ಪೋಕರಿಗಳೂ, ಕಳ್ಳನೋಟುಗಳನ್ನು ಸೃಷ್ಟಿಸುವವರೂ, ಕಳ್ಳಭಟ್ಟಿ ಸಾರಾಯಿ ಮಾಡುವವರೂ, ಕಳ್ಳ ಸಾಗಾಣಿಕೆಯವರೂ, ಕ್ರಾಂತಿಸೇನೆಯ ಪೋಷಾಕಿನಲ್ಲಿ ತಮ್ಮ ಅಕ್ರಮ ವ್ಯವಹಾರಗಳನ್ನು ನಿರಾತಂಕವಾಗಿ ನಡೆಸುತ್ತಿದ್ದರು.

ಕ್ರಾಂತಿಕೂಟದವರೂ ಸಹ ತಮ್ಮ ಅಳಿವು ಉಳಿವಿನ ಅಂತಿಮ ಹೋರಾಟಕ್ಕೆ ಸಿದ್ಧರಾಗುತ್ತಿದ್ದರು. ಚಂದ್ರಹಾಸನು ಸಿರಗೂರಿನಿಂದ ಬಂದ ತಕ್ಷಣ ಕ್ರಾಂತಿಕೂಟದ ಕೇಂದ್ರ ಸಮಿತಿಯ ಸಭೆಯನ್ನು ಸೇರಿದ್ದನು. ಅದುವರೆಗೆ ಕ್ರಾಂತಿಕೂಟದವರು ಸಾಮಾನ್ಯವಾಗಿ ಆತ್ಮರಕ್ಷಣೆಗಾಗಿ ಹೋರಾಡುತ್ತಿದ್ದರು. ಕ್ರಾಂತಿಸೇನೆಯವರು ತಮ್ಮ ಮೇಲೆ ಬಿದ್ದಾಗ ಅವರನ್ನು ಸಾಯಿಸುತ್ತಿದ್ದರು. ಈ ಧೋರಣೆಯ ದೆಸೆಯಿಂದ ಶಂಕರನ ಕೈ ಮೇಲಾಗಿದೆಯೆಂದು ಕೇಂದ್ರ ಸಮಿತಿಯ ಅಭಿಪ್ರಾಯವಾಗಿತ್ತು. ಶಂಕರನನ್ನು ಹತ ಮಾಡಬೇಕಾದರೆ ಆತ್ಮರಕ್ಷಣೆಯ ಧೋರಣೆಯನ್ನು ಬಿಟ್ಟು ಅತಿಕ್ರಮಣದ ಧೋರಣೆಯನ್ನು ಕೈಗೊಳ್ಳುವುದು ಅನಿವಾರ್ಯವೆಂದು ಕೇಂದ್ರ ಸಮಿತಿಯವರು ತೀರ್ಮಾನ ಮಾಡಿದರು. ಈ ತೀರ್ಮಾನಕ್ಕೆ ಅನುಗುಣವಾಗಿ ಕ್ರಾಂತಿಕೂಟದವರು ಶಂಕರನ ಕೊಲೆಗೆ ಸಂಚು ಮಾಡುತ್ತಿದ್ದರು. ಆದರೆ ಶಂಕರನನ್ನು ಕೊಲ್ಲುವುದು ಅಷ್ಟು ಸುಲಭವಾಗಿರಲಿಲ್ಲ. ಅವನಿಗೂ ಚಂದ್ರಹಾಸನಿಗಿದ್ದಂತೆ ಪ್ರಬಲವಾದ ರಕ್ಷಣೆಯಿತ್ತು. ಅಲ್ಲದೆ, ಅವನು ಕ್ರಾಂತಿಕೂಟದವರ ಕಣ್ಣಿಗೆ ಬೀಳದಂತೆ ಓಡಾಡುತ್ತಿದ್ದನು.

ಇತ್ತ ಕ್ರಾಂತಿಕೂಟದವರೂ, ಕ್ರಾಂತಿಸೇನೆಯವರೂ ಅಂತಿಮ ಹೋರಾಟಕ್ಕೆ ಮಲಸತ್ತು, ಸಿದ್ಧತೆಗಳನ್ನು ಮಾಡುತ್ತಿರುವಾಗ, ಅತ್ತ ಚಂಚಲೆ ತಾರೀಖು ಇಪ್ಪತ್ತಾರರಂದು ಅನಿಲಪುರದ ಕೋಟೆಗೆ ಹೋಗಲಿಕ್ಕಾಗಿ ಸಿದ್ಧತೆ ಮಾಡುತ್ತಿದ್ದಳು. ತನ್ನ ಹಂಚಿಕೆಯನ್ನು ಕುರಿತು ಹಗಲಿರಳೂ ಚಿಂತಿಸುತ್ತಿದ್ದಳು. ಈ ಮಧ್ಯೆ ಏಕಾಂಗಿಯಾಗಿ ಆಗಾಗ ಗುಡ್ಡಕ್ಕೆ ಹೋಗಿ ರಿವಾಲ್ವಾರ್ ಹಾರಿಸುವುದನ್ನು ಅಭ್ಯಾಸ ಮಾಡುತ್ತಿದ್ದಳು. ಹಿಂದಿನ ಕಾಲದಲ್ಲಾಗಿದ್ದರೆ ಅವಳು ಏಕಾಂಗಿಯಾಗಿ ಸರ್ವಥಾ ಗುಡ್ಡಕ್ಕೆ ಹೋಗುತ್ತಿರಲಿಲ್ಲ. ಆದರೆ ಅಂದು ಸರ್ವತ್ಯಾಗಕ್ಕೂ ಸಿದ್ಧಳಾಗಿದ್ದ ಅವಳು ಅಂಜಿಕೆಯನ್ನು ಸಂಪೂರ್ಣವಾಗಿ ಮರೆತಿದ್ದಳು. ಕೋಟೆಗೆ ಹೋಗುವ ಮುನ್ನ ಅವಳು ಕೆಲವು ಕೆಲಸಗಳನ್ನು ಪೂರೈಸಬೇಕಾಗಿತ್ತು. ಸ್ವರ್ಗಸ್ಥರಾಗಿದ್ದ ತನ್ನ ಗಂಡ, ಮಗ ಮತ್ತು ಅತ್ತೆ ಇವರುಗಳ ಸ್ಮಾರಕಾರ್ಥವಾಗಿ ಸ್ಮಶಾನದಲ್ಲಿ ಅಮೃತಶಿಲೆಯಿಂದ ಸಮಾಧಿಗಳನ್ನು ಕಟ್ಟಿಸುವ ಕಾರ್ಯವನ್ನು ಹಿಡಿದಿದ್ದಳು. ಇಪ್ಪತ್ತೈದನೇ ತಾರೀಖಿನೊಳಗಾಗಿ ಆ ಕಾರ್ಯ ಮುಗಿಯಬೇಕಾಗಿತ್ತು.

ಅಲ್ಲದೆ, ಗೋಪಾಲನು ಬಿಟ್ಟು ಹೋಗಿದ್ದ ಹೇರಳವಾದ ಆಸ್ತಿಯ ವಿಚಾರದಲ್ಲಿ ಕೋಟೆಗೆ ಹೋಗುವ ಮುಂಚೆ ಒಂದು ವ್ಯವಸ್ಥೆ ಮಾಡುವುದು ಸೂಕ್ತವೆಂದು ಭಾವಿಸಿದ್ದಳು. ಗೋಪಾಲನ ಸಂಪೂರ್ಣ ಆಸ್ತಿಗೆ ಚಂಚಲೆಯೇ ಸಂಪೂರ್ಣ ಹಕ್ಕುಬಾಧ್ಯಳಾಗಿದ್ದಳು. ತಿಂಗಳ ತಿಥಿ ಆದಂದಿನಿಂದ ಆಸ್ತಿಯ ವಿಚಾರದಲ್ಲಿ ಏನು ಮಾಡಬೇಕೆಂಬುದನ್ನು

ದೀರ್ಘವಾಗಿ ಯೋಚಿಸುತ್ತಿದ್ದಳು. ಆ ವಿಚಾರದಲ್ಲಿ ಒಂದು ನಿರ್ಧಾರಕ್ಕೆ ಬಂದ ನಂತರ, ಗೋಪಾಲನ ಆಪ್ತಮಿತ್ರನಾಗಿದ್ದ ಸಿರಗೂರಿನ ಸುಪ್ರಸಿದ್ಧ ವಕೀಲ್ ಚಿತ್ತರಂಜನನ್ನು ಬರಮಾಡಿಕೊಂಡು ಆಸ್ತಿ ವಿಚಾರದಲ್ಲಿ ತನ್ನ ಇಂಗಿತವನ್ನು ತಿಳಿಸಿದಳು. ಚಿತ್ತರಂಜನನು ಅವಳ ಇಚ್ಛೆಗನುಗುಣವಾಗಿ ಅವಳ ಮರಣ ಶಾಸನವನ್ನು ಬರೆಸಿದನು.

ತಾರೀಖು ಇಪ್ಪತ್ತೈದರಂದು ಮರಣಶಾಸನ ರಿಜಿಸ್ಟ್ರಾಯಿತು. ಅವಳು ತನ್ನ ಮರಣಶಾಸನದಲ್ಲಿ ಮೂರನೇ ಒಂದು ಭಾಗದ ಆಸ್ತಿ ಗಂಗಾಧರ ಮತ್ತು ಊರ್ಮಿಳೆ ಇವರುಗಳಿಗೆ ಸೇರತಕ್ಕದೆಂದೂ, ಮೂರನೇ ಒಂದು ಭಾಗದ ಆಸ್ತಿ ಗೋಪಾಲನ ಬಂಧುಗಳಲ್ಲಿ ಬಹಳ ಬಡವರಾಗಿದ್ದ ಶಾರದಾಂಬ ಮುಂತಾದ ಆರು ಜನರಿಗೆ ಸೇರತಕ್ಕದೆಂದೂ, ಉಳಿದ ಮೂರನೇ ಒಂದು ಭಾಗದ ಆಸ್ತಿ ಗೋಪಾಲನ ಹೆಸರಿನಲ್ಲಿ ಧರ್ಮಕಾರ್ಯಕ್ಕೆ ವಿನಿಯೋಗವಾಗತಕ್ಕದೆಂದೂ ವಿಧಾಯಕ ಮಾಡಿಸಿದ್ದಳು. ಅಲ್ಲದೆ, ಬ್ಯಾಂಕಿನಲ್ಲಿದ್ದ ಹಣದಲ್ಲಿ ತನ್ನ ತಂದೆ ಖಾಯಿಲೆ ಬಿದ್ದಾಗ ತನಗೆ ಆಶ್ರಯ ನೀಡಿದ್ದ ತನ್ನ ಗೆಳತಿ ಗೌರಿಯ ತಾಯಿ ಪದ್ಮಾವತಿಗೆ ಐದುಸಾವಿರ ರೂಪಾಯಿಗಳನ್ನು ಕೊಡತಕ್ಕದೆಂದೂ, ಬಹಳ ದಿನಗಳಿಂದ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಚಿದಂಬರನಿಗೂ, ಅಡುಗೆಯವನಿಗೂ, ಮನೆಗೆಲಸದ ಹೆಣ್ಣಾಳಿಗೂ, ತನ್ನ ಕಾರಿನ ಡ್ರೈವರಿಗೂ ತಲಾ ಮೂರು ಸಾವಿರ ರೂಪಾಯಿಗಳಂತೆ ಕೊಡತಕ್ಕದೆಂದೂ ವಿಧಾಯಕ ಮಾಡಿದ್ದಳು. ಮರಣ ಶಾಸನವನ್ನು ಅನುಷ್ಠಾನಕ್ಕೆ ತರತಕ್ಕ ಅಧಿಕಾರವನ್ನು ಚಿತ್ತರಂಜನನಿಗೆ ವಹಿಸಿದ್ದಳು.

ಇಪ್ಪತ್ತಾರನೆಯ ತಾರೀಖು ಸಮೀಪಿಸಿದಂತೆಲ್ಲಾ ಚಂಚಲೆಯ ಮನಸ್ಸಿನಲ್ಲಿ ಅಶಾಂತಿ ಹೆಚ್ಚಾಗುತ್ತಾ ಬರುತ್ತಿತ್ತು. ಕೋರ್ಟಿಗೆ ಹೋದ ಮೇಲೆ ಏನು ಮಾಡಬೇಕು? ಹೇಗೆ ಮಾಡಬೇಕು? ಎಂಬುದೇ ಅವಳ ಚಿಂತೆಯ ಮೂಲವಾಗಿತ್ತು. ಅಕಸ್ಮಾತ್ ತನ್ನ ತಂತ್ರ ಶಂಕರನಿಗೆ ಮೊದಲೇ ಗೊತ್ತಾಗಿ, ಅವನು ತನ್ನನ್ನು ಸೆರೆಹಿಡಿದರೆ ಗತಿ ಏನೆಂದೂ ಸಹ ಯೋಚಿಸುತ್ತಿದ್ದಳು. ಆ ನೀಚನ ಕೈಯಲ್ಲಿ ಸೆರೆಯಾಳಾಗಿ ಸಿಕ್ಕರೆ ಅವನು ಮಾನಭಂಗ ಮಾಡುವುದರ ಜೊತೆಗೆ ತನ್ನನ್ನು ಚಿತ್ರಹಿಂಸೆಗೆ ಗುರಿಪಡಿಸಬಹುದೆಂಬ ಭಯವೂ ಅವಳನ್ನು ಬಾಧಿಸುತ್ತಿತ್ತು. ಚಂದ್ರಹಾಸನನ್ನು ಪುನಃ ಕರೆಸಿ ಅವನೊಡನೆ ಎಲ್ಲಾ ಸಾಧಕ ಬಾಧಕಗಳನ್ನೂ ಚರ್ಚಿಸಿ ಮುಂದಿನ ಹೆಜ್ಜೆ ಇಡಬೇಕೆಂದು ಒಂದೆರಡು ಸಾರಿ ಯೋಚಿಸಿದಳು. ಆದರೆ ಚಂದ್ರಹಾಸನನ್ನು ಕರೆಸಿದರೆ ಅನುಮಾನಕ್ಕೆ ಆಸ್ಪದವಾಗುತ್ತೆಂಬ ಕಾರಣದಿಂದ ಆ ಯೋಚನೆಯನ್ನು ಕೈಬಿಟ್ಟಳು. "ಚಂದ್ರಹಾಸ ಇಲ್ಲಿದ್ದಾಗ ಗುಟ್ಟು ಮಾಡದೆ ಎಲ್ಲಾ ವಿಚಾರಗಳನ್ನು ಅವರಿಗೆ ತಿಳಿಸಬೇಕಾಗಿತ್ತು" ಎಂದು ಮನಸ್ಸಿನಲ್ಲೇ ಪಶ್ಚಾತ್ತಾಪ ಪಡುತ್ತಿದ್ದಳು.

ತಾರೀಖು ಇಪ್ಪತ್ನಾಲ್ಕರಂದು ಅವಳ ಮನಸ್ಸು ಅಲ್ಲೋಲಕಲ್ಲೋಲ ಪರಿಸ್ಥಿತಿಯಲ್ಲಿತ್ತು. ಅವಳ ಮನಸ್ಸಿನಲ್ಲಿ ಏನೋ ತಿಕ್ಕಾಟ ನಡೆಯುತ್ತಿರುವಂತೆ ತೋರುತ್ತಿತ್ತು. ಅಳಿವು ಉಳಿವಿನ ನಿರ್ಣಯವನ್ನು ತೆಗೆದುಕೊಳ್ಳುವ ಮುನ್ನ ಸಾಧಕಬಾಧಕಗಳನ್ನು ತುಲನೆ ಮಾಡುತ್ತಿರುವವಳಂತೆ ಕಾಣುತ್ತಿದ್ದಳು. ಸ್ಮಶಾನದಲ್ಲಿ ಸಮಾಧಿಗಳ ನಿರ್ಮಾಣದ ಕೆಲಸ

ಅಂತಿಮಘಟ್ಟವನ್ನು ಮುಟ್ಟಿತು. ಆ ದಿನ ಬೆಳಿಗ್ಗೆ ಸ್ಮಶಾನಕ್ಕೆ ಹೋಗಿ ಸಮಾಧಿಗಳ ಮೇಲೆ ಸ್ವರ್ಗಸ್ಥರಾದವರ ಹೆಸರುಗಳನ್ನು ಕೆತ್ತುವ ವಿಚಾರದಲ್ಲಿ ಕಂಟ್ರಾಕ್ಟರಿಗೆ ಸೂಕ್ತ ಸಲಹೆ ನೀಡಿ ಬಂದಿದ್ದಳು.

ಆ ನಂತರ ತನ್ನ ಕೊಠಡಿಯಲ್ಲಿ ಏಕಾಂಗಿಯಾಗಿ ಕುಳಿತು ಯೋಚಿಸುತ್ತಿದ್ದಳು. ಯೋಚಿಸಿ ಯೋಚಿಸಿ ಮನಸ್ಸು ಭಾರವಾದಂತಾಗಿ ಹಾಗೆಯೇ ಹಾಸಿಗೆಯ ಮೇಲೆ ಮಲಗಿದ್ದಳು. ಮಲಗಿದ್ದರೂ ನಿದ್ದೆ ಬರಲಿಲ್ಲ. ಗೋಪಾಲನ ಸೋದರತ್ತೆ ಶಾರದಾಂಬ ಅವಳ ಕೊಠಡಿಗೆ ಹೋಗಿ "ಏನೇ ಚಂಚಲಾ, ನಿನ್ನ ಮುಖ ಬಹಳ ಬಾಡಿ ಹೋಗಿದೆ? ಹುಷಾರಿಲ್ಲೇನೆ?" ಎಂದು ಕೇಳಿದಳು. "ಏನಿಲ್ಲ ಅಜ್ಜೀ, ಸ್ವಲ್ಪ ತಲೆನೋವು ಅಷ್ಟೇ" ಎಂದು ಚಂಚಲೆ ಹೇಳಿದಳು.

ಹಗಲೆಲ್ಲಾ ಹಾಗೆಯೇ ಮಲಗಿದ್ದಳು. ಸಾಯಂಕಾಲ ಐದು ಗಂಟೆಯ ಹೊತ್ತಿಗೆ ಕಂಟ್ರಾಕ್ಟರ್ ಬಂದು ಸಮಾಧಿಗಳ ಕೆಲಸ ಮುಗಿಯಿತೆಂದು ಹೇಳಿದನು. ಚಂಚಲೆ ಅವನಿಗೆ ಸಲ್ಲಬೇಕಾಗಿದ್ದ ಹಣವನೆಲ್ಲಾ ಪಾವತಿ ಮಾಡಿದಳು. ನಂತರ ಪೂಜಾಸಾಮಗ್ರಿಗಳನ್ನು ತೆಗೆದುಕೊಂಡು ಶಾರದಾಂಬಳ ಜೊತೆಯಲ್ಲಿ ಸ್ಮಶಾನಕ್ಕೆ ಹೊದಳು. ಸಮಾಧಿಗೆ ಪೂಜೆ ಮಾಡಿದಳು. ಗಂಡನ ಸಮಾಧಿಯ ಮುಂದೆ ನೀವು "ನನ್ನ ಕಾರ್ಯಕ್ಕೆ ಜಯವಾಗುವಂತೆ ಹರಸಿ" ಎಂದು ಜೀವಂತರಾಗಿರುವವರನ್ನು ಕೇಳಿಕೊಳ್ಳುವಂತೆ ಮನಸ್ಸಿನಲ್ಲೇ ಪ್ರಾರ್ಥಿಸಿದಳು. ಮಗನ ಸಮಾಧಿಯ ಮುಂದೆ ನಿಂತು ಅತ್ತಳು. ಶಾರದಾಂಬ ಅವಳನ್ನು ಸಂತೈಸಿ ಮನೆಗೆ ಕರೆದುಕೊಂಡು ಹೋದಳು.

ಸಾಮೂಹಿಕ ಕೊಲೆಯಾದಂದಿನಿಂದ ಚಂಚಲೆ ದೇವರಕೋಣೆಗೆ ಹೊಗಿರಲಿಲ್ಲ. ಸತ್ತವರ ಜೊತೆಯಲ್ಲಿಯೇ ಅವಳ ದೈವಭಕ್ತಿಯೂ ಸತ್ತು ಹೋಗಿತ್ತು. ಸಿದ್ಧಾನಂದರು ಅವಳಿಗೆ ನೀಡಿದ್ದ ಉಪದೇಶದಿಂದಲೂ ಸಹ ಅವಳಿಗೆ ಆ ಭಕ್ತಿ ತಿರುಗಿ ಬಂದಿರಲಿಲ್ಲ. ಅವಳಿಗೆ ದೇವರಿದ್ದಾನೆಂಬ ನಂಬಿಕೆ ಶಿಥಿಲವಾಗಿತ್ತು; ಆದರೆ ದೇವರಿಲ್ಲವೆಂಬ ಭಾವನೆ ನಿರ್ದಿಷ್ಟವಾಗಿ ಮೂಡಿ ಬಂದಿರಲಿಲ್ಲ. ಅತಿ ಕಷ್ಟದಲ್ಲಿರುವ ಕೆಲವರಿಗೆ ತಮ್ಮ ಶಕ್ತಿ ಸಾಹಸಗಳೆಲ್ಲವೂ ವ್ಯರ್ಥವೆನಿಸಿದಾಗ, ಬೇರೊಬ್ಬರ ಸಹಾಯ ದೊರಕದಿದ್ದಾಗ, ತಮಗೆ ಸಹಾಯ ಮಾಡುವ ಯಾವುದೋ ಅಗೋಚರ ಶಕ್ತಿ ಇದೆ ಎಂಬ ಕಲ್ಪನೆ ಮನಸ್ಸಿನಲ್ಲಿ ತನ್ನಷ್ಟಕ್ಕೆ ತಾನೇ ಉತ್ಪತ್ತಿಯಾಗುತ್ತದೆ. ಚಂಚಲೆ ದೇವರನ್ನು ಅಲ್ಲಗಳೆದಿದ್ದರೂ, ತಡೆಯಲಾರದ ಮಾನಸಿಕ ಯಾತನೆಯಿಂದ ಅಂದು ಅವಳಿಗೆ ಅಂತಹ ಕಲ್ಪನೆ ಮನಸ್ಸಿನಲ್ಲುಂಟಾಗಿತ್ತು. ದೇವರ ಕೋಣೆಗೆ ಹೋಗಿ ಬಾಗಿಲನ್ನು ಹಾಕಿಕೊಂಡಳು. ದೇವರ ಮೇಲೆ ಕೋಪಗೊಂಡವಳಂತೆ ದೇವರನ್ನು ಕುರಿತು ಪ್ರಾರ್ಥಿಸುತ್ತಿದ್ದಳು.

"ದೇವರೇ, ನೀನಿರುವುದು ನಿಜವಾದರೆ ನನ್ನ ಮನಸ್ಸಿಗೆ ಶಾಂತಿಯನ್ನು ಕೊಡು; ನನಗೆ ಧೈರ್ಯವನ್ನು ಕೊಡು; ದುಷ್ಟ ಶಂಕರನು ನನ್ನಿಂದ ಹತನಾಗುವಂತೆ ಮಾಡು. ನಿನ್ನಿಂದ ಇನ್ನೇನೂ ನಾನು ಬಯಸುವುದಿಲ್ಲ" ಎಂದು ಆಗ್ರಹ ಪೂರ್ವಕವಾಗಿ ಮನಸ್ಸಿನಲ್ಲೇ ದೇವರನ್ನು ಕೇಳಿಕೊಂಡಳು.

ದೇವರಕೋಣೆಯಿಂದ ಬಂದ ಮೇಲೆ ಮನಸ್ಸಿನ ಹೊಯ್ದಾಟ ಸಂಪೂರ್ಣ ನಿಲ್ಲದಿದ್ದರೂ, ಮನಸ್ಸು ಸ್ವಲ್ಪ ಹಗುರವಾದಂತಾಗಿತ್ತು. ಆ ನಂತರ ಶಾರದಾಂಬಳ ಹತ್ತಿರ ಸ್ವಲ್ಪ ಹೊತ್ತು ಮಾತನಾಡುತ್ತಾ ಇದ್ದು ಊಟವಾದ ಮೇಲೆ ತನ್ನ ಕೊಠಡಿಗೆ ಹೋಗಿ ಮಲಗಿದಳು. ನಿದ್ರೆ ಸುಸೂತ್ರವಾಗಿ ಬಾರದಿದ್ದುದರಿಂದ ಒಂದು ನಿದ್ದೆಯ ಮಾತ್ರೆಯನ್ನು ನುಂಗಿ, ನೀರನ್ನು ಕುಡಿದಳು. ಅರ್ಧ ಗಂಟೆಯ ನಂತರ ಸುಖವಾಗಿ ನಿದ್ದೆ ಬಂತು. ಅವಳು ನಿದ್ದೆ ಮಾಡುತ್ತಿದ್ದಾಗ ಬೆಳಗಿನ ಜಾವ ಅವಳಿಗೊಂದು ಕನಸಾಯಿತು.

ಕನಸಿನಲ್ಲಿ ಅವಳೂ, ಚಂದ್ರಹಾಸನೂ ಅನಿಲಪುರದ ಕೋಟೆಗೆ ಹೋಗಿದ್ದರು. ಕೋಟೆಯಲ್ಲಿ ಒಬ್ಬರನ್ನೊಬ್ಬರು ಆಲಂಗಿಸಿ ಮುತ್ತಿಟ್ಟು, ಮನಸ್ವೀ ವಿಹರಿಸಿ, ನಂತರ ಸರೋವರದಲ್ಲಿ ಜಲಕ್ರೀಡೆಯಾಡುತ್ತಿದ್ದರು. ಚಂದ್ರನ ಬೆಳಕು ಆಹ್ಲಾದಕರವಾಗಿತ್ತು. ಚಂಚಲೆ ಚಂದ್ರಹಾಸನಿಗೆ ಚಂದ್ರನನ್ನು ತೋರಿಸಿ "ಅವನೂ ಚಂದ್ರಾ, ನೀವೂ ಚಂದ್ರಾ" ಎನ್ನುತ್ತಿದ್ದಳು. ಅಷ್ಟರಲ್ಲಿ ಎಲ್ಲಿಂದಲೋ ಕತ್ತಲಲ್ಲಿ "ಅವನು ಚಂದ್ರ; ನಾನು ಶಂಕರ" ಎಂದು ಯಾರೋ ಕೂಗಿದಂತಾಯಿತು. ಮರುಕ್ಷಣದಲ್ಲಿಯೇ "ಢಾಂ" ಎಂದು ರೈಫಲ್ ಹಾರಿಸಿದ ಶಬ್ದವಾಯಿತು. ಅವಳೊಡನೆ ಜಲಕ್ರೀಡೆಯಾಡುತ್ತಿದ್ದ ಚಂದ್ರಹಾಸನು ನೀರಿನಲ್ಲಿ ಬಿದ್ದನು. ನೀರೆಲ್ಲ ರಕ್ತಮಯವಾಗಿತ್ತು. ಅವಳು ಚಂದ್ರಹಾಸನನ್ನು ಮೇಲಕ್ಕೆತ್ತಲು ಪ್ರಯತ್ನಿಸುತ್ತಿರುವಾಗ ಇಸ್ಮೇಯಿಲ್ ನೀರಿಗೆ ಹಾರಿ, ಬತ್ತಲೆಯಲ್ಲಿದ್ದ ಅವಳನ್ನು ಹಿಡಿದುಕೊಂಡು ಹೋಗಿ, ಸರೋವರದ ದಡದಲ್ಲಿ ನಿಂತಿದ್ದ ಶಂಕರನ ಮುಂದೆ ನಿಲ್ಲಿಸಿದನು. ಶಂಕರನು ಅವಳನ್ನು ಅಣುಕು ಧ್ವನಿಯಲ್ಲಿ ಪರಿಹಾಸ್ಯ ಮಾಡುತ್ತಾ "ನಿನ್ನ ಮಿಂಡ ಎಲ್ಲಿ ಹೋದ?" ಎಂದು ಪ್ರಶ್ನಿಸುತ್ತಿದ್ದನು.

ಚಂಚಲೆ ಆ ಕನಸನ್ನು ನೋಡಿ ಭಯದಿಂದ ನಡುಗುತ್ತಾ ಎಚ್ಚರಗೊಂಡಳು. ಆಮೇಲೆ ನಿದ್ದೆ ಹತ್ತಲಿಲ್ಲ. ಕನಸಿನಲ್ಲಿ ಅವಳು ನೋಡಿದ್ದ ದೃಶ್ಯ ಅವಳ ಮನಸ್ಸಿನಲ್ಲಿ ಪದೇ ಪದೇ ಸುಳಿಯುತ್ತಿತ್ತು. ಮನಸ್ಸಿನಲ್ಲಿ ಸುಪ್ತವಾಗಿ ಅಡಗಿರುವ ಆಸೆ ಅಂಜಿಕೆಗಳು ಕನಸಿನ ಮೂಲ ಕಾರಣವೆಂದು ಅವಳು ಓದಿದ್ದಳು. "ನನ್ನ ಗಂಡ ಸತ್ತು ಇನ್ನೂ ಎರಡು ತಿಂಗಳಾಗಿಲ್ಲ. ಕಣ್ಣೀರು ಇನ್ನೂ ಆರಿಲ್ಲ. ಇಷ್ಟು ಬೇಗ ನನ್ನ ಅಂತರಾಳದಲ್ಲಿ ಚಂದ್ರಹಾಸ ಮನೆ ಮಾಡಿರುವುದು ಆಶ್ಚರ್ಯ! ಕಾಮಕ್ಕೆ ಕಣ್ಣೂ ಇಲ್ಲ; ವಿವೇಚನೆಯೂ ಇಲ್ಲ" ಎಂದು ಮನಸ್ಸಿನಲ್ಲಿಯೇ ಅಂದುಕೊಂಡಳು.

ರಾತ್ರಿ ದುಃಸ್ವಪ್ನವಾಗಿದ್ದರೂ, ಅವಳು ಬೆಳಿಗ್ಗೆ ಹಾಸಿಗೆಯಿಂದ ಎದ್ದಾಗ, ಮನಸ್ಸು ನೆಮ್ಮದಿಯಿಂದ ಇತ್ತು. ಮರುದಿನ ಕೋಟೆಯಲ್ಲಿ ಸಂಭವಿಸಲಿದ್ದ ಎಲ್ಲಾ ಸನ್ನಿವೇಶ ಸಂದರ್ಭಗಳಿಗೂ ಅವಳು ಸಿದ್ಧಳಾಗಿರುವಂತೆ ತೋರುತ್ತಿದ್ದಳು. ಕಳೆದ ಕೆಲವು ದಿನಗಳಿಂದ ಅವಳಿಂದ ದೂರವಾಗಿದ್ದ ಧೈರ್ಯ ಪುನಃ ಹಿಂದಿರುಗಿ ಬಂದಿರುವಂತೆ ಅವಳಿಗೆ ಭಾಸವಾಯಿತು. ಅವಳಿಗೆ ಆ ದಿನವೆಲ್ಲಾ ಬಿಡುವಿಲ್ಲದ ಕೆಲಸವಾಗಿತ್ತು. ಬೆಳಿಗ್ಗೆ ಚಿದಂಬರನನ್ನು ಕರೆದು ಅವನಿಗೆ ಕೆಲವು ಕೆಲಸಗಳನ್ನು ನೇಮಿಸಿದಳು.

"ಚಿದಂಬರ್, ನಾನು ನಾಳೆ ಬೆಳಿಗ್ಗೆ ಶ್ರೀಪುರಕ್ಕೆ ಹೋಗಬೇಕಾಗಿದೆ. ನಾನು ವಾಪಸು ಬರುವುದು ಏಳೆಂಟು ದಿನಗಳಾಗಬಹುದು. ಇವತ್ತು ನಾನು ಸ್ವಲ್ಪ ಪೇಟೆಗೆ ಹೋಗಬೇಕಾಗಿದೆ. ಡ್ರೈವರಿಗೆ ಹೇಳಿರು. ಶ್ರೀಪುರದಲ್ಲಿ ನನ್ನ ಬಂಧು ಒಬ್ಬರಿಗೆ ಕುಡಿಯುವ ಅಭ್ಯಾಸ; ವಯಸ್ಸೂ ಆಗಿದೆ ಅನ್ನು. ಅವರಿಗೆ ಸ್ಕಾಚ್ ವ್ಹಿಸ್ಕಿ ಅಂದರೆ ಬಹಳ ಇಷ್ಟ. ಒಂದು ಬಾಟ್ಲ್ ಉತ್ತಮವಾದ ಸ್ಕಾಚ್ ವ್ಹಿಸ್ಕಿ ತರಬೇಕು, ನನ್ನ ಚಿಕ್ಕಮ್ಮನಿಗೆ ಒಂದು ಸೀರೆ ತರಬೇಕು. ನನ್ನ ತಮ್ಮ ತಂಗಿ ಇವರನ್ನು ನೋಡಿದ್ದೀಯಲ್ಲಾ, ಅವರಿಗೆ ರೆಡಿಮೇಡ್ ಡ್ರೆಸ್ ಸಿಕ್ಕರೆ ತರಬೇಕು. ಅವರಿಗೇನಾದರೂ ಫ್ರೂಟ್ಸ್ ಮತ್ತು ಸ್ವೀಟ್ಸ್ ತರಬೇಕು" ಎಂದು ಚಿದಂಬರನಿಗೆ ವಿಧಿಸಿ, ಅವನ ಕೈಗೆ ಆ ಸಾಮಾನುಗಳಿಗೆ ಬೇಕಾಗುವಷ್ಟು ಹಣವನ್ನು ಕೊಟ್ಟಳು.

ಉಪಹಾರವಾದ ಮೇಲೆ, ಸಿರಗೂರಿನಲ್ಲಿ ತನಗೆ ಆಪ್ತರಾಗಿದ್ದವರ ಮನೆಗಳಿಗೆ ಹೋಗಿ ತಾನು ತೌರುಮನೆಗೆ ಹೋಗಿ ಬರುವುದಾಗಿ ಹೇಳಿ ಬಂದಳು. ಮಧ್ಯಾಹ್ನ ಅವಳ ಮನೆಯಲ್ಲಿ ಮತ್ತು ಜಮೀನುಗಳಲ್ಲಿ ಕೆಲಸ ಮಾಡುತ್ತಿದ್ದ ಆಳುಗಳೆಲ್ಲರನ್ನೂ ಕರೆಸಿ, ಅವರಿಗೆ ಸಲ್ಲಬೇಕಾಗಿ ಸಂಬಳವನ್ನೆಲ್ಲಾ ಪಾವತಿ ಮಾಡಿದ್ದಲ್ಲದೆ, ಅವರಿಗೆ ಯಥೇಚ್ಛವಾಗಿ ಬಹುಮಾನವನ್ನು ನೀಡಿದಳು. ಒಡತಿಯ ಔದಾರ್ಯವನ್ನು ಆಳುಗಳು ಮೆಚ್ಚಿದರು. ಬಹುಶಃ ತವರು ಮನೆಗೆ ಹೋಗುತ್ತಿರುವುದರಿಂದ ಬಹುಮಾನ ಕೊಟ್ಟರೆಂದು ಆಳುಗಳು ಭಾವಿಸಿದರು. ಸಾಯಂಕಾಲ ಸ್ಮಶಾನಕ್ಕೆ ಹೋಗಿ ಸಮಾಧಿಗಳಿಗೆ ಪೂಜೆ ಮಾಡಿದಳು. ಗಂಡನನ್ನೂ ಮಗನನ್ನೂ ಸ್ಮರಿಸಿಕೊಂಡು ಅತ್ತಳು.

ಸ್ಮಶಾನದಿಂದ ಬಂದವಳು, ಕೊಠಡಿಯ ಬಾಗಿಲನ್ನು ಹಾಕಿಕೊಂಡು, ರಾಜ್ಯದ ರಾಜ್ಯಪಾಲರಿಗೊಂದು ಪತ್ರವನ್ನು ಬರೆದು ಅದನ್ನು ಲಕೋಟೆಯಲ್ಲಿ ಹಾಕಿ, ಅಂಟಿಸಿ ತನ್ನ ಕೈಚೀಲದಲ್ಲಿ ಇಟ್ಟುಕೊಂಡಳು. ರಿವಾಲ್ವಾರನ್ನೂ, ತೋಟಾಗಳನ್ನೂ ಅದೇ ಕೈಚೀಲದಲ್ಲಿಟ್ಟು, ಆ ಕೈಚೀಲವನ್ನು ಗಾಡ್ರೇಜ್ ಬೀರುವಿನಲ್ಲಿಟ್ಟು ಬೀಗ ಹಾಕಿದಳು. ನಂತರ ಶಾರದಾಂಬಳ ಜೊತೆಯಲ್ಲಿ ಬಹಳ ಹೊತ್ತು ಮಾತನಾಡುತ್ತಿದ್ದು, ಊಟವಾದ ಮೇಲೆ ನಿದ್ದೆಯ ಮಾತ್ರೆಯನ್ನು ನುಂಗಿ ಮಲಗಿದಳು.

ಮರುದಿನ ಬೆಳಿಗ್ಗೆ, ಚಂಚಲೆ ಐದು ಗಂಟೆಗೆ ಸರಿಯಾಗಿ ಎದ್ದು, ಆರುಗಂಟೆಯೊಳಗಾಗಿ ತನ್ನ ಪ್ರಾಥಃರ್ವಿಧಿಗಳನ್ನು ಮುಗಿಸಿದಳು. ನಂತರ ಮನೆಯಲ್ಲೆಲ್ಲಾ ಓಡಾಡಿದಳು. ನಂತರ ಅಂಗಳಕ್ಕೆ ಹೋಗಿ, ಅಂಗಳದಲ್ಲಿ ತಾನು, ಅನಿಲಕುಮಾರನೂ ಸಾಯಂಕಾಲದ ಹೊತ್ತು ಕುಳಿತುಕೊಳ್ಳುತ್ತಿದ್ದ ಕಲ್ಲುಬೆಂಚಿನ ಮೇಲೆ ಕುಳಿತುಕೊಂಡು, ಮಗನನ್ನು ಸ್ಮರಿಸಿಕೊಂಡು ಅತ್ತಳು. ಪುನಃ ಒಳಕ್ಕೆ ಹೋಗಿ, ದೇವರಕೋಣೆಗೆ ಹೋಗಿ "ದೇವರೇ, ನನ್ನ ಕಾರ್ಯ ಯಶಸ್ವಿ ಆಗುವಂತೆ ಅನುಗ್ರಹಿಸು. ನನ್ನ ತಂದೆಗೂ, ಗಂಡನಿಗೂ, ಮಗನಿಗೂ, ಅತ್ತೆಗೂ ಸದ್ಗತಿಯನ್ನು ಕೊಡು" ಎಂದು ಪ್ರಾರ್ಥನೆ ಸಲ್ಲಿಸಿದಳು. ದೇವರಕೋಣೆಯಿಂದ ಬಂದೊಡನೆ ಅಡಿಗೆಯವನು ಬಂದು, "ಉಪಹಾರ ಸಿದ್ಧವಾಗಿದೆ" ಎಂದು ಹೇಳಿದನು.

ತಾನೂ ಉಪಹಾರ ತಿಂದು, ತನ್ನ ಡ್ರೈವರಿಗೂ ಉಪಹಾರವನ್ನು ಕೊಡಿಸಿದಳು. ಶ್ರೀಪುರಕ್ಕೆ ತೆಗೆದುಕೊಂಡು ಹೋಗಬೇಕಾಗಿದ್ದ ಸಾಮಾನುಗಳೆಲ್ಲವನ್ನೂ ಕಾರಿಗೆ ಹಾಕಿಸಿದಳು. ನಂತರ ತಾನು ಮಲಗುವ ಕೊಠಡಿಗೆ ಹೋದಳು. ಗಾಡ್ರೇಜ್ ಬೀರುವನ್ನು ತೆಗೆದು ತನ್ನ ಕೈಚೀಲವನ್ನು ತೆಗೆದುಕೊಂಡಳು. ಕೈಚೀಲವನ್ನು ಬಿಚ್ಚಿನೋಡಿ, ರಿವಾಲ್ವಾರ್ ಮತ್ತು ತೋಟಾಗಳು ಅದರಲ್ಲಿವೆ ಎಂಬುದನ್ನು ದೃಢಪಡಿಸಿಕೊಂಡಳು. ಮೇಜಿನ ಮೇಲಿದ್ದ ತನ್ನ ತಂದೆತಾಯಿಗಳ, ಗಂಡನ ಮತ್ತು ಅತ್ತೆಯ ಭಾವಚಿತ್ರಗಳಿಗೆ ನಮಸ್ಕರಿಸಿದಳು. ಮಗನ ಭಾವಚಿತ್ರದ ಮುಂದೆ ನಿಂತು "ನನ್ನ ಮುದ್ದು ಕಂದಾ, ನೀನು ಕೀರ್ತಿವಂತನಾಗಿ ಈ ಮನೆಯನ್ನು ಬೆಳಗುತ್ತೀಯಾ ಎಂದು ಕನಸು ಕಾಣುತ್ತಿದ್ದೆ. ಆ ಕನಸಿನ ಸಾಮ್ರಾಜ್ಯ ಪುಡಿಪುಡಿಯಾಯಿತು. ಗೃಹದೇವತೆಯೇ, ನಾನೂ ಅನಾಥಳಾದೆ; ನೀನೂ ಅನಾಥಳಾದೆ. ಹೋಗಿ ಬರುತ್ತೇನೆ" ಎಂದು ಮನಸ್ಸಿನಲ್ಲೇ ನುಡಿದಳು.

ಮಲಗುವ ಕೊಠಡಿಯಿಂದ ಬಂದವಳು, ನಡುಮನೆಯಲ್ಲಿದ್ದ ಶಾರದಾಂಬಳ ಕಾಲಿಗೆರಗಿ ಅವಳಿಗೆ ಕೃತಜ್ಞತೆಯನ್ನರ್ಪಿಸಿ, ಅವಳ ಆಶೀರ್ವಾದವನ್ನು ಪಡೆದಳು. ಬೀಗದ ಕೈಗಳ ಗೊಂಚಲನ್ನೂ, ಹದಿನೈದು ದಿನಗಳ ಖರ್ಚಿಗೆ ಬೇಕಾಗುವಷ್ಟು ಹಣವನ್ನೂ ಶಾರದಾಂಬಳ ಕೈಗೆ ಕೊಟ್ಟು, ಅವಳನ್ನು ಬೀಳ್ಕೊಡಲು ಬಂದಿದ್ದ ನೌಕರರೆಲ್ಲರಿಗೂ ನಮಸ್ಕಾರ ಹೇಳಿ ಅಳುತ್ತಾ ಕಾರನ್ನು ಹತ್ತಿದಳು. ಆ ಸನ್ನಿವೇಶ ಅಲ್ಲಿದ್ದವರೆಲ್ಲರಿಗೂ ಹೃದಯಸ್ಪರ್ಶಿಯಾಗಿತ್ತು. ಡ್ರೈವರ್ ಕಾರನ್ನು ನಡೆಸುತ್ತಿದ್ದನು. ಮನೆ ಕಣ್ಮರೆಯಾಗುವ ವರೆಗೂ ಚಂಚಲೆ ಮನೆಯನ್ನೇ ಹಿಂದಿರುಗಿ ನೋಡುತ್ತಿದ್ದಳು.

"ನನಗೆ ಪ್ರಿಯರಾದವರೆಲ್ಲರೂ ಹೋದಮೇಲೆ ಈ ಮನೆಯ ಮೇಲೆ ನನಗೇಕೆ ಇಷ್ಟೊಂದು ವ್ಯಾಮೋಹ? ಇದಕ್ಕೇ ಬಂಧನವೆನ್ನುವುದು. ಮನಸ್ಸೇ ಬಂಧನವನ್ನು ಕಿತ್ತೊಗೆದು ಕಲ್ಲಾಗು" ಎಂದು ಮನಸ್ಸಿನಲ್ಲೇ ಮನಸ್ಸಿಗೆ ಆಜ್ಞಾಪಿಸಿದಳು.

ಯಾವ ಶಂಕರನೊಡನೆ ವಿವಾಹದ ಪೂರ್ವ ಮೊಟ್ಟಮೊದಲು ರತಿಕ್ರೀಡೆಯ ಆನಂದವನ್ನು ಪಡೆದಿದ್ದಳೋ, ಯಾವನನ್ನು ಹಿಂದೆ ಅವಳು ಆದರ್ಶ ಪುರುಷಸಿಂಹನೆಂದು ಭಾವಿಸಿದ್ದಳೋ, ಅವನನ್ನೇ ಕೊಲ್ಲುವ ಸಲುವಾಗಿ ಶ್ರೀಪುರಕ್ಕೆ ಪ್ರಯಾಣವನ್ನು ಕೈಗೊಂಡಿದ್ದಳು. ಶಂಕರನಿಂದ ಪಡೆದಿದ್ದ ರತಿಸುಖದ ಆನಂದ, ಗೋಪಾಲನಿಂದ ಎಂದೂ ಅವಳಿಗೆ ಲಭಿಸಿರಲಿಲ್ಲ. ಹಿಂದೆ ಪುರುಷಸಿಂಹನಂತೆ ಕಂಡವನು, ಅಂದು ಅವಳ ದೃಷ್ಟಿಯಲ್ಲಿ ದುಷ್ಟ ರಾಕ್ಷಸನಾಗಿದ್ದನು. ಹಿಂದೆ ಗಂಧರ್ವನಂತೆ ಕಂಡವನು, ಅಂದು ಅವಳ ದೃಷ್ಟಿಯಲ್ಲಿ ಘಟಸರ್ಪವಾಗಿದ್ದನು. ಆ ಘಟಸರ್ಪದೊಡನೆ ಎಣೆಯಾಡಿದಕ್ಕಾಗಿ ಪಶ್ಚಾತ್ತಾಪ ಪಡುತ್ತಿದ್ದಳು. ಪ್ರಯಾಣ ಮಾಡುತ್ತಿರುವಾಗ ಎರಡು ದಿನಗಳ ಹಿಂದೆ ನೋಡಿದ್ದ ದುಃಸ್ವಪ್ನದ ನೆನಪಾಯಿತು. ಶಂಕರನು ತನಗೆ ಗೊತ್ತಾಗದಂತೆ ಕ್ರಾಂತಿಸೇನೆಯ ಧೂರ್ತರನ್ನು ಕೋಟೆಯಲ್ಲಿ ಗುಪ್ತವಾಗಿ ನಿಲ್ಲಿಸಿದ್ದರೆ ಏನು ಮಾಡಬೇಕೆಂಬುದನ್ನು ಯೋಚಿಸುತ್ತಿದ್ದಳು. ಶಂಕರನನ್ನು ಕೋಟೆಯಲ್ಲಿ ನೋಡಿದ ನಂತರ, ಏನು ಹೇಳಬೇಕೆಂಬು

ದನ್ನು ಮನನ ಮಾಡುತ್ತಿದ್ದಳು. ಯಾವ ಬಗೆಯಲ್ಲಿ ತನ್ನ ಸೇಡನ್ನು ತೀರಿಸಿಕೊಳ್ಳ ಬೇಕೆಂಬುದನ್ನು ಚಿಂತಿಸುತ್ತಿದ್ದಳು.

ಚಂಚಲೆ ಶ್ರೀಪುರವನ್ನು ಸೇರಿದಾಗ ಮಧ್ಯಾಹ್ನ ಒಂದು ಗಂಟೆಯಾಗಿತ್ತು. ನೇರವಾಗಿ ತನ್ನ ಚಿಕ್ಕಮ್ಮನ ಮನೆಗೆ ಹೋದಳು. ಆ ದಿನ ಅಲ್ಲಿಗೆ ಬರುವುದಾಗಿ ನಾಲ್ಕು ದಿನಗಳ ಹಿಂದೆಯೇ ಕಮಲೆಗೆ ಪತ್ರ ಬರೆದಿದ್ದಳು. ಕಮಲೆ ಅವಳ ಆಗಮನವನ್ನು ನಿರೀಕ್ಷಿಸುತ್ತಾ ಕಾದಿದ್ದಳು. ಅಕ್ಕ ಬರುತ್ತಾಳೆಂಬ ಸಡಗರದಿಂದ ಗಂಗಾಧರನೂ, ಊರ್ಮಿಳೆಯೂ ಆ ದಿನ ಶಾಲೆಗೆ ಹೋಗದೆ, ಮನೆಯಲ್ಲಿಯೇ ಅಕ್ಕನ ಬರುವಿಕೆಗಾಗಿ ಕಾದಿದ್ದರು. ಕಮಲೆ ಬಹಳ ಆದರದಿಂದ ಮಲಮಗಳನ್ನು ಸ್ವಾಗತಿಸಿದಳು. ಅವಳು ಹಿಂದೆ ಯಾವಾಗಲೂ ಅಷ್ಟೊಂದು ಆದರದಿಂದ ಚಂಚಲೆಯನ್ನು ಸ್ವಾಗತಿಸಿರಲಿಲ್ಲವೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿರಲಿಲ್ಲ. ಗಂಡನ ನೆರಳು ಮಾಯವಾದ ನಂತರ ಜೀವನ ನಿರ್ವಹಣೆಯ ಬಿಸಿ ಅವಳಿಗೆ ಚೆನ್ನಾಗಿ ತಗುಲಿತ್ತು. ದುರಹಂಕಾರ ಮಾಯವಾಗಿತ್ತು. ಅವಳ ಆದರ್ಶಪುರುಷ ನಿರಂಜನ ಬೇರೊಂದು ಜಿಲ್ಲೆಗೆ ವರ್ಗ ಮಾಡಿಸಿಕೊಂಡು ಹೋಗಿದ್ದನು. ಕೈಯಲ್ಲಿದ್ದ ದುಡ್ಡು ಕೊಂಚ ಕೊಂಚವಾಗಿ ದಿನೇ ದಿನೇ ಕರಗುತ್ತಿತ್ತು. ಈ ಕಾರಣಗಳಿಂದ ಹಿಂದೆ ಬೇಡವಾಗಿದ್ದ ಚಂಚಲೆ ಅಂದು ಬೇಕಾದವಳಾಗಿದ್ದಳು.

ಚಂಚಲೆ ತಾನು ತಂದಿದ್ದ ಉಡುಗೊರೆಗಳನ್ನೂ, ಹಣ್ಣು ಹಂಪಲು ಮುಂತಾದವುಗಳನ್ನೂ, ಚಿಕ್ಕಮ್ಮನಿಗೂ ಸೋದರ ಸೋದರಿಗೂ ಕೊಟ್ಟಳು. ತಂದೆ ಸತ್ತ ಮೇಲೆ ಗಂಗಾಧರನಿಗೆ ಮನೆಯಲ್ಲಿರುವುದೇ ಬೇಜಾರಾಗಿತ್ತು. ಅಕ್ಕನನ್ನು ನೋಡಿ ಅವನಿಗಾದ ಆನಂದಕ್ಕೆ ಪಾರವೇ ಇರಲಿಲ್ಲ. ಪರೀಕ್ಷೆ ಮುಗಿದ ನಂತರ ತಾನು ಸಿರಗೂರಿಗೆ ಬರುವುದಾಗಿ ಅಮ್ಮನಿಗೆ ಕೇಳಿಸದಂತೆ ಅಕ್ಕನ ಕಿವಿಯಲ್ಲಿ ಹೇಳಿದನು. ಚಂಚಲೆಯು ಖಂಡಿತವಾಗಿಯೂ ಕರೆದುಕೊಂಡು ಹೋಗುವುದಾಗಿ ಅವನ ಕಿವಿಯಲ್ಲಿ ಉಸುರಿದಳು. ಊರ್ಮಿಳೆ ಮೊದಲು ಚಂಚಲೆಯ ಜೊತೆ ಸೇರುತ್ತಲೇ ಇರಲಿಲ್ಲ. ತನ್ನ ತಾಯಿ ಅಂದು ಆದರದಿಂದ ಚಂಚಲೆಯನ್ನು ಕಂಡ ರೀತಿಯನ್ನು ನೋಡಿ, ಅವಳೂ ಸಹ ಚಂಚಲೆಯ ಹತ್ತಿರ ಹೋಗಿ ಪಕ್ಕದಲ್ಲಿ ಕುಳಿತುಕೊಂಡಿದ್ದಳು. ಗೃಹಕೃತ್ಯದ ಮತ್ತು ಇನ್ನಿತರ ಸಂಬಂಧ ಮಾತುಕತೆ ಮುಗಿದ ನಂತರ ಎಲ್ಲರೂ ಒಟ್ಟಾಗಿ ಕುಳಿತು ಊಟ ಮಾಡಿದರು. ಊಟವಾದ ಬಳಿಕ ಚಂಚಲೆ ಸ್ವಲ್ಪ ಹೊತ್ತು ವಿಶ್ರಮಿಸಿಕೊಂಡು ಅನಂತರ ತನ್ನ ಡ್ರೈವರನ್ನು ಕರೆದು ಅವನ ಕೈಗೆ ಐವತ್ತು ರೂಪಾಯಿಗಳನ್ನು ಕೊಟ್ಟು, ನಗರದಲ್ಲಿ ತಿರುಗಾಡಿ ಬರಬಹುದೆಂದೂ, ತಾನು ತನ್ನ ಗೆಳತಿಯರ ಮನೆಗೆ ಹೋಗುವುದರಿಂದ ಸ್ವತಃ ಕಾರನ್ನು ನಡೆಸಿಕೊಂಡು ಹೋಗುವುದಾಗಿಯೂ, ರಾತ್ರಿ ಆತನು ವಾಪಸು ಬಂದು ಮನೆಯಲ್ಲಿಯೇ ಇರಬೇಕೆಂದೂ ಆಜ್ಞಾಪಿಸಿದಳು.

ಚಂಚಲೆ ಮಧ್ಯಾಹ್ನ ಮೂರು ಗಂಟೆಗೆ ಸರಿಯಾಗಿ ಕಾರಿನಲ್ಲಿ ಪದ್ಮಾವತಿಯ ಮನೆಗೆ ಹೋದಳು. ಚಂದ್ರಹಾಸನು ಅವಳಿಗಾಗಿ ಕಾದಿದ್ದನು. ಪದ್ಮಾವತಿಯೊಡನೆ ಮಾತು ಮುಗಿಸಿ, ಟೀ ಕುಡಿದ ನಂತರ, ಚಂದ್ರಹಾಸನೂ, ಚಂಚಲೆಯೂ ಅರ್ಧಗಂಟೆಯ

ಕಾಲ ಏಕಾಂತದಲ್ಲಿ ಸಂಭಾಷಣೆ ನಡೆಸುತ್ತಿದ್ದರು. ಏನು ಮಾತನಾಡಿದರೆಂಬುದು ದೇವರಿಗೇ ಗೊತ್ತು. ಮಾತು ಮುಗಿದ ನಂತರ ಪದ್ಮಾವತಿಯ ಆಶೀರ್ವಾದ ಪಡೆದು, ಚಂಚಲೆ ಪುನಃ ತನ್ನ ಚಿಕ್ಕಮ್ಮನ ಮನೆಗೆ ಹೋದಳು. ಸಂಜೆ ಆರು ಗಂಟೆಯವರೆಗೂ ತನ್ನ ಚಿಕ್ಕಮ್ಮನೊಂದಿಗೂ, ಗಂಗಾಧರನೊಂದಿಗೂ ಆರಾಮವಾಗಿ ಮಾತನಾಡುತ್ತಿದ್ದಳು. ಗಂಗಾಧರನನ್ನು ಪ್ರತ್ಯೇಕ ಕರೆದು ತನ್ನ ಮರಣ ಶಾಸನದ ವಿಚಾರವನ್ನು ಸೂಕ್ಷ್ಮವಾಗಿ ತಿಳಿಸಿದಳು. ಅವನ ಸ್ವಂತ ಖರ್ಚಿಗೋಸ್ಕರ ಅವನ ಕೈಯಲ್ಲಿ ಸ್ವಲ್ಪ ಹಣವನ್ನು ಕೊಟ್ಟಳು. ನಂತರ ಕಮಲೆಯ ಕೈಗೆ ಒಂದು ಲಕೋಟೆಯನ್ನು ಕೊಟ್ಟು "ಚಿಕ್ಕಮ್ಮಾ ಇದರಲ್ಲಿ ಎರಡು ಸಾವಿರ ರೂಪಾಯಿಗಳು ಇವೆ. ದಯವಿಟ್ಟು ಸಂಕೋಚಪಡದೆ ತೆಗೆದು ಕೊಳ್ಳಬೇಕು" ಎಂದಳು.

"ನನಗ್ಯಾಕೆ ಚಂಚಲಾ ಇಷ್ಟೊಂದು ಹಣ? ನನ್ನ ಹತ್ರ ಸ್ವಲ್ಪ ಹಣ ಇದೆ. ಬೇಕಾದಾಗ ಕೇಳ್ತೀನಿ" ಎಂದು ಕಮಲೆ ಹೇಳಿದಳು.

"ಇದು ನಿಮ್ಮ ಹತ್ತಿರ ಇರಲಿ. ನನಗೇನು ದುಡ್ಡಿಗೆ ಕೊರತೆ ಇಲ್ಲ. ನಾನು ನಿಮಗಲ್ಲದೆ ಇನ್ಯಾರಿಗೆ ಕೊಡಬೇಕು?"

"ಚಂಚಲಾ, ನಿನ್ನ ದೊಡ್ಡ ಗುಣ ನಾ ಸರಿಯಾಗಿ ತಿಳ್ಕೊಳ್ಳದೆ ನಿಂಗೆ ಬಹಳ ಹಿಂಸೆ ಕೊಟ್ಟೀನಮ್ಮಾ. ನಂಗೀಗ ಏನು ಹೇಳೂಕೂ ಬಾಯಿ ಬರೋದಿಲ್ಲಾ" ಎಂದು ಕಮಲೆ ಅಳತೊಡಗಿದಳು.

ಚಂಚಲೆ ಅವಳನ್ನು ಸಮಾಧಾನ ಪಡಿಸಿ, ತಾನು ತನ್ನ ಬಾಲ್ಯದ ಗೆಳತಿಯರನ್ನು ನೋಡಿ ಬರುವುದಾಗಿಯೂ, ರಾತ್ರಿ ಊಟಕ್ಕೆ ಬರುವುದು ತಡವಾದರೆ ತನಗೋಸ್ಕರ ಕಾದಿರಬಾರದಾಗಿಯೂ ಹೇಳಿ, ಗಂಗಾಧರನಿಗೂ, ಊರ್ಮಿಳೆಗೂ ಮುತ್ತು ಕೊಟ್ಟು, ಆರು ಗಂಟೆಗೆ ಸರಿಯಾಗಿ ಅನಿಲಗಿರಿಯ ಕೋಟೆಯ ಕಡೆಗೆ ಹೋಗುವ ರಸ್ತೆಯನ್ನು ಹಿಡಿದು ಹೊರಟಳು.

ಮನೆಯನ್ನು ಬಿಟ್ಟಾಗ, ತಂದೆಯ ನೆನಪಾಗಿ ದುಃಖದಿಂದ ಅಳುವಂತಾಗಿತ್ತು. ದುಃಖವನ್ನು ತೋರ್ಪಡಿಸದೆ, ಕಾರನ್ನು ಹತ್ತಿದಳು. ಅವಳು ಕೇವಲ ಅರ್ಧ ಮೈಲಿದೂರ ಹೋಗುವುದರೊಳಗಾಗಿ "ನನ್ನಿಂದ ಈ ಸಾಹಸದ ಕಾರ್ಯ ಸಾಧ್ಯವೇ?" ಎಂಬ ಪ್ರಶ್ನೆ ಅವಳ ಮನಸ್ಸಿನಲ್ಲಿ ಉದ್ಭವಿಸಿತು. ಆ ಪ್ರಶ್ನೆ ಉದ್ಭವಿಸಿದೊಡನೆ ಅಳುಕು ಮನಸಿನಲ್ಲಿ ಸುಳಿದಂತಾಯಿತು. ಚಿತ್ತಸ್ವಾಸ್ಥ್ಯ ಪಲ್ಲಟಗೊಂಡಿತು. ತಕ್ಷಣ ಕಾರನ್ನು ಹಿಂದಿರುಗಿಸಿ ಪುನಃ ತನ್ನ ಚಿಕ್ಕಮ್ಮನ ಮನೆಗೆ ಹೋದಳು. ಅವಳನ್ನು ನೋಡಿದ ಕಮಲೆ "ಯಾಕಮ್ಮಾ ತಕ್ಷಣ ವಾಪಸು ಬಂದೆ?" ಎಂದು ಕೇಳಿದಳು. "ಯಾಕೋ ಸ್ವಲ್ಪ ತಲೆನೋವು ಚಿಕ್ಕಮ್ಮಾ, ತಲೆನೋವಿನ ಮಾತ್ರೆ ನನ್ನ ಸೂಟ್‌ಕೇಸಾಗೇ ಇಟ್ಟಿದ್ದೆ, ಅದನ್ನ ತಗೊಳ್ಳೋಣ ಅಂತ ಬಂದೆ" ಎಂದು ಹೇಳಿ ಮನೆಯಲ್ಲಿಟ್ಟಿದ್ದ ತನ್ನ ಪೆಟ್ಟಿಗೆಯಿಂದ ತಾತ್ಕಾಲಿಕ ಮನಸ್ಥೈರ್ಯವನ್ನು ಕೊಡುವ ಒಂದು ಮಾತ್ರೆಯನ್ನು ನುಂಗಿ ನೀರು ಕುಡಿದಳು. ಇನ್ನೆರಡು ಮಾತ್ರೆಗಳನ್ನು ತೆಗೆದುಕೊಂಡು ತನ್ನ ಕೈಚೀಲಕ್ಕೆ ಹಾಕಿಕೊಂಡಳು. ಹಾಗೆಯೇ

ಮಂಚದ ಮೇಲೆ ಮಲಗಿ ಹತ್ತು ನಿಮಿಷಗಳ ಕಾಲ ವಿಶ್ರಾಂತಿ ಪಡೆದಳು. ಪುನಃ ಧೈರ್ಯ ಬಂದಂತೆ ಭಾಸವಾಯಿತು. ರಾತ್ರಿ ಬರುವುದಾಗಿ ಹೇಳಿ ಪುನಃ ಹೊರಟಳು.

ಶ್ರೀಪುರದ ನಗರ ಮಧ್ಯೆ ಕಾರಿನಲ್ಲಿ ಹೋಗುತ್ತಿದ್ದಾಗ, ಚಂಚಲೆಗೆ ಅವಳ ಬಾಲ್ಯದ ಮತ್ತು ಕೌಮಾರ್ಯದ ಹಲವು ಗತಸಂಗತಿಗಳು ನೆನಪಿಗೆ ಬರುತ್ತಿದ್ದವು. ಆದರೆ ಆ ಸಂಗತಿಗಳನ್ನು ಮನಸ್ಸಿಗೆ ಹಚ್ಚಿಕೊಳ್ಳುವ ವ್ಯವಧಾನ ಅವಳಿಗಿರಲಿಲ್ಲ. ಶಂಕರನನ್ನು ಸಂದರ್ಶಿಸಿದ ನಂತರ ಅಂದಿನ ಅವಳ ಪಾತ್ರವನ್ನು ಯಾವ ರೀತಿ ನಿರ್ವಹಿಸಬೇಕೆಂಬುದೇ ಅವಳ ಮುಂದಿದ್ದ ಮಹಾಪ್ರಶ್ನೆಯಾಗಿತ್ತು. ಶಂಕರನೊಡನೆ ಮಾತನಾಡುವಾಗ ಏನು ಹೇಳಬೇಕೆಂಬುದನ್ನೂ, ಅಂತಿಮದಲ್ಲಿ ತನ್ನ ಸೇಡನ್ನು ಹೇಗೆ ತೀರಿಸಿಕೊಳ್ಳಬೇಕೆಂಬುದನ್ನೂ ಚಿಂತಿಸುತ್ತಿದ್ದಳು. ಅವಳು ಅವನನ್ನು ಸಾಯಿಸಲೂ ಸಿದ್ಧಳಾಗಿದ್ದಳು; ಅದು ಸಾಧ್ಯವಾಗದಿದ್ದರೆ ಅವನ ಕೈಯಲ್ಲಿ ಸಾಯಲೂ ಸಿದ್ಧಳಾಗಿದ್ದಳು. ಆದರೆ ಅವನ ಸೆರೆಯಾಳಾಗಲು ಸಿದ್ಧಳಾಗಿರಲಿಲ್ಲ. ದುರ್ದೈವದಿಂದ ಅವನನ್ನು ಕೊಲ್ಲಲಾಗದೆ ಅವರ ಸೆರೆಯಾಳಾದರೆ ಹೇಗೆ ಆತ್ಮಹತ್ಯೆ ಮಾಡಿಕೊಳ್ಳಬಹುದೆಂಬುದನ್ನೂ ಸಹ ಯೋಚಿಸುತ್ತಿದ್ದಳು. ಹೀಗೆಯೇ ಯೋಚಿಸುತ್ತಾ ಮುಂದೆ ಸಾಗುತ್ತಿರುವಾಗ, ಸ್ವಲ್ಪ ದೂರದಲ್ಲಿ ಅನಿಲಗಿರಿಯ ಮನಮೋಹಕ ದೃಶ್ಯ ಅವಳ ಕಣ್ಣಿಗೆ ಬಿತ್ತು. ಹಿಂದೆ ಹಲವು ಸಾರಿ ಆ ದೃಶ್ಯವನ್ನು ನೋಡಿ ಆಹ್ಲಾದದಿಂದ ಮೈಮರೆಯುತ್ತಿದ್ದಳು. ಆದರೆ ಅಂದು ಅವಳನ್ನಾವರಿಸಿದ್ದ ಸೇಡಿನ ಮನೋಭಾವ ಆಹ್ಲಾದಕ್ಕೆ ಆಸ್ಪದ ಕೊಡುವಂತಿರಲಿಲ್ಲ. ಅವಳ ಮನಸ್ಸೆಲ್ಲವೂ ಸೇಡನ್ನು ಹೇಗೆ ತೀರಿಸಿಕೊಳ್ಳಬೇಕೆಂಬ ವಿಚಾರದಲ್ಲಿ ಮಗ್ನವಾಗಿತ್ತು.

ಹೆದ್ದಾರಿಯನ್ನು ಬಿಟ್ಟು, ಗಿರಿಗೆ ಹೋಗುವ ದಾರಿಯನ್ನು ಹಿಡಿದಳು. ಇನ್ನು ಅರ್ಧಗಂಟೆಯಲ್ಲಿ ಕತ್ತಲಾಗುವ ಸೂಚನೆ ಕಾಣುತ್ತಿತ್ತು. ಗಿರಿಯಲ್ಲಿ ನಿಶ್ಯಬ್ಧ ತಾಂಡವವಾಡುತ್ತಿತ್ತು. ಮನುಷ್ಯರ ಅಥವಾ ವಾಹನಗಳ ಸಪ್ಪಳ ಎಲ್ಲಿಯೂ ಕೇಳಿ ಬರುತ್ತಿರಲಿಲ್ಲ. ಕ್ರಾಂತಿಸೇನೆಯವರು ಎಲ್ಲಿಯಾದರೂ ಅವಿತುಕೊಂಡಿರಬಹುದೋ ಎಂಬ ಸಂಶಯದಿಂದ ಕಾರನ್ನು ನಡೆಸುತ್ತಿರುವಾಗ ಆ ಕಡೆ ಈ ಕಡೆ ದೃಷ್ಟಿ ಬೀರಿ ನೋಡುತ್ತಿದ್ದಳು. ಯಾರೂ ಅವಳ ಕಣ್ಣಿಗೆ ಬೀಳಲಿಲ್ಲ. ಧೈರ್ಯವಾಗಿ ಮುಂದೆ ಸಾಗಿದಳು. ಮುಂದೆ ಹೋದ ನಂತರ ಕೋಟೆಯ ಹತ್ತಿರ ನಿಲ್ಲಿಸಿದ್ದ ಒಂದು ಕಾರು ಅವಳ ದೃಷ್ಟಿಗೆ ಬಿತ್ತು. ಕಾರಿನ ವೇಗವನ್ನು ನಿಧಾನ ಮಾಡಿ, ರಿವಾಲ್ವಾರ್ ಇದ್ದ ಕೈಚೀಲವನ್ನು ಪಕ್ಕದಲ್ಲಿಟ್ಟುಕೊಂಡು, ಸುತ್ತಲೂ ನೋಡಿದಳು. ಯಾರೂ ಕಾಣಿಸಲಿಲ್ಲ. ಸ್ವಲ್ಪ ದೂರ ಹೋದನಂತರ ಶಂಕರನು ತನ್ನ ಕಾರಿನ ಪಕ್ಕದಲ್ಲಿ ನಿಂತಿರುವುದನ್ನು ನೋಡಿದಳು. ಅವನ ಕಾರಿನ ಹತ್ತಿರ ಹೋದೊಡನೆ, ತನ್ನ ಕಾರನ್ನು ಒಂದು ಪಕ್ಕದಲ್ಲಿ ನಿಲ್ಲಿಸಿ, ರಿವಾಲ್ವಾರ್ ಇದ್ದ ಕೈಚೀಲವನ್ನು ಭದ್ರವಾಗಿ ಕೈಯಲ್ಲಿ ಹಿಡಿದುಕೊಂಡು ಕೆಳಗಿಳಿದಳು. ಶಂಕರನು ಹಸನ್ಮುಖನಾಗಿ ಅವಳ ಹತ್ತಿರ ಬಂದು ಹಸ್ತಲಾಘವವನ್ನು ಕೊಟ್ಟು ಸ್ವಾಗತಿಸಿದನು.

ಅವನ ದೇಹದಾರ್ಢ್ಯದಲ್ಲಾಗಲೀ, ರೂಪದಲ್ಲಾಗಲೀ, ವರ್ಚಸ್ಸಿನಲ್ಲಾಗಲೀ ಯಾವ ಬದಲಾವಣೆಯೂ ಆದಂತೆ ಅವಳಿಗೆ ತೋರಲಿಲ್ಲ. ಮೊಟ್ಟ ಮೊದಲು ಕೋಟೆಯಲ್ಲಿ ಅವನನ್ನು ಸಂಧಿಸಿದ ದಿನ ಹೇಗಿದ್ದನೋ ಹಾಗೆಯೇ ಇದ್ದನು. ಅದೇ ಕುಡಿಮೀಸೆ ಅದೇ ತುಂಟ ನಗೆ; ಅದೇ ರಸಿಕತೆ; ಅದೇ ಹಾವಭಾವಗಳು. ಆದರೆ ಅಂದು ಕ್ರಾಂತಿಸೇನೆಯ ಸಮವಸ್ತ್ರವನ್ನು ತೊಟ್ಟಿರಲಿಲ್ಲ. ಅತ್ಯಾಧುನಿಕ ರೀತಿಯಲ್ಲಿ ಧರಿಸಿದ್ದ ಅವನ ಉಡುಪು ಅವನ ವ್ಯಕ್ತಿತ್ವಕ್ಕೆ ಸೊಬಗನ್ನು ನೀಡಿತ್ತು. ಅವನನ್ನು ನೋಡಿದೊಡನೆ ಅವನ ಮೋಡಿಗೆ ಮತ್ತೊಮ್ಮೆ ಎಲ್ಲಿ ಬಲಿಯಾಗುತ್ತೇನೋ ಎಂಬ ಸಂಶಯ ಚಂಚಲೆಗೆ ಸ್ವಾಭಾವಿಕವಾಗಿ ಉಂಟಾಗಿತ್ತು. ಆದರೆ ಮನಸ್ಸನ್ನು ಗಟ್ಟಿಮಾಡಿ ಅವನ ಮುಂದೆ ನಗುತ್ತಾ ನಿಂತಳು.

ಶಂಕರನೇ ಮೊದಲು ಮಾತನ್ನಾರಂಭಿಸಿ "ದೇವಲೋಕದಿಂದ ಇಳಿದು ಬಂದ ಅಪ್ಸರೆಯಂತೆ ಕಾಣುತ್ತಿದ್ದೀರಿ. ನಿಮ್ಮನ್ನು ನೋಡದೆ ಎಷ್ಟು ವರ್ಷವಾಯಿತು! ಇಂದು ನೋಡಿ ಆನಂದವಾಯಿತು. ನಿಮ್ಮನ್ನು ಆಗಾಗ ಸ್ಮರಿಸಿಕೊಳ್ಳುತ್ತಿದ್ದೆ. ತುಂಬಾ ಸಂತೋಷ, ಇಂದು ನೀವು ಬಂದಿದ್ದು" ಎಂದನು.

"ನನಗೂ ನಿಮ್ಮನ್ನು ನೋಡಿ ಆನಂದವಾಯಿತು. ತಾನೂ ಆಗಾಗ ನಿಮ್ಮನ್ನು ನೆನಪಿಸಿಕೊಳ್ಳುತ್ತಿದ್ದೆ. ಆದರೆ ನಮ್ಮಿಬ್ಬರ ಸಮಾಗಮಕ್ಕೆ ಅವಕಾಶವೇ ಇರಲಿಲ್ಲ. ಈಗ ಅವಕಾಶ ತಾನಾಗಿಯೇ ಲಭ್ಯವಾಗಿದೆ. ನೀವು ಮೊದಲಿದ್ದಂತೇ ಇದ್ದೀರಿ. ಇನ್ನೂ ಹುಡುಗರಾಗಿಯೇ ಇದ್ದೀರಿ. ಸ್ವಲ್ಪವೂ ತಗ್ಗಿಲ್ಲ; ಸ್ವಲ್ಪವೂ ಕುಗ್ಗಿಲ್ಲ."

"ನೀವು ದೇಹದಲ್ಲಿ ಸ್ವಲ್ಪ ಸೊರಗಿದ್ದೀರಿ. ಆದರೆ ಮೊದಲಿದ್ದ ಮನಮೋಹಕ ಲಾವಣ್ಯ ಇಂದು ಹಾಗೆಯೇ ಇದೆ."

"ನಿಮ್ಮ ಮೆಚ್ಚುಗೆಗಾಗಿ ತುಂಬಾ ವಂದನೆಗಳು."

ಶಂಕರನು ಅವಳ ಕೈಯನ್ನು ಹಿಡಿಯಲು ಉದ್ಯುಕ್ತನಾಗುತ್ತಿರುವಾಗ ಚಂಚಲೆ "ಸ್ವಲ್ಪ ತಾಳಿ ನಿಮಗೊಂದು ಉಡುಗೊರೆ ತಂದಿದ್ದೇನೆ" ಎಂದು ಹೇಳಿ, ತನ್ನ ಕಾರಿನ ಬಾಗಿಲನ್ನು ತೆಗೆದು, ಕಾರಿನಲ್ಲಿದ್ದ ಒಂದು ಸ್ಕಾಚ್ ವ್ಹಿಸ್ಕಿಯ ಸೀಸೆಯನ್ನೂ, ಒಂದು ರಟ್ಟಿನ ಪೆಟ್ಟಿಗೆಯನ್ನೂ ಹೊರತೆಗೆದು "ದಯವಿಟ್ಟು ಸ್ವೀಕರಿಸಿ, ಇದು ನನ್ನ ಪ್ರೇಮದ ಕಾಣಿಕೆ" ಎಂದು ಹೇಳುತ್ತಾ, ವ್ಹಿಸ್ಕಿಯ ಸೀಸೆಯನ್ನೂ, ಸಿರಗೂರಿನ ಹೆಸರಾದ ಎವರೆಸ್ಟ್ ರೆಸ್ಟೊರೆಂಟಿನಲ್ಲಿ ತಯಾರಿಸಿದ್ದ ಕಟ್ಲೆಟ್ ಪ್ಯಾಕೆಟ್‌ನ್ನು ಅವನ ಕೈಗಿತ್ತಳು.

ಶಂಕರನು ಅವುಗಳನ್ನು ತೆಗೆದುಕೊಂಡು "ನನಗೆ ಪ್ರಿಯವಾದ ವಸ್ತುಗಳನ್ನೇ ತಂದಿದ್ದೀರಿ ತುಂಬಾ ಥ್ಯಾಂಕ್ಸ್" ಎಂದು ಹರ್ಷಿತನಾಗಿ ನುಡಿದನು.

"ಪ್ರಿಯರಾದವರಿಗೆ ಉಡುಗೊರೆ ಕೊಡುವಾಗ ಅವರಿಗೆ ಪ್ರಿಯವಾದ ವಸ್ತುವನ್ನೇ ಕೊಡಬೇಕು" ಎಂದು ಚಂಚಲೆ ನಕ್ಕಳು.

"ನೀವು ಬಹಳ ಸುಧಾರಿಸಿದ್ದೀರಿ"

"ಹಾಗಂದರೆ?"

"ಹಳೆಯ ಕಾಲದವರಂತೆ ಇಲ್ಲ. ಈಗಿನ ಕಾಲಕ್ಕೆ ಹೊಂದಿಕೊಂಡಿದ್ದೀರಿ, ಎಂದು ಹೇಳಿದೆ."

"ಕಾಲಕ್ಕೆ ಸರಿಯಾಗಿ ಹೊಂದಿಕೊಳ್ಳಲೇಬೇಕಲ್ಲ."

ಬಹಳ ಅಮೂಲ್ಯವಾದ ವ್ಹಿಸ್ಕಿಯನ್ನೇನೋ ತಂದಿರಿ. ಕುಡಿಯುವ ಗ್ಲಾಸ್ ಮಾತ್ರ ತಂದಿಲ್ಲ."

"ಆ ವಿಚಾರ ನನ್ನ ತಲೇಗೆ ಹೊಳೆಯಲೇ ಇಲ್ಲ. ಕ್ಷಮಿಸಿ"

"ಪರವಾ ಇಲ್ಲ. ನನ್ನ ಕಾರಾಗೆ ಗ್ಲಾಸಿದೆ" ಎಂದು ಹೇಳಿ, ಶಂಕರನು ತನ್ನ ಕಾರಿನ ಬಾಗಿಲನ್ನು ತೆಗೆದು ಒಂದು ಟಾರ್ಚ್‌ನ್ನೂ, ಒಂದು ಸಣ್ಣ ಗಾಜಿನ ಲೋಟವನ್ನೂ ಹೊರತೆಗೆದು, "ಬನ್ನಿ ಹೋಗೋಣ, ಸರೋವರದ ಕಡೆಗೆ" ಎಂದು ಸರೋವರದ ಹಾದಿಯನ್ನು ಹಿಡಿದನು.

ಚಂಚಲೆ ಅವನನ್ನು ಹಿಂಬಾಲಿಸಿ ಮೌನವಾಗಿ ಹೋಗುತ್ತಿದ್ದಳು. ಸ್ವಲ್ಪ ದೂರ ಹೋದ ಮೇಲೆ ಶಂಕರನು "ನಿಮ್ಮ ಮನೆಯಲ್ಲಿ ಕೊಲೆ ಮಾಡಿದ ಅಪರಾಧಿಗಳನ್ನು ಪೊಲೀಸಿನವರು ಎಲ್ಲಿಯಾದರೂ ಪತ್ತೆ ಮಾಡಿದ್ದಾರೇನು?" ಎಂದು ಚಂಚಲೆಯನ್ನು ಪ್ರಶ್ನಿಸಿದನು.

"ಈ ರಾಜ್ಯದಲ್ಲಿ ಸರ್ಕಾರ ಅರ್ಧ ಸತ್ತಿದೆ. ಅಪರಾಧಿಗಳನ್ನು ಎಲ್ಲಿ ಪತ್ತೆ ಹಚ್ಚುತ್ತಾರೆ? ಆ ಕೆಲಸ ನಿಮ್ಮಿಂದಲೇ ಸಾಧ್ಯ. ನೀವು ನನ್ನೊಡನೆ ಸಹಕರಿಸಿದರೆ ಕೊಲೆಗೆ ಕಾರಣರಾದವರನ್ನು ಕೊಲ್ಲುವುದು ಸಾಧ್ಯ. ನಿಮ್ಮ ಸಹಕಾರವನ್ನು ಅಪೇಕ್ಷಿಸಿ ಬಂದಿದ್ದೇನೆ. ಎರಡನೆಯದಾಗಿ ನಾನೀಗ ಏಕಾಂಗಿಯಾಗಿದ್ದೇನೆ. ಬೇಕಾದಷ್ಟು ಸಂಪತ್ತಿದೆ. ಆದರೆ ಸುಖವಿಲ್ಲ. ನೀವು ನನ್ನನ್ನು ನಿರಾಕರಿಸಿದ ಮೇಲೆ ನನಗೆ ಸುಖವೇ ಲಭಿಸಿರಲಿಲ್ಲ. ಒಂದರ ಮೇಲೊಂದು ವಿಪತ್ತು, ನನ್ನ ಮುದ್ದು ಮಗನನ್ನೂ ಕಳೆದುಕೊಂಡಾಯ್ತು.

"ನಿಮಗೆ ಸುಖವಿರಲಿಲ್ಲವೆಂದು ನಾನು ಎಂದೋ ಊಹಿಸಿದ್ದೆ."

"ಅದಕ್ಕೆ ಕಾರಣ ನೀವೇ."

"ನಾನೇನು ಮಾಡಿದೆ?" ಎಂದು ಬೆಚ್ಚಿ ಬಿದ್ದವನಂತೆ ಶಂಕರ ಅವಳ ಕಡೆಗೆ ತಿರುಗಿ ನೋಡಿದನು.

"ನೀವು ನನ್ನ ಭಾಗದ ದೇವರೆಂದು ತಿಳಿದಿದ್ದೆ. ನಿಮ್ಮೊಡನೆ ನಾನು ನರಕಕ್ಕೆ ಹೋಗಲೂ ಸಹ ಸಿದ್ಧಳಾಗಿದ್ದೆ. ಅಂತಹವಳನ್ನು ನೀವು ನಿರಾಕರಿಸಿದಿರಿ."

"ವಾಸ್ತವವಾಗಿ ನಾನು ನಿಮ್ಮನ್ನು ಉದ್ದೇಶ ಪೂರ್ವಕವಾಗಿ ನಿರಾಕರಿಸಲಿಲ್ಲ. ಕೋಪೋದ್ರೇಕದಿಂದ ನೀವು ಏನೋ ಹೇಳಿದಿರಿ; ನಾನೂ ಏನೋ ಹೇಳಿಬಿಟ್ಟೆ. ಆದದ್ದು ಆಗಿ ಹೋಯಿತು. ಈಗೇನು ಮಾಡುವುದು ಹೇಳಿ?"

"ಆ ವಿಚಾರದಲ್ಲಿ ಮಾತನಾಡುವುದಕ್ಕಾಗಿಯೇ ನಾನು ಇಂದು ಬಂದಿದ್ದೇನೆ."

"ನನ್ನಿಂದ ಏನಾಗಬೇಕೆಂದು ಹೇಳಿದರೂ ನಾನು ಸಿದ್ಧ.

"ಹಾಗಾದರೆ ಬನ್ನಿ ಹೋಗೋಣ, ನಿಧಾನವಾಗಿ ಕುಳಿತು ಮಾತಾಡೋಣ" ಎಂದು ಚಂಚಲೆ ಹೇಳಿದಳು.

ಸರೋವರಕ್ಕೆ ಹೋದ ನಂತರ, ಶಂಕರ ಅವಳನ್ನು ಹಿಡಿದು ಆಲಂಗಿಸಲು ಪ್ರಯತ್ನಿಸಿದನು. ಚಂಚಲೆ ದೂರ ಸರಿದು, "ಮುಂದೆ ನಮ್ಮಿಬ್ಬರ ಸಂಬಂಧ ಹೀಗೆ ಇರಬೇಕೆಂಬುದು ಮೊದಲು ನಿರ್ಧಾರವಾಗಬೇಕು. ಆ ಮೇಲೆ ಉಳಿದ ವಿಷಯಗಳು. ಹಿಂದೆ ಆದಂತೆ ಸರಸ ಹೋಗಿ ವಿರಸ ಬರಬಾರದು. ನಮ್ಮಿಬ್ಬರ ಸ್ನೇಹ ಕೊನೆಯವರೆಗೂ ಏಕರೀತಿಯಲ್ಲಿ ಇರುವಂತಾಗಬೇಕು. ಮೊದಲು ವ್ಹಿಸ್ಕಿ ಮುಗಿಸಿ, ಆಮೇಲೆ ನಿಧಾನವಾಗಿ ಮಾತಾಡಿ, ನಂತರ ಉಳಿದ ಕೆಲಸ" ಎಂದು ಹೇಳಿ ಚಂಚಲೆ ಉಪಾಯದಿಂದ ತಪ್ಪಿಸಿಕೊಂಡಳು.

ಆಗಲೇ ನಸುಗತ್ತಲಾಗಿತ್ತು. ಶಂಕರನು ಟಾರ್ಚ್ ಹೊತ್ತಿಸಿ, ಸರಿಯಾದ ಸ್ಥಳವನ್ನು ಆರಿಸಿ, ಸರೋವರದ ತಟದಲ್ಲಿ ಒಂದು ಹಾಸುಗಲ್ಲಿನ ಮೇಲೆ ಕುಳಿತು ಕೊಂಡನು. ಕಟ್ಲೆಟ್ ಪ್ಯಾಕೆಟನ್ನು ಬಿಚ್ಚಿ, ವ್ಹಿಸ್ಕಿ ಸೀಸೆಯ ಮುಚ್ಚಳವನ್ನು ತೆಗೆದು, ತನ್ನ ಪಕ್ಕದಲ್ಲಿ ಕುಳಿತುಕೊಳ್ಳಬೇಕೆಂದು ಚಂಚಲೆಯನ್ನು ಕರೆದನು. ಚಂಚಲೆ ಸ್ವಲ್ಪ ದೂರದಲ್ಲಿ ಎದುರುಬದುರಾಗಿ ಕುಳಿತುಕೊಂಡಳು. ಶಂಕರನು ಕಟ್ಲೆಟ್ ಪ್ಯಾಕೆಟನ್ನು ಅವಳ ಮುಂದೆ ಹಿಡಿದು "ನೀವು ಮೊದಲು ತೆಗೆದುಕೊಳ್ಳಬೇಕು" ಎಂದು ಹೇಳಿದಳು. ಚಂಚಲೆ ಅವನ ತೃಪ್ತಿಗಾಗಿ ಎರಡು ಮೂರು ಚೂರುಗಳನ್ನು ತೆಗೆದುಕೊಂಡು, "ನಂಗೆ ಇವತ್ತು ಬಹಳ ಕಡೆ ಆತಿಥ್ಯ ಹೊಟ್ಟೆಯಲ್ಲಿ ಸ್ಥಳವೇ ಇಲ್ಲ" ಎಂದಳು. ಶಂಕರನು ಕಟ್ಲೆಟ್ ಚಪ್ಪರಿಸಿ ತಿನ್ನುತ್ತಾ, ಒಂದು ಪೆಗ್ ವ್ಹಿಸ್ಕಿಯನ್ನು ಚಂಚಲೆಗೆ ಕೊಡ ಹೋದನು. "ಅದು ಮಾತ್ರ ನನ್ನಿಂದ ಸಾಧ್ಯವಿಲ್ಲ. ನಾನು ಯಾವತ್ತೂ ಕುಡಿದವಳಲ್ಲ" ಎಂದು ಅವಳು ವ್ಹಿಸ್ಕಿಯನ್ನು ನಿರಾಕರಿಸಿದಳು. "ನನಗೋಸ್ಕರ ಒಂದು ಗುಟುಕು ತೆಗೆದುಕೊಂಡು ನೋಡಿ, ಹ್ಯಾಗಿದೆ ಅಂತ. ಚಳಿಗೆ ಮೈ ಬೆಚ್ಚಗೆ ಆಗ್ತದೆ" ಎಂದು ಶಂಕರನು ಒತ್ತಾಯ ಪಡಿಸಿದನು. ಚಂಚಲೆ ಸ್ವಲ್ಪ ರುಚಿ ನೋಡಿದ ಹಾಗೆ ಮಾಡಿ "ಬೇಡ, ದಯವಿಟ್ಟು ಕ್ಷಮಿಸಿ" ಎಂದು ವಾಪಸು ಕೊಟ್ಟಳು.

ಶಂಕರನು ತಿನ್ನುತ್ತಾ, ಕುಡಿಯುತ್ತಾ, ಸರಸ ಸಲ್ಲಾಪದ ಸಂಭಾಷಣೆಯಲ್ಲಿ ತೊಡಗಿದನು. ಚಂಚಲೆ ಅವನ ಮಾತನ್ನು ಸ್ವಾಗತಿಸುತ್ತಿರುವವಳಂತೆ ನಟಿಸುತ್ತಾ, ಉದ್ದೇಶ ಪೂರ್ವಕವಾಗಿ ಸಂಭಾಷಣೆಯನ್ನು ಲಂಬಿಸುತ್ತಿದ್ದಳು. ಅವನ ಕುಡಿತಕ್ಕೆ ಉತ್ತೇಜನ ಕೊಡುವ ಉದ್ದೇಶದಿಂದ "ವ್ಹಿಸ್ಕಿ ಚೆನ್ನಾಗಿದೆಯೇ?" ಎಂದು ಕೇಳಿದಳು. "ಬಹಳ ಸೊಗಸಾಗಿದೆ, ಅದರಲ್ಲೂ ನೀವು ಕೊಟ್ಟಿದ್ದರಿಂದ ಮತ್ತಷ್ಟು ರುಚಿ" ಎನ್ನುತ್ತಾ ಶಂಕರನು ವ್ಹಿಸ್ಕಿಯನ್ನು ಹೀರುತ್ತಿದ್ದನು. ಆಗಲೇ ಪೂರ್ಣ ಕತ್ತಲಾಗಿತ್ತು. ಶಂಕರನಿಗೆ ಅಮಲೇರುತ್ತಾ ಬಂದಿತ್ತು. ಚಂಚಲೆ ಕತ್ತಲೆಯಲ್ಲಿ ಮೆತ್ತಗೆ ಕೈಚೀಲವನ್ನು ಬಿಚ್ಚಿ, ಬಾರು ಮಾಡಿದ್ದ ರಿವಾಲ್ವಾರನ್ನು ಹೊರ ತೆಗೆದು ಬಲಗೈಯಲ್ಲಿ ಭದ್ರವಾಗಿ ಹಿಡಿದುಕೊಂಡು ಕೈಯನ್ನು ಸೀರೆಯ ಸೆರಗಿನಲ್ಲಿ ಮುಚ್ಚಿಕೊಂಡಿದ್ದಳು. ಮಾತಿನ ಮಧ್ಯೆ ಸಮಯವನ್ನು ಸಾಧಿಸಿ,

"ನಾನಿಂದು ಸಂಪೂರ್ಣ ಸ್ವತಂತ್ರಳಾಗಿದ್ದೇನೆ. ಯಾರ ಅಡತಡೆಯೂ ನನಗಿಲ್ಲ; ಯಾರ ಹಂಗೂ ನನಗಿಲ್ಲ. ನಿಮ್ಮ ಕ್ರಾಂತಿಸೇನೆಯನ್ನು ಸೇರಿ ಸುಪ್ರಸಿದ್ಧ ಕ್ರಾಂತಿಕಾರಿಣಿ ಯಾಗಬೇಕೆಂದು ನನಗೆ ಆಸೆಯಾಗಿದೆ. ನೀವೇನು ಹೇಳುತ್ತೀರಿ, ಮಿಸ್ಟರ್ ಶಂಕರ್"? ಎಂದು ಅವನನ್ನು ಪ್ರಶ್ನಿಸಿದಳು.

"ಆಹಾ! ಏನ್ ಹೇಳಿದ್ರಿ?" ಎಂದು ಚಕಿತಗೊಂಡವನಂತೆ ಅವಳನ್ನು ಪ್ರಶ್ನಿಸಿದನು.

"ನಿಮ್ಮ ಕ್ರಾಂತಿಸೇನೆಯನ್ನು ಸೇರಿ, ನಿಮ್ಮ ಸಂಗಾತಿಯಾಗಿ, ಇಡೀ ಭಾರತದಲ್ಲೇ ಸುಪ್ರಸಿದ್ಧ ಕ್ರಾಂತಿಕಾರಿಣಿ ಮಹಿಳೆಯಾಗಬೇಕೆಂಬ ಆಸೆ ನನಗಿದೆ ಎಂದು ಹೇಳಿದೆ."

"ಏನು? ನಿಜವಾಗಿಯೂ!

"ನಿಜವಾಗಿಯೂ, ನಂಗೆ ಇನ್ನೇನ್ ಆಗ್ಬೇಕಾಗಿದೆ. ಇದ್ದ ಒಬ್ಬ ಮಗನನ್ನು ನೀಚರು ಕೊಂದು ಹಾಕಿದರು. ನನ್ನ ಆಸ್ತಿಯೆಲ್ಲಾ ಕ್ರಾಂತಿಗೆ ಮೀಸಲು."

"ನೀವು ಈ ರೀತಿ ಮನಸ್ಸು ಮಾಡುತ್ತೀರೆಂದು ನಾನು ಕನಸಿನಲ್ಲಿಯೂ ಭಾವಿಸಿರಲಿಲ್ಲ. ಕ್ರಾಂತಿಸೇನೆಯ ಪರವಾಗಿ ನಿಮಗೆ ಹೃತ್ಪೂರ್ವಕ ಸ್ವಾಗತ. ನೀವು ನನ್ನ ಜೊತೆಯಲ್ಲಿದ್ದರೆ ಜಗತ್ತನ್ನೇ ಜಯಿಸಬಲ್ಲೆ. ನೀವು ನನ್ನ ಬಾಳಿನ ಸಂಗಾತಿಯಾಗಿರಲು ನನ್ನ ಹೃತ್ಪೂರ್ವಕ ಒಪ್ಪಿಗೆ ಇದೆ."

"ಆದರೆ ನನಗೆ ಬಂದೂಕು ಹಾರಿಸೋಕೆ ಬರೋದೆ ಇಲ್ಲವಲ್ಲ."

"ಅದೇನು ಮಹಾ ದೊಡ್ಡ ವಿಷಯ. ಒಂದೇ ದಿನದಾಗೆ ಕಲಿಸ್ತೀನಿ."

"ಕೊಲ್ಲೋದನ್ನು ಕಲೀಬೇಕು ಅನ್ನಿ."

"ಹೌದು ಮತ್ತೆ, ಕಲಿಬೇಕಾಗ್ತದೆ. ಕ್ರಾಂತಿ ಅಂದರೆ ಕೊಲೆ. ಕೊಲೆ ಆಗದೆ ಕ್ರಾಂತಿ ಹ್ಯಾಗೆ ಆಗ್ತದೆ? ಬಂಡವಾಳಗಾರರನ್ನು ಕೊಲೆ ಮಾಡ್ಲೇಬೇಕು."

"ಇದುವರೆಗೆ ನಿಮ್ಮ ಸೇನೆಯವರು ಎಷ್ಟು ಬಂಡವಾಳಗಾರರನ್ನು ಕೊಲೆ ಮಾಡಿರಬಹುದು?"

"ಅದಕ್ಕೆ ಲೆಕ್ಕವೇ ಇಲ್ಲ."

"ಮಿಸ್ಟರ್ ಶಂಕರ್, ನಿಮ್ಮಣ್ಣ ರಾಹುಲ ಒಬ್ಬ ಬಂಡವಾಳಗಾರರು ಅಂತ ಕೇಳಿದ್ದೀನಿ. ನಾನೂ ಒಬ್ಬಳು ದೊಡ್ಡ ಬಂಡವಾಳಗಾತಿ. ನಮ್ಮಿಬ್ಬರನ್ನೂ ಕೊಲ್ಲಬೇಕಲ್ಲವೇ?"

"ಎಲ್ಲಾದರೂ ಉಂಟೇ. ನೀವು ನನ್ನ ಸ್ವಂತ ಬಂಡವಾಳ. ರಾಹುಲ ನನ್ನ ಸ್ವಂತ ಅಣ್ಣ. ಈಗ ಆ ಚರ್ಚೆ ಬೇಡ, ಹೊತ್ತಾಯಿತು, ಮಾತಾಡ್ದ ಮೇಲೆ ಮುಂದಿನ ಕೆಲಸ ಅಂತ ಹೇಳಿದ್ರಲ್ಲಾ. ಈಗ ಮಾತಾಡಿ ಆಯ್ತಲ್ಲಾ. ಬನ್ನಿ ಮುಂದಿನ ಕೆಲಸಕ್ಕೆ" ಎಂದು ಹೇಳುತ್ತಾ ಶಂಕರನು ಅವಳನ್ನು ಹಿಡಿದುಕೊಳ್ಳುವ ಉದ್ದೇಶದಿಂದ ಮೇಲಕ್ಕೆದ್ದನು.

ಚಂಚಲೆ ಥಂಗನೆ ಮೇಲಕ್ಕೆದ್ದು, ಹಿಂದಕ್ಕೆ ಹಾರಿ, ಅವನಿಗೆ ಗುರಿ ಇಟ್ಟು ಮೂರು ಬಾರಿ ಒಂದರ ಮೇಲೊಂದರಂತೆ ಗುಂಡು ಹಾರಿಸಿ, ಕತ್ತಲೆಯಲ್ಲಿ ಓಡಿ ಹೋದಳು. ಶಂಕರನು ಗಾಯಗೊಂಡಿದ್ದರೂ ಸಾಯಲಿಲ್ಲ. ವಿಸ್ಕಿಯ ಅಮಲೇರಿದ್ದ ಅವನು ಗಾಯಗೊಂಡ ಹುಲಿಯಂತೆ ಭೋರಿಡುತ್ತಾ, ಸೊಂಟದಲ್ಲಿದ್ದ ರಿವಾಲ್ವಾರನ್ನು

ಹಿಡಿದುಕೊಂಡು ಕೆಳಗಿಟ್ಟಿದ್ದ ಟಾರ್ಚ್‌ನ್ನು ತೆಗೆದುಕೊಳ್ಳುವ ಹೊತ್ತಿಗೆ, ಚಂಚಲೆ ಐವತ್ತು ಗಜ ದೂರ ಓಡಿ ಹೋಗಿದ್ದಳು. ಹೊಟ್ಟೆಗೆ ಮತ್ತು ಭುಜಕ್ಕೆ ತಗಲಿದ ಗುಂಡುಗಳಿಂದಾಗಿದ್ದ ಗಾಯದಿಂದ ರಕ್ತ ಧಾರಾಕಾರವಾಗಿ ಸುರಿಯುತ್ತಿದ್ದರೂ, ಅವನು ಅವಳನ್ನು ಹಿಂಬಾಲಿಸಿ ಓಡಲಾರಂಭಿಸಿದನು. ಆದರೆ ಸ್ವಲ್ಪ ದೂರ ಓಡುವುದರೊಳಗಾಗಿ ರಕ್ತಸ್ರಾವದಿಂದ ಬಳಲಿ ಕೆಳಕ್ಕೆ ಬಿದ್ದನು.

ಕೆಳಕ್ಕೆ ಉರುಳಿದವನು ಮೇಲಕ್ಕೆ ಏಳಲಾರದೆ "ರಾಕ್ಷಸೀ, ಹಾದರಗಿತ್ತೀ, ನನ್ನ ಮೈಯುಂಡು ನಂಗೇ ಕೈ ಕೊಟ್ಟೆಯಲ್ಲೇ, ಏ ಮೋಸಗಾತಿ" ಎಂದು ಮುಂತಾಗಿ ಚಂಚಲೆಯನ್ನು ಶಪಿಸುತ್ತಿದ್ದನು.

ಗುಂಡಿನ ಶಬ್ದ ಕೇಳಿದೊಡನೆ, ಅಲ್ಲೇ ಸ್ವಲ್ಪ ದೂರದಲ್ಲಿ ಅವಿತುಕೊಂಡಿದ್ದ ಚಂದ್ರಹಾಸನೂ, ಕಿಶೋರನೂ ಕ್ರಾಂತಿಕೂಟದ ಸಿಪಾಯಿಗಳ ಸಮೇತ ಸರೋವರದ ಕಡೆಗೆ ಧಾವಿಸಿದರು. ಶಂಕರನು ಯಾತನೆಯಿಂದ ನರಳುತ್ತಾ ಬಾಯಿಗೆ ಬಂದಂತೆ ಒರಲುತ್ತಾ ಬಿದ್ದಿದ್ದನು. ಚಂದ್ರಹಾಸನು ಟಾರ್ಚ್‌ನ್ನು ಹಿಡಿದು, ದೂರದಲ್ಲಿಯೇ ನಿಂತು ಶಂಕರ ಬಿದ್ದಿರುವುದನ್ನು ನೋಡಿದನು. ಶಂಕರನು ಕೆಳಗೆ ಬಿದ್ದಿದ್ದರೂ ಕೂಡ ತನ್ನ ರಿವಾಲ್ವಾರನ್ನು ಕೈಯಲ್ಲೇ ಹಿಡಿದುಕೊಂಡಿದ್ದನು. ಶಂಕರನನ್ನು ತಾನೇ ಕೊಲ್ಲುವುದಾಗಿ ಚಂದ್ರಹಾಸನು ಅನೇಕ ಬಾರಿ ಶಪಥ ಮಾಡಿದ್ದನು. ಆದರೆ ಅದು ಸಾಧ್ಯವಾಗಲಿಲ್ಲ. ತನ್ನ ಕೈಯಲ್ಲಿ ಸಾಧಿಸಲಾರದೆ ಇದ್ದ ಕಾರ್ಯವನ್ನು ಯಃಕಶ್ಚಿತ್ ಹೆಂಗಸೊಬ್ಬಳು ಸಾಧಿಸಿದಳೆಂದು ಚಂದ್ರಹಾಸನು ಸ್ವಲ್ಪಮಟ್ಟಿಗೆ ಅಭಿಮಾನ ಕುಂಠಿತನಾಗಿದ್ದರೂ, ಚಂಚಲೆಯ ಅದ್ಭುತ ಸಾಹಸವನ್ನು ಮೆಚ್ಚಿದನು.

ಶಂಕರನು ಇನ್ನೂ ಸತ್ತಿಲ್ಲವಾದ್ದರಿಂದ ತನ್ನ ಪ್ರತಿಜ್ಞೆಯನ್ನು ಈಡೇರಿಸಿಕೊಳ್ಳುವ ಉದ್ದೇಶದಿಂದ ಕಿಶೋರನ ಕೈಯಲ್ಲಿದ್ದ ರೈಫಲನ್ನು ತನ್ನ ಕೈಗೆ ತೆಗೆದುಕೊಂಡನು. ಶಂಕರನು ಬಿದ್ದಲ್ಲಿಯೇ ಪುನಃ ಚಂಚಲೆಯನ್ನು ಬಾಯಿಗೆ ಬಂದ ಹಾಗೆ ಬೈಯಲಾರಂಭಿಸಿದನು. ಚಂದ್ರಹಾಸನು ಆ ಮಾತುಗಳನ್ನು ಕೇಳಿ ಸಹಿಸಲಾರದೆ ಶಂಕರನನ್ನು ಕುರಿತು ಹೀಗೆಂದು ಹೇಳಿದನು:

"ಶಂಕರಾ, ಚಂಚಲೆಯವರನ್ನೇಕೆ ವೃಥಾ ಶಪಿಸಿ ಬೈಯುತ್ತೀಯಾ? ನೀನೆಷ್ಟು ಜನರನ್ನು ಮೋಸದಿಂದ ಕೊಲ್ಲಿಸಿದ್ದೀಯಾ? ನಿನಗೆ ನೆನಪಿದೆಯೇ? ನೀ ಮಾಡಿದ್ದ ಮೋಸವೇ ಚಂಚಲೆಯ ರೂಪದಲ್ಲಿ ನಿನಗೆ ಶತ್ರುವಾಗಿ ಪರಿಣಮಿಸಿತು. ನೀನು ಮೋಸದಿಂದ ಚಂಚಲೆಯವರ ಗಂಡನನ್ನೂ, ಮಗನನ್ನೂ ಕೊಲ್ಲಿಸಿದೆ. ಅವರ ಕುಟುಂಬದ ಸರ್ವನಾಶಕ್ಕೆ ಕಾರಣನಾದೆ. ನಿನ್ನ ಮೋಸಕ್ಕೆ ನನ್ನ ತಾಯಿ ಆಹುತಿ ಯಾದಳು; ನನ್ನ ಹೆಂಡತಿ ಆಹುತಿಯಾದಳು. ನಿನ್ನ ಸ್ವಾರ್ಥಸಾಧನೆಗಾಗಿ ಕ್ರಾಂತಿಯ ಸೋಗಿನಲ್ಲಿ ನೂರಾರು ಜನ ನಿರಪರಾಧಿಗಳನ್ನು ಕೊಲ್ಲಿಸಿದೆ. ಚಂಚಲೆಯವರು ಮಾಡಿದ್ದು ಮೋಸವಲ್ಲ; ನ್ಯಾಯವಾದ ಪ್ರತೀಕಾರ, ಮುಯ್ಯಿಗೆ ಮುಯ್ಯಿ. ನಿನಗೆ ಅವರು ಸುಲಭವಾಗಿ ವಿಷ

ಹಾಕಬಹುದಾಗಿತ್ತು. ಆದರೆ ಹಾಗೆ ಮಾಡದೆ ಧೀರಳಂತೆ ಮುಖಾಮುಖಿಯಾಗಿ ನಿಂಗೆ ಗುಂಡಿಟ್ಟು ಹೊಡೆದಿದ್ದಾರೆ. ಸಾಯುವಾಗಲಾದರೂ ಪಶ್ಚಾತ್ತಾಪಟ್ಟು ಸಾಯಿ."

"ಏ, ಹೇಡಿ ಚಂದ್ರಹಾಸ! ನೀನು ಈ ಪಿತೂರಿಗೆ ಸೇರಿದ್ದೀಯಾ? ನಿನ್ನ ಕೈಲಿ ಸಾಗದೆ ಈ ಹಾದರಗಿತ್ತೀನ ಮುಂದೆ ಬಿಟ್ಟು, ಶಿಖಂಡಿಯಂತೆ ದೂರದಲ್ಲಿ ನಿಂತಿದ್ದೀಯಾ. ಹೇಡಿ, ಧೈರ್ಯವಿದ್ದರೆ ಹತ್ತಿರ ಬಾ. ಯಾಕೆ ದೂರದಲ್ಲಿ ನಿಂತೀಯಾ? ನಾನು ಕೆಳಗೆ ಬಿದ್ದಿದ್ದರೂ, ನನ್ನ ಹತ್ತಿರ ಬರಲು ಹೆದರಿಕೆಯೇ? ಆ ಮಾಯಾವಿ ನನ್ನ ಸೂಳೆಯಾಗಿದ್ದಳು. ಇಂದು ನನಗೆ ಕೈ ಕೊಟ್ಟಳು. ನಾಳೆ ನಿನಗೂ ಕೈ ಕೊಡುತ್ತಾಳೆ" ಎಂದು ಶಂಕರನು ರೋಷಾವಿಷ್ಟನಾಗಿ ಕೂಗುತ್ತಿದ್ದನು.

ಶಂಕರನ ಅವಾಚ್ಯ ಶಬ್ದಗಳನ್ನು ಕಿವಿಯಲ್ಲಿ ಕೇಳಲಾರದೆ, ಚಂದ್ರಹಾಸನು ಟಾರ್ಚ್ ಬೆಳಕಿನಲ್ಲಿ ರೈಫಲ್ ಗುರಿ ಇಟ್ಟು ಕೆಳಗೆ ಬಿದ್ದಿದ್ದ ಶಂಕರನ ತಲೆಗೆ ಹೊಡೆದನು. ವಿಮಾನದಿಂದ ಅನಿಲಗಿರಿಯ ಮೇಲೆ ಬಾಂಬ್ ಹಾಕಿದಂತೆ ರೈಫಲ್ ಹರಿದ ಶಬ್ದ ಈ ಪ್ರಶಾಂತ ಪ್ರದೇಶದಲ್ಲೆಲ್ಲಾ ಮೊಳಗಿತು. ಶಂಕರನ ಸದ್ದಡಗಿಹೋಯಿತು. ಚಂದ್ರಹಾಸನೂ ಕಿಶೋರನೂ ಹತ್ತಿರ ಹೋಗಿ ನೋಡಿದನು. ಅವನು ಸತ್ತು ಬಿದ್ದಿದ್ದನು. ಆದರೆ ಚಂಚಲೆಯ ಸುಳಿವೇ ಇರಲಿಲ್ಲ. ಟಾರ್ಚ್ ಬೆಳಕಿನಲ್ಲಿ ಅವಳಿಗಾಗಿ ಸುತ್ತಮುತ್ತ ಅರಸಿದರು. ಎಲ್ಲಿಯೂ ಅವಳು ಕಾಣಿಸಲಿಲ್ಲ. ಮೂರು ಸಾರಿ ಗುಂಡು ಹಾರಿದ್ದ ಶಬ್ದವನ್ನು ಅವರು ಸ್ಪಷ್ಟವಾಗಿ ಕೇಳಿದ್ದರು. ಶಂಕರನು ತಾನು ಕೆಳಗೆ ಬೀಳುವ ಮುನ್ನ ಅವಳನ್ನು ತನ್ನ ರಿವಾಲ್ವಾರಿನಿಂದ ಹೊಡೆದಿದ್ದರೂ ಹೊಡೆದಿರಬಹುದೆಂಬ ಅನುಮಾನದಿಂದ ಸುತ್ತಮುತ್ತ ಮತ್ತೊಮ್ಮೆ ಹುಡುಕಾಡಿದರು. ಎಲ್ಲಿಯೂ ಅವಳು ಬಿದ್ದಿರುವುದು ಕಾಣಿಸಲಿಲ್ಲ. ಅವಳು ಸರೋವರಕ್ಕೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರಬಹುದೆಂಬ ಅನುಮಾನ ಚಂದ್ರಹಾಸನಲ್ಲಿ ಉಂಟಾಯಿತು. ಅವನು ಅವಳ ಹೆಸರನ್ನು ಹಿಡಿದು "ನಿಮ್ಮ ವೈರಿ ಸತ್ತುಬಿದ್ದಾನೆ ಬನ್ನಿ, ಕಣ್ತುಂಬಾ ನೋಡಿ" ಎಂದು ಗಟ್ಟಿಯಾಗಿ ಕೂಗಿದನು.

ಅವನ ಕೂಗಿಗೆ ಪ್ರತ್ಯುತ್ತರವಾಗಿಯೋ ಎಂಬಂತೆ ಸ್ವಲ್ಪ ದೂರದಲ್ಲಿ 'ಢಂ' ಎಂದು ಶಬ್ದವಾಯಿತು. ಚಂದ್ರಹಾಸನಿಗೆ ಆ ಶಬ್ದವೇನೆಂಬುದೆಂದು ಗೊತ್ತಾಗದೆ ತಬ್ಬಿಬ್ಬಾದನು. ಕ್ರಾಂತಿಸೇನೆಯ ಕೂಳರು ಗುಂಡು ಹಾರಿಸಿರಬಹುದೆಂಬ ಶಂಕೆಯಿಂದ ಅವರನ್ನು ಎದುರಿಸಲು ಸಿದ್ಧರಾಗಬೇಕೆಂದು ಸೂಚಿಸಿ, ತನ್ನ ಸಂಗಾತಿಗಳೊಡನೆ ಗುಂಡು ಹಾರಿದ ಕಡೆಗೆ ಹೋದನು. ಟಾರ್ಚ್ ಬೆಳಕಿನಲ್ಲಿ ಸುತ್ತಲೂ ದೃಷ್ಟಿಹರಿಸಿ ನೋಡಿದನು. ಎಲ್ಲಿಯೂ ಶತ್ರುಗಳ ಸುಳಿವು ಕಾಣಲಿಲ್ಲ. ಆಗಲೇ ಚಂಚಲೆಯ ವಿಚಾರದಲ್ಲಿ ಕಳವಳ ಉಂಟಾಗಿತ್ತು. ಅವಳು ತನ್ನ ಕೈಯಲ್ಲಿದ್ದ ರಿವಾಲ್ವಾರ್‌ನಿಂದ ಆತ್ಮಹತ್ಯೆ ಮಾಡಿಕೊಂಡಿರಬೇಕೆಂಬ ಸಂಶಯದಿಂದ ಗುಂಡು ಹಾರಿದ ಪ್ರದೇಶದಲ್ಲೆಲ್ಲಾ ಸುತ್ತಾಡಿ ನೋಡಿದನು. ಗಿರಿಯ ಕಿಬ್ಬದಿಯಲ್ಲಿ ಚಪ್ಪಟೆಯಾಗಿದ್ದ ಒಂದು ಸಣ್ಣ ಕಲ್ಲುಬಂಡೆಯ ಮೇಲೆ ವಿಶ್ರಾಂತಿ ಪಡೆಯುತ್ತಿರುವವಳಂತೆ ಬಿದ್ದಿದ್ದಳು.

ಅವಳ ರಿವಾಲ್ವಾರ್ ಬಲಗೈಯಲ್ಲಿ ಜೋತಾಡುತಿತ್ತು. ಅವಳ ಗಲ್ಲದ ಕೆಳಗೆ ಕಂಠದಿಂದ ರಕ್ತ ಸುರಿಯುತ್ತಿತ್ತು. ಆದರೂ ಇನ್ನೂ ಕುಟುಕು ಜೀವವಿತ್ತು. ಚಂದ್ರಹಾಸನು ಅವಳ ಹೆಸರನ್ನು ಹಿಡಿದು ಕರೆದನು. ಚಂಚಲೆ ಕಣ್ತೆರೆದಳು. ಚಂದ್ರಹಾಸನ ಕಡೆಗೆ ನೋಡಿದಳು. ಚಂದ್ರಹಾಸನು ಶೋಕಪೀಡಿತನಾಗಿ ಅವಳ ಕೈಯನ್ನು ಹಿಡಿದುಕೊಂಡು ಗದ್ಗದ ಧ್ವನಿಯಲ್ಲಿ "ಯಾಕೆ ಹೀಗೆ ಮಾಡಿದಿರಿ?" ಎಂದು ನಮ್ರವಾಗಿ ಅವಳನ್ನು ಕೇಳಿದನು. ಸಾಯುತ್ತಾ ಬಿದ್ದಿದ್ದ ಅವಳು ಕ್ಷೀಣವಾದ ಅಸ್ಪಷ್ಟ ವಾಣಿಯಲ್ಲಿ "ನನ್ನ.....ಸೇಡು..... ತೀರಿತು. ನನ್ನ......ಕೆಲಸ.....ಮುಗಿಯಿತು. ಆತ್ಮ.......ತಣ್ಣಗಾಯಿತು. ಹೋಗಿಬರುತ್ತೇನೆ.......ಚಂದ್ರಹಾಸ. ನಿಮಗಿಬ್ಬರಿಗೂ.... ವಂದನೆಗಳು. ಆ........ನೀಚ......ನನ್ನ........ಸೂಳೆ.........ಅಂತ.........ಹೇಳಿದ.........ಅಲ್ಲವೇ. ಆ....ವಂಚಕ....ನನ್ನ.......ಮದುವೆಯಾಗುವುದಾಗಿ.........ವಂಚಿಸಿ......ನನ್ನ....ಸ್ನೇಹ........ಬೆಳೆಸಿದ. ನಾನವನ.......ಮೋಸಕ್ಕೆ ....ಬಲಿಯಾಗಿದ್ದೆ. ಅದು...... ನನ್ನ......ಮದುವೆಗೆ....... ಮುಂಚೆ. ಅದು......ಯಾರಿಗೂ......ಗೊತ್ತಿಲ್ಲ. ಆ......ತಪ್ಪಿಗೆ......ಇಂದು......... ಪ್ರಾ.........ಯ.....ಶ್ಚಿ......ತ್ತ........ಮಾಡಿಕೊಂಡೆ. ಭಗವಂತಾ........ಕ್ಷಮಿಸು. ಚಂದ್ರಹಾಸಾ.....ನಿಮಗೆ.......ಕೊನೆಯ......ಪ್ರಣಾಮ. ನಿಮ್ಮ......ಕ್ರಾಂತಿಕೂಟಕ್ಕೆ....... ಜಯವಾಗಲೀ" ಎಂದು ನುಡಿದು ಕಣ್ಮುಚ್ಚಿ ಪ್ರಜ್ಞಾಶೂನ್ಯಳಾದಳು.

ಚಂದ್ರಹಾಸನು ರಕ್ತಸ್ರಾವವನ್ನು ನಿಲ್ಲಿಸುವುದಕ್ಕಾಗಿ ಅವಳ ಕತ್ತಿಗೆ ಬಟ್ಟೆಯನ್ನು ಕಟ್ಟುತ್ತಿರುವಾಗ, ಚಂಚಲೆ ತನ್ನ ಕೊನೆಯ ಉಸಿರೆಳೆದಳು. ಚಂದ್ರಹಾಸನು ಶೋಕಭರಿತನಾಗಿ, ಹತಾಶನಾಗಿ ಅವಳ ಹೆಣದ ಪಕ್ಕದಲ್ಲಿ ಕುಳಿತಿದ್ದನು. ಇತರರು ಜಂಘಾಬಲ ಉಡುಗಿದವರಂತೆ ಅಲ್ಲಲ್ಲೇ ನೆಲದ ಮೇಲೆ ಕುಳಿತಿದ್ದರು. ತನ್ನ ಮುದ್ದು ಕುವರಿಯ ಅಕಾಲ ದುರ್ಮರಣದಿಂದ ದುಃಖಿತಳಾದ ಪ್ರಕೃತಿ ದೇವಿಯು ಮ್ಲಾನವದನೆಯಾಗಿ ಮೌನದಿಂದ ಶೋಕಿಸುತ್ತಿರುವಳೋ ಎಂಬಂತೆ ಸುತ್ತಲೂ ಗಾಢಾಂಧಕಾರ ಕವಿದಿತ್ತು. ನೀರವತೆ ಭೀಕರತೆಯೊಡನೆ ಸರಸವಾಡುತ್ತಿರುವಂತಿತ್ತು. ಸ್ವಲ್ಪ ಹೊತ್ತಿನ ನಂತರ ಚಂದ್ರಹಾಸನು "ಕಿಶೋರ್, ಸಾಹಸ ಸೌಂದರ್ಯಗಳ ಅಧಿದೇವತೆ ಅದೃಶ್ಯಳಾದಳು. ವೀರ ರಮಣಿ ವೀರ ಸ್ವರ್ಗವನ್ನೇರಿದಳು. ನಾವೇ ಹೇಡಿಗಳು" ಎಂದು ಮರುಗಿ ನಿಟ್ಟುಸಿರುಬಿಟ್ಟನು.

* * * * *



"ನೈಸರ್ಗಿಕ ನಿಯಮಗಳು ವಿಶ್ವದ ಮತ್ತು ಮಾನವ ಕುಟುಂಬದ ಆಗುಹೋಗುಗಳನ್ನೂ, ಪ್ರಗತಿ ಪರಿವರ್ತನೆಗಳನ್ನೂ ನಿರ್ಧರಿಸುತ್ತವೆಯೆಂಬುದು ಕಾರ್ಲ್‌ಮಾರ್ಕ್ಸ್‌ನ ಸಿದ್ಧಾಂತ"


"ನಿಯಾಮಕನೊಬ್ಬನಿಲ್ಲದೆ ನಿಯಮಗಳು ಇರಲಾರವು. ನೈಸರ್ಗಿಕ ನಿಯಮಗಳಿಗೆ ಕಾರಣಕರ್ತೃವಾದ ಶಕ್ತಿ ಅಥವಾ ವ್ಯಕ್ತಿಯೇ ದೇವರೆಂಬುದು ಹಿಂದೂಧರ್ಮದ ಸಿದ್ಧಾಂತ"

"ಜನರು ಮಾನವ ನಿರ್ಮಿತ ಕಾನೂನುಗಳನ್ನು ಉಲ್ಲಂಘಿಸಿ ತಪ್ಪಿಸಿಕೊಳ್ಳಬಹುದು. ದೈವನಿರ್ಮಿತ ಕಾನೂನುಗಳನ್ನು ಉಲ್ಲಂಘಿಸಿ ತಪ್ಪಿಸಿಕೊಳ್ಳಲಾಗುವುದಿಲ್ಲ.

"ಎಲ್ಲಕಾಲಕ್ಕೂ, ಎಲ್ಲ ದೇಶಕ್ಕೂ, ಎಲ್ಲ ಸನ್ನಿವೇಶಗಳಿಗೂ ಸರಿಹೋಗತಕ್ಕ ರಾಜಕೀಯ ಸಿದ್ಧೌಷಧವನ್ನು ಇದುವರೆಗೆ ಯಾರೂ ಕಂಡು ಹಿಡಿದಿಲ್ಲ"

"ಸಾವು ಸಾಯಬೇಕೆನ್ನುವವರ ಹತ್ತಿರ ಸುಳಿಯುವುದೇ ಇಲ್ಲ. ಇನ್ನೂ ಬದುಕಿರಬೇಕೆನ್ನುವವರನ್ನು ಬಹುಬೇಗ ಕೊಂಡೊಯ್ಯುತ್ತದೆ"

"ಈ ದೇಶದಲ್ಲಿ ಕೆಲವರು ಶ್ರೀಮಂತರ ದುರಾಸೆಗೆ ಮಿತಿಯೇ ಇಲ್ಲ;
ಬಡವರಲ್ಲಿ ಕೆಲವರಿಗೆ ಮನುಷ್ಯರಾಗಿ ಬಾಳಬೇಕೆಂಬ ಹಂಬಲವೇ ಇಲ್ಲ"



ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು ೫೬೦೦೦೨